GOVERNMENT OF TAMILNADU

# ಹತ್ತನೆಯ ತರಗತಿ

## XI STANDARD

# ಕನ್ನಡ ಸಿರಿ

# KANNADA READER

**Bcn_prkclr md Qafmmj Cbsa_rgml**

**Slrmsaf_`gjgrw gq Glfsk_l _lb_Apgkc**

11th_Kannada_Reader_Final_16-07-2018.indd 1 16-07-2018 18:42:47

**Government of Tamil Nadu**

First Edition - 2018

Reprint - 2019, 2020, 2021
2022, 2023, 2024

(Published under New Syllabus)

**Content Creation**

State Council of Educational
Research and Training

© SCERT 2018

**Printing & Publishing**

Tamil NaduTextbook and Educational
Services Corporation

www.textbooksonline.tn.nic.in



11th_Kannada_Reader_Final_16-07-2018.indd 2 16-07-2018 18:42:47

# ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ಪುಟಾಣಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.



11th_Kannada_Reader_Final_16-07-2018.indd 3 16-07-2018 18:42:47

# ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧೂ ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಚಲ ಜಲಧಿ ತರಂಗಾ.
ತವಶುಭ ನಾಮೆ ಜಾಗೇ
ತವಶುಭ ಆಶಿಷಮಾಗೆ
ಗಾಹೇ ತವ ಜಯ ಗಾಥಾ
ಜನ ಗಣ ಮಂಗಳ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯ ಹೇ !

– ರವೀಂದ್ರನಾಥ ಠಾಗೂರ್

## ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮ ಪಂಚಾಬ್, ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ(ಒರಿಸ್ಸಾ), ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರ ಅಲೆಗಳಲ್ಲಿ ನಮನಗೊಳ್ಳುತ್ತದೆ. ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ

ಜಯಹೇ! ಜಯಹೇ! ಜಯಹೇ!






kannada 3rd-std_reader.indd 4 09-07-2019 15:56:24

# ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಪಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



# ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಖ್ಖನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.



11th_Kannada_Reader_Final_16-07-2018.indd 5 16-07-2018 18:42:48



## ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.





11th_Kannada_Reader_Final_16-07-2018.indd 6 16-07-2018 18:42:49

# ನಾಡಗೀತೆ

## ಜಯ ಹೇ ಕರ್ನಾಟಕ ಮಾತೆ !

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು



11th_Kannada_Reader_Final_16-07-2018.indd 7 16-07-2018 18:42:49

# ಪರಿವಿಡಿ


| ಘಟಕ | ವಿಷಯಾನುಬಂಧ | ಪ್ರಕಾರ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|---|
| 1 | ಭಾಷೆ | ಪದ್ಯ | ಕನ್ನಡ ನಾಡು–ನುಡಿ (ಕಂಠಪಾಠ) – ಶ್ರೀವಿಜಯ | 2 |
| | | ಗದ್ಯ | ನಮ್ಮ ಭಾಷೆ – ಪ್ರೊ.ಎಂ.ಮರಿಯಪ್ಪ ಭಟ್ | 5 |
| | | ಉಪಪಠ್ಯ | ವೃಕ್ಷಸಾಕ್ಷಿ – ದುರ್ಗಸಿಂಹ | 10 |
| | | ವ್ಯಾಕರಣ | ಅಕ್ಷರ ಪ್ರಕರಣ | 15 |
| 2 | ನಾಡು/ಸಮಾಜ | ಪದ್ಯ | ದೇಶಪ್ರೇಮ – ಪಂಪ, ನಯಸೇನ, ಮಹಲಿಂಗರಂಗ, ಆಂಡಯ್ಯ | 22 |
| | | ಗದ್ಯ | ಕನ್ನಡವನ್ನು ಕಟ್ಟುವ ಕೆಲಸ – ಹಾ.ಮಾ.ನಾಯಕ | 26 |
| | | ಉಪಪಠ್ಯ | ಗೊಳಬಾರಸ – ಜನಪದ ಕಥೆ | 32 |
| | | ವ್ಯಾಕರಣ | ನಾಮಪದಗಳು | 36 |
| 3 | ಅಡಳಿತ | ಪದ್ಯ | ಗಂಭೀರ ಬೇಕು ರಾಜಗೂ ರಾಜಯೋಗಿಗೂ – ರತ್ನಾಕರವರ್ಣಿ | 39 |
| | | ಗದ್ಯ | ತಮಿಳುನಾಡಿನಲ್ಲಿ ಹೊಯ್ಸಳರು – ಎ.ಎಸ್.ನಟರಾಜ್ | 44 |
| | | ಉಪಪಠ್ಯ | ಸಮಾರಂಭಗಳಲ್ಲಿ ಸಂಭ್ರಮ – ಪ್ರೊ.ಪಿ.ಎಸ್ ರಾಮಾನುಜಂ | 52 |
| | | ವ್ಯಾಕರಣ | ಲಿಂಗ–ವಚನ–ವಿಭಕ್ತಿ | 61 |
| 4 | ಪ್ರಕೃತಿ/ಪರಿಸರ | ಪದ್ಯ | ಪಾರಿವಾಳಗಳು – ಸು.ರಂ.ಎಕ್ಕುಂಡಿ | 65 |
| | | ಗದ್ಯ | ಸುಸ್ಮಿತಾ ಮತ್ತು ಹಕ್ಕಿಮರಿ – ಪೂರ್ಣಚಂದ್ರ ತೇಜಸ್ವಿ | 69 |
| | | ಉಪಪಠ್ಯ | ಅರಣ್ಯನಾಶ – ಪರಿಣಾಮವೇನು? – ಎನ್. ವಾಸುದೇವ | 81 |
| | | ವ್ಯಾಕರಣ | ಕಾಲ, ಕೃದಂತ, ತದ್ಧಿತಾಂತ, ಅವ್ಯಯ. | 85 |
| 5. | ಕಲೆ/ಶಿಕ್ಷಣ | ಪದ್ಯ | ದ್ವಿಪದಿ ಮತ್ತು ತ್ರಿಪದಿಗಳ ಸೊಬಗು – ಸರ್ವಜ್ಞ ಮತ್ತು ತಿರುವಳ್ಳುವರ್ | 92 |
| | | ಗದ್ಯ | ಗಾನಗಂಧರ್ವ ಪುಟ್ಟರಾಜ ಗವಾಯಿ | 97 |
| | | ಉಪಪಠ್ಯ | ದೊಡ್ಡಾಟ–ಸಣ್ಣಾಟ – ಕೆ.ಕುಮಾರ್ ಆಚಾರ್ | 101 |
| | | ವ್ಯಾಕರಣ | ದ್ವಿರುಕ್ತಿ, ಅನ್ಯದೇಶೀಯ, ಜೋಡಿ ಪದಗಳು, ತತ್ಸಮ–ತದ್ಭವ, ಗಾದೆಗಳು. | 107 |




11th_Kannada_Reader_Final_16-07-2018.indd 8 16-07-2018 18:42:49

| ಘಟಕ | ವಿಷಯಾನುಬಂಧ | ಪ್ರಕಾರ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|---|
| 6. | ನಾಗರಿಕತೆ/ಸಂಸ್ಕೃತಿ | ಪದ್ಯ | **ಸೋಮೇಶ್ವರ ಶತಕ** – ಪುಲಿಗೆರೆ ಸೋಮನಾಥ | 112 |
| | | ಗದ್ಯ | **ಕರ್ನಾಟಕದ ಪುರಾತನ ಸಂಸ್ಕೃತಿಯ ಒಂದು ಮುಖ** – ಡಾ.ಕೆ.ಶಿವರಾಮ ಕಾರಂತ | 117 |
| | | ಉಪಪಠ್ಯ | **ಯಯಾತಿ** (ನಾಟಕ) – ಗಿರೀಶ್ ಕಾರ್ನಾಡ್ | 121 |
| | | ವ್ಯಾಕರಣ | **ಸಂಧಿಗಳು** | 129 |
| 7. | ವಿಜ್ಞಾನ | ಪದ್ಯ | **ಮನ್ವಂತರ** – ಟಿ.ಆರ್.ಕಣ್ಣನ್ | 134 |
| | | ಗದ್ಯ | **ಸರ್ಪಗಂಧಿ** – ಬಿ.ಜಿ.ಎಲ್. ಸ್ವಾಮಿ | 137 |
| | | ಉಪಪಠ್ಯ | **ಸೌಂದರ್ಯ ವರ್ಧಕಗಳು ಎಷ್ಟು ಸುರಕ್ಷಿತ?** – ಡಿ.ವಿ.ಹೆಗಡೆ | 141 |
| | | ವ್ಯಾಕರಣ | **ಸಮಾಸಗಳು** | 145 |
| 8. | ಧರ್ಮ/ತತ್ವ/ ಚಿಂತನೆ | ಪದ್ಯ | **ಎಲ್ಲಾರು ಮಾಡುವುದು** – ಕನಕದಾಸ (ಮೊದಲ 11 ಸಾಲುಗಳು ಕಂಠಪಾಠ) | 149 |
| | | ಗದ್ಯ | **ಅಹಂಕಾರ** – ರಾ.ಯ.ಧಾರವಾಡಕರ | 153 |
| | | ಉಪಪಠ್ಯ | **ಸುಮತಿಯ ಕಥೆ** – ಶಿವಕೋಟ್ಯಾಚಾರ್ಯ | 161 |
| | | ವ್ಯಾಕರಣ | **ಛಂದಸ್ಸು** | 166 |
| 9. | ಮಾನವೀಯತೆ | ಪದ್ಯ | **ದೀನಗಿಂತ ದೇವ ಬಡವ** (ಕಂಠಪಾಠ) – ಪು.ತಿ.ನ | 184 |
| | | ಗದ್ಯ | **ಮಹಾರಾತ್ರಿ** (ನಾಟಕ) – ಕುವೆಂಪು | 187 |
| | | ಉಪಪಠ್ಯ | **ಮಿರ್ಜಾರ ಮಾನವೀಯತೆ** – ಡಿ.ವಿ.ಜಿ | 198 |
| | | ವ್ಯಾಕರಣ | **ಅಲಂಕಾರ** | 201 |
| 10. | ಸೌಂದರ್ಯ ಮೀಮಾಂಸೆ | ಪದ್ಯ | **ಹಕ್ಕಿ ಹಾರುತಿದೆ ನೋಡಿದಿರಾ** – ದ.ರಾ.ಬೇಂದ್ರೆ (ಕಂಠಪಾಠ) | 208 |
| | | ಗದ್ಯ | **ಜನಪದ ಕವಿಗಳು ಕಂಡ ಸೌಂದರ್ಯ** – ಜಿ.ಎಸ್.ಎಸ್. | 212 |
| | | ಉಪಪಠ್ಯ | **ನಾಣಿ** – ಗೊರೂರು ರಾಮಸ್ವಾಮಿ ಅಯ್ಯಂಗಾರ್ | 220 |
| | | ವ್ಯಾಕರಣ | **ಪತ್ರಲೇಖನ, ಪ್ರಬಂಧಗಳು** | 223 |




11th_Kannada_Reader_Final_16-07-2018.indd 9 16-07-2018 18:42:49

# ಕನ್ನಡ ಸಿರಿ

## ಹನ್ನೊಂದನೆಯ ತರಗತಿ



11th_Kannada_Reader_Final_16-07-2018.indd 10 16-07-2018 18:42:49

ಘಟಕ
ಒಂದು

# ಭಾಷೆ



| | | |
|---|---|---|
| **ಪದ್ಯ :** | ಕನ್ನಡ ನಾಡು–ನುಡಿ | – ಶ್ರೀವಿಜಯ |
| **ಗದ್ಯ :** | ನಮ್ಮ ಭಾಷೆ | – ಪ್ರೊ.ಎಂ.ಮರಿಯಪ್ಪ ಭಟ್ |
| **ಉಪಪಠ್ಯ :** | ವೃಕ್ಷಸಾಕ್ಷಿ | – ದುರ್ಗಸಿಂಹ |
| **ವ್ಯಾಕರಣ :** | ಅಕ್ಷರ ಪ್ರಕರಣ | |



11th_Kannada_Reader_Final_16-07-2018.indd 1 16-07-2018 18:42:49

ಕಾವ್ಯ ಕಣಜ

ಘಟಕ ಒಂದು

# ಕನ್ನಡ ನಾಡು–ನುಡಿ

– ಶ್ರೀವಿಜಯ (ಕವಿರಾಜ ಮಾರ್ಗ)




ಪ್ರಾಚೀನ ಪರಂಪರೆಯನ್ನು ಹೊಂದಿರುವ ಕನ್ನಡ ಇಂದು ಹಲವಾರು ಸವಾಲುಗಳನ್ನು ಎದುರಿಸುತ್ತಲಿದೆ. ವಿಜ್ಞಾನ–ತಂತ್ರಜ್ಞಾನ, ಗಣಕೀಕರಣ, ಜಾಗತೀಕರಣ, ವಾಣಿಜ್ಯೀಕರಣಗಳ ದಟ್ಟ ಪ್ರಭಾವಗಳ ಹಿನ್ನೆಲೆಯಲ್ಲಿ ದೇಸೀ ಭಾಷೆಯಾದ ಕನ್ನಡವನ್ನು ಉಳಿಸುವುದು, ಕಾಲದ ಅಗತ್ಯಕ್ಕೆ ಬೆಳೆಸುವುದು ಒಂದು ಸವಾಲಾಗಿದೆ. ಕನ್ನಡವನ್ನು ಬೆಳೆಸುವ ಗುರುತರ ಜವಾಬ್ದಾರಿ ಭಾವೀ ಜನಾಂಗದ ಮೇಲಿದೆ. ಹಿಂದೆ ಕನ್ನಡ ನಾಡು–ನುಡಿ ಹೇಗೆಲ್ಲಾ ಪಸರಿಸಿತ್ತು ಎನ್ನುವುದನ್ನು ಭಾವೀ ಜನಾಂಗ ತಿಳಿದುಕೊಳ್ಳಬೇಕಾದ ಅಗತ್ಯವಿದೆ ಎನ್ನುವ ಉದ್ದೇಶದಿಂದಲೇ ಈ ಪದ್ಯವನ್ನು ನೀಡಲಾಗಿದೆ.

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾ ವಳಯ ವಿಲೀನ ವಿಶದ ವಿಷಯ ವಿಶೇಷಂ ॥

ಅದಱಿಳೊಳಗಂ ಕಿಸುವೊಟಲಾ
ವಿಧಿತ ಮಹಾ ಕೊಪಣ ನಗರದಾ ಪುಲಿಗೆಱಿಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥

ಪದನಱೆದು ನುಡಿಯಲುಂ ನುಡಿ
ದುದನಱೆದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ॥

ಕುಱಿತವರಲ್ಲದೆ ಮತ್ತಂ
ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿಱುವಕ್ಕಳ್ ಮಾಮೂಗರು
ಮಱೆಪಲ್ಕಱಿವರ್ ವಿವೇಕಮಂ ಮಾತುಗಳಂ ॥



11th_Kannada_Reader_Final_16-07-2018.indd 2 16-07-2018 18:42:49

## ಕವಿ – ಕೃತಿ ಪರಿಚಯ

ಶ್ರೀವಿಜಯ : ಕ್ರಿ.ಶ. ಸುಮಾರು ಒಂಭತ್ತನೇ ಶತಮಾನದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿ ಇವನು ಕವಿಯಾಗಿದ್ದನು. ಇವನು 'ಕವಿರಾಜ ಮಾರ್ಗ' ಎಂಬ ಲಾಕ್ಷಣಿಕ ಗ್ರಂಥವನ್ನು ರಚಿಸಿದ್ದಾನೆ. ಇದು ಕನ್ನಡ ಭಾಷೆಯಲ್ಲಿ ಉಪಲಬ್ಧವಾಗಿರುವ ಮೊಟ್ಟ ಮೊದಲ ಕೃತಿಯಾಗಿದೆ. ಇದರಲ್ಲಿ ಕನ್ನಡ ನಾಡು, ನುಡಿ, ಜನ ಮತ್ತು ಸಂಸ್ಕೃತಿಯನ್ನು ಕುರಿತ ಸಮೃದ್ಧ ಮಾಹಿತಿಗಳು ದೊರೆಯುತ್ತವೆ. ಕನ್ನಡ ನಾಡು ನುಡಿಯ ವೈಶಿಷ್ಟ್ಯವನ್ನು ಪ್ರಾಚೀನ ಕಾಲದಿಂದಲೂ ಕವಿ ಪರಂಪರೆ ಮನಸಾರೆ ಬಣ್ಣಿಸುತ್ತಾ ಬಂದಿದೆ. ಕನ್ನಡ ಸಂಸ್ಕೃತಿ, ಸೊಬಗು, ವೈಭವ ಅಪೂರ್ವ ಹಾಗೂ ಅವಿಸ್ಮರಣೀಯ. ಕನ್ನಡಿಗರ ಜಾಣ್ಮೆ, ಭೌಗೋಳಿಕ ಹರಹು, ಕವಿ ಕಾವ್ಯ ಸೌಂದರ್ಯದಿಂದ ಅದರ ಮಹತ್ವ ಇನ್ನೂ ಹೆಚ್ಚಾಗಿದೆ.

## ಕಠಿಣ ಪದಗಳ ಅರ್ಥ

ಇರ್ದ–ಇದ್ದ, ವ್ಯಾಪಿಸಿರುವ; ಭಾವಿಸಿದ–ಕಾಣಿಸಿಕೊಳ್ಳುವ; ಜನಪದರು–ನಾಡಿನವರು, ಜನರು; ವಸುಧಾ ವಲಯ–ಭೂಮಂಡಲ; ವಿಲೀನ–ಸೇರಿರುವ; ವಿಷದ–ಸುಂದರವಾದ; ವಿಷಯ–ದೇಶ; ವಿಶೇಷಂ–ಅತಿವಿಶಿಷ್ಟವಾದ, ಆಗಿನ ಕಾಲದ ಕನ್ನಡ ನಾಡಿನ ಪ್ರಸಿದ್ಧವಾದ ಸ್ಥಳಗಳು; ವಿಹಿತ–ತಿಳಿದಿರುವ; ಪದ–ಮಾತು; ಅಱೆದು–ತಿಳಿದು; ಆರಯಲುಂ–ಮಥಿಸಿ ತಿಳಿಯಲು, ಯೋಚಿಸಿ ಅರ್ಥ ಮಾಡಿಕೊಳ್ಳುವುದು; ಆರ್ಪರ್–ಬಲ್ಲವರು; ನಾಡವರ್ಗಗಳ್–ನಾಡಿನ ಜನತೆ; ಕಾವ್ಯ ಪ್ರಯೋಗ ಪರಿಣತ ಮತಿಗಳ್–ಕಾವ್ಯಗಳನ್ನು ಉಲ್ಲೇಖ ಮಾಡಬಲ್ಲ ತಿಳುವಳಿಕೆಯುಳ್ಳವರು; ಅಱೆವಲ್ಕೆ–ಕಲಿಸು; ವಿವೇಕ–ಜಾಣ್ಮೆ;

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಪದನರಿದು ನುಡಿಯುವವರು ಯಾರು ಎಂದು ಕವಿ ಹೇಳುತ್ತಾನೆ ?
2. ಕನ್ನಡ ನಾಡು ಎಲ್ಲಿಂದ ಎಲ್ಲಿಯವರೆಗೆ ವ್ಯಾಪಿಸಿತ್ತು ?
3. ಅಂದಿನ ಕನ್ನಡ ನಾಡಿನ ಪ್ರಸಿದ್ಧ ಸ್ಥಳಗಳು ಯಾವುವು ?
4. 'ಕನ್ನಡಿಗರು ಜಾಣರು' – ಹೇಗೆ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಪ್ರಾಚೀನ ಕನ್ನಡ ನಾಡಿನ ವ್ಯಾಪ್ತಿಯನ್ನು ವಿವರಿಸಿ ?
2. ತಿರುಳ್ಗನ್ನಡದ ಪ್ರದೇಶಗಳು ಯಾವುವು ಹಾಗೂ ಅವು ಹೇಗಿದ್ದವು ?
3. ಕವಿಯ ಪ್ರಕಾರ ಅಲ್ಲಿನ ಜನರ ಹಿರಿಮೆಯೇನು ?

**III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.**

1. ಶ್ರೀವಿಜಯನ ಕಾಲದ ಕನ್ನಡ ನಾಡಿನ ಹಿರಿಮೆಯನ್ನು ವರ್ಣಿಸಿ.

**IV. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

1. 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್'
2. 'ಕುರಿತೋದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್'
3. 'ತಂತಮ್ಮ ನುಡಿಯೊಳೆಲ್ಲರ್ ಜಾಣರ್'



11th_Kannada_Reader_Final_16-07-2018.indd 3 16-07-2018 18:42:49

## ಭಾಷಾಭ್ಯಾಸ

**1. ಈ ಕೆಳಕಂಡ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಚದುರ, ಕಾವ್ಯ, ಮಹಾ.


**2. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

ಪುಲಿಗೆಱೆ, ಕಾವೇರಿಯಿಂದ.

## ಚಟುವಟಿಕೆಗಳು

1. ನಿಮ್ಮ ಶಾಲೆಯ ಪುಸ್ತಕಾಲಯದಿಂದ ಹಳಗನ್ನಡ ಕವಿಗಳ ಕಾವ್ಯಗಳನ್ನು ಸಂಗ್ರಹಿಸಿ ಅವರು ನೀಡುವ ಕನ್ನಡಾಭಿಮಾನದ ಪದ್ಯಗಳನ್ನು ಸಂಗ್ರಹಿಸಿರಿ.
2. ಕನ್ನಡಾಭಿಮಾನದ ಇನ್ನಿತರ ಕವನಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಸಮಾರಂಭಗಳಲ್ಲಿ ಹಾಡಿರಿ.








11th_Kannada_Reader_Final_16-07-2018.indd 4 16-07-2018 18:42:50

ಗದ್ಯ ವಿಹಾರ

ಘಟಕ ಒಂದು

# ನಮ್ಮ ಭಾಷೆ

– ಪ್ರೊ.ಎಂ.ಮರಿಯಪ್ಪ ಭಟ್

ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ. ಇಂತಹ ಅಮೂಲ್ಯವಾದ ಈ ಭಾಷೆಯ ಉತ್ಪತ್ತಿ, ಎಂದು ಮತ್ತು ಹೇಗಾಯಿತು ಎಂಬ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳುವುದು ಕಷ್ಟಸಾಧ್ಯ. ಭಾಷೆಯ ಮೂಲವನ್ನು ಮಾನವನು ಕಂಡು ಹಿಡಿಯುವುದೆಂದರೆ ನಿರೀಕ್ಷಕನೂ, ನಿರೀಕ್ಷಣೆಯ ವಸ್ತುವೂ ಒಂದೇ ಆದಂತೆಯೇ ಸರಿ. ಮಾನವನು ತನ್ನ ವಿಶಿಷ್ಟ ಮೇಧಾ ಶಕ್ತಿಯಿಂದ ಜಂಗಮ ಜಗತ್ತಿನ ಇತರ ಜಂತುಗಳಿಗಿಂತ ಬೇರೆಯಾಗಿದ್ದಾನೆ. ಇದು ಏಕೆ ಹೀಗಾಯಿತೆಂಬುದು ಬಿಡಿಸಲಾರದ ಸಮಸ್ಯೆಯಾಗಿಯೇ ಉಳಿದಿದೆ. ಇದಕ್ಕೆಲ್ಲಾ ದೇವರ ಲೀಲೆ ಎಂಬುದಾಗಿ ಉತ್ತರ ಹೇಳುವುದು ಕೊನೆಯ ಮಾತು. ಆದರೆ ಇದರಿಂದ ಶುದ್ಧ ವಿಜ್ಞಾನಿಗಳಿಗೆ ಸಮಾಧಾನವಾಗದು.

ಮಕ್ಕಳಿಗೆ ಮೊಲೆಯೂಡುವ ಎಲ್ಲ ಪ್ರಾಣಿಗಳೂ ಚಲನ–ವಲನಗಳ ವಿಷಯವಾಗಿ, ಆಹಾರ–ವಿಹಾರಗಳ ವಿಚಾರವಾಗಿ, ತಮ್ಮ ತಮ್ಮ ಮಕ್ಕಳಿಗೆ ಸಹಜವಾಗಿ ತರಬೇತಿ ಕೊಡುವುದನ್ನು ಕಾಣುತ್ತೇವೆ. ಅನುಕರಣದಿಂದ ಕಿರಿಯವೂ, ಹಿರಿಯ ಪ್ರಾಣಿಗಳಂತೆ ಕಾರ್ಯ ಮಾಡುವುದನ್ನು ಕಲಿಯುತ್ತವೆ. ಇಲ್ಲಿಗೆ ಅವುಗಳ ಸಾಮಾನ್ಯ ಸಂಸ್ಕೃತಿ ಮುಗಿಯಿತು. ಮಾನವನಾದರೋ, ತನ್ನ ಸಮಕಾಲೀನ ಜನತೆಯದು ಮಾತ್ರವೇ ಅಲ್ಲ, ಗತಕಾಲದ ಹಿರಿಯ ಜ್ಞಾನಾನುಭವಗಳ ಸಾರ ಸರ್ವಸ್ವವನ್ನೂ ಉಳಿಸಿಕೊಂಡು ಮುಂದೆ ಬೆಳೆಸಬಲ್ಲ. ಇದಕ್ಕೆ ಮೂಲ ಸಾಧನ ಭಾಷೆ. ಭಾಷೆಯ ಪ್ರಯೋಜನ ಮನುಷ್ಯನಿಗೆ ಇಲ್ಲದೇ ಹೋಗಿದ್ದರೆ ಆತ ಬರಿಯ 'ಜಂತು'ವಾಗಿಯೇ ಉಳಿಯುತ್ತಿದ್ದ. ಭಾಷೆಯಿದ್ದೂ ಅದರ ಪೀಯೂಷವನ್ನು ಕುಡಿದು ಅರಗಿಸಿಕೊಳ್ಳದ, ಅಂತೆಯೇ ಕರ್ಮವೆಸಗದ ವ್ಯಕ್ತಿ ಜಂತುವೇ ಸರಿ.

ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು 4000 ಭಾಷೆಗಳಿವೆ ಎಂದು ತಿಳಿದು ಬಂದಿದೆ. ದೇಶ, ಕಾಲ, ವಂಶ, ಪರಂಪರೆ – ಇತ್ಯಾದಿ ಕಾರಣಗಳಿಂದಾಗಿ ಇವು ಬೇರೆ ಬೇರೆಯಾಗಿ ಭಿನ್ನ ಭಿನ್ನ ಸನ್ನಿವೇಶಗಳಲ್ಲಿ ಬೆಳೆದುಕೊಂಡು ಬಂದಿರುತ್ತವೆ. ಆಯಾ ಸನ್ನಿವೇಶಗಳಿಗನುಸಾರವಾಗಿ ಆಯಾ ಜನತೆಯ ಜ್ಞಾನಾರ್ಜಿತ ಸ್ವತ್ತುಗಳಿಗನುಸಾರವಾಗಿ ಭಾಷೆಗಳ ಬೆಳವಣಿಗೆಯಾಗುತ್ತದೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಎಂದು ಎರಡು ತೆರನಾಗಿ ವಿಭಾಗಿಸುವುದುಂಟು. ವ್ಯಾವಹಾರಿಕವೆಂದರೆ, ಜೀವದ್ಭಾಷೆ. ಅದರಲ್ಲಿ ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇವು ಇದಕ್ಕೆ ಉದಾಹರಣೆಗಳು. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ, ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಲಿ ಇತ್ಯಾದಿ ಬಾಷೆಗಳು ಈ ವರ್ಗಕ್ಕೆ ಉದಾಹರಣೆಗಳು. ಎಲ್ಲ ವ್ಯಾವಹಾರಿಕ ಭಾಷೆಗಳೂ ಗ್ರಾಂಥಿಕವಾಗಿರಬೇಕೆಂದೇನಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆಯಾಗಿದೆ. ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಹಾಗೆಯೇ ಎಲ್ಲ ಗ್ರಾಂಥಿಕ ಭಾಷೆಗಳೂ ಇಂದು ವ್ಯಾವಹಾರಿಕವಾಗಿ ಇರುವುದಿಲ್ಲ. ದೇವ ಭಾಷೆ ಎನಿಸಿಕೊಂಡ ಸಂಸ್ಕೃತ ಸರ್ವ ಸಂಪನ್ನತೆಯಿಂದ ಕೂಡಿದ ಗ್ರಾಂಥಿಕ ಭಾಷೆಯಾಗಿದೆ. ಆದರೆ ಇಂದು ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿಲ್ಲ.

ಭಾಷೆಗಳ ಅಂಕೆ ಸಂಖ್ಯೆಗಳನ್ನು ಪರಿಶೀಲಿಸಿದವರು ಸುಮಾರು 300 ಭಾಷೆಗಳಿಗೆ ಮಾತ್ರ ಲಿಪಿ ಸೌಕರ್ಯ ಉಂಟೆಂಬುದಾಗಿ ಕಂಡು ಹಿಡಿದಿದ್ದಾರೆ. ಲಿಪಿಮೂಲ ಭಾಷೆಯ ಮೂಲದಷ್ಟು ಪ್ರಾಚೀನವಲ್ಲ ಎಂಬುದು



11th_Kannada_Reader_Final_16-07-2018.indd 5 16-07-2018 18:42:51

ಸರ್ವ ಸಮ್ಮತ. ಲಿಪಿ ಶಾಸ್ತ್ರ ಸಂಶೋಧಕರು ಜಗತ್ತಿನ ಅತ್ಯಂತ ಪ್ರಾಚೀನ ಲಿಪಿ 5 ಸಾವಿರ ವರ್ಷಗಳ ಹಿಂದೆ ನಿರ್ಮಾಣವಾಗಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನವಶಿಲಾಯುಗದ ಮಾನವನು ತನ್ನ ಸಂಚಾರೀ ಜೀವನವನ್ನು ತ್ಯಜಿಸಿ, ಒಂದೆಡೆ ಬೀಡು ಬಿಟ್ಟು, ತನ್ನ ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಇದನ್ನೇ ಲಿಪಿಯ ಉಗಮದ ಕಾಲ ಎನ್ನುವರು. ಇದು ಸಹಜವೆಂಬುದನ್ನು ಪ್ರಸ್ತುತ ಉದಾಹರಣೆಯೊಂದರಿಂದ ಸಾಧಿಸಬಹುದು. ಯಾವುದೇ ಓದು ಬರಹವಿಲ್ಲದ ಒಬ್ಬ ಹಳ್ಳಿಯ ಕೆಲಸಗಾರನಾದರೂ ಸರಿಯೆ, ತಾನು ದಿನಗೆಲಸಕ್ಕೆ ಹೋದ ಲೆಕ್ಕವನ್ನು ಗೋಡೆಯ ಮೇಲೆ ದಿನಂಪ್ರತಿ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಎಣಿಸಿ ಲೆಕ್ಕ ಹಾಕಿ ತನ್ನ ಸಂಬಳವನ್ನು ಪಡೆಯುತ್ತಾನೆ. ಹಾಲು ಮಾರುವವರೂ ಹೀಗೆಯೇ ಲೆಕ್ಕವಿಡುವುದುಂಟು. ಪ್ರಾಕೃತ ವಿಮರ್ಶಕರು ಸುಮೇರ್(Sumer), ನೈಲ್(ಈಜಿಪ್ಟ್), ಕ್ರೀಟ್(Crete) ಇತ್ಯಾದಿ ಪ್ರದೇಶಗಳಲ್ಲಿ ಉಪಲಬ್ಧವಾದ ಅತ್ಯಂತ ಪುರಾತನ ಅವಶೇಷಗಳಲ್ಲಿ ವ್ಯಾಪಾರ, ವ್ಯವಹಾರ ಲೆಕ್ಕಗಳಿಗೆ ಸಂಬಂಧಿಸಿದ ಈ ಬಗೆಯ ಲಿಪಿ ಸಾಕ್ಷ್ಯಗಳನ್ನು ಕಂಡುಕೊಂಡಿದ್ದಾರೆ. ಇದೇ ಲಿಪಿಯ ಮೊದಲಿನ ಜಾಡು.

ಮುಂದೆ ಮಾನವನಿಗೆ ಬಿಡುವು ಹೆಚ್ಚಿದಂತೆ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದಂತೆ ತನ್ನ ಆಗುಹೋಗುಗಳನ್ನು ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಆತ ಕಂಡುಕೊಂಡಿರಬೇಕು; ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆದಿರಬೇಕು. ಲೆಕ್ಕ ಪತ್ರಗಳನ್ನಿಡಲು ಉಪಯುಕ್ತವಾದ ಮೂಲ ಲಿಪಿಯನ್ನು ಮತ್ತಷ್ಟು ಪರಿಷ್ಕರಿಸುತ್ತಾ ತನ್ನ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡನು. ಆ ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲೂ ಸಾಧ್ಯವಾಯಿತು. ಜ್ಞಾನ ಭಂಡಾರ ಭದ್ರವಾಯಿತು. ಸಂಸ್ಕೃತಿಯ ಇತಿಹಾಸ ಉಳಿಯಿತು. ಪ್ರಗತಿಪಥ ಸುಗಮವಾಯಿತು.

ಇನ್ನು ಭಾಷಾಭಿವೃದ್ಧಿಯ ವಿಷಯವಾಗಿ ಒಂದೆರಡು ಮಾತು. ಕನ್ನಡ ಭಾಷೆಯಿಂದ ಕೆಲವು ಉದಾಹರಣೆಗಳನ್ನು ಆಯ್ದುಕೊಳ್ಳೋಣ. ಕನ್ನಡಕ್ಕೆ ಬಹಳ ಪ್ರಾಚೀನ ಕಾಲದಿಂದಲೂ ಸಂಸ್ಕೃತದ ಪೋಷಣೆ ದೊರೆಯುತ್ತಾ ಬಂದಿದೆ. ವೈದಿಕ ಹಾಗೂ ಜೈನ ಧಾರ್ಮಿಕ ತತ್ವಗಳನ್ನು ಕನ್ನಡದಲ್ಲಿ ವಿವರಿಸಬೇಕೆಂಬ ಅಭಿಲಾಷೆಯಿಂದ ಅನೇಕ ಪಂಡಿತರು ಉತ್ತಮ ಕಾವ್ಯಗಳನ್ನು ರಚಿಸಿದರು. ಆದರೆ ಅವರಲ್ಲಿ ಅನೇಕರು ಕನ್ನಡವನ್ನು ಸಂಸ್ಕೃತಮಯವನ್ನಾಗಿ ಮಾಡಿಬಿಟ್ಟರು. ತಿಳಿದವರಿಗೆ ಅದರ ರಕ್ಷಣೆ ಕಬ್ಬಿಣದ ಕಡಲೆಯೇ ಆಯಿತು. ಅವರ ಉದ್ದುದ್ದ ವಾಕ್ಯಗಳಲ್ಲಿ ಎಲ್ಲ ಸಂಸ್ಕೃತ ಶಬ್ದಗಳೇ. ಒಂದು ಕ್ರಿಯಾಪದ ಮಾತ್ರ ಕನ್ನಡದಲ್ಲಿರುತ್ತಿತ್ತು. ಇಂತಹ ಪರಿಸ್ಥಿತಿಯನ್ನು ಗಮನಿಸಿ 12ನೇ ಶತಮಾನದ ನಯಸೇನ ಕವಿ ಹೀಗೆ ಹಲುಬಿದ :

**ಸಕ್ಕದಮಂ ಪೇೞಿಕ್ಕೊಡೆ ನೆಱಿ**
**ಸಕ್ಕದಮಂ ಪೇೞಿಕ್ಕಿ ಶುದ್ಧಕನ್ನಡದೊಳ್ ತಂ**
**ದಿಕ್ಕುವುದೆ ಸಕ್ಕದಂಗಳ**
**ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ ॥**

ನಮಗೆ ತುಪ್ಪವೂ ಬೇಕು, ಎಣ್ಣೆಯೂ ಬೇಕು; ಸಂಸ್ಕೃತವೂ ಬೇಕು ಕನ್ನಡವೂ ಬೇಕು; ಆದರೆ ಎಣ್ಣೆ ತುಪ್ಪಗಳ ಆಸ್ವಾದ ಮಿಶ್ರಣ ಬೇಡ ಎಂಬುದು ನಯಸೇನನ ಅಭಿಮತ. ಅನೇಕ ಕವಿಗಳು, ಕನ್ನಡವೂ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂತಹವರ ವಾಣಿಯಿಂದ ಕನ್ನಡದ ವೀಣೆ ಮೃದುಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ವೀರಶೈವ ಶರಣವರೇಣ್ಯರು, ಚಾಮರಸರು, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸರಂತಹ ದಾಸಶ್ರೇಷ್ಠರು ಸುಲಭಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವ ಸಾರವನ್ನು ಸುಲಭವೂ, ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡುದರಿಂದ ಅದು ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಬಿಸಿಯಾರಿದ



11th_Kannada_Reader_Final_16-07-2018.indd 6 16-07-2018 18:42:51

ಹಾಲಿನಂತೆ ಸುಲಭವೂ, ರುಚಿಯುಳ್ಳದೂ ಆಗಿದೆ ಎಂದು ಮಹಲಿಂಗರಂಗನಂತಹ ಕವಿಯು ಉದ್ಘೋಷಿಸಲು ಸಾಧ್ಯವಾಯಿತು.

ಒಂದು ಭಾಷೆ ಅನ್ಯ ಭಾಷೆಯಿಂದ ಏನನ್ನೂ ಎರವಲಾಗಿ ತೆಗೆದುಕೊಳ್ಳಬಾರದೆಂದು ಯಾರೂ ತಿಳಿಯಲಾಗದು. ನೆರೆಹೊರೆಯ ಭಾಷೆಗಳಲ್ಲಿ ಕೊಳು–ಕೊಡೆಯ ವ್ಯವಹಾರ ನಡೆದೇ ನಡೆಯುತ್ತದೆ; ನಡೆಯಲೇ ಬೇಕು. ಅದು ಸಜೀವ ಭಾಷೆಯ ಲಕ್ಷಣ. ಆದರೆ ಸ್ವೀಕರಿಸುವಾಗ ತನ್ನತನವನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು. ಹಿಂದೆ ಸಂಸ್ಕೃತ ಪ್ರಾಕೃತ ಭಾಷೆಗಳಿಂದ ಸ್ವೀಕರಿಸಿದ ಪದಗಳನ್ನು ತತ್ಸಮ–ತದ್ಭವಗಳಾಗಿ ಕನ್ನಡ ತನ್ನಲ್ಲಿ ಅಳವಡಿಸಿಕೊಂಡಿದೆ. ಮಹಮದೀಯರ ಆಳಿಕೆಯ ಅವಧಿಯಲ್ಲಿ ಪರ್ಶಿಯನ್ ಭಾಷೆಯಿಂದ ಅನೇಕ ಶಬ್ದಗಳು ನಮ್ಮಲ್ಲಿಗೆ ಬಂದಿರುತ್ತವೆ. ಉದಾಹರಣೆಗೆ, ದಿವಾನ, ಸರಕಾರ, ಮುನಿಷಿ, ಸರದಾರ, ದವಲತ್ತು, ಮುಸಾಪರೆ, ಕಚೇರಿ, ಸುಬೇದಾರ, ಅಮಲ್ದಾರ, ತಹಸೀಲ್ದಾರ ಇತ್ಯಾದಿ ಆಡಳಿತಕ್ಕೆ ಸಂಬಂಧಪಟ್ಟಂತಹ ಪಾರಿಭಾಷಿಕ ಶಬ್ದಗಳು ಕನ್ನಡ ನುಡಿ ಬೊಕ್ಕಸವನ್ನು ಸೇರಿಕೊಂಡಿವೆ.

ಹಾಗೆಯೇ ಅಸಂಖ್ಯಾತ ಇಂಗ್ಲಿಷ್ ಶಬ್ದಗಳೂ ಕನ್ನಡದ ಉಡುಪನ್ನು ಧರಿಸಿ ಒಳಗೆ ಬಂದುಬಿಟ್ಟಿವೆ. ರೈಲು, ಮೋಟಾರು, ಹೋಟೆಲ್, ಆಫೀಸು, ಇಸ್ಕೂಲು, ಸಿನೆಮಾ, ರೇಡಿಯೋ, ಆಸ್ಪತ್ರೆ, ಕೋರ್ಟು, ಡಿಕ್ರಿ, ಲೈಟು ಮೊದಲಾದವು ನಮ್ಮೆಲ್ಲರ ಮನೆ ಮಾತಾಗಿವೆ. ಫೋರ್ಚುಗೀಸಿನಿಂದ ಬಟಾಟೆ, ಅನಾನಸ್ಸು, ಜಂಗಲ್ ಮುಂತಾದ ಕೆಲವು ಸ್ವಾರಸ್ಯವಾದ ಶಬ್ದಗಳೂ ಆಗಮಿಸಿವೆ.

ಇದೆಲ್ಲಾ ಅನ್ಯದೇಶಗಳ ವಿಚಾರವಾಯಿತು. ಇನ್ನು ಕನ್ನಡದ ನೆರೆಯವರಿಂದ ಬಂದಿರುವ ಎರವುಗಳೂ ಉಂಟು. ಕನ್ನಡ ನಾಡಿನ ಎಲ್ಲೆಗಳಲ್ಲಿ ಕೆಲವೆಡೆ – ತಮಿಳು, ತೆಲುಗು, ಮಲಯಾಳಂ, ಮರಾಠಿಗಳನ್ನಾಡುವ ಜನರಿರುವುದು ಸರಿಯಷ್ಟೆ. ಅಂತಹ ಗಡಿ ಪ್ರದೇಶಗಳನ್ನು ದ್ವಿಭಾಷಾ ಪ್ರದೇಶಗಳೆನ್ನುವರು. ಸಾಮಾನ್ಯವಾಗಿ ಅಲ್ಲಿನ ಜನರಿಗೆ ಎರಡೆರೆಡು ಭಾಷೆಗಳು ಬರುತ್ತಿರುತ್ತವೆ. ಕಾಸರಗೋಡಿನಲ್ಲಿರುವ ಕನ್ನಡಿಗರಿಗೆ ಮಲೆಯಾಳದ ವ್ಯವಹಾರ ಜ್ಞಾನವಿರುತ್ತದೆ. ಅಲ್ಲಿರುವ ಮಲೆಯಾಳಿಗಳಿಗೆ ಕನ್ನಡದ ವ್ಯವಹಾರ ಜ್ಞಾನವಿರುತ್ತದೆ. ತಾಳವಾಡಿಯಲ್ಲಿರುವ ಕನ್ನಡಿಗರಿಗೆ ತಮಿಳಿನ ವ್ಯವಹಾರ ಜ್ಞಾನವಿರುತ್ತದೆ. ಹಾಗೆಯೇ ಬಳ್ಳಾರಿ, ಅನಂತಪುರ, ಕೋಲಾರ ಜಿಲ್ಲೆಗಳ ಗಡಿಯಲ್ಲಿರುವ ಜನಕ್ಕೆ ಕನ್ನಡ–ತೆಲುಗು ಎರಡೂ ಬರುವುದು ಸ್ವಾಭಾವಿಕ. ಗಡಿಗಳ ಜನರ ವ್ಯವಹಾರ ಸಂಪರ್ಕಗಳಿಂದ ನೆರೆ ಮಾತುಗಳಲ್ಲಿ ಕೊಳು ಕೊಡುಗೆ ನಡೆಯುತ್ತಲೇ ಇದೆ. ಇದರಿಂದ ಕನ್ನಡವೂ ಅದರ ನೆರೆ ನುಡಿಗಳೂ ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದುತ್ತಲಿವೆ.

ಭಾಷೆಯಲ್ಲಿದ್ದ ಸಾಮಗ್ರಿಯನ್ನೇ ಉಪಯೋಗಿಸಿಕೊಂಡು ಭಾಷಾಭಿವೃದ್ಧಿಯನ್ನು ಮಾಡುವ ಇನ್ನೊಂದು ವಿಧಾನ, ನುಡಿಗಟ್ಟುಗಳಿಗೆ ಸೇರಿದುದು. ಎರಡು ಅಥವಾ ಹೆಚ್ಚು ಶಬ್ದಗಳು ಸೇರಿ ಒಂದು ನುಡಿಗಟ್ಟಾಗಿ ಅದಕ್ಕೊಂದು ನವೀನಾರ್ಥ ಬರುತ್ತದೆ. ಇದು ಎಲ್ಲ ಭಾಷೆಗಳಲ್ಲಿಯೂ ಕಾಣುವ ಸಹಜ ಶಕ್ತಿ. ಈ ವಿಚಿತ್ರವಾದ ಸಹಜ ಶಕ್ತಿ ಕನ್ನಡದಲ್ಲಿ ಅನೇಕ ಅಂದವಾದ ನುಡಿಗಟ್ಟುಗಳನ್ನು ಉಂಟು ಮಾಡಿರುತ್ತದೆ. ಕಣ್ ಎಂಬೊಂದು ಶಬ್ದದೊಡನೆ ಬೇರೆ ಶಬ್ದಗಳೂ ಸೇರಿ ನುಡಿಗಟ್ಟಾಗುವ ಸನ್ನಿವೇಶವನ್ನು ಗಮನಿಸಿರಿ.

ಕಣ್ಮೊಗಿಸು, ಕಣ್ಣಿಡು, ಕಣ್ಕಟ್ಟು, ಕಣ್ಣು ಹಾಕು(ಕಣ್ಣಾಕು), ಕಣ್ಣಾರೆ, ಕಣ್ಣೆಂಜಲು, ಕಂಗಾಲು, ಕಂಬನಿ, ಕಣ್ಣೀರು, ಕಣ್ಬಿಡು – ಇತ್ಯಾದಿ. ಈ ನುಡಿಗಟ್ಟುಗಳನ್ನು ಪರಿಶೀಲಿಸಿದರೆ ಅವೆಲ್ಲದರಲ್ಲಿಯೂ ಬೇರೆ ಬೇರೆಯಾದ ಹೊಸ ಅರ್ಥ ಬಂದಿರುವುದನ್ನು ಅರಿತುಕೊಳ್ಳಬಹುದು.

ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನ ಅಭಿಮಾನ ಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿರಬೇಕಾಗುತ್ತದೆ. 4–5 ಶತಮಾನಗಳ ಹಿಂದೆ ಆಂಗ್ಲ ಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆಂಗ್ಲ ಜನತೆ ಸಾಹಸ ಜೀವಿಯಾಯಿತು; ಬುದ್ಧಿಶಾಲಿಯಾಯಿತು. ಸೂರ್ಯನು ಎಂದೂ ಮುಳುಗನೆನ್ನುವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆಗಳನ್ನೂ ಸಾಹಿತ್ಯ ಸಂಸ್ಕೃತಿಗಳನ್ನೂ ಆಂಗ್ಲ ಪಂಡಿತರೂ



11th_Kannada_Reader_Final_16-07-2018.indd 7 16-07-2018 18:42:51

ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತಮ್ಮ ಭಾಷೆ–ಸಾಹಿತ್ಯಗಳನ್ನು ತನ್ಮೂಲಕ ಹಿಗ್ಗಿಸಿದರು, ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾಮಹಾ ಮೇಧಾವಿಗಳೂ ತಮ್ಮ ಆಸೆ ಆಕಾಂಕ್ಷೆ, ವಿಚಾರ ಮುಂತಾದುವನ್ನೆಲ್ಲಾ ತಮ್ಮ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳೂ, ರಾಜಕಾರಣಿಗಳೂ, ಅರ್ಥಶಾಸ್ತ್ರಜ್ಞರೂ... ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲಾ ಆಂಗ್ಲ ಜನರ ಸಂಕಲ್ಪ, ಕೃಷಿ ಕಾರಣವೆಂದು ಬೇರೆ ಹೇಳಬೇಕಿಲ್ಲ.

ಸ್ವಭಾಷೆಯನ್ನು ಪ್ರೀತಿಸಬೇಕು, ಗೌರವಿಸಬೇಕು, ಬೆಳೆಸಬೇಕು ಎಂದರೆ ಅನ್ಯ ಭಾಷೆಗಳನ್ನು ತಿರಸ್ಕರಿಸಬೇಕೆಂದು ಅರ್ಥವಲ್ಲ. ಭಾಷೆಗಳಲ್ಲಿ ಮೇಲು ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ, 40 ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ವ ದೃಷ್ಟಿಯಿಂದ ಅಂತರ ಇಲ್ಲವೇ ಇಲ್ಲ. ಎಲ್ಲ ಭಾಷೆಗಳಿಗೂ ಅಷ್ಟೇ. ಒಬ್ಬ ತಾಯಿಯ ಗಾನದ ಶೃತಿಯಂತೆ ಎಲ್ಲಕ್ಕೂ ಅಷ್ಟೇ ಸ್ಥಾನವಿದೆ. ಇದನ್ನರಿತು ಭಾರತೀಯರಾದ ನಾವು ನೆರೆ ಹೊರೆಯ ಭಾಷೆಗಳನ್ನು ದ್ವೇಷಿಸದೆ ನಮ್ಮ ನಮ್ಮ ಭಾಷೆಗಳನ್ನು ಗೌರವಿಸಿ ಪ್ರೀತಿಸಿ ಅಭಿವೃದ್ಧಿ ಗೊಳಿಸಿದರೆ ದೇಶದ ಸಂಸ್ಕೃತಿ ಮುಂದುವರೆಯುತ್ತದೆ.

ಹೀಗೆ ಭಾಷಾಭಿವೃದ್ಧಿ ವಿಶ್ವದಲ್ಲಿ ನಡೆದಿದೆ, ನಡೆಯುತ್ತಿದೆ, ನಡೆಯುತ್ತದೆ. ತನ್ಮೂಲಕ ಸಕಲ ಸಂಪತ್ ಸಮೃದ್ಧಿ ಜ್ಞಾನಾಭಿವೃದ್ಧಿ, ಸಂಸ್ಕೃತಿ ಪ್ರಚೋದನೆ.

## ಕೃತಿ–ಕರ್ತೃ ಪರಿಚಯ



ಪ್ರೊ.ಎಂ.ಮರಿಯಪ್ಪ ಭಟ್ಟರು ಕರ್ನಾಟಕದವರಾದರೂ ತಮಿಳುನಾಡಿನಲ್ಲಿ ಸುಮಾರು ನಾಲ್ಕು ದಶಕಗಳ ಕಾಲ ನೆಲೆಸಿ ಕನ್ನಡದ ಸಾಂಸ್ಕೃತಿಕ ರಾಯಭಾರಿಯಾಗಿ ಕನ್ನಡವನ್ನೂ,ಕನ್ನಡ ಸಾಹಿತ್ಯವನ್ನೂ ಪರಿಚಯ ಮಾಡಿ, ತಮಿಳು ಮಣ್ಣಿನಲ್ಲಿ ಕನ್ನಡವನ್ನು ಹರಡಿದವರಲ್ಲಿ ಪ್ರಸಿದ್ಧರು. ಕರ್ನಾಟಕದ ಪುತ್ತೂರು ಬಳಿಯ ಹಳ್ಳಿಯೊಂದರಲ್ಲಿ 27.07.1906ರಲ್ಲಿ ಜನಿಸಿದ ಇವರು ತಮ್ಮ ಹಳ್ಳಿಯಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಮುಂದಿನ ವಿದ್ಯಾಭ್ಯಾಸವನ್ನು ಪುತ್ತೂರು, ಮಂಗಳೂರುಗಳಲ್ಲಿ ಮಾಡಿದರು. ನಂತರ ಮದರಾಸು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡು ತದನಂತರ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. ಇವರು ಹಲವಾರು ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. 'ಕೆಲವು ಕನ್ನಡ ಶಾಸನ ಕವಿಗಳು' ಇದು ಇವರ ಇತಿಹಾಸ ಸಂಶೋಧನೆಯ ಪ್ರಸಿದ್ಧ ಲೇಖನ. ಇವರು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಅತೀವ ಆಸಕ್ತಿಯನ್ನು ಹೊಂದಿದ್ದು ಹಲವು ಲೇಖನಗಳನ್ನು ಪ್ರಕಟಿಸಿದ್ದಾರೆ. ಅಧ್ಯಯನ, ಅಧ್ಯಾಪನಗಳೂ ಇವರಿಗೆ ಪ್ರಿಯವಾದ ವಿಷಯ. 'ಹವ್ಯಕ ಕೋಶ', 'ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ' ಇವು ಇವರ ಪ್ರಮುಖ ಕೃತಿಗಳು. ಇವರು 1961ರಲ್ಲಿ ಶ್ರೀನಗರದಲ್ಲಿ ನಡೆದ 'ಅಖಿಲ ಭಾರತ ಪ್ರಾಚ್ಯ ಸಮ್ಮೇಳನ'ದಲ್ಲಿ ದ್ರಾವಿಡ ವಿಭಾಗದ ಅಧ್ಯಕ್ಷರಾಗಿದ್ದರು.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾಷೆ ಎಂದರೇನು ?
2. ಭಾಷೆಯನ್ನು ಎಷ್ಟು ವಿಧವಾಗಿ ವಿಂಗಡಿಸಬಹುದು ?



11th_Kannada_Reader_Final_16-07-2018.indd 8 16-07-2018 18:42:51

3. ಲಿಪಿ ಎಂದರೇನು ?
4. ಕನ್ನಡದ ಬಗ್ಗೆ ನಯಸೇನ ಕವಿ ಏನು ಹೇಳಿದ್ದಾನೆ ?
5. ಸಜೀವ ಭಾಷೆಯ ಲಕ್ಷಣವೇನು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾಷೆಯ ಪ್ರಯೋಜನವೇನು ?
2. ಭಾಷೆಯ ವಿಧಗಳನ್ನು ಕುರಿತು ವಿವರವಾಗಿ ವಿವರಿಸಿ.
3. ಲಿಪಿ ಶಾಸ್ತ್ರದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿರಿ ?
4. ಭಾಷಾಭಿವೃದ್ಧಿ ಎಂದರೇನು ? ವಿವರಿಸಿ.
5. ಮಹಲಿಂಗ ರಂಗ ಕವಿಯು ಕನ್ನಡದ ಬಗ್ಗೆ ಏನು ಹೇಳಿದ್ದಾನೆ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಕನ್ನಡ ಭಾಷೆಯು ಅಭಿವೃದ್ಧಿ ಹೊಂದಲು ಕನ್ನಡ ಕವಿಗಳ ಕೊಡುಗೆ ಏನು ?
2. ನೆರೆಹೊರೆಯ ಭಾಷೆಗಳು ಹೇಗಿರಬೇಕು ? ವಿವರಿಸಿ.
3. ಅನ್ಯ ಭಾಷೆಯಿಂದ ಕನ್ನಡಕ್ಕೆ ಬಂದಂತಹ ಪದಗಳಾವುವು ? ವಿವರಿಸಿ.
4. ದೇಶದ ಭಾಷಾ ಸಂಸ್ಕೃತಿ ಅಭಿವೃದ್ಧಿ ಹೊಂದಬೇಕಾದರೆ ಏನು ಮಾಡಬೇಕು ?
5. ಭಾಷಾಭಿವೃದ್ಧಿಗೆ ನುಡಿಗಟ್ಟುಗಳ ಕೊಡುಗೆಯನ್ನು ವಿವರಿಸಿ.

## ಭಾಷಾಭ್ಯಾಸ

**1. ಈ ಕೆಳಕಂಡ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಜ್ಞಾನಾನುಭವ, ಜ್ಞಾನಾರ್ಜನೆ, ದಿನಗೆಲಸ, ಲೆಕ್ಕವಿಡುವ, ಕೊನೆಯಲ್ಲಿ, ಭಾಷಾಭಿವೃದ್ಧಿ.

**2. ಈ ಕೆಳಕಂಡ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಸ್ವಾಭಾವಿಕ, ಸಹಜ, ಶಬ್ದ, ಸಮ್ಮತ, ಅಭಿವೃದ್ಧಿ, ಸಜೀವ, ಉಪಲಬ್ಧ, ಅನುಭವ.

**3. ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಅನುಕರಣೆ, ಗತಕಾಲ, ಬೆಳವಣಿಗೆ, ವ್ಯವಹಾರ, ಎರವಲು, ಅಭಿವೃದ್ಧಿ, ನೆರೆಹೊರೆ, ಪರಿಣಾಮ.

**4. ಕೆಳಗಿನ ಪದಗಳಿಗೆ ತತ್ಸಮ–ತದ್ಭವ ಪದಗಳನ್ನು ಬರೆಯಿರಿ.**

ಸಂಸ್ಕೃತ, ಸುಖ, ದುಃಖ, ಕಾವ್ಯ, ಜ್ಞಾನ, ಕವಿ.

## ಚಟುವಟಿಕೆಗಳು

1. ಭಾಷಾಭಿಮಾನಕ್ಕೆ ಸಂಬಂಧಿಸಿದ ಇನ್ನಿತರ ಲೇಖಕರ ಲೇಖನಗಳನ್ನು ಸಂಗ್ರಹಿಸಿ ಓದಿರಿ.
2. ಇತರ ಭಾಷೆಗಳನ್ನು ಕಲಿತು ಆ ಭಾಷೆಗಳ ಉತ್ತಮ ಗ್ರಂಥಗಳನ್ನು ಓದಿ ಅನುವಾದಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಿ.





11th_Kannada_Reader_Final_16-07-2018.indd 9 16-07-2018 18:42:51

ಉಪಪಠ್ಯ

# ಘಟಕ ಒಂದು

# ವೃಕ್ಷ ಸಾಕ್ಷಿ

– ದುರ್ಗಸಿಂಹ




ಮೌಖಿಕ ಪರಂಪರೆಯಲ್ಲಿ ಸಾಗಿ ಬಂದು ಇಂದು ಗ್ರಂಥ ಸ್ವರೂಪ ಪಡೆದಿರುವ ಕನ್ನಡ ಕಥಾ ಸಾಹಿತ್ಯ ಅತ್ಯಂತ ಜನಪ್ರಿಯ ಪ್ರಕಾರ. ಮನರಂಜನೆಯ ಜೊತೆಗೆ ಜೀವನ ಮೌಲ್ಯಗಳಾದ ಸತ್ಯ, ಪ್ರೇಮ, ಅಹಿಂಸೆ, ತ್ಯಾಗ, ನಿಸ್ವಾರ್ಥ ಸೇವೆ ಮುಂತಾದ ವಿಷಯಗಳನ್ನು ಇವು ಪ್ರತಿಪಾದಿಸುತ್ತವೆ. ದೇವತೆಗಳು, ಮನುಷ್ಯರು, ಪ್ರಾಣಿಗಳು, ಪಕ್ಷಿಗಳು, ಯಕ್ಷ–ಯಕ್ಷಿಣಿಯರು, ಅಸುರರು ಮುಂತಾದ ಪಾತ್ರಗಳ ಮೂಲಕ ಕಥೆಗಳು ವಿಸ್ತಾರವನ್ನು ಪಡೆದುಕೊಳ್ಳುತ್ತವೆ. ಕಥಾ ಸಾಹಿತ್ಯದಲ್ಲಿ ದುರ್ಗಸಿಂಹನ ಪಂಚತಂತ್ರದ ಕಥೆಗಳು, ಆಬಾಲವೃದ್ಧರಿಗೂ ಪ್ರಿಯವಾಗುತ್ತವೆ. ವಸುಭಾಗಭಟ್ಟನ ಸಂಸ್ಕೃತದಲ್ಲಿರುವ ಪಂಚತಂತ್ರ ಕೃತಿಯನ್ನು ದುರ್ಗಸಿಂಹನು ಕನ್ನಡಕ್ಕೆ ಅಳವಡಿಸಿ ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ. ಪಂಚತಂತ್ರವು ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ ಕೃತಿಗಳಲ್ಲಿ ಮಹತ್ವದ್ದು.



ಮಧುರಾ ನಗರದೊಳಗೆ ಧರ್ಮಬುದ್ಧಿಯುಂ ದುಷ್ಟಬುದ್ಧಿಯುಮೆಂಬರಿರ್ವರ್ ವಣಿಕ್ಪುತ್ರರ್ ಪುದುವಿನೊಳ್ ಪರದುವೋಗಿ ಪಿರಿದಪ್ಪ ಪೊನ್ನ ಪಡೆದು ಮಗುಟ್ಟು ಬಂದು ನಿಜಜನ್ಮಭೂಮಿಯಪ್ಪ ಮಧುರಾಪುರದ ಬಹಿರುದ್ಯಾನವನದೊಳಗೆ ಬೀಡಂ ಬಿಟ್ಟರ್ಧರಾತ್ರಿಯೊಳ್ ಧರ್ಮಬುದ್ಧಿ ದುರ್ಬುದ್ಧಿಯಪ್ಪ ದುಷ್ಟಬುದ್ಧಿಯಂ ಕರೆದು ಪೊನ್ನಂ ಪಚ್ಚುಕೊಳ್ವಮೆನೆ ದುಷ್ಟಬುದ್ಧಿ ಪಾಪಬುದ್ಧಿಯಾಗಲ್ಬಗೆದಿಂತೆಂದಂ : ನಾವೀ ಪೊನ್ನಂ ಪಚ್ಚುಕೊಂಡು ಮನೆಯೊಳ್ ಸ್ವೇಚ್ಛೆಯಿಂದರ್ಪವರಲ್ಲಂ ಮತ್ತಂ ಪರದುವೋಗಲ್ವೇಟ್ಕುಮದು ಕಾರಣದಿಂ ನಿನಗಮೆನಗಂ ಬೀಯಕ್ಕೆ ತಕ್ಕನಿತು ಪೊನ್ನಂ ಕೊಂಡು



11th_Kannada_Reader_Final_16-07-2018.indd 10 16-07-2018 18:42:52

ಮಿಕ್ಕ ಪೊನ್ನನೆಲ್ಲಮನಿಲ್ಲಿಯೆ ಮಡಂಗುವಮೆನೆ, ಧರ್ಮಬುದ್ಧಿಯಾ ಪಾಪಕರ್ಮನಂ ತನ್ನ ಮನದನ್ನನೆಂದೆ ಬಗೆದುಮದರ್ಕೊಡಂಬಟ್ಟೊಂದು ಮಹಾವಟವಿಟಪಿಯ ಕೆಲದೊಳ್ ಪೊನ್ನಂ ಪೂಟ್ಟು ಮರುದಿವಸಮಿರ್ವರುಂ ಪೋಪಲಂ ಪೊಕ್ಕು ಇಷ್ಟವಿಷಯ ಸುಖಂಗಳನನುಭವಿಸುತಿರ್ದು ದುಷ್ಟಬುದ್ಧಿ ಧರ್ಮಬುದ್ಧಿಯಂ ವಂಚಿಸಿ ಪೋಗಿ ಪೊನ್ನನೆಲ್ಲಮಂ ಕೊಂಡು ಕುಟಿಯಂ ಮುನ್ನಿನಂತೆ ಪೂಟ್ಟು ಕೆಲವಾನುಂ ದಿವಸಕ್ಕೆ ತಾನೆ ಧರ್ಮಬುದ್ಧಿಯಲ್ಲಿಗೆ ವಂದು ಬೀಯಕ್ಕೆ ಪೊನ್ನಿಲ್ಲವಿನ್ನುಂ ಕಿಜೆದು ಪೊನ್ನಂ ತೆಗೆದುಕೊಳ್ವಂ ಬನ್ನಿಮೆಂದೊಡಂಗೊಂಡು ಪೋಗಿ ಪೂಟ್ಟೆಡೆಯೊಳ್ ಪೊನ್ನಂ ಕಾಣದೆ ಇನ್ನುಸಿರದಿರ್ದೊಡೆ ಅನೃತಂ ತನ್ನ ಮೇಲೆ ವರ್ಪುದೆಂದು ಪೊನ್ನನೆಲ್ಲಮಂ ನೀನೆ ಕೊಂಡೆಯೆಂಬುದುಂ

**ಅತಿಕುಟಿಲಮನಂ ಧನಲು**

**ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ**

**ಮತಿಗೆಟ್ಟು 'ತಸ್ಕರಸ್ಯಾ**

**ನೃತಂ ಬಲಂ' ಎನಿಪ ವಾಕ್ಯವಂ ನೆನೆಯುತ್ತಂ ॥**

ಅಂತು ದುಷ್ಟಬುದ್ಧಿ ಮುನ್ನಮೆ ಹಾ ! ಹಾ ! ಕೆಟ್ಟೆನೆಂದು ಬಾಯಂ ಬಸಿಱಂ ಪೊಯ್ದುಕೊಂಡು ಪುಯ್ಲಿಟ್ಟು ಧರ್ಮಬುದ್ಧಿಯ ಮೇಲೆ ಕಳವನಿಟ್ಟು ಕಾಪಟಿದು ಕಾತರಿಸಿ ನುಡಿಯೆ ತತ್ಕರ್ಮೆಗಿಡಲ್ಬುಡಿದು ನೀಂ ಗೆಲೆ ಬಾಯಾರ್ದು ಪೋಗಲ್ಪಡೆಯೆ ವಿಚಾರಂಗೆಯ್ವಮೆಂದು ಧರ್ಮಾಧಿಕರಣರಲ್ಲಿಗೆ ಬಂದಿರ್ವರುಂ ತತ್ಪ್ರಪಂಚಮೆಲ್ಲಮಂ ಸವಿಸ್ತರಂ ನುಡಿದು ಕಡೆಯೊಳ್ ದುಷ್ಟಬುದ್ಧಿಯಿಂತೆಂದಂ : ಪೊನ್ನೆಲ್ಲಮನೀತನೆ ಕಳೆದುಕೊಂಡದರ್ಕೆ ಸಾಕ್ಷಿಯುಂಟೆನೆ ಸಭಾಸದರ್ ಸಾಕ್ಷಿಯಂ ಪೇಟೆನೆ ಪೊನ್ನಂ ಮಡಗುವಾಗಳೀತನುಮಾನುಮಲ್ಲದೆ ಮನುಷ್ಯರ್ ಪೆಱರಿಲ್ಲ. ತತ್ಸನ್ನಿಧಾನಸ್ಥಿತಮಪ್ಪ ವಟವೃಕ್ಷಮೇ ಸಾಕ್ಷಿಯೆಂಬುದುಂ ಧರ್ಮಾಧಿಕರಣರ್ ವಿಸ್ಮಯಂಬಟ್ಟು ಈತನ ಮಾತು ಅಶ್ರುತಪೂರ್ವಮೀ ಚೋದ್ಯಮಂ ನೋಡುವಮೆಂದು ಧರ್ಮಬುದ್ಧಿಯಂ ಕರೆದು ನೀನೀ ಸಾಕ್ಷಿಯಂ ಕೈಕೊಳ್ವುದೆಂದೊಡಾತಂ ವೃಕ್ಷಂ ಸಾಕ್ಷಿಯೆಂದು ಮುನ್ನಂ ಪೇಟ್ಪಿರುಂ ಕೇಳ್ದರುಮಿಲ್ಲಮ್

ವ॥ ಮನುಷ್ಯರ ಸುಕೃತ ದುಷ್ಕೃತಂಗಳು ದೈವಗಳಱಿಗುಮದಱಿಂದೀ ಸಾಕ್ಷಿಯುಮುಚಿತಂ ಮರನಂ ನುಡಿಸುವುದು ಪರಮಗಹನಮೀ ಸಾಕ್ಷಿಯಂ ಕೈಕೊಳ್ವುದೆನೆ ಧರ್ಮಬುದ್ಧಿ ಕರಮೊಳ್ಳಿತ್ತು ಕೈಕೊಂಡೆನೆನೆ ಧರ್ಮಾಧಿಕರಣದವರಂದು ಪೋಟ್ಟು ಪೋದುದು, ನಾಳೆ ಪೋಗಿ ಕೇಳ್ವಮೆನೆ ತಮ್ಮ ತಮ್ಮ ಮನೆಗೆಲ್ಲರುಂ ಪೋದರ್, ಅನ್ನೆಗಂ ದುಷ್ಟಬುದ್ಧಿಯುಂ ತನ್ನ ಮನೆಗೆ ಬಂದು ತಮ್ಮಯ್ಯನ ಕಯ್ಯಂ ಪಿಡಿದು ಕಟ್ಟೇಕಾಂತಕ್ಕುಯ್ದು ತದ್ವೃತ್ತಾಂತಮೆಲ್ಲಮಂ ತಿಳಿಯೆ ಪೇಟ್ದು ನಿಮ್ಮೊಂದು ವಚನಮಾತ್ರದಿಂ ನಮ್ಮ ಪರಿಗ್ರಹಮೆಲ್ಲಂ ಪಲವು ಕಾಲಂ ಪಸಿಯದುಂಡು ಬಾಟ್ವಿಂತರ್ಥಂ ಸಾರ್ದಪುದು ನೀವಾ ಮರದ ಪೊಟಲೊಳಡಂಗಿರ್ದು ಧರ್ಮಬುದ್ಧಿಯೆ ಪೊನ್ನಂ ಕೊಂಡುಯ್ದನೆಂದು ನುಡಿಯಿಮೆಂಬುದುಂ ಆತನಿಂತೆಂದಂ

ಪರಧನ ಹರಣಮುಂ ವಿಶ್ವಾಸಘಾತುಕಮುಂ ಸ್ವಾಮಿದ್ರೋಹಮುಂ ಇವೆಲ್ಲಮೇಗೆಯ್ದುಂ ಕಿಡಿಸುಗುಮಿಂತಪ್ಪುದೆಲ್ಲಮಂ ನೀನಱಿದಿರ್ದೆನ್ನುಮಂ ಸಾಕ್ಷಿ ಮಾಡಿ ನುಡಿಸಿ ಕಿಡಿಸಲ್ಬಗೆದೆ, ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ ಎನಲ್ ದುಷ್ಟಬುದ್ಧಿ ಕೇಳ್ದು ನಮ್ಮ ನಿರ್ವಾಹಮಂ ಕಿಡಿಸದೆನ್ನಂದುದಂ ಗೆಯ್ಯೆಂದು ತನ್ನ ತಂದೆಯನೊಡಂಬಡಿಸುತಿರ್ಪಿನಮ್ ಆದಿತ್ಯನಪರಗಿರಿಯನೆಯ್ದುವುದುಂ

**ಉ ಮೇದಿನಿಯಂ ಕ್ರಮಕ್ರಮದೆ**

**ಪರ್ವಿದುದಾತ್ತನಭೋವಿಭಾಗಮಾ**

**ಚ್ಛಾದಿತ ದಿಙ್ಮುಖಂ ವ್ಯವಹಿತಾಖಿಲದೃಷ್ಟಿಪಥಂ**

**ತಮಾಲ ಭೃಂ**

**ಗೋದರ ನೀರದಾಗಮ ಘನ**

**ಪ್ರಕರಾಂಜನ ಪುಂಜ ಕೋಕಿಲಾ**

**ಭ್ಯೋದರಕಾಯಕಾಂತಿ ಶಿತಿಕಂಠಗಳಪ್ರತಿಮಪ್ರಭಂ**

**ತಮಂ ॥**

ಅಂತು ಕವಿದ ಕಟ್ಟಲೆಯೊಳ್ ದುಷ್ಟಬುದ್ಧಿ ತನ್ನ ತಂದೆಯಂ ಕೊಂದಲ್ಲದೆ ಮಾಣೆನೆಂದುಯ್ವಂತುಯ್ದು ಬಳಾರಿಯ ಮನೆಯಂ ಪರಕೆಯ ಕುಱಿಯಂ ಪುಗಿಸುವಂತೆ ವಟವಿಟಪಿ ಕೋಟರಕುಟೀರಾಂತರಮಂ ಪುಗಿಸಿ ಬವರಮಂ ಗೆಲ್ದೆನೆಂದು ರಾಗಿಸಿ ಮನೆಗೆ



11th_Kannada_Reader_Final_16-07-2018.indd 11 16-07-2018 18:42:52

ವಂದು ನಿದ್ರಾಂಗನಾಸಕ್ತನಾದಂ.

ಆದಿತ್ಯೋದಯಮಾಗಲೊಡಂ ಧರ್ಮಬುದ್ಧಿ ದೇವಗುರು ದ್ವಿಜಪೂಜೆಗಳಂ ಮಾಡುತ್ತುಂ ತಡೆಯೆ ದುಷ್ಟಬುದ್ಧಿ ಮುಖಮಂ ತೊಳೆಯದೆ ಬಂದು ಧರ್ಮಾಧಿಕರಣಕ್ಕಿಂತೆಂದಂ

ಪ್ರತ್ಯರ್ಥಿ ಬಂದನಿಲ್ಲ ಪಿರಿದುಂ ಪೊಟ್ಟು ಪೋದುದು ಎನಗೆ ಕರ್ತವ್ಯಮಾವುದೆಂದು ನುಡಿಯುತಿರ್ಪನ್ನೆಗಂ ಧರ್ಮಬುದ್ಧಿಯ ಬರವಂ ಕಂಡಾಕ್ಷಣದೊಳ್ ಧರ್ಮಾಧಿಕರಣರ್ ನಡೆಯಿಂ ನಿಮ್ಮಿರ್ವರ ಬವರಮಂ ತಿರ್ದುವಮೆಂದು ವಟವೃಕ್ಷದ ಸಮೀಪಕ್ಕೆ ವಂದಷ್ಟವಿಧಾರ್ಚನೆಯಿಂದರ್ಚಿಸಿ ತದನಂತರಮ್ ಆಯಿರ್ವರುಮಂ ನುಡಿಸಿ ಬಟಿಕ್ಕಾ ಮರನನಿಂತೆಂದರ್

ನೀನಪ್ಪೊಡೆ ಯಕ್ಷಾದಿ ದಿವ್ಯದೇವತಾವಾಸಮುಂ ಸೇವ್ಯಮುಮಪ್ಪ ವೃಕ್ಷಮದುಕಾರಣದಿಂ ನಿನ್ನಂ ಸಾಕ್ಷಿ ಮಾಡಿ ಕೇಳ್ದಪೆವು ನೀಂ ತಪ್ಪದೆ ನುಡಿಯೆಂದು ಧರ್ಮಾಧಿಕರಣಂ ಧರ್ಮಶ್ರವಣಂಗೆಯ್ದುಸಿರದಿರ್ಪುದುಂ ಪೊಟಿಲೊಳಡಂಗಿರ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮಗತಿಯಂ ಬಿಟ್ಟು 'ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ' ಎಂದು ನುಡಿವಂತೆ ಧರ್ಮಬುದ್ಧಿಯೇ ಧನಮಂ ತೆಗೆದುಕೊಂಡನೆಂದು ನುಡಿವುದುಂ ನೆರವಿಯುಂ ಧರ್ಮಾಧಿಕರಣಮುಂ ಚೋದ್ಯಂಬಟ್ಟಿರೆ ಧರ್ಮಬುದ್ಧಿ ಚೋದ್ಯಮಿದು ದೈವಮಲ್ಲಕ್ಕುಮಂತಪ್ಪೊಡೆ ಸತ್ಯಮನೇಕೆ ನುಡಿಯದು ಇದೇನಾನುಮೊಂದು ಕೃತ್ರಿಮವಾಗಲೆವೇಟ್ಕುಮೆಂದಾ ಮರನಂ ಬಲವಂದು ನೋಡಿ ಪಿರಿದಪ್ಪ ಪೊಟಿಲುಮನಲ್ಲಿಯೆ ಮನುಷ್ಯಸಂಚಾರಮಾಗಿರ್ದುದುಮಂ ಕಂಡು ನಿಶ್ಚೈಸಿ ಧರ್ಮಬುದ್ಧಿ ಧರ್ಮಾಧಿಕರಣರ್ಗಿತೆಂದಂ ಹುಸಿಯದ ಬೇಹಾರಿಯೇ ಇಲ್ಲ ನಾಂ ಬೇಹಾರಿಯಪ್ಪುದರಿಂದೆಮ್ಮ ವೃತ್ತಿ ಧರ್ಮಕ್ಕೆ ಧರ್ಮಬುದ್ಧಿಯಧರ್ಮಬುದ್ಧಿಯಾಗಿ ಧನಮಂ ಬಂಚಿಸಿಕೊಂಡೆನ್ನ ಮನೆಗುಯ್ದೆನೆಂಬನ್ನೆಗಂ ನೇಸರ್ಮೂಡಿದೊಡೆ ಉಯ್ಯಲಿಂಬಿಲ್ಲದೆ ಮರದ ಪೊಟಿಲೊಳಗಿಟ್ಟು ಬಂದು ಮಱುದಿವಸಂ ಪೋಗಿ ನೋಟ್ಪಿನ್ನೆಗಂ ಆ ಪೊನ್ನನೊಂದು ಪನ್ನಗಂ ಸುತ್ತಿ ಪಟ್ಟಿರ್ದೊಡೆ ಕೊಳಲಂಜಿ ಪೋದೆಂ ನೀಮಿಲ್ಲಿರ್ದಂತೆ ನೋಡುತ್ತಮಿರಿಂ ಪೊಟಿಲೊಳಗೆ ಪೊಗೆಯನಿಕ್ಕಿ ಪಾವಂ ಪೊಱಮಡಿಸಿ ಕಳ್ದುಕೊಂಡೊಡವೆಯಂ ಕುಡುವೆನೆಂದು ಧರ್ಮಬುದ್ಧಿ ಪುಲ್ಲಂ ಪುಳ್ಳಿಯಂ ತರಿಸಿಯಾ ಪೊಟಿಲೊಳಗಡಸಿ ತುಂಬಿ ದುಷ್ಟಬುದ್ಧಿಯ ಮನೆಯೊಳ್ ಕಿಚ್ಚನಿಕ್ಕುವಂತೆ ಕಿಚ್ಚನಿಕ್ಕಲೊಡಂ ಪೊಗೆ ಸುತ್ತಿಯುರಿಯಟ್ಟಲ್ ಪ್ರೇಮಮತಿ ಧೃತಿಗೆಟ್ಟು ಪುಯ್ಯಲಿಟ್ಟು ಪೊಟಿಲೊಳಗಿಂದಂ ಸುರುಳ್ದುರುಳ್ದು ಕಂಠಗತ ಪ್ರಾಣನಾಗಿರ್ದುಂ ಧರ್ಮಾಧಿಕರಣರ್ ಕಂಡು ದುಷ್ಟಬುದ್ಧಿಯ ತಂದೆಯಪ್ಪುದಂ ಸಂದೆಯಮಿಲ್ಲೆಂದಜಿದು ಈ ಪಾಪಕರ್ಮನಪ್ಪ ದುಷ್ಪುತ್ರನಿಂ ನಿನಗಿಂತಪ್ಪ ದುರ್ಮರಣಂ ಸಮನಿಸಿದುದೆಂದು ನುಡಿವುದುಂ.

## ಕೃತಿ–ಕರ್ತೃ ಪರಿಚಯ

ದುರ್ಗಸಿಂಹ(ಕ್ರಿ.ಶ.1031)ನು ಕಿಸುಕಾಡು ನಾಡಿನ ಸಯ್ಯಡಿ(ಈಗಿನ ಗದಗ್ ಜಿಲ್ಲೆಯ ರೋಣ ತಾಲೂಕಿನ ಸವಡಿ ಗ್ರಾಮ) ಯೆಂಬ ಊರಿನಲ್ಲಿ ಜೀವಿಸಿದ್ದವನು. ಇವನು ಒಂದನೇ ಜಗದೇಕ ಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು. ಮತಧರ್ಮ ಸಮನ್ವಯಕಾರನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ನಿರ್ಮಿಸಿದನೆಂದು ತಿಳಿದು ಬಂದಿದೆ. 'ಪಂಚತಂತ್ರ' ಎಂಬ ಚಂಪೂ ಕಾವ್ಯದ ಕರ್ತೃ ಇವನು. ಈ ಕೃತಿಯಲ್ಲಿ ಭೇದ, ಪರೀಕ್ಷೆ, ವಿಶ್ವಾಸ, ವಂಚನೆ ಮತ್ತು ಮಿತ್ರ ಕಾರ್ಯ ಎಂಬ ಐದು ತಂತ್ರಗಳನ್ನಾಧರಿಸಿದ 48 ಉಪಕಥೆಗಳಿವೆ. ಕಾವ್ಯವು 457 ಪದ್ಯಗಳಿಂದಲೂ 231 ಶ್ಲೋಕಗಳಿಂದಲೂ ಕೂಡಿದೆ. ಅದರಲ್ಲಿ 'ವೃಕ್ಷ ಸಾಕ್ಷಿ' ಒಂದು ವಿಶಿಷ್ಟ ಕಥೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಗುಂಡ್ಮಿಚಂದ್ರಶೇಖರ ಐತಾಳರು ಸಂಪಾದಿಸಿರುವ 'ದುರ್ಗಸಿಂಹ ಕವಿಯ ಕರ್ನಾಟಕ ಪಂಚತಂತ್ರಂ' ಎಂಬ ಕೃತಿಯಿಂದ ಈ ಪಾಠವನ್ನು ಆರಿಸಲಾಗಿದೆ.



11th_Kannada_Reader_Final_16-07-2018.indd 12 16-07-2018 18:42:52

## ಆಶಯ ಭಾವ

ಗುಣಾಢ್ಯನಿಂದ ಪೈಶಾಚಿಕ ಭಾಷೆಯಲ್ಲಿ ರಚಿತವಾದ ಬೃಹತ್ಕಥೆ ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರಕ್ಕೆ ಆಕರ. ತಾನು ಸಂಸ್ಕೃತ ಕೃತಿಯನ್ನಾಧರಿಸಿ ಕನ್ನಡ ಪಂಚತಂತ್ರವನ್ನು ಬರೆದಿರುವುದಾಗಿ ದುರ್ಗಸಿಂಹ ಹೇಳಿಕೊಂಡಿದ್ದಾನೆ. ಪಂಚತಂತ್ರದ ವೃಕ್ಷ ಸಾಕ್ಷಿ ಕಥೆಯ ಮೂಲಕ ಹಳಗನ್ನಡ ಚಂಪೂಕಾವ್ಯವನ್ನು ಪರಿಚಯಿಸುವ ಆಶಯದೊಂದಿಗೆ ವೃಕ್ಷ ಸಾಕ್ಷಿ ಕಥೆಯು 'ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ' ಎಂಬ ನೀತಿಯನ್ನು ಪ್ರತಿಪಾದಿಸುತ್ತದೆ. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರ ಪಾತ್ರಗಳು ಹೆಸರಿಗೆ ತಕ್ಕಂತಹ ಗುಣವನ್ನು ಹೊಂದಿದ್ದು, ಧರ್ಮಬುದ್ಧಿಯ ಸಹನಶೀಲತೆ, ಸುಸಂಸ್ಕೃತ ವ್ಯಕ್ತಿತ್ವವನ್ನು ನಿರೂಪಿಸಿದರೆ ದುಷ್ಟಬುದ್ಧಿಯ ಪಾತ್ರವು ತನ್ನ ವಂಚನೆ, ಕಪಟತನ, ಮೋಸದಿಂದ ತಾನೂ ಹಾಳಾಗುವುದಲ್ಲದೆ ಸಂಪತ್ತಿಗಾಗಿ ತನ್ನ ತಂದೆಯನ್ನೇ ಬಲಿಕೊಡುವ ಹೃದಯಹೀನ ಕೃತ್ಯದಿಂದ 'ಮಾಡಿದ್ದುಣ್ಣೋ ಮಾರಾಯ' ನೀತಿಯಂತೆ ಕೆಟ್ಟ ಫಲವನ್ನು ಅನುಭವಿಸುವಂತಾಗುತ್ತದೆ. ಈ ಕಥೆಯು 'ಹಣಕ್ಕಿಂತ ಗುಣ ಮೇಲು' ಎನ್ನುವ ಆಶಯವನ್ನು ಪ್ರತಿಪಾದಿಸುತ್ತದೆ.

## ಕಠಿಣ ಪದಗಳ ಅರ್ಥ

ಅತಿಕುಟಿಲ ಮನ–ಅತಿಯಾದ ಮೋಸದ ಮನಸ್ಸು; ಅನೃತ–ಸುಳ್ಳು, ಅಸತ್ಯ; ಅಪರಗಿರಿ–ಅಸ್ತಮಾನದ ಬೆಟ್ಟ, ಪಶ್ಚಿಮದ ಬೆಟ್ಟ; ಅಬ್ಜೋದರ–ವಿಷ್ಣು; ಕಾಯಕಾಂತಿ–ವಿಷ್ಣುವಿನ ದೇಹದ ಕಾಂತಿ; ಅಯ್ಯ–ತಂದೆ; ಅಷ್ಟವಿಧ–ಎಂಟು ಬಗೆಯ; ಅಟಿ–ನಾಶ; ಆಚ್ಛಾದಿತ–ಆವರಿಸಿದ; ಆದಿತ್ಯ–ಸೂರ್ಯ, ರವಿ; ಇಂಬು–ಅವಕಾಶ; ಉಯ್–ಒಯ್ಯು, ತೆಗೆದುಕೊಂಡು ಹೋಗು; ಉಯ್ದು–ಒಯ್ದು, ತೆಗೆದುಕೊಂಡು ಹೋಗಿ; ಉರಿಯಟ್ಟಲ್–ಬೆಂಕಿಯುರಿಯಲು, ಬೆಂಕಿ ವ್ಯಾಪಿಸಿಕೊಳ್ಳಲು; ಉಸಿರ್–ಹೇಳು; ಎನ್ನೆಂದುದಂ–ನಾನು ಹೇಳಿದ್ದನ್ನು; ಒಡಂಬಡು–ಒಪ್ಪು; ಕಟ್ಟೇಕಾಂತ–ಯಾರೂ ಇಲ್ಲದ ಏಕಾಂತ; ಕರಂ–ತುಂಬಾ; ಕಳವನಿಡು–ಕಳ್ಳತನವನ್ನು ಆರೋಪಿಸು; ಕಳೆದುಕೊಂಡುದರ್ಕೆ–ಕದ್ದುದಕ್ಕೆ, ಕಾಪು–ರಕ್ಷಣೆ; ಕಿಡಿಸು–ಕೆಡಿಸು; ಕಿಡು–ನಾಶವಾಗು; ಕಿರಿದು–ಸ್ವಲ್ಪ; ಕುಟಿ–ಹೊಂಡ; ಕೂರ್ಮೆ–ಸ್ನೇಹ; ಕೃತ್ರಿಮ–ಮೋಸ; ಕೆಲವಾನುಂ–ಕೆಲಕೆಲವು; ಕೈಕೊಳ್ಳು–ಸಮ್ಮತಿಸು, ಒಪ್ಪಿಕೊಳ್ಳು; ಕೋಟರ ಕುಟೀರ–ಮರದ ಪೊಟರೆ; ಕ್ರಮಕ್ರಮದೆ–ಮೆಲ್ಲಮೆಲ್ಲನೆ; ಕಟ್ತಿಲೆ–ಕತ್ತಲೆ; ಚೋದ್ಯ–ಅದ್ಭುತ; ತತ್ಪ್ರಪಂಚಂ–ಈವರೆಗಿನ ನಡೆದ ಘಟನೆ; ತತ್ಸನ್ನಿಧಾನಸ್ಥಿತ–ಅಲ್ಲಿರುವ, ಆ ಸ್ಥಳದಲ್ಲಿರುವ, ತಮಾಲ–ಕತ್ತಲೆ; ತಸ್ಕರ–ಕಳ್ಳ; ದಿಙ್ಮುಖ–ದಿಕ್ಕುಗಳು; ದುಷ್ಪುತ್ರ–ದುಷ್ಟಪುತ್ರ; ನಿರ್ವಾಹ–ತಂತ್ರ; ನೀರದ–ಮೋಡ; ನೆರವಿ–ಜನಸಮೂಹ, ನೇಸರ–ಸೂರ್ಯ; ಪಚ್ಚು–ಹಂಚು; ಪನ್ನಗ–ಹಾವು, ಪರದು–ವ್ಯಾಪಾರ; ಪರಮ ಗಹನ–ನಿಗೂಢ; ಪರಿಗ್ರಹ–ಮನೆಯವರು; ಪರ್ವಿದ–ಹಬ್ಬಿದ; ಪಸಿಯದುಂಡು–ಆಹಾರಕ್ಕೆ ಕೊರತೆಯಿಲ್ಲದೆ, ಹಸಿವೆಂದರೇನೆಂಬುದೇ ತಿಳಿಯದೆ ತಿಂದುಂಡು; ಪಿರಿದಪ್ಪ–ದೊಡ್ಡದಾದ, ಬಹಳಷ್ಟು; ಪುಗಿಸು–ಹೊಗಿಸು; ಪುಯ್ಲಿಟ್ಟು–ಬೊಬ್ಬೆ ಹಾಕಿ; ಪುಳ್ಳಿ–ಒಣ ಕಟ್ಟಿಗೆಯ ತುಂಡು, ಸೌದೆ; ಪೂಟ್–ಹೂಳು; ಪೆಱರ್–ಬೇರೆಯವರು; ಪೊನ್ನು–ಸಂಪತ್ತು, ಹಣ; ಪೊಯ್ದುಕೊಂಡು–ಬಡಿದುಕೊಳ್ಳುತ್ತಾ; ಪೋಟ್ತುಪೋಗು–ಕತ್ತಲಾಗು; ಪೊಟಿಲ್–ಹೊಳಲು, ನಗರ; ಪೋಗಲ್ಪಡೆ–ಹೋಗಲು ಅನುವಾಗು; ಪ್ರಕರಾಂಜನ ಪುಂಜ–ಕಾಡಿಗೆಯ ರಾಶಿ, ಕಾಡಿಗೆಯಷ್ಟು ಕಪ್ಪಾದ; ಪ್ರತ್ಯರ್ಥಿ–ಎದುರಾಳಿ, ಪ್ರತಿವಾದಿ; ಪಟು–ಕೆಟ್ಟ; ಬಂಚಿಸು–ಚಂಚಿಸು; ಬರವಂ–ಬರುವಿಕೆಯನ್ನು, ಬಲವಂದು–ಪ್ರದಕ್ಷಿಣೆ ಬಂದು; ಬವರ–ಜಗಳ, ಯುದ್ಧ; ಬಸಿರ್–ಹೊಟ್ಟೆ; ಬಹಿರುದ್ಯಾನವನ–ಹೊರವಲಯದ ಮರಗಿಡಗಳ ಹೂದೋಟ; ಬಳಾರಿ–ಮಾರಿ; ಬಾಯ್–ಬಾಯಿ;



11th_Kannada_Reader_Final_16-07-2018.indd 13 16-07-2018 18:42:52

ಬಾಯಾರ್ದು–ಕೂಗಾಡಿ; ಬಾಟ್ಪಿಂತರ್ಥಂ–ಬಾಳುವಷ್ಟು ಸಂಪತ್ತು; ಬೀಡಂಬಿಡು–ತಂಗು; ಬೀಯ(ದ್ಭ)–ವ್ಯಯ(ತ್ಸ), ಖರ್ಚು; ಬೇಹಾರಿ(ದ್ಭ)–ವ್ಯಾಪಾರಿ(ತ್ಸ); ಭೃಂಗೋದರ–ಹೊಗೆ ತುಂಬಿ; ಮನದನ್ನ–ಸ್ನೇಹಿತ; ಮಹಾವಟವಿಟಪಿ–ದೊಡ್ಡದಾದ ಅಶ್ವತ್ಥಮರ; ಮೇದಿನೀ–ಭೂಮಿ; ಲುಬ್ಧತೆ–ದುರಾಸೆ; ವಂದು–ಬಂದು; ವಣಿಕ್ಪುತ್ರರ್–ವ್ಯಾಪಾರಿಗಳ ಮಕ್ಕಳು; ವರ್ಮದು–ಬರುವುದು; ವ್ಯವಹಿತ–ಮುಚ್ಚಿದ; ಸಂದೆಯ(ದ್ಭ)–ಸಂದೇಹ(ತ್ಸ); ಸಮನಿಸು–ಸಂಭವಿಸು; ಹರಣ–ಕದಿಯು; ಹುಸಿ–ಸುಳ್ಳು; ಕೋಕಿಲಾ(ತ್ಸ)–ಕೋಗಿಲೆ(ದ್ಭ).

## ಟಿಪ್ಪಣಿ

**ಧರ್ಮಾಧಿಕರಣರ್:** ನ್ಯಾಯ ತೀರ್ಮಾನ ಮಾಡುವವರ ಸಮೂಹ.

**ಅಶ್ರುತಪೂರ್ವ:** ಅಶ್ರುತ=ಕೇಳದಿರುವ; ಪೂರ್ವ=ಈ ಹಿಂದೆ; ಈ ಹಿಂದೆ ಕೇಳಿಲ್ಲದ.

**ಅಬ್ಜೋದರ:** ಅಪ್=ನೀರು; ಜ=ಜನಿಸಿದ್ದು; ಅಬ್ಜ=ನೀರಿನಲ್ಲಿ ಹುಟ್ಟಿದ್ದು, ಕಮಲ; ಉದರ=ಹೊಟ್ಟೆ, ನಾಭಿ; ಅಬ್ಜೋದರ=ನಾಭಿಯಲ್ಲಿ ಕಮಲವುಳ್ಳವ, ವಿಷ್ಣು.

**ಶಿತಿಕಂಠ:** ಶಿತಿ=ನೀಲಿ ಬಣ್ಣ; ಕಂಠ=ಕುತ್ತಿಗೆ, ಕೊರಳು; ಶಿತಿಕಂಠ=ನೀಲಿಬಣ್ಣದ ಕುತ್ತಿಗೆಯುಳ್ಳವನು, ಶಿವ.

**ಶಿತಿಕಂಠಗಳಪ್ರತಿಮ ಪ್ರಭಂ ತಮಂ:**
ಶಿತಿಕಂಠ=ಶಿವ; ಅಪ್ರತಿಮ
ಪ್ರಭಂ=ಹೋಲಿಸಲು ಅಸಾಧ್ಯವಾದ;
ತಮಂ=ಕತ್ತಲು; ಶಿವನ ಕುತ್ತಿಗೆಯ ಬಣ್ಣಕ್ಕೆ ಹೋಲಿಸಲು ಅಸಾಧ್ಯವಾದಷ್ಟು ಕಪ್ಪಾದ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ವೃಕ್ಷಸಾಕ್ಷಿ ಕಥೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ ?
2. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
3. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?
4. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?
5. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?
2. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ?
3. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. 'ವೃಕ್ಷ ಸಾಕ್ಷಿ' ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಏಕೆ ?
2. ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

## ಚಟುವಟಿಕೆಗಳು

1. ಪಂಚತಂತ್ರದ ಇನ್ನಿತರ ಕಥೆಗಳನ್ನು ಓದಿರಿ.
2. ತೆನಾಲಿ ರಾಮಕೃಷ್ಣ, ಅಕ್ಬರ್–ಬೀರಬಲ್ಲರ ಕಥೆಗಳನ್ನು ಓದಿ ಸಂತೋಷಿಸಿ.



11th_Kannada_Reader_Final_16-07-2018.indd 14 16-07-2018 18:42:52

ವ್ಯಾಕರಣ

ಘಟಕ ಒಂದು

# ಅಕ್ಷರ ಪ್ರಕರಣ

## ಭಾಷೆ

ಮಾನವ ಮಾತನಾಡುವ ಪ್ರಾಣಿ. ಮಾತಿನ ಸಹಾಯದಿಂದ ಅವನು ತನ್ನ ಪ್ರತಿನಿತ್ಯದ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುವುದಕ್ಕೆ ಶಕ್ತನಾಗಿದ್ದಾನೆ. ಮಾನವನ ಬಾಯಿಯಲ್ಲಿ ಗಂಟಲಿನಿಂದ ತುಟಿಯವರೆಗೂ ಹಲವಾರು ಅಂಗಗಳುಂಟು. ಇವು ಧ್ವನಿಗಳನ್ನು ಹೊರಡಿಸುವುದಕ್ಕೆ ಸಹಾಯ ಮಾಡುತ್ತವೆ. ಮಾನವ ಈ ಧ್ವನ್ಯಂಗಗಳಿಂದ ಧ್ವನಿಗಳನ್ನು ಹೊರಡಿಸಿ ಅವುಗಳನ್ನು ಇಷ್ಟ ಬಂದಂತೆ ಜೋಡಿಸಿ ಒಂದು ವ್ಯವಸ್ಥಿತವಾದ ಅರ್ಥಪೂರ್ಣ ರೂಪವನ್ನು ಕೊಡಬಲ್ಲ. ಈ ಮೂಲಕ ಅವನು ತನ್ನ ಪರಿಸರದ ಜನರೊಂದಿಗೆ ವ್ಯವಹರಿಸುತ್ತಾನೆ. ಹೀಗೆ ಇನ್ನೊಬ್ಬರಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಪ್ರತಿಕ್ರಿಯೆಯನ್ನು ಪಡೆಯಲು ಸಹಾಯ ಮಾಡುವ ಮಾಧ್ಯಮವೇ ಭಾಷೆ.

## ಬರವಣಿಗೆ

ಭಾಷೆಗೆ ಎರಡು ರೂಪಗಳುಂಟು. ಮಾತನಾಡುವಾಗ ಕಿವಿಯಿಂದ ಕೇಳಿಸಿಕೊಳ್ಳುತ್ತೇವೆ. ಇದು ಕೇಳಬಹುದಾದ ರೂಪ. ಇದನ್ನು ಶ್ರವಣ ರೂಪ ಎನ್ನುತ್ತೇವೆ. ಇದೇ ಆಡುಭಾಷೆ. ಮಾತಿನ ಮಹತ್ವದ ಧ್ವನಿಗಳಿಗೆ ಲಿಪಿ ಸಂಕೇತ ಕೊಟ್ಟು ಅವುಗಳ ಸಹಾಯದಿಂದ ಭಾಷೆಯನ್ನು ಬರೆದಿಡುತ್ತೇವೆ. ಇದು ನೋಡಬಹುದಾದ ರೂಪ. ಇದನ್ನು ಚಾಕ್ಷುಷ ರೂಪ ಎನ್ನುತ್ತೇವೆ. ಇದೇ ಬರವಣಿಗೆಯ ಭಾಷೆ. ಆಡುಭಾಷೆಯನ್ನು ಬರೆದಿಡಬಹುದಾದರೂ ಅದು ಶಿಷ್ಟಭಾಷೆಯಾಗುವುದಿಲ್ಲ. ಒಂದು ಭಾಷೆಯನ್ನಾಡುವ ಎಲ್ಲ ಜನರಿಗೂ ಅರ್ಥವಾಗುವಂತಹ ಒಂದು ಸಾಮಾನ್ಯ ಭಾಷೆಯನ್ನೇ ಶಿಷ್ಟ ಭಾಷೆ ಎನ್ನುತ್ತೇವೆ. ಈ ಶಿಷ್ಟಭಾಷೆಯನ್ನೇ ಬರವಣಿಗೆಯ ರೂಪದಲ್ಲಿ ಎಲ್ಲೆಡೆ, ಮುಖ್ಯವಾಗಿ ಶಾಲೆ–ಕಾಲೇಜುಗಳಲ್ಲಿ ಬಳಸುತ್ತೇವೆ. ಭಾಷೆಯನ್ನು ವಿವರಿಸುವ ಶಾಸ್ತ್ರವನ್ನು ವ್ಯಾಕರಣವೆಂದೂ, ಈಚಿನ ದಿನಗಳಲ್ಲಿ ಭಾಷಾಶಾಸ್ತ್ರವೆಂದೂ ಕರೆಯುತ್ತೇವೆ.

## ಕನ್ನಡ ವರ್ಣಮಾಲೆ

ರೂಢಿಯಲ್ಲಿರುವ ಒಟ್ಟು ಕನ್ನಡ ಅಕ್ಷರಗಳು – 49

ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು.

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ | |
| ಕ | ಖ | ಗ | ಘ | ಙ | | | | | | | | | | | |
| ಚ | ಛ | ಜ | ಝ | ಞ | | | | | | | | | | | |
| ಟ | ಠ | ಡ | ಢ | ಣ | | | | | | | | | | | |
| ತ | ಥ | ದ | ಧ | ನ | | | | | | | | | | | |
| ಪ | ಫ | ಬ | ಭ | ಮ | | | | | | | | | | | |
| ಯ | ರ | ಲ | ವ | ಶ | ಷ | ಸ | ಹ | ಳ | | | | | | | |



11th_Kannada_Reader_Final_16-07-2018.indd 15 16-07-2018 18:42:52

## ವರ್ಣಮಾಲೆಯ ವಿಭಾಗಗಳು

ಕನ್ನಡ ವರ್ಣಮಾಲೆಯನ್ನು ಸ್ವರಗಳು, ವ್ಯಂಜನಗಳು, ಯೋಗವಾಹಗಳು ಎಂದು ಮೂರು ಭಾಗಗಳಾಗಿ ವಿಭಾಗಿಸಬಹುದು.

## ಸ್ವರಗಳು

ಸ್ವತಂತ್ರವಾಗಿ ಉಚ್ಚಾರ ಮಾಡುವ ಅಕ್ಷರಗಳನ್ನು ಸ್ವರಗಳು ಎನ್ನುತ್ತೇವೆ. ಕನ್ನಡ ವರ್ಣಮಾಲೆಯಲ್ಲಿ 13 ಸ್ವರಗಳಿವೆ. ಅವು :

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

'ಐ'(ಅ+ಯ್) ಮತ್ತು ಔ(ಅ+ವ್) ಧ್ವನಿಯನ್ನು ಸಂಧ್ಯಕ್ಷರಗಳೆಂದೂ ಗುರುತಿಸುತ್ತಾರೆ. ಸ್ವರಗಳಲ್ಲಿ ಹ್ರಸ್ವಸ್ವರ, ದೀರ್ಘಸ್ವರ, ಪ್ಲುತ ಸ್ವರ ಎಂದು ಮೂರು ವಿಧಗಳುಂಟು.

1. ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ಹ್ರಸ್ವ ಸ್ವರ ಎಂದು ಹೆಸರು(ಉದಾಹರಣೆಗೆ, 'ಅ' ಎನ್ನುವ ಒಂದು ಅಕ್ಷರವನ್ನು ಉಚ್ಚರಿಸುವ ಕಾಲಕ್ಕೆ ಒಂದು ಮಾತ್ರಾ ಕಾಲ ಎಂದು ಹೆಸರು). ಕನ್ನಡದಲ್ಲಿ ಆರು ಹ್ರಸ್ವ ಸ್ವರಗಳಿವೆ. ಅವು, ಅ,ಇ,ಉ,ಋ,ಎ,ಒ.
2. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ದೀರ್ಘ ಸ್ವರ ಎಂದು ಹೆಸರು. ಕನ್ನಡದಲ್ಲಿ ಏಳು ದೀರ್ಘ ಸ್ವರಗಳಿವೆ. ಅವು, ಆ, ಈ, ಊ, ಏ, ಐ, ಓ, ಔ.
3. ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸಲಾಗುವ ಸ್ವರಗಳನ್ನು ಪ್ಲುತ ಎನ್ನುತ್ತಾರೆ. ಉದಾಹರಣೆಗೆ, ಅಮ್ಮಾs..., ದೇವರೇs... ಕೊನೆಯ ಸ್ವರವನ್ನು ಎಳೆದು ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸುವುದರಿಂದ ಇವು ಪ್ಲುತ ಎನ್ನಿಸುವುವು.

## ವ್ಯಂಜನಗಳು

ಸ್ವರಗಳ ಸಹಾಯದಿಂದ ಉಚ್ಚಾರ ಮಾಡಲಾಗುವ ಅಕ್ಷರಗಳಿಗೆ ವ್ಯಂಜನಗಳೆಂದು ಹೆಸರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಮುವ್ವತ್ನಾಲ್ಕು ವ್ಯಂಜನಾಕ್ಷರಗಳಿವೆ ಅವು :

ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್
ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

ವ್ಯಂಜನಗಳಲ್ಲಿ ವರ್ಗೀಯ ವ್ಯಂಜನ, ಅವರ್ಗೀಯ ವ್ಯಂಜನ ಎಂದು ಎರಡು ವಿಧಗಳಿವೆ.

## ವರ್ಗೀಯ ವ್ಯಂಜನಗಳು

ಕ್ ನಿಂದ ಮ್ ವರೆಗಿನ 25 ಅಕ್ಷರಗಳನ್ನು ವರ್ಗೀಯ ವ್ಯಂಜನಗಳು ಎನ್ನುವರು. ಇಲ್ಲಿ 5 ವರ್ಗಗಳಿವೆ. ಪ್ರತಿ ವರ್ಗದಲ್ಲಿಯೂ ತಲಾ ಐದೈದು ಅಕ್ಷರಗಳಿವೆ. ಆಯಾ ವರ್ಗದ ಮೊದಲನೇ ಅಕ್ಷರದಿಂದಲೇ ವರ್ಗಗಳನ್ನು



11th_Kannada_Reader_Final_16-07-2018.indd 16 16-07-2018 18:42:52

ಹೆಸರಿಸಲಾಗಿದೆ.

| ವರ್ಗಗಳು | ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ | ಅಕ್ಷರ ಸಂಖ್ಯೆ |
|---|---|---|---|---|---|---|
| ಕವರ್ಗ | ಕ್ | ಖ್ | ಗ್ | ಘ್ | ಙ್ | 5 |
| ಚವರ್ಗ | ಚ್ | ಛ್ | ಜ್ | ಝ್ | ಞ್ | 5 |
| ಟವರ್ಗ | ಟ್ | ಠ್ | ಡ್ | ಢ್ | ಣ್ | 5 |
| ತವರ್ಗ | ತ್ | ಥ್ | ದ್ | ಧ್ | ನ್ | 5 |
| ಪವರ್ಗ | ಪ್ | ಫ್ | ಬ್ | ಭ್ | ಮ್ | 5 |
| | | | | | ಒಟ್ಟು ಸಂಖ್ಯೆ | 25 |

ಅಕ್ಷರಗಳನ್ನು ಉಚ್ಚರಿಸುವಾಗ ಅವುಗಳು ಎಲ್ಲೆಲ್ಲಿ ಹುಟ್ಟುತ್ತವೆ ಎಂಬುದರ ಆಧಾರದ ಮೇಲೆ ವರ್ಗೀಯ ವ್ಯಂಜನಗಳನ್ನು ವಿಭಾಗಿಸಲಾಗಿದೆ. ಅವುಗಳನ್ನು ಗಮನಿಸಿ.

1. ಕ ಖ ಗ ಘ ಙ – ಇವುಗಳು ಕಂಠದಲ್ಲಿ ಹುಟ್ಟುತ್ತವಾದ್ದರಿಂದ ಇವುಗಳು ಕಂಠ್ಯಾಕ್ಷರಗಳು.
2. ಚ ಛ ಜ ಝ ಞ – ಇವುಗಳು ತಾಲುವಿನಲ್ಲಿ ಹುಟ್ಟುತ್ತವೆ. ಹಾಗಾಗಿ ಇವು ತಾಲವ್ಯ ಅಕ್ಷರಗಳು.
3. ಟ ಠ ಡ ಢ ಣ – ಇವುಗಳು ಹುಟ್ಟುವ ಸ್ಥಳ ಮೂರ್ಧ. ಎಂದರೆ ಬಾಯಿಯ ಮೇಲ್ಭಾಗ. ನಾಲಿಗೆಯನ್ನು ಮಡಚಿ ಬಾಯಿಯ ಮೇಲ್ಭಾಗವನ್ನು ಸ್ಪರ್ಶಿಸಿ ಈ ಅಕ್ಷರಗಳನ್ನು ಉಚ್ಚರಿಸಲಾಗುತ್ತದೆ. ಹಾಗಾಗಿ ಇವು ಮೂರ್ಧನ್ಯ ಅಕ್ಷರಗಳು.
4. ತ ಥ ದ ಧ ನ – ಇವುಗಳು ಹುಟ್ಟುವ ಸ್ಥಳ ಹಲ್ಲುಗಳ ಬಳಿ. ಹಾಗಾಗಿ ಇವು ದಂತ್ಯಾಕ್ಷರಗಳು.
5. ಪ ಫ ಬ ಭ ಮ – ಇವುಗಳು ತುಟಿಗಳ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಇವುಗಳನ್ನು ಓಷ್ಠ್ಯ ಅಕ್ಷರಗಳೆಂದು ಕರೆಯಲಾಗುವುದು.

ವರ್ಗೀಯ ವ್ಯಂಜನಗಳಲ್ಲಿ 'ಅಲ್ಪ ಪ್ರಾಣ', 'ಮಹಾಪ್ರಾಣ' ಮತ್ತು 'ಅನುನಾಸಿಕ'ಗಳೆಂದು ಮೂರು ಬಗೆಗಳಿವೆ.

1. ಅಲ್ಪಪ್ರಾಣ : ಕಡಿಮೆ ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.
   ಅವು : ಕ್ ಚ್ ಟ್ ತ್ ಪ್ ಗ್ ಜ್ ಡ್ ದ್ ಬ್
2. ಮಹಾಪ್ರಾಣ : ಹೆಚ್ಚು ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.
   ಅವು : ಖ್ ಛ್ ಠ್ ಥ್ ಫ್ ಘ್ ಝ್ ಢ್ ಧ್ ಭ್
3. ಅನುನಾಸಿಕ : ಮೂಗಿನ ಸಹಾಯದಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.
   ಅವು : ಙ್ ಞ್ ಣ್ ನ್ ಮ್
   ವರ್ಗೀಯ ವ್ಯಂಜನಗಳ ಒಟ್ಟು ಸಂಖ್ಯೆ = 25.

## ಅವರ್ಗೀಯ ವ್ಯಂಜನಗಳು

ಯ್ ನಿಂದ ಳ್ ವರೆಗಿನ ಒಂಭತ್ತು ಅಕ್ಷರಗಳು ಅವರ್ಗೀಯ ವ್ಯಂಜನಗಳು.

ಅವು : ಯ್ ರ್ ಲ್ ವ್ ಶ್ ಷ್ ಸ್ ಹ್ ಳ್.

## ಯೋಗವಾಹಗಳು

ಯಾವುದಾದರೂ ಒಂದು ಅಕ್ಷರ ಸಂಬಂಧದಿಂದಲೇ ಉಚ್ಚರಿಸಲ್ಪಡುವುವು ಯೋಗವಾಹಕಗಳು ಎನಿಸುತ್ತವೆ. ಇವುಗಳಿಗೆ ಸ್ವತಂತ್ರವಾದ ಉಚ್ಚಾರವಿಲ್ಲ. 'ಯೋಗ' ಎಂದರೆ, ಸಂಬಂಧ; 'ವಾಹ' ಎಂದರೆ ಹೊಂದಿದ



11th_Kannada_Reader_Final_16-07-2018.indd 17 16-07-2018 18:42:52

ಎಂದು ಅರ್ಥ.

1. ಅನುಸ್ವಾರ= ಂ.

2. ವಿಸರ್ಗ = ಃ

ಅನುಸ್ವಾರ ಹಾಗೂ ವಿಸರ್ಗಗಳು ಸ್ವರ ಸಂಬಂಧ ಪಡೆದು ಉಚ್ಚಾರಣೆಗೊಳ್ಳುತ್ತವೆ. ಇದರಿಂದ ಅನುಸ್ವಾರ ವಿಸರ್ಗಗಳನ್ನು ಅಕಾರದ ಮುಂದೆ ಬರೆಯುವುದು ವಾಡಿಕೆಯಾಗಿದೆ. ಉದಾಹರಣೆಗೆ ಅಂ, ಅಃ.

| ಕನ್ನಡದ ವರ್ಣಮಾಲೆ | | | | | |
|---|---|---|---|---|---|
| ಸ್ವರಗಳು | | ವ್ಯಂಜನಗಳು | | ಯೋಗವಾಹಗಳು | |
| ಹ್ರಸ್ವಸ್ವರ<br>6 | ದೀರ್ಘಸ್ವರ<br>7 | ವರ್ಗೀಯ<br>25 | ಅವರ್ಗೀಯ<br>9 | ಅನುಸ್ವಾರ<br>1 | ವಿಸರ್ಗ<br>1 |
| ಅ ಇ ಉ<br>ಋ ಎ ಒ | ಆ ಈ ಊ ಏ<br>ಐ ಓ ಔ | ಕವರ್ಗ<br>ಚವರ್ಗ<br>ಟವರ್ಗ<br>ತವರ್ಗ<br>ಪವರ್ಗ | ಯ್ ರ್ ಲ್ ವ್<br>ಶ್ ಷ್ ಸ್ ಹ್<br>ಳ್ | ಂ | ಃ |

| ಒಟ್ಟು ಅಕ್ಷರಗಳು | | |
|---|---|---|
| ಕ್ರಮಸಂಖ್ಯೆ | ವಿಭಾಗ | ಅಕ್ಷರ ಸಂಖ್ಯೆ |
| 1. | ಸ್ವರಗಳು (6+7) | 13 |
| 2. | ವ್ಯಂಜನಗಳು (25+9) | 34 |
| 3. | ಯೋಗವಾಹಗಳು (1+1) | 2 |
| ಕನ್ನಡ ವರ್ಣಮಾಲೆಯ ಒಟ್ಟು ಅಕ್ಷರಗಳು | | 49 |

| ಗುಣಿತಾಕ್ಷರಗಳು | |
|---|---|
| ವ್ಯಂಜನಗಳಿಗೆ ಸ್ವರಗಳು ಸೇರಿದಾಗ ಗುಣಿತಾಕ್ಷರಗಳು ಎನಿಸುವುವು | |
| ಕ್ರಮಸಂಖ್ಯೆ | ವ್ಯಂಜನ + ಸ್ವರ = ಗುಣಿತಾಕ್ಷರ |
| 1 | ಕ್ + ಅ = ಕ |
| 2 | ಕ್ + ಆ = ಕಾ |
| 3 | ಕ್ + ಇ = ಕಿ |
| 4 | ಕ್ + ಈ = ಕೀ |
| 5 | ಕ್ + ಉ = ಕು |
| 6 | ಕ್ + ಊ = ಕೂ |
| 7 | ಕ್ + ಋ = ಕೃ |
| 8 | ಕ್ + ಎ = ಕೆ |
| 9 | ಕ್ + ಏ = ಕೇ |



11th_Kannada_Reader_Final_16-07-2018.indd 18 16-07-2018 18:42:52

| | |
|---|---|
| 10 | ಕ್ + ಐ = ಕೈ |
| 11 | ಕ್ + ಒ = ಕೊ |
| 12 | ಕ್ + ಓ = ಕೋ |
| 13 | ಕ್ + ೌ = ಕೌ |

ವರ್ಣಮಾಲೆಯಲ್ಲಿ ಮೊದಲು ಕ್ ವ್ಯಂಜನಕ್ಕೆ ಸ್ವರಗಳನ್ನು ಸೇರಿಸುವ ಪ್ರಕ್ರಿಯೆಯು ಆರಂಭವಾಗುವುದರಿಂದ ಕಾಗುಣಿತ ಎಂದು ಇದನ್ನು ಕರೆಯುವುದು ರೂಢಿಗೆ ಬಂತು.

ನಾವು ವರ್ಣಮಾಲೆಯಲ್ಲಿ ಕಾಣುವ ವ್ಯಂಜನಾಕ್ಷರಗಳು ಸ್ವರಗಳೊಡನೆ ಕೂಡಿವೆ.

ಉದಾಹರಣೆಗೆ :

ಕ = ಕ್+ಅ ಚ = ಚ್+ಅ

ಖ = ಖ್+ಅ ಛ = ಛ್+ಅ

ಗ = ಗ್+ಅ ಜ = ಜ್+ಅ

ಘ = ಘ್+ಅ ಝ = ಝ್+ಅ

ಙ = ಙ್+ಅ ಞ = ಞ್+ಅ

ಅವರ್ಗೀಯ ವ್ಯಂಜನಗಳೂ ಕೂಡ ಸ್ವರ ಸಹಿತವಾಗಿವೆ :

ಯ=ಯ್+ಅ; ರ=ರ್+ಅ; ಲ=ಲ್+ಅ; ವ=ವ್+ಅ; ಶ=ಶ್+ಅ; ಷ=ಷ್+ಅ; ಸ=ಸ್+ಅ; ಹ=ಹ್+ಅ; ಳ=ಳ್+ಅ.

ಕಾಗುಣಿತ ಮಾಲೆಯಲ್ಲಿ, 25 ವರ್ಗೀಯ ವ್ಯಂಜನಗಳಿಗೂ 9 ಅವರ್ಗೀಯ ವ್ಯಂಜನಗಳಿಗೂ (ಒಟ್ಟು 34 ವ್ಯಂಜನಗಳಿಗೂ) 13 ಸ್ವರಗಳನ್ನು ಸೇರಿಸಿ ಹೊಸ ಅಕ್ಷರಗಳನ್ನು ರೂಪಿಸಿಕೊಳ್ಳುತ್ತೇವೆ.

## ಸಂಯುಕ್ತಾಕ್ಷರಗಳು

ಎರಡು ಅಥವಾ ಹೆಚ್ಚು ಅಕ್ಷರಗಳು ಕಾಲ ವಿಳಂಬವಿಲ್ಲದೆ ಕೂಡಿದಾಗ ಸಂಯುಕ್ತಾಕ್ಷರಗಳೆನಿಸುವುವು. ಉದಾಹರಣೆಗೆ :

ಕನ್ನಡ, ಅಣ್ಣ, ವಸ್ತ್ರ – ಈ ಪದಗಳನ್ನು ನೋಡಿ. ಈ ಅಕ್ಷರಗಳಲ್ಲಿ ವ್ಯಂಜನಗಳು ಸೇರಿರುವುದನ್ನು ಗಮನಿಸಿ.

ನ್ನ = ನ್+ನ್+ಅ

ಣ್ಣ = ಣ್+ಣ್+ಅ

ಸ್ತ್ರ = ಸ್+ತ್+ರ್+ಅ

ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಹಾಗೂ ವಿಜಾತೀಯ ಸಂಯುಕ್ತಾಕ್ಷರ ಎಂದು ಎರಡು ವಿಧ.

## 1. ಸಜಾತೀಯ ಸಂಯುಕ್ತಾಕ್ಷರ

ಒಂದು ವ್ಯಂಜನಾಕ್ಷರಕ್ಕೆ ಅದೇ ವ್ಯಂಜನಾಕ್ಷರ ಸೇರಿ ಆಗುವ ಅಕ್ಷರವು 'ಸಜಾತೀಯ ಸಂಯುಕ್ತಾಕ್ಷರ' ಎನ್ನಿಸುವುದು. ಇದನ್ನು 'ದ್ವಿತ್ವ' ಎಂದೂ ಕರೆಯಲಾಗುವುದು.

ಉದಾಹರಣೆಗೆ :

ಅಕ್ಕ = ಕ್+ಕ್+ಅ



11th_Kannada_Reader_Final_16-07-2018.indd 19 16-07-2018 18:42:52

ಅಜ್ಜ = ಜ್+ಜ್+ಅ

ಹುತ್ತ = ತ್+ತ್+ಅ

ಬಣ್ಣ = ಣ್+ಣ್+ಅ

ಅಯ್ಯ = ಯ್+ಯ್+ಅ

ಅಮ್ಮ = ಮ್+ಮ್+ಅ

## 2. ವಿಜಾತೀಯ ಸಂಯುಕ್ತಾಕ್ಷರ

ಒಂದು ವ್ಯಂಜನಾಕ್ಷರಕ್ಕೆ ಬೇರೆಯ ಒಂದು ಅಥವಾ ಅದಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳು ಸೇರಿ ಆಗುವ ಅಕ್ಷರಗಳು ವಿಜಾತೀಯ ಸಂಯುಕ್ತಾಕ್ಷರಗಳು ಎನ್ನಿಸುವುವು.

ಉದಾಹರಣೆಗೆ :

| | | | |
|---|---|---|---|
| ಅಕ್ಷರ | – | ಕ್+ಷ್+ಅ | = ಕ್ಷ |
| ಭಕ್ತಿ | – | ಕ್+ತ್+ಇ | = ಕ್ತಿ |
| ಸ್ವಾರ್ಥಿ | – | ಸ್+ವ್+ಆ, ರ್+ಥ್+ಇ | = ಸ್ವಾರ್ಥಿ |
| ಶಾಸ್ತ್ರ | – | ಸ್+ತ್+ರ್+ಅ | = ಸ್ತ್ರ |



11th_Kannada_Reader_Final_16-07-2018.indd 20 16-07-2018 18:42:52

ಘಟಕ
ಎರಡು

# ನಾಡು/ಸಮಾಜ:



| | | |
|---|---|---|
| **ಪದ್ಯ :** | ದೇಶಪ್ರೇಮ | – ಪಂಪ, ನಯಸೇನ, ಮಹಲಿಂಗರಂಗ, ಆಂಡಯ್ಯ |
| **ಗದ್ಯ :** | ಕನ್ನಡವನ್ನು ಕಟ್ಟುವ ಕೆಲಸ | – ಹಾ.ಮಾ.ನಾಯಕ |
| **ಉಪಪಠ್ಯ :** | ಗೊಳಬಾರಸ | – ಜನಪದ ಕಥೆ |
| **ವ್ಯಾಕರಣ :** | ನಾಮಪದಗಳು | |



11th_Kannada_Reader_Final_16-07-2018.indd 21 16-07-2018 18:42:53

ಕಾವ್ಯ ಕಣಜ

ಘಟಕ ಎರಡು

# ದೇಶಪ್ರೇಮ

– ಪಂಪ, ನಯಸೇನ, ಮಹಲಿಂಗರಂಗ, ಆಂಡಯ್ಯ




'ಕನ್ನಡಿಗರಿಗೆ ಕನ್ನಡವೇ ಗತಿ; ಅನ್ಯಥಾ ಶರಣಂ ನಾಸ್ತಿ' ಎನ್ನುವ ಮಾತು ಅರ್ಥಪೂರ್ಣವಾಗಿದೆ. ನಾವು ತಾಯಿಯನ್ನು ಹೇಗೋ ಹಾಗೆ ನಮ್ಮ ಭಾಷೆ, ದೇಶವನ್ನೂ ಪ್ರೀತಿಸಬೇಕು. ಇಂತಹ ಅಭಿಮಾನದ ನಿಮಿತ್ತದಿಂದಾಗುವ ಪ್ರೇಮಭಾವವನ್ನು ಹಿಗ್ಗಿಸಿಕೊಂಡು ವಿಶ್ವಪ್ರೇಮಿಯಾಗಿ ಬಾಳಬೇಕು. ಸತ್ಯಂ ಶಿವಂ ಸುಂದರಂ ಎಂಬುದೊಂದು ಆರ್ಷೇಕ್ತಿ. ಮಹಾಕವಿಗಳು ಸೃಷ್ಟಿಯ ಎಲ್ಲೆಡೆಯೂ ಇದನ್ನು ಕಾಣುತ್ತಾರೆ. ಕನ್ನಡದ ಮೂರು ಕವಿಗಳು ಕಂಡುಕೊಂಡ ಕೆಲವೊಂದು ದೇಶಪ್ರೇಮದ ತುಣುಕುಗಳನ್ನು ಇಲ್ಲಿ ಕಾಣುತ್ತೇವೆ.

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟಕ್ಕೊಡಾವ ಬೆ
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್ ॥

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟರೇ
ನಾಗಿಯುಮೇನೋ ತೀರ್ದಪುದೆ ತೀರದೊಡಂ ಮಱೆದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್ ॥

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ ॥

– ಪಂಪ



11th_Kannada_Reader_Final_16-07-2018.indd 22 16-07-2018 18:42:53

ಸಕ್ಕದಮಂ ಪೇೞ್ವೊಡೆ ನೆಱಿಕೆ
ಸಕ್ಕದಮಂ ಪೇೞ್ಗೆ ಶುದ್ಧ ಕನ್ನಡದೊಳ್ ತಂ
ದಿಕ್ಕುವುದೆ ಸಕ್ಕದಮಂ
ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ ॥

– ನಯಸೇನ

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಹ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ? ॥

– ಮಹಲಿಂಗರಂಗ

ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದೆಂ
ಗಲ್ಲದೆ ಮಾವಲ್ಲದೆ ಕೌಂ
ಗಲ್ಲದೆ ಗಿಡಮರಗಳೆಂಬುವಿಲ್ಲಾ ನಾಡೊಳ್ ॥

– ಆಂಡಯ್ಯ



11th_Kannada_Reader_Final_16-07-2018.indd 23 16-07-2018 18:42:53

## ಕವಿ – ಕಾವ್ಯ ವಿಚಾರ

### ಪಂಪ



ಪಂಪನು ಕನ್ನಡದ ಆದಿ ಕವಿ. ಈತನ ಕಾಲ ಕ್ರಿ.ಶ. 941. ವೆಂಗಿಮಂಡಲದಲ್ಲಿನ 'ವೆಂಗಿಪಟು' ಎಂಬ ಅಗ್ರಹಾರದಲ್ಲಿದ್ದನು. ಈತನ ತಂದೆ ಅಭಿರಾಮದೇವರಾಯ; ತಾಯಿ–ಅಬ್ಬಣಬ್ಬೆ. ಈ ಕವಿಗೆ ಜಿನವಲ್ಲಭನೆಂಬ ಸೋದರನಿದ್ದನೆಂದು ಶಾಸನದಿಂದ ತಿಳಿಯುತ್ತದೆ. ಪಂಪನು ಚಾಲುಕ್ಯರ ಎರಡನೇ ಅರಿಕೇಸರಿಯ ಆಸ್ಥಾನ ಕವಿಯೂ ದಂಡನಾಯಕನೂ ಆಗಿದ್ದನು. 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯಂ'(ಪಂಪ ಭಾರತಂ) ಎಂಬುದು ಪಂಪನ ಎರಡು ಕೃತಿಗಳು. 'ಆದಿ ಪುರಾಣ'ದಲ್ಲಿ ಜಿನಧರ್ಮವನ್ನೂ, 'ವಿಕ್ರಮಾರ್ಜುನ ವಿಜಯ'ದಲ್ಲಿ ಲೋಕಧರ್ಮವನ್ನೂ ಬೆಳಗಿದ್ದೇನೆ ಎಂದು ಕವಿ ಹೇಳಿಕೊಂಡಿದ್ದಾನೆ. 'ಕವಿತಾ ಗುಣಾರ್ಣವ', 'ಸಂಸಾರ ಸಾರೋದಯ' ಎಂಬ ಬಿರುದುಗಳೂ ಈ ಕವಿಗಿವೆ. ದೇಸಿಯ ಬೆಡಗು, ಹಿತಮಿತ ವಚನ ರಸಧ್ವನಿಗೆ ತಕ್ಕ ಪದಪ್ರಯೋಗಗಳನ್ನು ಈ ಕವಿಯ ಶೈಲಿಯಲ್ಲಿ ಕಾಣಬಹುದು.

ಪ್ರಸ್ತುತ ಪದ್ಯಗಳನ್ನು 'ವಿಕ್ರಮಾರ್ಜುನ ವಿಜಯ'ದಿಂದ ಆರಿಸಿಕೊಳ್ಳಲಾಗಿದೆ. ಇಲ್ಲಿ ಬನವಾಸಿಯ ರಮಣೀಯತೆ, ಪಾವಿತ್ರ್ಯಗಳನ್ನು ವರ್ಣಿಸುವ ಮೂಲಕ ನಾಡು–ನುಡಿಯ ಮೇಲಿರುವ ತನ್ನ ಅಭಿಮಾನವನ್ನು ಕವಿ ವ್ಯಕ್ತಪಡಿಸಿದ್ದಾನೆ.

### ನಯಸೇನ

ಈತನು ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಧಾರವಾಡ ಜಿಲ್ಲೆಯ ಮುಳುಗುಂದದಲ್ಲಿ ಜೀವಿಸಿದ್ದನು. ಈತನು 'ಧರ್ಮಾಮೃತ' ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ. ಕನ್ನಡದಲ್ಲಿ ಕಾವ್ಯ ರಚನೆಯ ಸಮಯದಲ್ಲಿ ಸಂಸ್ಕೃತವನ್ನು ಸೇರಿಸುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಾನೆ.

### ಮಹಲಿಂಗರಂಗ

ಈತನು ಕ್ರಿ.ಶ.ಸುಮಾರು 17ನೇ ಶತಮಾನದಲ್ಲಿದ್ದ ಕವಿ. ಈತನು 'ಅನುಭವಾಮೃತ' ಎಂಬ ಕೃತಿಯನ್ನು ರಚಿಸಿದ್ದಾನೆ. ಇವನ ನಿಜನಾಮ ಶ್ರೀರಂಗ. ಈತನ ತಂದೆಯ ಹೆಸರು ಮಹಲಿಂಗ. ಈತ ತನ್ನ ಹೆಸರಿನೊಂದಿಗೆ ತನ್ನ ತಂದೆಯ ಹೆಸರನ್ನೂ ಸೇರಿಸಿ ಮಹಲಿಂಗ ರಂಗ ಎಂದು ತನ್ನನ್ನು ಕರೆದುಕೊಂಡಿದ್ದಾನೆ. 'ಅನುಭವಾಮೃತ'ವು ಕನ್ನಡದಿಂದ ಸಂಸ್ಕೃತಕ್ಕೆ ಅನುವಾದಗೊಂದ ಕೃತಿಯಾಗಿದೆ ಎಂಬುದು ಇದರ ವಿಶೇಷತೆಯಾಗಿದೆ.

### ಆಂಡಯ್ಯ

ಆಂಡಯ್ಯನು ಕ್ರಿ.ಶ. ಸುಮಾರು 12ನೇ ಶತಮಾನದಲ್ಲಿ ಕದಂಬರ ದೊರೆ ಕಾಮದೇವನ ಆಶ್ರಯದಲ್ಲಿದ್ದನು. ಇವನು 'ಕಬ್ಬಿಗರ ಕಾವಂ' ಎಂಬ ಚಂಪೂ ಕೃತಿಯನ್ನು ರಚಿಸಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಕಬ್ಬಿಗರ ಕಾವಂ ಒಂದು ವಿಶಿಷ್ಟ ಕೃತಿ. ಸಂಸ್ಕೃತದ ಸಹಾಯವನ್ನು ಪಡೆಯದೆ ಕೇವಲ ತದ್ಭವ ಪದಗಳನ್ನು, ದೇಸಿ ನುಡಿಗಳನ್ನು ಬಳಸಿಕೊಂಡು ಈ ಕೃತಿಯನ್ನು ರಚಿಸಲಾಗಿದೆ.

### ಕಠಿಣ ಪದಗಳ ಅರ್ಥ

ಸೊಗ(ದ್ಭ)–ಸುಖ(ತ್ಸ); ಮಾಮರ–ಮಾವಿನ ಮರ; ತಳ್ತ–ತಳಿತ, ಚಿಗುರಿದ; ಪಾಡು–ಹಾಡು; ಪಳಂಚಲೆ–ಪ್ರತಿಭಟಿಸಿ; ನಂದನವನ–ಹೂದೋಟ; ಚಾಗ(ದ್ಭ)–ತ್ಯಾಗ(ತ್ಸ); ಭೋಗ–ಸುಖ; ಅಕ್ಕರ(ದ್ಭ)–ಅಕ್ಷರ(ತ್ಸ); ಗೇಯ–ಸಂಗೀತ; ಗೊಟ್ಟಿ(ದ್ಭ)–ಗೋಷ್ಠಿ; ಘೃತ–ತುಪ್ಪ; ಆಲಂಪು–



11th_Kannada_Reader_Final_16-07-2018.indd 24 16-07-2018 18:42:54

ಸಂತೋಷ, ಸೊಗಸು; ತೀರ್ದಪುದೆ–ತೀರದಿದ್ದರೆ, ಸಾಧ್ಯವಾಗದಿದ್ದರೆ; ಪುಟ್ಟು–ಹುಟ್ಟು; ತೆಂಕು–ದಕ್ಷಿಣ; ಸಕ್ಕದ–ಸಂಸ್ಕೃತ; ಸೋಂಕು–ಸ್ಪರ್ಷ; ಒಳ್ನುಡಿ–ಸವಿನುಡಿ, ಇಂಪಾದ ನುಡಿ(ಕನ್ನಡದ ನುಡಿ); ಇಂಪು–ಮಧುರ; ಬಿರಿದ–ಅರಳಿದ; ಕೆಂದ–ಸುಖ; ಮಧು–ತುಂಬಿ; ಅಂಕುಸ(ದ್ಪ)–ಅಂಕುಶ(ತ್ಸ).

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯದಲ್ಲಿ ಉತ್ತರಿಸಿ.**

1. ಕವಿಯು ಮರುಜನ್ಮದಲ್ಲಿ ಏನಾಗಿ ಹುಟ್ಟಬೇಕೆಂದು ಬಯಸುತ್ತಾನೆ ?
2. ಕನ್ನಡಿಗರ ವಿಶೇಷ ಗುಣಗಳೇನು ?
3. 'ಆರಂಕುಶವಿಟ್ಟೊಡಂ' ಯಾವ ನಾಡನ್ನು ಕವಿಯು ನೆನಪಿಸಿಕೊಳ್ಳುವನು ?
4. ಕವಿಗೆ ಯಾವುದು ಬನವಾಸಿಯ ನೆನಪನ್ನು ಉಂಟು ಮಾಡುತ್ತದೆ ?
5. ತುಪ್ಪದೊಡನೆ ಯಾವುದನ್ನು ಬೆರೆಸಬಾರದು ?
6. ಸುಲಿದ ಬಾಳೆಯ ಹಣ್ಣಿನಂತಿರುವ ಭಾಷೆ ಯಾವುದು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಪಂಪನ ಬನವಾಸಿಯ ವರ್ಣನೆಯನ್ನು ವಿವರಿಸಿ ?
2. ಪಂಪನ ದೃಷ್ಟಿಯಲ್ಲಿ ಮನುಷ್ಯ ಯಾವುದಕ್ಕೆಲ್ಲಾ ಆಶ್ರಯನಾಗಿರಬೇಕು ?
3. ಕನ್ನಡ ಹಾಗೂ ಸಂಸ್ಕೃತದ ಬಗ್ಗೆ ನಯಸೇನನು ಏನು ಹೇಳುತ್ತಾನೆ ?
4. ಆಂಡಯ್ಯನ ಪ್ರಕಾರ ನಾಡಿನೊಳಗೆ ಏನೆಲ್ಲಾ ಇದೆ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಪಂಪನ ಕವನಗಳಲ್ಲಿ ವ್ಯಕ್ತವಾಗಿರುವ ದೇಶಪ್ರೇಮವನ್ನು ವರ್ಣಿಸಿ
2. ಮಹಲಿಂಗ ರಂಗನು ಕನ್ನಡ ನಾಡು–ಭಾಷೆಯ ಬಗ್ಗೆ ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ?
3. ಕನ್ನಡ ನಾಡಿನ ವಿಸ್ತಾರ, ಪ್ರಾಕೃತಿಕ ಸಂಪತ್ತಿನ ಬಗ್ಗೆ ಕವಿಗಳು ಹೇಗೆ ವರ್ಣಿಸಿದ್ದಾರೆ ?
4. ಕನ್ನಡ ಭಾಷೆ ಹಾಗೂ ಸಾಹಿತ್ಯದ ಬಗ್ಗೆ ಕವಿಗಳಿಗಿರುವ ಅಭಿಮಾನ ಹೇಗೆ ವ್ಯಕ್ತವಾಗಿದೆ ?

**IV. ಸಂದರ್ಭ ಸಹಿತ ಉತ್ತರಿಸಿ.**

1. 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ'
2. 'ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ'
3. 'ಕಳೆದ ಸಿಗುರಿನ ಕಬ್ಬಿನಂದದಿ'
4. 'ದಾಳಿಂಬಮಲ್ಲದೊಪ್ಪುವ ಚೆಂದೆಂಗಲ್ಲದೆ'

## ಭಾಷಾಭ್ಯಾಸ

**1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

ಹಣ್ಣಿನಂದದಿ, ನುಡಿಯಲಿ, ಹಾಲಿನಂದದಿ, ತನ್ನೊಳು, ಮಾವಲ್ಲದೆ..

**2. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.**

ಸಕ್ಕದ, ಕವಿ, ಚಾಗ, ಅಕ್ಕರ, ಗೊಟ್ಟಿ , ಅಂಕುಶ

## ಚಟುವಟಿಕೆ

1. ಪಂಪನು ರಚಿಸಿರುವ 'ಪಂಪಭಾರತ' ಕಾವ್ಯವನ್ನು ಪುಸ್ತಕಾಲಯದಲ್ಲಿ ಸಂಗ್ರಹಿಸಿ ಓದಿರಿ.
2. ಹಳೆಗನ್ನಡ ಕಾವ್ಯಗಳನ್ನು ಓದುವ, ಹಾಡುವ ರೀತಿಯನ್ನು ಅಧ್ಯಾಪಕರಿಂದ ಕೇಳಿ ತಿಳಿದುಕೊಳ್ಳಿರಿ.



11th_Kannada_Reader_Final_16-07-2018.indd 25 16-07-2018 18:42:54

ಘಟಕ ಎರಡು

# ಕನ್ನಡವನ್ನು ಕಟ್ಟುವ ಕೆಲಸ

– ಹಾ.ಮಾ.ನಾಯಕ




**ನಮ್ಮ ಹಿರಿಯರನೇಕರು ಈ ನಾಡು ನುಡಿಗಳನ್ನು ಕಟ್ಟಿ ಬೆಳೆಸಿದ್ದಾರೆ. ಈ ಕಟ್ಟುವ ಕೆಲಸವನ್ನು ಇಂದಿನವರು ಮುಂದುವರೆಸಿಕೊಂಡು ಹೋಗಬೇಕಾಗಿದೆ. ಈ ಕೆಲಸ ಸತತವಾಗಿ ನಡೆಯಬೇಕಾಗಿರುವಂತದ್ದು. ನಮ್ಮ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ಕನ್ನಡ ನಾಡಿನ ಸರ್ವಾಂಗೀಣ ಬೆಳವಣಿಗೆಗಾಗಿ ನಾವೆಲ್ಲರೂ ಸಂಕಲ್ಪ ಬಲದಿಂದ ದುಡಿಯಬೇಕಾಗಿದೆ. ಭಾಷೆ ಬೆಳೆದರೆ ಸಂಸ್ಕೃತಿಯೂ ಬೆಳೆಯುತ್ತದೆ. ಶ್ರೀಮಂತ ಭಾಷೆಯಲ್ಲಿ ಮಾತ್ರವೇ ವಿಚಾರಗಳು ಸ್ಪಂದಿಸಬಲ್ಲವು. ಸಮಾಜದ ಆರೋಗ್ಯ ಪಾಲನೆಯಲ್ಲಿ ಭಾಷೆಯದ್ದು ಮಹತ್ವದ ಪಾಲಿದೆ. ಭಾಷೆಯ ರಕ್ಷಣೆ ಹಾಗೂ ಸಂವರ್ಧನೆ, ಅದರ ಬಳಕೆ ಹಾಗೂ ಪ್ರಚಾರವನ್ನು ಹೆಚ್ಚಿಸುವುದಕ್ಕೆ ಒಟ್ಟು ಸಮಾಜ, ಸರ್ಕಾರಗಳು ಒಂದಾಗಿ ಸೇರಿ ಕಾರ್ಯ ಪ್ರವೃತ್ತವಾಗಬೇಕಾಗುತ್ತವೆ. ಭಾಷೆಗೆ ಪ್ರೋತ್ಸಾಹದ ನೀರೆರೆಯಬೇಕಾಗುತ್ತದೆ. ಅದಕ್ಕೆ ಗಾಳಿ, ಬೆಳಕು ದೊರೆಯುವಂತಹ ವಾತಾವರಣವನ್ನು ಕಲ್ಪಿಸಬೇಕಾಗುತ್ತದೆ. ಪರರ ಆಕ್ರಮಣದಿಂದ ರಕ್ಷಣೆ ಕೊಡಬೇಕಾಗುತ್ತದೆ. ಇವೆಲ್ಲವೂ ಅನ್ವಯವಾಗುವಂತಹ ಪರಿಸ್ಥಿತಿ ಇಂದು ಕನ್ನಡ ಭಾಷೆಗೆ ಇದೆ. ಡಾ.ಹಾ.ಮಾ.ನಾಯಕರು ಕನ್ನಡ ನಾಡು ನುಡಿಗೆ ಅತ್ಯಗತ್ಯವೂ ಕಾರ್ಯಸಾಧ್ಯವೂ ಆಗಿರುವಂತಹ ಸಲಹೆ ಸೂಚನೆಗಳನ್ನು ಪ್ರಸ್ತುತ ಲೇಖನದಲ್ಲಿ ನೀಡಿದ್ದಾರೆ. ಭಾಷೆ ಬೆಳೆಯದೆ ಜನ ಬೆಳೆಯುವುದಿಲ್ಲ, ನಾಡು ಬೆಳೆಯುವುದಿಲ್ಲ, ಸಾಹಿತ್ಯವೂ ಬೆಳೆಯುವುದಿಲ್ಲ. ಭಾಷೆ ಸಂಸ್ಕೃತಿಗಳನ್ನು ಬೆಳೆಸಿಕೊಳ್ಳದ ಜನಾಂಗ ಆಂತರಿಕ ಚೈತನ್ಯವನ್ನು ಕಳೆದುಕೊಳ್ಳುತ್ತದೆ. ಅಂತಹ ಜನಾಂಗದ ಹೊರ ಬದುಕು ಬೆಳೆದರೂ ಒಳ ಬದುಕು ಬರಡಾಗುತ್ತದೆ.**

೧

ಕನ್ನಡ ನನ್ನ ಮೊದಲ ಪ್ರೀತಿ, ಎರಡನೆಯ ಪ್ರೀತಿಯೂ ಅದೇ. ಆದ್ದರಿಂದ ಇಲ್ಲಿ ಸವತಿ ಮಾತ್ಸರ್ಯಕ್ಕೆ ಎಡೆ ಇಲ್ಲ. ಕನ್ನಡದ ಪ್ರೀತಿ ನನಗೆ ಎಳವೆಯಿಂದಲೇ ಬಂದದ್ದು, ಸಹಜವಾಗಿ ಬಂದದ್ದು. ಅದು ಯಾವುದೋ ಸಂದರ್ಭದಿಂದ ಪ್ರೇರಿತವಾದುದಲ್ಲ. ಚಳವಳಿಗಾಗಿ ಹುಟ್ಟಿಕೊಂಡಿದ್ದಲ್ಲ. ಕೀರ್ತಿ ಕಾಮನೆಗಳನ್ನು ಉದ್ದೇಶಿಸಿದ್ದಲ್ಲ. ನನ್ನ ಕನ್ನಡದ ಪ್ರೀತಿ ಮಾಸ್ತಿ, ಕುವೆಂಪು, ತೀ.ನಂ.ಶ್ರೀ. ಅವರ ಪದ್ಯಗಳನ್ನು ಪಠ್ಯ ಪುಸ್ತಕಗಳಲ್ಲಿ ಓದಿದಾಗ ಸ್ಫುರಿಸಿದ್ದು. ಬಿ.ಎಂ.ಶ್ರೀ., ಆಲೂರು, ಮುದುವೀಡರ ಮಾತುಗಳಿಂದ ಕಣ್ಣೊಡೆದದ್ದು. ಕೃಷ್ಣಶಾಸ್ತ್ರಿ, ಅ.ನ.ಕೃ. ಅವರ ವಿಚಾರಗಳಿಂದ ರೂಪಿತವಾದುದು. ಮುಂದೆ ಗಾಂಧಿ, ವಿನೋಬಾ, ಮೊದಲಾದವರ ಚಿಂತನೆಗಳಿಂದ ಹರಳುಗೊಂಡದ್ದು. ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಆಕಸ್ಮಿಕವಾಗಿ ಹೈದ್ರಾಬಾದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ ಕೈಗೆ ಸಿಕ್ಕಿತು. ಅದರ ಒಂದು ಭಾಗವನ್ನು ಓದುತ್ತಲೇ ಕನ್ನಡದ ಕಾರಣಕ್ಕಾಗಿ ನಾನು ನನ್ನನ್ನು ಒಪ್ಪಿಸಿಕೊಂಡು ಬಿಟ್ಟೆ. ಎ.ಆರ್.ಕೃಷ್ಣಶಾಸ್ತ್ರಿಗಳು ಅದರಲ್ಲಿ ಹೀಗೆ ಹೇಳಿದ್ದರು :

"ಏನಾದರೂ ಒಂದು ದುರದೃಷ್ಟದಿಂದ – ಅಂಥ ದುರದೃಷ್ಟ ಬರದಿರಲಿ – ನಮ್ಮ ದೇಶದಲ್ಲಿ ಬೌದ್ಧ ಧರ್ಮ ಖಿಲವಾಗಿ ನಷ್ಟವಾಗಿ ಹೋದಂತೆ ಸಂಸ್ಕೃತಿಯೂ ಆಗಿ ಹೋಗುವುದಾದರೆ ಅದು ಹೊರ



11th_Kannada_Reader_Final_16-07-2018.indd 26 16-07-2018 18:42:54

ದೇಶಗಳಲ್ಲಿ ಬದುಕಿರುತ್ತದೆ, ಬಾಳುತ್ತಿರುತ್ತದೆ. ಆದರೆ ಕನ್ನಡ ? ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ ಈ ಕಡೆ ಬಂಗಾಳ ಕೊಲ್ಲಿ ಇದೆ, ಆ ಕಡೆ ಅರಬ್ಬೀ ಸಮುದ್ರ ಇದೆ. ಗುಡಿಸಿ ಹಾಕಿ ಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ."

ಈ ಮಾತುಗಳನ್ನು ಓದುತ್ತಾ ನನ್ನ ಹದಿಹರೆಯದ ಮನಸ್ಸಿನಲ್ಲಾದ ಖೇದವನ್ನೂ ಭಯವನ್ನೂ ಅಸಹಾಯಕತೆಯನ್ನೂ ಕ್ರೋಧವನ್ನೂ ಈ ಹೊತ್ತೂ ಅನುಭವಿಸುತ್ತಿದ್ದೇನೆ. ಕೃಷ್ಣಶಾಸ್ತ್ರಿಗಳು ಇಲ್ಲಿ ಸಂಸ್ಕೃತವನ್ನಷ್ಟೇ ಕೈ ಮಾಡಿ ತೋರಿಸುವರಾದರೂ ಸಂದರ್ಭವೇ ಕನ್ನಡದ ಎಲ್ಲ ಹುಟ್ಟುಗಳನ್ನೂ ಪ್ರಾತಿನಿಧಿಕವಾಗಿ ಸಂಕೇತಿಸುತ್ತದೆ ಎಂದು ಇಟ್ಟುಕೊಳ್ಳಬಹುದು.

೨

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳು ನಮ್ಮ ದೇಶದ ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿವೆ. ಯಾವ ಯಾವ ಭಾಷೆಗೆ ಯಾವ ಯಾವ ಸ್ಥಾನವಿರಬೇಕೋ ಆ ಮರ್ಯಾದೆಯನ್ನು ನಾವು ಮೀರಬಾರದು. ಕರ್ನಾಟಕದಲ್ಲಿ ಕನ್ನಡವೇ ಪ್ರಥಮ, ಪ್ರಧಾನ, ರಾಜ, ರಾಣಿ, ರಾಜಕುಮಾರ ಎಲ್ಲ! ಮಿಕ್ಕ ಯಾವ ಭಾಷೆಯಾದರೂ ಇಲ್ಲಿ ಸೇವಕರ ಸ್ಥಾನದಲ್ಲಿರಬೇಕು. ಪ್ರತಿಯೊಂದು ಹಿಂದಿಯೇತರ ರಾಜ್ಯದಲ್ಲಿರುವ ಕೇಂದ್ರಾಡಳಿತ ಸಂಸ್ಥೆಗಳು, ಉದ್ಯಮಗಳು, ಕಛೇರಿಗಳು ಆಯಾ ಪ್ರಾದೇಶಿಕ ಭಾಷೆಗಳನ್ನು ಬಳಸದಿರುವುದರಿಂದ ತಮ್ಮಷ್ಟಕ್ಕೇ ದ್ವೀಪಗಳಾಗಿ ನಿಂತಿವೆ. ವಿಮಾನದಲ್ಲಿ ಮೊದಲ ಬಾರಿಗೆ ಪ್ರಯಾಣ ಮಾಡಲು ಬಂದಿದ್ದ ನನ್ನ ಮಿತ್ರರೊಬ್ಬರು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನನ್ನನ್ನು ಕೇಳಿದರು : ' ಇದೇನು ಸಾರ್! ನಾವು ಎಲ್ಲಿದ್ದೇವೆ ? ಇಲ್ಲಿ ಒಂದೂ ಕನ್ನಡ ಅಕ್ಷರವೇ ಕಾಣುವುದಿಲ್ಲವಲ್ಲ!' ನಾನೆಂದೆ : 'ಕಾಣಿಸದೇ ಏನು? ಅಲ್ಲಿ ನೋಡಿ, ಕಕ್ಕಸಿನ ಮೇಲೆ ಕನ್ನಡದಲ್ಲಿ ಗಂಡಸರು, ಹೆಂಗಸರು ಎಂದು ಬರೆದಿದ್ದಾರಲ್ಲ!' ಇದು ಕೇಂದ್ರ ಸರ್ಕಾರ ಕನ್ನಡಕ್ಕೆ ತೋರಿಸುವ ಮರ್ಯಾದೆ! ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡದಲ್ಲಿ ಸೂಚನೆಗಳಿಲ್ಲದಿದ್ದರೆ, ಇನ್ನು ಯಾವ ಕಡೆ ಇರುವುದು ಸಾಧ್ಯ? ವಿಮಾನ ನಿಲ್ದಾಣದ ಎಲ್ಲ ಪ್ರಕಟಣೆಗಳೂ ಪ್ರಾದೇಶಿಕ ಭಾಷೆಗಳಲ್ಲಿರುವುದು ಅಗತ್ಯ. ಇಂಗ್ಲಿಷ್, ಹಿಂದಿ ಬಾರದವರು ಈ ದೇಶದಲ್ಲಿ ವಿಮಾನ ಪ್ರಯಾಣ ಮಾಡಬಾರದೇ? ಬೆಂಗಳೂರು, ಮಂಗಳೂರು, ಬೆಳಗಾವಿ ವಿಮಾನ ನಿಲ್ದಾಣಗಳಿಂದ ಹೊರಡುವ ಮತ್ತು ಅಲ್ಲಿಗೆ ಬರುವ ವಿಮಾನಗಳೊಳಗಿನ ಪ್ರಕಟಣೆಗಳೂ ಕನ್ನಡದಲ್ಲಿರಬೇಕು. ಇದೇನು ಬಹುಖರ್ಚಿನ ಭಾರೀ ದೊಡ್ಡ ಕೆಲಸವಲ್ಲ. ಬಹು ಭಾಷೆಗಳ ಈ ರಾಷ್ಟ್ರದಲ್ಲಿ ನಾವು ಒಡೆಯದೇ ಬಾಳಬೇಕಾದರೆ ಎಲ್ಲ ಬಾಷೆಗಳ ಸಮಾನ ಬಳಕೆ, ಎಲ್ಲ ಭಾಷೆಗಳಲ್ಲಿ ಸಮಾನ ಗೌರವ ಅತ್ಯಗತ್ಯ. ಕೇಂದ್ರ ಸರ್ಕಾರದ ಕಛೇರಿ ಯಾವ ರಾಜ್ಯದಲ್ಲಿರುತ್ತದೋ ಆ ರಾಜ್ಯದ ಭಾಷೆಯನ್ನು ಅದು ಅಲ್ಲಿನ ಜನರೊಂದಿಗೆ ಮತ್ತು ಸರ್ಕಾರದೊಂದಿಗೆ ಬಳಸಬೇಕು. ಆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ನೌಕರರು ಆ ರಾಜ್ಯದ ಭಾಷೆಯನ್ನು ಬಲ್ಲವರಾಗಿರಬೇಕು – ಎಂದು ರಾಜಮನ್ನಾರ್ ಸಮಿತಿಯ ವರದಿ ಹೇಳಿದೆ. ಆದುದರಿಂದ ಈ ಭಾಷೆಯ ಸಮಸ್ಯೆ ಕೇಂದ್ರ – ರಾಜ್ಯಗಳ ಸಂಬಂಧದಲ್ಲಿ ಬಹಳ ಮುಖ್ಯ ವಿಷಯವಾಗಿದೆ.

ರೈಲ್ವೆ, ಅಂಚೆ ಮತ್ತು ತಂತಿ ಇಲಾಖೆಗಳು ಪ್ರಾದೇಶಿಕ ಭಾಷೆಗಳ ಮೇಲೆ ಸಾಕಷ್ಟು ಮಲತಾಯಿ ಧೋರಣೆ ಬೆಳೆಸಿಕೊಂಡಿದೆ. ಕನ್ನಡ ನಾಡಿನ ಸಣ್ಣಪುಟ್ಟ ಊರುಗಳಲ್ಲಿರುವ ರೈಲ್ವೆ ಸ್ಟೇಷನ್‌ಗಳಲ್ಲಿಯೂ ಹಿಂದಿ, ಇಂಗ್ಲಿಷ್‌ಗಳೇ ರಾರಾಜಿಸಿದರೆ ನಾವು ನಮ್ಮ ದೇಶದಲ್ಲಿದ್ದೇವೆಂಬ ಭಾವನೆ ಯಾರಲ್ಲಾದರೂ ಬರುವುದು ಸಾಧ್ಯವೇ? ಲೈಫ್ ಇನ್‌ಷೂರೆನ್ಸ್ ಕಾರ್ಪೋರೇಷನ್ನಿನಂತಹ ಸಂಸ್ಥೆಗಳು, ಬ್ಯಾಂಕುಗಳು ಹೀಗೆ ಕೇಂದ್ರಾಡಳಿತದ ಯಾವ ಸಂಸ್ಥೆಗಳಿಗೆ ಹೋದರೂ ನಾವು ಪರದೇಶಿ ಎಂಬ ಭಾವನೆ ಬರುತ್ತದೆ. ಎಲ್ಲಿಯವರೆಗೆ ಈ ಸಂಸ್ಥೆಗಳಲ್ಲಿ ನಮ್ಮದೇ ಭಾಷೆಗಳ ಬಳಕೆಯಾಗುವುದಿಲ್ಲವೋ ಅಲ್ಲಿಯವರೆಗೂ ಈ



11th_Kannada_Reader_Final_16-07-2018.indd 27 16-07-2018 18:42:54

ಸಂಸ್ಥೆಗಳು ಜನಜೀವನದಿಂದ ಹೊರಗೇ ಉಳಿಯುತ್ತದೆ. ಎಲ್ಲ ಸೂಚನೆಗಳೂ ಎಲ್ಲ ಫಾರಂಗಳೂ ಎಲ್ಲ ಬರವಣಿಗೆಯ ವ್ಯವಹಾರಗಳೂ ಪ್ರಾದೇಶಿಕ ಭಾಷೆ ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿರಬೇಕು. ಇದೇ ತ್ರಿಭಾಷಾ ಸೂತ್ರದ ಬಳಕೆ.

೩

ಯಾವ ಭಾಷೆಯ ಹೇರಿಕೆಯೂ ಸರಿಯಲ್ಲ. ಯಾವುದೇ ಭಾಷೆಯ ಕಲಿಕೆಯನ್ನೂ ತಡೆಯುವುದೂ ಸರಿಯಲ್ಲ. ಆದರೆ ಇದರಲ್ಲಿ ಔಚಿತ್ಯದ ಒಂದು ಪ್ರಶ್ನೆ ಇದೆ. ಒಂದು ಘಟ್ಟದಿಂದ ಮುಂದಕ್ಕೆ ವಿದ್ಯಾರ್ಥಿಗಳು ತಮಗೆ ಬೇಕಾದ ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸ ಮಾಡುವ ಅವಕಾಶಗಳಿರಬೇಕು. ಆ ಘಟ್ಟದವರೆಗೆ ಮಾತೃಭಾಷೆಯ ಹಾಗೂ ಪ್ರಾದೇಶಿಕ ಭಾಷೆಯ ಕಡ್ಡಾಯ ಶಿಕ್ಷಣ ಕೊಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಒಂದು ರಾಜ್ಯದಲ್ಲಿ ನೆಲೆಸಿದವರು ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿಯದೇ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು. ಅದು ಅಂತಹ ಶಿಕ್ಷಣ ಕ್ರಮವನ್ನು ರೂಪಿಸಬೇಕಾಗುತ್ತದೆ. ಸ್ಥಳೀಯ ಭಾಷೆಯನ್ನು ಕಲಿಯದೇ ಹೋದರೆ ಹೊರಗಿನಿಂದ ಬಂದವರು ದ್ವೀಪಜೀವಿಗಳಾಗಿ ಉಳಿಯಬೇಕಾಗುತ್ತದೆ. ಆ ರಾಜ್ಯದ ಜನರೊಂದಿಗೆ ಬೆರೆಯುವುದು ಸಾಧ್ಯವಾಗುವುದಿಲ್ಲ. ಒಂದು ರಾಜ್ಯದ ಎಲ್ಲ ಸೌಲಭ್ಯಗಳನ್ನೂ ಬಳಸಿಕೊಂಡು ಬದುಕುವ ಜನ ಅಲ್ಲಿನ ಭಾಷೆಯನ್ನೂ ಬಳಸುವುದು ಅನಿವಾರ್ಯವಾಗುತ್ತದೆ. ಪ್ರದೇಶ ಭಾಷೆಯ ಕಲಿಕೆ ಮಾತೃಭಾಷಾ ಕಲಿಕೆಗೆ ವಿರೋಧವಾದುದಲ್ಲ. ಅವೆರಡೂ ಪೂರಕವಾದಾಗಲೇ ವಿದ್ಯಾರ್ಥಿಗಳಿಗೆ ತಮ್ಮ ಮನೆ ಮತ್ತು ಆವರಣಗಳ ಪರಿಚಯ ಸ್ಪಷ್ಟವಾಗುತ್ತದೆ.

ಇಂಗ್ಲಿಷ್ ನಮಗೆ ಪ್ರಪಂಚಕ್ಕಿರುವ ಕಿಟಕಿ ಎಂಬುದರಲ್ಲಿ ಸಂದೇಹವಿಲ್ಲ. ಹಾಗೆಂದು ಅದನ್ನು ತಲೆಯ ಮೇಲೆ ಹೇರಿಕೊಳ್ಳಲಾಗುವುದಿಲ್ಲ. ಇಂಗ್ಲಿಷ್‌ನ ದುರ್ದೈವವೆಂದರೆ ಅದರ ನಿಜವಾದ ಸಾರ್ಥಕವಾದ ಬಳಕೆಯಾಗದೆ ಕೇವಲ ಒಂದು ಪ್ರತಿಷ್ಠೆಯ ವಿಷಯವಾಗಿರುವುದು. ಕಾನ್ವೆಂಟ್‌ಗಳ ಶಿಕ್ಷಣದಲ್ಲಿ ಅದು ಗಿಳಿಪಾಠವಾಗಿ ನಮ್ಮ ಬಾಲಕ ಬಾಲಕಿಯರಲ್ಲಿ ಒಂದು ಕೃತಕ ವ್ಯಕ್ತಿತ್ವವನ್ನು ಮೂಡಿಸುತ್ತದೆ. ಈ ಬಗೆಯ ಶಿಕ್ಷಣವೇ ಪರಮ ಶ್ರೇಷ್ಠವಾದುದೆಂದು ನಮ್ಮಲ್ಲಿ ಅನೇಕರು ಭ್ರಮಿಸಿದ್ದಾರೆ. ಇಂಗ್ಲಿಷ್ ನಮಗೆ ಬೇಕು, ನಿಜ. ಆದರೆ ಎಷ್ಟು ಬೇಕು, ಹೇಗೆ ಬೇಕು ಎನ್ನುವುದನ್ನು ಮಾತ್ರ ಯಾರೂ ಯೋಚಿಸಿಲ್ಲ. ಶಾಲಾ ಶಿಕ್ಷಣದ ಕೊನೆಯಲ್ಲಿ ಎಷ್ಟೊಂದು ಜನ ಶಿಕ್ಷಣವನ್ನು ಮುಂದುವರೆಸದೇ ಹೋಗುತ್ತಾರೆಂಬುದನ್ನು ಗಮನಿಸಿದರೆ ಇಂಗ್ಲಿಷ್ ಶಿಕ್ಷಣದ ಅಪವ್ಯಯ ನಮಗೆ ತಿಳಿಯುತ್ತದೆ.

ಇಂಗ್ಲಿಷನ್ನು ಭಾಷೆಯನ್ನಾಗಿ ಕಲಿಸಿ, ವಿಷಯಗಳನ್ನು ನಮ್ಮ ನಮ್ಮ ಭಾಷೆಗಳಲ್ಲಿಯೇ ಕಲಿಸಬೇಕು. ಮಾಧ್ಯಮದ ಪ್ರಶ್ನೆ ನಮ್ಮಲ್ಲಿ ಬಗೆಹರಿಯಲಾರದ ಸಮಸ್ಯೆಯಾಗಿದೆ. ಶಿಕ್ಷಣ ತಜ್ಞರೆನಿಸಿಕೊಂಡವರಿಗೂ ಅನೇಕ ಸಲ ಭಾಷೆಯನ್ನು ಕಲಿಸುವುದು, ಭಾಷೆಯ ಮೂಲಕ ಕಲಿಸುವುದು ಇವುಗಳ ನಡುವಿನ ಅಂತರ ತಿಳಿದಿರುವುದಿಲ್ಲ. ಕನ್ನಡ ಮಾಧ್ಯಮವಾಗಬೇಕು ಎಂದಾದರೆ ಇಂಗ್ಲಿಷನ್ನು ಕಲಿಸಬಾರದು ಎಂದಲ್ಲ. ನಮ್ಮ ಭಾಷೆಯಲ್ಲಿ ಓದಿದ್ದು ಮೈಗೆ ಹತ್ತುವುದು; ಆಧುನಿಕ ವಿಜ್ಞಾನವನ್ನು ಕಲಿಯುವುದು, ಕಲಿಸುವುದು ನಮ್ಮ ಭಾಷೆಗಳ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಒಂದು ಮೂಢ ನಂಬಿಕೆ. ಕನ್ನಡದ ಮೂಲಕ ಕಲಿತೂ ಶ್ರೇಷ್ಠ ವಿಜ್ಞಾನಿಯಾಗಬಹುದು ಎನ್ನುವುದಕ್ಕೆ ನಮ್ಮವರೇ ಆದ ಡಾ.ಸಿ.ಎನ್.ಆರ್.ರಾವ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ. ಜನರಿಗೆ ಇಂಗ್ಲಿಷಿನ ಮೇಲೆ ಮೋಹ ಬೆಳೆಯಲು ಪ್ರತಿಷ್ಠೆಯೇ ಕಾರಣ.

ಪ್ರತಿಯೊಬ್ಬ ತಂದೆ ತಾಯಿಗಳೂ ತಮ್ಮ ಮಕ್ಕಳು ಒಳ್ಳೆಯ ಶಾಲೆಗಳಲ್ಲಿ ಓದಬೇಕು, ಒಳ್ಳೆಯ ಶಿಕ್ಷಣ ಪಡೆಯಬೇಕು, ಅವರ ಭವಿಷ್ಯ ಉಜ್ವಲವಾಗಿರಬೇಕೆಂದು ಆಶಿಸುತ್ತಾರೆ. ಅವರು ನ್ಯಾಯವಾಗಿಯೇ ಅಸಹ್ಯ ಎನ್ನಿಸುವ ನಮ್ಮ ಸಾರ್ವಜನಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಇಷ್ಟಪಡುವುದಿಲ್ಲ. ಎಷ್ಟೋ ಕಡೆಗಳಲ್ಲಿರುವ ಶಾಲೆಗಳನ್ನು ಒಮ್ಮೆ ನೋಡಿ : ಕುಸಿದು ಬೀಳುತ್ತಿರುವ ಕಟ್ಟಡಗಳು, ದೊಡ್ಡಿಯಾದ ತರಗತಿಗಳು, ಅಧ್ಯಾಪಕರಿಲ್ಲದ ತರಗತಿಗಳು, ಪಾಠ ಹೇಳಿ ಕೊಡದ



11th_Kannada_Reader_Final_16-07-2018.indd 28 16-07-2018 18:42:54

ಅನರ್ಹ ಅಧ್ಯಾಪಕರು, ದಿನ ಬೆಳಗಾದರೆ ರಜೆ, ಶಿಸ್ತಿಲ್ಲದ ವ್ಯವಸ್ಥೆ, ಮೂತ್ರದ ವಾಸನೆಯ ಪರಿಸರ – ಇದು ನಮ್ಮ ಬಹಳಷ್ಟು ಶಾಲೆಗಳ ಸ್ಥಿತಿ. ಆದ್ದರಿಂದ ಸಾರ್ವಜನಿಕರು ಅನಿವಾರ್ಯವಾಗಿ ಖಾಸಗಿ ಉದ್ಯಮವಾದ ಇಂಗ್ಲಿಷ್ ಶಾಲೆಗಳ ಕಡೆ ಹೋಗುತ್ತಾರೆ. ಎಲ್ಲಿಯವರೆಗೆ ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿಗತಿಗಳು ಉತ್ತಮವಾಗಿರುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದಲ್ಲಿ ಕನ್ನಡ ಆಕರ್ಷಕವೆನಿಸುವುದಿಲ್ಲ. ಇಂಗ್ಲಿಷ್ ನಮಗೆ ಬೇಕು. ಆದರೆ ನಮ್ಮ ಭಾಷೆಯ ಬದಲಿಗೆ ಅಲ್ಲ. ಇಂಗ್ಲಿಷ್ ಒಂದೇ ಅಲ್ಲ, ಇನ್ನೂ ಹಲವು ಭಾಷೆಗಳು ನಮಗೆ ಬೇಕು. ಒಂದೊಂದು ಭಾಷೆಯೂ ಒಂದೊಂದು ವರ; ಒಂದೊಂದು ಜಗತ್ತು. ಆದರೆ ಯಾವ ಭಾಷೆ ಬೇಕು ಎನ್ನುವುದು ನಮ್ಮ ಅಗತ್ಯವನ್ನು ಅನುಸರಿಸಿದ್ದು. ಹೊರ ಜಗತ್ತಿನ ಸಂಪರ್ಕಕ್ಕಾಗಿ ನಮಗೆ ಇಂಗ್ಲಿಷ್ ಬೇಕು. ಆದರೆ ಅದೇ ಸರ್ವಸ್ವವಾಗಿ ಅಲ್ಲ. ಇಂಗ್ಲಿಷ್ ಮೂಲಕವಾದ ಶಿಕ್ಷಣ ಕುಂಡದಲ್ಲಿ ನೆಟ್ಟ ಗಿಡಗಳಂತೆ. ಬೇರು ನೆಲಕ್ಕಿಳಿಯುವುದಿಲ್ಲ. ಭೂಮಿಯ ಸಾರವನ್ನು ಗ್ರಹಿಸುವುದಿಲ್ಲ. ಹಾಕಿದ ಹಿಡಿ ಗೊಬ್ಬರದಲ್ಲೇ ಅದು ಜೀವಮಾನವನ್ನು ಕಳೆಯಬೇಕು.

೪

ಈಚಿನ ವರ್ಷಗಳಲ್ಲಿ ಕನ್ನಡಿಗರು ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವುದನ್ನು ಅನುಭವಕ್ಕೆ ತೆಗೆದುಕೊಂಡಿದ್ದಾರೆ. ಉದ್ಯೋಗದ ಸಮಸ್ಯೆ ತೀವ್ರತರವಾಗಿದೆ. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರದ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ. ಒಂದು ಹಂತದವರೆಗಿನ ನೇಮಕಾತಿಯಲ್ಲಿ ಸ್ಥಳೀಯರನ್ನೇ ಪರಿಗಣಿಸಬೇಕಾದ ಅಗತ್ಯವಿದ್ದರೂ ಇಲ್ಲಿ ಹಾಗಾಗುತ್ತಿಲ್ಲ. ಆ ಪ್ರದೇಶದ ಜನರಿಗೇ ಉದ್ಯೋಗಾವಕಾಶಗಳು ದೊರೆಯದಿದ್ದರೆ ಅಲ್ಲಿ ಉದ್ಯೋಗಗಳು ಆರಂಭಗೊಳ್ಳುವ ಉದ್ದೇಶವೇನು? ಉಪಯೋಗವೇನು? ರಾಜ್ಯ ಸರ್ಕಾರದ ನೌಕರಿಗಳನ್ನೂ ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನೂ ನೆರೆಹೊರೆಯವರು ಆಕ್ರಮಿಸಿಕೊಂಡು ಬಿಡುತ್ತಾರೆ. ಅಲ್ಲಿಯೂ ಕನ್ನಡಿಗರಿಗೆ ಅವಕಾಶಗಳಿಲ್ಲ. ಇದರಿಂದ ಕನ್ನಡಿಗರ ಉದ್ಯೋಗದ ವಿಷಯದಲ್ಲಿ ಭೀತಿಗೊಂಡಿರುವುದು ಸಹಜ. ಕನ್ನಡಿಗರ ಆತ್ಮಹತ್ಯಾಕಾರಿಯಾದ ಔದಾರ್ಯದ ಧೋರಣೆಯಿಂದ ಈಗಾಗಲೇ ಬೆಂಗಳೂರೂ ಸೇರಿದಂತೆ ಕರ್ನಾಟಕದ ಅನೇಕ ಕಡೆ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಹೆಸರಿನಲ್ಲಿ ಈಚೆಗೆ ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕೆಂಬ ಅಪಸ್ವರವನ್ನೂ ಕೇಳಿದ್ದೇವೆ. ಕನ್ನಡಿಗರು ಕನ್ನಡ ನಾಡಿನಲ್ಲಿಯೇ ತಬ್ಬಲಿಗಳಾದರೆ ಅವರಿಗೆ ಆಶ್ರಯವೆಲ್ಲಿದೆ ? ಕನ್ನಡಿಗರ ಸಂಕಷ್ಟಗಳಿಗೂ ಒಂದು ಮಿತಿಯಿದೆ. ಅವರ ತಾಳ್ಮೆಗೆ ತಪ್ಪು ಅರ್ಥ ಹಚ್ಚಬಾರದು. ಬದುಕು ಭಾಷೆಗಿಂತ ದೊಡ್ಡದು ಎಂದು ಹೇಳುತ್ತಾರೆ. ಆದರೆ ಭಾಷೆಯನ್ನು ಬಿಟ್ಟು ಬದುಕು ಇರುವುದಿಲ್ಲ ಎಂಬುದನ್ನು ನಾವು ಮರೆಯಬಾರದು.

೫

ಎಲ್ಲಿಯವರೆಗೆ ಕನ್ನಡ ನಮ್ಮ ಆಡಳಿತ, ಶಿಕ್ಷಣದಲ್ಲಿ ಪ್ರಥಮವೂ ಪ್ರಧಾನವೂ ಆಗಿರುವುದಿಲ್ಲವೋ, ಎಲ್ಲಿಯವರೆಗೆ ಅದು ಜನಜೀವನವನ್ನು ತುಂಬಿಕೊಳ್ಳುವುದಿಲ್ಲವೋ ಎಲ್ಲಿಯವರೆಗೆ ಕನ್ನಡಿಗರು ಸ್ವಾಭಿಮಾನಿಗಳಾಗುವುದಿಲ್ಲವೋ ಅಲ್ಲಿಯವರೆಗೂ ಕನ್ನಡದ ಸಮಸ್ಯೆಗಳು ಇದ್ದೇ ಇರುತ್ತವೆ. ಸರ್ಕಾರ ಮತ್ತು ಸಾರ್ವಜನಿಕರು ಇಬ್ಬರೂ ಈ ಜವಾಬ್ದಾರಿಯನ್ನು ನಿರ್ವಹಿಸಬೇಕು. ಎಲ್ಲವನ್ನೂ ಸರ್ಕಾರದ ಮೇಲೆ ಹಾಕಿ ನಾವು ಹೊಣೆಯನ್ನು ತಪ್ಪಿಸಿಕೊಳ್ಳುವಂತಿಲ್ಲ.

ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು. ಆಗ ಮಾತ್ರ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಕನ್ನಡ ಕನ್ನಡ ಎನ್ನುವ ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳುವುದು ತೀರ ಅಗತ್ಯ. ಕನ್ನಡ ಹೇಳುವುದಕ್ಕೆ ಮಾತ್ರ ಅಲ್ಲ, ಅನುಸರಿಸುವುದಕ್ಕೂ ಕೂಡ ಎಂದು ಎಷ್ಟು ಜನ ತಿಳಿದಿದ್ದೇವೆ. ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ. ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು ? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ ? ನಮ್ಮ ಲೆಟರ್‌ಹೆಡ್‌ಗಳು ಅಚ್ಚಾಗಿರುವುದು, ನಮ್ಮ ಮನೆಯ ಲಗ್ನ ಪತ್ರಿಕೆಗಳು



11th_Kannada_Reader_Final_16-07-2018.indd 29 16-07-2018 18:42:54

ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ನಮ್ಮ ಬ್ಯಾಂಕುಗಳಿಗೆ ಚೆಕ್ ಬರೆಯುವುದು ಕನ್ನಡದಲ್ಲೇ ? ನಾವು ಬರೆಯುವ ಕಾಗದ ಪತ್ರಗಳಲ್ಲಿ ಎಷ್ಟು ಭಾಗ ಕನ್ನಡ? ಇಂಥ ನೂರಾರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು. ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ನಾವು ಕನ್ನಡವನ್ನು ಕುರಿತು ಮಾತಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದು ಅರ್ಥ. ಕನ್ನಡಿಗರು ಮೊದಲು ಕನ್ನಡದವರಾಗಬೇಕು.

## ಕೃತಿ–ಕರ್ತೃ ಪರಿಚಯ



ಹಾಮಾನಾ ಎಂದೇ ಪ್ರಸಿದ್ಧರಾಗಿರುವ ಡಾ.ಹಾರೋಗದ್ದೆ ಮಾನಪ್ಪ ನಾಯಕ (1931–2001)ರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹಾರೋಗದ್ದೆಯವರು. ಶ್ರೀನಿವಾಸ ನಾಯಕ ರುಕ್ಮಿಣಿಯಮ್ಮ ದಂಪತಿಗಳ ಸುಪುತ್ರರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಇವರು ಕಾರ್ಯ ನಿರ್ವಹಿಸಿದ್ದಾರೆ. ಕನ್ನಡದ ಕಟ್ಟಾಳು ಎಂದೇ ತಮ್ಮನ್ನು ಗುರುತಿಸಿಕೊಂಡಿದ್ದ ಹಾ.ಮಾ.ನಾಯಕರು ತಮ್ಮ ಅಪಾರ ವಿದ್ವತ್ತಿನಿಂದ ದಕ್ಷ ಆಡಳಿತದಿಂದ ಸ್ನೇಹಪರ ಗುಣಪಕ್ಷಪಾತದಿಂದ ಹೆಸರಾಗಿದ್ದರು. ಕನ್ನಡದ ಹಲವು ದಿನಪತ್ರಿಕೆಗಳಲ್ಲಿ ಖ್ಯಾತ ಅಂಕಣಕಾರರೆನಿಸಿದ್ದರು. ತಮ್ಮ 'ಸಂಪ್ರತಿ' ಎನ್ನುವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರವನ್ನೂ ಪಡೆಯುವ ಮೂಲಕ ದೇಶದಲ್ಲೇ ಅಂಕಣ ಬರಹಕ್ಕೆ ಮಾನ್ಯತೆಯನ್ನು ತಂದುಕೊಟ್ಟರು. 1985ರಲ್ಲಿ ಬೀದರಿನಲ್ಲಿ ಐವತ್ತೇಳನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಹಾ.ಮಾ.ನಾಯಕರು ಬಾಳ್ನೋಟಗಳು, ಸಲ್ಲಾಪ, ಸಂಭ್ರಮ, ಸೂಲಂಗಿ, ಸಂಪಣ, ಭಾರತದ ಧರ್ಮ, ರವೀಂದ್ರನಾಥ ಠಾಕೂರ್, ಸಂಗತಿ, ನಮ್ಮ ಮನೆಯ ದೀಪ ಮುಂತಾದ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಹಾ.ಮಾ.ನಾಯಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಐ.ಬಿ.ಎಚ್.ಪ್ರಶಸ್ತಿ, ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಮೊದಲಾದ ಪುರಸ್ಕಾರಗಳು ಸಂದಿವೆ. ಬೀದರ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ಅವರು 'ಕನ್ನಡವನ್ನು ಕಟ್ಟುವ ಕೆಲಸ' ಎನ್ನುವ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದರು. ಕನ್ನಡಕ್ಕೆ ಆಗಬೇಕಾಗಿರುವ ಕಾರ್ಯಸ್ವರೂಪದ ಬಹುಸೂಕ್ಷ್ಮ ಸಂಗತಿಗಳತ್ತ ಹಾಮಾನಾ ಇಲ್ಲಿ ಜನರ ಮತ್ತು ಆಳುವವರ ಗಮನ ಸೆಳೆದಿರುವುದನ್ನು ಮನಗಾಣಬಹುದು. ಅವರು ಚರ್ಚಿಸಿರುವ ಅನೇಕ ಸಂಗತಿಗಳಲ್ಲಿ ಕೆಲವನ್ನು ಇಲ್ಲಿ ಸಂಕಲಿಸಲಾಗಿದೆ.

## ಕಠಿಣ ಪದಗಳ ಅರ್ಥ

ಸ್ಫುರಿಸು–ಮಿಂಚು, ಬುದ್ಧಿಗೆ ಗೋಚರಿಸು; ಖಿಲ–ಪಾಳುಬೀಳು, ಶೂನ್ಯವಾಗು, ನಾಶವಾಗು; ಖೇದ–ದುಃಖ, ಸಂತಾಪ; ಕ್ರೋಧ–ಕೋಪ; ಕುತ್ತು–ಅಪಾಯ; ಪರದೇಶಿ–ಹೊರನಾಡಿನವನು, ದಿಕ್ಕಿಲ್ಲದವನು; ದುರ್ದೈವ–ಕೆಟ್ಟ ಅದೃಷ್ಟ, ದೌರ್ಭಾಗ್ಯ; ಪ್ರತಿಷ್ಠೆ–ಘನತೆ, ಗರ್ವ; ಕೃತಕ–ಸಹಜವಲ್ಲದ; ತೀವ್ರತರ–ಹರಿತವಾದ, ಉಗ್ರವಾದ; ಅಂಗುಲ–ಒಂದು ಇಂಚು, ಬೆರಳು.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಎ.ಆರ್.ಕೃಷ್ಣಶಾಸ್ತ್ರಿಗಳು ಎಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ?
2. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು ?



11th_Kannada_Reader_Final_16-07-2018.indd 30 16-07-2018 18:42:54

3. ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸುತ್ತಿರುವ ಭಾಷೆಗಳಾವುವು ?
4. ಯಾವ ಮರ್ಯಾದೆಯನ್ನು ನಾವು ಮೀರಬಾರದು ?
5. ಸ್ಥಳೀಯ ಭಾಷೆ ಕಲಿಯದ ಅನ್ಯ ಭಾಷಿಕರು ಏನಾಗುತ್ತಾರೆ ?
6. ಯಾವುದು ನಮ್ಮ ಮೈಗೆ ಹತ್ತುವುದು ?
7. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು ?
8. ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ಯಾರು ?
9. ಭಾಷೆ ಯಾವುದಕ್ಕಿಂತ ದೊಡ್ಡದು ?
10. ಕನ್ನಡದ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ನಾವು ಏನು ಮಾಡಬೇಕು ?

**II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಲೇಖಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ ?
2. ಎ.ಆರ್.ಕೃಷ್ಣಶಾಸ್ತ್ರಿಗಳ ಭಾಷಣ ಓದಿ ಲೇಖಕರಲ್ಲಿ ಮೂಡಿದ ಭಾವನೆಗಳಾವುವು?
3. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ?
4. ಕೇಂದ್ರದ ರೈಲ್ವೆ, ಅಂಚೆ ಇಲಾಖೆಗಳು ಯಾವ ಧೋರಣೆ ಬೆಳೆಸಿಕೊಂಡಿವೆ ?
5. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು ?
6. ನಮ್ಮ ಸಾರ್ವಜನಿಕ ಶಾಲೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು ?
7. ಕುಂಡದಲ್ಲಿ ನೆಟ್ಟ ಗಿಡಗಳ ಸ್ಥಿತಿ ಹೇಗಿರುತ್ತದೆ ?
8. ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತವೆ ?
9. ಕನ್ನಡದ ಬಗ್ಗೆ ನಾವು ಯೋಗ್ಯತೆ ಗಳಿಸುವುದು ಯಾವಾಗ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಕನ್ನಡತನ ಇಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ?
2. ಹೊರನಾಡಿನಿಂದ ಬಂದು ಕನ್ನಡ ನಾಡಿನಲ್ಲಿ ನೆಲೆಸಿರುವವರ ಜವಾಬ್ದಾರಿಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?
3. ನಮಗೆ ಬೇಕಾಗಿರುವ ಕನ್ನಡ ಮಾಧ್ಯಮ ಶಿಕ್ಷಣ ಮತ್ತು ಇಂಗ್ಲಿಷ್ ಭಾಷೆಯ ಸಂಬಂಧ ಯಾವ ಸ್ವರೂಪದ್ದಾಗಿರಬೇಕೆಂದು ಲೇಖಕರು ಹೇಳಿದ್ದಾರೆ ?
4. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ ?
5. ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಸ್ಫುರಿಸು, ಸಮುದ್ರ, ಕರ್ತವ್ಯ, ಭೂಮಿ, ತಾಳ್ಮೆ.

**2. ಕೆಳಗಿನ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.**

ಎಡೆ, ಗುಡಿ, ಕಲಿ, ಮರ್ಯಾದೆ, ಕೊನೆ.

**3. ಕೆಳಗಿನ ನುಡಿಗಟ್ಟಗಳ ಅರ್ಥ ಬರೆದು, ಸ್ವಂತ ವಾಕ್ಯಗಳನ್ನು ರಚಿಸಿ.**

ಪರದೇಶಿ, ಮೈಗೆ ಹತ್ತು, ತಲೆ ಮೇಲೆ ಮೆರೆಸು.

**4. ಖಿಲ–ಅಖಿಲ, ವ್ಯಯ–ಅಪವ್ಯಯ, ಸಹ್ಯ–ಅಸಹ್ಯ – ಈ ಪದಗಳ ಅರ್ಥಗಳನ್ನು ವಿವರಿಸಿ.**

## ಚಟುವಟಿಕೆ

1. ಡಾಕ್ಟರ್ ಹಾ.ಮಾ.ನಾಯಕ ಮತ್ತು ಎ.ಆರ್. ಕೃಷ್ಣಶಾಸ್ತ್ರಿಗಳ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣದ ಪೂರ್ಣ ಪಾಠಗಳನ್ನು ಸಂಗ್ರಹಿಸಿ.
2. ಕನ್ನಡವನ್ನು ಸಕಲ ಕ್ಷೇತ್ರಗಳಲ್ಲೂ ಸಮರ್ಥವಾಗಿ ಬಳಸಲು ನಮ್ಮ ಪ್ರಯತ್ನ ಹೇಗಿರಬೇಕೆಂಬ ನಿಮ್ಮ ಅನಿಸಿಕೆಯನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.
3. ಕನ್ನಡನಾಡಿನಲ್ಲಿ ಕನ್ನಡಿಗರೇ ತಬ್ಬಲಿಗಳಾಗುತ್ತಿರುವ ಆತಂಕಕಾರಿ ಬೆಳವಣಿಗೆಯ ಬಗ್ಗೆ ಪತ್ಯದ ಹಿನ್ನೆಲೆಯಲ್ಲಿ ಚರ್ಚೆ ಏರ್ಪಡಿಸಿ.




11th_Kannada_Reader_Final_16-07-2018.indd 31 16-07-2018 18:42:54

ಘಟಕ ಎರಡು

ಉಪಪಠ್ಯ

# ಗೊಳಬಾರಸ

–ಜನಪದ ಕಥೆ (ಸಂಗ್ರಹ : ಚಂದ್ರಶೇಖರ ಕಂಬಾರ)



ಒಂದು ಅಡವಿಯಲ್ಲಿ ಒಬ್ಬ ಋಷಿ ಇದ್ದ. ಅವನ ಆಶ್ರಮದಲ್ಲಿ ನೂರಾರು ಜನ ಶಿಷ್ಯರಿದ್ದರು. ಅದು ಧರ್ಮಕರ್ಮದ ಕಾಲ. ಜನ ಪಾಪಕ್ಕೆ ಹೆದರುತ್ತಿದ್ದರು. ಆದ್ದರಿಂದ ನೆರೆಹೊರೆಯ ಪಟ್ಟಣದವರು ಈ ಋಷಿಗಳಿಗೆಲ್ಲ ಸಾಕಾಗುವಷ್ಟು ಧವಸ ಧಾನ್ಯ ಆಕಳು ಕೊಟ್ಟು ಅವರ ತಪಸ್ಸು ನಿರಾತಂಕವಾಗಿ ಯಾವ ಕಾಳಜಿ ಇಲ್ಲದೇ ಸಾಗುವಂತೆ ವ್ಯವಸ್ಥೆ ಮಾಡಿದ್ದರು. ಭಕ್ತರು ಕೊಟ್ಟ ಆಕಳು ಕಾಯಲಿಕ್ಕೆ ಸಿದ್ಧ ಎಂಬ ಹುಡುಗನಿದ್ದ. ಕೆಲ ವರುಷ ಋಷಿಗಳು ಯಾವ ಅಡಚಣೆ ಇಲ್ಲದೆ ತಪಸ್ಸು ಮಾಡಿದರು. ಮುಂದೆ ಕಲಿಕಾಲ ಬಂತು. ಜನ ಪಾಪಕ್ಕೆ ಹೆದರದಾದರು. ಋಷಿಗಳೆಂದರೆ ಗುರುತು ಹಿಡಿಯದಾದರು. ಹೀಗಾಗಿ ಆಶ್ರಮಕ್ಕೆ ಬರುತ್ತಿದ್ದ ಕಾಣಿಕೆ ನಿಂತು ಹೋಯಿತು. ಋಷಿಗಳು ಆತ್ಮ ಪರಮಾತ್ಮವನ್ನು ಬಿಟ್ಟು ಹೊಟ್ಟೆಗೆ ನಾಳೆಗೆ ಹೇಗೆ, ನಾಡಿದ್ದು ಹೇಗೆಂದು ಎಂದು ಜಪಸರ ಎಣಿಸುವಂತಾಯಿತು. ಆಶ್ರಮದ ಆಕಳು ಕಾಯುವ ಸಿದ್ಧನಿಗೆ ಋಷಿಗಳ ಕಷ್ಟ



11th_Kannada_Reader_Final_16-07-2018.indd 32 16-07-2018 18:42:55

ಗೊತ್ತಾಯಿತು. ಅವನು ಅದಕ್ಕಾಗಿ ಮರುಗುತ್ತಿದ್ದಾಗ ಅವನಿಗೆ ಒಂದು ಉಪಾಯ ಹೊಳೆದು :

'ಗುರುಗಳೇ, ಗುರಗಳೇ! ನಮ್ಮೆಲ್ಲರ ಹೊಟ್ಟೆ ತುಂಬಿ ತುಳುಕುವಂಥಾದ್ದೊಂದು ವಿಚಾರ ಇದೆ. ಹೇಳಲೇ? ಎಂದ.

'ಏನದು ?'

'ನಾನು ಚಿಕ್ಕವನಿದ್ದಾಗ ನಮ್ಮಜ್ಜನ ಮನೆಯಲ್ಲಿದ್ದೆ. ನಮ್ಮಜ್ಜ ಅಮೃತದಂಥ ಒಂದು ಷರಬತ್ ಮಾಡುತ್ತಿದ್ದ. ಅದನ್ನು ಮಾಡಿ ಮಾರಿದರೆ ನಮ್ಮ ಹೊಟ್ಟೆ ತುಂಬುತ್ತದೆ'

'ಹೌದೇ? ಅದನ್ನು ಯಾವ ವಸ್ತುಗಳಿಂದ ಹೇಗೆ ಮಾಡುತ್ತಿದ್ದ ?'

'ಅದನ್ನು ಮಾಡೋದೆಲ್ಲ ನನಗೆ ಗೊತ್ತು. ನಮ್ಮ ಆಶ್ರಮದ ಸುತ್ತ ಅಂಥಾ ಮರ ಬಳ್ಳಿ ಸಾಕಷ್ಟಿವೆ. ಅದರ ತೊಗಟೆ, ಎಲೆ ತಂದು ಭಟ್ಟಿಗೆ ಹಾಕಿದರೆ ಆಯಿತು' ಎಂದ.

ಋಷಿಗಳೆಲ್ಲ ಕೂಡಿ ಈ ವಿಚಾರವನ್ನು ಒಪ್ಪಿದರು. ಸಿದ್ಧ ಆಕಳು ಕಾಯುವುದನ್ನು ಬಿಟ್ಟು ಮಾರನೇ ದಿನದಿಂದಲೇ ಪರಿಶ್ರಮದಿಂದ ಕೆಲವು ಗಿಡಗಳ ತೊಗಟೆ, ಎಲೆ, ಬೇರುಗಳನ್ನು ಹುಡುಕಿ ತಂದು ಕುದಿಸಿ, ಭಟ್ಟಿ ಹಾಕಿದ. ಅದು ರಸ ಬಿಟ್ಟು ಸಿದ್ಧವಾದ ಮೇಲೆ ಅದರ ರುಚಿ ನೋಡಿದ.

'ಗುರುಗಳೇ, ಗೊಳಬಾರಸ ಸಿದ್ಧವಾಗಿದೆ' ಎಂದ.

ಎಲ್ಲಾ ಋಷಿಗಳೂ ಕೂಡಿ ಅದನ್ನು ಸಣ್ಣ ಸಣ್ಣ ಪಾತ್ರೆಗಳಲ್ಲಿ ತುಂಬಿದರು. ಪಟ್ಟಣದಲ್ಲಿ ಮಾರಲುಕೆಲವು ಋಷಿಗಳನ್ನು ಕಳಿಸಿದರು. ಗೊಳಬಾರಸ ಪಟ್ಟಣಗಳಲ್ಲಿ ಬಹಳ ಪ್ರಸಿದ್ಧವಾಯಿತು. ಕಂಡವರ ಬಾಯೊಳಗೆಲ್ಲ ಅದೇ ಹೆಸರು. ಕೆಲವರಂತೂ ಋಷಿಗಳನ್ನು ಮನಸಾರೆ ಕೊಂಡಾಡಿದರು. ಮೊದಮೊದಲು ಶ್ರೀಮಂತರು ಮಾತ್ರ ಅದನ್ನು ಕೊಂಡು ಕುಡಿಯುತ್ತಿದ್ದರೆ – ಈಗ ಬಡವರೂ ಕುಡಿಯತೊಡಗಿದರು. ಹಬ್ಬ ಹರಿದಿನ ಮದುವೆ ಮುಂಜಿಗಳಲ್ಲಿ ಗೊಳಬಾರಸದ ಸೇವನೆ ಅನಿವಾರ್ಯವಾಯಿತು. ಆಶ್ರಮದ ಮೇಲೆ ದುಡ್ಡಿನ ಮಳೆಯೇ ಬೀಳತೊಡಗಿತು. ಹುಲ್ಲಿನ ಜೋಪಡಿಗಳು ದೊಡ್ಡ ದೊಡ್ಡ ಮಹಲುಗಳಾದವು. ಚಂದ ಚಂದ ಹೂವಿನ ತೋಟಗಳಾದವು. ಋಷಿಗಳಿಗೆ ದಿನಾಲೂ ಮೃಷ್ಟಾನ್ನ ಭೋಜನ ಸಿಗತೊಡಗಿತು. ಯಾವ ಕಾಳಜಿಯೂ ಇಲ್ಲದ್ದರಿಂದ ಅವರ ತಪಸ್ಸು ಪ್ರವರ್ಧಮಾನವಾಗತೊಡಗಿತು. ಗೊಳಬಾರಸದ ಭಟ್ಟಿ ಇಳಿಸುವುದಕ್ಕೆಂದು ಒಂದು ದೊಡ್ಡ ಕಟ್ಟಡ ಕಟ್ಟಿದರು. ಸಿದ್ಧನಿಗೆ ಸಹಾಯ ಮಾಡಲಿಕ್ಕೆಂದು ಕೈಗೊಂದು ಆಳು, ಕಾಲಿಗೊಂದು ಆಳು ಕೊಟ್ಟರು. ಆದರೆ ಆ ಭಟ್ಟಿಯ ಹದ ಮಾತ್ರ ಸಿದ್ಧನನ್ನು ಬಿಟ್ಟು ಉಳಿದ ಯಾರಿಗೂ ತಿಳಿಯುವಂತಿರಲಿಲ್ಲ. ಆದ್ದರಿಂದ ಆಶ್ರಮದಲ್ಲಿ ಸಿದ್ಧನ ಮಾನ–ಸನ್ಮಾನಗಳು, ಆದರ–ಗೌರವಗಳು ಹೆಚ್ಚಾದವು. ಪ್ರತಿಯೊಬ್ಬರೂ ಈಗ ಅವನಿಗೆ ಸಿದ್ಧಯ್ಯ ಮಹಾಸ್ವಾಮಿಗಳವರು ಎಂದು ಕರೆಯಲಾರಂಭಿಸಿದರು.

ದಿನಾಲೂ ಸಿದ್ಧಯ್ಯ ಮಹಾಸ್ವಾಮಿಗಳವರು ಭಟ್ಟಿ ಇಳಿಸಿದ ಕೂಡಲೇ ಗೊಳಬಾರಸದ ರುಚಿ ನೋಡುವುದು ವಾಡಿಕೆ. ಹಾಗೆ ನೋಡಿದಾಗಲೆಲ್ಲಾ ಅವರ ತಲೆ ತಿರುಗುತ್ತಿತ್ತು. ಅಸಹ್ಯಕರವಾದ ಮಾತುಗಳು ಬಾಯಿಂದ ಬರುತ್ತಿದ್ದವು. ಒಂದು ದಿನ ಋಷಿಗಳು ಸಾಮೂಹಿಕವಾಗಿ ಆತ್ಮ–ಪರಮಾತ್ಮ ಚರ್ಚೆ ನಡೆಸುತ್ತಿದ್ದರು. ಮಧ್ಯದಲ್ಲಿ ಸಿದ್ಧಯ್ಯ ಸ್ವಾಮಿಗಳು ಬಂದು ಅಶ್ಲೀಲ ಹಾಡುಗಳನ್ನು ಎತ್ತರದ ಧ್ವನಿಯಿಂದ ಹಾಡಲಾರಂಭಿಸಿದರು. ಋಷಿಗಳು ಬಂದು ಅವರನ್ನು ಹಿಡಿದು ಅವರ ಕೋಣೆಗೆ ಸಾಗ ಹಾಕಬೇಕಾದರೆ ಸಾಕುಬೇಕಾಯಿತು. ಮಾರನೇ ದಿನ ಬೆಳಿಗ್ಗೆ ಸಿದ್ಧಯ್ಯನವರು ಗುರುಗಳ ಬಳಿಗೆ ಬಂದು,

'ಗುರುಗಳೇ, ನನಗೆ ಈ ಭಟ್ಟಿ ಇಳಿಸುವ ಕೆಲಸ ಸಾಕಾಗಿದೆ. ಮತ್ತೆ ನನ್ನನ್ನು ಹಸು ಮೇಯಿಸುವ ಕೆಲಸಕ್ಕೆ ಬಿಡಿ. ನೆನ್ನೆ ನಿಮ್ಮ ಸಭೆಯಲ್ಲಿ ನಾನು ಸಿಕ್ಕಸಿಕ್ಕಂತೆ ಒದರಾಡಿದೆ. ಈ ಗೊಳಬಾರಸ ನನ್ನನ್ನು ಅಡ್ಡದಾರಿಗೆಳೆಯುತ್ತಿದೆ. ನಿಮಗೆ ಕೈಮುಗಿಯುತ್ತೇನೆ. ನನಗೆ ಈ ಕೆಲಸ ಸಾಕು ಎಂದ.

'ಹೀಗಾದರೆ ಹೇಗೆ ? ನಿನ್ನಿಂದಾಗಿ ಋಷಿಗಳೆಲ್ಲ ತಪಸ್ಸು ಮಾಡುತ್ತಿದ್ದಾರೆ ? ನೀನೇ ಈ ಕೆಲಸ ಬಿಟ್ಟರೆ ನಮಗಿನ್ನಾರು ದಿಕ್ಕು ?'

'ಬೇರೆ ಯಾರನ್ನಾದರೂ ಈ ಕೆಲಸಕ್ಕೆ ಹಚ್ಚಿರಿ. ಇದೇ ಕೆಲಸ ನಡೆಸಿದರೆ ನಾನು ನರಕಕ್ಕೆ ಹೋಗುವುದು ಖಂಡಿತ'



11th_Kannada_Reader_Final_16-07-2018.indd 33 16-07-2018 18:42:55

'ನರಕದ ಬಗ್ಗೆ ನೀನು ಯಾಕೆ ಹೆದರಬೇಕು ? ಎಷ್ಟೆಲ್ಲಾ ಋಷಿಗಳ ಸಲುವಾಗಿ ನೀನು ದುಡಿಯುತ್ತಿರುವೆ ? ದೇವರಿಗೆ ಇದು ಗೊತ್ತಿಲ್ಲವೇ? ಇನ್ನು ಮುಂದೆ ನೀನು ರುಚಿ ನೋಡಬೇಕಾದಾಗ ಸ್ವಲ್ಪ ಸ್ವಲ್ಪ ನೋಡು ಸಾಕು' ಎಂದರು.

ಮಾರನೇ ದಿನದಿಂದ ಸಿದ್ಧಯ್ಯನವರು ಸ್ವಲ್ಪ ಸ್ವಲ್ಪವೇ ರುಚಿ ನೋಡುತ್ತಿದ್ದರೂ ತಲೆಗೇರುತ್ತಿತ್ತು. ಇನ್ನೊಂದು ದಿನವೂ ಹೀಗೇ ಆಯಿತು. ಎಲ್ಲರೂ ಆತ್ಮ ಪರಮಾತ್ಮ ಎನ್ನುತ್ತಿರುವಾಗ ಸಿದ್ಧಯ್ಯನವರು ಅಸಹ್ಯವಾದ ಹಾಡುಗಳನ್ನು ಹೇಳಿ ಕುಣಿಯತೊಡಗಿದರು. ಋಷಿಗಳು ಅವರನ್ನು ಹಿಡಿದು ಸಾಗ ಹಾಕಿದರು. ಮತ್ತೆ ಮಾರನೇ ದಿನ ಗುರುಗಳ ಕಾಲು ಹಿಡಿದುಕೊಂಡನು.

'ಗುರುಗಳೇ, ಈ ಗೊಳಬಾರಸದಿಂದ ನನ್ನನ್ನು ಕಾಪಾಡಬೇಕು' ಎಂದನು.

'ಇದರ ಸಲುವಾಗಿ ನೀನು ಚಿಂತೆ ಮಾಡಬೇಡ. ಇಷ್ಟು ಋಷಿಗಳ ತಪಸ್ಸಿನ ಫಲವಾಗಿ ನೀನು ಸ್ವಲ್ಪ ರುಚಿ ನೋಡಿದರೂ ತಪ್ಪೇನಿಲ್ಲ' ಎಂದು ಸಮಾಧಾನ ಮಾಡಿದರು.

'ಕಾಲಾನುಸಾರ ಋಷಿಗಳು ಸತ್ತರು. ಸಿದ್ಧಯ್ಯನವರೂ ಸತ್ತರು. ಗುರುಗಳನ್ನೂ ಋಷಿಗಳನ್ನೂ ಯಮದೂತರು ನರಕಕ್ಕೆ ಒಯ್ಯುತ್ತಿರುವಾಗ ಹಾದಿಯಲ್ಲಿ ಕಲ್ಪವೃಕ್ಷದ ಕೆಳಗೆ ಸಿದ್ಧಯ್ಯ ಕೂತಿದ್ದು, ಅಪ್ಸರೆಯರು ಅವನ ಸೇವೆ ಮಾಡುತ್ತಿದ್ದರು. ಗುರುಗಳು ರೇಗಿ 'ಹೀಗೇಕೆ? ಈ ಪಾಪಿಗೆ ಇಂಥಾ ಪದವಿಯೇ? ತಪಸ್ಸು ಮಾಡಿದ ನಮಗೆ ನರಕ, ಯಾಕೆ?' ಎಂದು ಕೇಳಿದರು. ಆಗ ಯಮದೂತರು ಹೇಳಿದರು : 'ನೀವು ತಪಸ್ಸು ತಪಸ್ಸು ಎಂದು ಜಪಿಸಿದರೂ ನಿಮ್ಮ ಮನಸ್ಸೆಲ್ಲಾ ಸಿದ್ಧಯ್ಯನ ಗೊಳಬಾರಸ ಮಾರಿ ಬರುವ ದುಡ್ಡಿನ ಮೇಲೇ ಇತ್ತು. ಸಿದ್ಧಯ್ಯ ಗೊಳಬಾರಸ ತಯಾರಿಸಿದರೂ ಅವನ ಮನಸ್ಸು ಯಾವಾಗಲೂ ನರಕಕ್ಕೆ ಹೆದರುತ್ತಿತ್ತು. ಆದ್ದರಿಂದಲೇ ಈ ಸ್ಥಿತಿ ಎಂದರು. ಋಷಿಗಳು ಹೌದೆಂದು ನರಕಕ್ಕೆ ಹೋದರು.

## ಕೃತಿ–ಕರ್ತೃ ವಿಚಾರ

ಇದೊಂದು ಜನಪದ ಕಥೆಯಾಗಿದ್ದು ಇದನ್ನು ಸಂಗ್ರಹಿಸಿದವರು ಡಾ. ಚಂದ್ರಶೇಖರ ಕಂಬಾರ ಅವರು.

ಚಂದ್ರಶೇಖರ ಕಂಬಾರರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದು ಆನಂತರ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ ಇವರಿಗೆ ಜ್ಞಾನಪೀಠ ಪ್ರಶಸ್ತಿಯೂ ಲಭಿಸಿದೆ. ಕನ್ನಡದ ಹೆಸರಾಂತ ಬರಹಗಾರರಾದ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರು ಕವಿ, ಕಾದಂಬರಿಕಾರ, ನಾಟಕಕಾರ. ಇವರ ನಾಟಕಗಳಾದ ಜೋಕುಮಾರಸ್ವಾಮಿ, ಸಿರಿಸಂಪಿಗೆ ಬಹಳ ಪ್ರಸಿದ್ಧಿ ಪಡೆದಿವೆ. ಜೈಸಿದ ನಾಯಕ, ಸಿಂಗಾರೆವ್ವ ಮತ್ತು ಅರಮನೆ, ಕರಿಮಾಯಿ ಪ್ರಖ್ಯಾತ ಕಾದಂಬರಿಗಳು.

## ಕಠಿಣ ಪದಗಳ ಅರ್ಥ

ನೆರೆಹೊರೆ–ಆಸುಪಾಸು, ಅಕ್ಕಪಕ್ಕದಲ್ಲಿ ವಾಸಿಸುವವರು, ಹತ್ತಿರದಲ್ಲಿರುವವರು; ನಿರಾತಂಕ–ಆತಂಕವಿಲ್ಲದೆ, ಯಾವುದೇ ತೊಂದರೆಯಿಲ್ಲದೆ, ಕೊರತೆಯಿಲ್ಲದೆ; ಅಡಚಣೆ–ಅಡ್ಡಿ, ಕಾಣಿಕೆ–ಭಯಭಕ್ತಿಯಿಂದ ಕೊಡುವ ವಸ್ತು ಅಥವಾ ಹಣದ ಅರ್ಪಣೆ; ಶರಬತ್ತು–ಕುಡಿಯುವ ಪೇಯ; ತೊಗಟೆ–ಮರದ ಸಿಪ್ಪೆ; ಪರಿಶ್ರಮ–ಕಷ್ಟ ಪಟ್ಟು, ಚೆನ್ನಾಗಿದುಡಿದು; ಕೊಂಡಾಡು–ಹೊಗಳು; ಕಾಳಜಿ–ಗೊಡವೆ, ಚಿಂತೆ; ಭಟ್ಟಿಇಳಿಸು–ಕಷಾಯ ತೆಗೆಯುವುದು; ಹಬೆಯ ಮೂಲಕ ಮದ್ಯ ತಯಾರಿಸುವ ವಿಧಾನ; ಪ್ರವರ್ಧಮಾನ–ವೃದ್ಧಿಗೊಳ್ಳುವಿಕೆ; ಅಶ್ಲೀಲ–ಶೀಲರಹಿತವಾದುದು, ಕೆಟ್ಟ; ಅಡ್ಡದಾರಿ–ತಪ್ಪುದಾರಿ; ತಲೆಗೇರು–ಅಮಲಾಗುವುದು, ನಶೆಯೇರುವುದು; ಕಲ್ಪವೃಕ್ಷ–ಬಯಸಿದ್ದನ್ನು ನೀಡುವ ದೇವಲೋಕದ ಒಂದು ಮರ.



11th_Kannada_Reader_Final_16-07-2018.indd 34 16-07-2018 18:42:55

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಜನ ಯಾವುದಕ್ಕೆ ಹೆದರುತ್ತಿದ್ದರು ?
2. ಆಕಳು ಕಾಯುತ್ತಿದ್ದವನ ಹೆಸರೇನು ?
3. ಆಶ್ರಮಕ್ಕೆ ಬರುತ್ತಿದ್ದ ಕಾಣಿಕೆ ಏಕೆ ನಿಂತು ಹೋಯಿತು. ?
4. ಸಿದ್ಧನು ಸಿದ್ಧಪಡಿಸಿದ ರಸದ ಹೆಸರೇನು ?
5. ಸಿದ್ಧಯ್ಯ ಸ್ವಾಮಿಗಳು ಎಲ್ಲಿ ಕುಳಿತಿದ್ದುದನ್ನು ಋಷಿಗಳು ನೋಡಿದರು. ?
6. ಯಮದೂತರು ಋಷಿಗಳನ್ನು ಎಲ್ಲಿಗೆ ಕರೆದುಕೊಂಡು ಹೋದರು ?

**II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಋಷಿಗೆ ನೆರೆಹೊರೆಯ ಪಟ್ಟಣದವರು ಯಾವ ಬಗೆಯ ವ್ಯವಸ್ಥೆ ಮಾಡಿದ್ದರು?
2. ಸಿದ್ಧನು ಯಾವ ಕೆಲಸ ಮಾಡುತ್ತಿದ್ದನು ?
3. ಸಿದ್ಧನಿಗೆ ಹೊಳೆದ ಉಪಾಯ ಯಾವುದು ?
4. ಸಿದ್ಧಯ್ಯಯನ ದಿನಚರಿ ಏನು ? ಅದರಿಂದ ಅವನಿಗೆ ಏನಾಗುತ್ತಿತ್ತು ?
5. ಗುರುಗಳಿಗೂ ಸಿದ್ಧಯ್ಯನಿಗೂ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತಿನಲ್ಲಿ ಬರೆಯಿರಿ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಋಷಿಗಳಿಗೆ ಉಂಟಾದ ಕಷ್ಟವೇನು ?
2. ಸಿದ್ಧಯ್ಯ ಮಹಾಸ್ವಾಮಿಯಾದುದು ಹೇಗೆ ?
3. ಸಿದ್ಧಯ್ಯನಿಗೆ ತನ್ನ ಕೆಲಸದ ಬಗೆಗೆ ಜುಗುಪ್ಸೆ ಬಂದುದು ಏಕೆ ?
4. ಯಮದೂತರು ಒಯ್ಯುವಾಗ ಗುರುಗಳು ರೇಗಿದ್ದೇಕೆ ? ಅದಕ್ಕೆ ಯಮದೂತರ ಉತ್ತರವೇನು ?

## ಚಟುವಟಿಕೆ

1. ನೀವು ಕೇಳಿರುವ ಜನಪದ ಕಥೆಯೊಂದನ್ನು ಬರೆಯಿರಿ.
2. ನಿಮ್ಮೂರಿನ ಹಿರಿಯರಿಂದ ಕೇಳಿ ಜನಪದ ಕಥೆಗಳನ್ನು ಸಂಗ್ರಹಿಸಿರಿ.



11th_Kannada_Reader_Final_16-07-2018.indd 35 16-07-2018 18:42:55

ವ್ಯಾಕರಣ

ಘಟಕ ಎರಡು

# ನಾಮಪದಗಳು

**ಪದ :** ಶಬ್ದದ ಮೂಲ ರೂಪಕ್ಕೆ ಪ್ರಕೃತಿ ಎಂದೂ, ಪ್ರಕೃತಿಯ ಮುಂದೆ ಸೇರುವ ವರ್ಣಗಳಿಗೆ ಪ್ರತ್ಯಯಗಳೆಂದೂ ಹೆಸರು. ಪ್ರಕೃತಿಯೂ ಪ್ರತ್ಯಯವೂ ಸೇರಿದರೆ ಪದವೆನಿಸುತ್ತದೆ.

**ನಾಮಪ್ರಕೃತಿ :** ನಾಮ ಪದದ ಮೂಲ ರೂಪಕ್ಕೆ ನಾಮ ಪ್ರಕೃತಿ ಎಂದು ಹೆಸರು. ಇದನ್ನು ಪ್ರಾತಿಪದಿಕ ಎಂದೂ ಕರೆಯುವರು. ಉದಾಹರಣೆಗೆ,

ನಾಮಪ್ರಕೃತಿ + ವಿಭಕ್ತಿ ಪ್ರತ್ಯಯ = ನಾಮಪದ.

ಮನೆ + ಅ = ಮನೆಯ

**ನಾಮಪದ :** ನಾಮಪ್ರಕೃತಿಗೆ ಪ್ರತ್ಯಯವು ಸೇರಿದಾಗ ಅದು ನಾಮಪದವಾಗುತ್ತದೆ. ನಾಮಪದ ಎಂದರೆ ಒಬ್ಬ ವ್ಯಕ್ತಿಯ ಹೆಸರನ್ನೋ ಒಂದು ಪದಾರ್ಥದ ಹೆಸರನ್ನೋ ಒಂದು ಪ್ರಾಣಿಯ ಹೆಸರನ್ನೋ ಸ್ಥಳದ ಹೆಸರನ್ನೋ ತಿಳಿಸುವ ಶಬ್ದ.

ನಾಮಪದಗಳಲ್ಲಿ ಸಹಜನಾಮಗಳು ಮತ್ತು ಸಾಧಿತ ನಾಮಗಳು ಎಂದು ಮುಖ್ಯವಾಗಿ ಎರಡು ವಿಧಗಳಿವೆ.

## ಸಹಜ ನಾಮಗಳು

1. **ವಸ್ತು ವಾಚಕಗಳು :** ವಸ್ತುವಿನ ಹೆಸರು ಹೇಳುವ ಶಬ್ದಗಳೆಲ್ಲ ವಸ್ತುವಾಚಕ ನಾಮಗಳು. ಇವುಗಳಲ್ಲಿ ಮೂರು ವಿಧ. ರೂಢನಾಮ, ಅಂಕಿತನಾಮ ಹಾಗೂ ಅನ್ವರ್ಥನಾಮ.

**ರೂಢನಾಮ :** ರೂಢಿಯಿಂದ ಬಂದವುಗಳು ರೂಢನಾಮಗಳು. ರೂಢಿಯಿಂದ ಬಂದ ಹೆಸರುಗಳು ಎಂದು ಅರ್ಥ.

ಉದಾಹರಣೆಗೆ: ಗಂಡಸು, ಹೆಂಗಸು, ಪರ್ವತ, ಮರ, ಬೆಟ್ಟ.

**ಅಂಕಿತನಾಮ :** ವ್ಯವಹಾರದ ಅನುಕೂಲಕ್ಕಾಗಿ ಇಟ್ಟುಕೊಂಡ ಹೆಸರುಗಳು ಅಂಕಿತನಾಮಗಳು.

ಉದಾಹರಣೆ: ಬೆಂಗಳೂರು, ಮೈಸೂರು, ರೇಖಾ, ಹಿಮಾಲಯ ಇತ್ಯಾದಿಗಳು.

**ಅನ್ವರ್ಥನಾಮ :** ವಸ್ತುವಿನ ವ್ಯಕ್ತಿಯ ಲಕ್ಷಣಕ್ಕನುಗುಣವಾಗಿ ಬರುವ ಹೆಸರುಗಳು ಅನ್ವರ್ಥನಾಮಗಳು. ಉದಾಹರಣೆ: ವಿದ್ಯಾರ್ಥಿ, ಕುಂಟ, ಕಿವುಡ, ಕಂಡಕ್ಟರ್, ಚಾಲಕ, ಹೆಳವ, ಟೀಚರ್ ಇತ್ಯಾದಿ.

2. **ಗುಣವಾಚಕಗಳು :** ವಸ್ತುಗಳು ಅಥವಾ ವ್ಯಕ್ತಿಯ ಗುಣವನ್ನು ಹೇಳುವ ಶಬ್ದಗಳು ಗುಣವಾಚಕಗಳು. ಉದಾಹರಣೆಗೆ: ಒಳ್ಳೆಯ ಹುಡುಗಿ. ಇಲ್ಲಿ ಒಳ್ಳೆಯ ಎಂಬುದು ವಿಶೇಷವಾಗಿರುವ ಗುಣವಾಚಕ. ಅಂತೆಯೇ, ಕರಿಯ, ಕೆಂಪುಕೋತಿ ಇತ್ಯಾದಿ.

3. **ಸಂಖ್ಯಾವಾಚಕಗಳು :** ಸಂಖ್ಯೆಗಳನ್ನು ತಿಳಿಸುವ ಶಬ್ದಗಳೇ ಸಂಖ್ಯಾವಾಚಕಗಳು. ಉದಾಹರಣೆಗೆ: ಒಂದು, ಹತ್ತು, ನೂರು, ಒಬ್ಬ, ಐವರು. ಇತ್ಯಾದಿ.



11th_Kannada_Reader_Final_16-07-2018.indd 36 16-07-2018 18:42:55

**4. ಪರಿಮಾಣ(ಪ್ರಮಾಣ) ವಾಚಕಗಳು :** ವಸ್ತುಗಳ ಸಾಮಾನ್ಯ ಅಳತೆ ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣ ವಾಚಕಗಳೆಂದು ಹೇಳುವರು.

ಉದಾಹರಣೆ: ಹಲವು, ಕೆಲವು, ಅಷ್ಟು, ಇಷ್ಟು ಇತ್ಯಾದಿ.

**5. ದಿಗ್ವಾಚಕಗಳು :** ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಶಬ್ದಗಳನ್ನೆಲ್ಲ ದಿಗ್ವಾಚಕ ನಾಮಗಳೆಂದು ಕರೆಯುವರು.
ಉದಾಹರಣೆ: ಉತ್ತರ, ದಕ್ಷಿಣ, ಮೂಡಣ, ತೆಂಕಣ, ಕೆಳಗೆ, ಮೇಲೆ ಇತ್ಯಾದಿ.

**6. ಭಾವವಾಚಕಗಳು :** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೇ ಭಾವವಾಚಕಗಳು.
ಉದಾಹರಣೆ: ನೋಟ, ಬಿಳುಪು ಇತ್ಯಾದಿ.

## ಸರ್ವನಾಮಗಳು

ನಾಮಪದಗಳ ಬದಲಾಗಿ ಉಪಯೋಗಿಸುವ ಪದಗಳೇ ಸರ್ವನಾಮಗಳು. ಒಂದು ನಾಮಪದದ ಸ್ಥಾನದಲ್ಲಿ ಬರುವ ಶಬ್ದಕ್ಕೂ ಒಂದು ವಸ್ತುವಿನ ಅಥವಾ ವಿಷಯದ ಹೆಸರು ಹೇಳದೆಯೇ ಅದನ್ನು ಸೂಚಿಸುವ ಶಬ್ದಕ್ಕೂ ಸರ್ವನಾಮವೆಂದು ಹೆಸರು. ಇದೂ ಸಹ ನಾಮಪದದ ಒಂದು ಬಗೆ. ಉದಾಹರಣೆಗೆ, ರಾಮಣ್ಣ ಪೇಟೆಯಿಂದ ಮನೆಗೆ ಬಂದನು. ಅವನು ತುಂಬ ಬಳಲಿದ್ದಂತೆ ತೋರುತ್ತಿತ್ತು. ಹೀಗೆ ನಾಮಪದಗಳಿಗೆ ಬದಲಾಗಿ ಅವನು, ಅವಳು, ನೀನು, ನೀವು, ಅದು, ಅವು, ನಾನು ಮುಂತಾದ ಶಬ್ದಗಳನ್ನು ಬಳಸುತ್ತೇವೆ.

**ಪುರುಷವಾಚಕ ಸರ್ವನಾಮಗಳು**

**ಪ್ರಥಮ ಪುರುಷ :**

ಪುಲ್ಲಿಂಗ : ಅವನು, ಅವರು.

ಸ್ತ್ರೀಲಿಂಗ : ಅವಳು, ಅವರು.

ನಪುಂಸಕ ಲಿಂಗ : ಅದು, ಅವು

**ಮಧ್ಯಮ ಪುರುಷ :**

ನೀನು, ನೀವು.

**ಉತ್ತಮ ಪುರುಷ :**

ನಾನು, ನಾವು.

**ಪ್ರಶ್ನಾರ್ಥಕ ಸರ್ವನಾಮಗಳು :**

ಯಾವುದು, ಏನು, ಯಾವಾಗ, ಯಾವನು, ಏತಕ್ಕೆ, ಹೇಗೆ ಇತ್ಯಾದಿಗಳು.

**ಆತ್ಮಾರ್ಥಕ ಸರ್ವನಾಮಗಳು :**

ತಾನು, ತಾವು, ತನ್ನ ಇತ್ಯಾದಿ.



11th_Kannada_Reader_Final_16-07-2018.indd 37 16-07-2018 18:42:55

ಘಟಕ
ಮೂರು

# ಆಡಳಿತ



**ಪದ್ಯ :** ಗಂಭೀರ ಬೇಕು ರಾಜಗೂ ರಾಜಯೋಗಿಗೂ – ರತ್ನಾಕರವರ್ಣಿ

**ಗದ್ಯ :** ತಮಿಳುನಾಡಿನಲ್ಲಿ ಹೊಯ್ಸಳರು – ಎ.ಎಸ್.ನಟರಾಜ್

**ಉಪಪಠ್ಯ :** ಸಮಾರಂಭಗಳಲ್ಲಿ ಸಂಭ್ರಮ – ಪ್ರೊ.ಪಿ.ಎಸ್ ರಾಮಾನುಜಂ

**ವ್ಯಾಕರಣ :** ಲಿಂಗ–ವಚನ–ವಿಭಕ್ತಿ



11th_Kannada_Reader_Final_16-07-2018.indd 38 16-07-2018 18:42:55

# ಘಟಕ ಮೂರು

# ಗಂಭೀರ ಬೇಕು ರಾಜಗೂ ರಾಜಯೋಗಿಗೂ

– ರತ್ನಾಕರವರ್ಣಿ




ರತ್ನಾಕರವರ್ಣಿ ಕರಾವಳಿ ಕರ್ನಾಟಕದ ಮೇರು ಕವಿ. ದೇಸೀ ಛಂದಸ್ಸಿನಲ್ಲಿಯೇ ಕಾವ್ಯ ಬರೆದ ಮಹಾಕವಿ. ಇವನ 'ಭರತೇಶ ವೈಭವ'ವು ಭೋಗ–ಯೋಗ ಸಮನ್ವಯ ಕಾವ್ಯ. ರತ್ನಾಕರವರ್ಣಿಯ ಕಾವ್ಯ ರಸಿಕತೆ ಅಮೋಘ. ಇವನ ಕಾವ್ಯದಲ್ಲಿ ವರ್ಣನೆ, ಪದಸಂಪತ್ತು, ಸ್ವಚ್ಛಂದವಾಗಿ ಹರಿದಾಡುವ ಛಂದಸ್ಸು ವರ್ಣನಾತೀತ. ಇವನ ದೃಷ್ಟಿಯಲ್ಲಿ ಕಾವ್ಯವೆಂಬುದು ಕಲ್ಪತರು. ಹಿಂದೆ ರಾಜರು ತಮ್ಮ ಒಡ್ಡೋಲಗವನ್ನು ಹೇಗೆ ವೈಭವದಿಂದ ನಡೆಸುತ್ತಿದ್ದರೆಂಬುದನ್ನು ತೋರಿಸಲು ಈ ಭಾಗವನ್ನು ನೀಡಲಾಗಿದೆ.

ಕಬ್ಬಿಗರೋದುಗಬ್ಬವ ಹಾಡುಗಬ್ಬವ
ಕಬ್ಬದೊಳೊರೆವರಿವೆರಡು
ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ
ಕಬ್ಬೆ ಹೇಳಲೇ ಸರಸ್ವತಿಯೇ ॥

ಅಯ್ಯಯ್ಯೋ ಚೆನ್ನಾದುದೆನೆ ಕನ್ನಡಿಗರು
ರಯ್ಯ ಮಂಚಿದಿಯೆನೆ ತೆಲುಗಾ
ಅಯ್ಯಯ್ಯೋ ಎಂಚ ಪೊರ್ಲಾಂಡೆಂದು ತುಳುವರು
ಮೆಯ್ಯುಬ್ಬಿ ಕೇಳಬೇಕಣ್ಣಾ ॥

ಸಕಲ ಲಕ್ಷಣವು ವಸ್ತುಕೆ ವರ್ಣಕಕಿಷ್ಟು
ವಿಕಳವಾದರೂ ದೋಷವಿಲ್ಲ.
ಸಕಲ ಲಕ್ಷಣಕಾಗಿ ಬಿರುಸು ಮಾಡಿದರೆ ಪು
ಸ್ತಕದ ಬದನೆಕಾಯಹುದು ॥



11th_Kannada_Reader_Final_16-07-2018.indd 39 16-07-2018 18:42:56

ಭರತ ಭೂತಳಕೆ ಸಿಂಗಾರವಾದಯೋಧ್ಯಾ
ಪುರದೊಳು ಮೂಲೋಕ ಪೊಗೊಳೆ
ಭರತ ಚಕ್ರೇಶ್ವರ ಸುಖ ಬಾಳುತಿರ್ದನಾ
ಸಿರಿಯನಿನ್ನೇನ ಬಣ್ಣಿಪೆನು ॥

ಭೋಗ ವಿಚಾರವು ಬೇಕು ನೃಪತಿಗಾತ್ಮ
ಯೋಗ ವಿಚಾರವು ಬೇಕು
ರಾಗರಸಿಕನಾಗಬೇಕು ಭಾವಿಸೆ ವೀತ
ರಾಗರಸಿಕನಾಗಬೇಕು ॥

ಕೊಡಬೇಕು ಕೊಡುವಲ್ಲಿ ಪಾತ್ರವರಿಯಬೇಕು
ನುಡಿ ಬೇಕು ಮೌನವೂ ಬೇಕು
ಬಡವರಂತಿರಬೇಕು ಪ್ರಭುವಿನಂತಿರಬೇಕು
ನಡೆಯಿದು ಜಾತಿಕ್ಷತ್ರಿಯರ ॥

ಪ್ರಜೆ ಪರಿವಾರಕ್ಕೆ ಹಿತನಂತೆ ವೈರಿ ಭೂ
ಬುಜರಿಗೆ ಭುಜಗೇಂದ್ರನಂತೆ
ನಿಜಗುರುವಿಗೆ ಭೃತ್ಯನಂತೆ ಧಾರ್ಮಿಕರಿಗೆ
ನಿಜ ಬಂಧುವಾಗಿರಬೇಕು ॥

ಹದಿನಾರನೆಯ ಮನು ಪ್ರಥಮ ಚಕ್ರೇಶ್ವರ
ಸುದತಿ ಜನಕೆ ರಾಜಮದನ
ಚದುರರ ತಲೆವಣಿ ತದ್ಭವ ಮೋಕ್ಷ ಸಂ
ಪದನ ಬಣ್ಣಿಸಲೆನ್ನ ಹವಣೆ ॥

ಆ ವಿಭುವೊಂದಿನವುದಯದೊಳೆದ್ದು
ದೇವತಾರ್ಚನೆಯನು ಮಾಡಿ
ಚಾವಡಿಗೈದಿ ತಾನೋಲಗವಾದೊಂದು
ಶ್ರೀವಿಲಾಸವನೇನೆಂಬೆ ॥



11th_Kannada_Reader_Final_16-07-2018.indd 40 16-07-2018 18:42:56

ತನು ಕಾಂತಿ ತುಂಬಿದ ಸಭೆಯೆಂಬ ಕೊಳದಲ್ಲಿ
ಕನಕ ಸಿಂಹಾಸನವೆಂಬ
ಕನಕಾಂಬುಜದ ಮೇಲಾ ರಾಜಹಂಸನಿ
ದ್ದನು ರಾಜಹಂಸನೆಂಬಂತೆ ॥

ಉದಯಗಿರಿಯ ಮೇಲೆ ಮೆರೆವ ಭಾನುವಿಗೆ ಮ
ತ್ತಿದಿರಾದ ಪ್ರತಿ ಸೂರ್ಯನಂತೆ
ಪದುಳದುತ್ತುಂಗ ಸಿಂಹಾಸನವೇರಿ ದೇ
ಹದ ಕಾಂತಿ ಮೆರೆಯೆ ಮೆರೆದನು ॥

ಗಂಭೀರವೆಂಬುದು ಸರ್ವಗುಣಗಳೆಂಬ
ಅಂಬೋಧಿಯಾದಿಯಾಗಿಹುದು
ಗಂಭೀರಬೇಕು ರಾಜಗೂ ರಾಜಯೋಗಿಗೂ
ಗಂಭೀರ ಕೆಟ್ಟರೇನುಂಟು ॥

ಮಂಡಲಿಕರ ಮೊತ್ತ ರಾಜಕುಮಾರರ
ತಂಡ ಮಂತ್ರಿಗಳ ಕದಂಬ
ಪಂಡಿತರೊಡ್ಡು ಗಾಯಕರ ಸಂತತಿಯೆಡೆ
ಗೊಂಡಿರ್ದುದೋಲಗದೊಳಗೆ ॥

ಮಾವತಿಗಳು ಸಾಣೆಗಳು ಹೇಡಿಗಳು ಸೇನ
ಬೋವರು ಮಂತ್ರಜೀವಿಗಳು
ರಾವುತರೆಕ್ಕಡಿಗರು ನಾಯಕರು ಬಹು
ಸೇವಕರಿರ್ದರಲ್ಲಲ್ಲಿ ॥

ಅಂಬುಜವೆಲ್ಲವು ರವಿಯ ನೋಳ್ಪಂತೆ ನೀ
ಲಾಂಬುಜ ನೋಳ್ಪಂತೆ ಶಶಿಯಾ
ತುಂಬಿದ ಸಭೆಯಲ್ಲಿ ನೃಪನ ನೋಡುತ ಮಿಕ್ಕ
ಹಂಬಲ ಮರೆದುದಲ್ಲಲ್ಲಿ ॥



11th_Kannada_Reader_Final_16-07-2018.indd 41 16-07-2018 18:42:56

## ಕವಿ–ಕಾವ್ಯ ಪರಿಚಯ



ರತ್ನಾಕರವರ್ಣಿಯು 16ನೇ ಶತಮಾನದ ಶ್ರೇಷ್ಠ ಕವಿ, ಜೈನ ಕವಿ. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಇವನ ಹುಟ್ಟೂರು. ಅಪ್ಪಟ ದೇಸೀ ಛಂದಸ್ಸುಗಳಲ್ಲಿ ಒಂದಾದ ಸಾಂಗತ್ಯದಲ್ಲಿ ಇವನು 'ಭರತೇಶ ವೈಭವ' ಎನ್ನುವ ಮಹಾಕಾವ್ಯವನ್ನು ರಚಿಸಿದ್ದಾನೆ. ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕ, ರತ್ನಾಕರಾಧೀಶ್ವರ ಶತಕ ಮೊದಲಾದ ಕೃತಿಗಳನ್ನು ರಚಿಸಿದ್ದಾನೆ. ಕಾರ್ಕಳದ ಅರಸ ಆಚಾರ್ಯ ಭೈರವರಾಯನ ಆಸ್ಥಾನ ಕವಿಯಾಗಿ 'ಶೃಂಗಾರ ಕವಿ' ಎಂಬ ಬಿರುದಾಂಕಿತನಾಗಿದ್ದನು. ಯೋಗಶಾಸ್ತ್ರ, ಕಾವ್ಯಶಾಸ್ತ್ರ ಎರಡರಲ್ಲೂ ಪರಿಣತನಾಗಿದ್ದನು. ಇವನ ಪ್ರಖ್ಯಾತ ಕಾವ್ಯವಾದ ಭರತೇಶ ವೈಭವದಲ್ಲಿ ತ್ರಿಷಷ್ಟಿ ಶಲಾಕಾ ಪುರುಷರಲ್ಲಿ ಒಬ್ಬನಾದ ಭರತ ಚಕ್ರವರ್ತಿಯ ಕಥೆಯನ್ನು ಭೋಗ ವಿಜಯ, ದಿಗ್ವಿಜಯ, ಯೋಗ ವಿಜಯ, ಅರ್ಕಕೀರ್ತಿ ವಿಜಯ, ಮೋಕ್ಷ ವಿಜಯ ಎಂಬ ವಿಜಯಗಳಲ್ಲಿ ಸವಿಸ್ತಾರವಾಗಿ ವಿವರಿಸಿದ್ದಾನೆ.

**ಭರತೇಶ ವೈಭವದ ಮುಖ್ಯ ಸಾರ :** ಮೊದಲನೆಯ ತೀರ್ಥಂಕರನಾದ ವೃಷಭದೇವನ ಮಗನಾದ ಭರತನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟುತ್ತದೆ. ಅದನ್ನು ಮುಂದಿಟ್ಟುಕೊಂಡು ಭರತನು ಭುವನವನ್ನು ಗೆದ್ದು ಪ್ರಥಮ ಚಕ್ರವರ್ತಿಯೆನಿಸಿಕೊಳ್ಳಲು ಬಯಸುತ್ತಾನೆ. ಹಿಂದಿರುಗಿ ಬಂದ ಚಕ್ರರತ್ನ ಪುರ ಪ್ರವೇಶವನ್ನು ಒಪ್ಪುವುದಿಲ್ಲ. ಕಾರಣ ಅವನ ತಮ್ಮ ಬಾಹುಬಲಿ. ಆ ಸಂದರ್ಭದಲ್ಲಿ ಹೋರಾಟವೇ ಕೊನೆಯ ಹಂತವೆಂದಾದಾಗ ಅಸಂಖ್ಯಾತ ಸೈನಿಕರ ಸಾವು ನೋವುಗಳು ಮತ್ತೆ ಸಂಭವಿಸದಿರಲೆಂದು ಭರತ ಬಾಹುಬಲಿಯರಿಬ್ಬರೇ ಹೋರಾಡುವುದೆಂದು ತೀರ್ಮಾನವಾಗುತ್ತದೆ. ಹೋರಾಟದಲ್ಲಿ ಭರತ ಬಾಹುಬಲಿಯೊಂದಿಗೆ ಸೋಲುತ್ತಾನೆ. ನಾಚಿಕೆಯಿಂದ ನೊಂದ ಭರತ ಚಕ್ರರತ್ನವನ್ನೇ ತಮ್ಮನ ಮೇಲೆ ಪ್ರಯೋಗಿಸುತ್ತಾನೆ. ಆದರೆ ಚಕ್ರರತ್ನವೋ ಬಾಹುಬಲಿಯ ಪಾದಕ್ಕೆ ನಮಸ್ಕರಿಸುತ್ತದೆ. ಆದರೂ ಅಣ್ಣನ ನಡವಳಿಕೆಯಿಂದ ವಿವೇಕ ಪಡೆದ ಬಾಹುಬಲಿಯು ಎಲ್ಲಾ ರಾಜ್ಯ ಭೋಗಗಳನ್ನೂ ಅಣ್ಣನಿಗೆ ನೀಡಿ, ತಾನು ತಪಸ್ಸಿಗೆ ಹೊರಡುತ್ತಾನೆ. ಮುಂದೆ ದಿವ್ಯಾತ್ಮನಾಗಿ ವಿಶ್ವಾತ್ಮನಾಗುತ್ತಾನೆ, ವಿಶ್ವಮಾನ್ಯನಾಗುತ್ತಾನೆ.

## ಕಠಿಣ ಪದಗಳ ಅರ್ಥ

ಓದುಗಬ್ಬ–ಪಠಣ ಮಾಡುವ ಕಾವ್ಯ; ಹಾಡುಗಬ್ಬ=ಹಾಡಲು ಸಾಧ್ಯವಾಗುವ ಕಾವ್ಯ; ಮಂಚಿದಿ–ಚೆಂದವಾದುದು; ಎಂಚ=ಹೇಗೆ; ಪೊರ್ಲಾಂಡು–ಚೆಂದವಾಯಿತು; ಸಕಲ–ಎಲ್ಲಾ; ವಸ್ತುಕ–ಕಥಾವಸ್ತು; ವರ್ಣಕ–ವರ್ಣನೆ; ವಿಕಳ=ವಿಳಂಬ, ತೊಂದರೆ; ಬಿರುಸು–ಕಠಿಣ; ಭೂತಳ–ಭೂಮಿ; ಮೂಲೋಕ=ಮೂರುಲೋಕ, ಸ್ವರ್ಗ–ಭೂಮಿ–ಪಾತಾಳ; ಸಿರಿ=ಸಂಪತ್ತು; ಭೂಬುಜ–ರಾಜ; ಭೃತ್ಯ–ಸೇವಕ; ಸುದತಿ–ಸುಂದರಿ; ನಿಜಬಂಧು–ಆತ್ಮೀಯ ಬಂಧು; ಸಂಪದ–ಸಾಧಿಸು, ಗಳಿಸು; ತದ್ಭವ–ಪೂರ್ವಜನ್ಮ; ಹವಣು–ಯೋಜನೆ, ಉಪಾಯ; ವಿಭು–ರಾಜ; ಚಾವಡಿ–ಆಸ್ಥಾನ; ವಿಲಾಸ–ಬೆಡಗು, ಸೌಂದರ್ಯ; ತನು–ದೇಹ; ಕನಕ–ಚಿನ್ನ, ಬಂಗಾರ; ಅಂಬುಜ–ತಾವರೆ, ಕಮಲ; ಗಂಭೀರ–ಗಾಂಭೀರ್ಯ; ಭವ್ಯ–ಗಹನ, ಅಂಬೋಧಿ–ಸಮುದ್ರ; ಭಾನು–ರವಿ, ಸೂರ್ಯ, ಮಂಡಳಿಕರು–ಮಾಂಡಲೀಕರು, ಪ್ರಾಂತ್ಯವನ್ನು ಆಳುವವರು; ಕದಂಬ–ಗುಂಪು, ಸಮೂಹ; ಒಡ್ಡು–ಗುಂಪು, ಸಮೂಹ; ಸಂತತಿ–ಗುಂಪು, ಸಮೂಹ, ಮಕ್ಕಳು, ವಂಶ; ಮಾವತಿ–ಮಾವುತ, ಆನೆಯನ್ನು ನಡೆಸುವವ; ಸಾಣಿಗರು–ಕುದುರೆಯನ್ನು ನಡೆಸುವವ, ರಾವುತ; ಹೇರಿಗರು–ಗೂಢಚಾರರು; ರಾವುತರು–ಕುದುರೆಯ ಮೇಲೆ ಕುಳಿತು ಯುದ್ಧ ಮಾಡುವ ಸೈನಿಕರು; ಉಕ್ಕಡಿಗರು–ಹಕ್ಕಿಗಳನ್ನು ಪಳಗಿಸುವವರು; ಶಶಿ–ಚಂದ್ರ; ನೃಪ–ರಾಜ; ನೀಲಾಂಬುಜ–ನೀಲಿ ಬಣ್ಣದ ತಾವರೆ, ಕನ್ನೈದಿಲೆ, ನೈದಿಲೆ.



11th_Kannada_Reader_Final_16-07-2018.indd 42 16-07-2018 18:42:56

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ**

1. ಭರತೇಶ ವೈಭವ ಕಾವ್ಯವನ್ನು ಬರೆದವರು ಯಾರು ?
2. ಕಾವ್ಯ ಹೇಗಿರಬೇಕು? ಹೇಗಿರಬಾರದು ?
3. ತುಳುವರು ಮೆಯ್ಯುಬ್ಬಿ ಏನು ಹೇಳುವರು ?
4. ಭರತನ ರಾಜಧಾನಿ ಯಾವುದು ?
5. ಕವಿಯು ಯಾರನ್ನು ಬಣ್ಣಿಸಲು ಹವಣಿಸಿದ್ದಾನೆ ?
6. ಓಲಗದಲ್ಲಿ ಯಾರು ಯಾರು ಇದ್ದರು ?
7. ಅಂಬುಜವು ಯಾರನ್ನು ನೋಡುತ್ತದೆ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕಾವ್ಯವು ಯಾವಾಗ ಪುಸ್ತಕದ ಬದನೆಕಾಯಿಯಂತಾಗುವುದೆಂದು ರತ್ನಾಕರವರ್ಣಿಯು ಹೇಳುತ್ತಾನೆ ?
2. ರಾಜನು ಯಾರು ಯಾರಿಗೆ ಹಿತನಾಗಿ ಭುಜಗೇಂದ್ರನಾಗಿ ಭೃತ್ಯನಾಗಿ ನಿಜಬಂಧುವಾಗಿರಬೇಕು ?
3. ಭರತನು ರಾಜಹಂಸನಾಗಿ ಹೇಗೆ ಕಂಗೊಳಿಸಿದನು ?
4. ಗಂಭೀರತೆಯ ಪ್ರಾಮುಖ್ಯತೆಯೇನು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ರತ್ನಾಕರವರ್ಣಿಯು ಕಾವ್ಯಲಕ್ಷಣವು ಹೇಗಿರಬೇಕೆಂದು ವಿವರಿಸಿದ್ದಾನೆ ?
2. ಭರತ ಚಕ್ರವರ್ತಿಯ ಬೆಡಗನ್ನು ಕವಿಯು ಹೇಗೆ ವರ್ಣಿಸಿದ್ದಾನೆ ?
3. ರಾಜ ಲಕ್ಷಣವನ್ನು ರತ್ನಾಕರವರ್ಣಿಯು ಹೇಗೆ ನಿರೂಪಿಸಿದ್ದಾನೆ ?
4. ಓಲಗದಲ್ಲಿ ಭರತನು ಹೇಗೆ ಭವ್ಯವಾಗಿ ತೋರುತ್ತಿದ್ದನು ?
5. ಒಡ್ಡೋಲಗದಲ್ಲಿಯಾರ್ಯಾರುಭಾಗಿಯಾಗಿದ್ದರು? ಅಲ್ಲಿ ಏನಾಯಿತು?

**IV. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

1. 'ಪುಸ್ತಕದ ಬದನೆಕಾಯಹುದು'
2. 'ಬಡವರಂತಿರಬೇಕು ಪ್ರಭುವಿನಂತಿರಬೇಕು'
3. 'ರಾಜಹಂಸನಿದ್ದನು ರಾಜಹಂಸನೆಂಬಂತೆ'
4. 'ಗಂಭೀರ ಬೇಕು ರಾಜಗೂ ರಾಜಯೋಗಿಗೂ'
5. 'ನೀಲಾಂಬುಜ ನೋಳ್ಪಂತೆ'

## ಭಾಷಾಭ್ಯಾಸ

**1. ಕೆಳಗಿನ ಪದಗಳಿಗೆ ತತ್ಸಮ ತದ್ಭವ ಬರೆಯಿರಿ.**

ಕಬ್ಬ, ಲಕ್ಷಣ, ಪುಸ್ತಕ, ಸಿಂಗಾರ, ಸಿರಿ, ಬಣ್ಣನೆ, ರಾಜ, ಹಂಸ, ಸಿಂಹ, ಶಶಿ, ರತ್ನ.

**2. ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಹೇಳೆಲೆ, ದೋಷವಿಲ್ಲ, ದೇವತಾರ್ಚನೆ, ಓಲಗದೊಳಗೆ, ಸಭೆಯಲ್ಲಿ, ಭುಜಗೇಂದ್ರ, ಹಾಡುಗಬ್ಬ, ಕನಕಾಂಬುಜ, ಸಿಂಹಾಸನ.

**3. ವಿಂಗಡಿಸಿ ಬರೆದು ಸಮಾಸವನ್ನು ಹೆಸರಿಸಿ**

ಮೂಲೋಕ, ಚಕ್ರೇಶ್ವರ, ರಾಜಹಂಸ, ಹಾಡುಗಬ್ಬ, ಓದುಗಬ್ಬ, ನೀಲಾಂಬುಜ.

## ಚಟುವಟಿಕೆ

1. ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯವನ್ನು ಪುಸ್ತಕಾಲಯದಲ್ಲಿ ಓದಿ ಕಾವ್ಯ ರಸವನ್ನು ಅನುಭವಿಸಿರಿ.
2. ದಕ್ಷಿಣ ಕನ್ನಡದ ಮೂಡುಬಿದಿರೆಗೆ ಹೋಗಿ ಸಾವಿರ ಕಂಬದ ಬಸದಿ ಹಾಗೂ ರತ್ನಾಕರವರ್ಣಿಯು ಕಾವ್ಯವನ್ನು ಬರೆದಿರುವ ಸ್ಥಳವನ್ನು ನೋಡಿರಿ.



11th_Kannada_Reader_Final_16-07-2018.indd 43 16-07-2018 18:42:56

ಗದ್ಯ ವಿಹಾರ

ಘಟಕ ಮೂರು

# ತಮಿಳುನಾಡಿನಲ್ಲಿ ಹೊಯ್ಸಳರು

– ಎ.ಎಸ್.ನಟರಾಜ್



'ಹೊಯ್ಸಳರ ರಾಜನಾದ ವೀರಸೋಮೇಶ್ವರನು( ಕ್ರಿ.ಶ.1235ರಲ್ಲಿ) ತಮಿಳುನಾಡಿನ ಕಣ್ಣಾನೂರನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ತನ್ನ ಪೂರ್ವಿಕರು ಗೆದ್ದಿದ್ದ ತಮಿಳು ಪ್ರಾಂತ್ಯವನ್ನು ಆಳುತ್ತಿದ್ದನು' ಎಂದು ಚರಿತ್ರೆಯಲ್ಲಿ ಓದಿದ ನಾನು ಈ ಕಣ್ಣಾನೂರು ಎಲ್ಲಿದೆ, ಕನ್ನಡಿಗರು ಆಳಿದ ಈ ಊರು ಹೇಗಿರಬಹುದು, ಅಲ್ಲಿ ಈಗ ಹೊಯ್ಸಳರು ಆಳಿದ ಬಗ್ಗೆ ಏನಾದರೂ ಕುರುಹುಗಳು ದೊರೆಯಬಹುದೇ ಎಂದು ಯೋಚಿಸಿ, ಅಲ್ಲಿಗೆ ಹೋಗಿ ಪ್ರತ್ಯಕ್ಷ ಪ್ರಮಾಣ ಹುಡುಕಲು ಮನಸ್ಸು ಮಾಡಿದೆ.

ಈ ಕಣ್ಣಾನೂರು ಎಲ್ಲಿದೆ ? ಕೇರಳದ ಕಣ್ಣಾನೂರು ಎಲ್ಲರಿಗೂ ಪರಿಚಿತ. ಆದರೆ ತಮಿಳುನಾಡಿನ ಕಣ್ಣಾನೂರು ? ನಾನು ಪ್ರಶ್ನಿಸಿದ ಅನೇಕ ತಮಿಳು ಸ್ನೇಹಿತರಿಗೆ ಅದು ಗೊತ್ತಿರಲಿಲ್ಲ. ನಾನು ಮತ್ತೆ ಚರಿತ್ರೆಯ ಪುಟ ತಿರುವಿ ಹಾಕಬೇಕಾಯಿತು. ಕಣ್ಣಾನೂರು ಶ್ರೀರಂಗಂನಿಂದ 15 ಕಿ.ಮೀ. ದೂರದಲ್ಲಿದೆ ಎಂದು ತಿಳಿದು ಬಂತು. ಶ್ರೀರಂಗಂ ಶ್ರೀರಂಗನಾಥ ಸ್ವಾಮಿಯ ದೇವಸ್ಥಾನವಿರುವ ಪಟ್ಟಣ. ಕಾವೇರಿ ನದಿ ಕವಲೊಡೆದು ದ್ವೀಪವಾಗಿ ಪ್ರಸಿದ್ಧಿ ಪಡೆದು ಶ್ರೀ ವೈಷ್ಣವರಿಗೆ ಪ್ರಿಯವಾಗಿರುವ ಪೂಜ್ಯ ಸ್ಥಳ. ಹಾಗಾದರೆ ಕಣ್ಣಾನೂರನ್ನು ನೋಡಬೇಕಾದರೆ ನನ್ನ ಅಯ್ಯಂಗಾರ್ ಸ್ನೇಹಿತರನ್ನು ವಿಚಾರಿಸಿದರೆ ತಿಳಿಯಬಹುದೆಂದು ಪ್ರಯತ್ನಪಟ್ಟೆ. ಆದರೆ ನನಗೆ ಇಲ್ಲೂ ನಿರಾಸೆಯೇ ಕಾದಿತ್ತು. ಯಾರಿಗೂ ಕಣ್ಣಾನೂರಿನ ಬಗ್ಗೆ ಅರಿವಿರಲಿಲ್ಲ. ಹೇಗಾದರಾಗಲಿ ಶ್ರೀರಂಗಕ್ಕೆ ಹೋಗಿ ಅಲ್ಲಿಯೇ ವಿಚಾರಿಸಿ ಮುಂದುವರೆಯೋಣವೆಂದು ಯೋಚಿಸುತ್ತಿರುವಾಗ ನನ್ನ ತಮಿಳು ಸ್ನೇಹಿತನೊಬ್ಬ ಒಂದು ಹೊಸ ವಿಷಯ ನಿರೂಪಿಸಿದ; ಕಣ್ಣಾನೂರು



11th_Kannada_Reader_Final_16-07-2018.indd 44 16-07-2018 18:42:57

ಶ್ರೀರಂಗದ ಹತ್ತಿರವಿರುವ ಸಮಯಪುರಂ ಎಂಬ ಊರಿನ ಪಕ್ಕದಲ್ಲೇ ಇದೆ ಎಂದು. ಸಮಯಪುರಂ ಮಾರಿಯಮ್ಮನ ದೇವಸ್ಥಾನಕ್ಕೆ ಬಹಳ ಪ್ರಸಿದ್ಧ. ತಮಿಳುನಾಡಿನ ಮೂಲೆಮೂಲೆಯಿಂದ ಭಕ್ತರು ಬರುತ್ತಾರೆ. ತಿರುಪತಿಯಷ್ಟೇ ನೂಕುನುಗ್ಗಲು.

'ಅಲ್ಲಿ ಹೊಯ್ಸಳೇಶ್ವರ ದೇವಸ್ಥಾನವಿದೆಯೆಂದು ನಾನು ಓದಿದ್ದೇನೆ. ನಿಮಗೆ ಏನಾದರೂ ಅದರ ಬಗ್ಗೆ ತಿಳಿದಿದೆಯೇ?' ಎಂದು ಕೇಳಿದೆ.

'ತಮಿಳುನಾಡಿನಲ್ಲಿ ಹೊಯ್ಸಳರು! ನಿಮಗೆ ತಲೆ ಕೆಟ್ಟಿರಬೇಕು. ಬೇಲೂರು ಹಳೇಬೀಡಿಗೆ ಹೋಗಿ, ತಮಿಳುನಾಡಿಗೆ ಯಾಕೆ ಹೋಗುತ್ತೀರಿ?' ಎಂದು ಆತ ತೀಕ್ಷ್ಣವಾಗಿ ಕೇಳಿದ. ತಮಿಳುನಾಡಿನಲ್ಲಿ ಹೊಯ್ಸಳರು ಆಳಿದ ವಿಷಯ ನಮಗೇ ಅಷ್ಟಾಗಿ ತಿಳಿದಿಲ್ಲದಿರುವಾಗ, ಪಾಪ ಈ ತಮಿಳು ಮನುಷ್ಯನಿಗಾದರೂ ಹೇಗೆ ಅರಿವಾಗಬೇಕು!

'ಹೋಗಲಿ ಬಿಡಿ ಸಾರ್, ನಾವು ಅಲ್ಲಿಗೇ ಹೋಗಿ ವಿಚಾರಿಸಿ ನಿಮ್ಮ ಕಣ್ಣಾನೂರು ನೋಡಿಕೊಂಡು ಬರೋಣ' ಎಂದರು ನನ್ನ ಸ್ನೇಹಿತರಾದ ಶಂಕರ್.

ಶ್ರೀರಂಗಂನ ಅವಳಿ ಊರೆನಿಸಿರುವ ತಿರುಚ್ಚಿಯವರಾದ ಸ್ನೇಹಿತ ಶಂಕರ್ ನನ್ನ ಸಹಾಯಕ್ಕೆ ಬಂದರು. ನನಗೆ ಆನಂದವಾಯಿತು. ಶಂಕರ್ ನನ್ನ ಬಗ್ಗೆ ಆಸಕ್ತಿ ತೋರಿದ್ದು ಸಂತಸವಾಯಿತು. ತಮಿಳು ಮಾತೃಭಾಷೆಯವರಾದ ಶಂಕರ್‌ರವರ ಮಾರ್ಗದರ್ಶನದಿಂದ ತಮಿಳು ಅರಿಯದ ನನಗೆ, ನನ್ನ ಯಾತ್ರೆ ಸುಗಮವಾಗಬಹುದು ಎಂದು ಅನ್ನಿಸಿತು. ಜೊತೆಗೆ ಕನ್ನಡಿಗರೂ ಒಬ್ಬರಿರಲಿ ಎಂದು ಸ್ನೇಹಿತ ಶಾಂತಪ್ಪನನ್ನು ಕರೆದೆ. ಆತ ಕೂಡಲೇ ನಮ್ಮೊಂದಿಗೆ ಬರಲು ಒಪ್ಪಿಗೆ ಸೂಚಿಸಿದ. ಈ ಸಂಗತಿ ನನಗೆ ಆಶ್ಚರ್ಯದ ಜೊತೆಗೆ ಸಂತಸವನ್ನೂ ತಂದಿತು. ಏಕೆಂದರೆ ನನ್ನ ಮಿಥಿಲಾ ಯಾತ್ರೆಗೆ ದಿಲ್ಲಿಯ ಕನ್ನಡಿಗರನ್ನು ಆಹ್ವಾನಿಸಿದಾಗ ಯಾರೂ ಉತ್ಸುಕತೆ ತೋರದೆ ಕೊನೆಗೆ ಒಬ್ಬ ಪಂಜಾಬಿ ಮತ್ತು ಮಲೆಯಾಳಿ ಸ್ನೇಹಿತರನ್ನು ಕರೆದುಕೊಂಡು ಹೋಗಬೇಕಾಯಿತು.

**ಕಾವೇರಿಯ ಕಂಪು**

ತಿರುಚ್ಚಿಗೆ ಬೆಂಗಳೂರಿನಿಂದ ಕಾರಿನಲ್ಲಿ ಕೃಷ್ಣಗಿರಿ ಧರ್ಮಪುರಿ ಸೇಲಂ ಮಾರ್ಗದಲ್ಲಿ ಹೋದರೆ ಆರುಗಂಟೆ ಪ್ರಯಾಣ. ನಾವು ಬೆಳಿಗ್ಗೆ ಹತ್ತು ಗಂಟೆಗೆ ಬೆಂಗಳೂರು ಬಿಟ್ಟು ಸೇಲಂ ತಲುಪುವ ವೇಳೆಗೆ ಒಂದು ಗಂಟೆ ಆಗಿತ್ತು. ಜುಲೈ ತಿಂಗಳಿನಲ್ಲೇ ಮೋಡವಿದ್ದು, ಗಾಳಿಯಿದ್ದರೂ ಬೆಂಗಳೂರಿನ ತಂಪು ಕಳೆದು ಸೆಕೆಯ ತಾಪ ಮೈಮೇಲೆ ಎರಗಿತ್ತು. ನಾಮಕ್ಕಲ್ ದಾಟಿದೊಡನೆ ಕಾವೇರಿಯ ಕಂಪು, ನೆಲದ ಸಿರಿ, ಕಣ್ಣಿಗೆ ಕಾಣಿಸಿದವು. ಮುಂದೆ ಶ್ರೀರಂಗಂ ತಲುಪುವವರೆಗೂ ಸುತ್ತಲೂ ಎತ್ತೆತ್ತ ನೋಡಿದರೂ ಭತ್ತ, ಬಾಳೆ, ತೆಂಗುಗಳು ಕೈಬೀಸಿ ಕರೆಯುತ್ತಿದ್ದವು.

ಶ್ರೀರಂಗಂ ತಲುಪುವುದು ಇನ್ನೂ ಎಂಟು ಕಿ.ಮೀ. ದೂರವಿರುವಾಗಲೇ ಮದ್ರಾಸಿಗೆ ಹೋಗುವ ಹೆದ್ದಾರಿ ಎದುರಾಗುತ್ತದೆ. ಆ ದಾರಿಯಲ್ಲಿ ತಿರುಗಿ ಪಶ್ಚಿಮಾಭಿಮುಖವಾಗಿ ನಮ್ಮ ಕಾರು ಓಡಲಾರಂಭಿಸಿದಾಗ ಗಂಟೆ ಐದಾಗಿತ್ತು. ಅಲ್ಲಿಂದ ಸಮಯಪುರಕ್ಕೆ ಕೇವಲ ಏಳು ಕಿ.ಮೀ.ದೂರ. ಕೆಲವೇ ನಿಮಿಷಗಳಲ್ಲಿ ನಾವು ಸಮಯಪುರಂ ತಲುಪಿದೆವು. ಮಾರಿಯಮ್ಮನ ದೇವಸ್ಥಾನಕ್ಕೆ ದಾರಿ ಎಂದು ಒಂದು ಫಲಕ ಕಣ್ಣಿಗೆ ಬಿದ್ದೊಡನೆ ಬಲಗಡೆ ಒಂದು ಇಕ್ಕಟ್ಟಾದ ರಸ್ತೆಯೊಳಗೆ ಕಾರನ್ನು ತಿರುಗಿಸಿದೆವು. ಕಾರನ್ನು ನಿಲ್ಲಿಸಿ ಶಂಕರ್ ಒಬ್ಬ ದಾರಿ ಹೋಕರನ್ನು, 'ಹೊಯ್ಸಳೇಶ್ವರಂ ಕೋಯಿಲ್ ಎಂಗೆ?' ಎಂದು ಕೇಳತೊಡಗಿದರು. ದಾರಿಹೋಕ ಅವರನ್ನು ಕನಿಕರದಿಂದ ನೋಡುತ್ತಾ, 'ಇಂಗೆ ಹೊಯ್ಸಳೇಶ್ವರಂ ಕೋಯಿಲ್ ಇಲ್ಲೈ, ಮಾರಿಯಮ್ಮನ್ ಕೋಯಿಲ್ ಇರುಕ್ಕು. ನೇರ ಪೋಂಗೊ ಅಂಗೆ ಇರುಕ್ಕಿರದು' ಎಂದ.

ಮುಂದೆ ಸ್ವಲ್ಪ ದೂರ ಸಾಗಿದ ಮೇಲೆ ಒಬ್ಬ ಪೂಜಾರಿ ಕಣ್ಣಿಗೆ ಕಾಣಿಸಿದ. 'ಎನ್ನ ವಾದ್ಯಾರ್ ? ಇಂಗೆ ಕಣ್ಣಾನೂರು ಎಂಗೆ ಇರುಕ್ಕು ?' ಶಂಕರ್ ಕೇಳಿದಾಗ ಆತ ಮುಗುಳ್ನಗುತ್ತಾ ಎಂದ : 'ಇದೇ ಕಣ್ಣಾನೂರು!'

'ಸಮಯಪುರಂ ಎಂಗೆ ?' ಎಂದು ಕೇಳಿದಾಗ 'ಇದೇ ಸಮಯಪುರಂ' ಎಂದ ಆ ಭೂಪತಿ !

'ಸಾರ್! ನನಗೇಕೋ ಅನುಮಾನ. ವಾಪಸ್ ಬೆಂಗಳೂರಿಗೆ ಹೋಗೋಣವೇ?' ಶಂಕರ್



11th_Kannada_Reader_Final_16-07-2018.indd 45 16-07-2018 18:42:57

ಬೇಸರದಿಂದ ಹೇಳಿದಾಗ ನನಗೆ ನಗು ಬಂತು. ಬೇರೆ ಯಾರನ್ನಾದರೂ ವಿಚಾರಿಸೋಣ ಎಂದು ನಾವು ಕಾರನ್ನು ಮುಂದುವರೆಸಿದೆವು. ಸ್ವಲ್ಪ ದೂರ ಹೋದೊಡನೆಯೇ ದಾರಿ ಕವಲೊಡೆಯಿತು. ಅಲ್ಲಿ ಮತ್ತೊಬ್ಬ ದಾರಿ ಹೋಕನನ್ನು ವಿಚಾರಿಸಿದಾಗ ಆತನಿಂದ ಈ ರೀತಿ ಉತ್ತರ ಬಂತು :

'ಹಿಂದಿರುಗಿ ಹೋಗಿ. ಒಂದು ಸಣ್ಣ ಗಲ್ಲಿಯಲ್ಲಿ ತಿರುಗಿ ಅಲ್ಲಿಂದ ಸುಮಾರು ಅರ್ಧ ಕಿ.ಮೀ.ದೂರದಲ್ಲೇ ಇದೆ ಕಣ್ಣಾನೂರು'

ಮತ್ತೆ ಕಷ್ಟ ಪಟ್ಟು ಕಾರನ್ನು ಅದೇ ಗಲ್ಲಿಯಲ್ಲಿ ತಿರುಗಿಸಿ ಮುಂದೆ ಬಂದಾಗ ಒಂದು ಕೊಳಚೆ ಗ್ರಾಮಕ್ಕೆ ಬಂದ ಹಾಗಾಯಿತು. ಸಣ್ಣ ಸಣ್ಣ ಗಲ್ಲಿಯಲ್ಲಿ ಕಾರು ಹರಿದಾಡಿ ಸಿಕ್ಕಸಿಕ್ಕ ಜನರನ್ನು ವಿಚಾರಿಸಿ ಇದೇ ಕಣ್ಣಾನೂರು ಎಂದು ತಿಳಿದಾಗ, ಶಂಕರ್ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಅವರು ಕಾರನ್ನು ನಿಲ್ಲಿಸಿ, ಒಂದು ಮನೆ ಮುಂದೆ ಕುಳಿತಿದ್ದ ಒಬ್ಬ ಮನುಷ್ಯನನ್ನು ವಿಚಾರಿಸಿದರು, ತಮಿಳಿನಲ್ಲಿ. 'ಹೊಯ್ಸಳೇಶ್ವರಂ ಇಂಗೆ ಇಲ್ಲೈ ಸಾರ್. ಒರು ಪಳೆಯ ಕೋಯಿಲ್ ಇರುಕ್ಕು. ಅದು ಭೋಜೇಶ್ವರಂ ಕೋಯಿಲ್. ಏಳುನೂರು ವರುಷಂ ಪಳೆಯ ಕೋಯಿಲ್ ಸಾರ್' ಎಂದ.

'ಇಷ್ಟು ದೂರ ಬಂದು ಭೋಜೇಶ್ವರ ದೇವಸ್ಥಾನ ನೋಡಿಕೊಂಡು ಹೋಗಬೇಕೇ?' ನನಗೂ ನಿರಾಸೆಯಾಯಿತು. ನಮ್ಮನ್ನು ನೋಡಿ ಸುತ್ತಮುತ್ತಲಿನ ಕೆಲವು ತಮಿಳುರು ಅಲ್ಲಿಗೆ ಬಂದು ವಿಚಾರಿಸಿದರು. ಎಲ್ಲರ ಅಭಿಮತ ಒಂದೇ ಆಗಿತ್ತು. 'ಭೋಜೇಶ್ವರ ದೇವಸ್ಥಾನ ಬಹಳ ಪುರಾತನವಾದದ್ದು. ಇದನ್ನು ರಾಜ ವಿಕ್ರಮಾದಿತ್ಯ ಕಟ್ಟಿಸಿದ್ದು'.

'ಏನೇ ಆಗಲಿ ಈ ಭೋಜೇಶ್ವರ ದೇವಸ್ಥಾನ ನೋಡೇ ಬರೋಣವೆಂದು ಅದರ ಕಡೆಗೆ ಕಾರನ್ನು ಓಡಿಸಿದೆವು. ಸ್ವಲ್ಪ ದೂರ ಗಲ್ಲಿಗಳಲ್ಲಿ ಓಡಾಡಿ ಊರ ಹೊರಗೆ ಬಯಲಿಗೆ ಬಂದಾಗ ಅಲ್ಲೇ ಒಂದು ಬಹು ಪುರಾತನ ಕಲ್ಲಿನಿಂದ ಕಟ್ಟಿದ ಒಂದು ದೇವಸ್ಥಾನ ಕಾಣಿಸಿತು. ಕಷ್ಟ ಪಟ್ಟು ರಸ್ತೆ ಇಲ್ಲದ ಆ ಜಾಗದಲ್ಲಿ ಹಳ್ಳತಗ್ಗುಗಳಲ್ಲಿ ಕಾರನ್ನು ಓಡಿಸಿ ದೇವಸ್ಥಾನ ಪ್ರವೇಶಿಸಿದಾಗ ಅಲ್ಲೊಬ್ಬ ವ್ಯಕ್ತಿ ಕಾಣಿಸಿದ. ಆತನನ್ನು ವಿಚಾರಿಸಿದಾಗ ಈ ದೇವಸ್ಥಾನ ಬಹು ಪುರಾತನವಾದ ಭೋಜೇಶ್ವರ ದೇವಸ್ಥಾನವೆಂದೂ ವಿಕ್ರಮಾದಿತ್ಯ ರಾಜನು ಕಟ್ಟಿಸಿದ್ದಾನೆಂದೂ ಬೆಳಗಿನ ಪೂಜೆ ಇಂದಿಗೂ ನಡೆಯುತ್ತದೆಂದೂ ಒಳಗೆ ಗರ್ಭಗುಡಿಯಲ್ಲಿ ಭೋಜೇಶ್ವರನ ಲಿಂಗವಿದೆಯೆಂದೂ ಆತ ತಿಳಿಸಿದ. ಹಾಗಾದರೆ ಈ ಗುಡಿ ಹೊಯ್ಸಳೇಶ್ವರಂ ಅಲ್ಲ! ಮನಸ್ಸಿಗೆ ಕಸಿವಿಸಿಯಾದರೂ ಗುಡಿಯ ಸುತ್ತಲೂ ಪ್ರದಕ್ಷಿಣೆ ಹಾಕಿ ಅದನ್ನು ಅವಲೋಕಿಸಿದೆ. ಗುಡಿ ಚಿಕ್ಕದಾದರೂ ಸುಂದರವಾಗಿತ್ತು. ದೇವಾಲಯವನ್ನು ಒಂದು ಸುತ್ತು ಹಾಕಿ ಮುಖ ದ್ವಾರದ ಬಳಿ ನಿಂತಿದ್ದ ಶಂಕರ್ ಹಾಗೂ ಶಾಂತಪ್ಪನ ಬಳಿ ಬಂದೆ. ಮುಖದ್ವಾರದ ಒಳ ಗೋಡೆಯನ್ನು ನೋಡಿದಾಗ ಅಲ್ಲಿ ತಮಿಳು ಶಿಲಾಶಾಸನಗಳು ಕಣ್ಣಿಗೆ ಬಿದ್ದವು. ಗೋಡೆಯಗಲಕ್ಕೂ ಶಾಸನಗಳ ಸಾಲುಗಳು ತುಂಬಿದ್ದವು. ಇವುಗಳನ್ನು ಓದಲು ಬರುವ ಹಾಗಿದ್ದರೆ ದೇವಾಲಯದ ಮೇಲೆ ಬೆಳಕು ಚೆಲ್ಲಬಹುದೆಂದು ಎಣಿಸಿದೆ. ಇದ್ದಕ್ಕಿದ್ದ ಹಾಗೆ ನನಗೆ ಏನೋ ಹೊಳೆದಂತಾಗಿ 'ಶಂಕರ್ ಈ ಶಾಸನಗಳನ್ನು ಸ್ವಲ್ಪ ಓದಿ ನೋಡೋಣ' ಎಂದೆ.

'ನಾನೇನು ಪುರಾತನ ಲಿಪಿ ಶಾಸನ ಓದುವ ವಿದ್ವಾಂಸನೆಂದೆಣಿಸಿದ್ದೀರಾ? ಏನೋ ನಿಮ್ಮ ಜೊತೆ ಸ್ವಲ್ಪ ದಿನ ಹಾಯಾಗಿ ತಿರುಗಾಡಿ ಬರೋಣವೆಂದು ಬಂದರೆ ನನ್ನನ್ನು ಪರೀಕ್ಷೆ ಮಾಡುತ್ತೀರಾ?' ಎಂದು ಶಂಕರ್ ನಗತೊಡಗಿದರು.

'ನೋಡಿ, ನಿಮ್ಮ ತಮಿಳುಜ್ಞಾನ ಪರೀಕ್ಷೆ ಮಾಡಲಿಕ್ಕೆ ನಾನೇನೂ ತಮಿಳು ವಿದ್ವಾಂಸ ಅಲ್ಲ. ಈ ಬರಹದಲ್ಲಿ ಏನಾದರೂ ವಿಶೇಷವಿದೆಯೋ ಎಂದು ತಿಳಿಯುವುದಕ್ಕೋಸ್ಕರ ನಿಮ್ಮನ್ನು ಕೇಳಿಕೊಂಡೆ' ಎಂದೆ.

ನನ್ನ ಸಪ್ಪೆ ಮುಖ ನೋಡಿ ಕನಿಕರಗೊಂಡ ಶಾಂತಪ್ಪ, 'ಪ್ರಯತ್ನ ಪಟ್ಟು ಓದಿ ಸಾರ್. ತಮಿಳರಾಗಿ ನೀವೇ ಓದದೆ ಹೋದರೆ ನಾನು ಓದುವುದಕ್ಕೆ ಆಗುತ್ತದೆಯೇ?' ಎಂದು ಪುಸಲಾಯಿಸಿದರು.

'ಹಾಗಲ್ಲ, ಇದು ಗ್ರಂಥ ತಮಿಳು. ಓದುವುದು ಕಷ್ಟ. ಓದಿದರೂ ಅರ್ಥವಾಗುವುದು ಕಷ್ಟ. ನಿಮ್ಮ ಹಳಗನ್ನಡ ಅಂತಾರಲ್ಲ ಹಾಗೆ' ಎಂದರು. ಶಂಕರ್ ಈ



11th_Kannada_Reader_Final_16-07-2018.indd 46 16-07-2018 18:42:57

ರೀತಿ ನುಡಿದರೂ ಶಿಲಾಶಾಸನ ಓದಲಾರಂಭಿಸಿದರು. ಬಹಳ ಕಷ್ಟ ಪಟ್ಟು ಕೆಲವು ಸಾಲುಗಳನ್ನು ಓದಿದ ಬಳಿಕ 'ಪೊ...ಪೊ... ಪೊಯ್ಸಳೇಶ್ವರಂ ಕೋಯಿಲ್' ಎಂದು ಓದಿ ಜೋರಾಗಿ ಹೋ ಎಂದು ಹುಯಿಲೆಬ್ಬಿಸಿದರು.

'ಸಾರ್, ಸಾರ್... ಪೊಯ್ಸಳೇಶ್ವರಂ ಎಂದು ಏನೇನೋ ಎಂದು ಬರೆದಿದ್ದಾರೆ. ಇದು ಹೊಯ್ಸಳೇಶ್ವರ ಗುಡಿಯೇ ಇರಬೇಕು' ಎಂದರು.

ನನಗೆ ಅತ್ಯಾನಂದವಾಗಿತ್ತು. ನಾನು ಶಾಂತಪ್ಪನವರ ಮುಖ ನೋಡಿದಾಗ ಅವರ ಮುಖ ಅರಳಿತ್ತು. ಶಂಕರ್ ಪೊಯ್ಸಳೇಶ್ವರಂ ಪೊಯ್ಸಳೇಶ್ವರಂ ಎಂದು ಜಪ ಮಾಡುತ್ತಲೇ ಇದ್ದರು. ಅವರ ಮುಖದಲ್ಲಿ ಒಂದು ಮಹತ್ಕಾರ್ಯ ಸಾಧಿಸಿದ ಭಾವನೆಯಿತ್ತು. ನನ್ನ ಮನಸ್ಸು ಆನಂದದಿಂದ ತುಂಬಿತ್ತು.

'ಸಾರ್... ಇದು ಭೋಜೇಶ್ವರಂ, ಪೊಯ್ಸಳೇಶ್ವರಂ ಅಲ್ಲ' ಗುಡಿಯ ಮೇಲ್ವಿಚಾರಕ ಹೇಳುತ್ತಿದ್ದ.

'ಏನಯ್ಯಾ ಇಲ್ಲಿ ಬರೆದಿದೆ ಪೊಯ್ಸಳೇಶ್ವರಂ ಎಂದು. ನಿನಗೆ ಅಷ್ಟೂ ಗೊತ್ತಾಗೋದಿಲ್ವಾ?' ಶಾಂತಪ್ಪ ಅವರಿಗೆ ಕನ್ನಡದಲ್ಲಿ ನುಡಿದರು!

'ಸಾರ್, ಇದು ಭೋಜೇಶ್ವರಂ. ರಾಜಾ ವಿಕ್ರಮಾದಿತ್ಯ ಕಟ್ಟಿದ್ದು, ನಾನು ಸುಳ್ಳು ಹೇಳಲ್ಲ. ಬೇಕಾದರೆ ನಾಳೆ ಬೆಳಿಗ್ಗೆ ಬನ್ನಿ. ದೇವಸ್ಥಾನದ ಪೂಜಾರಿ ಬಂದಾಗ ಕೇಳಿ. ನಿಜ ಅರಿವಾಗುತ್ತದೆ'.

ಅವನ ಮಾತಿಗೆ ಬೆಂಬಲ ಸೂಚಿಸುವಂತೆ ಶಂಕರ್, 'ನಾಳೆ ಬೆಳಿಗ್ಗೆ ಬರೋಣ ಸರ್. ಪೂಜಾರೀನ ಕೇಳಿ ಖಾತ್ರಿ ಮಾಡಿಕೊಳ್ಳೋಣ. ಈಗ ಕತ್ತಲಾಗಿದೆ. ಬನ್ನಿ ಹೋಗೋಣ' ಎಂದು ನಮ್ಮನ್ನು ಆಗ್ರಹಿಸಿ ಕಾರು ಹತ್ತಿಸಿದರು.

**ಅಪೂರ್ವ ಶೋಭೆ**

ತಿರುಚ್ಚಿಗೆ ಬಂದು ಒಂದು ಹೋಟೆಲಿನಲ್ಲಿ ಉಳಿದುಕೊಂಡು ಬೆಳಿಗ್ಗೆ ಒಂಭತ್ತು ಗಂಟೆಗೆ ಮತ್ತೆ ಹದಿನೈದು ಕಿ.ಮೀ. ದೂರ ವಾಪಸ್ಸು ಬಂದಾಗ ಗುಡಿ ಬೆಳಗಿನ ಬಿಸಿಲಿನ ಅಪೂರ್ವ ಶೋಭೆಯಿಂದ ಕಂಗೊಳಿಸುತ್ತಿತ್ತು.

ನಮ್ಮನ್ನು ಕಂಡೊಡನೆಯೇ ಗುಡಿಯ ಮೇಲ್ವಿಚಾರಕ, ಪೂಜಾರಿಯನ್ನು ಕರೆದುಕೊಂಡು ಬರಲು ಓಡಿ ಹೋದ. ನಾವು ದುಗುಡದಿಂದ ಪೂಜಾರಿಯ ಆಗಮನವನ್ನೇ ಕಾಯುತ್ತಾ ಕುಳಿತೆವು. ನನ್ನ ಮನಸ್ಸು ಆ ಪೂಜಾರಿ ಏನು ಹೇಳುವನೋ, ನನ್ನ ಆಸೆ, ನನ್ನ ಯೋಜನೆ, ನನ್ನ ಆಕಾಂಕ್ಷೆ, ನನ್ನ ಹೊಯ್ಸಳೇಶ್ವರ ಗುಡಿ ಕಾಣಬೇಕೆಂಬ ಬಯಕೆ ಎಲ್ಲಿ ನುಚ್ಚುನೂರಾಗುವುದೋ ಎಂದು ಕಾತರತೆಯಿಂದ ಕೂಡಿತ್ತು.

ಪೂಜಾರಿ ತನ್ನ ಅನುಚರರೊಂದಿಗೆ ಓಡೋಡಿ ಬಂದ. ನಮ್ಮನ್ನು ನೋಡಿ ನಮಸ್ಕರಿಸಿ ಗುಡಿಯೊಳಗೆ ಬರಲು ಆಹ್ವಾನಿಸಿದ. ಶಂಕರ್ ಅವನನ್ನು ಕುರಿತು ಕೇಳಿದರು. 'ಈ ಗುಡಿಯ ಹೆಸರೇನು ? ಇದು ಯಾರು ಕಟ್ಟಿಸಿದ್ದು ?'

'ಇದನ್ನು ಪೊಯ್ಸಳೇಶ್ವರಂ ಎಂದು ಕರೆಯುತ್ತಾರೆ. ಇದನ್ನು ವೀರಸೋಮೇಶ್ವರ ಕಟ್ಟಿಸಿದ್ದೆಂದು ಹೇಳುತ್ತಾರೆ!'

ನನ್ನ ಮನಸ್ಸು ಹುಚ್ಚೆದ್ದು ಕುಣಿಯಿತು! ನಾನು ಬಂದ ಕಾರ್ಯ ವಿಫಲವಾಗಿರಲಿಲ್ಲ. ನನ್ನ ಭಾವನೆಗಳನ್ನು ಹತ್ತಿಕ್ಕಲಾಗಲಿಲ್ಲ!

'ಅಂತೂ ನಿಮ್ಮ ಹೊಯ್ಸಳರು ಕಟ್ಟಿಸಿದ ಗುಡಿಯನ್ನು ಕಂಡು ಹಿಡಿದು ಬಿಟ್ಟಿರಿ!' ಶಂಕರ್ ಅವರ ನುಡಿಗಳಲ್ಲಿ ಸಂತೋಷ ಉಕ್ಕುತ್ತಿತ್ತು. ಶಾಂತಪ್ಪ ಶಾಂತವಾಗಿ ನನ್ನ ಮುಖವನ್ನೇ ಮುಗುಳ್ನಗುತ್ತಾ ಅವಲೋಕಿಸುತ್ತಿದ್ದರು. ನನ್ನ ಮನಸ್ಸು ಹಗುರವಾಗಿ ಹೃದಯ ಆನಂದದಿಂದ ಹಾಡುತ್ತಿದ್ದು ಅವರ ಮಾತುಗಳಿಗೆ ಉತ್ತರ ನೀಡುವ ಸ್ಥಿತಿಯಲ್ಲಿರಲಿಲ್ಲ.

ಗುಡಿಯನ್ನು ಕೂಲಂಕಷವಾಗಿ ಪರೀಕ್ಷಿಸಲು ಉಪಕ್ರಮಿಸಿದೆ. ಗುಡಿ ಯಾವುದೇ ದಕ್ಷಿಣ ಭಾರತದ ಹಿಂದೂ ದೇವಸ್ಥಾನದಲ್ಲಿ ಕಾಣುವ ಬಹು ಮುಖ್ಯವಾದ ಗುಡಿಯ ವಿಮಾನ, ಗರ್ಭಗುಡಿಯ ಮುಂಭಾಗದ ಮಂಟಪಗಳನ್ನು ಹೊಂದಿತ್ತು. ಆದರೆ ಹೆಬ್ಬಾಗಿಲು, ಗೋಪುರಗಳಲ್ಲಿ ಮತ್ತು ಕಂಬಗಳಲ್ಲಿ ಹೊಂದಿರುವ ಚಾವಡಿಗಳಿರಲಿಲ್ಲ. ಪ್ರಾಚೀನ ಚಾಲುಕ್ಯ ಶೈಲಿಯ ರೀತಿ ಕಟ್ಟಿದ ಗುಡಿಯಾಗಿತ್ತು. ಈ ಹೊಯ್ಸಳೇಶ್ವರ ದೇವಾಲಯದ ಗುಡಿಯೊಳಗೆ ಹೊಕ್ಕೊಡನೆ ಒಂದು



11th_Kannada_Reader_Final_16-07-2018.indd 47 16-07-2018 18:42:57

ಮಂಟಪ ಎದುರಾಗುತ್ತದೆ. ಮಂಟಪದ ಎದುರಿಗೆ ಗರ್ಭಗುಡಿ. ಗರ್ಭಗುಡಿಯ ಮೇಲೆ ಶಿಖರವೆದ್ದು, ಸ್ವಲ್ಪ ಮಟ್ಟಿಗೆ ಹೊಯ್ಸಳ ಶೈಲಿಯದಾಗಿದ್ದಿತು.

ಹೊಯ್ಸಳರ ಗುಡಿಗಳಲ್ಲಿ ಕಾಣ ಬರುವ ನಕ್ಷತ್ರಾಕಾರದ ಸ್ಥಲ ವಿನ್ಯಾಸ, ಎತ್ತರದ ಜಗತಿ, ಕುಡ್ಯಗಳು ಅಥವಾ ಅಲಂಕಾರಿಕ ಗೋಡೆಗಳು, ನಕ್ಷತ್ರ ವಿನ್ಯಾಸವನ್ನನುಸರಿಸಿದ ಮೇಲ್ಛಾವಣಿ ಮತ್ತು ಶಿಖರಗಳು ಈ ಗುಡಿಯಲ್ಲಿ ಕಾಣಬರಲಿಲ್ಲ. ಹೊಯ್ಸಳರ ಗುಡಿಗಳಲ್ಲಿ ಕಾಣುವ ನಕ್ಷತ್ರಾಕಾರದ ಮೆಟ್ಟಿಲು, ಮೆಟ್ಟಿಲು ಮೆಟ್ಟಿಲಾಗಿ ಮೇಲಕ್ಕೆ ಹೋಗುವ ಶಿಖರ ಇವ್ಯಾವುವೂ ಇಲ್ಲಿ ಕಾಣುವುದಿಲ್ಲ. ಒಳಗಿನ ಸ್ಥಂಭಗಳು, ಸಾಮಾನ್ಯ ರೀತಿಯಾಗಿದ್ದು, ಹೊಯ್ಸಳರ ಗುಡಿಯಲ್ಲಿ ಕಂಡು ಬರುವಂತಹ ಸುಂದರ ಉಂಗುರ ರೇಖೆಗಳು ನಕ್ಷತ್ರಾಕಾರದ ಭಾಗಗಳು ಚತುರಸ ಫಲಕಗಳು ಮೇಲ್ಛಾಗದ ಬಾಳೆಯ ಹೂಗೊಂಚಲು ಇವ್ಯಾವುವೂ ನಮಗೆ ಕಾಣ ಸಿಗಲಿಲ್ಲ. ಒಟ್ಟಿನಲ್ಲಿ ಹೊಯ್ಸಳ ಶಿಲ್ಪಿಯ ಕುಶಲತೆ ಇಲ್ಲಿ ಕಂಡು ಬರಲಿಲ್ಲ.

ಆದರೆ ಎಲ್ಲಾ ಶಿವ ದೇವಾಲಯಗಳಲ್ಲಿ ಕಂಡು ಬರುವಂತಹ ನಂದಿಯನ್ನು ಇಲ್ಲಿ ಕಾಣಬಹುದಾಗಿತ್ತು. ಚೌಕಾಕಾರದ ಗರ್ಭಗುಡಿಯಲ್ಲಿ ಸುಮಾರು ಐದು ಅಡಿ ಎತ್ತರದ ಶಿವಲಿಂಗವಿತ್ತು. ಈ ಲಿಂಗದ ವೈಶಿಷ್ಟ್ಯವೆಂದರೆ ಹದಿನಾರು ಪಟ್ಟಿಗಳಿಂದ ಅದರ ಮೇಲ್ಮೈಯನ್ನು ಕೆತ್ತಿದ್ದರು. ಇಂತಹ ಲಿಂಗವನ್ನು ಧಾರಾಲಿಂಗ ಎಂದು ಕರೆಯುತ್ತಾರೆ. ಗುಡಿಯ ಎದುರಿಗೆ ಹಾಳುಬಿದ್ದ ಕಲ್ಯಾಣಿಯೊಂದು ಕಾಣಿಸಿತು. ಗುಡಿ ಪೂರ್ವಾಭಿಮುಖವಾಗಿದ್ದು ಮಂಟಪದೊಳಗೆ ಬಲಬದಿಯಲ್ಲಿ ಪಾರ್ವತಿ ಅಮ್ಮನ ಸಣ್ಣ ಗುಡಿಯಿದೆ. ಈ ಗುಡಿಯ ಗರ್ಭಗುಡಿ, ಅರ್ಧಮಂಟಪ ಹಾಗೂ ಮಹಾಮಂಟಪ ನೆಲದಿಂದ ಐದು ಅಡಿ ಎತ್ತರದಲ್ಲಿ ಕಮಲಾಕಾರದ ಜಗತಿಯ ಮೇಲೆ ಕಟ್ಟಲಾಗಿದೆ. ಜಗತಿಯ ಮೇಲೆ ಅಲಂಕಾರಿಕ ಪಟ್ಟಿಗಳನ್ನು ಕೆತ್ತಲಾಗಿದೆ. ಕಮಲದ ಕಟ್ಟಡದ ಗೋಡೆಗಳಲ್ಲಿ ಮಾಡು ಅಥವಾ ಗೂಡುಗಳಿದ್ದು ಸುತ್ತಲೂ ಕೊರೆದಿರುವ ತಿಬ್ಬುಗಳಿಂದ ಅಲಂಕರಿಸಲಾಗಿದೆ. ಅಷ್ಟ ಮೂಲೆಗಳ ಕಲ್ಲು ಸ್ಥಂಭಗಳು, ನಾಗಪದ್ಮಗಳಿಂದ ಅಲಂಕೃತಾಗಿದೆ. ಇಟ್ಟಿಗೆಯಲ್ಲಿ ಕಟ್ಟಲಾದ ಶಿಖರ ಅಥವಾ ವಿಮಾನ ಮೂರು ಅಟ್ಟಣಿಗೆಯುಳ್ಳದ್ದಾಗಿದ್ದು, ಚಿಕ್ಕ ಚಿಕ್ಕ ಮಂಟಪಗಳನ್ನು ಹೊಂದಿದ್ದು ಅವುಗಳ ಮೇಲೆ ವರ್ಣಾಲಂಕಾರದ ಗೋಪುರ ಅಥವಾ ಶಿಖರಗಳನ್ನು ಕಾಣಬಹುದಾಗಿದೆ. ಅತಿ ಸೂಕ್ಷ್ಮ ಸುಂದರ ಜಟಿಲವಾದ ನಕ್ಷೆಗಳನ್ನು ಹೊಂದಿರುವ ಅಗಲವಾದ ಕಲ್ಲು ಸ್ತಂಭಗಳು, ಗರ್ಭಗೃಹ ಮತ್ತು ಅರ್ಧ ಮಂಟಪದ ಮಧ್ಯೆ ಎದ್ದು ನಿಂತಿವೆ.

**ಮಹಾಮಂಪಟ**

ಗುಡಿಯೊಳಗೆ ನಾಲ್ಕು ಕಂಬಗಳ ಮೇಲೆ ಗೋಲಾಕಾರದ ಮಾಡನ್ನು ಹೊಂದಿದ ಮಹಾಮಂಟಪವನ್ನು ಕಾಣಬಹುದು. ಈ ಕಂಬಗಳ ಮೇಲೆ ಸುಂದರ ವಿನ್ಯಾಸದ ಸಿಂಹ, ಮಕರ ಮುಂತಾದ ಅಲಂಕಾರ ಶಿಲ್ಪ ಕಲೆಗಳಿಂದ ಚಿತ್ರಿಸಲಾಗಿದೆ. ಮಹಾಮಂಟಪದ ಹೆಬ್ಬಾಗಿಲು ದೊಡ್ಡದಾಗಿದ್ದು ಸೂಕ್ಷ್ಮ ಕಲಾಕೃತಿಗಳಿಂದ ಅಲಂಕೃತಗೊಂಡಿದೆ.

ಗುಡಿಯ ಒಳಗೆ, 'ಸುಕನಾಸಿ'ಯ ಬದಲು ಇಕ್ಕಟ್ಟಾದ ಅರ್ಧಮಂಟಪವಿದೆ. ದ್ರಾವಿಡ ಶೈಲಿಯ ಮಹಾಮಂಟಪವನ್ನು 'ನವರಂಗ'ದ ಬದಲು ಕಾಣಬಹುದಾಗಿದೆ. ಈ ಮಹಾಮಂಟಪವನ್ನು ಮಾತ್ರ ಹೊಯ್ಸಳರ ಶೈಲಿಯಲ್ಲಿ ಶೃಂಗರಿಸಲಾಗಿದೆ. ಬೃಹತ್ ಕಂಬಗಳು, ಸುಂದರ ಕೆತ್ತನೆಯ ಕೆಲಸದಿಂದ ಅಲಂಕೃತವಾಗಿಲ್ಲ. ಜಾಲಂಧ್ರ, ಕಿಟಕಿಗಳು, ಸುಂದರ ಹೊಯ್ಸಳ ಶೈಲಿಯಲ್ಲಿವೆ. ದ್ವಾರಪಾಲಕ ವಿಗ್ರಹಗಳು ದೊಡ್ಡದಾದರೂ ಬಹಳ ಸರಳವಾಗಿದ್ದು ಹೊಯ್ಸಳ ಶೈಲಿಯಲ್ಲಿಲ್ಲ.

ವಿದ್ವಾಂಸರ ಹೇಳಿಕೆಯ ಮೇರೆಗೆ ಗುಡಿಯ ವಿಮಾನವು ಬಹಳ ವಿಶಿಷ್ಟ ರೀತಿಯ ಶಿಲ್ಪಕಲೆಯಾಗಿದ್ದು, ಪಾಂಡ್ಯ, ಚೋಳ, ಹೊಯ್ಸಳ ಸಮ್ಮಿಶ್ರಣ ಶೈಲಿಯಾಗಿದ್ದು ಪ್ರಾಯಶಃ ಇದೇ ರೀತಿಯ ಶೈಲಿಯುಳ್ಳ ಗುಡಿಗಳು ಬಹು ಅಪರೂಪವೆಂಬ ನಂಬಿಕೆಯಿದೆ.

ಇಲ್ಲಿರುವ ಕ್ರಿ.ಶ. 1372–73ರ ಒಂದು ಶಾಸನದಲ್ಲಿ, ಈ ಗುಡಿ ಮುಸ್ಲಿಮರ ದಾಳಿಗೆ ತುತ್ತಾಗಿ ಗುಡಿಯ ಪ್ರಾಕಾರದ ಕಲ್ಲಿನ ಗೋಡೆಗಳನ್ನು ಕೆಡವಿ ಕಲ್ಲನ್ನು ಮಸೀದಿಯನ್ನು ಕಟ್ಟಲು ಉಪಯೋಗಿಸಿದರೆಂದೂ,



11th_Kannada_Reader_Final_16-07-2018.indd 48 16-07-2018 18:42:57

ಗುಡಿಯನ್ನು ಹಾಳು ಮಾಡಿದರೆಂದೂ ಹೇಳಿದೆ. ಮುಂದೆ ಗುಡಿಯನ್ನು ವಿಜಯ ನಗರದ ಅರಸರು ಜೀರ್ಣೋದ್ಧಾರ ಮಾಡಿ, ಪೂಜೆ ಪುನಸ್ಕಾರಗಳ ರೂಢಿಯನ್ನು ಜಾರಿಗೆ ತಂದರೆಂದು ದೇವಸ್ಥಾನದಲ್ಲಿರುವ ಒಂದು ಶಾಸನ ಹೇಳುತ್ತದೆ.

ಹೊರಗಡೆ ಇನ್ನೊಮ್ಮೆ ಪರೀಕ್ಷಿಸಿದೆವು. ಗೋಡೆಗಳಲ್ಲಿ ಕಂಡು ಬರುವ ಸಣ್ಣ ಸಣ್ಣ ಚೌಕಟ್ಟುಗಳು ಕಾಲಿಯಾಗಿರುವುದನ್ನು ನೋಡಿದರೆ ವಿಗ್ರಹ ಚೋರರ ಕೈವಾಡವನ್ನು ಇಲ್ಲಿ ಕಾಣಬಹುದಾಗಿದೆ. ಈ ಪ್ರಾಚೀನ ಗುಡಿ ಈಗ ಪಾಳು ಸುರಿಯುತ್ತಿದೆ. ತನ್ನ ಎಲ್ಲಾ ವೈಭವಗಳನ್ನೂ ಕಳೆದುಕೊಂಡು ತನ್ನ ಶಿಲ್ಪ ಚತುರತೆಯನ್ನೂ ನೀಗಿಕೊಂಡು, ತನ್ನ ಅಪೂರ್ವ ಸೌಂದರ್ಯವನ್ನು ಹಾಳು ಮಾಡಿಕೊಂಡು ಪರಕೀಯರ ಹಾವಳಿಗೆ ತುತ್ತಾಗಿ ನಗ್ನವಾಗಿ ಕನ್ನಡಿಗರಿಗೆ ಕನಸಾಗಿ ಕೇವಲ ಚರಿತ್ರೆಯಲ್ಲಿ ಓದಿ ಚಕಿತಗೊಳ್ಳುವಂತಹ ವಿಷಯವಾಗಿದೆ.

ಗುಡಿಯನ್ನು ಪ್ರದಕ್ಷಿಣೆ ಹಾಕಿ ಶಿವಲಿಂಗವನ್ನು ಪ್ರಾಚೀನ ಹೊಯ್ಸಳ ರಾಜರು ಪೂಜಿಸಿದ ಸ್ಥಳದಲ್ಲಿ ನಾನೂ ಪೂಜಿಸಿ ಹೊಯ್ಸಳರ ರಾಜರು ಕೆಚ್ಚಿನಿಂದ, ವೈಭವದಿಂದ ತಮ್ಮ ರಾಜ್ಯವನ್ನು ಇಲ್ಲಿಯವರೆಗೂ ವಿಸ್ತರಿಸಿ ಮೆರೆದು ಕರ್ನಾಟಕದ ಹೆಸರನ್ನು ಶಾಶ್ವತಗೊಳಿಸಿದ್ದಕ್ಕಾಗಿ ಅವರಿಗೆ ನನ್ನ ಅನಂತ ಪ್ರಣಾಮಗಳನ್ನು ಅರ್ಪಿಸಿದೆ.

'ಸಾರ್ ! ಇಲ್ಲಿ ನೋಡಿ, ಪೂಜಾರರು ಹೇಳುತ್ತಾರೆ, ತಿರುಚ್ಚಿಯಲ್ಲಿ ಒಬ್ಬ ಡಾಕ್ಟರ್ ಕಲೈಕೋವನ್ ಅಂತ ಇದ್ದಾರಂತೆ. ಅವರನ್ನು ವಿಚಾರಿಸಿದರೆ ಈ ಗುಡಿಯ ಬಗ್ಗೆ ಇನ್ನೂ ಕೆಲವು ಮಾಹಿತಿಗಳನ್ನು ಕೊಡಬಲ್ಲರಂತೆ. ಯಾಕೆಂದರೆ ಅವರು ಹೊಯ್ಸಳರ ವಿಷಯದಲ್ಲಿ ಸಂಶೋಧನೆ ಮಾಡಿ, ಪ್ರಕಟಿಸಿ ಪ್ರಖ್ಯಾತಿ ಪಡೆದಿದ್ದಾರಂತೆ !' ಶಂಕರ್ ನನಗೆ ಹೇಳುತ್ತಿದ್ದರು.

ನಾನು ಅವರ ಮಾತಿಗೆ ಓಗೊಟ್ಟೆ. ಒಡನೇ ಅಲ್ಲಿಂದ ಹೊರಟೆವು. ಸುಮಾರು ಮೂರು ಗಂಟೆಗಳ ಕಾಲ ಹೊಯ್ಸಳೇಶ್ವರ ಗುಡಿಯಲ್ಲಿ ಕಳೆದ ನಾವು ಶ್ರೀರಂಗಂನ ಪ್ರಸಿದ್ಧ ಶ್ರೀರಂಗನಾಥ ಸ್ವಾಮಿ ದೇವಾಲಯವನ್ನು ಸಂದರ್ಶಿಸಿ, ಆಮೇಲೆ ಡಾ. ಕಲೈಕೋವನ್ ಅವರನ್ನು ಕಾಣೋಣ ಎಂದು ಶ್ರೀರಂಗಂನತ್ತ ಕಾರು ಓಡಿಸಿದೆವು.

ಶ್ರೀರಂಗಂನ ಶ್ರೀರಂಗನಾಥಸ್ವಾಮಿಯ ಗುಡಿ ಎಲ್ಲರಿಗೂ ಚಿರಪರಿಚಿತ. ಆದರೆ ಕನ್ನಡಿಗರಿಗೆ ಪ್ರಿಯವಾದ ಮತ್ತು ಕುತೂಹಲಕರವಾದ ಸಂಗತಿಯೆಂದರೆ ಈ ಗುಡಿಯ ಐದನೇ ಪ್ರಾಕಾರದಲ್ಲಿ ಒಂದು ಸುಂದರ ಮತ್ತು ಚಿಕ್ಕದಾದ ಹೊಯ್ಸಳ ದೇವಸ್ಥಾನ ಇದೆ. ಪ್ರಾಯಶಃ ಕನ್ನಡಿಗರನೇಕರಿಗೆ ಈ ಸಂಗತಿ ತಿಳಿದಿದೆ.

ಶ್ರೀವೇಣುಗೋಪಾಲಸ್ವಾಮಿಯ ಈ ಗುಡಿ ಹೊಯ್ಸಳ ಶೈಲಿಯಲ್ಲಿ ಕಟ್ಟಲ್ಪಟ್ಟ ಸುಂದರ ಕಟ್ಟಡ. ಬಲು ಇಕ್ಕಟ್ಟಾದ ಸ್ಥಳದಲ್ಲಿ ಕಟ್ಟಿದ್ದು, ಈ ಗುಡಿಯ ಹೊರಗೋಡೆಯ ಮೇಲೆ ಸುಂದರ ಮತ್ತು ಕಲಾತ್ಮಕವಾದ ಹಲವಾರು ವಿಗ್ರಹಗಳನ್ನು ಕಾಣಬಹುದು. ಈ ಗುಡಿಯನ್ನು ಹೊಯ್ಸಳರ ರಾಣಿ ಉಮಾದೇವಿ ಕಟ್ಟಿಸಿದಳೆಂದು ಪ್ರತೀತಿ. ಪೂಜೆಯ ಹಕ್ಕು ಒಂದು ಬ್ರಾಹ್ಮಣ ಪಂಗಡಕ್ಕೆ ಸೇರಿದ್ದು, ಕೇವಲ ಪ್ರಾತಃಕಾಲದ ಪೂಜೆಗೆ ಗುಡಿಯ ಬಾಗಿಲು ತೆರೆದಿದ್ದು, ಯಾತ್ರಿಕರಿಗೆ ಪ್ರಾತಃಸಮಯದಲ್ಲಿ ಮಾತ್ರ ದೇವರ ದರ್ಶನ ಭಾಗ್ಯ ಲಭಿಸುತ್ತದೆ.

ಸಂಜೆ, ಡಾ. ಕಲೈಕೋವನ್‌ರವರನ್ನು ಕಾಣಲು ನಾವು ಹೋದಾಗ ನಮಗೆ ಆದರದ ಸ್ವಾಗತ ಸಿಕ್ಕಿತು. ಡಾ.ಕಲೈಕೋವನ್ ನಾವು ಎಣಿಸಿದಂತೆ ವಯಸ್ಸಾದ ವಿದ್ವಾಂಸರಾಗಿರಲಿಲ್ಲ. ಅವರು ಮುವ್ವತ್ತೈದು ವರ್ಷದ ಕಣ್ಣಿನ ಡಾಕ್ಟರ್ ಆಗಿದ್ದರು. ಒಳಗೆ ದಿವಾನಖಾನೆಯಲ್ಲಿ ಕುಳ್ಳಿರಿಸಿ ನಮ್ಮನ್ನು ಉಪಚರಿಸಿದರು. ನಾವು ಬಂದ ಕಾರ್ಯವನ್ನು ವಿವರಿಸಿದಾಗ ಅವರು ಉಲ್ಲಾಸಭರಿತರಾಗಿ ಹೊಯ್ಸಳರು ತಮಿಳುನಾಡಿನಲ್ಲಿ ಆಳಿದ ಅನೇಕ ಪ್ರದೇಶಗಳು, ಅವರು ಕಟ್ಟಿದ ಅನೇಕ ಗುಡಿಗೋಪುರಗಳು, ಶಿಲಾಶಾಸನಗಳು ಇವೆಲ್ಲದರ ಬಗ್ಗೆ ವಿವರಿಸತೊಡಗಿದರು. ತಿರುವನ್ನಾ ಕೋವಿಲನ್ನು ನಾವು ನೋಡಬೇಕೆಂದು ಆದೇಶವಿತ್ತರು. ಅಲ್ಲಿ ಇತ್ತೀಚೆಗೆ ಕೆಲವು ಶಿಲಾಶಾಸನಗಳು ದೊರೆತಿದ್ದು, ಅವು ಹೊಯ್ಸಳ ರಾಜ ವೀರಸೋಮೇಶ್ವರನ ಕಾಲದ್ದಾಗಿದೆ ಎಂದರು. ಅದರಲ್ಲಿ ಕಣ್ಣಾನೂರಿನಲ್ಲಿ ಕಟ್ಟಿಸಿದ ಪೊಯ್ಸಳೇಶ್ವರ ದೇವಾಲಯಕ್ಕೆ ಅನೇಕ ಗ್ರಾಮಗಳನ್ನು



11th_Kannada_Reader_Final_16-07-2018.indd 49 16-07-2018 18:42:57

ದತ್ತಿ ಕೊಟ್ಟದ್ದಾಗಿ ಹೇಳಿರುವ ಮಾಹಿತಿ ಇರುವುದಾಗಿ ತಿಳಿಸಿದರು.

'ನೀವು ಕಣ್ಣಿನ ಡಾಕ್ಟರ್. ಪುರಾತನ ಚರಿತ್ರೆ, ಶಿಲ್ಪ, ಶಾಸನ ಇವುಗಳ ಬಗ್ಗೆ ನಿಮಗೆ ಆಸಕ್ತಿ ಹೇಗೆ ಬಂತು ?' ಶಾಂತಪ್ಪ ಕುತೂಹಲದಿಂದ ಕೇಳಿದರು.

'ಇದೊಂದು ಹವ್ಯಾಸ ಅಷ್ಟೆ! ಕಣ್ಣಿನ ಪರೀಕ್ಷೆ ಮಾಡುವುದರ ಜೊತೆಗೆ ಶಿಲಾಶಾಸನಗಳ ಪರೀಕ್ಷೆಯನ್ನೂ ಮಾಡುತ್ತೇನೆ'

ಡಾಕ್ಟರ್ ಕಲೈಕೋವನ್‌ರಿಗೆ ವಿದಾಯ ಹೇಳಿ ತಿರುವನ್ನಾ ಕೋವಿಲ ಕಡೆಗೆ ಪ್ರಯಾಣ ಬೆಳೆಸಿದೆವು. ದಾರಿಯಲ್ಲಿ ಶಂಕರ್ ಹೇಳಿದರು : 'ಹೊಯ್ಸಳರು ಕರ್ನಾಟಕದಿಂದ ಇಷ್ಟು ದೂರ ಬಂದು ರಾಜ್ಯ ಆಳಿದರೆಂದಾಗ ನನಗೆ ನಂಬಲಸಾಧ್ಯವಾಯಿತು. ಈಗ ನಮ್ಮವರೇ ಆದ ಡಾ. ಕಲೈಕೋವನ್ ಅವರ ಮಾತುಗಳನ್ನು ಕೇಳಿ ಆಶ್ಚರ್ಯವಾಯಿತು. ನಿಜವಾಗಿಯೂ ಹೊಯ್ಸಳರು ಧನ್ಯರು... ಹೌದು! ತಮಿಳುನಾಡಿಗೆ ಹೊಯ್ಸಳರು ಯಾಕೆ ಬಂದರು. ಅವರಲ್ಲಿ ಮೊದಲಿಗರು ಯಾರು ?'

ಅವರ ಪ್ರಶ್ನೆಗೆ ಉತ್ತರವಾಗಿ ನಾನು ಹೊಯ್ಸಳರ ತಮಿಳುನಾಡಿನ ದಂಡಯಾತ್ರೆಯ ವಿಷಯ ವಿವರಿಸತೊಡಗಿದೆ.

### ಕೃತಿ–ಕರ್ತೃ ಪರಿಚಯ

ಶ್ರೀ. ಎ.ಎಸ್. ನಟರಾಜ್ ಅವರು ಐತಿಹಾಸಿಕ ಪ್ರವಾಸ ಕೈಗೊಂಡು ಆ ಮೂಲಕ ಐತಿಹಾಸಿಕ ವಿಷಯಗಳನ್ನು ಸಂಶೋಧಿಸಿ ಪ್ರವಾಸ ಲೇಖನಗಳನ್ನು ಬರೆಯುವಲ್ಲಿ ಬಹಳ ನಿಷ್ಣಾತರು. ಕರ್ನಾಟಕದ ದೊರೆಗಳು ಕರ್ನಾಟಕವನ್ನು ಬಿಟ್ಟು ಹೊರ ರಾಜ್ಯಗಳಲ್ಲಿ ತಮ್ಮ ಆಳ್ವಿಕೆಯನ್ನು ವಿಸ್ತರಿಸಿ, ಆ ರಾಜ್ಯಗಳ ಸಂಸ್ಕೃತಿಯನ್ನು ಬೆಳೆಸುತ್ತಾ, ಜೊತೆಗೆ ತಮ್ಮ ತಾಯ್ನಾಡಿನ ಸಂಸ್ಕೃತಿಯನ್ನು ಉಳಿಸಿಕೊಳ್ಳುತ್ತಾ ಆಡಳಿತ ನಡೆಸಿರುವರು. ಬಿಹಾರ, ನೇಪಾಳ, ತಮಿಳುನಾಡು, ಬಂಗಾಳ ಮೊದಲಾದೆಡೆಗಳಲ್ಲಿ ತಮ್ಮ ಆಡಳಿತವನ್ನು ನಡೆಸಿ, ಕನ್ನಡದ ಖ್ಯಾತಿಯನ್ನು ದೇಶದ ಉದ್ದಗಲಕ್ಕೂ ಪಸರಿಸಿರುವರು. ಪ್ರಸ್ತುತ ಲೇಖಕರು ಮಿಥಿಲಾ, ಸೇನಾ, ಹೊಯ್ಸಳ ಮನೆತನಗಳ ಚರಿತ್ರೆಯನ್ನು ಸಂಶೋಧಿಸಿ ಹೊರ ರಾಜ್ಯಗಳ ಜನತೆಗೆ ಸಾಂಸ್ಕೃತಿಕವಾಗಿ ಇವರು ನೀಡಿರುವ ಕೊಡುಗೆಗಳನ್ನು ತಮ್ಮ ಪ್ರವಾಸ ಕಥನದಲ್ಲಿ ವಿವರಿಸಿದ್ದಾರೆ. ಪ್ರಸ್ತುತ 'ತಮಿಳುನಾಡಿನಲ್ಲಿ ಹೊಯ್ಸಳರು' ಎಂಬ ಪಾಠವನ್ನು 'ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು' ಎಂಬ ಇವರ ಪ್ರವಾಸ ಕಥನದಿಂದ ಆರಿಸಲಾಗಿದೆ.

### ಕಠಿಣ ಪದಗಳ ಅರ್ಥ

ಪೂರ್ವಿಕರು–ಹಳಬರು, ಕುರುಹು–ಸುಳುಹು, ಗುರುತು; ಅರಿವು–ತಿಳಿವಳಿಕೆ; ಕೋಯಿಲ್–ದೇವಾಲಯ; ಅವಲೋಕಿಸು–ನೋಡುವುದು, ಪರಿಶೀಲಿಸು; ಕಸಿವಿಸಿ–ಸಂಕಟ, ಕಳವಳ; ತೀಕ್ಷ್ಣ–ಹರಿತ; ಆಗಂತುಕ–ಅನಿರೀಕ್ಷಿತವಾಗಿ ಬಂದವ, ಅತಿಥಿ; ದಾರಿಹೋಕ–ದಾರಿಯಲ್ಲಿ ನಡೆದು ಹೋಗುವವನು, ಅಲೆಮಾರಿ, ಪ್ರಯಾಣಿಕ; ಎಂಗೆ–ಎಲ್ಲಿ; ಅಪೂರ್ವ–ಆಶ್ಚರ್ಯಕರವಾದ; ಅನುಚರ–ಸೇವಕ; ಚತುರಸ–ಚೌಕ; ಕಲ್ಯಾಣಿ–ಕೊಳ; ಅಟ್ಟಣಿಗೆ–ಎತ್ತರದ ವೇದಿಕೆ; ನಕ್ಷೆ–ಭೂಪಟ, ನಕಾಶೆ; ದಿವಾನಖಾನೆ–ಪಡಸಾಲೆ; ಆಲೋಚನಾ ಮಂದಿರ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ವೀರ ಸೋಮೇಶ್ವರನು ಯಾವ ಪ್ರಾಂತ್ಯವನ್ನು ಆಳುತ್ತಿದ್ದನು ?
2. ಹೊಯ್ಸಳರ ರಾಜಧಾನಿ ಕಣ್ಣಾನೂರು ಎಲ್ಲಿದೆ ?
3. ಅವಳಿ ಊರುಗಳು ಯಾವುವು ?
4. ಭೋಜೇಶ್ವರ ದೇವಾಲಯ ಎಷ್ಟು ವರ್ಷ ಹಳೆಯದು ? ಅದನ್ನು ಯಾರು ಕಟ್ಟಿಸಿದರು?
5. ಶಂಕರ್ ಶಿಲಾಶಾಸನವನ್ನು ಓದುತ್ತಾ ಹುಯಿಲೆಬ್ಬಿಸಿದ್ದೇಕೆ ?
6. ಲೇಖಕರ ಮನಸ್ಸು ಹುಚ್ಚೆದ್ದು ಕುಣಿದದ್ದೇಕೆ ?
7. ಧಾರಾಲಿಂಗವೆಂದು ಯಾವುದನ್ನು ಕರೆಯುತ್ತಾರೆ ?
8. ಮಹಾಮಂಟಪ ಏನನ್ನು ಹೊಂದಿರುತ್ತದೆ ?
9. ಶ್ರೀವೇಣುಗೋಪಾಲ ಸ್ವಾಮಿಯ ಗುಡಿಯನ್ನು ಯಾರು ಕಟ್ಟಿಸಿದರು ?



11th_Kannada_Reader_Final_16-07-2018.indd 50 16-07-2018 18:42:57

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಶ್ರೀರಂಗಂ ನಗರದ ವಿಶೇಷತೆಗಳೇನು ?
2. ಸಮಯಪುರಂ ಊರನ್ನು ಹೇಗೆ ತಲುಪಿದರು ?
3. ಶಂಕರ್ ಅವರ ಆನಂದಕ್ಕೆ ಕಾರಣವೇನು ?
4. ದೇವಾಲಯದಲ್ಲಿದ್ದ ಲಿಂಗದ ವೈಶಿಷ್ಟ್ಯವೇನು ?
5. ಲೇಖಕರು ಹೊಯ್ಸಳ ರಾಜರಿಗೆ ಅನಂತ ಪ್ರಣಾಮಗಳನ್ನು ಏಕೆ ಅರ್ಪಿಸಿದರು ?
6. ಡಾ.ಕಲೈಕೋವನ್ ಅವರ ಕುರಿತು ಪೂಜಾರಿಯು ಏನೆಂದು ಹೇಳಿದರು ?
7. ಡಾ.ಕಲೈಕೋವನ್ ಅವರು ಹೊಯ್ಸಳರ ಕುರಿತು ಏನೆಂದರು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಬೆಂಗಳೂರಿನಿಂದ ತಿರುಚ್ಚಿಗೆ ಬರುವ ಹಾದಿಯಲ್ಲಿ ಲೇಖಕರು ಏನೇನನ್ನು ಕಂಡರು ?
2. ಆಗಂತುಕನು ತಿಳಿಸಿದ ಭೋಜೇಶ್ವರ ದೇವಾಲಯದ ವಿಶೇಷತೆಗಳನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.
3. ಗುಡಿಯ ಮೇಲ್ವಿಚಾರಕ ಹಾಗೂ ಶಂಕರ್ ಅವರ ನಡುವೆ ನಡೆದ ಸಂಭಾಷಣೆಯನ್ನು ಬರೆಯಿರಿ.
4. ಹೊಯ್ಸಳೇಶ್ವರ ಗುಡಿಯ ವಿಶೇಷತೆಗಳನ್ನು ಕುರಿತು ಬರೆಯಿರಿ.
5. ಹೊಯ್ಸಳೇಶ್ವರ ಗುಡಿಯ ಮಹಾಮಂಟಪದ ಸೌಂದರ್ಯವನ್ನು ವಿವರಿಸಿರಿ.
6. ಕ್ರಿ.ಶ. 1372–73ರ ಶಿಲಾಶಾಸನವು ದೇವಸ್ಥಾನದ ಕುರಿತು ಏನು ಹೇಳುತ್ತದೆ ?
7. ಶ್ರೀವೇಣುಗೋಪಾಲ ಸ್ವಾಮಿ ಗುಡಿಯ ಕುರಿತು ತಿಳಿದು ಬರುವ ವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.
8. ಡಾ.ಕಲೈಕೋವನ್ ಅವರ ಕುರಿತು ಕಿರುಪರಿಚಯ ನೀಡಿರಿ.

## ಭಾಷಾಭ್ಯಾಸ

**1. ಈ ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ.**

ಕುರುಹು, ಮಾರ್ಗದರ್ಶನ, ಆಹ್ವಾನ, ನೂಕುನುಗ್ಗಲು, ಕನಿಕರ, ಕಸಿವಿಸಿ, ಕಾತರತೆ, ಕಲಾತ್ಮಕ, ಕೂಲಂಕಷ, ವಿನ್ಯಾಸ.

**2. ಈ ಕೆಳಕಂಡ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಪ್ರಸಿದ್ಧ, ಸ್ನೇಹಿತ, ಪ್ರಾಚೀನ, ಆಸಕ್ತಿ, ಸ್ವಲ್ಪ, ಪ್ರಶ್ನೆ, ತಂಪು, ನಗು, ಆಸೆ, ಜ್ಞಾನ.

**3. ಕೆಳಗಿನ ಪದಗಳ ತತ್ಸಮ ತದ್ಭವಗಳನ್ನು ಬರೆಯಿರಿ.**

ಆಶ್ಚರ್ಯ, ಸಂತಸ, ಶ್ರೀ, ಮುಖ, ಕಾರ್ಯ, ಸಂಜೆ, ಶೃಂಗಾರ, ರಾಜ, ಸ್ನೇಹ, ವೀರ.

**4. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ..**

ಸೋಮೇಶ್ವರ, ಕವಲೊಡೆದು, ಮಾರಿಯಮ್ಮ, ವಿಕ್ರಮಾದಿತ್ಯ, ಗೋಲಾಕಾರ, ಜೀರ್ಣೋದ್ಧಾರ, ಓಡೋಡಿ, ವರ್ಣಾಲಂಕಾರ, ಅತ್ಯಾನಂದ, ದೇವಾಲಯ.

**5. ಕೆಳಗಿನ ಪದಗಳನ್ನು ವಿಂಗಡಿಸಿ ಬರೆದು ಸಮಾಸದ ಹೆಸರನ್ನು ತಿಳಿಸಿ..**

ಹೆದ್ದಾರಿ, ಹಳೆಗನ್ನಡ, ಹೊಯ್ಸಳೇಶ್ವರ, ಹೆಬ್ಬಾಗಿಲು, ಇಕ್ಕಟ್ಟು, ಮುಂಭಾಗ, ನವರಂಗ, ದೇವಾಲಯ, ವೇಣುಗೋಪಾಲ, ನಾಗಪದ್ಮಗಳು.

## ಚಟುವಟಿಕೆ

1. ನೀವು ಯಾವುದಾದರೊಂದು ಐತಿಹಾಸಿಕ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿಯ ಅರಸರ ಆಡಳಿತ ವೈಖರಿಯ ಬಗ್ಗೆ ತಿಳಿದುಕೊಳ್ಳಿರಿ.
2. ಪುಸ್ತಕಾಲಯಕ್ಕೆ ಭೇಟಿ ನೀಡಿ ಹಲವು ಲೇಖಕರು ಬರೆದ ಪ್ರವಾಸ ಕಥನಗಳನ್ನು ಓದಿರಿ.



11th_Kannada_Reader_Final_16-07-2018.indd 51 16-07-2018 18:42:57

ಘಟಕ ಮೂರು

# ಸಮಾರಂಭಗಳ ಸಂಭ್ರಮದಲ್ಲಿ

– ಡಾ. ಪಿ.ಎಸ್.ರಾಮಾನುಜಂ




ನೀವು ಯಾವುದಾದರೂ ಊರಿನಲ್ಲಿ ಮುಖ್ಯ ವ್ಯಕ್ತಿಗಳಾಗಿದ್ದರೆ ಅಲ್ಲಿನ ಸಮಾರಂಭಗಳಲ್ಲಿ ಮುಖ್ಯ ಅತಿಥಿಯಾಗುವುದನ್ನು ತಪ್ಪಿಸಿಕೊಳ್ಳುವುದು ನಿಮ್ಮಿಂದ ಸಾಧ್ಯವಾಗುವುದಿಲ್ಲ. ಯಾವುದೋ ಸಂಸ್ಥೆ ಅಥವಾ ಇಲಾಖೆಯಲ್ಲಿ ನೀವು ಮುಖ್ಯ ವ್ಯಕ್ತಿಯಾಗಿರುವ ದೋಷದಿಂದಲೋ ಅಥವಾ ನೀವು ಹಲವು ಪುಸ್ತಕಗಳನ್ನು ಬರೆದು ಮಾರಲಾಗದೆ ಬಿದ್ದಿರುವ ಪುಸ್ತಕಗಳ ರಾಶಿಗೆ ನಿಮ್ಮ ಪುಸ್ತಕಗಳನ್ನೂ ಸೇರಿಸಿರುವ ತಪ್ಪಿನಿಂದಲೋ ನೀವು ಮುಖ್ಯ ಅತಿಥಿಗಳಾಗಿ ಕುರ್ಚಿಗೆ ಅಂಟಿಕೊಂಡು ಕುಳಿತು ಸಾವಿರಾರು ಜನರ ಅಸಹನೆಯ ದೃಷ್ಟಿಗಳನ್ನು ಎದುರಿಸಬೇಕಾಗುತ್ತದೆ.

ನೀವು ಶಾಲಾ ಕಾಲೇಜುಗಳಲ್ಲಿ ಮುಖ್ಯ ಅತಿಥಿಗಳಾಗಿ ಹೋಗಿಬಿಟ್ಟರೆ ನೀವು ಪಡೆಯುವ ಅನುಭವವು ನಿಮ್ಮನ್ನು ಒಂದೊಂದು ಸಮಾರಂಭದ ನಂತರವೂ ಹತ್ತು ವರ್ಷ ಹೆಚ್ಚು ವಯಸ್ಸಾದವರಂತೆ ಮಾಡಿಬಿಡುತ್ತದೆ. ನಿಮ್ಮ ಅನುಭವವಂತೂ ಇದ್ದಕ್ಕಿದ್ದಂತೆ ಹೆಚ್ಚಿ ಯಾವುದೇ ಕಷ್ಟ ಪರಿಸ್ಥಿತಿಯನ್ನೂ ಎದುರಿಸುವ ನಿಮ್ಮ ಸಾಮರ್ಥ್ಯದ ಮಟ್ಟವನ್ನು ಹೆಚ್ಚಿಸುತ್ತದೆ. ನಮ್ಮ ನಿಮ್ಮ ವ್ಯಕ್ತಿತ್ವದ ಓರೆಕೋರೆಗಳನ್ನು ಸರಿಪಡಿಸಿಕೊಳ್ಳಲು ಅಥವಾ ಗುರುತಿಸಿಕೊಳ್ಳಲು ಇಂತಹ ಅನುಭವಗಳು ಅವಶ್ಯಕ.

ನಾನು ಇಂತಹ ಅನೇಕ ಸಂದರ್ಭಗಳಿಗೆ ಬಲಿಯಾಗಿದ್ದೇನೆ. 'ನೀವು ಬಂದೇ ಬರಬೇಕು ಸಾರ್. ನಿಮ್ಮನ್ನೇ ಕರೆಯಬೇಕೆಂದು ನಾವು ಸರ್ವಾನುಮತದಿಂದ ತೀರ್ಮಾನಿಸಿಬಿಟ್ಟಿದ್ದೇವೆ. ನೀವೇ ಈ ಸಮಾರಂಭಕ್ಕೆ ಸರಿಯಾದವರು ಸಾರ್. ಎರಡು ಮೂರು ವರ್ಷಗಳಿಂದ ನಿಮ್ಮನ್ನು ಕರೆಯಬೇಕೆಂದಿದ್ದು ಸಾಧ್ಯವಾಗದೆ ಈ ಸಲ ತಮ್ಮನ್ನೇ ಕರೆಯಬೇಕೆಂದು ಮನಸ್ಸು ಮಾಡಿದ್ದೇವೆ. ತಾವು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಳ್ಳಬೇಕು ಸಾರ್' ಎಂಬ ಮಧುರ ಮಾತುಗಳಿಗೆ ಮರುಳಾಗಿ, ಇದೇ ಮಾತುಗಳನ್ನು ಅವರು ಎಲ್ಲರಿಗೂ ಹೇಳಿರುತ್ತಾರೆಂಬ ವಿಷಯದ



11th_Kannada_Reader_Final_16-07-2018.indd 52 16-07-2018 18:42:57

ಪರಿಜ್ಞಾನವಿಲ್ಲದೆ ಒಪ್ಪಿಕೊಂಡು ಬಲಿಗಂಬದ ಬಳಿಗೆ ಹೋಗುವ ಪ್ರಾಣಿಯಂತೆ ಸಮಾರಂಭಕ್ಕೆ ಹೋಗಿ ಸೇರಿಕೊಳ್ಳುತ್ತೇನೆ. ಅಲ್ಲಿ ನನ್ನಂತೆಯೇ ಅನೇಕ ಮುಖ್ಯ ವ್ಯಕ್ತಿಗಳು ಅದೇ ಮರುಳು ಮಾತಿಗೆ ಬಲಿಯಾಗಿ ಬಂದಿರುವುದನ್ನು ನೋಡುತ್ತೇನೆ. ಅವರಿಗೂ ನನ್ನದೇ ಅನುಭವವಾಗಿರುವುದರಿಂದ ಪರಸ್ಪರ ಪೆಚ್ಚು ನಗೆ ಬೀರಿ ಒಂದು ವೈರಾಗ್ಯ ಭಾವದಿಂದ ವೇದಿಕೆಯ ಮೇಲೆ ಸಾಲಾಗಿ ಹಾಕಿರುವ ಕುರ್ಚಿಗಳಲ್ಲಿ ಶಾಲೆಯ ಹುಡುಗರಂತೆ ಕುಳಿತುಕೊಳ್ಳಬೇಕಾಗುತ್ತದೆ. ಅಲ್ಲಿ ಸೇರಿದ ಮೇಲೆ ಏನೂ ಮಾಡುವಂತಿಲ್ಲ. ವ್ಯವಸ್ಥಾಪಕರು ಹೇಳಿದಂತೆ ಕೇಳುವುದಷ್ಟೇ ಉಳಿಯುವುದು. ಅಲ್ಲಿಯ ಸನ್ನಿವೇಶಕ್ಕೆ ವಶರಾಗಿ ನಾವು ಆ ಸಮಾರಂಭವನ್ನು ಅನುಭವಿಸಬೇಕು.

ಸಮಾರಂಭದಲ್ಲಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ವಿಚಾರವೂ ಪ್ರಯಾಸಕರವೇ. ಅದು ಅಷ್ಟು ಸುಲಭವಾದುದೇನಲ್ಲ. ಸಾಲಾಗಿ ಹಾಕಿರುವ ಕುರ್ಚಿಗಳನ್ನು ನೋಡಿ ನಡುವಿನಲ್ಲಿ ಮಧ್ಯಭಾಗದಲ್ಲಿ ರಾರಾಜಿಸುತ್ತಿರುವ ಕುರ್ಚಿಯಲ್ಲಿ ನಮ್ಮನ್ನು ಕುಳ್ಳಿರುಸುತ್ತಾರೆಂದು ನಾವು ಪ್ರತಿಯೊಬ್ಬರೂ ನಿರೀಕ್ಷಿಸುತ್ತಾ ನಿಂತಿರುವಾಗ ಯಾರೋ ಒಬ್ಬರು ಅದರಲ್ಲಿ ಕುಳಿತು ನಮ್ಮನ್ನು ನಿರಾಸೆಗೊಳಿಸುತ್ತಾರೆ. ವ್ಯವಸ್ಥಾಪಕರೊಲ್ಲೊಬ್ಬರು ಅಂದರೆ ನಮಗೆ ಪರಿಚಯವಿಲ್ಲದವರು ಬಂದು, 'ನೀವು ಮುಖ್ಯ ಅತಿಥಿಗಳೇ' ಎಂಬ ಪ್ರಶ್ನೆಯನ್ನು ಬೇರೆ ಕೇಳಿ ಮೊದಲೇ ಬಾಡಿ ಹೋಗಿರುವ ಮುಖವನ್ನು ಮತ್ತಷ್ಟು ಬಾಡಿಸುತ್ತಾರೆ. ಅಷ್ಟು ಜನ ಮುಖ್ಯ ಅತಿಥಿಗಳನ್ನೂ ಹೇಗಪ್ಪಾ ಕೂರಿಸುತ್ತಾರೆ, ಎಂಬ ಯೋಚನೆಯಲ್ಲೋ ಅವರೇ ನಮ್ಮನ್ನು ಕೂರಿಸಲಿ ಎಂಬ ಬಿಂಕದಿಂದಲೋ ನಾವು ನಿಂತೇ ಇದ್ದರೆ ಅಲ್ಲಿರುವ ಕುರ್ಚಿಗಳೆಲ್ಲ ಭರ್ತಿಯಾಗಿ ನಮಗೆ ಬಸ್ಸುಗಳಲ್ಲಿರುವಂತೆ ಸ್ಟ್ಯಾಂಡಿಂಗ್ ಸೀಟ್ ಎನ್ನಬಹುದಾದ ಸ್ಥಳ ಮಾತ್ರ ಸಿಗಬಹುದಾದ ಪರಿಸ್ಥಿತಿ ಇರುವುದರಿಂದ ನಾವು ಮ್ಯೂಸಿಕಲ್ ಚೇರ್ ಎಂಬ ಸಂಗೀತ ಕುರ್ಚಿಯ ಆಟದಲ್ಲಿ ಮಾಡುವಂತೆ ಕೈಗೆ ಸಿಕ್ಕಿದ ಕುರ್ಚಿಯಲ್ಲಿ ಸರಕ್ಕನೆ ಕುಳಿತು ಬಿಡಬೇಕು. ಇಲ್ಲಿ ಮಾನ ಮರ್ಯಾದೆಯ ಪ್ರಶ್ನೆ ಇರುವುದಿಲ್ಲ. ಎಲ್ಲ ಮುಖ್ಯ ಅತಿಥಿಗಳೂ ಹಾಗೆಯೇ ಮಾಡುವುದರಿಂದ ಯಾರಿಗೂ ಮಾನ ಹೋಗುವುದಿಲ್ಲ ಅಥವಾ ಉಳಿಯುವುದೂ ಇಲ್ಲ.

ವೇದಿಕೆಯಲ್ಲಿ ಕೆಲವು ಕಡೆ ಯಾರೋ ಒಬ್ಬರು ಬಂದು ನಮ್ಮನ್ನು ಕೂರಿಸುವ ಪದ್ಧತಿಯೂ ಇದೆ. ಆದರೆ ಅಲ್ಲಿ ಯೋಗ್ಯತೆಯ ಪ್ರಕಾರವಾಗಿಯಾಗಲೀ, ಎತ್ತರದ ಪ್ರಕಾರವಾಗಲೀ, ವಯಸ್ಸಿನ ಪ್ರಕಾರವಾಗಲೀ ಕೂರಿಸುವ ಪದ್ಧತಿಯಿಲ್ಲ. ಎಲ್ಲರೂ ಸಮಾನರೆಂದು ಪರಿಗಣಿಸುವುದರಿಂದ ಯಾರೂ ಯಾವ ಕುರ್ಚಿಗೆ ಹತ್ತಿರವಿರುತ್ತಾರೋ ಅವರನ್ನು ಅಲ್ಲಿ ಕೂರಿಸುತ್ತಾರೆ. ಆದರೆ ಎಲ್ಲ ಕಡೆಯೂ ಹೀಗೆ ನಡೆಯುವುದಿಲ್ಲ. ಆದ್ದರಿಂದಲೇ ಸಂಗೀತ ಕುರ್ಚಿಯ ಉಪಾಯವನ್ನು ನಾನು ಸೂಚಿಸಿರುವುದು.

ಅಂತೂ ಹೇಗೋ ಒಂದು ಕುರ್ಚಿಯನ್ನು ಸಂಪಾದಿಸಿದ ಮೇಲೆ ಮುಖ್ಯ ಅತಿಥಿಗಳಾದ ನಾವೆಲ್ಲರೂ ಸ್ವಲ್ಪ ಹೊತ್ತು ಒಬ್ಬರ ಮುಖವನ್ನು ಒಬ್ಬರು ನೋಡಿ ನಂತರ ಅಭಿವಾದನವನ್ನು ವಿನಿಮಯ ಮಾಡಿಕೊಳ್ಳುತ್ತೇವೆ. ನಾವು ವೇದಿಕೆಯಲ್ಲಿ ಕುಳಿತ ನಂತರ ನಮ್ಮ ಮುಖಗಳ ಮೇಲೆ ಬೀಳುವಂತೆ ವಿದ್ಯುದ್ದೀಪಗಳನ್ನು ಪ್ರಕಾಶಮಾನವಾಗಿ ಬೆಳಗಿಸಲಾಗುತ್ತದೆ. ಅದರಿಂದ ನಾವು ಕಣ್ಣುಗಳನ್ನು ಪೂರ್ತಿ ತೆರೆದಿಟ್ಟುಕೊಳ್ಳುವುದು ಸಾಧ್ಯವಾಗುವುದಿಲ್ಲ. ನಾವು ಚಡಪಡಿಸಿಕೊಂಡು ಅರ್ಧನಿಮೀಲಿತ ನೇತ್ರರಾಗಿ ಕುಳಿತುಕೊಂಡಿರುವುದನ್ನು ನೋಡಿ ಪ್ರೇಕ್ಷಕರು ಸಂತೋಷದಿಂದ ಚಪ್ಪಾಳೆ ತಟ್ಟುತ್ತಾರೆ ಹಾಗೂ ನಮ್ಮ ಸುಂದರ ವದನಾರವಿಂದಗಳನ್ನು ನೋಡಿ ನಮ್ಮ ಯೋಗ್ಯತೆಗಳನ್ನು ಅಳೆಯುತ್ತಾ ಕುಳಿತುಕೊಳ್ಳುತ್ತಾರೆ. ಇದು ಅನೇಕ ಮುಖ್ಯ ಅತಿಥಿಗಳಿರುವ ಸಮಾರಂಭಗಳಲ್ಲಿ ಆಗುವ ಪರಿಸ್ಥಿತಿ.

ಮುಖ್ಯ ಅತಿಥಿಗಳಾಗುವ ಯೋಗ್ಯತೆಯಿರುವವರ ಪಟ್ಟಿಯಲ್ಲಿರುವವರಿಗೆ ಮತ್ತೊಂದು ಪೇಚಿನ ಅಂದರೆ ಗರ್ವಭಂಗವಾಗುವ ಸಂದರ್ಭವಿದೆ. ಅದೆಂದರೆ ಬರಲು ಒಪ್ಪಿಕೊಂಡು ಸಮಾರಂಭಕ್ಕೆ ಆಗದವರ ಸ್ಥಾನವನ್ನು ತುಂಬುವುದು.



11th_Kannada_Reader_Final_16-07-2018.indd 53 16-07-2018 18:42:57

ವ್ಯವಸ್ಥಾಪಕರು ಯಾರನ್ನೋ ಮರುಳು ಮಾಡಿ ಒಪ್ಪಿಸಿ ಕೊನೆಯ ಗಳಿಗೆಯಲ್ಲಿ ಅವರು ಬರದೆ ಕಾರಣಾಂತರಗಳಿಂದ ಕೈಕೊಟ್ಟಾಗ ವ್ಯವಸ್ಥಾಪಕರು ಬೆಕ್ಕಿನಂತೆ ನಿಮ್ಮ ಬಳಿ ಬರುತ್ತಾ, 'ನಾಳೆ ಸಮಾರಂಭ ಇಟ್ಟುಕೊಂಡಿದ್ದೇವೆ. ಬಹಳ ಅರ್ಜೆಂಟಾಗಿ ಇಟ್ಟುಕೊಳ್ಳಬೇಕಾಯಿತು ಸರ್, ಅದಕ್ಕೆ ತಮ್ಮನ್ನೇ ಕರೆಸಬೇಕೆಂದು ಆಡಳಿತ ಮಂಡಳಿ ತೀರ್ಮಾನಿಸಿದೆ. ತಾವು ದೊಡ್ಡ ಮನಸ್ಸು ಮಾಡಿ ಬರಬೇಕು' ಎಂದು ಬೆಣ್ಣೆಯಲ್ಲಿ ಕೂದಲನ್ನು ಎಳೆದಂತೆ ನಯವಾಗಿ ಮಾತನಾಡುತ್ತಾರೆ. ಆಹ್ವಾನ ಪತ್ರಿಕೆ ಮಾಡಲು ಸಮಯವಿಲ್ಲದ ಪರಿಸ್ಥಿತಿ. ಆಹ್ವಾನ ಪತ್ರಿಕೆಯನ್ನು ವೇಳೆಗೆ ಮುದ್ರಿಸಿ ತಂದು ಬಿಡುವ ಶಕ್ತಿಯುಳ್ಳ ಜನರೂ ಇರುತ್ತಾರೆ. ನೀವು ಬೀಗಿ ಹೋಗಿ ಎಷ್ಟು ಅಕ್ಕರೆಯಪ್ಪಾ ಇವರಿಗೆ ಎಂದು ಮರುಳಾಗಿ ಒಪ್ಪಿಕೊಳ್ಳುತ್ತೀರಿ. ನೀವು ಒಪ್ಪಿಕೊಂಡ ಒಡನೆ ಅವರು ಸದ್ಯ, 'ಬೇಡಿದ ಕಾಡೊಳ್ ಮಳೆಯಾಯ್ತು' ಎಂದು ದೀರ್ಘವಾದ ನಿಟ್ಟುಸಿರು ಬಿಟ್ಟು ಸಂತೃಪ್ತರಾಗಿ ಏಳುತ್ತಾರೆ. ನೀವು ಮಾರನೆಯ ದಿವಸ ಸಮಾರಂಭಕ್ಕೆ ಹೋದಾಗ ಸ್ವಾಗತಕಾರರು ತಮ್ಮ ವಿವೇಕಗಳನ್ನು ಗಾಳಿಗೆ ತೂರಿ, 'ಇಂದು ಮುಖ್ಯ ಅತಿಥಿಗಳಾಗಿ ಶ್ರೀ..... ಅವರನ್ನು ಏರ್ಪಾಡು ಮಾಡಿದ್ದೆವು. ಅವರು ಯಾವುದೋ ಅನಾನುಕೂಲದಿಂದ ಬರಲಾಗದಿದ್ದುದರಿಂದ ಇವರನ್ನು ಕೇಳಿಕೊಂಡೆವು. ಇವರು ಕೂಡಲೇ ಸಂತೋಷದಿಂದ ಬರಲು ಒಪ್ಪಿಕೊಂಡು ಬಂದಿದ್ದಾರೆ. ಆದ್ದರಿಂದ ಅವರಿಗೆ ಸುಸ್ವಾಗತ' ಎಂದು ಒಂದು ಬಾಂಬು ಹಾಕಿ ನಿಮ್ಮ ಸಂತೋಷವನ್ನು ಹಾಳು ಮಾಡುತ್ತಾರೆ. ನೀವು ಕೇವಲ ಒಬ್ಬರ ಖಾಲಿ ಸ್ಥಾನವನ್ನು ತುಂಬಿದ ಜನ ಮಾತ್ರ ಎಂಬುದು ಸ್ಪಷ್ಟವಾಗಿ ನಿಮ್ಮ ಗರ್ವಭಂಗವಾಗುತ್ತದೆ. ನಿಮ್ಮ ತಲೆಯ ಹಿಂದೆ ನೀವೇ ರೂಪಿಸಿಕೊಂಡಿದ್ದ ಪ್ರಭಾವಲಯದ ಪ್ರಭಾವವು ಲಯವಾಗಿ ನಿಮಗೆ ಕಸಿವಿಸಿಯಾಗುತ್ತದೆ. ಸಮಾರಂಭಕ್ಕಾಗಿಯೇ ಕಾಯುತ್ತಿರುವ ವ್ಯಕ್ತಿಯೇನೋ ನೀವು ಎಂಬ ಭಾವನೆ ಜನಗಳಲ್ಲೂ ಉಂಟಾಗಿ ನಿಮ್ಮ ಪರಿಸ್ಥಿತಿ ಶೋಚನೀಯವಾಗಿ ಬಿಡುತ್ತದೆ.

ಇಷ್ಟು ಮಾನಹರಣ ಸಾಲದೆಂಬಂತೆ ಸಮಾರಂಭವು ಮುಗಿಯುವಾಗ ಧನ್ಯವಾದ ಸಮರ್ಪಣೆಗಾಗಿ ಬರುವ ಮಹನೀಯರು ಮೊದಲೇ ಬರೆದಿಟ್ಟುಕೊಂಡಿರುವ ಭಾಷಣವನ್ನು ಓದಿ ವಂದನಾರ್ಪಣೆ ಮಾಡುತ್ತಾರೆ. ಇದರಲ್ಲಿ ವಿಶೇಷವೆಂದರೆ ಇಂದು ಮುಖ್ಯ ಅತಿಥಿಯಾಗಿ ಬಂದು ನಮ್ಮೆಲ್ಲರನ್ನೂ ಉದ್ದೇಶಿಸಿ ಅಮೋಘವಾದ ಭಾಷಣವನ್ನು ಮಾಡಿದ ಶ್ರೀ.....ಯವರಿಗೆ ನಮ್ಮ ನಿಮ್ಮೆಲ್ಲರ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ ಎಂದು ಹಿಂದೆ ಬರಲು ಒಪ್ಪಿಕೊಂಡು ಬರದಿದ್ದವರ ಹೆಸರನ್ನೇ ಓದಿ ಬಿಡುತ್ತಾರೆ. ಸಿದ್ಧಪಡಿಸಿಟ್ಟ ಭಾಷಣವಾದ್ದರಿಂದ ಮುಖ್ಯ ಅತಿಥಿಗಳು ಬದಲಾಗಿರುವ ವಿಷಯವೇ ಅವರ ಗಮನಕ್ಕೆ ಬರದೆ ಹಳೆಯದನ್ನೇ ಓದಿ ನಿಮ್ಮ ಮುಖ ಕಳಾಹೀನವಾಗುವಂತೆ ಮಾಡಿಬಿಡುತ್ತಾರೆ.

ಇಂತಹ ಇಕ್ಕಟ್ಟಿನ ಸನ್ನಿವೇಶಗಳಿಂದ ಪಾರಾಗಲು ನಾನೊಂದು ಉಪಾಯ ಕಂಡುಕೊಂಡಿದ್ದೇನೆ. ನನ್ನನ್ನು ಕರೆಯಲು ಬರುವವರು ನನ್ನನ್ನು ಹೊಗಳಿ ಅಟ್ಟಕ್ಕೇರಿಸಿ ನನ್ನ ಆಗಮನದ ಅನಿವಾರ್ಯತೆಯ ಬಗ್ಗೆ ಹೇಳಿದ ಮೇಲೆ ನಾನು ಆ ಊರಿನಲ್ಲಿ ಮುಖ್ಯ ಅತಿಥಿಗಳಾಗಿ ಬರಬಹುದಾದ ಕೆಲವರ ಹೆಸರನ್ನು ನಮ್ರವಾಗಿ ಸೂಚಿಸಿ ಅವರನ್ನೇಕೆ ಕರೆಯಬಾರದು ಎಂಬ ಪ್ರಶ್ನೆಯನ್ನು ಅವರ ಮುಂದೆ ಇಡುತ್ತೇನೆ. ಆಗ ಅವರಲ್ಲೊಬ್ಬರು ರಹಸ್ಯವನ್ನು ಹೊರಗೆಡಹುತ್ತಾರೆ. 'ನಾವು ಅವರನ್ನು ಕರೆದೆವು ಸಾರ್, ಆದರೆ ಅವರಿಗೆ ಬೇರೆ ಕೆಲಸ ಇದೆಯಂತೆ' ಎಂದು ಬಿಡುತ್ತಾರೆ. 'ಓಹೋ... ನಾನೊಬ್ಬನೇ ಕೆಲಸ ಇಲ್ಲದವನು ಎಂದು ಇವರು ತಿಳಿದುಕೊಂಡಿರುವ ಹಾಗಿದೆ' ಎಂದುಕೊಂಡು ನಾನು ನಮ್ರವಾಗಿ ಅವರ ಆಮಂತ್ರಣವನ್ನು ತಿರಸ್ಕರಿಸಿ ಬಿಡುತ್ತೇನೆ. ಆ ದಿನ ಯಾರೋ ಎಲ್ಲಿಂದಲೋ ಬರುವುದಾಗಿಯೋ ಅಥವಾ ನಾನೇ ಎಲ್ಲಿಗೋ ಹೋಗಬೇಕಾಗಿದೆಯೆಂದೋ ಹೇಳಿ ತಪ್ಪಿಸಿಕೊಳ್ಳುತ್ತೇನೆ. ಈ ರೀತಿ ಉಪಾಯ ಯೋಚಿಸುವುದು ನಮ್ಮ ಮಾನರಕ್ಷಣೆಗೆ ಬಹಳ ಅವಶ್ಯಕ. ಹೋಗಲು ಇಚ್ಛಿಸದಿರುವವರು ಒಂದು ಪರ್ಯಾಯ ವ್ಯವಸ್ಥೆಯಾಗಿ ಈ ಹಂಚಿಕೆಯನ್ನು



11th_Kannada_Reader_Final_16-07-2018.indd 54 16-07-2018 18:42:57

ಹೂಡುವುದು ಶ್ರೇಯಸ್ಕರ. ಇದು ನನ್ನ ಅನುಭವಸಿದ್ಧ ಅಭಿಪ್ರಾಯ.

ನಿಮ್ಮನ್ನೇ ಮೊದಲು ಕರೆಯಲು ಬಂದವರ ಆಹ್ವಾನವನ್ನು ತಿರಸ್ಕರಿಸುವುದು ಅಷ್ಟು ಸುಲಭವಲ್ಲ. ಎಷ್ಟೋ ಸಮಾರಂಭಗಳಿಗೆ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ನಾನೂ ಒಪ್ಪಿಕೊಂಡಿದ್ದೇನೆ. ಹಾಗೆ ಒಪ್ಪಿಕೊಂಡ ಸಮಾರಂಭಗಳಲ್ಲಿ ಈವರೆಗೆ ಹೇಳಿದ ಪರಿಭವಗಳನ್ನು ಬಿಟ್ಟು ಬೇರೆ ರೀತಿಯ ಸ್ವಾರಸ್ಯಕರ ಘಟನೆಗಳೂ, ಮುಜುಗರದ ಘಟನೆಗಳೂ ಉಂಟಾಗುತ್ತವೆ. ಅವುಗಳಲ್ಲಿ ಕೆಲವಾದರೂ ನಮ್ಮ ನಿಮ್ಮ ನೆನಪಿನಲ್ಲಿ ಉಳಿಯುವ ಶಕ್ತಿಯುಳ್ಳಂತಹವು.

ಒಮ್ಮೆ ಒಂದು ಮಹಿಳಾಮಣಿಗಳ ಕಾಲೇಜಿನ ವಾರ್ಷಿಕೋತ್ಸವಕ್ಕೆ ಬರಬೇಕೆಂದು ನನ್ನನ್ನು ಆಹ್ವಾನಿಸಿದ್ದರು. 'ನೀವು ಮುಖ್ಯ ಅತಿಥಿಗಳಾಗಿ ಬಂದು ನಡೆಸಿ ಕೊಡಬೇಕು. ಹಾಗೂ ನಿಮ್ಮ ಶ್ರೀಮತಿಯವರು ಬಹುಮಾನ ವಿತರಣೆ ಮಾಡಲೇ ಬೇಕು' ಎಂದು ಪರಿಪರಿಯಾಗಿ ಕೇಳಿಕೊಂಡುದುದರಿಂದ ಹಾಗೂ 'ನೀವಿಬ್ಬರಿಲ್ಲದೆ ಈ ಸಮಾರಂಭಕ್ಕೆ ಕಳೆಯೇ ಇಲ್ಲ' ಎಂದೆಲ್ಲ ಹೇಳಿದುದರಿಂದ ನಾನು ಒಪ್ಪಿಕೊಂಡು ನನ್ನ ಮಹಿಳಾಮಣಿಯನ್ನೂ ಒಪ್ಪಿಕೊಳ್ಳಲು ಹೇಳಿದೆ. ಮೊದಲು ನನ್ನವಳು ಸ್ವಲ್ಪ ಹೊತ್ತು 'ಗುರ್‌ರ್...' ಎಂದು ಸ್ವಲ್ಪ ಹೊತ್ತು ಗುರುಗುಟ್ಟಿ ಬರಲು ಒಪ್ಪಿಕೊಳ್ಳದಿದ್ದರೂ, ಕೊನೆಗೆ ನಾನು ಹೋಗಲು ಒಪ್ಪಿರುವುದು ಮಹಿಳಾ ಕಾಲೇಜು ಎಂದು ಜ್ಞಾಪಿಸಿದ ತಕ್ಷಣವೇ ತನ್ನ ನಿರ್ಧಾರವನ್ನು ಬದಲಿಸಿ, ನನ್ನೊಡನೆ ಬರಲು ತಯಾರಾದಳು.

ನಾವಿಬ್ಬರೂ ಸಮಾರಂಭಕ್ಕೆ ಆ ಕಾಲೇಜಿಗೆ ಹೋದಾಗ ನಮ್ಮ ಪರಿಸ್ಥಿತಿಯ ಅರಿವಾಯಿತು. ವಾರ್ಷಿಕೋತ್ಸವದ ಆ ಸಂದರ್ಭಕ್ಕೆ ನಾನಾ ರೀತಿಯ ಆಧುನಿಕ ವೇಷಭೂಷಣಗಳಲ್ಲಿ ಲಲನೆಯರು ಹಾಡುತ್ತಾ ಕುಣಿಯುತ್ತಾ ಇಡೀ ವಾತಾವರಣವನ್ನೇ ನಿರಂಕುಶವನ್ನಾಗಿ ಮಾಡಿ ಬಿಟ್ಟಿದ್ದರು. ನನ್ನವಳು ಅದನ್ನೆಲ್ಲ ನೋಡಿ ದಂಗಾಗಿ ಹೋದಳು. ಅಲ್ಲಿ ನಾವು ಮುಖ್ಯ ಅತಿಥಿಗಳೆಂಬ ಗರ್ವ ಭಗ್ನವಾಗಿ ಹೋಯಿತು. ಹುಡುಗರ ಕಾಲೇಜಿಗಿಂತ ಭಿನ್ನವಾಗಿ, ನಾವು ಹೇಳಿದ್ದನ್ನು ಕೇಳುವ ಅಬಲೆಯರು ತಾನೇ ಎಂಬ ನಮ್ಮ ಕಲ್ಪನೆ ತಲೆಕೆಳಗಾಗಿ ಹೋಯಿತು. ನಾವೆಲ್ಲ ಬಲೆಯೊಳಗೆ ಸಿಕ್ಕ ಮೀನುಗಳಂತಾಗಿ ಹೋದೆವು.

ಕೆಲವು ಹುಡುಗಿಯರು ನಮ್ಮನ್ನು ನೋಡಿ ತಮಾಷೆ ಮಾಡಿಕೊಂಡರು. ಅವರು ಖಂಡಿತ ನನ್ನ ಆರಡಿ ಎರಡಿಂಚು ಎತ್ತರದ ಬಗ್ಗೆ ಹಾಗೂ ನನ್ನವಳಿಗೂ ನನಗೂ ಇರುವ ಕೇವಲ ಒಂದಡಿ ವ್ಯತ್ಯಾಸದ ಬಗ್ಗೆಯೂ ಹಾಸ್ಯ ಮಾಡಿಕೊಂಡಿರುತ್ತಾರೆ. 'ನನ್ನವಳಂತೂ ಸಿಟ್ಟಾಗಿ ಇವರಿಗೆಲ್ಲ ಏಳಡಿ ಇರುವ ಗಂಡಂದಿರು ಸಿಕ್ಕಲಿ' ಎಂದು ಶಪಿಸಿಯೇ ಬಿಟ್ಟಳು.

ಅಂದು ಇಡೀ ಪ್ರಪಂಚದಲ್ಲಿರುವ ಮಹಿಳಾ ಪತ್ರಿಕೆಗಳಲ್ಲಿ ಕಂಡು ಬರುವ ವರ್ಣಮಯ ಚಿತ್ರಗಳಲ್ಲಿರುವ ಎಲ್ಲ ಫ್ಯಾಷನ್‌ಗಳೂ ಏಕತ್ರ ಕೇಂದ್ರೀಕೃತವಾಗಿ ಆ ಕಾಲೇಜಿನಲ್ಲಿ ಕಂಡು ಬರುತ್ತಿದ್ದವು. ನಮ್ಮ ದೇಶದ ವೇಷಭೂಷಣಗಳ ವಿವಿಧತೆ ಹಾಗೂ ಆ ವಿವಿಧತೆಯಲ್ಲಿನ ಏಕತೆ ಇವೆಲ್ಲ ಅಲ್ಲಿ ರಾರಾಜಿಸುತ್ತಿತ್ತು.

ಅಲ್ಲಿನ ವಾತಾವರಣವನ್ನು ನೋಡಿದಾಗ ಅಂದು ವೇದಿಕೆಯ ಮೇಲೆ ಭಾಷಣ ಮುಂತಾದವುಗಳನ್ನೊಳಗೊಂಡ ಕಾರ್ಯಕ್ರಮ ಇದೆ ಎಂಬುದೊಂದು ವಿಷಯವೇ ಯಾರ ಗಮನದಲ್ಲೂ ಇದ್ದಂತೆ ಕಾಣಲಿಲ್ಲ. ಪ್ರಿನ್ಸಿಪಾಲ್ ಎಂದು ಕರೆಸಿಕೊಳ್ಳುವ ಬಡಪಾಯಿ ಮಹನೀಯರು ಮುಖದಲ್ಲಿ ಬೆವರು ಸುರಿಸಿಕೊಂಡು ಏನು ಮಾಡಬೇಕೆಂದು ತಿಳಿಯದೆ ನಮ್ಮನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗಿ ಬಿಟ್ಟು ಕೊನೆಗೆ ಹೇಗೋ ವೇದಿಕೆಯ ಮೇಲಕ್ಕೆ ತಂದು ಸೇರಿಸಿದರು. ಪ್ರಮೀಳಾ ರಾಜ್ಯವೆಂದರೆ ಇದೇ ಇರಬೇಕು ಎಂದುಕೊಂಡು, ಮೆಲ್ಲನೆ ನನ್ನವಳನ್ನು ಕಡೆಗಣ್ಣಿನಿಂದ ನೋಡಿದೆ. ಆಕೆಯೋ ಶತ್ರುರಾಜ್ಯಕ್ಕೆ ಹಾದಿ ತಪ್ಪಿ ಬಂದು ಬಿಟ್ಟ ವ್ಯಕ್ತಿಯಂತೆ ಒಂದು ವಿಧವಾದ ಆತಂಕದಿಂದ ಕುಳಿತಿದ್ದುದನ್ನು ನೋಡಿದೆ.



11th_Kannada_Reader_Final_16-07-2018.indd 55 16-07-2018 18:42:57

ಈ ಸಮಾರಂಭದಲ್ಲಿ ವೇದಿಕೆಯ ಮೇಲೆ ಕೂರಲು ಯಾವ ಕಷ್ಟವೂ ಇರಲಿಲ್ಲ. ಒಬ್ಬೊಬ್ಬರಿಗೆ ಎರಡೆರಡು ಕುರ್ಚಿಗಳಂತೆ ಲೆಕ್ಕ ಮಾಡಿ ಹಾಕಿದ್ದರು. ಇದು ಅವರ ಸೌಜನ್ಯವನ್ನೂ, ಅತಿಥಿ ಸತ್ಕಾರದ ಗುಣವನ್ನೂ ತೋರಿಸುತ್ತದೆ. ನನ್ನ ಎಡಗಡೆ 'ವಾಮೇ ಭೂಮಿಸುತಾ' ಎಂಬಂತೆ ನನ್ನವಳೂ, ಬಲಗಡೆ ಸೂಕ್ಷ್ಮವಾಗಿ ಕಂಪಿಸುತ್ತಿದ್ದ ಪ್ರಿನ್ಸಿಪಾಲರೂ ಕುಳಿತಿದ್ದರು. ಆ ಕಡೆ ಮಾತ್ರ ವಿದ್ಯಾರ್ಥಿನಿಯ ಸಂಘದ ಅಧ್ಯಕ್ಷೆ ಮತ್ತು ಇನ್ನೊಬ್ಬರು.

ಸಮಾರಂಭ ಪ್ರಾರಂಭವಾಯಿತು. ಅಂದು ಭಾಷಣಗಳ ನಂತರ ಸಾಂಸ್ಕೃತಿಕ ಕಾರ್ಯಕ್ರಮವಿತ್ತು. ಅದಕ್ಕಾಗಿ ಸಿದ್ಧತೆಯೂ ನಡೆದಿತ್ತು. ಎಲ್ಲರ ದೃಷ್ಟಿಯೂ ಅವುಗಳ ನಿರೀಕ್ಷೆಯಲ್ಲೇ! ಅಂತೂ ಹೇಗೋ ಕಾರ್ಯಕ್ರಮಗಳು ಪ್ರಾರಂಭವಾಗಿ, ಮೊದಲು ಸ್ವಾಗತ ಭಾಷಣವಾಗಿ ನಂತರ ಹಲವೇ ಪುಟಗಳ ವರದಿಗಳೂ, ಸಂದೇಶಗಳೂ ಇತ್ಯಾದಿಗಳನ್ನು ಓದಿಯಾದ ಮೇಲೆ ಬಹುಮಾನ ವಿತರಣೆ ನನ್ನವಳಿಂದ ಆಯಿತು. ಕೊನೆಗೆ ನನ್ನ ಭಾಷಣದ ಸರದಿ ಬಂದಿತು. ನನ್ನ ಮಡದಿ ಆತಂಕಪೂರ್ಣ ಕಣ್ಣುಗಳಿಂದ ನನ್ನನ್ನೇ ನೋಡುತ್ತಿದ್ದಳು. 'ಏನೇನು ಮಾತನಾಡಿ ಬಿಡುತ್ತದೆಯೋ ಈ ಪ್ರಾಣಿ' ಎಂದು. 'ನೋಡಲಿ ಬಿಡಿ, ನನಗೇನು ಹೆದರಿಕೆ!' ನಾನು ಎದ್ದು ನಿಂತು, 'ಸಮಾರಂಭದ.....' ಎಂದು ಪ್ರಾರಂಭಿಸಿದ್ದೇ ತಡ ವಿದ್ಯಾರ್ಥಿನಿಯರ ದೊಡ್ಡ ಗುಂಪೊಂದು 'ನೋ... ನೋ...' ಎಂದು ಕೂಗಲು ಪ್ರಾರಂಭಿಸಿತು. 'ಎಲಾ ಇವರ... ಏನು ನೋ...? ಎನ್ನುತ್ತಿದ್ದಾರಲ್ಲ' ಎಂದು ಕೊಂಡು, 'ಏನಮ್ಮಾ ನೋ...?' ಎಂದೆ. 'ನೋ ಸ್ಪೀಚ್...' ಎಂದು ತಾಳ ಹಾಕುತ್ತಾ ಆ ಕೂಗಿಗೆ ಸಭೆ ಕುಣಿಯತೊಡಗಿತು. ಅವರಿಗೆ ಭಾಷಣ ಬೇಡವಂತೆ. ಹುಡುಗರ ಕಾಲೇಜಿನಲ್ಲಿ ಅದೂ ಕೆಲವು ಕಾಲೇಜುಗಳಲ್ಲಿ ಮಾತ್ರ ಇದನ್ನು ನಿರೀಕ್ಷಿಸಿದ್ದ ನಾನು ಇವರ ದಾಷ್ಟ್ಯಕ್ಕೆ ಅವಾಕ್ಕಾದೆ. ಆದರೆ ತಕ್ಷಣ ಸಂಭಾಳಿಸಿಕೊಂಡು ಹೇಳಿದೆ. 'ನೋಡೀಮ್ಮಾ, ನಾನು ಮಾತನಾಡುವುದಕ್ಕೇ ಬಂದಿರುವುದು. ಮಾತಾಡೇ ಆಡ್ತೀನಿ. ನೀವು ಇಂಗ್ಲಿಷ್‌ನಲ್ಲಿ ನೋ ನೋ ಎಂದರೂ ನಾನು ಕನ್ನಡದಲ್ಲಿ ಭಾಷಣ ಮಾಡೇ ಮಾಡ್ತೀನಿ' ಅಂದೆ. ಅದಕ್ಕೆ ಆ ಹುಡುಗಿಯರ ಗುಂಪು ಮತ್ತೆ ಮತ್ತೆ 'ನೋ ನೋ...' ಎಂದು ಕೂಗಿತು. ನಾನೆಂದೆ : 'ಇಲ್ಲಿ ಸ್ವಲ್ಪ ಕೇಳಿ, ಒಂದು ರಹಸ್ಯ ಹೇಳ್ತೀನಿ... ಅದನ್ನು ಕೇಳ್ತೀರಾ' ಎಂದೆ. ಅದನ್ನು ಕೇಳಿ ಆ ಗುಂಪು, 'ಹೇಳಿ, ಬೇಗ ಹೇಳಿ' ಎಂದಿತು. ನಾನು, 'ನೋಡಿ, ಇಲ್ಲಿ ನನ್ನ ಶ್ರೀಮತಿಯವರು ಬಂದಿದ್ದಾರೆ. ನೋಡೀಮ್ಮಾ... ಮನೇಲಿ ಅವರೇ ಮಾತಾಡೋದು. ನಾನು ಬರೀ ಕೇಳೋದು ಅಷ್ಟೆ. ನಾನಂತೂ ಅಲ್ಲಿ ಮಾತಾಡೋ ಹಾಗಿಲ್ಲ. ಅವಕಾಶವೇ ಇಲ್ಲ ಅನ್ನಿ. ಆದರೆ ಇಲ್ಲಿ ಒಂದು ಅವಕಾಶ ಸಿಕ್ಕಿದೆ ನನಗೆ. ನಾನು ಇಲ್ಲಿ ಮಾತಾಡಬೇಕು, ಇವರು ಅದನ್ನು ಕೇಳಬೇಕು ಅಂತ ಪ್ರತೀಕಾರ ಮಾಡೋಕ್ಕೆ ಬಂದಿದ್ದೀನಿ. ಆ ಅವಕಾಶವನ್ನು ನೀವು ನನ್ನಿಂದ ಕಸಿದುಕೊಳ್ಳಬೇಡಿ. ನೀವು ನನಗೆ ಸ್ವಲ್ಪ ಸಹಾಯ ಮಾಡ್ತೀರಾ' ಎಂದೆ. ಇದು ಪ್ರಭಾವ ಬೀರಿತೆಂದು ಕಾಣುತ್ತದೆ. ಆ ವಿದ್ಯಾರ್ಥಿನಿಯರು 'ಪಾಪ ಕಣೆ! ಮಾತಾಡ್ಲಿ ಬಿಡೆ...' ಅಂತಲೋ ಏನೋ ಪರಸ್ಪರ ತಮ್ಮೊಳಗೇ ಮಾತಾಡಿಕೊಂಡು ನನ್ನ ಕಳಕಳಿಯ ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ಕೊನೆಗೆ, 'ನೀವು ಮಾತಾಡಿ ಸಾರ್, ನಾವು ನೋಡ್ಕೋತೇವೆ' ಅಂತ ಧೈರ್ಯ ಕೊಟ್ಟೇ ಬಿಟ್ಟರು. ಇದೇ ಸಮಯವೆಂದು ನಾನು ಸಂಭ್ರಮದಿಂದ ಭಾಷಣ ಕುಟ್ಟಿ ಮುಗಿಸಿದೆ. ಆ ದಿನ ಮನೆಗೆ ಹಿಂದಿರುಗಿದ ಮೇಲೆ ಮನೆಯ ವಾತಾವರಣವನ್ನು ತಿಳಿಗೊಳಿಸುವುದು ಸ್ವಲ್ಪ ಕಷ್ಟವೇ ಆಯಿತೆನ್ನುವುದೇನೋ ನಿಜ.

ಸಮಾರಂಭಗಳು ಒಂದೊಂದೂ ಒಂದೊಂದು ವಿಧವಾಗಿರುತ್ತವೆ. ನಾಟಕವಾದರೆ ಮಧ್ಯೆ ಸ್ವಲ್ಪ ನಿಲ್ಲಿಸಿ, ಅವಸರವಾಗಿ ಟೇಬಲ್ಲು ಕುರ್ಚಿಗಳನ್ನು ವೇದಿಕೆಯಲ್ಲಿ ಹಾಕಿಸಿ, ನಾಟಕದ ಬಗ್ಗೆ ಎರಡು ಮಾತು ಆಡಲೆಂದು ಮುಖ್ಯ ಅತಿಥಿಗಳನ್ನು ವೇದಿಕೆಯ ಮೇಲೆ ಬರಲು ಕರೆಯುತ್ತಾರೆ. ರಸಿಕರಿಗೋ ಇದೊಂದು ರಸಭಂಗದ ಪ್ರಕರಣ. ಅತಿಥಿಗಳು ಹೇಗೋ ಅಲ್ಲಿ ಕುಳಿತು ನಂತರ ಮನಸ್ಸಿಗೆ ಹೊಳೆದ ಒಂದೆರಡು ಮಾತುಗಳನ್ನಾಡಿ ಅವರಿವರನ್ನು ಹೊಗಳಿ, ಶುಭ ಕೋರಿ ವೇದಿಕೆಯಿಂದ



11th_Kannada_Reader_Final_16-07-2018.indd 56 16-07-2018 18:42:57

ಇಳಿದು ಬಂದು ಬಿಡಬೇಕು. ಇಲ್ಲದಿದ್ದರೆ ಹಿಂದಿನ ಸಾಲಿನಲ್ಲಿ ಕುಳಿತಿರುವ ಯುವಶಕ್ತಿಗಳ ಶಿಳ್ಳೆಗಳಿಗೆ ವಸ್ತುವಾಗಬೇಕಾದೀತು. ಕೆಲವರು ಮಾತ್ರ ಶಿಳ್ಳೆಗಳಿಗೆಲ್ಲ ಹೆದರುವ ಪಿಳ್ಳೆಗಳಲ್ಲ. ಅವರು ಅವರ ಮುಖ್ಯತ್ವವನ್ನು ಸ್ಥಾಪಿಸಲು ತೊಡಗಿ ನಾಟಕದ ಉಗಮ, ಬೆಳೆದು ಬಂದ ರೀತಿ, ಭಾರತೀಯ ಹಾಗೂ ಪಾಶ್ಚಾತ್ಯ ರಂಗಗಳ ತುಲನೆ ಹೀಗೆ ಒಂದು ದೊಡ್ಡ ನಾಟಕವನ್ನೇ ಆರಂಭಿಸಿ ನಾಟಕದವರು ಹಾಕಿರುವ ಬಣ್ಣಗಳೆಲ್ಲ ಕರಗಿ ನೀರಾಗುವ ಪರಿಸ್ಥಿತಿ ಬರುವವರೆಗೂ ಬಿಡುವುದಿಲ್ಲ.

ಎಂತಹ ಸಮಾರಂಭವಾದರೂ ನಿಭಾಯಿಸಿ ಬಿಡಬಹುದು. ಒಂದೇ ಒಂದು ಮಾತ್ರ ನನಗೆ ಕಷ್ಟ. ಅದೆಂದರೆ ಫ್ಯಾಷನ್ ಷೋ. ಅತ್ಯಾಧುನಿಕ ಉಡುಗೆ ತೊಡುಗೆ ಧರಿಸಿ ಅಥವಾ ಧರಿಸದೆ, ಬೆಡಗು ಭಿನ್ನಾಣದಿಂದ ಹೆಜ್ಜೆ ಹಾಕುವ ರಮಣಿಯರ ಬಗ್ಗೆ ಅವರ ಬೆಡಗಿನ ಪ್ರದರ್ಶನದ ಬಗ್ಗೆ ವಸ್ತ್ರ ವಿನ್ಯಾಸಗಳ ಬಗ್ಗೆ ಮುಖ್ಯ ಅತಿಥಿಗಳಾದ ನಮ್ಮಂತಹವರು ಏನು ಹೇಳುವುದು ? ಅವರ ವಸ್ತ್ರಾಲಂಕಾರಗಳ ಬಗ್ಗೆ ಮಾತನಾಡಿದರೆ ನಗೆ ಪಾಟಲಾದೀತು. ಆ ಉಡುಗೆ ತೊಟ್ಟವರ ಮೇಲೆ ಮಾತನಾಡಲಾದೀತೇ? ನಾನಾ ಕಷ್ಟ ಪರಂಪರೆಗಳಿಗೆ ಈಡಾಗಬೇಕಾದೀತು ! ಈ ಪ್ರದರ್ಶನ ಚೆನ್ನಾಗಿದೆ. ಇದನ್ನು ಎಲ್ಲರೂ ನೋಡಬೇಕು. ಎಲ್ಲರೂ ಹೀಗೆಯೇ ಇರಬೇಕು ಎಂದೂ ಹೇಳಲಾಗುವುದಿಲ್ಲ. ಇವೆಲ್ಲ ನಮ್ಮ ವಯೋಧರ್ಮಕ್ಕೆ ಸರಿ ಹೊಂದದ ವಿಷಯಗಳು. ಇಂತಹ ಸಮಾರಂಭಗಳನ್ನು ಒಪ್ಪಿಕೊಳ್ಳದೆ ಇದ್ದರೆ ಅವರು ಬಿಡಬೇಕಲ್ಲ! ಈ ಸಮಾರಂಭಕ್ಕೆ ನೀವೇ ಸರಿ, ಎಂದೆಲ್ಲ ಹೇಳಿ ನಾವು ನಮ್ಮ ವಯಸ್ಸನ್ನು ಮರೆಯುವಂತೆ ಮಾಡುವುದರಲ್ಲಿ ಅವರು ಯಶಸ್ವಿಗಳಾಗುತ್ತಾರೆ. ನಾವು ಆ ಸಮಾರಂಭಕ್ಕೆ ಹತ್ತಾರು ವರ್ಷಗಳ ಹಿಂದೆ ಹೋಲಿಸಿಕೊಂಡ ಚೀಲದಂತಹ ಸೂಟನ್ನು ಹಾಕಿಕೊಂಡು ಆ ಆಧುನಿಕ ಲಲನೆಯರ ತಿರಸ್ಕಾರಕ್ಕೆ ಗುರಿಯಾಗಬೇಕಾಗುತ್ತದೆ. ಆದರೂ ನಾವು ಏನನ್ನೂ ನೋಡದವರಂತೆ ಹಾಗೂ ಎಲ್ಲವನ್ನೂ ನೋಡಿದವರಂತೆ ಒಂದು ಗಂಭೀರವಾದ ಸುಖ ದುಃಖ ಸಮನ್ವಯದ ಮುಖಮುದ್ರೆಯನ್ನು ಧರಿಸಿ ಅಲ್ಲಿ ಕುಳಿತಿದ್ದು ಏನೋ ಒಂದೆರಡು ಮಾತುಗಳನ್ನು ನಡುನಡುವೆ ಫ್ಯಾಷನ್ ಎಂಬ ಪದ ಬರುವಂತೆ ಮಾತನಾಡಿ ಬೆವರೊರೆಸಿಕೊಂಡು ಬಂದು ಬಿಡುವುದಷ್ಟೇ ನಮಗೆ ಉಳಿದಿರುವ ದಾರಿ.

ಬಹುತೇಕ ಕಾಲೇಜು ಮುಂತಾದ ಸಂಸ್ಥೆಗಳ ಸಮಾರಂಭಗಳು ಸಾಂಪ್ರದಾಯಿಕವಾಗಿರುತ್ತವೆ. ಯಾರೂ ಕೇಳದಿದ್ದರೂ ಭಾಷಣಗಳು ನಡೆಯುತ್ತವೆ. ಕೆಲವೆಡೆ ನೀವೇನೇ ಹೇಳಿದರೂ ಅಲ್ಲಿಯ ಗಲಾಟೆಯ ಶಬ್ದದಲ್ಲಿ ಅದು ಐಕ್ಯವಾಗಿ ವಿಶೇಷವೆಂದೇನೂ ಅನ್ನಿಸುವುದಿಲ್ಲ. ಬಹುಮಾನ ವಿತರಣೆಯಲ್ಲಿ ಮಾತ್ರ ನನ್ನ ರಟ್ಟೆಯ ಬಲವನ್ನು ಪರೀಕ್ಷಿಸಲಾಗುತ್ತದೆ. ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಬಹುಮಾನ ತೆಗೆದುಕೊಳ್ಳುವಾಗ ಕೆಲವರು ಕೈಮುಗಿಯುತ್ತಾರೆ. ಇಲ್ಲಿ ಆಗುವ ದುರಂತವೆಂದರೆ ನಾವು ಕೈಕುಲುಕಲು ನೋಡಿದಾಗ ಹುಡುಗರು ನಮಸ್ಕಾರ ಮಾಡುತ್ತಾರೆ. ನಾವು ನೀಡಿಕೊಂಡಿರುವ ಕೈಯನ್ನು ಒಂದು ದೇಶಾವರದ ನಗೆಯೊಂದಿಗೆ ಹಿಂದಕ್ಕೆ ಎಳೆದುಕೊಳ್ಳಬೇಕಾಗುತ್ತದೆ. ಮತ್ತೆ ಮುಂದಿನ ಬಹುಮಾನ ವಿಜೇತ ಬಂದಾಗ ನಾವು ನಮಸ್ಕಾರ ಮಾಡಿ ಬಿಡುತ್ತೇವೆ. ಆದರೆ ಆತ ಕೈಕುಲುಕಲು ಕೈ ನೀಡುತ್ತಾನೆ. ಆಗ ನಾವು ಅಚಾತುರ್ಯವಾಯಿತಲ್ಲ ಎಂದು ತಕ್ಷಣ ಕೈ ನೀಡಿದಾಗ, ಅಷ್ಟರೊಳಗೆ ಅವನು ಕೈ ಹಿಂತೆಗೆದುಕೊಂಡು ನಮಸ್ಕಾರ ಮಾಡುತ್ತಾನೆ. ಮತ್ತೆ ನಾವು ನಮಸ್ಕಾರ ಮಾಡಿದಾಗ ಆತ ಕೈನೀಡಿ..... ಒಂದರೆ ನಿಮಿಷ ನಮ್ಮ ಸರ್ಕಸ್ಸು ಹೀಗೇ ನಡೆಯುತ್ತದೆ. ನಂತರ ಇಬ್ಬರೂ ಪೆಚ್ಚಾಗಿ ಸುಮ್ಮನಾಗಬೇಕಾಗುತ್ತದೆ. ಕೆಲವರಂತೂ ನಿರ್ದಾಕ್ಷಿಣ್ಯವಾಗಿ ನಮ್ಮ ಕೈಹಿಡಿದು ಎಳೆದು ಫೋಟೋಗೆ ಫೋಸು ಕೊಡುತ್ತಾರೆ. ಅದೊಂದು ಬಲವಂತದ ಪಾಣಿಗ್ರಹಣ.

ಮಹಿಳೆಯರ ವಿಚಾರದಲ್ಲಿ ಈ ಕ್ಲೇಶವಿರುವುದಿಲ್ಲ. ಅವರು 'ದುಷ್ಟರನ್ನು ಕಂಡರೆ ದೂರ ಇರು' ಎಂಬ ನಾಣ್ಣುಡಿಯಂತೆ ದೂರದಿಂದಲೇ ನಮಸ್ಕಾರ ಹಾಕಿ ಬಿಡುತ್ತಾರಾದ್ದರಿಂದ ನಮಗೆ ಯಾವ ಮುಜುಗರವೂ ಇಲ್ಲ. ಸಂದಿಗ್ಧತೆಯೂ ಇಲ್ಲ. ಹುಡುಗರ ಹಸ್ತ ಲಾಘವ ಮಾತ್ರ ನಮ್ಮನ್ನು ಆಗಾಗ ಸಂಧಿಗ್ಧತೆಗೆ ಸಿಲುಕಿಸುತ್ತದೆ.



11th_Kannada_Reader_Final_16-07-2018.indd 57 16-07-2018 18:42:57

ಅಂತೂ ಸಮಾರಂಭಗಳೆಂದರೆ ಏನಾದರೊಂದು ಮುಜುಗರದ ಅಥವಾ ಮೋಜಿನ ಸನ್ನಿವೇಶ ಇದ್ದೇ ಇರುತ್ತದೆ. ಕೈಕುಲುಕಾಟವಂತೂ ಮುಖ್ಯ ಅತಿಥಿಗಳನ್ನು ಯಾವುದಾದರೊಂದು ರೀತಿಯಲ್ಲಿ ಪೇಚಿಗೆ ಸಿಲುಕಿಸುತ್ತದೆ. ನಾವು ನಿರೀಕ್ಷಿಸಲು ಸಾಧ್ಯವೇ ಇಲ್ಲದಂತೆ ಒಂದು ಪೇಚಿಗೆ ಒಮ್ಮೆ ಈ ಹಸ್ತ ಲಾಘವ ನಮ್ಮನ್ನೆಲ್ಲ ಸಿಲುಕಿಸಿದ್ದುದು ನನಗೆ ನೆನಪಿದೆ. ಒಮ್ಮೆ ಒಂದು ಕಾಲೇಜಿಗೆ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಅದು ಹುಡುಗರ ಕಾಲೇಜ್. ನನ್ನ ಸ್ನೇಹಿತರೊಬ್ಬರು ಸಮಾರೋಪ ಭಾಷಣಕಾರರು. ಮತ್ತೊಬ್ಬರು ಬಹುಮಾನ ವಿತರಕರು. ಆ ಕಾಲೇಜಿನ ಪ್ರಿನ್ಸಿಪಾಲರದೇ ಅಧ್ಯಕ್ಷತೆ. ಕಾರ್ಯಕ್ರಮ ಆರಂಭವಾಗಿ ಸ್ವಾಗತ ಮುಂತಾದವುಗಳು ಮುಗಿದವು. ನನ್ನ ಸರದಿ ಬಂದು ನನ್ನ ಭಾಷಣವೂ ಮುಗಿಯಿತು. ನಂತರ ಬಹುಮಾನ ವಿತರಣೆ ಎಂದು ಮೈಕಿನಲ್ಲಿ ಪ್ರಕಟಿಸಿದರು. ನನ್ನ ಮಿತ್ರರಿಗೆ ಏನೋ ಆತಂಕ. ಅವರು ಚಡಪಡಿಸುತ್ತಿದ್ದರು. ಸ್ವಲ್ಪ ಅತ್ತಿತ್ತ ಹೊರಳಿ ಅವರು ಅಧ್ಯಕ್ಷರಿಗೆ ಹೇಳಿದರು : 'ಸ್ವಾಮೀ! ನನ್ನ ಭಾಷಣ ಮುಗಿಸಿ ಬಿಡ್ತೀನಿ' ಇವರು ಬೇಗ ಹೋಗಬೇಕಾಗಿದೆಯೇನೋ ಎಂದು ತಿಳಿದುಕೊಂಡು ಅಧ್ಯಕ್ಷರು ಕಾರ್ಯಕ್ರಮವನ್ನು ಬದಲಾಯಿಸಿ ಸಮ್ಮತಿಸಿದರು. ಮಿತ್ರರೋ ಸಂತೋಷದಿಂದ ತಮ್ಮ ಭಾಷಣ ಮುಗಿಸಿ, 'ಉಸ್ಸಪ್ಪಾ.... ಎಂದು ಕುರ್ಚಿಯಲ್ಲಿ ಕುಳಿತು ನನ್ನ ಕಡೆ ಬಾಗಿ ಹೇಳಿದರು : 'ನೀವೇನೋ ಭಾಷಣ ಮಾಡಿ ಬಿಟ್ರಿ. ಬಹುಮಾನ ವಿತರಣೆ ಮಾಡಿದ್ಮೇಲೆ ಹುಡುಗರೆಲ್ಲಾ ಹೊರಟೇ ಹೋಗ್ತಾರೆ. ಆಗ ನನ್ನ ಬಾಷಣ ಯಾರು ಕೇಳೋರು. ಈಗ ಎಷ್ಟು ಹೊತ್ತು ಬೇಕಾದ್ರೂ ಬಹುಮಾನ ವಿತರಣೆ ಮಾಡ್ಲಿ' ಎಂದು ಹಾಯಾಗಿ ಕುರ್ಚಿಗೆ ಒರಗಿದರು. ಬಹುಮಾನ ವಿತರಣೆ ಆರಂಭವಾಯಿತು. ಬಹುಮಾನ ಕೊಟ್ಟ ಅತಿಥಿಯ ಕೈಯನ್ನು ಕುಲುಕಿದ ಪ್ರತಿಯೊಬ್ಬರೂ ನಮ್ಮೆಲ್ಲರ ಕೈಗಳನ್ನೂ ಕೂಡ ಕುಲುಕಿದರು. ಅಂದರೆ ಒಬ್ಬೊಬ್ಬರು ಆರಾರು ಜನರ ಕೈಗಳನ್ನೂ ಕುಲುಕಿ ಹೋಗುತ್ತಿದ್ದರು. ಈ ಹಸ್ತಲಾಘವದಿಂದ ನನ್ನ ಮಿತ್ರರಿಗೆ ಕೈ ನೋವು ಬಂದು, ಅವರಿಗೆ ನಾನು ಮಹಾನಾರಾಯಣಿ ತೈಲವನ್ನು ಸವರಿ ಬಿಸಿನೀರನ್ನು ಹಾಕಲು ಹೇಳಿದೆ. ಹೀಗೆ ಕೈಕುಲುಕುವ ಕಾರ್ಯಕ್ರಮ ನಡೆಯುತ್ತಿದ್ದಾಗ ಒಮ್ಮೆ ಒಬ್ಬ ಹುಡುಗ ಕೈಕುಲುಕುವ ರಭಸದಲ್ಲಿ ಟೇಬಲ್ಲಿನ ಮೇಲೆ ಇಟ್ಟಿದ್ದ ಹೂದಾನಿಯನ್ನು ಉರುಳಿಸಿದ. ಅದನ್ನು ತೆಗೆದು ನಾನು ನೆಲದ ಮೇಲಿಟ್ಟೆ. ಯಾರ ಮನೆಯದೋ ಏನೋ ಪಾಪ ಟೇಬಲ್ಲಿನ ಮೇಲೆ ನೀರು ಕುಡಿಯಲು ಎರಡು ಲೋಟ ನೀರನ್ನು ಇಟ್ಟಿದ್ದರು. ಭಾಷಣದಲ್ಲಿ ಗಂಟಲೊಣಗಿದರೆ ಬೇಕಾಗುತ್ತದೆಯಲ್ಲಾ ? ಆ ಎರಡು ಲೋಟಗಳಲ್ಲಿ ಒಂದನ್ನು ಒಬ್ಬ ಹುಡುಗ ಕೈ ಕುಲುಕುವಾಗ ಉರುಳಿಸಿ ಬಿಟ್ಟ. ಅದರೊಳಗಿದ್ದ ನೀರು ಹರಿದು ನನ್ನ ಪ್ಯಾಂಟಿನ ಮೇಲೆ ಸುರಿಯಿತು. ನನಗೆ ಗಾಬರಿಯಾಯಿತು. ಇನ್ನು ನನ್ನ ಕತೆ ಮುಗಿಯಿತು. ಇದು ಒಣಗುವವರೆಗೆ ಏಳುವಂತಿಲ್ಲ. ಜನ ಏನೆಂದಾರು? ವೇದಿಕೆಯಲ್ಲಿ ಹೆದರಿಕೊಂಡು ಕುಳಿತುಬಿಟ್ಟೆನೇನೋ ಎಂದುಕೊಳ್ಳುವುದಿಲ್ಲವೇ ಎಂದು ನನ್ನ ಮಿತ್ರರೊಂದಿಗೆ ಹೇಳಿದೆ. ಅವರಿಗೆ ನನ್ನ ಸ್ಥಿತಿ ನೋಡಿ ಏನೋ ಒಂದು ಅನಿರ್ವಚನೀಯವಾದ ಆನಂದ, ನನ್ನ ಪ್ಯಾಂಟು ನೆನೆಯಿತಲ್ಲಾ ಎಂದು. ಆದರೆ ಅವರ ಆನಂದ ಕೇವಲ ಕ್ಷಣಿಕವಾಗಿತ್ತು. ಮುಂದಿನ ಹುಡುಗ ಕೈಕುಲುಕುವಾಗ ಎರಡನೇ ಗ್ಲಾಸನ್ನು ಉರುಳಿಸಿದ. ಆ ನೀರು ಹರಿದು ನನ್ನ ಮಿತ್ರರ ಪ್ಯಾಂಟು ನೆನೆಯಿತು. ನಾನು ಒಂದು ಅನಿರ್ವಚನೀಯವಾದ ಆನಂದವನ್ನು ಅನುಭವಿಸಿದೆ. ಆ ಹುಡುಗನನ್ನು ಮನಸ್ಸಿನಲ್ಲಿಯೇ ಆಶೀರ್ವದಿಸಿದೆ.

ಹೀಗೆ ಪ್ರತಿ ಸಮಾರಂಭದಲ್ಲೂ ಏನಾದರೂ ಒಂದು ಪ್ರಸಂಗ ನಡೆದೇ ತೀರುತ್ತದೆ. ನಾವಂತೂ ನಮ್ಮ ಮುಖ್ಯ ಅತಿಥಿತ್ವವನ್ನು ನಿರ್ವಹಿಸಲೇ ಬೇಕಾಗುತ್ತದೆ. ಇಂತಹ ಪ್ರಸಂಗಗಳನ್ನು ನೆನಪಿನಲ್ಲಿಟ್ಟುಕೊಂಡು ಮುಂದಿನ ಸಮಾರಂಭಗಳಲ್ಲಿ ನಮ್ಮ ಭಾಷಣಗಳಲ್ಲಿ ಅವುಗಳನ್ನೇ ಉಪಯೋಗಿಸಿಕೊಂಡು ಬಿಡಬಹುದು.

ಸಮಾರಂಭಗಳೆಲ್ಲ ಒಂದು ಮನೋಭಾವದ ಪ್ರತಿಬಿಂಬಗಳು. ಅವುಗಳಲ್ಲಿ ಏನೋ ಒಂದು ಉತ್ಸಾಹ, ಹೆಮ್ಮೆ, ಛಲ ಎಲ್ಲ ಇರುತ್ತವೆ. ಮುಖ್ಯ ಅತಿಥಿಗಳು ಇಬ್ಬರು ಇರಬೇಕು. ಒಬ್ಬರು ಬರದಿದ್ದರೂ ಮತ್ತೊಬ್ಬರು



11th_Kannada_Reader_Final_16-07-2018.indd 58 16-07-2018 18:42:57

ಇರಲು ಈ ಪರ್ಯಾಯ ವ್ಯವಸ್ಥೆ ಇರಬೇಕು. ಈ ಸಂಭ್ರಮದಲ್ಲಿ ರಸ ವಿರಸ ಎಲ್ಲ ಇರುತ್ತದೆ. ಅಂತೂ ಇದೊಂದು ವಿಶೇಷವಾದ ಅನುಭವ. ಈ ಅನುಭವಕ್ಕೋಸ್ಕರ ಮುಖ್ಯ ಅತಿಥಿಯಾಗಲು ನಿಮ್ಮನ್ನು ಕರೆದಾಗ ನೀವು ಒಪ್ಪಿಕೊಂಡು ಬಿಡಬೇಕು. ಅಲ್ಲಿಯ ಅನುಭವದ ಬಗ್ಗೆ ನಿಮಗೆ ಒಂದು ಪುಸ್ತಕ ಬರೆಯಲು ಅನುಕೂಲವಾಗುತ್ತದೆ ಅಥವಾ ಇಂತಹ ಒಂದು ಲೇಖನವನ್ನಾದರೂ ಬರೆಯಲು ಅನುಕೂಲವಾಗುತ್ತದೆ.

## ಕೃತಿ–ಕರ್ತೃ ವಿಚಾರ



'ಸಮಾರಂಭಗಳ ಸಂಭ್ರಮದಲ್ಲಿ' ಪ್ರಬಂಧದ ಲೇಖಕರಾದ ಡಾ.ಪಿ.ಎಸ್.ರಾಮಾನುಜಂ ಒಬ್ಬ ಪ್ರತಿಭಾವಂತ ಸಾಹಿತಿ. ಕರ್ನಾಟಕದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಿರುವ ಇವರು ತಮ್ಮ ಲೇಖನಗಳಲ್ಲಿ ಹಾಸ್ಯದ ಹೊನಲನ್ನು ಹರಿಸಿದ್ದಾರೆ. ಇವರ 'ವೇಣೀ ಸಂಹಾರ' ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ., ಮತ್ತು ಡಿ.ಲಿಟ್., ಪದವಿಗಳು ದೊರೆತಿವೆ. 'ಮಿಣುಕು', 'ಇವರು ಈ ಜನರು', 'ಬೆಳಕು ಹರಿದೆಡೆ' ಮುಂತಾದ ಕವನ ಸಂಕಲನಗಳನ್ನು ಇವರು ಪ್ರಕಟಿಸಿದ್ದಾರೆ. 'ಮೂರು ಪ್ರಹಸನಗಳು' ಎಂಬುದು ಇವರು ಬರೆದ ನಗೆನಾಟಕ. 'ಕಥಾಗುಚ್ಛ' ಎಂಬ ಪೌರಾಣಿಕ ಕಥಾ ಸಂಕಲನವನ್ನೂ ಪ್ರಕಟಿಸಿದ್ದಾರೆ. 'ಪ್ರೀತಿ ಪ್ರದರ್ಶನ ಮತ್ತು ಇತರ ಬಂಧುಗಳು', 'ಪ್ರಬಂಧ ವಿಹಾರ', 'ಬೆಕ್ಕಿನ ಭಾಷೆ ಮತ್ತು ಇತರ ವಿಡಂಬನೆಗಳು' ಎಂಬುದು ಇವರು ಬರೆದ ಲಲಿತ ಪ್ರಬಂಧಗಳು. ಸಮರ್ಥ ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವುದಕ್ಕೆ ಹಲವು ಪಾರಿತೋಷಕಗಳೂ ಇವರಿಗೆ ಲಭಿಸಿವೆ. ಅಷ್ಟೇ ಅಲ್ಲದೆ ಇವರ ಸಾಹಿತ್ಯ ಸೇವೆಗಾಗಿ, 'ಮುದ್ದಣ ಪ್ರಶಸ್ತಿ', 'ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಪ್ರಶಸ್ತಿ' ಮುಂತಾದ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಪ್ರಸ್ತುತ ಲೇಖನದಲ್ಲಿ ಸಮಾರಂಭದ ಅತಿಥಿಯಾಗಲು ಒಪ್ಪಿಕೊಂಡರೆ ಯಾವ ಯಾವ ಪೇಚಾಟಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ ಎಂಬ ವಿಚಾರವನ್ನು ಅವರು ವಿಡಂಬಿಸಿದ್ದಾರೆ. ಇದನ್ನು ಅವರ 'ಪ್ರಬಂಧ ವಿಹಾರ' ಎನ್ನುವ ಪ್ರಬಂಧ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ಕಠಿಣ ಪದಗಳ ಅರ್ಥ

ಅಭಿವಾದನ–ನಮಸ್ಕಾರ; ವಿನಿಮಯ–ಕೊಡುಕೊಳ್ಳುವಿಕೆ; ನಿಮೀಲನ–ಕಣ್ಣುಮುಚ್ಚುವಿಕೆ; ನೇತ್ರ–ಕಣ್ಣು; ಅರವಿಂದ–ಕಮಲ; ವದನ–ಮುಖ; ಲಯ–ನಾಶ; ಶೋಚನೀಯ–ದುಃಖಕರವಾದ; ಹರಣ–ಕಿತ್ತೊಯ್ಯುವಿಕೆ, ಪ್ರಾಣ; ಸಮರ್ಪಣ–ಒಪ್ಪಿಸುವಿಕೆ; ಅಮೋಘ–ಶ್ರೇಷ್ಠ; ಅನಿವಾರ್ಯ–ತಪ್ಪಲಾರದ; ನಿರಂಕುಶ–ಸ್ವತಂತ್ರ; ಸಂಭಾಳಿಸು–ಸಮಾಧಾನ ಪಡಿಸು; ಪ್ರತೀಕಾರ–ಸೇಡು; ತುಲನೆ–ಹೋಲಿಸುವಿಕೆ; ಪಾಣಿಗ್ರಹಣ–ಕೈಹಿಡಿಯುವಿಕೆ; ಅನಿರ್ವಚನೀಯ–ಹೇಳಲಾರದ; ಪರ್ಯಾಯ–ಬೇರೆ; ದಾಷ್ಟ್ರ್ಯ–ಧೈರ್ಯ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಸಮಾರಂಭಕ್ಕೆ ಬರಬೇಕೆಂದು ಹಿರಿಯರು ಹೇಗೆ ಬಲಾತ್ಕರಿಸುತ್ತಾರೆ ?
2. ಸಮಾರಂಭದಲ್ಲಿ ಮುಖ್ಯ ಆಹ್ವಾನಿತರು ವೇದಿಕೆಯ ಮೇಲೆ ಕುಳಿತುಕೊಳ್ಳುವಾಗ ಆಗುವ ಅನುಭವಗಳೇನು ?
3. ಸಮಾರಂಭದ ವ್ಯವಸ್ಥಾಪಕರು ಹೇಗೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುತ್ತಾರೆ ?
4. ಖಾಲಿ ಸ್ಥಾನವನ್ನು ತುಂಬಲು ಬಂದ ಆಹ್ವಾನಿತರಿಗೆ ಆಗುವ ಗರ್ವಭಂಗದ ಸನ್ನಿವೇಶಗಳೇನು ?



11th_Kannada_Reader_Final_16-07-2018.indd 59 16-07-2018 18:42:58

5. ಇಕ್ಕಟ್ಟಿನ ಸನ್ನಿವೇಶಗಳಿಂದ ಪಾರಾಗಲು ಲೇಖಕರು ಯಾವ ಉಪಾಯ ಕಂಡುಕೊಂಡಿದ್ದರು ?
6. ನಾಟಕ ಆರಂಭವಾಗುವುದಕ್ಕೆ ಮೊದಲು ಉಂಟಾಗುವ ಅನವಶ್ಯಕ ಸಂದರ್ಭಗಳಾವುವು ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಲೇಖಕರು ಒಮ್ಮೆ ಮಹಿಳಾ ಕಾಲೇಜಿಗೆ ಹೋದಾಗ ಅಲ್ಲಿ ನಡೆದ ಘಟನೆಯೇನು ?
2. ಲೇಖಕರಿಗೆ ಪ್ರಮೀಳಾ ರಾಜ್ಯವೆಂದರೆ ಇದೇ ಇರಬೇಕು – ಎಂದು ಅನ್ನಿಸಿದ್ದೇಕೆ?
3. ಮಹಿಳಾ ಕಾಲೇಜಿನಲ್ಲಿ ಲೇಖಕರಿಗೆ ಭಾಷಣ ಮಾಡಲು ಹೇಗೆ ಅವಕಾಶ ಸಿಕ್ಕಿತು?
4. ಸಮಾರಂಭಗಳಲ್ಲಿ ಕೈಕುಲುಕುವ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ.
5. ಫ್ಯಾಷನ್ ಷೋನಲ್ಲಿ ನಡೆದ ಪೇಚಾಟದ ಪ್ರಸಂಗದ ಬಗ್ಗೆ ಬರೆಯಿರಿ.

## ಚಟುವಟಿಕೆ

1. ನೀವು ಸಮಾರಂಭಗಳಲ್ಲಿ ಭಾಷಣ ಮಾಡುವ ಅಭ್ಯಾಸ ಬೆಳೆಸಿಕೊಳ್ಳಿರಿ.
2. ನಿಮ್ಮ ಭಾಷಣದ ಅನುಭವಗಳ ಬಗ್ಗೆ ಒಂದು ಲೇಖನವನ್ನು ಬರೆಯಿರಿ.



11th_Kannada_Reader_Final_16-07-2018.indd 60 16-07-2018 18:42:58

ಘಟಕ ಮೂರು

# ಲಿಂಗ–ವಚನ–ವಿಭಕ್ತಿ

ಒಂದು ನಾಮ ಪದದಲ್ಲಿ ಲಿಂಗ, ವಚನ, ವಿಭಕ್ತಿಗಳೆಂಬ ಮೂರು ಅಂಶಗಳಿರುತ್ತವೆ. ಉದಾಹರಣೆಗೆ 'ದೇಶದಿಂದ' ಎಂಬ ನಾಮಪದವನ್ನು ಬಿಡಿಸಿ ಬರೆದರೆ ದೇಶ+ಇಂದ – ಎಂದಾಗುತ್ತದೆ. ಇವುಗಳಲ್ಲಿ, 'ದೇಶ' ಎಂಬುದು ನಪುಂಸಕ ಲಿಂಗ ಹಾಗೂ ಅದು ಒಂದೇ ಒಂದು ದೇಶವನ್ನು ಸೂಚಿಸುವುದರಿಂದ ಅದು ಏಕವಚನವಾಗುತ್ತದೆ. ಇಲ್ಲಿ 'ಇಂದ' ಎಂಬುದು ವಿಭಕ್ತಿ ಪ್ರತ್ಯಯವಾಗಿದೆ. ಈ ಕುರಿತಂತೆ ಕೆಲವೊಂದು ಅಂಶಗಳನ್ನು ವಿವರವಾಗಿ ತಿಳಿದುಕೊಳ್ಳೋಣ.

## ಲಿಂಗ

ಒಂದು ನಾಮಪ್ರಕೃತಿಯನ್ನು ಲಿಂಗವೆಂದು ಕರೆಯುತ್ತಾರೆ. ಕನ್ನಡದಲ್ಲಿ ಪ್ರಮುಖವಾಗಿ ಮೂರು ವಿಧಗಳಿವೆ. ಅವುಗಳನ್ನು ಪುಲ್ಲಿಂಗ ಸ್ತ್ರೀಲಿಂಗ ಹಾಗೂ ನಪುಂಸಕ ಲಿಂಗಗಳೆಂದು ಕರೆಯುವರು.

**1. ಪುಲ್ಲಿಂಗ**

ಪುರುಷರನ್ನು ಕುರಿತು ಹೇಳುವ ಲಿಂಗವನ್ನು ಪುಲ್ಲಿಂಗವೆನ್ನುವರು. ಉದಾಹರಣೆಗೆ: ರಮೇಶ, ಅಪ್ಪ, ದೇವ, ಅವನು ಇತ್ಯಾದಿ.

**2. ಸ್ತ್ರೀಲಿಂಗ**

ಸ್ತ್ರೀಯರನ್ನು ಕುರಿತು ಹೇಳುವ ಲಿಂಗವನ್ನು ಸ್ತ್ರೀಲಿಂಗವೆನ್ನುವರು. ಉದಾಹರಣೆಗೆ : ಗೀತಾ, ಅಜ್ಜಿ, ದೇವಿ, ಅಮ್ಮ, ತಂಗಿ, ಅವಳು ಇತ್ಯಾದಿ.

**3. ನಪುಂಸಕಲಿಂಗ**

ಪುಲ್ಲಿಂಗವೂ ಅಲ್ಲದ, ಸ್ತ್ರೀಲಿಂಗವೂ ಅಲ್ಲದ ಲಿಂಗಗಳನ್ನು ನಪುಂಸಕ ಲಿಂಗ ಎನ್ನುವರು. ಉದಾಹರಣೆಗೆ : ಗಿಡ, ನದಿ, ಮರ, ಗುಡ್ಡ, ಕುದುರೆ, ಕುರ್ಚಿ, ಅದು ಇತ್ಯಾದಿ.

## ವಚನ

ವಚನ ಎಂದರೆ ಮಾತು. ಆದರೆ ವ್ಯಾಕರಣದಲ್ಲಿ ಇದು 'ಸಂಖ್ಯೆ' ಎಂಬರ್ಥವನ್ನು ನೀಡುತ್ತದೆ. ಕನ್ನಡದಲ್ಲಿ ಎರಡು ಬಗೆಯ ವಚನಗಳಿವೆ. 1. ಏಕವಚನ. 2. ಬಹುವಚನ.



11th_Kannada_Reader_Final_16-07-2018.indd 61 16-07-2018 18:42:58

1. ಏಕವಚನ

ಒಬ್ಬ ವ್ಯಕ್ತಿ, ಒಂದು ವಸ್ತು, ಒಂದು ಸ್ಥಳವನ್ನು ಸೂಚಿಸುವುದನ್ನು ಏಕವಚನವೆನ್ನುವರು. ಉದಾಹರಣೆಗೆ ರಾಜ, ಹಣ್ಣು, ಮನೆ, ಹಳ್ಳಿ, ಗಿಡ, ತಾಯಿ, ನದಿ ಇತ್ಯಾದಿ.

2. ಬಹುವಚನ

ಒಂದಕ್ಕಿಂತ ಹೆಚ್ಚು ವ್ಯಕ್ತಿ, ವಸ್ತು, ಸ್ಥಳವನ್ನು ಸೂಚಿಸುವುದನ್ನು ಬಹುವಚನ ಎನ್ನುವರು ಉದಾಹರಣೆಗೆ ರಾಜರು, ಹಣ್ಣುಗಳು, ಮನೆಗಳು, ಹಳ್ಳಿಗಳು, ತಾಯಂದಿರು, ನದಿಗಳು ಇತ್ಯಾದಿ.

ಏಕವಚನಕ್ಕೆ ಕೆಲವು ಪ್ರತ್ಯಯಗಳು ಸೇರಿ ಬಹುವಚನಗಳಾಗುತ್ತವೆ. ಹಾಗೆ ಸೇರುವ ಪ್ರತ್ಯಯಗಳನ್ನು 'ಬಹುವಚನ' ಪ್ರತ್ಯಯಗಳೆಂದು ಕರೆಯುತ್ತಾರೆ. ಉದಾಹರಣೆಗೆ : ವು, ರು, ಕ್ಕಳ್, ಗಳು, ಅಂದಿರು ಇತ್ಯಾದಿ.

ಅದು–ಅವು; ಹುಡುಗ–ಹುಡುಗರು; ಮಗು–ಮಕ್ಕಳು; ಕಲ್ಲು–ಕಲ್ಲುಗಳು; ತಮ್ಮ–ತಮ್ಮಂದಿರು ಇತ್ಯಾದಿ.

## ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮೇಲೆ ಕರ್ತೃ, ಕರ್ಮ, ಹರಣ, ಸಂಪ್ರದಾನ, ಅಪಾದಾನ, ಸಂಬಂಧ, ಅಧಿಕರಣ ಎಂಬ ಏಳು ಕಾರಕಾರ್ಥಗಳಲ್ಲಿ ಸೇರುವ ಏಳು ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆಂದು ಹೆಸರು. ಉದಾಹರಣೆಗೆ ಮರದಲ್ಲಿ ಎಂಬ ಪದದಲ್ಲಿ ಮರ+ದ+ಅಲ್ಲಿ – ಎಂಬ ಮೂರು ಅರ್ಥವತ್ತಾದ ಕನಿಷ್ಠತಮ ಘಟಕಗಳಿವೆ. ಮರ=ನಾಮಪ್ರಕೃತಿ; ದ=ಪ್ರಾತಿಪದಿಕ ರಚಕ(ನಾಮಪ್ಕೃತಿಗೆ ಪ್ರತ್ಯಯಗಳನ್ನು ನೇರವಾಗಿ ಹಚ್ಚಲು ಸಾಧ್ಯವಿಲ್ಲದ ಕಡೆ ಮಾತ್ರ ಇಂತಹ ಪ್ರಾತಿಪದಿಕ ರಚಕಗಳ ಬಳಕೆಯಾಗುತ್ತದೆ); ಅಲ್ಲಿ=ವಿಭಕ್ತಿ ಪ್ರತ್ಯಯ.

**ಈ ಕೆಳಗಿನ ಪಟ್ಟಿಯಲ್ಲಿ ಪೂರ್ಣ ವಿವರವನ್ನು ನೀಡಲಾಗಿದೆ.**

| ವಿಭಕ್ತಿಗಳು | ವಿಭಕ್ತಿ ಪ್ರತ್ಯಯಗಳು | ಕಾರಕಾರ್ಥ | ಉದಾ : 'ರಾಮ' ಪ್ರಕೃತಿ | |
|---|---|---|---|---|
| | | | ಏಕವಚನ | ಬಹುವಚನ |
| ಪ್ರಥಮಾ | ಉ | ಕರ್ತೃ | ರಾಮ (ರಾಮನು) | ರಾಮರು |
| ದ್ವಿತೀಯಾ | ಅನ್ನು | ಕರ್ಮ | ರಾಮನನ್ನು | ರಾಮರನ್ನು |
| ತೃತೀಯಾ | ಇಂದ | ಕರಣ | ರಾಮನಿಂದ | ರಾಮರಿಂದ |
| ಚತುರ್ಥಿ | ಗೆ, ಕ್ಕೆ, ಇಕ್ಕೆ | ಸಂಪ್ರದಾನ | ರಾಮನಿಗೆ | ರಾಮರಿಗೆ |
| ಪಂಚಮೀ | ದೆಸೆಯಿಂದ | ಅಪಾದಾನ | ರಾಮನ ದೆಸೆಯಿಂದ | ರಾಮರ ದೆಸೆಯಿಂದ |
| ಷಷ್ಟೀ | ಅ | ಸಂಬಂಧ | ರಾಮನ | ರಾಮರ |
| ಸಪ್ತಮೀ | ಅಲ್ಲಿ | ಅಧಿಕರಣ | ರಾಮನಲ್ಲಿ | ರಾಮರಲ್ಲಿ |



11th_Kannada_Reader_Final_16-07-2018.indd 62 16-07-2018 18:42:58

ಪ್ರಥಮಾ ವಿಭಕ್ತಿಯಲ್ಲಿ 'ಉ' ಪ್ರತ್ಯಯದ ಅವಶ್ಯಕತೆಯಿಲ್ಲ. ಆದರೂ ಬಳಕೆಯಲ್ಲಿ ಬಂದಿರುವುದ–ರಿಂದ ಅದನ್ನು ಆವರಣದಲ್ಲಿ ಕೊಡಲಾಗಿದೆ.

## ವಿಭಕ್ತಿ ಪಲ್ಲಟ

ನಾಮ ಪ್ರಕೃತಿಗೆ ಸೇರಬೇಕಾದ ವಿಭಕ್ತಿ ಪ್ರತ್ಯಯಗಳಿಗೆ ಬದಲಾಗಿ ಬೇರೊಂದು ವಿಭಕ್ತಿ ಪ್ರತ್ಯಯವನ್ನು ಸೇರಿಸುವುದೂ ಉಂಟು. ಹಾಗೆ ಒಂದು ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಬೇರೊಂದು ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದರೆ ಅದಕ್ಕೆ ವಿಭಕ್ತಿ ಪಲ್ಲಟ ಎಂದು ಹೆಸರು.

ಉದಾಹರಣೆಗೆ :

ದ್ವಿತೀಯಾ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿ ಪ್ರತ್ಯಯವನ್ನು ಸೇರಿಸುವುದುಂಟು.

ಉದಾ :

ಅವನು ಮರವನ್ನು ಹತ್ತಿದನು(ದ್ವಿತೀಯಾ);

ಅವನು ಮರಕ್ಕೆ ಹತ್ತಿದನು(ಚತುರ್ಥೀ)

ಷಷ್ಠೀ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿಯನ್ನು ಸೇರಿಸುವುದುಂಟು.

ಉದಾ :

ಮನೆಯ ಯಜಮಾನ(ಷಷ್ಠೀ)

ಮನೆಗೆ ಯಜಮಾನ(ಚತುರ್ಥೀ)

ಸಪ್ತಮೀ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿಯನ್ನು ಸೇರಿಸುವುದುಂಟು.

ಉದಾ :

ಹಳ್ಳದಲ್ಲಿ ಬಿದ್ದನು(ಸಪ್ತಮೀ)

ಹಳ್ಳಕ್ಕೆ ಬಿದ್ದನು(ಚತುರ್ಥೀ)



11th_Kannada_Reader_Final_16-07-2018.indd 63 16-07-2018 18:42:58

ಘಟಕ
ನಾಲ್ಕು

# ಪ್ರಕೃತಿ/ಪರಿಸರ



| | | |
|---|---|---|
| **ಪದ್ಯ :** | ಪಾರಿವಾಳಗಳು | – ಸು.ರಂ.ಎಕ್ಕುಂಡಿ |
| **ಗದ್ಯ :** | ಸುಸ್ಮಿತ ಮತ್ತು ಹಕ್ಕಿಮರಿ | – ಕೆ.ಪಿ.ಪೂರ್ಣಚಂದ್ರ ತೇಜಸ್ವಿ |
| **ಉಪಪಠ್ಯ :** | ಅರಣ್ಯನಾಶ – ಪರಿಣಾಮವೇನು? | – ಎನ್. ವಾಸುದೇವ |
| **ವ್ಯಾಕರಣ :** | ಕಾಲ, ಕೃದಂತ, ತದ್ಧಿತಾಂತ, ಅವ್ಯಯ | |



11th_Kannada_Reader_Final_16-07-2018.indd 64 16-07-2018 18:42:58

ಘಟಕ ನಾಲ್ಕು

# ಪಾರಿವಾಳಗಳು

– ಸು.ರಂ.ಎಕ್ಕುಂಡಿ




ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ 'ಕವನಗಳು' ಸಹೃದಯರನ್ನು ರಂಜಿಸುತ್ತವೆ. ಅದರಲ್ಲೂ ಕಥನಕವನಗಳು ತುಂಬಾ ಮಹತ್ವದ್ದಾಗಿವೆ. ಕವನದ ಮುಖಾಂತರವೇ ಒಂದು ಘಟನೆಯನ್ನೋ, ಒಂದು ಕಥೆಯನ್ನೋ ಓದುಗರಿಗೆ ಕುತೂಹಲ ಮೂಡುವಂತೆ ಬೆಳೆಸುತ್ತಾ ಹೋಗಿ, ಒಂದು ಉತ್ತಮ ಅಂತ್ಯವನ್ನು ಕಾಣಿಸಿ ಕೊನೆಯಲ್ಲಿ ಒಂದು ಒಳ್ಳೆಯ ಸಂದೇಶವನ್ನೂ, ಅನುಭವದ ನುಡಿಮುತ್ತನ್ನೂ ನೀಡುವುದು ಕಥನ ಕವನಗಳ ಲಕ್ಷಣವಾಗಿದೆ. ಸು.ರಂ.ಎಕ್ಕುಂಡಿಯವರು ಕಥನಕವನಗಳನ್ನು ರಚಿಸುವುದರಲ್ಲಿ ಪ್ರಸಿದ್ಧರಾಗಿದ್ದಾರೆ.





11th_Kannada_Reader_Final_16-07-2018.indd 65 16-07-2018 18:42:59

ದಟ್ಟ ಕಾಡಿನಲೊಂದು ಹೆಮ್ಮರದ ಹೊದರಿನಲಿ
ಇರುತ್ತಿತ್ತು ಪುಟ್ಟ ಸಂಸಾರ ಹೂಡಿ
ಮುದ್ದು ಬಿಳೀ ಪಾರಿವಾಳಗಳ ಜೋಡಿ ‖ 1 ‖

ಹಗಲಿರುಳೂ ಜೊತೆಗೂಡಿ ಬಾಳಿದವು ಈ ಜೋಡಿ
ಎಂದಿಗೂ ಅಗಲಿರವು ಒಂದನೊಂದು
ಹಿಗ್ಗು ತುಂಬಿತು ಹೊದರಿನಲ್ಲಿ ಬಂದು ‖ 2 ‖

ಇಟ್ಟ ಮೊಟ್ಟೆಯನೊಡೆದು ಹಿಗ್ಗಿತಿವುಗಳ ಪ್ರೀತಿ
ಮುದ್ದು ಮರಿಗಳ ಮಧುರ ಸದ್ದು ಕೇಳಿ
ದಿನಕಳೆದವಾನಂದದಿಂದ ಬಾಳಿ ‖ 3 ‖

ಬೇಡನೊಬ್ಬನು ಬಂದು ಬಲೆಯ ಹರಡಿದನೊಮ್ಮೆ
ಪುಟ್ಟ ಮರಿಗಳು ಹಾರಿ ಸಿಲುಕಿ ಸೆರೆಗೆ
ಚೀತ್ಕರಿಸತೊಡಗಿದವು ಬರಲು ಹೊರಗೆ ‖ 4 ‖

ಕಂಡು ಮರಿಪಾರಿವಾಳಗಳ ಪಾಡು, ತಾಯಿ ಧುಮುಕಿತು ಬಲೆಗೆ
ಹೆಂಡತಿಯನಗಲಿರದ ಗಂಡು ಹಕ್ಕಿ
ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ ‖ 5 ‖

ಕುರುಡು ವಾತ್ಸಲ್ಯದಲ್ಲಿ  ಕಳೆದುಕೊಂಡು ವಿವೇಕ
ಬಲೆಗೆ ನುಗ್ಗಿದ ಪಾರಿವಾಳದ ಹಿಂಡು
ಹಸಿದ ಬೇಡನು ನಡೆದ ಹೊತ್ತುಕೊಂಡು ‖ 6 ‖

ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರೂ ಕೂಡ ತಾಳಬೇಕು ‖ 7 ‖



11th_Kannada_Reader_Final_16-07-2018.indd 66 16-07-2018 18:42:59

## ಕವಿ–ಕಾವ್ಯ ಪರಿಚಯ



ಸು.ರಂ.ಎಕ್ಕುಂಡಿಯವರ ಪೂರ್ಣ ಹೆಸರು ಸುಬ್ಬಣ್ಣ ರಂಗಣ್ಣ ಎಕ್ಕುಂಡಿ. ಇವರು ಹುಟ್ಟಿದ್ದು 1923ರಂದು, ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ. 1944ರಲ್ಲಿ ಬಿ.ಎ.,ಆನರ್ಸ್) ಪದವಿ ಪಡೆದ ಎಕ್ಕುಂಡಿಯವರು ಉತ್ತರ ಕನ್ನಡ ಜಿಲ್ಲೆಯ ಬಂಕಿಕೊಡ್ಲ ಎಂಬ ಗ್ರಾಮದಲ್ಲಿ ಪ್ರೌಢಶಾಲೆಯ ಅಧ್ಯಾಪಕರಾದರು. 35 ವರ್ಷಗಳ ಸೇವೆಯ ನಂತರ ಅಲ್ಲಿಯೇ ಮುಖ್ಯೋಪಾಧ್ಯಾಯರಾದರು. ಇವರ ಕೃತಿಗಳು :–

ಕವನ ಸಂಕಲನ : ಶ್ರೀ ಆನಂದ ತೀರ್ಥರು, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬಕುಳದ ಹೂಗಳು. ಕಥಾ ಸಂಕಲನ : ನೆರಳು. ಕಾದಂಬರಿ : ಪ್ರತಿಬಿಂಬಗಳು.

ಸೋವಿಯತ್ ಲ್ಯಾಂಡ್‌ನ ನೆಹರೂ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಇವರಿಗೆ ದೊರಕಿವೆ. ಪ್ರಸ್ತುತ 'ಪಾರಿವಾಳ' ಪದ್ಯವನ್ನು ಸು.ರಂ. ಎಕ್ಕುಂಡಿಯವರ 'ಸಮಗ್ರ ಕಥನ ಕವನಗಳು' ಎನ್ನುವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

ಪಾರಿವಾಳಗಳು ಎಂಬ ಕವನವು ಒಂದು ಕಥನ ಕವನವಾಗಿದೆ. ದಟ್ಟ ಕಾಡಿನ ಹೆಮ್ಮರದಲ್ಲಿ ಇದ್ದ ಪಾರಿವಾಳಗಳ ಜೋಡಿಯು ಪರಸ್ಪರ ಅಗಲಿ ಇರಲಾರದೆ, ತಮ್ಮ ಮರಿಗಳೊಡನೆ ಅವುಗಳ ಧ್ವನಿ ಕೇಳುತ್ತಾ ಆನಂದದಿಂದ ಬಾಳುತ್ತಿದ್ದವು. ಬೇಡನು ಹಾಕಿದ ಬಲೆಗೆ ಸಿಲುಕಿದ ಪುಟ್ಟ ಮರಿಗಳನ್ನು ಕಂಡ ತಂದೆ–ತಾಯಿ ಪಾರಿವಾಳಗಳು ಕುರುಡು ವಾತ್ಸಲ್ಯದಿಂದ ತಾವೂ ಬಲೆಗೆ ಸಿಲುಕಿ ಬೇಡನ ಪಾಲಾದವು. 'ಮೋಹ' ಎಂಬುದು ಸರ್ವನಾಶಕ್ಕೆ ಕಾರಣ. ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯ ಸಾಧನೆ ಮಾಡಿಕೊಳ್ಳಬೇಕು ಎಂಬುದೇ ಈ ಕಥನ ಕವನದ ಆಶಯವಾಗಿದೆ.

## ಕಠಿಣ ಪದಗಳ ಅರ್ಥ

ಹೆಮ್ಮರ–ದೊಡ್ಡಮರ; ಹೊದರು–ಪೊದರು, ಪೊದೆ, ಪೊಟರೆ; ಅಗಲು–ಬೇರೆಯಾಗು; ಹಿಗ್ಗು–ಸಂತೋಷ, ಹೆಚ್ಚುವುದು; ಮಧುರ–ಇಂಪಾದ; ಸಿಲುಕು–ಸೆರೆಯಾದುದು; ಸೆರೆ–ಬಂಧನ; ಚೀತ್ಕರಿಸು–ಗಟ್ಟಿಯಾಗಿ ಅರಚು; ಪಾಡು–ತೊಂದರೆ, ಅವಸ್ಥೆ; ಧುಮುಕು–ನೆಗೆ; ವಾತ್ಸಲ್ಯ–ಪ್ರೀತಿ, ಮಮತೆ; ವಿವೇಕ–ತಿಳುವಳಿಕೆ; ಹಿಂಡು–ಗುಂಪು; ಮುಸುಕು–ಆವರಿಸು, ಕಾಣದಂತೆ ಮುಖ ಮುಚ್ಚಿಕೊಳ್ಳು; ವ್ಯಾಮೋಹ–ಅತಿಯಾದ ಪ್ರೀತಿ; ಸಿದ್ಧಿ–ಫಲಕಾರಿ, ಪ್ರಾಪ್ತವಾಗು; ತೊರೆ–ಬಿಡು, ತ್ಯಜಿಸು, ಹೊಳೆ; ತಾಳು–ಸಹಿಸು.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಬಿಳಿ ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು ?
2. ಜೋಡಿ ಪಾರವಾಳಗಳು ಹೇಗೆ ಬಾಳುತ್ತಿದ್ದವು ?
3. ಪಾರವಾಳದ ಮರಿಗಳು ಚೀತ್ಕರಿಸಿದ್ದು ಏಕೆ ?
4. ಬಲೆಗೆ ಬಿದ್ದ ಮರಿಗಳನ್ನು ಕಂಡ ಪಾರಿವಾಳಗಳು ಏನು ಮಾಡಿದವು ?
5. ಏನನ್ನು ತೊರೆದು ಬಾಳಬೇಕು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಪಾರಿವಾಳಗಳ ಬದುಕಿನಲ್ಲಿ ಆನಂದ ಉಂಟಾಗಲು ಕಾರಣವೇನು ?
2. ಬೇಡನು ಬಲೆ ಹರಡಿದುದರ ಪರಿಣಾಮವೇನಾಯಿತು ?
3. 'ಪಾರಿವಾಳಗಳು' ಕವನದಿಂದ ತಿಳಿದು ಬರುವ ನೀತಿ ಯಾವುದು ?



11th_Kannada_Reader_Final_16-07-2018.indd 67 16-07-2018 18:42:59

**III ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಪಾರಿವಾಳಗಳ ದುಡುಕಿನ ನಿರ್ಧಾರದಿಂದಾದ ಅನಾಹುತವೇನು ? ವಿವರಿಸಿ.
2. 'ಪಾರಿವಾಳಗಳು' ಕಥನ ಕವನದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**IV ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸಹಿತ ಉತ್ತರಿಸಿ.**

1. 'ಹಗಲಿರುಳು ಜೊತೆಗೂಡಿ ಬಾಳಿದವು ಈ ಜೋಡಿ'
2. 'ಮೋಹ ಮುಸುಕಿದ ಬುದ್ಧಿ, ಸರ್ವನಾಶದ ಸಿದ್ಧಿ'

## ಭಾಷಾಭ್ಯಾಸ

**1. ಈ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಸಂಸಾರ, ದಿನ, ಹಕ್ಕಿ.

**2. ಈ ಪದಗಳಿಗೆ ವಿರುದ್ಧ ಪದ ಬರೆಯಿರಿ.**

ಹಗಲು, ಹಿಗ್ಗು, ಪ್ರೀತಿ, ವಿವೇಕ, ಮೋಹ.

**3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಕಾಡಿನಲೊಂದು, ಹಗಲಿರುಳು, ಜೊತೆಗೂಡಿ, ಬೇಡನೊಬ್ಬನು

**4. ಕೆಳಗಿನ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**

ಹೆಮ್ಮರ, ಹಗಲಿರುಳು, ಮುದ್ದುಮರಿ.

## ಚಟುವಟಿಕೆ

1. ಸಲೀಂ ಆಲಿಯವರು(ಹಕ್ಕಿ ಮನುಷ್ಯ) ಹಾಗೂ ಪೂರ್ಣಚಂದ್ರ ತೇಜಸ್ವಿಯವರ ಪಕ್ಷಿ ಪ್ರಪಂಚಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಿರಿ.






11th_Kannada_Reader_Final_16-07-2018.indd 68 16-07-2018 18:43:00

ಗದ್ಯ ವಿಹಾರ

ಘಟಕ ನಾಲ್ಕು

# ಸುಸ್ಮಿತ ಮತ್ತು ಹಕ್ಕಿಮರಿ

– ಕೆ.ಪಿ.ಪೂರ್ಣಚಂದ್ರ ತೇಜಸ್ವಿ



ಒಂದು ದಿನ ಏನೋ ಒಂದು ಪ್ರಯೋಗ ಮಾಡಲು ಹೋಗಿ ವಿನಾ ಕಾರಣ ಎಂಥ ತೊಂದರೆಗೆ ಸಿಕ್ಕಿಕೊಂಡೆ ಎಂದರೆ ಅದನ್ನು ಅದರ ಪೂರ್ವಾಪರಗಳೊಂದಿಗೆ ತಿಳಿಸುವುದೇ ಈ ಕಥೆ.

ಹಕ್ಕಿಗಳ ಫೋಟೋಗಳನ್ನು ನಾನು ಮೊದಲು ಪುಸ್ತಕಗಳಲ್ಲಿ ನಿಯತಕಾಲಿಕಗಳಲ್ಲಿ ನೋಡಿದಾಗ ಅವುಗಳ ಅಂದ ಚಂದಗಳನ್ನು ಎಲ್ಲರಂತೆಯೇ ಪ್ರಶಂಸಿಸುತ್ತಿದ್ದೆ. ಆದರೆ ಆ ಚಿತ್ರಗ್ರಾಹಕ ಫೋಟೋ ತೆಗೆಯಲು ಪಟ್ಟಿರಬಹುದಾದ ಕಷ್ಟ ತೊಂದರೆಗಳ ಅಂದಾಜು ಇರಲಿಲ್ಲ. ನೀವು ಸಹ ಚಿತ್ರಗ್ರಾಹಕರಾಗದ ಹೊರತು ಚಿತ್ರಗಳನ್ನು ನೋಡಿ ಮೆಚ್ಚಬಹುದೇ ವಿನಃ ಅವುಗಳನ್ನು ತೆಗೆಯುವ ಕಷ್ಟ ಏನೆಂಬುದು ನಿಮಗೆ ಗೊತ್ತಾಗುವುದೇ ಇಲ್ಲ. ನಾನು ಈವರೆಗೆ ಐದಾರು ಸಾವಿರ ಹಕ್ಕಿಗಳ ಫೋಟೋ ತೆಗೆದಿರಬಹುದು. ಅವುಗಳಲ್ಲಿ ಅರ್ಧದಷ್ಟು ನೆಗೆಟಿವ್‌ಗಳಲ್ಲಾದರೂ ನಾನು ತೆಗೆಯಬಯಸಿದ ಹಕ್ಕಿಗಳೇ ಇಲ್ಲ ಎಂದ ಮೇಲೆ ಎಷ್ಟೊಂದು ಕಾಲ, ಫಿಲ್ಮ್, ಹಣ ವ್ಯರ್ಥವಾಗಿರಬಹುದು ನೀವೇ ಊಹಿಸಿ. ಇದಕ್ಕೆ ಮುಖ್ಯ ಕಾರಣ ಹಕ್ಕಿಗಳ ಫೋಟೋ ತೆಗೆಯಲು ಹೋದ ಛಾಯಾಗ್ರಾಹಕನಿಗೆ ತನ್ನ ಕ್ಯಾಮೆರ ಒಂದನ್ನುಳಿದು ಇನ್ನು ಯಾವುದೂ ಅವನ ಹತೋಟಿಯಲ್ಲಿ ಇಲ್ಲದೆ ಪ್ರತಿಕೂಲ ಸನ್ನಿವೇಶದಲ್ಲಿ ಅವನು ಕೆಲಸ ಮಾಡಬೇಕಾಗುತ್ತದೆ.



11th_Kannada_Reader_Final_16-07-2018.indd 69 16-07-2018 18:43:01

ಬೆಳಕು, ಹಕ್ಕಿಗಳು, ಅವುಗಳ ಭಂಗಿ, ಹಿನ್ನೆಲೆ ಇವು ಯಾವುವೂ ನಿಮ್ಮ ಇಷ್ಟಕ್ಕೆ ತಕ್ಕಂತೆ ಇರುವುದೇ ಇಲ್ಲ. ಬೆಳಗ್ಗಿನಿಂದ ಸಂಜೆಯವರೆಗೆ ಹಠಯೋಗದ ಭಂಗಿಯಲ್ಲಿ ಮರೆಯೊಳಗೆ ಕುಳಿತ ಛಾಯಾಗ್ರಾಹಕ ಸಹನೆಯಿಂದ ಕಾದು, ಇರುವ ಸನ್ನಿವೇಶವನ್ನೇ ಅತ್ಯುತ್ತಮವಾಗಿ ಬಳಸಿಕೊಳ್ಳಲು ಹೆಣಗಬೇಕು. ಜೊತೆಗೆ ಹಕ್ಕಿಗಳು ಅತ್ಯಂತ ಚಿಕ್ಕವೂ, ತುಂಬ ಚಪಲಚಿತ್ತದ ಪ್ರಾಣಿಗಳೂ ಆಗಿರುವುದರಿಂದ ಅಕಸ್ಮಾತ್ ಅವುಗಳ ಫೋಟೋ ಹಿಡಿಯುವುದರಲ್ಲಿ ಛಾಯಾಗ್ರಾಹಕ ಯಶಸ್ವಿಯಾದರೂ ಹಕ್ಕಿ ರೆಕ್ಕೆ ಬಡಿದೋ, ಕುತ್ತಿಗೆ ಅಲ್ಲಾಡಿಸಿಯೋ ಫೋಟೋ ಹಾಳಾಗಿರುತ್ತೆ. ಇದೆಲ್ಲಕ್ಕಿಂತ ಮಿಗಿಲಾಗಿ ಮನುಷ್ಯರ ಬಗ್ಗೆ ಅವಕ್ಕೆ ಇರುವ ಭಯವೇ ಚಿತ್ರಗ್ರಾಹಕರಿಗೆ ಇರುವ ಅತಿ ಮುಖ್ಯ ತೊಂದರೆ. ಅದರೆಡೆಗೆ ಗುರಿ ಹಿಡಿದಿದ್ದು ಕ್ಯಾಮೆರ ಆದರೂ ಅವು ಅದನ್ನು ಬಂದೂಕೆಂದೇ ತಿಳಿದು ಅಲ್ಲಿಂದ ಪಲಾಯನ ಮಾಡುತ್ತವೆ.

ಇದನ್ನೆಲ್ಲಾ ಅನುಭವಿಸಿ ಬೇಸರಗೊಂಡ ನಾನು ಹೇಗಾದರೂ ಈ ಹಕ್ಕಿಗಳನ್ನೆಲ್ಲಾ ನಾನೇ ಸಾಕಿ ಅವುಗಳಿಗೆ ಮನುಷ್ಯರ ಭಯ ಇಲ್ಲದಂತೆ ಬಳಕೆ ಮಾಡಿಕೊಂಡರೆ ಅನಂತರ ಅವುಗಳ ಫೋಟೋಗಳನ್ನು ಹತ್ತಿರದಿಂದಲೇ ಹೇಗೆ ಬೇಕೋ ಹಾಗೆ ತೆಗೆಯಬಹುದಲ್ಲವೆ ಎಂದು ಯೋಚನೆ ಮಾಡುತ್ತಿದ್ದೆ. ಆದರೆ ಈ ಯೋಜನೆ ಅವುಗಳ ಫೋಟೋ ತೆಗೆಯುವುದಕ್ಕಿಂತ ನೂರು ಪಟ್ಟು ಕಷ್ಟಕರವಾದುದು ಎಂದು ಬಹುಬೇಗ ಮನವರಿಕೆಯಾಯ್ತು.

ಪೇಟೆಗಳಲ್ಲಿ ಗುಬ್ಬಚ್ಚಿಗಳು ಹೇಗೆ ಅಸಂಖ್ಯಾತವಾಗಿರುತ್ತವೆಯೋ ಹಾಗೆ ನಮ್ಮ ತೋಟದಲ್ಲಿ ಪಿಕಳಾರ ಅಥವಾ ಬುಲ್‌ಬುಲ್ ಹಕ್ಕಿಗಳು ಇದ್ದವು. ಬುಲ್‌ಬುಲ್‌ಗಳಲ್ಲಿ ನೂರಾರು ತರದ ಪ್ರಭೇದಗಳಿದ್ದಾವೆ. ಚೊಟ್ಟಿ ಇರುವ ಬುಲ್‌ಬುಲ್, ಕೆಂಪು ಮೀಸೆಯ ಬುಲ್‌ಬುಲ್, ಹಳದಿ ಕಪಾಲದ ಬುಲ್‌ಬುಲ್, ಹೊಂಬಣ್ಣದ ತಲೆಯ ಹಸಿರು ಬುಲ್‌ಬುಲ್, ಬಿಳಿಯ ಕುತ್ತಿಗೆಯ ಬುಲ್‌ಬುಲ್, ಕೆಂಪುಗಲ್ಲದ ಹಳದಿ ಬುಲ್‌ಬುಲ್ ಹೀಗೆ ಅನೇಕ ತರಹ ಇವೆ. ಇವೆಲ್ಲ ಹಕ್ಕಿಗಳೂ ನಮ್ಮ ತೋಟದಲ್ಲಿ ಅಸಂಖ್ಯಾತವಾಗಿ ಇದ್ದವು. ಮನೆ ಹತ್ತಿರದ ಲಂಟಾನದ ಗಿಡಗಳಾಗಲೀ, ಚೆರ್ರಿ ಗಿಡಗಳಾಗಲೀ ಹಣ್ಣಾದರೆ ಸಾಕು, ಅಲ್ಲಿ ಅವು ಸೇರಿಕೊಂಡು ಗಲಾಟೆಯೋ ಗಲಾಟೆ. ಮನೆ ಪಕ್ಕ ಪ್ರೈಮರಿ ಸ್ಕೂಲ್ ಇದ್ದ ಹಾಗೆ ನನಗೆ ಭಾಸವಾಗುತ್ತಿತ್ತು. ಆದರೆ ಫೋಟೋ ತೆಗೆಯೋಣವೆಂದು ಹೋದರೆ ಸಾಕು, ಅಷ್ಟು ಹಕ್ಕಿಗಳೂ ಬುರ್ರನೆ ರೆಕ್ಕೆ ಬಡಿಯುತ್ತಾ ಮಿಕ್ಕ ಹಕ್ಕಿಗಳಿಗೆ ಎಚ್ಚರಿಕೆ ಕೂಗು ಕೂಗುತ್ತಾ ದಿಕ್ಕಾಪಾಲಾಗಿ ಪರಾರಿಯಾಗಿ ಬಿಡುತ್ತಿದ್ದವು.

ಕಾಡಿನ ಈ ಚಿಕ್ಕಪುಟ್ಟ ಹಕ್ಕಿಗಳಲ್ಲಿ ಇನ್ನೊಂದು ಅಭ್ಯಾಸ ನಾನು ಗಮನಿಸಿದ್ದೇನೆ. ಇವುಗಳ ಗೂಡುಗಳಿಗೆ ಸದಾ ಕೇರೆ ಹಾವು, ಕೆಂಬೂತ, ಬೆಕ್ಕು, ಕೋಗಿಲೆಗಳು, ಗೂಬೆಗಳು ಕಾಟ ಕೊಡುತ್ತವೆ. ಅನೇಕ ಹಕ್ಕಿಗಳಂತೂ ಇತರ ಹಕ್ಕಿಗಳ ಮೊಟ್ಟೆಗಳನ್ನು ಕದ್ದು ತಿಂದೇ ಜೀವನಯಾಪನೆ ಮಾಡುತ್ತವೆ. ಮೊಟ್ಟೆ ಕದಿಯಲು ಹೋದಾಗೇನಾದರೂ ಕಾವು ಕೊಡುತ್ತ ಕುಳಿತಿದ್ದ ತಾಯಿ ಹಕ್ಕಿ ಸಿಕ್ಕರೆ ಅದನ್ನೂ ಅವು ಗುಳುಂ ಮಾಡುತ್ತವೆ. ಈ ಉಪದ್ರ ಮಾರಿಗಳಿಂದೆಲ್ಲ ತಮ್ಮ ಗೂಡನ್ನು ರಕ್ಷಿಸಿಕೊಳ್ಳಲಾಗದ ಚಿಕ್ಕಪುಟ್ಟ ಅಸಹಾಯಕ ಹಕ್ಕಿಗಳು ಆದಷ್ಟೂ ಮನುಷ್ಯರ ಓಡಾಟ ಬಳಕೆ ಇರುವಂಥ ಜಾಗಗಳಲ್ಲೇ, ಎಂದರೆ ಮನೆಯ ಬಳಿ, ಸೌದೆ ಕೊಟ್ಟಿಗೆಯಲ್ಲಿ, ಸಸಿ ಚಪ್ಪರದ ಸೊಪ್ಪಿನಲ್ಲಿ ಇಂಥ ಜಾಗಗಳಲ್ಲಿ ಗೂಡನ್ನು ಕಟ್ಟುತ್ತವೆ. ಇದಕ್ಕೆ ಮುಖ್ಯ ಕಾರಣ ಅಪಾಯಕಾರಿ ಹಕ್ಕಿಗಳು ಮನುಷ್ಯರು ಓಡಾಡುವ ಜಾಗಗಳಲ್ಲಿ ಬರಲು ಅಂಜುತ್ತವೆ ಎಂಬುದು.

ಒಮ್ಮೆ ನಮ್ಮ ಸಸಿ ಚಪ್ಪರದ ಪಕ್ಕ ಹೊದಿಸಿದ್ದ ಅಡ್ಡ ತಡಿಕೆಯ ಸೊಪ್ಪಿನಲ್ಲಿ ಒಂದು ಪಿಕಳಾರ ಹಕ್ಕಿ ಗೂಡು ಮಾಡಿತ್ತು. ನಾನು ಸಸಿಗಳನ್ನು ನೋಡಲು ಹೋದಾಗಲೆಲ್ಲ ನನ್ನ ಮಗಳು ಸುಸ್ಮಿತಾಳನ್ನೂ ಕರೆದೊಯ್ದು ಚುಕ್ಕೆಚುಕ್ಕೆಗಳಿರುವ ಕೆಂಬಣ್ಣದ ಮೊಟ್ಟೆಗಳನ್ನೂ, ಹಕ್ಕಿಗೂಡನ್ನೂ ತೋರಿಸುತ್ತಿದ್ದೆ. ಇನ್ನೂ ಸ್ಕೂಲಿಗೆ ಹೋಗದ ಐದಾರು ವರ್ಷದ ಅವಳಿಗೆ ಇವೇ ಮೊದಲ ಪಾಠಗಳಾಗಿದ್ದುವು. ಕಾವು



11th_Kannada_Reader_Final_16-07-2018.indd 70 16-07-2018 18:43:01

ಕೊಡುತ್ತಿದ್ದ ತಾಯಿಹಕ್ಕಿ ನಾವು ಚಪ್ಪರದೊಳಗೆ ಹೋಗುತ್ತಲೂ ನಮಗೆ ಗೊತ್ತಾಗದಂತೆ ತಡಿಕೆಯ ಇನ್ನೊಂದು ಬದಿಯಿಂದ ಹಾರಿ ಹೋಗುತ್ತಿತ್ತು. ನಾವು ಹಿಂದಿರುಗುತ್ತಲೂ ಮತ್ತೆ ಬಂದು ಕಾವು ಕೂರುತ್ತಿತ್ತು. ಹೀಗೇ ಕೆಲವು ದಿನ ನಡೆಯಿತು. ಆದರೆ ಒಂದು ದಿನ ಮಾತ್ರ ನಾವು ಹೋದಾಗ ತಾಯಿಹಕ್ಕಿ ಅಲ್ಲಿರಲಿಲ್ಲ. ಬರೀ ಮೊಟ್ಟೆಗಳು ಮಾತ್ರ ಇದ್ದುವು. ತಾಯಿ ಹಕ್ಕಿ ನಾವು ಬರುವ ಮೊದಲೇ ಹಾರಿ ಹೋಗಿರಬೇಕೆಂದು ತಿಳಿದು ನಾವು ಹಿಂದಿರುಗಿದೆವು. ಆದರೆ ಸಂಜೆ ನೋಡಿದಾಗಲೂ ಗೂಡು ಖಾಲಿ ಇತ್ತು. ಮೊಟ್ಟೆಗಳು ಮಾತ್ರ ಇದ್ದುವು! ತಾಯಿ ಹಕ್ಕಿಗೆ ಏನೋ ತೊಂದರೆಯಾಗಿರಬಹುದೆಂದು ಅನುಮಾನಿಸಿದೆ. ಆದರೂ ಈ ಬಗ್ಗೆ ಹೆಚ್ಚು ಯೋಚಿಸದೆ ಮನೆಗೆ ಹಿಂದಿರುಗಿದೆ.

ಮಾರನೆ ದಿನ ಮತ್ತೆ ಹೋದಾಗ ಸುಸ್ಮಿತ ನನ್ನ ಜೊತೆ ಇದ್ದಳು. ಆಗಲೂ ಗೂಡಿನಲ್ಲಿ ಮೊಟ್ಟೆಗಳು ಮಾತ್ರ! ತಾಯಿ ಹಕ್ಕಿಯ ಸುಳಿವಿರಲಿಲ್ಲ. ಮೊಟ್ಟೆಗಳನ್ನು ಮುಟ್ಟಿ ನೋಡಿದೆ. ಸಾಧಾರಣವಾಗಿ ಬೆಚ್ಚಗಿರಬೇಕಾದ ಮೊಟ್ಟೆಗಳು ತಣ್ಣಗಾಗಿದ್ದವು. ಎಂದರೆ ಬಹುಕಾಲದಿಂದ ತಾಯಿ ಹಕ್ಕಿ ಕಾವು ಕೂರುವುದನ್ನು ನಿಲ್ಲಿಸಿದೆ!

ಏನಾಗಿರಬಹುದೆಂದು ಚಪ್ಪರದ ಆಚೆಗೆ ಇಣುಕಿ ನೋಡಿದೆ. ಅಲ್ಲಿ ತಾಯಿ ಹಕ್ಕಿಯ ಪುಕ್ಕಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಕಂತೆ ಕಂತೆ ಬಿದ್ದಿತ್ತು. ಗೂಬೆಯೋ ಏನೋ ರಾತ್ರಿ ಬಂದು ಕಾವು ಕೊಡುತ್ತ ಕುಳಿತ ಹಕ್ಕಿಯನ್ನು ಹಿಡಿದು ಅಲ್ಲೇ ಪುಕ್ಕ ಎಲ್ಲಾ ಕಿತ್ತು ತಿಂದಿದೆ. ಅದಕ್ಕೇ ಎರಡು ದಿನದಿಂದ ಹಕ್ಕಿ ಕಾವು ಕುಳಿತಿಲ್ಲ! ಇನ್ನು ಮೊಟ್ಟೆಗಳು ತಬ್ಬಲಿಗಳೇ ಸರಿ!

ಸುಸ್ಮಿತಳಿಗೆ ಏನಾಗಿದೆಯೆಂದು ವಿವರಿಸಿ ಅಲ್ಲಿ ಬಿದ್ದಿದ್ದ ಪುಕ್ಕಗಳನ್ನೆಲ್ಲ ತೋರಿಸಿದೆ. ತೀರಾ ಚಿಕ್ಕವಳಿದ್ದ ಅವಳಿಗೆ ಹೆಚ್ಚಿಗೆ ಏನೂ ಅರ್ಥವಾಗಿರಲಾರದು. ಆದರೂ, 'ಈಗ ಮೊಟ್ಟೆ ಒಡೆದು ಮರಿ ಬರೋಲ್ಲವಾ?' ಎಂದು ಕೇಳಿದಳು. ಅವಳಿಗೆ ಹಕ್ಕಿ ಕಾವು ಕುಳಿತು ಶಾಖ ಕೊಡುವುದು ಮರಿಯಾಗಲು ಎಷ್ಟು ಅಗತ್ಯ ಎಂದು ವಿವರಿಸಿದೆ. ಅದಕ್ಕೆ ಅವಳು, 'ಹಂಗಾದರೆ ನಾವೇ ಶಾಖ ಕೊಡೋಣ' ಎಂದಳು. ಶಾಖ ಕೊಡುವುದು ಎಂದರೆ ಬೆಂಕಿಯಲ್ಲಿ ಬಿಸಿ ಮಾಡುವುದು ಎಂದು ತಿಳಿದಿದ್ದಳೋ ಏನೋ !

ಮೊಟ್ಟೆಗಳಿಗೆ ಕೃತಕವಾಗಿ ಕಾವು ಕೊಟ್ಟು ಮರಿ ಮಾಡುವ ಇನ್ಕ್ಯುಬೇಟರ್‌ಗಳನ್ನು ನಾನು ನೋಡಿದ್ದೆ. ಆದರೆ ನನ್ನ ಬಳಿ ಆ ರೀತಿ ನಿಯಂತ್ರಿತ ಶಾಖ ಕೊಟ್ಟು ಮೊಟ್ಟೆ ಮರಿ ಮಾಡುವ ಸಾಧನಗಳೇನೂ ಇರಲಿಲ್ಲ. ಆದರೂ ಸುಸ್ಮಿತ, 'ನಾವೇ ಶಾಖ ಕೊಡೋಣ' ಎಂದು ಹೇಳಿದ್ದರಿಂದ 'ಹೇಗಿದ್ದರೂ ಈ ಮೊಟ್ಟೆಗಳು ಹಾಳಾದಂತೆಯೇ. ನಾನೇ ಯಾಕೆ ಒಂದು ಪ್ರಯೋಗಕ್ಕೆ ಇವನ್ನು ಉಪಯೋಗಿಸಬಾರದು?' ಎನ್ನಿಸಿತು.

ಮೆಲ್ಲಗೆ ಗೂಡು ಸಮೇತ ಮೂರು ಮೊಟ್ಟೆಗಳನ್ನು ಎತ್ತಿಕೊಂಡು ಮನೆಗೆ ಬಂದೆವು. ಮನೆಗೇನೋ ತಂದೆವು. ಆದರೆ ಹಕ್ಕಿ ಕಾವು ಕೊಟ್ಟಂತೆ ಅವುಗಳಿಗೆ ಏಕಪ್ರಕಾರವಾಗಿ ಹೇಗೆ ಶಾಖ ಕೊಡುವುದು ಎಂಬುದು ಬಗೆ ಹರಿಯಲಿಲ್ಲ. ಜೊತೆಗೆ ಪಿಕಳಾರದ ಮೈ ಶಾಖ ಎಷ್ಟಿರುತ್ತದೆಂದೂ ನನಗೆ ಗೊತ್ತಿರಲಿಲ್ಲ. ಕೊನೆಗೆ ನಾನು ಮೊಟ್ಟೆಗಳನ್ನು ಊಟದ ಮನೆಯಲ್ಲಿ ನಲ್ವತ್ತು ಕ್ಯಾಂಡ್ಲಿನ ದೀಪದ ಅಡಿ ದಾರ ಕಟ್ಟಿ ನೇತು ಹಾಕಿದೆ. ಮೊಟ್ಟೆಗಳು ಒಡೆದು ಮರಿಯಾಗಬಹುದೆಂಬ ದೂರದ ಆಸೆಯೂ ನನಗಿರಲಿಲ್ಲ. ಏಕೆಂದರೆ ತಾಯಿ ಹಕ್ಕಿ ಸತ್ತ ಮೇಲೆ ಸುಮಾರು ಎರಡು ದಿನದವರೆಗೆ ಮೊಟ್ಟೆಗಳು ತಣ್ಣಗಾಗಿ ಬಿದ್ದಿದ್ದು. ಜೊತೆಗೆ ಬಲ್ಬಿನ ಶಾಖ ಪಿಕಳಾರದ ಹಕ್ಕಿಯ ಶಾಖದಂತೆ ಕಾಣಲಿಲ್ಲ. ಇದನ್ನೆಲ್ಲಾ ಮಾಡಿದ್ದು ನಾನು ಸುಸ್ಮಿತಳ ಕುತೂಹಲ ಸಮಾಧಾನಗಳಿಗಾಗಿ ಮಾತ್ರ.

ಅದನ್ನು ಮನೆಯಲ್ಲಿ ನೇತು ಹಾಕಿದ ಮೇಲೆ ಪ್ರತಿದಿನ ಸುಸ್ಮಿತ ಆಗಿಂದಾಗ್ಗೆ ಅದರೊಳಗೆ ಇಣುಕಿ ನೋಡುವುದು, ಏನೇನಾದರೂ ಪ್ರಶ್ನೆ ಕೇಳುವುದು ನಡೆಸಿದ್ದಳು. ಅವಳಿಗೆ ಜಲಚರಗಳಿಂದ ಹಿಡಿದು ಸಸ್ತನಿಗಳವರೆಗೆ ವಂಶಾಭಿವೃದ್ಧಿ ಹೇಗೆ ಹೇಗೆ ವಿಕಾಸವಾಗುತ್ತಾ ಬಂದಿದೆ ಎಂದು ನಿಧಾನವಾಗಿ ವಿವರಿಸಿದೆ. ಕಣ್ಣೆದುರಿಗೆ ಮೊಟ್ಟೆ ಇದ್ದುದರಿಂದಲೋ ಏನೋ ನಾನು ಹೇಳಿದ್ದರಲ್ಲಿ ಬಹುಪಾಲು ಅವಳಿಗೆ ಅರ್ಥವಾದಂತೆ ತೋರಿತು.



11th_Kannada_Reader_Final_16-07-2018.indd 71 16-07-2018 18:43:01

ಜೀವವಿಕಾಸದಲ್ಲಿ ಕೆಳಗಿನ ಹಂತದ ಜೀವಿಗಳಾದ ಜಲಚರಗಳು ಹಕ್ಕಿಗಳಂತೆ ಮೊಟ್ಟೆಗಳನ್ನು ಜೋಪಾನ ಮಾಡುವುದಿಲ್ಲ. ಅವು ಇಡುವ ಮೊಟ್ಟೆಗಳು ವಾತಾವರಣದ ಶಾಖಕ್ಕೇ ಒಡೆದು ಮರಿಯಾಗಬೇಕು. ಅಷ್ಟಲ್ಲದೆ ಅವೇ ಸ್ವಶಕ್ತಿಯಿಂದ ಆಹಾರ ಸಂಪಾದನೆ ಮಾಡಿಕೊಂಡು ಬದುಕಬೇಕು. ಹೀಗಾಗಿ ಅವು ಇಡುವ ಮೊಟ್ಟೆಗಳಲ್ಲಿ ಕೊನೆಗೆ ಬದುಕಿ ಉಳಿಯುವುವು ಶೇಕಡ ಒಂದು ಅಥವಾ ಎರಡು. ಈ ಕಾರಣಗಳಿಂದಲೇ ಜಲಚರಗಳು ಇಡುವ ಮೊಟ್ಟೆಗಳು ಅಸಂಖ್ಯಾತ. ಮೀನುಗಳು ಒಂದೊಂದು ಸಾರಿಗೆ ಎಪ್ಪತ್ತು ಎಂಭತ್ತು ಸಹಸ್ರ ಮೊಟ್ಟೆಗಳನ್ನು ಇಡುತ್ತವೆ. ಕಪ್ಪೆಚಿಪ್ಪುಗಳು ಹಲವು ಲಕ್ಷ ಮೊಟ್ಟೆಗಳನ್ನಿಡುತ್ತವೆ. ಇಷ್ಟಾದರೂ ಅವುಗಳಲ್ಲಿ ಕೆಲವೇ ಬದುಕಿ ಉಳಿಯುವುದು.

ಹಾವು, ಹಲ್ಲಿ, ಓತಿಕ್ಯಾತ, ಆಮೆ ಮುಂತಾದ ಸರೀಸೃಪಗಳು ನೂರಿನ್ನೂರು ಮೊಟ್ಟೆಗಳನ್ನಿಡುತ್ತವೆ. ಮುಟ್ಟಿದರೆ ಮೆತ್ತಗೆ ರಬ್ಬರ್ ಮೊಟ್ಟೆಗಳಂತಿರುವ ಇವನ್ನು ಮರಳಿನಲ್ಲಿ ಗುಂಡಿ ತೋಡಿ ಆಳಕ್ಕೆ ಹುಗಿದಿಡುತ್ತವೆ. ಬಿಸಿ ಮರಳಿನ ಶಾಖಕ್ಕೆ ಅವುಗಳ ಭ್ರೂಣಗಳು ಬೆಳೆದು ಒಡೆದು ಮರಿಗಳು ಹೊರಬರುತ್ತವೆ. ಜಲಚರಗಳಿಗಿಂತ ಇವು ಹೆಚ್ಚಿನ ಆಸ್ಥೆ ಶ್ರದ್ಧೆಯನ್ನು ತೋರಿಸುತ್ತವೆಯಾದರೂ ಈ ಮೊಟ್ಟೆಗಳೂ ಸಹ ವಾತಾವರಣದ ಏರುಪೇರುಗಳನ್ನು ಅವಲಂಬಿಸಿವೆ.

ಆದರೆ ಹಕ್ಕಿಗಳ ಹಂತಕ್ಕೆ ಬರುವ ವೇಳೆಗಾಗಲೇ ನಾವು ಇನ್ನೂ ಸೂಕ್ಷ್ಮ ನಡವಳಿಕೆಗಳನ್ನು ಕಾಣಬಹುದು. ಅವು ಸಾಧಾರಣವಾಗಿ ತಮ್ಮ ಮೈಯ್ಯಗಲಕ್ಕೆ ಸಮನಾಗುವಷ್ಟು ಎಂದರೆ ಎರಡು ಮೂರು ಮೊಟ್ಟೆಗಳನ್ನು ಮಾತ್ರ ಇಡುತ್ತವೆ. ಅಷ್ಟೇ ಅಳತೆಯಲ್ಲಿ ಗೂಡು ಕಟ್ಟಿ ತಮ್ಮ ಮೈ ಶಾಖ ಉಳಿಯುವಂತೆ ಸುತ್ತ ಪುಕ್ಕ, ಹತ್ತಿ, ಜೇಡರ ಬಲೆ ಇತ್ಯಾದಿಗಳ ಹಾಸಿಗೆ ನಿರ್ಮಿಸಿಕೊಳ್ಳುತ್ತವೆ. ವಾತಾವರಣದ ಶಾಖವನ್ನು ಕೊಂಚವೂ ಅವಲಂಬಿಸದೆ ತಮ್ಮ ಮೈ ಶಾಖದಿಂದಲೇ ಭ್ರೂಣಗಳು ಬೆಳೆದು ಹೊರಬರುವಂತೆ ಅವುಗಳ ಮೇಲೆ ಕುಳಿತು ಕಾವು ಕೊಡುತ್ತವೆ. ಅವು ಮರಿಯಾಗಿ ಹೊರ ಬಂದ ನಂತರ ಅವುಗಳಿಗೆ ಗುಟುಕು ಕೊಟ್ಟು ಬೆಳೆಸಿ ಹಾರುವುದನ್ನೂ ಆಹಾರ ಸಂಪಾದನೆಯನ್ನೂ ಕಲಿಸಿ ಹೊರಜಗತ್ತಿಗೆ ಬಿಡುತ್ತವೆ.

ಸಸ್ತನಿಗಳಲ್ಲಿ ಇದು ಇನ್ನೂ ಹೆಚ್ಚು ಮುಂದುವರೆದಿರುವುದನ್ನು ನೋಡಬಹುದು. ಇಲ್ಲಿ ಭ್ರೂಣ ಹೊರ ಜಗತ್ತಿಗೆ ಯಾವ ಸಂಬಂಧವೂ ಇಲ್ಲದಂತೆ ತಾಯಿಯ ಹೊಟ್ಟೆಯೊಳಗೇ ಬೆಳೆದು ಹೊರಬರುತ್ತದೆ.

ದಿನಾ ಒಂದೊಂದು ಪ್ರಶ್ನೆ ಕೇಳುತ್ತ ಮೊಟ್ಟೆಗಳನ್ನು ಇಣುಕಿಣುಕಿ ನೋಡುತ್ತಿದ್ದ ಸುಸ್ಮಿತ ಒಂದು ದಿನ ಉದ್ವೇಗದಲ್ಲಿ ಎದ್ದು ಬಿದ್ದು ಓಡಿ ಬಂದಳು :

'ಅಣ್ಣಾ, ಮೊಟ್ಟೆ ಒಡೆದು ಮರಿ ಬಂದಿದ್ದಾವೆ!' ಎಂದು ಕೂಗಿದಳು.

ನನಗೆ ನಂಬಿಕೆ ಬರಲಿಲ್ಲ. ನಿರ್ಜೀವ ಗೋಲಿಗಳಂತೆ ಬಿದ್ದಿರುತ್ತಿದ್ದ ಚುಕ್ಕೆ ಚುಕ್ಕೆಯ ಕೆಂಪು ಮೊಟ್ಟೆಗಳಿಂದ ಎಂದಾದರೂ ಮರಿಗಳು ಬಂದಾವೆಂದು ನಾನು ಊಹಿಸಿರಲಿಲ್ಲ. ಆದರೆ ಅವುಗಳಿಂದ ಜೀವ ಪವಾಡ ಹೊರ ಬಂದಿದ್ದನ್ನು ಸಾಕ್ಷಾತ್ತಾಗಿ ನೋಡಿ ಸುಸ್ಮಿತ ಅತ್ಯಾಶ್ಚರ್ಯದಿಂದ ಕೂಗಿಕೊಂಡು ಓಡಿ ಬಂದಿದ್ದಳು.

ನೇತು ಹಾಕಿದ್ದ ಗೂಡಿನಲ್ಲಿನ ಮೊಟ್ಟೆಗಳಲ್ಲಿ ಎರಡು ಒಡೆದು ಮರಿಗಳಾಗಿದ್ದವು ಹತ್ತಿರ ಹೋದರೆ ಸಾಕು, ಇಡೀ ಬ್ರಹ್ಮಾಂಡವನ್ನೇ ನುಂಗುವಂತೆ ಬಾಯಿ ಕಳೆಯುತ್ತ ತಲೆಯಾಡಿಸುತ್ತಿದ್ದವು. ಆಗ ತಾನೇ ಮೊಟ್ಟೆಯೊಡೆದು ಹೊರ ಬಂದ ಮರಿಗಳಾದ್ದರಿಂದ ಹಸಿ ಮಾಂಸದ ಮುದ್ದೆಗಳಂತೆ ಕಾಣುತ್ತಿದ್ದ ಅವು ಹಕ್ಕಿಗಳಂತೆ ಕಾಣುತ್ತಲೇ ಇರಲಿಲ್ಲ. ಕೊಕ್ಕು ಅಗಲಿಸಿ ತಿಂಡಿಗಾಗಿ ಬಾಯಿ ಕಳೆಯುವುದೊಂದೇ ಅಲ್ಲಿ ನಮಗೆ ಕಾಣುತ್ತಿದ್ದ ಸಜೀವ ಲಕ್ಷಣ. ಸುಸ್ಮಿತ ಅವು ಬಾಯಿ ಕಳೆಯುತ್ತಿದ್ದುದನ್ನು ನೋಡಿ, 'ಅವಕ್ಕೆ ಊಟ ಬೇಕಾಗಿದೆ' ಎಂದಳು. ಅವಳು ಇದೊಂದು ಗೊಂಬೆಯಾಟದಂತೆ ಎಂದು ತಿಳಿದಿದ್ದಳೋ ಏನೋ! ಅವಳ ಆ ಮಾತು ಕೇಳಿದ ಕೂಡಲೇ ನನಗೆ ಮಾತ್ರ ಆಕಾಶ ತಲೆ ಮೇಲೆ ಕಳಚಿ ಬಿದ್ದಂತಾಯ್ತು. ಅವುಗಳಿಗೆ



11th_Kannada_Reader_Final_16-07-2018.indd 72 16-07-2018 18:43:01

ಏನು ಊಟ ಕೊಡುವುದು ? ಹೇಗೆ ಸಾಕುವುದು? ಸುಮ್ಮನಿರಲಾರದೆ ಆ ಮೊಟ್ಟೆಗಳನ್ನು ಮನೆಗೆ ತಂದು ತಲೆ ಮೇಲೆ ಭಯಂಕರ ಜವಾಬ್ದಾರಿ ಎಳೆದು ಕೊಂಡಂತಾಯ್ತು.

ಹಕ್ಕಿಗಳಲ್ಲಿ ಅನೇಕವು ಅನೇಕ ತರಹದ ಆಹಾರಗಳಿಗೆ ಒಗ್ಗಿರುತ್ತವೆ. ಕೆಲವು ಹಣ್ಣುಗಳನ್ನೇ ತಿನ್ನುತ್ತವೆ. ಕೆಲವು ಕೀಟಗಳನ್ನು ತಿನ್ನುತ್ತವೆ. ಕೆಲವು ಭತ್ತ, ಗೋಧಿ ಇತ್ಯಾದಿ ಗಟ್ಟಿ ಕಾಳುಗಳನ್ನು ತಿನ್ನುತ್ತವೆ. ಕೆಲವು ಹೂವಿನ ಜೇನನ್ನೇ ಕುಡಿದು ಬದುಕುತ್ತವೆ. ಈ ಹಕ್ಕಿಗಳೆಲ್ಲ ಎಷ್ಟೊಂದು ಮಿಲಿಯಾಂತರ ವರ್ಷದಿಂದ ಆಯಾ ರೀತಿಯ ವಿಶಿಷ್ಟ ಆಹಾರಕ್ಕೆ ಒಗ್ಗಿರುತ್ತವೆಂದರೆ ನಾಲಗೆಯಿಂದ ಹಿಡಿದು ಕರುಳಿನವರೆಗೆ ಅವುಗಳ ಅಂಗಾಂಗಗಳೆಲ್ಲ ಅದಕ್ಕಾಗಿ ರೂಪಾಂತರಗೊಂಡಿರುತ್ತವೆ. ಒಂದರ ಆಹಾರವನ್ನು ಇನ್ನೊಂದು ತಿನ್ನುವುದೇ ಇಲ್ಲ. ತಿಂದರೆ ಸತ್ತೇ ಹೋಗುತ್ತವೆ.

ಮಗಳಿಗೆ ವಿವರಿಸಿದೆ: 'ನಮ್ಮ ಊಟ ಅವಕ್ಕೆ ಕೊಟ್ಟರೆ ಅವು ಸತ್ತೇ ಹೋಗುತ್ತವೆ. ಈಗ ಹೆಂಚಿನ ಸಂದಿಯಲ್ಲಿ ಗುಬ್ಬಚ್ಚಿ ಜೇಡರ ಹುಳು ಹಿಡಿದು ಊಟ ಮಾಡುವುದನ್ನು ನೋಡಿದ್ದೀಯಲ್ಲ. ಅದರ ಊಟ ನೀನು ತಿಂದರೆ ಬದುಕುತ್ತೀಯಾ? ಹಾಗೇ ನಿನ್ನ ಊಟ ಅದು ತಿಂದರೆ ಸತ್ತೇ ಹೋಗುತ್ತೆ' ಎಂದೆ. ಅವಳಿಗೆ ಅರ್ಥವಾಯ್ತೆಂದು ತೋರುತ್ತದೆ.

ಆದರೆ ಇದರಿಂದ ನನ್ನ ಸಮಸ್ಯೆ ಪರಿಹಾರವಾಗಲಿಲ್ಲ. ಬಾಯಿ ಕಳೆಯುವ ಮರಿಗಳಿಗೆ ಏನಾದರೂ ಹಾಕಲೇ ಬೇಕಿತ್ತು. ಏನನ್ನು ಕೊಡಬಹುದು ? ಇಂಥ ವಿಷಯಕ್ಕೆಲ್ಲ ನನಗೆ ಮಾರನೇ ಸಲಹೆಗಾರ. ಮನೆ ಹಿಂದುಗಡೆ ಎಲ್ಲೋ ನೆರಳಿನಲ್ಲಿ ನಿದ್ದೆ ಹೊಡೆಯುತ್ತಿದ್ದ ಅವನನ್ನು ಕರೆದೆ.

ಅವನು, 'ನಾನ್ಯಾಕೆ ಈ ಸುಡುಗಾಡು ಚಿಟ್ಟಹಕ್ಕಿಗಳನ್ನು ಸಾಕಲಿ ಹೇಳಿ. ಕೋಳೀನೋ ಕುರೀನೋ ಸಾಕಿದರೆ ಒಂದು ತರ. ಮೂರು ಕಾಸಿನ ಮಾಂಸ ಇಲ್ಲದ ಈ ಗುಬ್ಬಿಗಳನ್ನೆಲ್ಲಾ ಯಾಕೆ ಸಾಕಬೇಕು ? ಇದರ ಬದಲು ನಾಕು ಕೋಳಿ ಪಿಳ್ಳೆ ತಂದು ಕೊಡ್ತೀನಿ, ಸಾಕಿ. ನಂಟರು ಮನೆಗೆ ಬಂದರೆ ಸಾರು ಮಾಡಬಹುದು' ಎಂದು ಹಕ್ಕಿ ಮರಿಯನ್ನು ಸಾಕುವ ನನ್ನ ಯೋಚನೆಯನ್ನೇ ತಿರಸ್ಕರಿಸಿದ. ನನಗೆ ಬಂದಿರುವ ನೈತಿಕ ಉಭಯಸಂಕಟ ಅವನ ತಲೆಗೇ ಹೋಗಲಿಲ್ಲ.

'ಅಮೇಲೆ ನನ್ನ ಬಳಿ ಇದ್ದ ಸಲೀಂ ಆಲಿ ಹಾಗೂ ಇತರ ಪಕ್ಷಿ ಶಾಸ್ತ್ರಜ್ಞರ ಪುಸ್ತಕ ತಿರುವಿ ಹಾಕಿದೆ. ಅವರು ಯಾರೂ ಹಕ್ಕಿ ಮರಿಗಳನ್ನು ಸಾಕುವುದರ ಬಗ್ಗೆ ಏನನ್ನೂ ಬರೆದಿರಲಿಲ್ಲ. ಬುಲ್ ಬುಲ್ ಹಕ್ಕಿಗಳು 'ಫಲ ಮತ್ತು ಕೀಟಾಹಾರಿ ಪಕ್ಷಿಗಳು' ಎಂದು ಒಂದೇ ವಾಕ್ಯದಲ್ಲಿ ಅವುಗಳ ಇತ್ಯೋಪರಿಗಳನ್ನೆಲ್ಲಾ ಮುಗಿಸಿದ್ದರು. ಮಾರನ ಸಲಹೆಯಂತೆಯೇ ಇವರ ಪುಸ್ತಕಗಳೂ ನನಗೆ ನಿರುಪಯುಕ್ತವಾಗಿದ್ದವು.

ಕೀಟಗಳೆಂದರೆ ಯಾವುವು? ನೂರಾರು ತರದ ಕೀಟಗಳಿದ್ದಾವೆ. ಅವುಗಳಲ್ಲಿ ಯಾವುವನ್ನೂ ಹಿಡಿದು ಮರಿಗಳ ಬಾಯಿಗೆ ತುರುಕಲು ಮನಸ್ಸೇ ಬರಲಿಲ್ಲ. ಅವುಗಳ ಮೀಸೆ, ಕಚ್ಚುವ ದವಡೆ, ಕಾಲಿನಲ್ಲಿರುವ ಮುಳ್ಳುಗಳು ಇವನ್ನೆಲ್ಲಾ ನೋಡಿದರೆ ಆ ಮರಿಗಳ ಬಾಯಿಗೆ ಹಾಕುವುದಿರಲಿ ಕೈಯಿಂದ ಮುಟ್ಟಲೂ ಮನಸ್ಸು ಬರಲಿಲ್ಲ.

ಪಿಕಳಾರಗಳು ಲಂಟಾನ ಹಣ್ಣು ತಿನ್ನುವುದನ್ನು ನೋಡಿದ್ದೆ. ಆದರೆ ಲಂಟಾನ ಹಣ್ಣುಗಳನ್ನು ಹುಡುಕಿದರೆ ಒಂದೇ ಒಂದು ಹಣ್ಣೂ ಗಿಡಗಳಲ್ಲಿ ಕಾಣಲಿಲ್ಲ. ಕೊನೆಗೆ ಇನ್ನೇನೂ ಮಾಡಲಾರದೆ ಮನೆಯಲ್ಲಿದ್ದ ಬಾಳೆಹಣ್ಣನ್ನೇ ಕೊಡೋಣವೆಂದು ತೀರ್ಮಾನಿಸಿದೆ. ಆದರೆ ಹಲ್ಲಿಲ್ಲದ ಅವುಗಳ ಬಾಯಿಗೆ ಬಾಳೆ ಹಣ್ಣಿನ ಚೂರು ಹಾಕಿದರೆ ಉಪಯೋಗವಿಲ್ಲವೆಂದು ಬಾಳೆಹಣ್ಣನ್ನು ಕಿವಿಚಿ ಲೇಹ್ಯ ಮಾಡಿದಂತೆ ಮಾಡಿ ಚಮಚದಲ್ಲಿ ಕೊಂಚಕೊಂಚವನ್ನೇ ತೆಗೆದು ಎರಡರ ಬಾಯಿಗೂ ಹಾಕಿದೆ.

ದೊಡ್ಡ ಅನಾಹುತವೇ ಆಯ್ತು. ಬಾಳೆಹಣ್ಣಿನ ಲೇಹ್ಯ ಸಹ ನುಂಗುವ ತ್ರಾಣವಿಲ್ಲದ ಆ ಮರಿಗಳ ಗಂಟಲಲ್ಲಿ ಬಾಳೆಹಣ್ಣು ಗಿಡಿದು ಕುಳಿತು ಅವುಗಳ ಮೂಗುಗಳಿಂದೆಲ್ಲಾ ಬಾಳೆಹಣ್ಣಿನ ಲೇಹ್ಯ ಹೊರಬಂದು



11th_Kannada_Reader_Final_16-07-2018.indd 73 16-07-2018 18:43:01

ನಾನು ಅವಕ್ಕೆ ಉಸಿರಾಡಲು ಪ್ರಾಥಮಿಕ ಚಿಕಿತ್ಸೆಗೆ ಯೋಚಿಸುವ ಮೊದಲೇ ಸತ್ತು ಹೋದವು. ನಾನೇ ಸಾಯಿಸಿದೆ ಎಂದು ಕೋಪಗೊಂಡ ಸುಸ್ಮಿತಾ ಅಳುತ್ತಾ ತನ್ನ ಪುಟ್ಟ ಕೈಗಳಿಂದ ನನ್ನ ಕಾಲಿಗೆ ರಪರಪ ಹೊಡೆದಳು.

ನಾನು ಕೂಡಲೇ ಮಾಡಿದ ಮೊದಲ ಕೆಲಸ ಅಂದರೆ ಇನ್ನೂ ಮರಿಯಾಗದಿದ್ದ ಮೊಟ್ಟೆಯೊಡನೆ ಬಾಯಲ್ಲಿ ಬಾಳೆಹಣ್ಣು ಮೆತ್ತಿಕೊಂಡು ಸತ್ತ ಹಕ್ಕಿಗಳ ಸಮೇತ ಇಡೀ ಗೂಡನ್ನೂ, ಉಳಿದಿದ್ದ ಬಾಳೆಹಣ್ಣಿನ ಲೇಹ್ಯವನ್ನೂ ಒಯ್ದು ಕಾಡೊಳಗೆ ಎಸೆದು ಬಂದೆ. ತಡೆದರೆ ಆ ಮೊಟ್ಟೆಯಿಂದಲೂ ಮರಿ ಹೊರಬರುತ್ತದೆಂದು ನನಗೆ ದಿಗಿಲಾಗಿತ್ತು. ಹಕ್ಕಿ ಮರಿಗಳನ್ನು ನಾನೇ ಸಾಕಿ ಫೋಟೋ ತೆಗೆಯಬೇಕೆಂಬ ನನ್ನ ಯೋಜನೆ ಪ್ರಾಥಮಿಕ ಹಂತದಲ್ಲೇ ನುಚ್ಚುನೂರಾಯ್ತು.

ಹಕ್ಕಿ ಮರಿಗಳನ್ನು ಸಾಕಿ ಫೋಟೋ ತೆಗೆಯಬೇಕೆಂಬ ನನ್ನ ಯೋಜನೆಯನ್ನು ನಾನು ಕೈಬಿಟ್ಟೆ. ಆದರೂ ನಮಗೇಕೆ ಈ ಮರಿಗಳನ್ನು ಸಾಕಲಾಗುವುದಿಲ್ಲ? ವಿಜ್ಞಾನ ಇಷ್ಟೊಂದು ಮುಂದುವರೆದಿರಬೇಕಾದರೆ ಇದು ಮಹಾ ಕಷ್ಟವೇ? ಎಂದು ಯೋಚಿಸುತ್ತಿದ್ದೆ. ಈ ಬಗ್ಗೆ ಅನೇಕ ಪಶುವೈದ್ಯರನ್ನೂ, ಪಕ್ಷಿತಜ್ಞರನ್ನೂ ವಿಚಾರಿಸಿದೆ. ಎಲ್ಲರೂ ಮಾರನಂತೆ ಕೋಳಿ, ಪಾರಿವಾಳ ಮುಂತಾದುವನ್ನು ಸಾಕುವ ಬಗ್ಗೆ ಮಾತ್ರ ಸಲಹೆ ಕೊಡುತ್ತಿದ್ದರೇ ಹೊರತು ಕಾಡಿನ ಚಿಕ್ಕಪುಟ್ಟ ಹಕ್ಕಿಗಳು ಎಂದ ಕೂಡಲೇ ಅವುಗಳ ಸಹವಾಸಕ್ಕೆ ಮಾತ್ರ ಹೋಗಬೇಡಿರೆಂದು ಎಚ್ಚರಿಕೆ ಕೊಡುತ್ತಿದ್ದರು. ಆ ಮರಿಗಳನ್ನು ಅವುಗಳ ತಾಯಂದಿರ ಹೊರತು ಬೇರೆಯವರಿಗೆ ಸಾಕಲು ಕಷ್ಟಸಾಧ್ಯ ಎಂಬುದು ಅವರ ಅಭಿಪ್ರಾಯ.

ಇಷ್ಟರಲ್ಲಿ ಇನ್ನೊಮ್ಮೆ ನಾನು ಹಕ್ಕಿಮರಿಗಳನ್ನು ಸಾಕುವ ತೊಂದರೆಗೆ ಸಿಕ್ಕಿಕೊಂಡೆ.

ನಮ್ಮ ಮನೆ ಎದುರಿಗಿದ್ದ ಹಲಸಿನ ಮರದ ಕೊಂಬೆಯೊಂದು ಗಾಳಿ ಮಳೆಗೆ ರಾತ್ರಿ ಮುರಿದು ಬಿದ್ದಿತ್ತು. ಅದನ್ನು ತೋಟದೊಳಗೆ ಬಿಸಾಡಲು ಹೋದಾಗ ಅದರ ಎಲೆಗಳ ನಡುವೆ ಎಲೆಗಳನ್ನೇ ಹೊಲಿದು ಮಾಡಿದ ಟುವ್ವಿ ಹಕ್ಕಿಯ ಗೂಡೊಂದು ಕಣ್ಣಿಗೆ ಬಿತ್ತು. ಇಣುಕಿ ಒಳಗೇನಿದೆ ಎಂದು ನೋಡಿದೆ. ನನಗೆ ಚಿಂತೆಯಾಗುವಂತೆ ಮೂರು ಹಕ್ಕಿ ಮರಿಗಳು ಬಾಯಿ ಕಳೆಯುತ್ತ ಕುಳಿತಿದ್ದವು. ಹಿಂದಿನ ಸಾರಿ ಆಗಿದ್ದೆಲ್ಲಾ ಜ್ಞಾಪಕಕ್ಕೆ ಬಂದು ಈ ಸಾರಿ ಸುಸ್ಮಿತಾಳಿಗೆ ಈ ವಿಷಯ ತಿಳಿಸಲು ಹೋಗಲಿಲ್ಲ. ಆ ಕೊಂಬೆ ಎಲ್ಲಿಂದ ಮುರಿದು ಬಿದ್ದಿದೆ ಎಂದು ನೋಡಿ ಮುರಿದ ಕೊಂಬೆಯನ್ನು ಅದೇ ಜಾಗಕ್ಕೆ ಭದ್ರವಾಗಿ ಸಿಕ್ಕಿಸಿದೆ. ಕೊಂಬೆ ಮುರಿದಿದ್ದುದರಿಂದ ಅದರ ಎಲೆಗಳೆಲ್ಲಾ ಆಗಲೇ ಬಾಡಲಾರಂಭಿಸಿದ್ದವು. ಆದರೂ ಅವುಗಳ ತಾಯಿಯೇ ಬಂದು ಮರಿಗಳ ಯೋಗಕ್ಷೇಮ ನೋಡಲಿ ಎಂಬುದೇ ನನ್ನ ಉದ್ದೇಶ.

ತಾಯಿ ಹಕ್ಕಿಯೇನೋ ಬಂತು. ಆದರೆ ಅಲ್ಲಿ ಇಲ್ಲಿ ಟುವ್ವಿ ಟುವ್ವಿ ಎಂದು ಕೂಗಿಕೊಂಡು ಓಡಾಡಿತೇ ಹೊರತು ಗೂಡಿನ ಹತ್ತಿರ ಸುಳಿಯಲಿಲ್ಲ. ಕೊಂಬೆಯ ಎಲೆಗಳು ಬಾಡಿದ್ದರಿಂದಲೋ ಅಥವಾ ಮುರಿದ ಕೊಂಬೆಯಾದ್ದರಿಂದಲೋ ತನ್ನ ಜೀವಕ್ಕೇ ಅಪಾಯವಿದೆ ಎಂದು ಆಲೋಚಿಸಿ ಕಾಡಿಗೆ ಹೋದುದು ಹಿಂದಿರುಗಲಿಲ್ಲ. ಆ ಗೂಡಿನ ಮರಿಗಳು ಮೈಮೇಲೆಲ್ಲ ಪುಕ್ಕ ಬರುವಷ್ಟು ಬೆಳೆದಿದ್ದವು. ತಾಯಿ ಆ ಮರಿಗಳನ್ನು ತಿರಸ್ಕರಿಸಿದರೆ ಎಂತಿದ್ದರೂ ಸಾಯುವ ಆ ಮರಿಗಳನ್ನು ಈ ಸಾರಿಯಾದರೂ ಸಾಕಲು ಸಾಧ್ಯವೇ ಪ್ರಯತ್ನಿಸಬೇಕೆಂದು ಯೋಚಿಸಿದೆ. ಆದರೆ ತಾಯಿ ಹಕ್ಕಿ ಅವುಗಳನ್ನು ಖಾತರಿಯಾಗಿ ತೊರೆದಿದೆ ಎಂದು ಗೊತ್ತಾಗುವವರೆಗೂ ಗೂಡಿನ ತಂಟೆಗೆ ಹೋಗಲಿಲ್ಲ. ಎರಡು ದಿನಗಳಾದರೂ ತಾಯಿ ಹಕ್ಕಿಯ ಸುಳಿವಿಲ್ಲ! ಅಷ್ಟೇ ಅಲ್ಲದೆ ಮೂರು ಮರಿಗಳಲ್ಲಿ ಒಂದು ಮರಿ ಹಸಿವು ತಡೆಯಲಾರದೆ ಸತ್ತೇ ಹೋಗಿತ್ತು. ಮಿಕ್ಕೆರಡೂ ದುರ್ಬಲವಾಗಿ ಸಾಯುವುದರಲ್ಲಿ ಸಂಶಯವಿರಲಿಲ್ಲ. ಆ ಮರಿಗಳನ್ನು ತಬ್ಬಲಿ ಮಾಡಿ ನನ್ನ ತಲೆ ಮೇಲೆ ಹಾಕಿದ ತಾಯಿ ಹಕ್ಕಿಗೆ ಶಪಿಸುತ್ತ ಸತ್ತ ಮರಿಯ ಶವವನ್ನು ತೆಗೆದೆಸೆದು ಮಿಕ್ಕ ಮರಿಗಳನ್ನು ಗೂಡಿನೊಂದಿಗೆ ಮನೆಗೆ ತಂದೆ.



11th_Kannada_Reader_Final_16-07-2018.indd 74 16-07-2018 18:43:01

ಪಿಕಳಾರದ ಮರಿಗಳು ಬಾಳೆಹಣ್ಣು ತಿಂದು ಸತ್ತಮೇಲೆ ನಾನು ತುಂಬಾ ಆಲೋಚಿಸಿ ಈ ಮರಿಗಳಿಗೆ ಒಂದು ಆಹಾರದ ಫಾರ್ಮುಲಾ ಕಲ್ಪಿಸಿದ್ದೆ. ಮೊಟ್ಟೆಯೊಳಗಿನ ಬಿಳುಪನ್ನು ಇವುಗಳಿಗೆ ಆಹಾರವಾಗಿ ಕೊಟ್ಟರೆ ಆಗಬಹುದೆಂದು ತೀರ್ಮಾನಿಸಿದ್ದೆ. ಏಕೆಂದರೆ ಕೋಳಿಮೊಟ್ಟೆಯೊಳಗಿನ ಬಿಳುಪು ವಾಸ್ತವವಾಗಿ ಮೊಟ್ಟೆಯೊಳಗೆ ಬೆಳೆಯುವ ಭ್ರೂಣಕ್ಕೆ ಆಹಾರವಾಗಿಯೇ ಇರುವುದು. ಇನ್ನೂ ಬೆಳೆಯದ ಭ್ರೂಣಗಳೇ ಆಹಾರವಾಗಿ ಇದನ್ನು ತೆಗೆದುಕೊಳ್ಳಬೇಕಾದರೆ ಇನ್ನು ಮೊಟ್ಟೆಯೊಡೆದು ಹೊರ ಬಂದಿರುವ ಮರಿಗಳಿಗೆ ಇದು ಆಗದೇ?

ಈ ಸಾರಿ ಮರಿಗಳಿಗೆ ಚಮಚದಲ್ಲಿ ಆಹಾರ ಕೊಡಲಿಲ್ಲ. ತಾಯಿಯ ಕೊಕ್ಕನ್ನೇ ಹೋಲುವಂತಹ ಚಿಮ್ಮಟ ಒಂದನ್ನು ತಂದು ಅದರಲ್ಲಿ ಅರೆಬರೆ ಬೇಯಿಸಿದ ಕೋಳಿಮೊಟ್ಟೆಯ ಬಿಳುಪನ್ನು ಚೂರುಚೂರೇ ತೆಗೆದು ಬಾಯಿಗೆ ಹಾಕಿದೆ. ಮರಿಗಳು ಬೆಳೆದಿದ್ದುದರಿಂದಲೋ ಏನೋ ಆಹಾರ ಏನೂ ತೊಂದರೆ ಕೊಡದೆ ಅವುಗಳ ಗಂಟಲಲ್ಲಿ ಇಳಿಯಿತು. ಅಷ್ಟೇ ಅಲ್ಲದೆ ಆ ಹಕ್ಕಿ ಮರಿಗಳು ಪುಕ್ಕಗೂಡಿಸಿಕೊಂಡು ದಿನದಿಂದ ದಿನಕ್ಕೆ ಬೆಳೆದು ದೊಡ್ಡವಾದವು. ಆಹಾರ ಕೊಡಲು ಹೋದಾಗ ಒಮ್ಮೊಮ್ಮೆ ಗೂಡಿನಿಂದ ಹಾರಿ ಹೆಗಲ ಮೇಲೋ ತಲೆಯ ಮೇಲೋ ಕುಳಿತುಕೊಳ್ಳುತ್ತಿದ್ದವು. ಸುಸ್ಮಿತಳಿಗೂ ಇದೊಂದು ಅತ್ಯಾನಂದದ ಸಂಗತಿಯಾಗಿತ್ತು.

ಆದರೆ ಆ ಹಕ್ಕಿಮರಿಗಳಿಗಿದ್ದ ದೊಡ್ಡ ತೊಂದರೆ ಎಂದರೆ ತಾಯಿಯಿಂದ ಒದುಗುತ್ತಿದ್ದ ಶಿಕ್ಷಣ ಇಲ್ಲದುದು. ಅವು ಎಷ್ಟೊಂದು ಬೆಪ್ಪುಗಳಾಗಿದ್ದುವೆಂದರೆ ಆಹಾರವನ್ನು ಕೊಕ್ಕಿನಿಂದ ತೆಗೆದು ಸ್ವತಃ ತಿನ್ನಲು ಸಹ ಬರುತ್ತಿರಲಿಲ್ಲ. ದೊಡ್ಡದಾದ ಮೇಲೂ ಚಿಮ್ಮಟದಲ್ಲಿ ಗಂಟಲಿಗೆ ಆಹಾರ ತುರುಕಲೇಬೇಕಿತ್ತು. ಇಲ್ಲದಿದ್ದರೆ ಕಣ್ಣೆದುರೇ ಆಹಾರ ಹಿಡಿದರೂ ಸುಮ್ಮನೆ ಕುಳಿತಿರುತ್ತಿದ್ದವು.

ಇದನ್ನೆಲ್ಲಾ ನೋಡಿದರೆ ಈ ಪ್ರಕೃತಿ ನಮ್ಮ ಊಹೆಗೂ ನಿಲುಕದ ಜಟಿಲವಾದ ಜಾಲ ಎಂದು ಅಚ್ಚರಿಯಾಗುತ್ತದೆ. ತಾಯಿಹಕ್ಕಿ ಮರಿ ಹುಟ್ಟಿದಾಗಿನಿಂದ ದೊಡ್ಡದಾಗುವವರೆಗೆ ದಿನದಿಂದ ದಿನಕ್ಕೆ ಆಹಾರ ಬದಲಿಸುತ್ತಾ ಬರುತ್ತದೆ. ರೆಕ್ಕೆ ಬಲಿತ ಮೇಲೆ ಗೂಡುಬಿಟ್ಟು ಹೊರಬರುವಂತೆ ಪ್ರೇರೇಪಿಸುತ್ತದೆ. ಅವುಗಳೆದುರು ಕುಳಿತು ರೆಕ್ಕೆ ಬಡಿದು ಹೇಗೆ ಹಾರಬೇಕೆಂದು ತೋರಿಸಿ ಕೊಡುತ್ತದೆ. ಹೇಗೆ ಹುಳುಗಳನ್ನು ಹಿಡಿಯಬೇಕು, ಯಾವುದನ್ನು ತಿನ್ನಬೇಕು, ಯಾವುದನ್ನು ತಿನ್ನಬಾರದು, ಪ್ರತಿಯೊಂದನ್ನೂ ತೋರಿಸಿ ಕೊಡುತ್ತದೆ. ಈ ವಿದ್ಯೆಗಳಲ್ಲಿ ಯಾವೊಂದನ್ನು ತಿಳಿದಿಲ್ಲದಿದ್ದರೂ ಆ ಹಕ್ಕಿಮರಿ ಜೀವನ ಸಂಗ್ರಾಮದಲ್ಲಿ ಬದುಕಿ ಉಳಿಯುವುದು ಅಸಂಭವ. ನಮಗೆ ಮೇಲುನೋಟಕ್ಕೆ ಎಲ್ಲ ಸಲೀಸಾಗಿ ತಂತಾನೇ ನಡೆದುಕೊಂಡು ಹೋಗುವಂತೆ ತೋರಿದರೂ ಮಾನವ ಸಮಾಜವನ್ನು ಮೀರಿದ ಜಟಿಲ ಕ್ರಿಯಾವಳಿಗಳು ಅಲ್ಲಿ ನಡೆಯುತ್ತಿರುತ್ತವೆ.

ಈಗ ಈ ಎರಡು ಹಕ್ಕಿಮರಿಗಳ ಜೀವ ಉಳಿಸಿ ಸಂಪೂರ್ಣ ನಮ್ಮನ್ನೇ ಅವಲಂಬಿಸಿ ಬದುಕಬೇಕಾದ ಎರಡು ಪರತಂತ್ರ ಜೀವಿಗಳ ನಿರ್ಮಾಣ ಆಗಿತ್ತು. ನಾನು ಅವುಗಳ ತಾಯಿಹಕ್ಕಿ ನಿರ್ದಯೆಯಿಂದ ಅವುಗಳಿಗೆ ಶಿಕ್ಷಣ ಕೊಡುವಂತೆಯೇ ಶಿಕ್ಷಣ ಕೊಡಲು ನಿರ್ಧರಿಸಿದೆ. ಚಿಮ್ಮಟದಲ್ಲಿ ಅವಕ್ಕೆ ಗುಟುಕು ಕೊಡುವುದನ್ನು ನಿಲ್ಲಿಸಿದೆ. ಹಸಿವಾದರೆ ಹೇಗಾದರೂ ಅವೇ ಆಹಾರ ತಿನ್ನುವುದನ್ನು ಕಲಿಯುತ್ತವೆ ಎಂದು ಒಂದು ದಿನ ಉಪವಾಸ ಕೆಡವಿದ ಮೇಲೆ ಅವಕ್ಕೆ ಜ್ಞಾನೋದಯವಾಯ್ತೆಂದು ತೋರುತ್ತದೆ. ಬೇಯಿಸಿದ ಕೋಳಿಮೊಟ್ಟೆ ಬಿಳುಪನ್ನು ಕೊಕ್ಕಿನಿಂದ ಕುಕ್ಕಲಾರಂಭಿಸಿದವು. ಆದರೆ ಮೊಟ್ಟೆ ಬಿಳುಪು ಕೊಕ್ಕಿನಿಂದ ಜಾರುತ್ತಿತ್ತು. ಆದ್ದರಿಂದ ಅನ್ನದ ಅಗುಳನ್ನು ತಿನ್ನಬಹುದೆಂದು ಅನ್ನದ ಅಗುಳನ್ನು ಕೊಟ್ಟೆ. ಅವು ಅಗುಳುಗಳನ್ನು ಹುಳುಗಳೆಂದು ತಿಳಿದವೋ ಏನೋ, ಅವನ್ನು ಕಚ್ಚಿ ಕುಕ್ಕಿ ತುಂಡುತುಂಡು ಮಾಡಿ ತಿಂದವು. ಅವು ತಾವೇ ಆಹಾರ ತಿನ್ನಲಾರಂಭಿಸಿದ ಕೂಡಲೇ ಅವುಗಳ ವರ್ತನೆಯಲ್ಲೂ ಬದಲಾವಣೆ ಕಂಡಿತು. ಧೈರ್ಯವಾಗಿ ಅತ್ತಿತ್ತ ಹಾರುತ್ತಿದ್ದವು. ಇದಿರಿಗೆ ಕಂಡ ಎಲೆಯ ಚೂರು ಮುಂತಾದ ಚಿಕ್ಕಪುಟ್ಟ ವಸ್ತುಗಳನ್ನು ಕುತೂಹಲಕ್ಕೆಂಬಂತೆ ಕುಕ್ಕಿ ನೋಡುತ್ತಿದ್ದವು. ಅವುಗಳ



11th_Kannada_Reader_Final_16-07-2018.indd 75 16-07-2018 18:43:01

ಆತ್ಮವಿಶ್ವಾಸ ಕಂಡ ನಾನು ಹೀಗೇ ಮುಂದುವರೆದರೆ ಇನ್ನು ಕೊಂಚ ದಿನಗಳಲ್ಲಿ ಇವು ಕಾಡಿನಲ್ಲಿ ಸ್ವತಂತ್ರವಾಗಿ ಜೀವಿಸಲು ಸಾಧ್ಯವಾಗಬಹುದೆಂದು ಯೋಚಿಸಿದೆ.

ಆದರೆ ಒಂದು ದಿನ ಸಾಯಂಕಾಲ ಅವು ಇದ್ದಕ್ಕಿದ್ದಂತೆ ಮಂಕಾಗಿ ಕುಳಿತಲ್ಲಿಂದ ಏಳಲೇ ಇಲ್ಲ. ಅದೇ ರಾತ್ರಿ ಎರಡೂ ಸತ್ತು ಹೋದವು. ಏನನ್ನು ತಿಂದವೋ ಅಥವಾ ಅನ್ನದ ಊಟ ಅವಕ್ಕೆ ಆಗಲಿಲ್ಲವೋ ! ಒಟ್ಟಿನಲ್ಲಿ ಅವು ಸತ್ತುದಕ್ಕೆ ಕಾರಣ ಗೊತ್ತಾಗಲಿಲ್ಲ. ಸುಸ್ಮಿತ ಮಾತ್ರ ಹಕ್ಕಿಮರಿ ಸತ್ತಿದ್ದಕ್ಕೆ ಪೆಚ್ಚುಮೋರೆ ಮಾಡಿಕೊಂಡು ಒಂದು ದಿನವೆಲ್ಲಾ ಇದ್ದಳು.

ನಾನು ಇನ್ನು ಈ ಕಾಡಿನ ಜೀವಿಗಳ ತಂಟೆಗೇ ಹೋಗಬಾರದೆಂದು ಅಖೈರಾಗಿ ನಿರ್ಧರಿಸಿದೆ. ಕಾಡಿನ ಜೀವಸಂಕುಲದೊಳಗೆ ನಾವು ಕೈಹಾಕಿದರೆ ಸಾಕು, ಅದು ಸಹಾಯ ಹಸ್ತವಾದರೂ ಅವುಗಳ ನಾಶ ತಪ್ಪಿದ್ದಲ್ಲವೆಂದು ನನಗೆ ಮನದಟ್ಟಾಯ್ತು. ಅವುಗಳಲ್ಲಿ ತೊಂದರೆಗೆ ಸಿಕ್ಕಿದವನ್ನೂ, ತಬ್ಬಲಿಗಳಾದುವನ್ನೂ ರಕ್ಷಿಸುವುದು ನಮ್ಮ ನೈತಿಕ ಜವಾಬ್ದಾರಿ ಎಂದು ಭಾವಿಸುವುದು, ಕಾಡಿನಲ್ಲಿರುವುದನ್ನೆಲ್ಲಾ ತಾನು ತಿನ್ನುವುದಕ್ಕೇ ದೇವರು ಸೃಷ್ಟಿ ಮಾಡಿದ್ದಾನೆಂದು ತಿಳಿದಿರುವ ಮಾರನ ಮೂರ್ಖತನಕ್ಕಿಂತ ದೊಡ್ಡ ಮೂರ್ಖತನವೆಂದು ಖಂಡಿತವಾಗಿ ಅನ್ನಿಸಿತು.

ಇಷ್ಟೆಲ್ಲಾ ದೃಢ ನಿರ್ಧಾರ ಮಾಡಿದರೂ ನಾನು ಮತ್ತೊಮ್ಮೆ ಹಕ್ಕಿ ಮರಿಯ ದೆಸೆಯಿಂದ ನೈತಿಕ ಬಿಕ್ಕಟ್ಟಿಗೆ ಸಿಕ್ಕಿಬಿದ್ದೆ. ಹೂವಣ್ಣನ ಮಗ ಚಂದ್ರ ನಮಗೆ ವಾರಕ್ಕೊಮ್ಮೆ ತರಕಾರಿ ತಂದುಕೊಡುತ್ತಿದ್ದ. ಅವನ ತರಕಾರಿ ಜಮೀನಿನ ಬಳಿಯೇ ಹಕ್ಕಿಯೊಂದು ಗೂಡು ಕಟ್ಟಿದೆ ಎಂದು ನನಗೆ ಹೇಳಿದ. ಅದೊಂದು ಮಡಿವಾಳ ಹಕ್ಕಿ ಗೂಡು. ಅಲ್ಲಿ ಹೋಗಿ ಮರೆ ರಚಿಸಿಕೊಂಡು ಕುಳಿತು ಅದರ ಹಲವಾರು ಫೋಟೋಗಳನ್ನು ತೆಗೆದ ನಂತರ ಇಷ್ಟೆಲ್ಲ ಹೇಳಿ ನನಗೆ ಸಹಾಯ ಮಾಡಿದ್ದಕ್ಕೆ ಅವನಿಗೆ ಒಂದು ರೂಪಾಯಿ ಇನಾಮು ಕೊಟ್ಟೆ. ಈ ಸುದ್ದಿ ಯಾವುಯಾವುದೋ ರೂಪ ತಾಳಿ ಕೊನೆಗೆ ಹಕ್ಕಿ ತಗೊಂಡು ಹೋಗಿ ಕೊಟ್ಟರೆ ಫೋಟೋ ಹೊಡೆದು ಒಂದು ರೂಪಾಯಿ ಕೊಡ್ತಾರಂತೆ ಎಂಬ ವಾರ್ತೆಯಾಗಿ, ದನ ಕಾಯುವ ಹುಡುಗರಿಂದ ಹಿಡಿದು ಸ್ಕೂಲು ಹುಡುಗರವರೆಗೆ ಎಲ್ಲರೂ ತರತರದ ಹಕ್ಕಿಮರಿಗಳನ್ನು ಅವುಗಳ ಗೂಡುಗಳಿಂದ ಕದ್ದು ಇದರ ಫೋಟೋ ಹೊಡೆದುಕೊಳ್ಳಿ ಎಂದು ತರತೊಡಗಿದರು. ಅವರೆಲ್ಲರಿಗೂ ಬಯ್ದು ಬೆದರಿಸಿ ಈ ಕೆಲಸದಿಂದ ವಿಮುಖರನ್ನಾಗಿ ಮಾಡಬೇಕಾದರೆ ನನಗೆ ಸಾಕುಬೇಕಾಗಿ ಹೋಯ್ತು.

ಈ ಸಮಯದಲ್ಲೇ ದನಕಾಯುವ ರಾಮ ಒಂದು ಆಕಾಶಬಗರೆ ಹಕ್ಕಿ ಮರಿಯನ್ನು ತಂದು ಮಾರನ ಕೈಲಿ ಕೊಟ್ಟನಂತೆ. ನಾನು ಕಂಡರೆ ಬಯ್ಯುತ್ತೇನೆಂದು ಮಾರ ಹೇಳಿದ್ದರಿಂದ ನಾನು ಬರುವುದರೊಳಗೆ ಜಾಗ ಖಾಲಿ ಮಾಡಿದ್ದ. ಆ ಮರಿಯನ್ನು ಏಕೆ ಇಲ್ಲಿರಿಸಿಕೊಂಡೆ ಎಂದು ನಾನು ಮಾರನಿಗೆ ಬಯ್ದು ಅದನ್ನು ಗೂಡಿಗೆ ಹಿಂದಿರುಗಿಸಲು ರಾಮನಿಗಾಗಿ ಹುಡುಕಾಡಿದೆ. ನಾನು ಅವನಿಗೆ ಹೊಡೆಯಲೆಂದೇ ಹುಡುಕುತ್ತಿದ್ದೇನೆಂದು ತಿಳಿದ ರಾಮ ಪತ್ತೆ ಇಲ್ಲದಂತೆ ತಲೆ ತಪ್ಪಿಸಿಕೊಂಡ. ಆದರೆ ನಾನು ಮಾತ್ರ ಹಕ್ಕಿಮರಿಗಳನ್ನು ಸಾಕುವ ಜವಾಬ್ದಾರಿ ಹೊರಕೂಡದೆಂದು ನಿರ್ಧರಿಸಿದ್ದೆ.

ಈ ಎಲ್ಲ ಹುಡುಕಾಟ ನಡೆಸುತ್ತಿದ್ದಾಗ ಎರಡು ಆಕಾಶ ಬಗರೆ ಹಕ್ಕಿಗಳು ಕೂಗುತ್ತಾ ನಮ್ಮ ಮನೆ ಮೇಲೆ ಎತ್ತರಕ್ಕೆ ಸುತ್ತುತ್ತಿರುವುದು ಗೋಚರಿಸಿತು. ನನಗೆ ಇವು ಆ ಮರಿಯ ತಂದೆ–ತಾಯಿಗಳೇ ಇರಬಹುದೇ ಎಂದು ಅನುಮಾನ ಆಯ್ತು. ಇರಲಿ, ನೋಡೋಣ ಎಂದು ಅವುಗಳಿಗೆ ಕಾಣುವಂತೆ ಮನೆ ಕಿಟಕಿಗೆ ಹೊಡೆದಿದ್ದ ತಂತಿ ಜಾಲರಿಯ ಮೇಲೆ ಹಕ್ಕಿ ಮರಿಯನ್ನು ಕೂರಿಸಿದೆ. ಅವು ತಂದೆ–ತಾಯಿಗಳಾದರೂ ಗೂಡಿನಲ್ಲಿಲ್ಲದ ಈ ಹಕ್ಕಿ ಮರಿಗಳಿಗೆ ಇಲ್ಲಿಯೇ ಗುಟುಕು ಕೊಟ್ಟು ನೋಡಿಕೊಳ್ಳುತ್ತವೆ ಎಂದು ನಾನು ಭಾವಿಸಿರಲಿಲ್ಲ. ಏಕೆಂದರೆ ಎಲೆಗಳು ಬಾಡಿದ್ದಕ್ಕೇ ಟುವ್ವಿಹಕ್ಕಿ ಮರಿಗಳನ್ನು ಪರಿತ್ಯಜಿಸಿ ಕಾಡಿಗೆ ಓಡಿಹೋಗಿದ್ದನ್ನು ನೋಡಿದ್ದೆ.

ಆದರೆ ಕೊಂಚ ಹೊತ್ತಿನ ತರುವಾಯ ತಾಯಿಹಕ್ಕಿ ಆಕಾಶದಲ್ಲಿ ಕೂಗಿಕೊಂಡು ಹಾರಾಡುತ್ತಿದ್ದುದು ಮೆಲ್ಲಗೆ ಇಳಿದು ಮನೆ ಮುಂದಿನ ಮರಗಳ ಮೇಲೆ ಬಂದು



11th_Kannada_Reader_Final_16-07-2018.indd 76 16-07-2018 18:43:01

ಕುಳಿತುಕೊಂಡಿತು. ಮಧ್ಯಾಹ್ನದ ಹೊತ್ತಿಗೆ ತಾಯಿಹಕ್ಕಿ ಧೈರ್ಯ ಮಾಡಿ ಕಿಟಕಿ ಬಳಿಯೇ ಮರಿಗೆ ಗುಟುಕು ಕೊಡಲಾರಂಭಿಸಿತು. ರಾಮ ಅದರ ಮರಿಯನ್ನು ಕದ್ದು ತಂದಾಗ ತಾಯಿಹಕ್ಕಿ ಅವನನ್ನೇ ಹಿಂಬಾಲಿಸಿ ನಮ್ಮ ಮನೆವರೆಗೂ ಬಂದಿತ್ತು.

ರಾತ್ರಿಯಾದೊಡನೆ ಕಿಟಕಿ ಮೇಲೆ ಕುಳಿತಿದ್ದ ಹಕ್ಕಿಮರಿಯನ್ನು ಕೋಣೆಯೊಳಗೆ ಬಿಡುತ್ತಿದ್ದೆ. ಮತ್ತೆ ಬೆಳಗಾದೊಡನೆ ಅದನ್ನು ಹೊರಗೆ ಕೂರಿಸುತ್ತಿದ್ದೆ. ತಾಯಿ ಹಕ್ಕಿ ಬಂದು ಹಲವಾರು ಬಾರಿ ಗುಟುಕು ಕೊಟ್ಟು ಎತ್ತಲೋ ಹಾರಿ ಹೋಗುತ್ತಿತ್ತು. ಕೆಲವು ಗಂಟೆಗಳ ತರುವಾಯ ಮತ್ತೆ ಬರುತ್ತಿತ್ತು. ನಾನು ಬಹುಶಃ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಮಿಕ್ಕ ಸಮಯ ವಿನಿಯೋಗಿಸುತ್ತಿದೆ ಎಂದು ತಿಳಿದಿದ್ದೆ.

ಅದು ಗುಟುಕು ಕೊಟ್ಟ ನಂತರ ತುಂಬ ಸಮಯದವರೆಗೆ ಏಕೆ ನಾಪತ್ತೆಯಾಗುತ್ತದೆ ಎಂದು ನಾಲ್ಕಾರು ದಿನದ ತರುವಾಯ ನನಗೆ ಗೊತ್ತಾಯ್ತು. ಒಂದು ದಿನ ಬೆಳಗಿನ ಹೊತ್ತಿಗೆ ತಾಯಿ ಹಕ್ಕಿ ಇನ್ನೆರಡು ತನ್ನ ಮರಿಗಳನ್ನೂ ಕರೆತಂದು ಮನೆ ಎದುರಿನ ಮರದಲ್ಲಿ ಕೂರಿಸಿತ್ತು. ರಾಮ ಹಕ್ಕಿಮರಿಯನ್ನು ಕದ್ದು ತಂದಾಗ ಏನೋ ಕಾರಣ ಇನ್ನೆರಡನ್ನು ಗೂಡಿನಲ್ಲೇ ಉಳಿಸಿದ್ದ. ಮರಿಯ ಕೂಗನ್ನು ಅನುಸರಿಸಿ ತಾಯಿಹಕ್ಕಿ ಮನೆವರೆಗೂ ಬಂದರೂ ತನ್ನ ಗೂಡಿನ ಮಿಕ್ಕೆರಡು ಮರಿಗಳನ್ನು ಮರೆತಿರಲಿಲ್ಲ. ಈ ಮರಿಗೆ ಕಿಟಕಿ ಬಳಿ ಹಲವು ಬಾರಿ ಗುಟುಕು ಕೊಟ್ಟು ಅನಂತರ ಗೂಡಿನ ಮರಿಗಳಿಗೆ ಆಹಾರ ಕೊಡಲು ಹೋಗುತ್ತಿದ್ದುದರಿಂದಲೇ ಅದು ತುಂಬ ಸಮಯದವರೆಗೆ ನಾಪತ್ತೆಯಾಗುತ್ತಿದ್ದುದು.

ಎರಡು ಕಡೆ ಸಂಸಾರ ನೋಡಿಕೊಳ್ಳುವ ಹೊರೆ ತಪ್ಪಿಸಲೆಂದೇ ಗೂಡಿನ ಮರಿಗಳಿಗೆ ಹಾರುವಷ್ಟು ರೆಕ್ಕೆ ಬಲಿಯುತ್ತಲೂ ಅವನ್ನು ಹಾರಿಸಿಕೊಂಡು ಬಂದು ಮನೆಯ ಬಳಿಯ ಮರದಲ್ಲಿ ಕೂರಿಸಿತ್ತು. ತಂದೆ–ತಾಯಿ ಎರಡೂ ಸೇರಿ ಮೂರು ಬಕಾಸುರ ಮರಿಗಳಿಗೆ ಬಿಡುವಿಲ್ಲದಂತೆ ಆಹಾರ ಒದಗಿಸಲಾರಂಭಿಸಿದವು.

ಅಲ್ಲಿಯವರೆಗೂ ಸುಮ್ಮನೆ ಬೆಪ್ಪು ಹಿಡಿದಂತೆ ಕಿಟಕಿಯ ಕಂಬಿ ಮೇಲೆ ಕುಳಿತು ಆಹಾರ ಸ್ವೀಕರಿಸುತ್ತಿದ್ದ ಹಕ್ಕಿಮರಿ ಮಿಕ್ಕೆರಡು ಮರಿಗಳನ್ನು ನೋಡಿತೋ ಇಲ್ಲವೋ ಕುಳಿತಲ್ಲೇ ಕೂಗುತ್ತಾ ರಕ್ಕೆ ಬಡಿಯುತ್ತಾ ಉದ್ವೇಗ ಪ್ರಕಟಿಸಿತು. ಒಮ್ಮೆ ತಾಯಿ ಹಕ್ಕಿ ಮರದ ಮೇಲಿನ ಹಕ್ಕಿಮರಿಗಳಿಗೆ ಗುಟುಕು ಕೊಡುತ್ತಿರಬೇಕಾದರೆ ತಾಳ್ಮೆಯಿಂದ ಕೂರಲಾರದ ಈ ಹಕ್ಕಿಮರಿ ಕೂಗುತ್ತಾ ರೆಕ್ಕೆ ಬಡಿಯುತ್ತಾ ಕಿಟಕಿ ಮೇಲಿಂದ ನೆಗೆದೇ ಬಿಟ್ಟಿತು. ಕೆಲವು ಕ್ಷಣಗಳವರೆಗೆ ಹುಚ್ಚು ಹುಚ್ಚಾಗಿ ರೆಕ್ಕೆ ಬಡಿಯುತ್ತಾ ಗಾಳಿಯಲ್ಲಿ ತೂರಾಡಿದ ಆ ಮರಿ ಅನಂತರ ಯಮ ಸಾಹಸದಿಂದ ನಿಧಾನವಾಗಿ ಎತ್ತರೆತ್ತರಕ್ಕೆ ಸಾಗಿ ಅಂತೂ ಇಂತೂ ಹೋಗಿ ಮರದ ಮೇಲಿನ ತನ್ನ ಸೋದರರನ್ನು ಸೇರಿತು.

ನಾಲ್ಕಾರು ದಿನ ನಮ್ಮೊಡನೆ ಕೋಣೆಯೊಳಗೆ ಕಾಲ ಕಳೆದಿದ್ದ ಆ ಪುಟ್ಟ ಮರಿ ಅಷ್ಟರೊಳಗೆ ಸುಸ್ಮಿತಳಿಗೆ, 'ನಮ್ಮ ಹಕ್ಕಿಮರಿ' ಆಗಿ ಬಿಟ್ಟಿತ್ತು. ತಾಯಿ ಹಕ್ಕಿ ಅದನ್ನು ಹಾರಿಸಿಕೊಂಡು ಹೋಗಿ ಮರದ ಮೇಲೆ ಕೂರಿಸಿದ್ದು ನೋಡಿ, 'ಅಯ್ಯೋ, ನಮ್ಮ ಹಕ್ಕಿಮರಿ ಮರದ ಮೇಲೆ ಹೋಯ್ತು' ಎಂದು ತಾಯಿ ಹಕ್ಕಿಯ ಮೇಲೆ ಕೋಪಗೊಂಡಳು.

ಎರಡು ದಿನಗಳವರೆಗೆ ಅವಳ ಹಕ್ಕಿಮರಿಯೂ ಮಿಕ್ಕ ಮರಿಗಳ ಜೊತೆ ಕೊಂಬೆಯ ಮೇಲೇ ಇತ್ತು. ಅನಂತರ ಆಕಾಶದ ಕರೆಯನ್ನು ತಡೆಯಲಾರದ ಅವು ಹಾರಿ ವಿಶಾಲ ವಿಶ್ವದಲ್ಲಿ ಲೀನವಾದವು.

ಆಮೇಲೆ ನಮ್ಮ ಮನೆಯ ಬಳಿ ಯಾವ ಆಕಾಶಬಗರೆ ಹಕ್ಕಿ ಹಾರಿದರೂ ಸುಸ್ಮಿತ 'ಓಹೋ! ನಮ್ಮ ಹಕ್ಕಿಮರಿ ಮನೆ ನೆನಪು ಮಾಡಿಕೊಂಡು ಬಂದಿದೆ' ಎಂದು ಅದರತ್ತ ಕೈ ಬೀಸುತ್ತಿದ್ದಳು. ಹಕ್ಕಿಗಳಿಗೆ ಅಷ್ಟೊಂದು ಜ್ಞಾಪಕ, ಆತ್ಮೀಯತೆ ಇದೆಯೋ ಇಲ್ಲವೋ ಹೇಳಬಲ್ಲವರಾರು? ಒಟ್ಟಿನಲ್ಲಿ ಸುಸ್ಮಿತಳಿಗೆ ಆ ಹಕ್ಕಿಮರಿ ಜ್ಞಾಪಕ, ಆತ್ಮೀಯತೆ ತಂದುಕೊಟ್ಟಿತ್ತಷ್ಟೆ.



11th_Kannada_Reader_Final_16-07-2018.indd 77 16-07-2018 18:43:01

## ಕೃತಿ–ಕರ್ತೃ ಪರಿಚಯ



ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ಕುವೆಂಪು ಮತ್ತು ಹೇಮಾವತಿ ದಂಪತಿಗಳ ಹಿರಿಯ ಮಗನಾಗಿ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ 8–9–1938ರಂದು ಜನಿಸಿದರು. ಎಂ.ಎ., ಪದವೀಧರರಾದರೂ ಸರ್ಕಾರಿ ಉದ್ಯೋಗವನ್ನು ಬಯಸದೆ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಸಮೀಪ ಕಾಫಿ ತೋಟ ಮಾಡಿ ಕೃಷಿಯತ್ತ ಮುಖ ಮಾಡಿದರು. ಕೃಷಿ, ಸಾಹಿತ್ಯ ಕೃಷಿ, ಛಾಯಾಗ್ರಹಣ, ಪುಸ್ತಕ ಪ್ರಕಾಶನ, ಶಿಕಾರಿ ಮುಂತಾದ ವೃತ್ತಿಗಳಲ್ಲಿ ತೇಜಸ್ವಿಯವರು ತಮ್ಮನ್ನು ತೊಡಗಿಸಿಕೊಂಡಿದ್ದರು.

ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಪೀಸು, ಕಿರಗೂರಿನ ಗಯ್ಯಾಳಿಗಳು, ಪರಿಸರದ ಕತೆ, ಪಾಕ ಕ್ರಾಂತಿ ಮತ್ತು ಇತರ ಕಥೆಗಳು ಇವು ಇವರ ಕಥಾ ಸಂಕಲನಗಳು. ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿ ಕ್ರಾಸ್, ಮಾಯಾಲೋಕ–1, ಕಾಡು ಮತ್ತು ಕ್ರೌರ್ಯ – ಇವು ಇವರ ಕಾದಂಬರಿಗಳು. ಯಮಳ ಪ್ರಶ್ನೆ–ನಾಟಕ. ಬೃಹನ್ನಳೆ, ಸೋಮುವಿನ ಸ್ವಗತ ಲಹರಿ– ಕವನ ಸಂಕಲನಗಳು; ಅಣ್ಣನ ನೆನಪುಗಳು–ಜೀವನ ಚರಿತ್ರೆ; ಕಿರಿಯರಿಗಾಗಿ ಪರಿಸರ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್ ಎಂಬುದು ತೇಜಸ್ವಿಯವರ ಪ್ರವಾಸ ಕಥನ. ಕಾಡಿನ ಕಥೆಗಳ ಮಾಲಿಕೆಯ ಐದು ಸಂಪುಟಗಳು, ಮಿಲೇನಿಯಂ ಪುಸ್ತಕ ಸರಣಿ, ವೈಜ್ಞಾನಿಕ ಸಾಹಿತ್ಯ, ಪರಿಸರ ವಿಸ್ಮಯ ಮಾಲಿಕೆ, ಪಕ್ಷಿಲೋಕ ಹೀಗೆ ನಾನಾ ಕೃತಿಗಳನ್ನು ತೇಜಸ್ವಿಯವರು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ಮರಾಠಿ, ಹಿಂದಿ, ಮಲೆಯಾಳಂ, ತಮಿಳು, ಇಂಗ್ಲಿಷ್, ಜಪಾನಿ ಭಾಷೆಗಳಿಗೆ ತೇಜಸ್ವಿಯವರ ಅನೇಕ ಕೃತಿಗಳು ಅನುವಾದಗೊಂಡಿವೆ. ಅಬಚೂರಿನ ಪೋಸ್ಟಾಫೀಸು, ಕುಬಿ ಮತ್ತು ಇಯಾಲ, ತಬರನ ಕತೆ ಇವು ಚಲನಚಿತ್ರಗಳಾಗಿ ರಾಷ್ಟ್ರೀಯ ಚಲಚಿತ್ರ ಪ್ರಶಸ್ತಿಗಳನ್ನು ಪಡೆದಿವೆ. ಇವರ ಚಿದಂಬರ ರಹಸ್ಯ ಕಾದಂಬರಿಗೆ 1987ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಮಗ್ರ ಸಾಹಿತ್ಯಕ್ಕಾಗಿ 2001ರಲ್ಲಿ ಪಂಪ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತರ ಪ್ರಶಸ್ತಿ, ರಾಷ್ಟ್ರೀಯ ಸ್ವರ್ಣಕಮಲ ಪ್ರಶಸ್ತಿಯ ಚಿನ್ನದ ಪದಕ, ರಾಷ್ಟ್ರೀಯ ಕಥಾ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ತಿನ ಪ್ರಶಸ್ತಿ ಮುಂತಾದ ಪ್ರಶಸ್ತಿ–ಪುರಸ್ಕಾರಗಳಿಗೆ ತೇಜಸ್ವಿಯವರು ಭಾಜನರಾಗಿದ್ದರು. ಇವರು 5.4.2007ರಂದು ನಿಧನರಾದರು.

ಪ್ರಸ್ತುತ ಲೇಖನವಾದ 'ಸುಸ್ಮಿತ ಮತ್ತು ಹಕ್ಕಿಮರಿ'ಯನ್ನು ಇವರ 'ಪರಿಸರದ ಕಥೆ' ಎಂಬ ಕಥಾ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಪಕ್ಷಿಲೋಕವು ಮನುಷ್ಯ ಲೋಕಕ್ಕಿಂತ ಭಿನ್ನವಾದುದು. ಪಕ್ಷಿಗಳ ಬದುಕಿನಲ್ಲಿ ಮನುಷ್ಯನು ಹಸ್ತಕ್ಷೇಪ ಮಾಡಿದರೆ ಏನಾಗುತ್ತದೆ ಎಂಬುದರ ವಿಶ್ಲೇಷಣೆ ಈ ಲೇಖನದಲ್ಲಿದೆ.

## ಕಠಿಣ ಪದಗಳ ಅರ್ಥ

ಚಿತ್ರಗ್ರಾಹಕ–ಛಾಯಾಗ್ರಾಹಕ, ಭಾವಚಿತ್ರವನ್ನು ತೆಗೆಯುವವನು; ಪ್ರತಿಕೂಲ–ವ್ಯತಿರಿಕ್ತವಾದ, ವಿರುದ್ಧವಾದ; ಭಂಗಿ–ರೀತಿ, ಹೆಣಗು–ಕಷ್ಟಪಡು, ಹೋರಾಡು; ಪಲಾಯನ–ಓಟ, ಪರಾರಿ, ಜೊತ್ತಿ–ಜುಟ್ಟು; ಅಸಂಖ್ಯಾತ–ಲೆಕ್ಕವಿಲ್ಲದುದು; ಇನ್‌ಕ್ಯುಬೇಟರ್–ಕಾವು ಪೆಟ್ಟಿಗೆ, ಕೃತಕ ಶಾಖೋಪಕರಣ; ಜಲಚರ–ನೀರಿನಲ್ಲಿ ವಾಸಿಸುವ



11th_Kannada_Reader_Final_16-07-2018.indd 78 16-07-2018 18:43:01

ಮೀನು, ಮೊಸಳೆ ಮುಂತಾದುವು; ಸರೀಸೃಪ–ಹರಿದಾಡುವ ಪ್ರಾಣಿ; ಹುಗಿದಿಡು–ನೆಲದಲ್ಲಿ ಮುಚ್ಚಿಡು; ಹೂಳು; ಆಸ್ಥೆ–ಆಸಕ್ತಿ, ಶ್ರದ್ಧೆ; ಉದ್ವೇಗ–ತಳಮಳ, ಭಯ; ಪವಾಡ–ಆಶ್ಚರ್ಯಕರವಾದ ಘಟನೆ; ಬಾಯಿಕಳೆ–ಬಾಯಿಬಿಡು; ಬಾಯಿತೆಗೆ; ಲೇಹ್ಯ–ನೆಕ್ಕಿ ತಿನ್ನುವ ಪದಾರ್ಥ; ಗಿಡಿ–ತುರುಕು, ತುಂಬು; ಖಾತರಿ–ಭರವಸೆ, ನಂಬಿಕೆ; ಜಟಿಲ–ತೊಡಕಾದ; ಕ್ಲಿಷ್ಟವಾದ; ಅಖೈರು–ಕಡೆ, ಕೊನೆ; ಇನಾಮು–ಕಾಣಿಕೆ, ಬಹುಮಾನ; ವಿಮುಖ–ನಿರಾಸಕ್ತನಾದವನು; ಪರಿತ್ಯಜಿಸು–ಬಿಡು.

## ಟಿಪ್ಪಣಿಗಳು

**ಸುಸ್ಮಿತ** = ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರಿಗೆ ಇಬ್ಬರು ಹೆಣ್ಣು ಮಕ್ಕಳು. ಹಿರಿಯ ಮಗಳೇ ಸುಸ್ಮಿತ. ಕಿರಿಯ ಮಗಳು ಈಶಾನ್ಯ. ಇವರಿಬ್ಬರೂ ಈಗ ಸಾಫ್ಟ್‌ವೇರ್ ಇಂಜಿನಿಯರ್‌ಗಳು.

**ಮಾರ** = ತೇಜಸ್ವಿಯವರ ತೋಟದಲ್ಲಿ ಕಾವಲಿಗಿದ್ದ ಒಬ್ಬ ವಯಸ್ಸಾದ ಮುದುಕ.

**ಸಲೀಂ ಆಲಿ** = ಇವರು ಅಂತರರಾಷ್ಟ್ರೀಯ ಖ್ಯಾತಿ ಪಡೆದ ಪಕ್ಷಿ ಶಾಸ್ತ್ರಜ್ಞರು. ಭಾರತದ ಪಕ್ಷಿಗಳ ಬಗೆಗೆ ಹಲವಾರು ಸಚಿತ್ರ ಸಂಪುಟಗಳನ್ನು ರಚಿಸಿದ್ದಾರೆ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಹಕ್ಕಿಗಳ ಫೋಟೋಗಳು ಯಾವ ಕಾರಣಕ್ಕಾಗಿ ಹಾಳಾಗುತ್ತಿದ್ದವು. ?
2. ಹಕ್ಕಿಗಳು 'ಕ್ಯಾಮೆರಾ'ವನ್ನು ಏನೆಂದು ತಿಳಿದು ಪಲಾಯನ ಮಾಡುತ್ತಿದ್ದವು ?
3. ಲೇಖಕರ ತೋಟದಲ್ಲಿ ಯಾವ ಯಾವ ಪ್ರಭೇದದ ಹಕ್ಕಿಗಳು ವಾಸವಾಗಿದ್ದವು?
4. ಚಿಕ್ಕಪುಕ್ಕ ಹಕ್ಕಿಗಳು ಮನುಷ್ಯರ ಓಡಾಟ ಇರುವ ಜಾಗದಲ್ಲೇ ಗೂಡನ್ನು ಕಟ್ಟಲು ಕಾರಣವೇನು ?
5. ಸುಸ್ಮಿತಳಿಗೆ ಯಾವುವು ಮೊದಲ ಪಾಠಗಳಾಗಿದ್ದವು ?
6. ಮೊಟ್ಟೆಗಳು ಯಾವ ಕಾರಣದಿಂದ ತಬ್ಬಲಿಗಳಾದವು ?
7. ಜಲಚರಗಳು ಇಡುವ ಅಸಂಖ್ಯಾತ ಮೊಟ್ಟೆಗಳಲ್ಲಿ ಶೇಕಡ ಒಂದು ಅಥವಾ ಎರಡು ಮೊಟ್ಟೆಗಳು ಮಾತ್ರ ಬದುಕುಳಿಯಲು ಕಾರಣವೇನು ?
8. ಸುಸ್ಮಿತ ಅತ್ಯಾಶ್ಚರ್ಯದಿಂದ ಕೂಗಿಕೊಂಡು ಲೇಖಕರ ಬಳಿಗೆ ಓಡಿ ಬರಲು ಕಾರಣವೇನು?
9. ವಿವಿಧ ಹಕ್ಕಿಗಳ ಆಹಾರದ ಬಗೆಗಳಾವುವು ?
10. ಲೇಖಕರು ಚಂದ್ರನಿಗೆ ಇನಾಮು ಕೊಡಲು ಕಾರಣವೇನು ?
11. ಆಕಾಶಬಗರೆ ಹಕ್ಕಿ ಮರಿಯ ತಾಯಿಯು ಆಗಾಗ ಏಕೆ ನಾಪತ್ತೆಯಾಗುತ್ತಿತ್ತು ?
12. ಆಕಾಶಬಗರೆ ಹಕ್ಕಿ ಮರಿಯನ್ನು ಸುಸ್ಮಿತಾ 'ನಮ್ಮ ಹಕ್ಕಿ ಮರಿ' ಎನ್ನಲು ಕಾರಣವೇನು?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಹಕ್ಕಿಗಳ ಫೋಟೋ ತೆಗೆಯುವಾಗ ಚಿತ್ರಗ್ರಾಹಕನಿಗೆ ಎದುರಾಗುವ ತೊಂದರೆಗಳೇನು?
2. ಜಲಚರಗಳಿಂದ ಹಿಡಿದು ಸಸ್ತನಿಗಳವರೆಗೆ ವಂಶಾಭಿವೃದ್ಧಿ ವಿಕಾಸವಾಗುವುದನ್ನು ಲೇಖಕರು ಸುಸ್ಮಿತಳಿಗೆ ಹೇಗೆ ವಿವರಿಸಿದ್ದಾರೆ ?
3. ಲೇಖಕರು ಪಿಕಳಾರ ಹಕ್ಕಿಯ ಮೊಟ್ಟೆಗಳನ್ನು ಮನೆಗೆ ತಂದು ಮರಿ ಮಾಡಲು ಪ್ರಯತ್ನಿಸಲು ಕಾರಣವೇನು ?
4. ಲೇಖಕರು ಟುವ್ವಿಹಕ್ಕಿಯ ಮರಿಗಳನ್ನು ಸಾಕಲು ನಿರ್ಧರಿಸಿದ್ದೇಕೆ ?
5. ಸುಸ್ಮಿತ ಹಕ್ಕಿಯ ಬಗ್ಗೆ 'ನಮ್ಮ ಹಕ್ಕಿ ಮರಿ' ಎಂಬ ಬಾಂಧವ್ಯವನ್ನು ಬೆಸೆದುಕೊಂಡ ಪ್ರಸಂಗವನ್ನು ವಿವರಿಸಿ.

## ಭಾಷಾಭ್ಯಾಸ

**1. ಈ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಪೂರ್ವಾಪರ, ಕುತೂಹಲ, ಆಕಾಶ ಕಳಚಿ ಬೀಳು, ನುಚ್ಚುನೂರು, ಅತ್ಯಾನಂದ, ಉಪವಾಸ, ತಲೆಹೋಗು, ಸಹಾಯ ಹಸ್ತ.

**2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಪ್ರಯೋಗ, ಪ್ರತಿಕೂಲ, ಬೆಳಗು, ಭಯ,



11th_Kannada_Reader_Final_16-07-2018.indd 79 16-07-2018 18:43:01

ಸಾಧಾರಣ, ಅಗತ್ಯ, ಕೃತಕ, ಸಜೀವ, ನಿರುಪಯುಕ್ತ, ಚಿಂತೆ, ದುರ್ಬಲ, ಸಂಶಯ, ನಿರ್ಧಾರ, ಸ್ವತಂತ್ರ.

**3. ಈ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಹಕ್ಕಿ, ಪುಸ್ತಕ, ಸಾವಿರ, ಸಂಜೆ, ಕೋಗಿಲೆ, ಆಕಾಶ, ಅಚ್ಚರಿ, ವಿದ್ಯೆ.

**4. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

ಐದಾರು, ಅತ್ಯುತ್ತಮ, ಅತ್ಯಂತ, ನೂರಾರು, ಅತ್ಯಾಶ್ಚರ್ಯ, ಬ್ರಹ್ಮಾಂಡ, ಗೊಂಬೆಯಾಟ, ಅಂಗಾಂಗ, ರೂಪಾಂತರ, ಸುಡುಗಾಡು, ಕೀಟಾಹಾರಿ, ಒಮ್ಮೊಮ್ಮೆ, ಅತ್ಯಾನಂದ, ಜ್ಞಾನೋದಯ.

**5. ಈ ಪದಗಳ ವಿಗ್ರಹ ವಾಕ್ಯಗಳನ್ನು ಬರೆದು, ಸಮಾಸದ ಹೆಸರನ್ನು ಬರೆಯಿರಿ.**

ಹೊಂಬಣ್ಣ, ಕೆಂಬಣ್ಣ, ನಲ್ವತ್ತು, ಜೀವವಿಕಾಸ, ತಲೆಯಾಡಿಸು, ಸುಡುಗಾಡು, ಪಶುವೈದ್ಯ, ಕೈಬೀಸು.

## ಚಟುವಟಿಕೆ

1. ನಿಯತಕಾಲಿಕೆಗಳ ಹಾಗೂ ಪತ್ರಿಕೆಗಳಲ್ಲಿ ಪಕ್ಷಿಗಳ ಬಗ್ಗೆ ಬಂದಿರುವ ಚಿತ್ರ ಮತ್ತು ಲೇಖನಗಳನ್ನು ಸಂಗ್ರಹಿಸಿ.

2. ರಂಗನತಿಟ್ಟು, ಮಂಡಗದ್ದೆ, ಗುಡವಿ, ಕೊಕ್ಕರೆ ಬೆಳ್ಳೂರು ಮುಂತಾದ ಪಕ್ಷಿಧಾಮಗಳಿಗೆ ಭೇಟಿ ನೀಡಿ ನಿಮ್ಮ ಪ್ರವಾಸದ ಅನುಭವಗಳನ್ನು ಕು–ರಿತು ದೂರದ ಊರಿನಲ್ಲಿರುವ ನಿಮ್ಮ ಮಿತ್ರನಿಗೆ ಒಂದು ಪತ್ರವನ್ನು ಬರೆಯಿರಿ.

3. 'ಪ್ರತಿ ದಿನವೂ ನಾನು ಕಾಣುವ ಹಕ್ಕಿಗಳು' ಈ ವಿಷಯದ ಬಗ್ಗೆ ಒಂದು ಪ್ರಬಂಧವನ್ನು ಬರೆಯಿರಿ.

4. ಇದೇ ಲೇಖಕರ 'ಕನ್ನಡ ನಾಡಿನ ಹಕ್ಕಿಗಳು, ಭಾಗ–1 ಮತ್ತು 2' ಕೃತಿಗಳನ್ನು ಓದಿರಿ.





11th_Kannada_Reader_Final_16-07-2018.indd 80 16-07-2018 18:43:02

ಉಪಪಠ್ಯ

ಘಟಕ ನಾಲ್ಕು

# ಅರಣ್ಯ ನಾಶ – ಪರಿಣಾಮ ಏನು ?

– ಎನ್.ವಾಸುದೇವ





ಗೆಳೆಯರೇ, 'ಅರಣ್ಯ ರಕ್ಷಿಸಿ, ಕಾಡನ್ನು ಬೆಳೆಸಿ' ಎಂಬ ಕೂಗು ಈಗೀಗ ಮುಗಿಲನ್ನು ಮುಟ್ಟುತ್ತಿರುವುದು ನಿಮ್ಮ ಗಮನಕ್ಕೂ ಬಂದಿದೆಯೇ ? ಪರಿಸರ ತಜ್ಞರ ನಿಸರ್ಗಪ್ರಿಯರ ವನ್ಯಜೀವಿ ಸಂರಕ್ಷಕರ ಸುಶಿಕ್ಷಿತರ ಪ್ರಜ್ಞಾವಂತ ಪೌರರ ಈ ಆಗ್ರಹದ ದನಿ ಬಹು ಸಂದರ್ಭಗಳಲ್ಲಿ 'ಅರಣ್ಯರೋದನ'ವೇ ಆಗುತ್ತಿರುವುದು ನಿಮಗೆ ಗೊತ್ತೇ? 'ಚಿಪ್ಕೋ ಚಳವಳಿ', 'ಅಪ್ಪಿಕೋ ಚಳವಳಿ'ಗಳ ಬಗೆಗೆ ನೀವು ಕೇಳಿದ್ದೀರಾ? ನಿಮ್ಮ ಮನೆಯ ಮುಂದೆ ನಿಮ್ಮ ಶಾಲೆಯ ಸುತ್ತ ನೀವು ಗಿಡಮರಗಳನ್ನು ಬೆಳೆಸಿದ್ದೀರಾ? ಬೆಳೆದು ನಿಂತಿರುವ ವೃಕ್ಷಗಳನ್ನು ಕಡಿದುರುಳಿಸುವುದನ್ನು ವಿರೋಧಿಸುವುದು, ತಡೆಯುವುದು ಎಲ್ಲಾ ಪ್ರಜ್ಞಾವಂತರ ಆದ್ಯ ಕರ್ತವ್ಯ ಎಂಬುದು ನಿಮಗೂ ತಿಳಿದಿದೆ ತಾನೇ?

ಹಾಗಾದರೆ ಅರಣ್ಯಗಳು ಇಂದು ಅಷ್ಟೊಂದು ತೀವ್ರ ವೇಗದಲ್ಲಿ ನಶಿಸಿ ಹೋಗುತ್ತಿದೆಯೇ ಎಂದು ಯೋಚಿಸುತ್ತಿದ್ದೀರೇನು ? ನಿಮಗೇಕೆ ಸಂಶಯ ? ಈ ಕೆಲ ಅಂಕಿ ಅಂಶಗಳನ್ನೇ ನೋಡಿ : 1950ರಿಂದ 1985ರವರೆಗೆ ಮುವ್ವತ್ತೈದು ವರ್ಷಗಳಲ್ಲೇ ಈ ಇಡೀ ಜಗತ್ತಿನ ಅರ್ಧಭಾಗ ಅರಣ್ಯಗಳು ನಾಶವಾಗಿ ಹೋಗಿವೆ! ದಟ್ಟ ಅರಣ್ಯಗಳ ಬೀಡಾಗಿದ್ದ ಲ್ಯಾಟಿನ್ ಅಮೆರಿಕದ ಮೂರರಲ್ಲಿ ಎರಡು ಭಾಗ ಕಾಡು ಈಗ ಬೋಳಾಗಿ



11th_Kannada_Reader_Final_16-07-2018.indd 81 16-07-2018 18:43:03

ನಿಂತಿದೆ. ದಟ್ಟ ಹಸಿರು ಮುರಿವ ಕಾಲಿಡಲಾಗದ ಒತ್ತಾಗಿದ್ದ ಆಫ್ರಿಕಾದ ವನಗಳು ಶೇಕಡಾ 50ರಷ್ಟು ಮಾಯವಾಗಿವೆ! ಥಾಯ್‌ಲ್ಯಾಂಡ್‌ನಲ್ಲಿ ಕಳೆದು ಹೋಗಿರುವ ವನ ಸಂಪತ್ತು ಕಳೆದ ಹತ್ತು ವರ್ಷಗಳಲ್ಲಿ ಶೇಕಡಾ 25! ಸೊಬಗಿನ ಅರಣ್ಯಗಳ ಕ್ಷೇತ್ರವಾಗಿದ್ದ ಫಿಲಿಪೈನ್ಸ್ ದ್ವೀಪಗಳಲ್ಲಿ ಕಳೆದ ಐದೇ ವರ್ಷಗಳಲ್ಲಿ ಏಳರಲ್ಲಿ ಒಂದಂಶ ಕಾಡು ಇಲ್ಲವಾಗಿದೆ! ನಮ್ಮ ದೇಶದ ಹಿಮಾಲಯದ ತಪ್ಪಲಿನ ಸೊಬಗಿನ ದಟ್ಟ ಅರಣ್ಯಗಳು ಮನುಷ್ಯನಿಂದ ದೂರವಿದ್ದರೂ, ಅಲ್ಲಲ್ಲಿ 'ಚಂದ್ರನ ನೆಲ'ವನ್ನು ಹೋಲುತ್ತಿವೆ! ಅದೆಲ್ಲಾ ಏಕೆ ? ನಮ್ಮ ಜಗತ್ತಿನಲ್ಲಿ ವರ್ಷವೊಂದಕ್ಕೆ ಸಂಭವಿಸುತ್ತಿರುವ ಅರಣ್ಯನಾಶ ಸುಮಾರು 20 ದಶಲಕ್ಷ ಹೆಕ್ಟೇರುಗಳು! (ಒಂದು ಹೆಕ್ಟೇರು ಎರಡೂವರೆ ಎಕರೆಗಳಿಗೆ ಸಮ). ಅದು ಇರಲಿ, ನೀವು ಇಲ್ಲಿನ ಒಂದೇ ಒಂದು ವಾಕ್ಯವನ್ನು ಓದಿ ಮುಗಿಸುವುದರಲ್ಲೇ ಪ್ರಪಂಚದಲ್ಲಿ ಎಲ್ಲೆಲ್ಲೋ ಒಟ್ಟು ಎರಡೂವರೆ ಹೆಕ್ಟೇರು ಅರಣ್ಯ ಬಟ್ಟ ಬಯಲಾಗಿದೆ ಎಂದರೆ ನಂಬುವಿರೇನು? ಮನುಷ್ಯನ 'ವಿನಾಶದ ಹಸ್ತ ಹೀಗೆ ಕಾರ್ಯ ನಿರತವಾಗಿದ್ದರೆ ಈ ಶತಮಾನದ ಅಂತ್ಯದ ವೇಳೆಗೆ ಭೂಮಿ ಬರಿಯ ಬಯಲಾಗಿರುತ್ತದೆ ! ಅಂದಿನ ಕಿರಿಯರು ವೃಕ್ಷಗಳನ್ನು 'ಮ್ಯೂಸಿಯಂ'ಗಳಲ್ಲೋ, ಚಿತ್ರಗಳಲ್ಲೋ ನೋಡಬೇಕಾಗುತ್ತದೆ ಅಷ್ಟೇ!

ಹಾಗೆಂದೊಡನೆ ವೃಕ್ಷಗಳು ಇಲ್ಲವಾಗುವುದಷ್ಟೇ ಅರಣ್ಯ ನಾಶದ ಪರಿಣಾಮ ಎಂದು ತೀರ್ಮಾನಿಸಿ ಬಿಡಬೇಡಿ. ಇಂದಿನ ಪ್ರಾಣಿ ಜಗತ್ತಿನ ವಿಪುಲತೆಗೆ ಮಾನವ ಜಗತ್ತಿನ ಈ ಉನ್ನತಿಗೆ ಅರಣ್ಯ ಸಂಪತ್ತೇ ಮೂಲ ಕಾರಣ. ನೀವು ಕೈಯಲ್ಲಿ ಹಿಡಿದಿರುವ ಈ ಕಾಗದವೂ, ನೀವು ಧರಿಸಿರುವ ವಸ್ತ್ರಗಳೂ, ನಿಮ್ಮ ಮನೆಯ ಕಿಟಕಿ ಬಾಗಿಲು ಪೀಠೋಪಕರಣಗಳೂ ಸಸ್ಯ ಮೂಲದವೇ ತಾನೇ?

ಅರಣ್ಯಗಳ ಪ್ರಾಮುಖ್ಯ ಅಷ್ಟಕ್ಕೇ ಸೀಮಿತವಾಗಿದ್ದಿದ್ದರೆ ವೃಕ್ಷ ರಕ್ಷಣೆಯ ಅಗತ್ಯವೇ ಇರುತ್ತಿರಲಿಲ್ಲ ಬಿಡಿ..... 'ಅರಣ್ಯಗಳು ನಾಶವಾದರೆ ಭೂಮಿ ಬಂಜರಾಗುತ್ತದೆ' ಕೃಷಿ ಭೂಮಿಗಾಗಿ ಕಡಿದ ವನ ಪ್ರದೇಶ ಮರುಭೂಮಿಯಾಗುತ್ತದೆ! ಸೌದೆಗಾಗಿ ಕಡಿದುರುಳಿಸಿದ ವೃಕ್ಷ ಪ್ರದೇಶಗಳು ಬಕ್ಕ ಬಂಡೆಗಳಾಗಿ ಹೋಗುತ್ತವೆ! ನಗರಗಳನ್ನು ನಿರ್ಮಿಸಲು ನೆಲ ಸಮ ಮಾಡಿದ ಅರಣ್ಯ ಭೂಮಿ ಬಿರಿದ ಬೆಂಗಾಡಾಗುತ್ತದೆ! ಒಟ್ಟಿನಲ್ಲಿ ಅರಣ್ಯ ನಾಶದ ಪರಿಣಾಮ ಕೇವಲ ಒಂದೇ – 'ಸರ್ವನಾಶ!'

ಈ ಭೂಮಿಯಲ್ಲಿ ಜೀವಿಗಳ ಅಸ್ತಿತ್ವಕ್ಕೆ ಮೂಲ ಐಶ್ವರ್ಯ 'ಮಣ್ಣು!' ಈ ಜಗತ್ತಿನ ಎಲ್ಲ ಸಸ್ಯರಾಶಿಗೂ ಜೀವನಾಧಾರ ಅದೇ. ಅರಣ್ಯಗಳು ಹಾಳಾದೆಡೆ ಅಲ್ಲಿನ ಮಣ್ಣು ಮಳೆಯಲ್ಲಿ ಕೊಚ್ಚಿ ಹೋಗುತ್ತದೆ. ನದಿಗಳಲ್ಲಿ ಹರಿದು ಸಾಗರದಲ್ಲಿ ಮಡುಗಟ್ಟುತ್ತದೆ. ಭಾರತ ಒಂದರಲ್ಲೇ ಹೀಗೆ ನಾಶವಾಗುತ್ತಿರುವ ಮಣ್ಣಿನ ಪ್ರಮಾಣ ವರ್ಷಕ್ಕೆ ಆರು ಸಾವಿರ ದಶಲಕ್ಷ ಟನ್! ಎಂದರೆ ನಮ್ಮ ದೇಶದ ಪ್ರತಿ ವ್ಯಕ್ತಿಯೂ ವರ್ಷಕ್ಕೆ ಏಳರಿಂದ ಎಂಟು ಟನ್‌ಗಳಷ್ಟು ಈ 'ಬಂಗಾರ'ವನ್ನು ಕಳೆದುಕೊಳ್ಳುತ್ತಿದ್ದಾನೆಂದಾಯಿತು! ಇಡೀ ಮಣ್ಣನ್ನು ಕದ್ದರೆ ನಡೆವ ವಾಗ್ಯುದ್ಧಗಳು, ಗೇಣುದ್ದ ಭೂಮಿಯನ್ನು ಅತಿಕ್ರಮಿಸಿದರೆ ನಡೆವ ಹೊಡೆದಾಟಗಳು, ಗಡಿ ರೇಖೆಯನ್ನಷ್ಟು ಉಲ್ಲಂಘಿಸಿದರೆ ಸಂಭವಿಸುವ ಭಯಂಕರ ಸಮರಗಳು ಎಲ್ಲರಿಗೂ ಗೊತ್ತು. ಆದರೆ ಹೀಗೆ ನಿಶ್ಶಬ್ದವಾಗಿ ಕಳೆದು ಹೋಗುತ್ತಿರುವ ಅಮೂಲ್ಯ ನಿಧಿಯ ಅರಿವು ಎಲ್ಲರಿಗೂ ಉಂಟೇನು ? ಇದಕ್ಕಿರುವ ಪರಿಹಾರ ಯುದ್ಧವಲ್ಲ, ಅರಣ್ಯ ರಕ್ಷಣೆ!

ಕಾಡುಗಳು ಇಲ್ಲವಾದರೆ ವನ್ಯಜೀವಿಗಳಿಗೆ ತಾವೆಲ್ಲಿ? ಎಲ್ಲ ಪ್ರಾಣಿ ಪಕ್ಷಿಗಳೂ ಅಳಿಯಲಾರಂಭಿಸಿದರೆ ಕೊನೆಯಲ್ಲಿ ಉಳಿಯುವವರು 'ಇಬ್ಬರು!' ವನ ಮತ್ತು ವನ್ಯ ಜೀವಿಗಳನ್ನು ಹಾಳುಗೆಡವಿದ ನಾವು; ಮತ್ತು ನಮ್ಮ ರಕ್ತ ಹೀರಲು ಉಳಿವ ಕೀಟಗಳು! ಅದೊಂದು ನರಕ ಸದೃಶ ಸ್ಥಿತಿ; ಅಸಹನೀಯ ಬದುಕು! ಅದೂ ಅಲ್ಪಕಾಲ ಅಷ್ಟೇ!

ಅರಣ್ಯನಾಶದಿಂದ ಉದ್ಭವಿಸುವ ಮತ್ತೊಂದು ಅತೀ ಪ್ರಮುಖ ದುಷ್ಪರಿಣಾಮ ಹವಾಮಾನದ ಏರು ಪೇರು. ಅರಣ್ಯಗಳು ಕಡಿಮೆಯಾದಂತೆಲ್ಲಾ ಮಳೆ ಮಾರುತಗಳ ಪ್ರಕೃತಿ ವ್ಯತ್ಯಾಸಗೊಳ್ಳುತ್ತದೆ. ಈ ಪರಿಣಾಮದ ಅನುಭವ ಈಗಾಗಲೇ ದೊರಕುತ್ತಿದೆ ಅಲ್ಲವೇ? ಅಷ್ಟೇ ಅಲ್ಲ, ವೃಕ್ಷ ಕ್ಷೀಣಿಸಿದಂತೆಲ್ಲಾ



11th_Kannada_Reader_Final_16-07-2018.indd 82 16-07-2018 18:43:03

ವಾತಾವರಣದಲ್ಲಿನ ಇಂಗಾಲದ ಡೈ ಆಕ್ಸೈಡ್ ಹೆಚ್ಚುತ್ತಾ ಹೋಗುತ್ತದೆ. ಪರಿಣಾಮವಾಗಿ ಉಷ್ಣತೆ ಏರಿ ಹೋಗುತ್ತದೆ. ಆಗ ಉತ್ತರ ದಕ್ಷಿಣ ಧ್ರುವಗಳಲ್ಲಿ ಶೇಖರವಾಗಿರುವ ಹಿಮ ರಾಶಿಗಳು ಕರಗಿ ಸಾಗರಕ್ಕೆ ಸೇರುತ್ತವೆ. ಇಡೀ ಸಾಗರದಲ್ಲಿನ ನೀರಿನ ಮಟ್ಟ ಆರು ಮೀಟರ್ ಏರಿ ಹೋಗುತ್ತದೆ. ಕಡಲ ತೀರದ ಹಲವಾರು ನೂರು ಕಿ.ಮೀ.ವರೆಗಿನ ಎಲ್ಲ ಭೂ ಪ್ರದೇಶಗಳೂ ಮಹಾ ನಗರಗಳೂ ಸಮುದ್ರದಲ್ಲಿ ಸಮಾಧಿಗೊಳ್ಳುತ್ತವೆ. ಧ್ರುವ ಪ್ರದೇಶಗಳೂ, ಬಿಸಿ ದೇಶಗಳಾದೊಡನೆ ಮಾರುತ ಚಕ್ರ ಸ್ಥಗಿತಗೊಳ್ಳುತ್ತದೆ. ಮಳೆಗೆ ಕುಡಿಯುವ ನೀರಿಗೆ ಬರ ಬಂದಾಗ ಹಿತಕರ ಬದುಕು ಸಾಧ್ಯವೇನು ? ಇಂದಿನ ಸ್ಥಿತಿಯೇ ಮುಂದುವರೆದರೆ ಮುಂದಿನ ಎಪ್ಪತ್ತು ವರ್ಷಗಳೊಳಗೆ ಈ ಪರಿಸ್ಥಿತಿ ಎಂದು 1985ರಲ್ಲೇ ವಿಜ್ಞಾನಿಗಳು ಅಂದಾಜಿಸಿದ್ದರು!

ಅದಿರಲಿ, ಇಷ್ಟೊಂದು ವೇಗದಲ್ಲಿ ಕಾಡುಗಳು ನಾಶವಾಗಲು ಮುಖ್ಯ ಕಾರಣಗಳೇನು ?

ಗೆಳೆಯರೇ, ಇಲ್ಲಿ ಕೇಳಿ. ಅರಣ್ಯ ನಾಶಕ್ಕೆ ಮುಖ್ಯ ಕಾರಣ ಎಂದರೆ – ಮನುಷ್ಯರ ಅಗಾಧ ಸಂಖ್ಯೆ ಮತ್ತು ಕಿತ್ತು ತಿನ್ನುತ್ತಿರುವ ಬಡತನ! ಅತಿ ದಟ್ಟ ಅರಣ್ಯಗಳಿರುವ ಪ್ರದೇಶಗಳಲ್ಲೇ ಹೆಚ್ಚು ಸಂಖ್ಯೆಯ ಬಡ ರಾಷ್ಟ್ರಗಳೂ ಗುಂಪಾಗಿರುವುದೊಂದು ವಿಪರ್ಯಾಸ. ಆಫ್ರಿಕಾ ಇದಕ್ಕೊಂದು ಶ್ರೇಷ್ಠ ನಿದರ್ಶನ. ಅಂತಹ ಪ್ರದೇಶದ ಜನ ಇಂಧನಕ್ಕಾಗಿ, ಕೃಷಿ ಭೂಮಿಗಾಗಿ, ಹೊಸ ವಸತಿ ತಾಣಗಳಿಗಾಗಿ ಬೆಲೆ ಬಾಳುವ ಮರಮಟ್ಟುಗಳಿಗಾಗಿ ಅರಣ್ಯಗಳನ್ನು ನೆಲಸಮ ಮಾಡುತ್ತಿದ್ದಾರೆ. ಬ್ರೆಜ಼ಿಲ್‌ನ ಕತ್ತಲು ಕವಿದ ಅಮೆಜಾನ್ ಅರಣ್ಯ ಪ್ರದೇಶಗಳಲ್ಲಿ ಜನ ಬೇಸಾಯದ ನೆಲಕ್ಕಾಗಿ ವರ್ಷಕ್ಕೆ ಎಂಟುನೂರು ಕೋಟಿ ರೂಪಾಯಿ ಬೆಲೆಯ ಮರಗಳನ್ನು ಕಡಿದು ಕಾಳ್ಗಿಚ್ಚಿಗೆ ಅರ್ಪಿಸುತ್ತಿದ್ದಾರೆ. ಆದರೆ ಅದೇ ಆಫ್ರಿಕಾದ ಕೆಲ ರಾಷ್ಟ್ರಗಳಲ್ಲಿ ಹೆಂಗಸರು ಒಂದು ವಾರಕ್ಕೆ ಬೇಕಾಗುವ ಸೌದೆಗಾಗಿ ವಾರದಲ್ಲಿ ಆರುದಿನ ಅಲೆದಾಡುತ್ತಿದ್ದಾರೆ. ಎಂತಹ ವಿಪರ್ಯಾಸ!

ಒಟ್ಟಿನಲ್ಲಿ ಬಡತನವನ್ನು ಹೋಗಲಾಡಿಸಿಕೊಳ್ಳಲು ಮನುಷ್ಯ ಅರಣ್ಯಗಳನ್ನು ಲೂಟಿ ಮಾಡುತ್ತಿದ್ದಾನೆ ಎಂದರೆ ಸಿರಿವಂತನಾಗಲು ಬಯಸಿ ಅದಕ್ಕಾಗಿ ತನ್ನ ಐಶ್ವರ್ಯವನ್ನೇ ತಾನು ತಿಳಿಯದೆ ನಷ್ಟ ಮಾಡಿಕೊಳ್ಳುತ್ತಿದ್ದಾನೆ – ಈ 'ಬುದ್ಧಿಜೀವಿ!' ಪುಕ್ಕಟೆಯಾಗಿ ಸೌದೆ ತರಲು ಹೋದ ಪೆದ್ದನೊಬ್ಬ ತಾನು ಏರಿ ಕುಳಿತ ಕೊಂಬೆಯನ್ನೇ ಕಡಿದ ಕಥೆ ನಾವು ನಡೆಸುತ್ತಿರುವ ಅರಣ್ಯನಾಶದ ಕಾರ್ಯಕ್ಕೆ ಚೆನ್ನಾಗಿ ಹೋಲುತ್ತದೆ ಅಲ್ಲವೇ?

## ಕೃತಿ–ಕರ್ತೃ ವಿಚಾರ

ಶ್ರೀ. ಎನ್.ವಾಸುದೇವ ಅವರು ದಿನಾಂಕ 4.4.1950ರಂದು ಮೈಸೂರಿನಲ್ಲಿ ಜನ್ಮ ತಾಳಿದರು. ಅವರು 1973ರಿಂದ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲೂಕಿನ ಸೂಲಿಬೆಲೆಯ ವಿವೇಕಾನಂದ ಪ್ರೌಢಶಾಲೆಯಲ್ಲಿ ವಿಜ್ಞಾನದ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 1983ರಿಂದ 'ಪ್ರಜಾವಾಣಿ' ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ 'ಕಿರಿಯರಿಗೆ ವಿಜ್ಞಾನ' ಎಂಬ ಅಂಕಣಕಾರರಾಗಿ ಅವರು ಪ್ರಸಿದ್ಧಿ ಪಡೆದಿದ್ದಾರೆ. ಈ ಅಂಕಣ ವಿಜ್ಞಾನ ಪ್ರಜ್ಞೆಯನ್ನು ಮಕ್ಕಳಲ್ಲಿ ಬೆಳೆಸಲು ಮಾತ್ರವಲ್ಲದೆ ವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಜನಪ್ರಿಯಗೊಳಿಸುವಲ್ಲಿ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ಸರಳವಾಗಿ ಕನ್ನಡದಲ್ಲಿ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವಲ್ಲಿ ಮಹತ್ತರ ಪಾತ್ರ ವಹಿಸಿದೆ. 'ಸುಧಾ ಪತ್ರಿಕೆಯ 'ಕೆಣಕು ತಿಣುಕು' ಅಂಕಣ ಸಹ ಅವರದೇ. ಬೆಂಗಳೂರು ಆಕಾಶವಾಣಿ ನಿಲಯದಿಂದ ಅವರ ಹಲವಾರು ಭಾಷಣಗಳು ಪ್ರಸಾರವಾಗಿವೆ.

ಪ್ರಸ್ತುತ ಲೇಖನವನ್ನು 1985ರ ಸೆಪ್ಟೆಂಬರ್ 15ರ ಪ್ರಜಾವಾಣಿ ಪತ್ರಿಕೆಯಿಂದ ಆಯ್ದುಕೊಳ್ಳಲಾಗಿದೆ. ಅದು ಅರಣ್ಯ ನಾಶದಿಂದ ಉಂಟಾಗುವ ಭೀಕರ ಪರಿಸ್ಥಿತಿಯನ್ನು ವಿವರಿಸುತ್ತದೆ.

## ಕಠಿಣ ಪದಗಳ ಅರ್ಥ

ಪರಿಸರ–ಸನ್ನಿವೇಶ, ಸುತ್ತಲಿನ ವಾತಾವರಣ; ನಿಸರ್ಗ–ಪ್ರಕೃತಿ, ಸೃಷ್ಟಿ; ವನ್ಯಜೀವಿ–ವನದಲ್ಲಿ ವಾಸಿಸುವ ಪ್ರಾಣಿ; ಪ್ರಜ್ಞಾವಂತ–ತಿಳುವಳಿಕೆಯುಳ್ಳ;



11th_Kannada_Reader_Final_16-07-2018.indd 83 16-07-2018 18:43:03

ಪೌರ–ನಾಗರಿಕ; ಅರಣ್ಯರೋದನ–ವ್ಯರ್ಥವಾದ ಗೋಳಾಟ; ಚಿಪ್ಕೋ ಚಳವಳಿ–ಮರಗಳನ್ನು ಕಡಿಯದಂತೆ ಹಿಮಾಲಯದಲ್ಲಿ ಸುಂದರಲಾಲ್ ಬಹುಗುಣ ಎಂಬುವವರು ಪ್ರಾರಂಭಿಸಿದ ಚಳವಳಿ; ಅಪ್ಪಿಕೋ ಚಳವಳಿ–ಮರವನ್ನು ಕಡಿಯದಂತೆ ಅದನ್ನು ಅಪ್ಪಿಕೊಂಡು ತಡೆಯುವ ಚಳವಳಿ; ವೃಕ್ಷ–ಮರ; ಆಗ್ರಹ–ಒತ್ತಾಯ; ಚಂದ್ರನ ನೆಲ–ಜೀವಿಗಳಿಲ್ಲದ ಬರಡು ನೆಲ; ಮ್ಯೂಸಿಯಂ–ವಸ್ತು ಸಂಗ್ರಹಾಲಯ; ವಿಪುಲ–ಹೆಚ್ಚು, ಉನ್ನತಿ; ಬಂಜರು–ಬರಡು, ಬೆಳೆ ಬಾರದ ನಿಸ್ಸಾರ ಪ್ರದೇಶ; ಬೆಂಗಾಡು–ನೀರು ನೆರಳಿಲ್ಲದ ಬಿಸಿ ಪ್ರದೇಶ; ಅಸ್ತಿತ್ವ–ಇರುವಿಕೆ; ವಾಗ್ಯುದ್ಧ–ಮಾತಿನ ಕಾಳಗ; ಉಲ್ಲಂಘಿಸು–ಮೀರು, ದಾಟು; ಸಮರ–ಯುದ್ಧ, ಕಾಳಗ, ಕದನ; ಅತಿಕ್ರಮ–ಕ್ರಮವನ್ನು ಮೀರುವುದು, ಉಲ್ಲಂಘಿಸುವುದು; ನಿಶ್ಶಬ್ದ–ಶಬ್ದವಿಲ್ಲದ, ಗೊತ್ತಿಲ್ಲದಂತೆ; ಅಮೂಲ್ಯ–ಬೆಲೆ ಕಟ್ಟಲಾಗದ; ತಾವು–ಸ್ಥಳ, ಜಾಗ; ಸದೃಶ–ಹೋಲುವ, ಸಮಾನ, ಅಂತಹ; ಅಸಹನೀಯ–ಸಹಿಸಲಾರದ; ಉದ್ಭವಿಸು–ಹುಟ್ಟು; ಮಾರುತ–ಗಾಳಿ; ಕ್ಷೀಣಿಸು–ಕಡಿಮೆಯಾಗು; ಇಂಗಾಲದ ಡೈಆಕ್ಸೈಡ್–ಅಂಗಾರಾಮ್ಲ; ತೀರ–ದಡ; ಧ್ರುವ–ಭೂಮಿಯ ಉತ್ತರದ ತುದಿ ಇಲ್ಲವೇ ದಕ್ಷಿಣದ ತುದಿ; ಸ್ಥಗಿತ–ಇದ್ದಂತಿರುವ, ಚಲಿಸದ; ಅಗಾಧ–ಮಿತಿಮೀರಿದ; ನಿದರ್ಶನ–ಉದಾಹರಣೆ; ತಾಣ(ತ್ಸ)–ಸ್ಥಳ(ದ್ಭ), ಜಾಗ, ಸ್ಥಾನ; ಇಂಧನ–ಉರುವಲು, ಕಟ್ಟಿಗೆ, ಸೌದೆ.

## ಅಭ್ಯಾಸ

### I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮರ ಕಡಿಯುವುದನ್ನು ತಡೆಯಲು ಇರುವ ಎರಡು ಚಳವಳಿಗಳಾವುವು ?
2. ಪ್ರಜ್ಞಾವಂತರ ಕರ್ತವ್ಯಗಳೇನು ?
3. ಅಲ್ಲಲ್ಲಿ ಚಂದ್ರನ ನೆಲವನ್ನು ಹೋಲುತ್ತಿರುವುದು ನಮ್ಮ ದೇಶದ ಯಾವ ಭಾಗದಲ್ಲಿ ?
4. ಮಾನವ ಜಗತ್ತಿನ ಉನ್ನತಿಗೆ ಮೂಲ ಕಾರಣ ಯಾವುದು ?
5. ಅರಣ್ಯಗಳು ನಾಶವಾದರೆ ಭೂಮಿಯ ಸ್ವರೂಪ ಏನಾಗುತ್ತದೆ ?
6. ಅಮೆಜಾನ್ ಪ್ರದೇಶಗಳಲ್ಲಿ ಬೇಸಾಯದ ನೆಲಕ್ಕಾಗಿ ಏನು ಮಾಡುತ್ತಿದ್ದಾರೆ ?

### II. ಕೆಳಗಿನ ಪ್ರಶ್ನೆಗಳಿಗೆ ಸಂಕಿಪ್ತವಾಗಿ ಉತ್ತರಿಸಿ.

1. ಈಗೀಗ ಮುಗಿಲು ಮುಟ್ಟುತ್ತಿರುವ ಕೂಗು ಯಾವುದು ? ಬಹು ಸಂದರ್ಭಗಳಲ್ಲಿ ಅದರ ಸ್ಥಿತಿ ಏನಾಗಿರುತ್ತದೆ ?
2. ಜಗತ್ತಿನಲ್ಲಿ ಅರಣ್ಯನಾಶ ಯಾವ ಪ್ರಮಾಣದಲ್ಲಿ ಆಗುತ್ತಿದೆ ? ಇದು ಮುಂದುವರೆದರೆ ಆಗುವ ಪರಿಣಾಮವೇನು ?
3. ನಿಶ್ಶಬ್ದವಾಗಿ ಕಳೆದು ಹೋಗುತ್ತಿರುವ ಅಮೂಲ್ಯ ನಿಧಿ ಯಾವುದು ? ಅದನ್ನುಳಿಸಲು ಪರಿಹಾರವೇನು ?
4. ಕಾಡುಗಳು ಇಲ್ಲವಾದರೆ ಕೊನೆಯಲ್ಲಿ ಉಳಿಯುವ 'ಇಬ್ಬರು' ಯಾರು ಯಾರು? ಉಳಿದರೂ ಅವರ ಬದುಕು ಹೇಗಿರುತ್ತದೆ ?
5. ಇಂಗಾಲದ ಡೈ ಆಕ್ಸೈಡ್ ಏಕೆ ಹೆಚ್ಚುತ್ತದೆ ? ಅದು ಹೆಚ್ಚುವುದರಿಂದ ಆಗುವ ಪರಿಣಾಮವೇನು ?
6. ಮನುಷ್ಯ ಶ್ರೀಮಂತನಾಗಲು ಬಯಸಿ ಏನನ್ನು ಮಾಡುತ್ತಿದ್ದಾನೆ ? ಅದರಿಂದ ಏನು ನಷ್ಟ ಮಾಡಿಕೊಳ್ಳುತ್ತಿದ್ದಾನೆ ?

### III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಇತ್ತೀಚಿನ ಮುವ್ವತ್ತೈದು ವರ್ಷಗಳಲ್ಲಿ ಹೊರ ದೇಶದಲ್ಲಿ ಆದ ಅರಣ್ಯನಾಶದ ಸ್ವರೂಪವೇನು ?
2. ಅರಣ್ಯನಾಶದಿಂದ ಮಣ್ಣಿನ ಮೇಲಾಗುವ ಪರಿಣಾಮವೇನು ?
3. ಅರಣ್ಯನಾಶದಿಂದ ಜೀವಿಗಳ ಮೇಲೆ ಎಂತಹ ಪರಿಣಾಮವಾಗುತ್ತದೆ ?
4. ಅರಣ್ಯನಾಶದಿಂದ ಪ್ರಕೃತಿಯ ಮೇಲಾಗುವ ಪರಿಣಾಮವೇನು ?
5. ಅರಣ್ಯನಾಶ ಬಡ ರಾಷ್ಟ್ರಗಳಲ್ಲಿ ಹೆಚ್ಚು. ಏಕೆ ? ವಿವರಿಸಿ.

## ಚಟುವಟಿಕೆ

1. 'ಅರಣ್ಯ ರಕ್ಷಣೆ'ಯನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.



11th_Kannada_Reader_Final_16-07-2018.indd 84 16-07-2018 18:43:03

ವ್ಯಾಕರಣ 

ಘಟಕ ನಾಲ್ಕು

# ಕಾಲ–ಕೃದಂತ–ತದ್ಧಿತಾಂತ–ಅವ್ಯಯ

## ಕಾಲಗಳು

ಕಾಲಗಳು ಮೂರು ಬಗೆಯಾಗಿವೆ.

1. **ಭೂತ ಕಾಲ :** ಈಗಾಗಲೇ ಮುಗಿದು ಹೋದ ಸಮಯವನ್ನು ಸೂಚಿಸುವ ಕಾಲ ಭೂತಕಾಲ. ಈ ಕಾಲದ ಪ್ರತ್ಯಯ 'ದ'.
2. **ವರ್ತಮಾನ ಕಾಲ :** ಈಗ ನಡೆಯುತ್ತಿರುವ ಕಾಲ ವರ್ತಮಾನ ಕಾಲ. ಇದರ ಪ್ರತ್ಯಯ 'ಉತ್ತ'.
3. **ಭವಿಷ್ಯತ್ ಕಾಲ :** ಮುಂದೆ ನಡೆಯುವುದನ್ನು ಸೂಚಿಸುವುದೇ ಭವಿಷ್ಯತ್ ಕಾಲ. ಇದರ ಪ್ರತ್ಯಯ 'ವ'.

| ಭೂತ ಕಾಲ | | | |
|---|---|---|---|
| **ಪುರುಷ** | **ಲಿಂಗ** | **ಏಕವಚನ** | **ಬಹುವಚನ** |
| ಉತ್ತಮ | – | (ನಾನು) ಮಾಡಿದೆನು | (ನಾವು) ಮಾಡಿದೆವು |
| ಮಧ್ಯಮ | – | (ನೀನು) ಮಾಡಿದೆ | (ನೀವು) ಮಾಡಿದಿರಿ |
| ಪ್ರಥಮ | ಪುಲ್ಲಿಂಗ | (ಅವನು) ಮಾಡಿದನು | (ಅವರು) ಮಾಡಿದರು |
| | ಸ್ತ್ರೀಲಿಂಗ | (ಅವಳು) ಮಾಡಿದಳು | (ಅವರು) ಮಾಡಿದರು |
| | ನಪುಂಸಕಲಿಂಗ | (ಅದು) ಮಾಡಿತು | (ಅವು) ಮಾಡಿದವು |

| ವರ್ತಮಾನ ಕಾಲ | | | |
|---|---|---|---|
| **ಪುರುಷ** | **ಲಿಂಗ** | **ಏಕವಚನ** | **ಬಹುವಚನ** |
| ಉತ್ತಮ | – | (ನಾನು) ಮಾಡುತ್ತೇನೆ | (ನಾವು) ಮಾಡುತ್ತೇವೆ |
| ಮಧ್ಯಮ | – | (ನೀನು) ಮಾಡುತ್ತೀ | (ನೀವು) ಮಾಡುತ್ತೀರಿ |
| ಪ್ರಥಮ | ಪುಲ್ಲಿಂಗ | (ಅವನು) ಮಾಡುತ್ತಾನೆ | (ಅವರು) ಮಾಡುತ್ತಾರೆ |
| | ಸ್ತ್ರೀಲಿಂಗ | (ಅವಳು) ಮಾಡುತ್ತಾಳೆ | (ಅವರು) ಮಾಡುತ್ತಾರೆ |
| | ನಪುಂಸಕಲಿಂಗ | (ಅದು) ಮಾಡುತ್ತದೆ | (ಅವು) ಮಾಡುತ್ತವೆ |



11th_Kannada_Reader_Final_16-07-2018.indd 85 16-07-2018 18:43:03

| ಭವಿಷ್ಯತ್ ಕಾಲ | | |
|---|---|---|
| ಪುರುಷ ಲಿಂಗ | ಏಕವಚನ | ಬಹುವಚನ |
| ಉತ್ತಮ – | (ನಾನು) ಮಾಡುವೆನು | (ನಾವು) ಮಾಡುವೆವು |
| ಮಧ್ಯಮ – | (ನೀನು) ಮಾಡು/ವಿ | (ನೀವು) ಮಾಡುವಿರಿ |
| ಪ್ರಥಮ – ಪುಲ್ಲಿಂಗ | (ಅವನು) ಮಾಡುವನು | (ಅವರು) ಮಾಡುವರು |
| ಸ್ತ್ರೀಲಿಂಗ | (ಅವಳು) ಮಾಡುವಳು | (ಅವರು) ಮಾಡುವರು |
| ನಪುಂಸಕಲಿಂಗ | (ಅದು) ಮಾಡುವುದು | (ಅವು) ಮಾಡುವುವು |

## ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳಾಗುತ್ತವೆ. ಇವುಗಳನ್ನು ಕೃನ್ನಾಮಗಳೆಂದೂ ಕರೆಯುತ್ತಾರೆ. ಉದಾಹರಣೆಗೆ :

ಓದುವ ಹುಡುಗರು ಓದು+ಉವ=ಓದುವ

ಮಾಡಿದ ಕೆಲಸ ಮಾಡು+ದ=ಮಾಡಿದ

ಮರೆಯದ ನೋಟ ಮರೆ+ಅದ=ಮರೆಯದ

ಇಲ್ಲಿ ಓದುವ, ಮಾಡಿದ, ಮರೆಯದ – ಎಂಬ ಮೂರು ಪದಗಳಿವೆ. 'ಓದು' ಧಾತುವಿನ ಮೇಲೆ 'ಉವ' ಎಂಬ ಪ್ರತ್ಯಯವು ಸೇರಿ ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ಅರ್ಥವನ್ನು ಸೂಚಿಸುತ್ತದೆ. 'ಮಾಡು' ಎಂಬ ಧಾತುವಿನ ಮೇಲೆ 'ದ' ಎಂಬ ಪ್ರತ್ಯಯವು ಸೇರಿ ಭೂತ ಕಾಲದ ಅರ್ಥವನ್ನು ಸೂಚಿಸುತ್ತದೆ. 'ಮರೆ' ಎಂಬ ಧಾತುವಿನ ಮೇಲೆ 'ಅದ' ಪ್ರತ್ಯಯವು ಸೇರಿ ನಿಷೇಧಾರ್ತವನ್ನು ಸೂಚಿಸುತ್ತದೆ. ಇವು ಧಾತುಗಳ ಮೇಲೆ ಕೃತ್‌ಪ್ರತ್ಯಯಗಳು ಸೇರಿ ಆಗಿರುವ ಶಬ್ದಗಳು. ಇವುಗಳಿಗೆ ಕೃದಂತಗಳೆಂದು ಹೆಸರು. ಕೃದಂತಗಳೆಂದರೆ ಕೃತ್ ಪ್ರತ್ಯಯಗಳು ಕಡೆಯಲ್ಲಿರುವ ಶಬ್ದಗಳು ಎಂದು ಅರ್ಥ. ಕೃದಂತಗಳಲ್ಲಿ ಕೃದಂತ ನಾಮ, ಕೃದಂತ ಭಾವನಾಮ, ಕೃದಂತಾವ್ಯಯ ಎಂದು ಮೂರು ವಿಧಗಳಿವೆ.

**ಕೃದಂತ ನಾಮ**

ಕೃದಂತ ಶಬ್ದಗಳ ಮೇಲೆ ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳ ಏಕವಚನಗಳಲ್ಲಿ, ಕ್ರಮವಾಗಿ ಅವನು ಮತ್ತು ಅವಳು; ಇವುಗಳ ಬಹುವಚನಗಳಲ್ಲಿ ಅವರು; ನಪುಂಸಕ ಲಿಂಗ ಏಕವಚನದಲ್ಲಿ ಉದು, ಬಹುವಚನದಲ್ಲಿ ಉವು ಎಂಬ ಪ್ರತ್ಯಯಗಳು ಸೇರಿ ಕೃದಂತ ನಾಮಗಳಾಗುತ್ತವೆ. 'ಉದು' ಮತ್ತು 'ಉವು' ಎಂಬ ಪ್ರತ್ಯಯಗಳಿಗೆ ಬದಲಾಗಿ 'ಅದು' ಮತ್ತು 'ಅವು' ಎಂಬ ಪ್ರತ್ಯಯಗಳು ರೂಢಿಯಲ್ಲಿವೆ. ಉದಾಹರಣೆಗೆ ಮಾಡುವುದು, ನೋಡುವುದು ಇತ್ಯಾದಿ. 'ಅದು' ಎನ್ನುವುದು ಕೆಲವು ಕಡೆ 'ಅದ್ದು' ಅಥವಾ 'ದ್ದು' ಎಂದೂ ಆಗುವುದುಂಟು. ಕಂಡದ್ದು, ನೋಡಿದ್ದು ಇತ್ಯಾದಿ.

ಓದುವವನು, ಓದುವವಳು, ಓದುವವರು, ಓದುವುದು, ಓದುವುವು – ಇವು ವರ್ತಮಾನ, ಭವಿಷ್ಯತ್ ಕೃದಂತ ನಾಮಗಳು.

ಮಾಡಿದವನು, ಮಾಡಿದವಳು, ಮಾಡಿದವರು, ಮಾಡಿದುದು, ಮಾಡಿದುವು – ಇವು ಭೂತ ಕೃದಂತ ನಾಮಗಳು.

ನೋಡದವನು, ನೋಡದವಳು, ನೋಡದವರು, ನೋಡದುದು, ನೋಡದುವು – ಇವು ನಿಷೇಧ ಕೃದಂತ ನಾಮಗಳು.



11th_Kannada_Reader_Final_16-07-2018.indd 86 16-07-2018 18:43:03

ಕೃದಂತ ನಾಮಪ್ರಕೃತಿಗಳ ಎಲ್ಲಾ ವಿಭಕ್ತಿ ಪ್ರತ್ಯಯಗಳೂ ಸೇರುತ್ತವೆ. ಓದುವವನು, ಓದುವವನನ್ನು, ಓದುವವನಿಂದ, ಓದುವವನಿಗೆ, ಓದುವವನ ದೆಸೆಯಿಂದ, ಓದುವವನ, ಓದುವವನಲ್ಲಿ – ಇದೇ ರೀತಿ ಉಳಿದ ರೂಪಗಳಲ್ಲೂ ತಿಳಿದುಕೊಳ್ಳಬಹುದು.

**ಕೃದಂತ ಭಾವನಾಮ**

ವಸ್ತುಗಳ ಸ್ವಭಾವ ಸ್ಥಿತಿಗಳನ್ನಾಗಲೀ, ಕ್ರಿಯೆಯು ನಡೆಯುವುದರಿಂದ ಉಂಟಾಗುವ ಸ್ಥಿತಿಯನ್ನಾಗಲೀ ತಿಳಿಸುವ ವಾಚಕಗಳಿಗೆ ಭಾವನಾಮಗಳೆಂದು ಹೆಸರು. ಧಾತುಗಳಿಂದ ಉಂಟಾಗುವ ಭಾವನಾಮಗಳಿಗೆ ಕೃದಂತ ಭಾವನಾಮಗಳೆಂದು ಹೆಸರು.

ಭಾವಾರ್ಥದಲ್ಲಿ ಸಾಮಾನ್ಯವಾಗಿ ಎಲ್ಲಾ ಧಾತುಗಳ ಮೇಲೆ 'ವುದು' ಪ್ರತ್ಯಯ ಸೇರುತ್ತದೆ. ಕೆಲವು ಧಾತು ರೂಪದಲ್ಲೇ ಇದ್ದು, ಕೆಲವು ಧಾತುಗಳ ಆದಿ ಸ್ವರಕ್ಕೆ ದೀರ್ಘ ಬಂದು ಭಾವನಾಮಗಳಾಗುವುವು. ಉದಾಹರಣೆಗೆ :

'ಉದು' ಪ್ರತ್ಯಯಾಂತಕ್ಕೆ – ಮಾಡುವುದು, ಹೇಳುವುದು ಬರುವುದು.

ಧಾತು ಸ್ವರೂಪಕ್ಕೆ – ಬದುಕು, ತಪ್ಪು.

ದೀರ್ಘಕ್ಕೆ – ಕೆಡು–ಕೇಡು

ಪಡು–ಪಾಡು

ಬೇರೆಬೇರೆ ಧಾತುಗಳಿಗೆ ಭಾವಾರ್ಥದಲ್ಲಿ ಬೇರೆಬೇರೆ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಳಾಗುತ್ತವೆ. ಓಡುವುದರ ಭಾವ 'ಓಟ', ಅಂಜುವುದರ ಭಾವ 'ಅಂಜಿಕೆ'.

ಉದಾಹರಣೆಗೆ :

ಇಕೆ – ನಂಬಿಕೆ, ನಾಚಿಕೆ, ಹೆದರಿಕೆ, ಅಂಜಿಕೆ

ಇಗೆ– ಉಡಿಗೆ, ಅಡಿಗೆ, ಹಾಸಿಗೆ.

ವಳಿಕೆ– ತಿಳುವಳಿಕೆ, ನಡವಳಿಕೆ.

ವಣಿಗೆ–ಮೆರವಣಿಗೆ, ಬರವಣಿಗೆ.

ಅಕೆ– ಮೊಳಕೆ, ಬೆರಕೆ.

ಅವು–ಮರೆವು, ಒಲವು, ಗೆಲವು.

ವು–ಸುಳಿವು, ಅರಿವು, ಮೇವು

ತ–ನೆಗೆತ, ಕುಣಿತ, ತಿವಿತ.

ಇತ–ಒಪ್ಪಿತ, ತಪ್ಪಿತ.

ವಳಿ–ನಡೆವಳಿ, ಹಿಡುವಳಿ, ಕೊಡುವಳಿ.

ಟ– ಆಟ, ಓಟ, ಮಾಟ, ನೋಟ, ಊಟ.

ಅಣೆ–ಒಕ್ಕಣೆ, ಹಗರಣೆ.

ಗೆ–ನಂಬುಗೆ, ಮೆಚ್ಚುಗೆ.

ಅಪು–ಹೊಳಪು, ನೆನಪು.

ಅಲು–ಮುಗ್ಗಲು, ಒಣಗಲು

ಎ–ನಗೆ, ಹೊಗೆ, ಧಗೆ

**ಕೃದಂತಾವ್ಯಯ**

ನಾಮಪದ, ಕ್ರಿಯಾಪದಗಳಂತೆ ರೂಪಭೇದಗಳನ್ನು ಹೊಂದದೇ ಇರುವ ಶಬ್ದಗಳಿಗೆ ಅವ್ಯಯಗಳೆಂದು



11th_Kannada_Reader_Final_16-07-2018.indd 87 16-07-2018 18:43:03

ಹೆಸರು. ಧಾತುಗಳ ಮೇಲೆ ದು, ದರೆ, ಉತ್ತ, ಅಲು, ಅದೆ ಮುಂತಾದ ಕೃತ್‌ಪ್ರತ್ಯಯಗಳು ಸೇರಿ ಆಗುವ ಅವ್ಯಯಗಳಿಗೆ ಕೃದಂತಾವ್ಯಯಗಳೆಂದು ಹೆಸರು. ಅವು ಅಪೂರ್ಣ ಕ್ರಿಯೆಗಳಾಗಿದ್ದು ಪೂರ್ಣ ಕ್ರಿಯೆಗೆ ವಿಶೇಷಣಗಳಾಗುವುವು. ಇವುಗಳಲ್ಲಿ ಕೆಲವು ಏಕ ಕರ್ತೃಕಗಳು; ಕೆಲವು ಭಿನ್ನ ಕರ್ತೃಕಗಳು.

**ಏಕ ಕರ್ತೃಕ**

ಕೃದಂತಾವ್ಯಯಗಳಲ್ಲಿ ಒಂದೇ ಪ್ರಧಾನ ಕರ್ತೃವಿಗೆ ಅನ್ವಯಿಸತಕ್ಕದ್ದು ಏಕಕರ್ತೃಕ ಅಥವಾ ಸಮಾನ ಕರ್ತೃಕವೆನ್ನಿಸುವುದು.

ಉದಾಹರಣೆಗೆ :

ಅವನು ಬಂದು ಹೇಳಿ ಹೋದನು.

ಅವನು ಬಂದು ಹೇಳದೇ ಹೋದನು

ಅವನು ಬಂದು ಹೇಳಲು ಹೋದನು.

ಇಲ್ಲಿ ಬರು, ಹೇಳು, ಹೋಗು ಎಂಬ ಕ್ರಿಯೆಗಳಿಗೆ ಅವನು ಎಂಬ ಒಬ್ಬನೇ ಕರ್ತೃ ಇರುವುದರಿಂದ ಇವು ಏಕ ಕರ್ತೃಕಗಳು.

**ಭಿನ್ನ ಕರ್ತೃಕ**

ಒಂದು ಕರ್ತೃವಿಗೆ ಅನ್ವಯಿಸದೆ ಬೇರೆ ಬೇರೆ ಕರ್ತೃವಿಗೆ ಅನ್ವಯಿಸತಕ್ಕವು ಭಿನ್ನ ಕರ್ತೃಕಗಳೆನಿಸುವುವು.

ಉದಾಹರಣೆಗೆ :

ಉಪಾಧ್ಯಾಯರು ಬೋಧಿಸಲು ವಿದ್ಯಾರ್ಥಿಗಳು ಕಲಿತರು.

ಮಳೆ ಬಂದರೆ ಬೆಳೆಯಾಗುವುದು

ಮೊದಲನೆಯ ವಾಕ್ಯದಲ್ಲಿ ಬೋಧಿಸುವ ಎಂಬ ಕ್ರಿಯೆಗೆ ಉಪಾಧ್ಯಾಯರು ಎಂಬುದು ಕರ್ತೃ; ಕಲಿ ಎಂಬ ಕ್ರಿಯೆಗೆ ವಿದ್ಯಾರ್ಥಿಗಳು ಎಂಬುದು ಕರ್ತೃ.

ಎರಡನೆಯ ವಾಕ್ಯದಲ್ಲಿ ಬರು ಎಂಬ ಕ್ರಿಯೆಗೆ ಮಳೆ ಎಂಬುದು ಕರ್ತೃ. ಆಗು ಎಂಬ ಕ್ರಿಯೆಗೆ ಬೆಳೆ ಎಂಬುದು ಕರ್ತೃ. ಹೀಗೆ ಬೇರೆ ಬೇರೆ ಕರ್ತೃಗಳಿರುವುದರಿಂದ ಇವು ಭಿನ್ನ ಕರ್ತೃಕಗಳೆನ್ನಿಸುವುವು.

## ತದ್ಧಿತಾಂತಗಳು

ನಾಮಪ್ರಕೃತಿಗಳ ಮೇಲೆ ಬೇರೆ ಬೇರೆ ಅರ್ಥದಲ್ಲಿ ಬೇರೆ ಬೇರೆ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ನಾಮಗಳಾಗುತ್ತವೆ. ವ್ಯಕ್ತಿ ಅಥವಾ ವಸ್ತುವಿನ ಗುಣ ಶೀಲ ಸ್ವಭಾವ ವೃತ್ತಿ ರಚನೆ ಮುಂತಾದವುಗಳನ್ನು ಆದರಿಸಿ ಕೆಲವು ನಾಮರೂಪಗಳು ಸಿದ್ಧಿಸುತ್ತವೆ. ಇವನ್ನು ತದ್ಧಿತಾಂತ ನಾಮಗಳೆಂದು ಕರೆಯುತ್ತಾರೆ. ತದ್ಧಿತಾಂತಗಳಲ್ಲಿ ತದ್ಧಿತಾಂತ ನಾಮ, ತದ್ಧಿತಾಂತ ಭಾವನಾಮ ಮತ್ತು ತದ್ಧಿತಾಂತಾವ್ಯಯ ಎಂದು ಮೂರು ವಿಧಗಳಿವೆ.



11th_Kannada_Reader_Final_16-07-2018.indd 88 16-07-2018 18:43:03

ಉದಾಹರಣೆಗೆ :

| ತದ್ಧಿತಾಂತ ನಾಮ | ತದ್ಧಿತಾಂತ ಭಾವನಾಮ | ತದ್ಧಿತಾಂತಾವ್ಯಯ |
|---|---|---|
| ಮೋಸಗಾರ | ಸಿರಿತನ | ರಾಮನ ಹಾಗೆ |
| ಮಾಲೆಕಾರ | ಬಡತನ | ಮನೆಯತನಕ |
| ನೇಕಾರ | ಬಂಜೆತನ | ದೇಶಕ್ಕಾಗಿ |

## ಅವ್ಯಯ

ನಾಮಪದಗಳು ಲಿಂಗ, ವಚನ, ವಿಭಕ್ತಿಗಳಲ್ಲಿಯೂ ಕ್ರಿಯಾಪದಗಳು ಲಿಂಗ, ವಚನ, ಕಾಲ, ಅರ್ಥಗಳಲ್ಲಿಯೂ ಬೇರೆಬೇರೆ ರೂಪ ಬದಲಾವಣೆ ಹೊಂದುತ್ತವೆ. ನಾಮಪದ, ಕ್ರಿಯಾಪದಗಳಂತೆ ಬೇರೆ ಬೇರೆ ರೂಪ ಬದಲಾವಣೆಗಳನ್ನು ಹೊಂದದೆ ಏಕರೂಪವಾಗಿರುವ ಶಬ್ದಗಳಿಗೆ ಅವ್ಯಯಗಳೆಂದು ಹೆಸರು(ವ್ಯಯ ಎಂದರೆ ಶಬ್ದ ರೂಪಕ್ಕೆ ಬದಲಾವಣೆ ಅಥವಾ ಲೋಪವುಂಟಾಗುವುದು; ಅ–ಎಂದರೆ ಅದಿಲ್ಲದಿರುವುದು ಎಂದರ್ಥ). ಅವ್ಯಯಗಳಲ್ಲಿ ಕ್ರಿಯಾರ್ಥಕಾವ್ಯಯ, ಕ್ರಿಯಾ ವಿಶೇಷಣಾವ್ಯಯ, ಸಂಬಂಧ ಸೂಚಕಾವ್ಯಯ, ಭಾವ ಸೂಚಕಾವ್ಯಯ ಎಂಬ ಮುಖ್ಯ ಭೇದಗಳುಂಟು.

### 1. ಕ್ರಿಯಾರ್ಥಕಾವ್ಯಯ

ಇದರಲ್ಲಿ ಸಂಪೂರ್ಣ ಕ್ರಿಯಾರ್ಥಕಾವ್ಯಯ, ಅಸಂಪೂರ್ಣ ಕ್ರಿಯಾರ್ಥಕಾವ್ಯಯ ಎಂದು ಎರಡು ವಿಧಗಳಿವೆ.

ಸಂಪೂರ್ಣ ಕ್ರಿಯಾರ್ಥಕಾವ್ಯಯಕ್ಕೆ

ಉದಾಹರಣೆ : ಉಂಟು, ಇಲ್ಲ, ಬೇಕು, ಬೇಡ, ಸಾಕು, ಹೌದು ಇತ್ಯಾದಿ.

ಅಸಂಪೂರ್ಣ ಕ್ರಿಯಾರ್ಥಕಾವ್ಯಯಕ್ಕೆ

ಉದಾಹರಣೆ : ಹೇಳಿ, ನೋಡುತ್ತಾ, ಮಾಡದೆ, ಕೇಳಿದರೆ, ಓದಲಿಕ್ಕೆ ಇತ್ಯಾದಿ.

ಈ ಅವ್ಯಯಗಳು ಕ್ರಿಯೆಯ ಅರ್ಥವನ್ನು ಸಂಪೂರ್ಣವಾಗಿ ತಿಳಿಸದೆ ವಾಕ್ಯದಲ್ಲಿ ಮತ್ತೊಂದು ಪೂರ್ಣ ಕ್ರಿಯಾಪದದ ಸಹಾಯವನ್ನು ಅಪೇಕ್ಷಿಸುತ್ತವೆ.

### 2. ಕ್ರಿಯಾವಿಶೇಷಣಾವ್ಯಯ

ವಾಕ್ಯದಲ್ಲಿ ಕ್ರಿಯಾಪದದ ಕಾಲ, ಸ್ಥಾನ, ರೀತಿ, ಅನುಕರಣೆ ಮುಂತಾದುವನ್ನು ತಿಳಿಸುವ ಅವ್ಯಯಗಳಿಗೆ ಕ್ರಿಯಾ ವಿಶೇಷಣಾವ್ಯಯಗಳೆಂದು ಹೆಸರು.

ಉದಾಹರಣೆಗೆ :

ಕಾಲ – ಕೂಡಲೆ, ಬಳಿಕ, ತರುವಾಯ, ಬೇಗನೇ.

ಸ್ಥಾನ – ಅಲ್ಲಿ, ಇಲ್ಲಿ, ಎಲ್ಲಿ, ಸುತ್ತಲೂ.

ರೀತಿ – ಹಾಗೆ, ಹೀಗೆ, ಅಂತೆ, ಇಂತು.

ಅನುಕರಣ – ಚಟಚಟನೆ, ಥಟ್ಟನೆ, ಪಟಪಟನೆ, ಸರ್ರನೆ



11th_Kannada_Reader_Final_16-07-2018.indd 89 16-07-2018 18:43:03

### 3. ಸಂಬಂಧ ಸೂಚಕಾವ್ಯಯ

ಪದಗಳನ್ನಾಗಲೀ, ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಕೂಡಿಸಿ ಅವುಗಳ ಸಂಬಂಧವನ್ನು ಸೂಚಿಸುವ ಅವ್ಯಯಗಳಿಗೆ ಸಂಬಂಧ ಸೂಚಕಾವ್ಯಯಗಳೆಂದು ಹೆಸರು.

ಉದಾಹರಣೆಗೆ :

ಊ, ಮತ್ತು, ಆದರೆ, ಆದುದರಿಂದ, ಹೊರತು, ಅಥವಾ, ಇತ್ಯಾದಿ.

### 4. ಭಾವಸೂಚಕಾವ್ಯಯ

ಸಂತೋಷ, ದುಃಖ, ಭಯ, ಆಶ್ಚರ್ಯ, ಪ್ರಶ್ನೆ, ತಿರಸ್ಕಾರ, ಆಕ್ಷೇಪ, ಕೋಪ ಮೊದಲಾದ ಮನಸ್ಸಿನ ಭಾವವನ್ನು ಸೂಚಿಸುವ ಅವ್ಯಯಗಳಿಗೆ ಭಾವಸೂಚಕಾವ್ಯಯಗಳೆಂದು ಹೆಸರು. ಇವುಗಳನ್ನು ನಿಪಾತಾವ್ಯಯಗಳೆಂದೂ ಕರೆಯುತ್ತಾರೆ.

ಉದಾಹರಣೆಗೆ :

ಸಂತೋಷ–ಭೇಷ್! ನೀನು ಈ ವಿಜಯಕ್ಕೆ ತಕ್ಕವನೇ ಸರಿ!

ದುಃಖ – ಅಯ್ಯೋ! ಹರಿಶ್ಚಂದ್ರನಿಗೂ ಅಂತಹ ಕಷ್ಟ ಬಂದಿದೆ !
ಭಯ – ಅಬ್ಬಾ ! ಎಷ್ಟು ದೊಡ್ಡ ಹುಲಿ!
ಆಶ್ಚರ್ಯ – ಆಹಾ ! ತಾಜ್ ಮಹಲ್ ಎಷ್ಟು ಸೊಗಸಾಗಿದೆ!
ಪ್ರಶ್ನೆ – ಅವನು ಆಡಿದ ಮಾತಿಗೆ ತಪ್ಪಿದನೆ ?
ತಿರಸ್ಕಾರ – ಛೇ! ಇದೇನೇ ನಿನ್ನ ಯೋಗ್ಯತೆ !
ಆಕ್ಷೇಪ – ಓಹೋ! ನೀನು ಅವನ ಜೊತೆ ಸೇರಿದೆಯಾ ?
ಕೋಪ – ಫಡಫಡ! ಈ ಬಾಣದ ರುಚಿ ನೋಡು !
ಆಃ, ಅಹಹ, ಓಹೋಹೋ, ಎಲೆಲಾ, ಅಷ್ಟೇ, ಅಲ್ಲವೇ, ಅಕ್ಕಟಾ, ಏ, ಓ, ಅಯ್ಯೋ – ಮುಂತಾದವು ಭಾವಸೂಚಕಗಳಾಗುತ್ತವೆ.



11th_Kannada_Reader_Final_16-07-2018.indd 90 16-07-2018 18:43:04

ಘಟಕ
ಐದು

# ಕಲೆ/ಶಿಕ್ಷಣ



ಪದ್ಯ : ದ್ವಿಪದಿ ಮತ್ತು ತ್ರಿಪದಿಗಳ ಸೊಬಗು – ಸರ್ವಜ್ಞ ಮತ್ತು ತಿರುವಳ್ಳುವರ್

ಗದ್ಯ : ಗಾನಗಂಧರ್ವ ಪುಟ್ಟರಾಜ ಗವಾಯಿ

ಉಪಪಠ್ಯ : ದೊಡ್ಡಾಟ–ಸಣ್ಣಾಟ – ಕೆ.ಕುಮಾರ್ ಆಚಾರ್

ವ್ಯಾಕರಣ : ದ್ವಿರುಕ್ತಿ, ಅನ್ಯದೇಶೀಯ, ಜೋಡಿ ಪದಗಳು, ತತ್ಸಮ–ತದ್ಭವ, ಗಾದೆಗಳು.



11th_Kannada_Reader_Final_16-07-2018.indd 91 16-07-2018 18:43:04

ಕಾವ್ಯ ಕಣಜ

ಘಟಕ ಐದು

# ದ್ವಿಪದಿ ಮತ್ತು ತ್ರಿಪದಿಗಳ ಸೊಬಗು

– ಸರ್ವಜ್ಞ ಮತ್ತು ತಿರುವಳ್ಳುವರ್




ಸಾಹಿತ್ಯದಲ್ಲಿ ಪ್ರಗತಿಪರ ದೃಷ್ಟಿಕೋನವನ್ನು ಆರಂಭದಿಂದಲೇ ಕಾಣುತ್ತೇವೆ. ತಮಿಳಿನಲ್ಲಿ ತಿರುವಳ್ಳುವರ್, ಕನ್ನಡದಲ್ಲಿ ಸರ್ವಜ್ಞ ಸಾರ್ವಕಾಲಿಕ ಸಾಮಾಜಿಕ ಮೌಲ್ಯಗಳನ್ನು ತಮ್ಮ ದ್ವಿಪದಿ, ತ್ರಿಪದಿ ರಚನೆಯ ಮೂಲಕ ಲೋಕಕ್ಕೆ ನೀಡಿದ್ದಾರೆ. ದೈವ, ಭಕ್ತಿ, ಆಚಾರ, ವಿಚಾರ, ಕಾಯಕ, ಸಮಾನತೆ ಮುಂತಾದವುಗಳನ್ನು ಕುರಿತು ವೈಚಾರಿಕ ನೆಲೆಗಟ್ಟಿನಲ್ಲಿ ಚಿಂತಿಸಿದವರು ಸರ್ವಜ್ಞ ಹಾಗು ತಿರುವಳ್ಳುವರ್ ಅವರು. ನಾಡಿನ ಸಂಸ್ಕೃತಿಯ ಸಾರವನ್ನು ಆಳವಾಗಿ ಅನುಭವದಿಂದ ಅರಗಿಸಿಕೊಂಡು ಹೃದಯದ ತುಡಿತವನ್ನು ಸರಳ ಭಾಷೆಯಲ್ಲಿ ಹಾಡಿದ ಮೇರುಕವಿಗಳು. ವಿದ್ಯೆಯ ಕುರಿತಂತೆ ಈರ್ವರೂ ತಮ್ಮ ರಚನೆಯಲ್ಲಿ ತಿಳಿಸಿರುವ ವಿಚಾರಗಳ ವೈಶಿಷ್ಟ್ಯವೇ ಈ ಪದ್ಯಗಳು.







11th_Kannada_Reader_Final_16-07-2018.indd 92 16-07-2018 18:43:05

## ಸರ್ವಜ್ಞನ ತ್ರಿಪದಿಗಳು

ಉತ್ತಮ ವಿದ್ಯವನೋದಿ ಮತ್ತೆ ಅನುಭವಗಂಡು
ಚಿತ್ತದ ಕಳವಳವ ನಿಲಿಸದ ಮನುಜನು
ಕತ್ತೆ ಕಂಡಯ್ಯ ಸರ್ವಜ್ಞ

ಜ್ಞಾನದಿಂದಲಿ ಇಹವು ಜ್ಞಾನದಿಂದಲಿ ಪರವು
ಜ್ಞಾನವಿಲ್ಲದಿರೆ ಸಕಲವು ತನಗಿದ್ದೂ
ಹಾನಿ ಕಾಣಯ್ಯ ಸರ್ವಜ್ಞ

ಜ್ಞಾನದಿಂ ಮೇಲಿಲ್ಲ ಶ್ವಾನನಿಂ ಕೀಳಿಲ್ಲ
ಭಾನುವಿನಿಂದಧಿಕ ಬೆಳಗಿಲ್ಲ ಜಗದೊಳಗೆ
ಜ್ಞಾನವೇ ಮಿಗಿಲು ಸರ್ವಜ್ಞ

ವಿದ್ಯೆಯೇ ತಾಯ್ತಂದೆ ಬುದ್ಧಿ ಸೋದರಮಾವ
ಅಧ್ವಾನಕಾದವನೇ ನಂಟ–ಸುಖದಿ ತಾ
ನಿರ್ದುದೇ ರಾಜ್ಯ ಸರ್ವಜ್ಞ

ವನಕೆ ಕೋಗಿಲೆ ಲೇಸು ಜನನಿ ಶಿಶುವಿಗೆ ಲೇಸು
ಕನಕವುಳ್ಳವನ ನುಡಿ ಲೇಸು ವಿದ್ಯಕ್ಕೆ
ಅನುಭವ ಲೇಸು ಸರ್ವಜ್ಞ



11th_Kannada_Reader_Final_16-07-2018.indd 93 16-07-2018 18:43:05

## ತಿರುವಳ್ಳವರ್ ಕುರಳ್‌ಗಳು

ಕಲಿವುದು ಕುಂದಿರದೆ ಕಲಿಯತಕ್ಕ, ಕೃತಿಗಳನು
ಕಲಿತ ಬಳಿಕ ನಡೆವುದು ಅದಕ್ಕೆ ತಕ್ಕವೊಲು

ಕಲಿತವರೇ ಕಣ್ಣುಳ್ಳವರು; ಮೊಗದಿ ಎರಡು
ಹುಣ್ಣುಳ್ಳವರು ಕಲಿಯದವರು

ಸಿರಿವಂತರ ಮುಂದೆ ಬಡವರು ನಿಲುವಂತೆ ವಿನಯದಿಂದಲಿ
ವಿದ್ಯೆ ಕಲಿತವರೇ ಶ್ರೇಷ್ಠರು, ಕನಿಷ್ಠರಂತು ಕಲಿಯದವರು

ತಮ್ಮ ವಿದ್ವತ್ತಿನಿಂದ ವಿಶ್ವಜನತೆ ನಲಿವುದನು ಕಂಡು
ಮೇಲೂ ಕಲಿಯಲಿಚ್ಛಿಪರು ವಿದ್ವಜ್ಜನರು

ವಿದ್ಯೆಯೊಬ್ಬರಿಗೆ ಅಳಿವಿರದ ಶ್ರೇಷ್ಠ ಸಿರಿಯು
ಸ್ಥಿರವಲ್ಲ ಮತ್ತುಳಿದ ಸಿರಿಗಳು



11th_Kannada_Reader_Final_16-07-2018.indd 94 16-07-2018 18:43:05

## ಕವಿ–ಕಾವ್ಯ ಪರಿಚಯ

ಸರ್ವಜ್ಞ ಕವಿಯು ವಿದ್ಯೆಯನ್ನು ಕುರಿತು ತನ್ನ ವಚನಗಳಲ್ಲಿ ಹೇಳಿದ್ದಾನೆ. ಜ್ಞಾನದಿಂದಲೇ ಇಹಲೋಕ ಪರಲೋಕಗಳು ದೊರೆಯುತ್ತವೆ. ವಿದ್ಯೆಯ ಜೊತೆಗೆ ವಿದ್ಯೆಯನ್ನು ಕೊಡುವ ಗುರುವನ್ನೂ, ಗುರುವಿನ ಪ್ರಾಮುಖ್ಯತೆಯನ್ನೂ ಕುರಿತು ಹೇಳಿದ್ದಾನೆ. ಭೂಮಿಯಲ್ಲಿ ಅರಿವೆಂಬುದು ಬಹುಮುಖ್ಯವಾದುದು. ಈ ಅರಿವಿನ ಅರಿವನ್ನು ಹರಿಹರರೂ ಕಾಣರೆಂದು ಅರಿವಿನ ಬಗ್ಗೆ ಅವನು ಹೇಳಿದ್ದಾನೆ.

ನೀತಿ ಪ್ರತಿಪಾದಕ ವಿಷಯವುಳ್ಳ ತಿರುಕ್ಕುರಳ್ ತಮಿಳಿನ ಅತ್ಯಂತ ಪ್ರಾಚೀನ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ. ತಿರುವಳ್ಳುವರ್ ವಿದ್ಯೆಯ ಪ್ರಾಮುಖ್ಯತೆಯನ್ನು ಅರಿತು ಅದರ ಬಗ್ಗೆ ತಮ್ಮ ಕುರಳ್‌ನಲ್ಲಿ ಹೇಳಿದ್ದಾರೆ. ವಿದ್ಯೆ ಮನುಜರಿಗೆ ಕಣ್ಣುಗಳಿದ್ದಂತೆ, ಜೀವನದ ದಾರಿಯನ್ನು ತೋರಿಸುವ ಜ್ಯೋತಿಯಂತೆ, ಪ್ರತಿಯೊಬ್ಬರ ಬದುಕಿನಲ್ಲಿಯೂ ಅದು ಬೆಳಕನ್ನು ಚೆಲ್ಲುತ್ತದೆ ಎಂದಿದ್ದಾರೆ.

ಇಬ್ಬರೂ ಕವಿಗಳು ವಿದ್ಯೆಯನ್ನು ಕುರಿತು ಅರ್ಥಪೂರ್ಣವಾದ ತತ್ತ್ವೋಪದೇಶ ನೀಡಿರುವುದನ್ನು ಇಲ್ಲಿನ ಪದ್ಯಗಳಲ್ಲಿ ಕಾಣಬಹುದು.

## ಕಠಿಣ ಪದಗಳ ಅರ್ಥ

ಉತ್ತಮ–ಶ್ರೇಷ್ಠ; ಚಿತ್ತ–ಮನಸ್ಸು; ಕಳವಳ–ತಳಮಳ, ಭ್ರಾಂತಿ; ಮನುಜ–ಮನುಷ್ಯ; ಇಹಲೋಕ–ಭೂಲೋಕ; ಸಕಲ–ಎಲ್ಲಾ; ಹಾನಿ–ನಾಶ; ಶ್ವಾನ–ನಾಯಿ; ಭಾನು–ಆಕಾಶ; ವನ–ಕಾಡು; ಕನಕ–ಚಿನ್ನ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಸರ್ವಜ್ಞನ ಪ್ರಕಾರ ಕತ್ತೆ ಯಾರು ?
2. ಯಾವಾಗ ಎಲ್ಲವೂ ಹಾನಿಯಾಗುತ್ತದೆ ?
3. ಜ್ಞಾನವೇ ಎಲ್ಲದಕ್ಕೂ ಮಿಗಿಲು. ಹೇಗೆ ?
4. ಕಣ್ಣು ಯಾವಾಗ ಹುಣ್ಣಾಗುತ್ತದೆ ?
5. ಯಾರು ಶ್ರೇಷ್ಠರು ಮತ್ತು ಯಾರು ಕನಿಷ್ಠರು ?
6. ವಿದ್ವಜ್ಜನರ ಲಕ್ಷಣವೇನು ?
7. ತಿರುವಳ್ಳವರ್ ಅವರ ಪ್ರಕಾರ ಸಿರಿ ಯಾವುದು?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ವಿದ್ಯೆಯ ಬಗ್ಗೆ ಸರ್ವಜ್ಞನ ಅಭಿಪ್ರಾಯವೇನು ?
2. ಜ್ಞಾನವೇ ಇಹ–ಪರ ಹೇಗೆ ? ಸಮರ್ಥಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ವಿದ್ಯೆ ಮತ್ತು ಜ್ಞಾನವೇ ಮಾನವ ಜೀವನದ ಸಾರ್ಥಕತೆಯ ಸಾಧನ– ಹೇಗೆ ?
2. ಕಲಿತವರ ಶ್ರೇಷ್ಠತೆಯನ್ನು ಅನುಭಾವೀ ಕವಿ ತಿರುವಳ್ಳುವರ್ ಹೇಗೆ ತಿಳಿಸಿದ್ದಾರೆ?

## ಭಾಷಾಭ್ಯಾಸ

**1. ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಕಳವಳ, ಹುಣ್ಣು, ಚಿತ್ತ, ಜನನಿ, ಕನಕ.

**2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಶ್ರೇಷ್ಠ, ವಿನಯ, ಸ್ಥಿರ, ಸಿರಿ, ಅಳಿವು, ಉತ್ತಮ.

**3. ಈ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ವಿದ್ಯೆ, ವನ, ಕೋಗಿಲೆ, ಸುಖ, ಮೊಗ, ಸ್ಥಿರ, ಸಿರಿ.

**4. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ**

ಬುದ್ಧಿ, ಸೋದರ, ನಂಟ, ಪರಲೋಕ, ಓದು, ಭಾನು, ಜನನಿ.



11th_Kannada_Reader_Final_16-07-2018.indd 95 16-07-2018 18:43:05

**5. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

ಅನುಭವಗಂಡು, ಜ್ಞಾನವಿಲ್ಲದಿದ್ದರೆ, ಕೀಳಿಲ್ಲ, ಜಗದೊಳಗೆ, ಕಣ್ಣುಳ್ಳ, ಅಳಿವಿರದ, ಸ್ಥಿರವಲ್ಲ, ಮತ್ತುಳಿದ.

## ಚಟುವಟಿಕೆ

1. ಸರ್ವಜ್ಞ ಮತ್ತು ತಿರುವಳ್ಳುವರ್ ಬಗ್ಗೆ ತರಗತಿಯಲ್ಲಿ ಚರ್ಚಾಗೋಷ್ಠಿ ಏರ್ಪಡಿಸಿ.

2. ಸರ್ವಜ್ಞನ ತ್ರಿಪದಿಗಳು ಹಾಗೂ ತಿರುವಳ್ಳುವರ್ ಅವರ ಕುರಳ್‌ಗಳ ಕಂಠಪಾಠ ಸ್ಪರ್ಧೆ ನಡೆಸಿ.





11th_Kannada_Reader_Final_16-07-2018.indd 96 16-07-2018 18:43:05

ಘಟಕ ಐದು

# ಗಾನಗಂಧರ್ವ ಪಂಡಿತ ಪುಟ್ಟರಾಜ ಗವಾಯಿಗಳು



ದೃಷ್ಟಿಹೀನ ವ್ಯಕ್ತಿಗೆ ತಲೆಗೊಂದು ಕಾವಿ ಪಟಗ, ಹಣೆಯಲ್ಲಿ ವಿಭೂತಿ, ಹುಬ್ಬಿನ ಮಧ್ಯೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಯ್ಯಲ್ಲೊಂದು ಊರುಗೋಲು, ಎಡಗೈ ಮಣಿಗಟ್ಟಿಗೆ ಬ್ರೈಲ್ ಗಡಿಯಾರ, ತುಂಬು ತೋಳಿನ ಖಾದಿ ಅಂಗಿ, ಬಿಳಿ ಪಂಚೆ. ಆ ಸರಳ ಜೀವಿಯೇ ಎಂಭತ್ತೇಳರ ಹರೆಯದ ಪುಟ್ಟರಾಜ ಗವಾಯಿ.

'ಗವಾಯಿ' ಎಂದರೆ ಶ್ರೇಷ್ಠ ಗಾಯಕ. ಪುಟ್ಟರಾಜ ಗವಾಯಿ ಅವರು ಸಂಗೀತ ಪ್ರಪಂಚಕ್ಕೆ ಹೊಸ ರಾಗಗಳನ್ನು ನೀಡಿದ ವಾಗ್ಗೇಯಕಾರ. ಸಕಲ ವಾದ್ಯಪ್ರವೀಣ. ಸಂಗೀತ ಕಲೋಪಾಸಕ. ಅವರು ಶ್ರೀ ಕುಮಾರೇಶ್ವರ ನಾಟ್ಯಸಂಘದ ಪೋಷಕರೂ, ಕವಿಯೂ, ನಾಟಕ ಕರ್ತೃವೂ ಆಗಿರುವರು. ದೀನ ದಲಿತರ ಮತ್ತು ಅಂಧರ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು ಅವರು. 'ನಾನು ಪುಟ್ಟ, ನನ್ನದೇನಿಲ್ಲ. ಎಲ್ಲವೂ ಗುರು ಕರುಣೆ' ಎನ್ನುವ ವಿನೀತ. ಅವರ ಕಾರ್ಯಕ್ಷೇತ್ರ ಗದಗ.

ಪುಟ್ಟರಾಜ ಅವರು ಈಗಿನ ಹಾವೇರಿ ಜಿಲ್ಲೆಯ ಕರ್ಜಗಿ ಬಳಿಯ ದೇವಗಿರಿಯಲ್ಲಿ 1914ರ ಮಾರ್ಚ್ 3ರಂದು ಜನಿಸಿದರು. ತಂದೆ ರೇವಣ್ಣಯ್ಯ, ತಾಯಿ ಸಿದ್ಧಮ್ಮ. ಮೂಲಸ್ಥಳ ಹಾನಗಲ್ಲು ತಾಲೂಕಿನ ಹೊಸಪೇಟೆ. ಆರು ತಿಂಗಳ ಮಗುವಿದ್ದಾಗಲೇ



11th_Kannada_Reader_Final_16-07-2018.indd 97 16-07-2018 18:43:05

ಆಕಸ್ಮಿಕವಾಗಿ ಕಣ್ಣು ಬೇನೆ ಕಾಣಿಸಿತು. ಅದರ ಚಿಕಿತ್ಸೆಗಾಗಿ ಹಾಕಿದ ನಾಟಿ ಮದ್ದಿನ ಪರಿಣಾಮದಿಂದ ಅವರು ದೃಷ್ಟಿಹೀನರಾದರು. ಬಾಲ್ಯದಲ್ಲಿಯೇ ತಂದೆ–ತಾಯಿಗಳನ್ನು ಕಳೆದುಕೊಂಡು ಅವರ ಪ್ರೀತಿ ವಾತ್ಸಲ್ಯದಿಂದ ವಂಚಿತರಾದರು. ಸೋದರ ಮಾವ ದೇವಗಿರಿಯ ಚಂದ್ರಶೇಖರಯ್ಯ ಅವರ ಪೋಷಣೆಯಲ್ಲಿ ಬೆಳೆದರು. ಇವರ ನಾಟಕ ಕಲೆಗೆ ಅವರೇ ಪ್ರೇರಕರು. ಎಂಟನೇ ವಯಸ್ಸಿನಲ್ಲೇ ಪುಟ್ಟರಾಜು ಹುಟ್ಟುಗುರುಡ ಪಂಡಿತ ಪಂಚಾಕ್ಷರೀ ಗವಾಯಿ ಅವರ ಶಿಷ್ಯರಾದರು. ರೋಣದ ಬೆಟ್ಟದ ದೇವರು, ಸಂದಗಿವಾಡ ಮಠದ ಅಪ್ಪಯ್ಯ ಮತ್ತು ಜೇರಟಿಗೆ ಸದಾಶಿವ ಶಾಸ್ತ್ರಿಯವರಲ್ಲಿಯೂ ಸಂಗೀತವನ್ನು ಅಭ್ಯಸಿಸಿದರು. ಚಂದ್ರಶೇಖರ ಶಾಸ್ತ್ರಿಯವರಲ್ಲಿ ಶಾಸ್ತ್ರಗ್ರಂಥಗಳ ಪರಿಚಯ ಪಡೆದರು. ಬ್ರೈಲ್ ಲಿಪಿಯ ಅಭ್ಯಾಸವೂ ಆಯಿತು. ಉತ್ತರಾದಿ ಹಾಗೂ ದಕ್ಷಿಣಾದಿ ಸಂಗೀತವನ್ನು ಕರಗತ ಮಾಡಿಕೊಂಡು ಉಭಯ ಗಾನಾಚಾರ್ಯ ಎಂದೆನಿಸಿದರು.

ಕನ್ನಡ ಹಿಂದಿ, ಸಂಸ್ಕೃತ ಬಲ್ಲ ಪುಟ್ಟರಾಜ ಅವರು ಪುರಾಣ, ನಾಟಕ, ಕಾವ್ಯ, ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 'ಶ್ರೀ ಕುಮಾರೇಶ್ವರ', 'ಅಕ್ಕ ಮಹಾದೇವಿ', 'ಸತೀ ಸುಕನ್ಯಾ' ಮೊದಲಾದವು ಇವರ ನಾಟಕ ಕೃತಿಗಳು. 'ತ್ರಿಷಷ್ಟಿ ಪುರಾತನರ ಪುರಾಣ', 'ಕಲಬುರ್ಗಿಯ ಶರಣ ಬಸವೇಶ್ವರ ಪುರಾಣ' – ಪುರಾಣ ಗ್ರಂಥಗಳು. 'ಗಾನ ಸುಧಾ', 'ಸಂಗೀತ ಶಾಸ್ತ್ರಜ್ಞಾನ' ಮೊದಲಾದವು ಸಂಗೀತ ಕೃತಿಗಳು. ಇವರು ಸಂಸ್ಕೃತದ 'ಸಿದ್ಧಾಂತ ಶಿಖಾಮಣಿ' ಹಾಗೂ ಕನ್ನಡದ 'ಬಸವೇಶ್ವರ ಪುರಾಣ'ವನ್ನು ಹಿಂದಿಗೆ ಅನುವಾದಿಸಿದ್ದಾರೆ.

1969ರಲ್ಲಿ ಆರಂಭವಾದ 'ಪಂಚಾಕ್ಷರೀ' ಮಾಸ ಪತ್ರಿಕೆ 1988ರಲ್ಲಿ 'ಪಂಚಾಕ್ಷರವಾಣಿ' ಎಂದು ಪರಿವರ್ತನೆಯಾಯಿತು. ಇದು ಅವರ ಪಂಚಾಕ್ಷರೀ ಮುದ್ರಣಾಲಯದಿಂದ ಮುದ್ರಣವಾದ ಸಾಹಿತ್ಯ. ಇದು ಕನ್ನಡ ಸಾಹಿತ್ಯ ಹಾಗೂ ಧಾರ್ಮಿಕ ರಂಗಕ್ಕೆ ಮಹತ್ವದ ಕೊಡುಗೆಯಾಗಿದೆ. ಪುಟ್ಟರಾಜ ಗವಾಯಿಯವರೇ ಈ ಸಾಧನೆಯ ಹಿಂದಿನ ಶಕ್ತಿ.

ಸಂಗೀತ ಕಲೆಯನ್ನು ಅಭ್ಯಸಿಸುವ ಆಶ್ರಮದ ವಿದ್ಯಾರ್ಥಿಗಳ ಪೋಷಣೆಯ ಸಲುವಾಗಿ ಇವರು 'ಶ್ರೀ ಕುಮಾರೇಶ್ವರ ನಾಟ್ಯ ಸಂಘ' ಸ್ಥಾಪಿಸಿದರು. ನಾಡಿನಾದ್ಯಂತ ನಾಟಕಗಳನ್ನು ಆಡಿದರು. 'ಹೇಮರೆಡ್ಡಿ ಮಲ್ಲಮ್ಮ', 'ನೆಲ್ಲೂರ ನಂಬ್ಯೆಕ್ಕ' ಇವರ ಪ್ರಸಿದ್ಧ ನಾಟಕಗಳು. ಅದರ ವರಮಾನದಿಂದ ಮುವ್ವತ್ತಾರು ಎಕರೆ ಜಮೀನು ಖರೀದಿಸಿ ವೀರೇಶ್ವರ ಪುಣ್ಯಾಶ್ರಮಕ್ಕೆ ನಿರಂತರ ವಾರ್ಷಿಕ ಆದಾಯ ಬರುವಂತೆ ವ್ಯವಸ್ಥೆ ಮಾಡಿದರು. ಸಂಚಾರೀ ಶಾಲೆಗೆ ಗದಗಿನಲ್ಲಿ ನೆಲೆ ಕಲ್ಪಿಸಿ ಆಶ್ರಮ ಕಟ್ಟಿಸಿದರು. ಅದು ಇಂದು ಹೆಮ್ಮರವಾಗಿ ಬೆಳೆದಿದೆ. ಬಡವ–ಬಲ್ಲಿದ, ಮೇಲು–ಕೀಳು ಎಂಬ ಭೇದ ಭಾವ ಮಾಡದೆ ಸಮಾನತೆಯಿಂದ ಅನಾಥರು, ಅಂಧರು, ಅಂಗವಿಕಲ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಗುರುಕುಲ ಪದ್ಧತಿಯನ್ನು ಮುಂದುವರೆಸಿದ್ದಾರೆ. ಪುಣ್ಯಾಶ್ರಮ ಕಲಾ ದೇಗುಲದ ನಂದಾ ದೀವಿಗೆಯಿಂದ ನಾಡಿನಾದ್ಯಂತ ಸಾವಿರಾರು ಪ್ರಣತಿಗಳು ಬೆಳಗಿವೆ; ಬೆಳಕು ಬೀರುತ್ತಿವೆ. ಇಂದಿನವರೆಗೆ ಸುಮಾರು ಹದಿನೈದು ಸಾವಿರಕ್ಕೂ ಮಿಕ್ಕ ಶಿಷ್ಯರಿದ್ದಾರೆ ಎಂಬುದೇ ಅವರ ಶ್ರೇಷ್ಠತೆಗೆ ಹಿಡಿದ ಕೈಗನ್ನಡಿ.

ಸಂಗೀತ ಕ್ಷೇತ್ರದಲ್ಲಿ ಬಸವರಾಜ ರಾಜಗುರು, ಅರ್ಜುನಸಾ ನಾಕೋಡ್, ಸಿದ್ಧರಾಮ ಜಂಬಲದಿನ್ನಿ, ಪಂಚಾಕ್ಷರೀ ಸ್ವಾಮಿ ಮತ್ತಿಗಟ್ಟಿ, ಸೋಮನಾಥ ಮರುಡೂರು, ವೆಂಕಟೇಶ ಮೊದಲಾದವರು ಉಲ್ಲೇಖಾರ್ಹರು. ಸಂಗೀತವಾದ್ಯ ಕಲಾ ವೃಂದದಲ್ಲಿ ಶೇಷಾದ್ರಿ ಗವಾಯಿ, ಮರೋಳವೀರಯ್ಯ, ಹನುಮಂತಾಚಾರ್ಯ, ವೀರೇಶ ಮದರಿ, ರೇವಣ ಸಿದ್ಧ ಕುಂಕುಮಗಾರ, ಶಿವಪ್ಪ ಕುಕನೂರು, ವೀರನಗೌಡ ಕಂಪ್ಲಿ ಮುಂತಾದವರು ಪ್ರಮುಖರು. ಕರ್ನಾಟಕ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ಆಶ್ರಮದ ಕಲಾವಿದರದೇ ಮೇಲುಗೈ. ಅವರಲ್ಲಿ ಟಿ.ಎಂ.ಚಂದ್ರಶೇಖರ ಶಾಸ್ತ್ರೀ, ವೀರೇಂದ್ರ ಕಿತ್ತೂರು, ಕುಮಾರಿ ಸತ್ಯಭಾಮ ಹಳ್ಳಿಕೇರಿ ಇವರು ಪ್ರಖ್ಯಾತರು.



11th_Kannada_Reader_Final_16-07-2018.indd 98 16-07-2018 18:43:05

ಪುಟ್ಟರಾಜ ಗವಾಯಿಯವರು ನಾಡಿನಾದ್ಯಂತ ಸಂಚರಿಸಿ ಕೀರ್ತನೆಗಳನ್ನು ಹಾಡಿ, ಪುರಾಣ ಪ್ರವಚನಗಳನ್ನು ನೀಡಿ ಜನಮನವನ್ನು ರಂಜಿಸಿ, ತಿದ್ದಿದ್ದಾರೆ. ಹಗಲಿರುಳೂ ಸಂಗೀತ ಸೇವೆಯ ಜೊತೆಗೆ ಸಾಮಾಜಿಕ ಸೇವೆಯನ್ನು ಮಾಡಿದ್ದಾರೆ. ಇಷ್ಟಾದರೂ ಹಮ್ಮು ಬಿಮ್ಮುಗಳಿಗೆ ಒಳಗಾಗದ ಸ್ಥಿತ ಪ್ರಜ್ಞರು ಇವರು. ಪಂಡಿತ ಪುಟ್ಟರಾಜ ಗವಾಯಿಗಳ ಪಾಂಡಿತ್ಯ ಮತ್ತು ಸಮಾಜಸೇವೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹಾಗೂ ಸಂಗೀತಕ್ಕೆ ಮೀಸಲಾದ ಕನಕ–ಪುರಂದರ ಪ್ರಶಸ್ತಿಗಳು ಇವರಿಗೆ ದೊರೆತಿವೆ. ಮಾಜಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ರಾಷ್ಟ್ರೀಯ ಪ್ರಶಸ್ತಿಯೂ ಇವರಿಗೆ ಲಭಿಸಿದೆ.

ಗಾನರತ್ನ, ಗಾನ ಕಲಾ ಗಂಧರ್ವ, ಉಭಯ ಗಾನಾಚಾರ್ಯ, ಸಂಗೀತ ರತ್ನ, ಕಲಾಭೂಷಣ, ಸಂಗೀತ ಪ್ರವೀಣ ಮೊದಲಾದ ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ. 'ಜ್ಞಾನದೇಗುಲ' ಕರ್ನಾಟಕ ಜನತೆ ಇವರಿಗೆ ಅರ್ಪಿಸಿದ ಅಭಿನಂದನ ಗ್ರಂಥ. ಹಾವೇರಿ ಜಿಲ್ಲೆಯ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೆ ಇವರು ಪಾತ್ರರಾಗಿದ್ದಾರೆ.

ಕಣ್ಣುಳ್ಳವರಿಗಿಂತ ಮಿಗಿಲಾಗಿ ನಾಡಸೇವೆಯನ್ನು ಗೈದಿದ್ದಾರೆ. ವೀರೇಶ್ವರ ಪುಣ್ಯಾಶ್ರಮವನ್ನು ಒಂದು ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಬೇಕೆನ್ನುವುದು ಗವಾಯಿಗಳ ಮಹದಾಸೆಯಾಗಿತ್ತು. ಇವರ ಜೀವನವೇ ಒಂದು ಕಲಾ ತಪಸ್ಸು, ಸಾಧನೆ, ಪ್ರೇರಣೆ, ಮಾರ್ಗದರ್ಶನ, ಮಾನವತೆಯ ಚಿಂತನೆಗೆ ಆಕರ.

## ಕಠಿಣ ಪದಗಳ ಅರ್ಥ

ಪಟಗ–ರುಮಾಲು, ಮುಂಡಾಸು, ಪೇಟ; ಹರಯ–ಪ್ರಾಯ, ಯೌವನ; ಪ್ರವೀಣ –ತಜ್ಞ, ವಿದ್ವಾಂಸ, ತಿಳಿದವ; ಪುಟ್ಟ–ಚಿಕ್ಕದಾದ, ಚಿಕ್ಕವ; ಮುದ್ರಣಾಲಯ–ಅಚ್ಚುಕೂಟ, ಛಾಪಾಖಾನೆ; ಆಕಸ್ಮಿಕ–ತಿಳಿಯದೇ ಆದ ಅನಿರೀಕ್ಷಿತ; ವಂಚಿತ–ವಂಚನೆಗೆ ಒಳಗಾದವ, ದೂರವಾದವ; ಪ್ರೇರಕ–ಪ್ರೋತ್ಸಾಹ, ಹುರಿದುಂಬಿಸು; ವರಮಾನ–ಆದಾಯ, ಆಯ; ನಿರಂತರ–ಸದಾ, ಸತತ; ದೇಗುಲ–ದೇವಸ್ಥಾನ, ಗುಡಿ; ಪ್ರಣತಿ–ಹಣತೆ; ಮಿಕ್ಕಿ–ಹೆಚ್ಚಾಗಿ, ಹೆಚ್ಚು, ಬಹಳ; ಸನ್ಮಾನ–ಗೌರವ; ಭಾಜನ–ಯೋಗ್ಯ, ಅರ್ಹ; ಮಹದಾಸೆ– ಹೆಚ್ಚಿನ ಆಸೆ; ಆಕರ–ಮೂಲ.

## ಟಿಪ್ಪಣಿಗಳು

**ಅಭಿನಂದನ ಗ್ರಂಥ** = ಗೌರವ ಸೂಚಕವಾಗಿ ಸಮರ್ಪಿಸುವ ಗೌರವ ಗ್ರಂಥ

**ಮಣಿಕಟ್ಟು** = ಮುಂಗೈನ ಹಿಂದಿನ ಭಾಗ

**ಬ್ರೈಲ್ ಗಡಿಯಾರ** = ಕುರುಡರು ಬಳಸುವ ವಿಶೇಷ ಕೈಗಡಿಯಾರ. ಇದರಲ್ಲಿ ಮುಳ್ಳುಗಳನ್ನು ಮುಟ್ಟಿನೋಡಿಯೇ ಸಮಯವೆಷ್ಟೆಂಬುದನ್ನು ಅಂಧರು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

**ವಾಗ್ಗೇಯಕಾರ** = ಸಂಗೀತ ಕೃತಿ ರಚಿಸುವವ.

**ಕಲೋಪಾಸಕ** = ಕಲೆಯನ್ನು ಪೂಜಿಸುವವ, ಆರಾಧಿಸುವವ

**ಮುಡುಪಾಗಿಡು** = ಮೀಸಲಿಡು

**ವಿನೀತ** = ಸರಳ, ನಮ್ರ, ಸೌಜನ್ಯ, ವಿಧೇಯತೆಗಳಿಂದ ಕೂಡಿದ, ಆಡಂಬರವಿಲ್ಲದ.

**ದೃಷ್ಟಿಹೀನ** = ನೋಡುವ ಶಕ್ತಿಯನ್ನು ಕಳೆದುಕೊಂಡಿರುವವ

**ಕರಗತ** = ಸಿದ್ಧಿ ಪಡೆದ, ಪ್ರಾವೀಣ್ಯತೆ ಪಡೆದ

**ತ್ರಿಷಷ್ಠಿ ಪುರಾತನರು** = ತಮಿಳುನಾಡಿನ ಅರವತ್ಮೂರು ಶಿವಭಕ್ತರು

**ಪರಿವರ್ತನೆ** = ರೂಪ ಬದಲಾವಣೆ

**ಹೆಮ್ಮರ** = ಹಿರಿದಾದ ಮರ

**ನಂದಾದೀವಿಗೆ** = ಸದಾ ಉರಿಯುತ್ತಿರುವ ದೀಪ, ನಂದದ ದೀಪ

**ಕೈಗನ್ನಡಿ** = ಸಾಕ್ಷಿ

**ಮೇಲುಗೈ** = ಪ್ರಮುಖ ಪಾತ್ರ ವಹಿಸಿಸು, ಪ್ರಾಮುಖ್ಯತೆ ಪಡೆ, ಮುಂಚೂಣಿಯಾಗು, ಯಶಸ್ಸು ಗಳಿಸು.



11th_Kannada_Reader_Final_16-07-2018.indd 99 16-07-2018 18:43:05

**ಹಮ್ಮುಬಿಮ್ಮು** = ಪ್ರತಿಷ್ಠೆ, ಹೆಚ್ಚು ಗರ್ವ

**ಸ್ಥಿತಪ್ರಜ್ಞ** = ಹೊಗಳಿಕೆ ತೆಗಳಿಕೆಗಳನ್ನು ಸಮನಾಗಿ ಸ್ವೀಕರಿಸುವವ, ಒಂದೇ ತರಹದ ಮನಸ್ಥಿತಿಯುಳ್ಳವ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಪುಟ್ಟರಾಜ ಗವಾಯಿ ಅವರ ತಂದೆತಾಯಿಯರ ಹೆಸರೇನು ?
2. ಬಾಲ್ಯದಲ್ಲಿ ಪುಟ್ಟರಾಜ ಅವರು ಯಾರ ಪೋಷಣೆಯಲ್ಲಿ ಬೆಳೆದರು ?
3. ಪುಟ್ಟರಾಜ ಗವಾಯಿ ಅವರು ಯಾರ ಶಿಷ್ಯತ್ವ ಪಡೆದರು ?
4. ಗವಾಯಿಯವರ ಕೃತಿಗಳು ಯಾವುವು ?
5. ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದ ವೀರೇಶ್ವರ ಆಶ್ರಮದ ಶಿಷ್ಯರು ಯಾರು?
6. ಯಾವ ವಿಶ್ವವಿದ್ಯಾಲಯದಿಂದ ಪುಟ್ಟರಾಜ ಅವರಿಗೆ ಗೌರವ ಡಾಕ್ಟರೇಟ್ ಬಂದಿದೆ ?
7. ಗವಾಯಿಗಳ ಪ್ರಮುಖ ಆಕಾಂಕ್ಷೆ ಯಾವುದು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಪುಟ್ಟರಾಜ ಗವಾಯಿಗಳ ವೇಷಭೂಷಣದ ಬಗ್ಗೆ ಬರೆಯಿರಿ.
2. ಬಾಲ್ಯದಲ್ಲೇ ಗವಾಯಿಗಳು ಕುರುಡರಾದದ್ದು ಹೇಗೆ ? ವಿವರಿಸಿ.
3. ಪುಟ್ಟರಾಜ ಅವರು ಯಾರುಯಾರಿಂದ ಶಿಕ್ಷಣ ಪಡೆದರು ?
4. ವೀರೇಶ್ವರ ಪುಣ್ಯಾಶ್ರಮದ ಬಗ್ಗೆ ಬರೆಯಿರಿ.
5. ಪುಟ್ಟರಾಜ ಗವಾಯಿಯವರಿಗೆ ದೊರೆತ ಸನ್ಮಾನ, ಪ್ರಶಸ್ತಿಗಳ ಬಗ್ಗೆ ತಿಳಿಸಿ.
6. ಪುಟ್ಟರಾಜ ಗವಾಯಿಯವರ ಸಾಧನೆಗಳಾವುವು ?

## ಭಾಷಾಭ್ಯಾಸ

**1. ಈ ಪದಗಳ ವಿಗ್ರಹ ವಾಕ್ಯಗಳನ್ನು ಬರೆದು, ಸಮಾಸದ ಹೆಸರನ್ನು ಬರೆಯಿರಿ.**

ಇಂಚರ, ಹೊಸಗನ್ನಡ, ಊರುಗೋಲು, ಪೀತಾಂಬರ, ಕಣ್ಣುಬೇನೆ, ಹೆಬ್ಬಾವು, ಕನಕ–ಪುರಂದರ, ನಡುಗನ್ನಡ, ಹಮ್ಮುಬಿಮ್ಮು, ಎಂಬತ್ತೇಳು, ಕೆಂದಾವರೆ, ಚಿಕ್ಕ ಹುಡುಗಿ.

**2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

ಕುಮಾರೇಶ್ವರ, ಕಲೋಪಾಸಕ, ವೀರೇಶ್ವರ, ನಾಡಿನಾದ್ಯಂತ, ಅತ್ಯುನ್ನತ, ಪುಣ್ಯಾಶ್ರಮ, ರಾಜೇಂದ್ರ

**3. ಕೆಳಗಿನ ಪದಗಳನ ತತ್ಸಮ–ತದ್ಭವ ರೂಪಗಳನ್ನು ತಿಳಿಸಿ.**

ಸಂಸ್ಥೆ, ಪ್ರಣತಿ, ಕಾರ್ಯ, ಧ್ವನಿ, ಕವಿ, ದೃಷ್ಟಿ, ಆಕಾಶ, ರಾಜ.

**4. ಕೆಳಗಿನ ಗಾದೆಯನ್ನು ವಿಸ್ತರಿಸಿ ಬರೆಯಿರಿ.**

ಅ. ರವಿ ಕಾಣದ್ದನ್ನು ಕವಿ ಕಂಡ.
ಆ. ಕೈ ಕೆಸರಾದರೆ ಬಾಯಿ ಮೊಸರು
ಇ. ಬೆಳೆಯುವ ಪೈರು ಮೊಳಕೆಯಲ್ಲೇ.
ಈ . ಹಾಸಿಗೆಯಿದ್ದಷ್ಟು ಕಾಲು ಚಾಚು

## ಚಟುವಟಿಕೆ

1. ಕರ್ನಾಟಕ, ತಮಿಳುನಾಡು ರಾಜ್ಯಗಳಿಗೆ ಸಂಬಂಧಿಸಿದ ಜನಪದ ಕಲೆಗಳನ್ನು ತಿಳಿದುಕೊಂಡು ಅವುಗಳನ್ನು ಅಭಿನಯಿಸಿ ತೋರಿಸುವ ತಂಡವನ್ನು ಶಾಲೆಗೆ ಆಮಂತ್ರಿಸಿ ಸಮಾರಂಭಗಳನ್ನು ಏರ್ಪಡಿಸಿ.



11th_Kannada_Reader_Final_16-07-2018.indd 100 16-07-2018 18:43:05

ಘಟಕ ಐದು

ಉಪಪಠ್ಯ

# ದೊಡ್ಡಾಟ–ಸಣ್ಣಾಟ

– ಕೆ.ಕುಮಾರ್ ಆಚಾರ್




ಯಕ್ಷಗಾನ ಬಯಲಾಟ ತೊಗಲು ಬೊಂಬೆಯಾಟದಂತಹ ಹಲವಾರು ಜನಪದ ರಂಗಕಲೆಗಳು ಕರ್ನಾಟಕದಲ್ಲಿ ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧಿ ಪಡೆದಿದೆ. ಶಿವರಾಮ ಕಾರಂತರು ಮಕ್ಕಳ ಯಕ್ಷಗಾನ ಮೇಳವನ್ನು ತಯಾರುಗೊಳಿಸಿ ದೇಶವಿದೇಶಗಳಿಗೆ ಆ ಮೇಳವನ್ನು ಕೊಂಡೊಯ್ದು ಯಕ್ಷಗಾನವನ್ನು ವಿಜೃಂಭಿಸಿದರು. ಮುಂದೆ ಹಲವರು ಈ ಕಾರ್ಯವನ್ನು ಕೈಗೊಂಡು ಜಗತ್ತಿನಾದ್ಯಂತ ಯಕ್ಷಗಾನ–ಬಯಲಾಟ ಪ್ರಚಾರಗೊಳ್ಳುವಂತೆ ಮಾಡಿದರು. ಉತ್ತರ ಕರ್ನಾಟಕದಲ್ಲಿ ಈ ಬಯಲಾಟವನ್ನು ದೊಡ್ಡಾಟ ಸಣ್ಣಾಟಗಳೆಂಬ ಹೆಸರುಗಳಿಂದ ಕರೆಯುವುದನ್ನು ಕಾಣುತ್ತೇವೆ. ಈ ಬಯಲಾಟಗಳ ಸ್ಥೂಲ ಪರಿಚಯವನ್ನು ಈ ಪಾಠದಲ್ಲಿ ಮಾಡಲಾಗಿದೆ.





11th_Kannada_Reader_Final_16-07-2018.indd 101 16-07-2018 18:43:05

ಜಾನಪದವು ನಮ್ಮ ಜೀವನದ ಉಸಿರು. ಇದರಲ್ಲಿ ನಮ್ಮ ಬದುಕಿನ ನೋವು ನಲಿವು ಸುಖ–ದುಃಖ ಜೀವನದ ಏರು ಪೇರು ಮೊದಲಾದವುಗಳನ್ನು ಕಾಣಬಹುದಾಗಿದೆ. ಜಾನಪದವನ್ನು ಕಲೆ, ಸಾಹಿತ್ಯ, ನೃತ್ಯ, ಮೊದಲಾದ ವಿವಿಧ ಪ್ರಕಾರಗಳಿಂದ ಗುರುತಿಸಬಹುದು. ಜಾನಪದ ಸಾಹಿತ್ಯವು ನಮ್ಮ ಹಳ್ಳಿಗರ ನಾನಾ ರೀತಿಯ ವಿಶಿಷ್ಟ ಅನುಭವಗಳನ್ನು ಕನ್ನಡಿಯಂತೆ ತೆರೆದು ತೋರಿಸುತ್ತದೆ. 'ಶ್ರೀವಿಜಯ' ಎಂಬ ಕವಿಯು ತನ್ನ 'ಕವಿರಾಜ ಮಾರ್ಗ' ಎನ್ನುವ ಕೃತಿಯಲ್ಲಿ ನಮ್ಮ ಹಳ್ಳಿಗರ ಕುರಿತು ಹೇಳಿರುವ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಮಾತು ಅವರ ಪ್ರತಿಭೆ ಪಾಂಡಿತ್ಯಗಳನ್ನು ಸ್ಪಷ್ಟಗೊಳಿಸುತ್ತದೆ'

ಕರ್ನಾಟಕವು ಜನಪದ ಕಲೆ, ಸಾಹಿತ್ಯ ಸಂಸ್ಕೃತಿಗಳ ಒಂದು ಅಮೂಲ್ಯ ಗಣಿ. ಕರ್ನಾಟಕ ಸಂಸ್ಕೃತಿಯ ಒಂದು ಪ್ರಮುಖ ಭಾಗವಾಗಿ ಬೆಳೆದು ಬಂದಿರುವ ಜನಪದ ರಂಗ, ಸಂಪ್ರದಾಯ, ವಿವಿಧ ಪ್ರಭೇದಗಳೊಡನೆ ಕರ್ನಾಟಕದ ಅನೇಕ ಭಾಗಗಳಲ್ಲಿ ಪ್ರಚಲಿತವಾಗಿದೆ. ಜನಪದ ರಂಗ ಸಂಪ್ರದಾಯವು ಜನಸಾಮಾನ್ಯರ ಮನೋರಂಜನೆ ಹಾಗೂ ಮನೋವಿಕಾಸಕ್ಕಾಗಿ ಮೈತಳೆದ ಗ್ರಾಮೀಣ ರಂಗಭೂಮಿಯಾಗಿದೆ. ಈ ಜನತಾ ರಂಗಭೂಮಿಯೇ ಅತ್ಯಂತ ಪ್ರಾಚೀನವಾದ ರಂಗಭೂಮಿ. ಬಾಳಿನ ಸಂತೋಷವನ್ನು ಅಭಿವ್ಯಕ್ತಗೊಳಿಸುವ ನೃತ್ಯ ಇದರ ಜೀವಾಳ.

ಜನಪದ ನೃತ್ಯಗಳು ಮೂಲತಃ ದೇವಪೂಜೆಯ ಅಂಶಗಳಾದುದರಿಂದ ಜನಪದ ರಂಗಭೂಮಿಯ ಹುಟ್ಟು ದೇವಪೂಜೆಯ ಮೂಲ ಮನೋಭಾವದಲ್ಲಿ ಅಡಗಿದೆ ಎನ್ನಬಹುದು. ವೇಷ, ಗೀತ, ಕುಣಿತಗಳಿಂದೊಡಗೂಡಿದ ಗ್ರಾಮ್ಯ ನಾಟಕರೂಪ ಬೆಳವಣಿಗೆ ಹೊಂದಿ ಯಕ್ಷಗಾನ–ಬಯಲಾಟದಂತಹ ಮಾಧ್ಯಮವಾಯಿತೆಂದು ತಿಳಿಯಬಹುದು.

ಯಕ್ಷಗಾನ ಬಯಲಾಟವು ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಕಂಡು ಬಂದರೂ ಎಲ್ಲಾ ಕಡೆಯೂ ಒಂದೇ ರೀತಿಯಲ್ಲಿಲ್ಲ. ಪ್ರಾದೇಶಿಕವಾಗಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಅದು ಪಡೆದುಕೊಂಡಿದೆ. ಯಕ್ಷಗಾನವು ಮೂಲತಃ ನೃತ್ಯಪ್ರಧಾನವಾಗಿದ್ದ ಕರ್ನಾಟಕದಲ್ಲಿ ಬಯಲಾಟವನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಭಾಗಿಸುತ್ತಾರೆ. ಮೂಡಲ ಪಾಯ ಹಾಗೂ ಪಡುವಲ ಪಾಯಗಳೆಂಬುವುಗಳೇ ಆ ಎರಡು ಪ್ರಕಾರಗಳು. ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕಗಳ ಬಯಲಾಟವನ್ನು ಮೂಡಲಪಾಯವೆಂದೂ; ಕರಾವಳಿ ಕರ್ನಾಟಕದ ಬಯಲಾಟವನ್ನು ಪಡುವಲ ಪಾಯವೆಂದೂ ಕರೆಯುತ್ತಾರೆ. ಪಾಯ ಎಂದರೆ ಪದ್ಧತಿ ಎಂದು ಅರ್ಥ. ಯಕ್ಷಗಾನ ಬಯಲಾಟಕ್ಕೆ ಆಟ, ಬಯಲಾಟ, ಭಾಗವತರಾಟ, ಮೇಳದಾಟ, ಅಟ್ಟದಾಟ, ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣಪಾರಿಜಾತ, ಶರಣರಾಟ, ಘಟ್ಟದ ಕೋರೆ ಮುಂತಾದ ಹೆಸರುಗಳೂ ಇವೆ.

ನಾಲ್ಕು ಕಂಬಗಳ ಮಧ್ಯೆ ಕಾದಿರಿಸಿದ ಜಾಗವನ್ನು ರಂಗಭೂಮಿಯನ್ನಾಗಿಸಿಕೊಂಡು ಭೂಮಿಯಿಂದ ಒಂದು ಅಥವಾ ಒಂದೂವರೆ ಅಡಿ ಎತ್ತರಕ್ಕೆ ಮರದ ಹಲಗೆಗಳನ್ನು ಹಾಸಿ ವಿಶೇಷವಾಗಿ ನಿರ್ಮಿಸಿದ ಅಟ್ಟದ ಮೇಲೆ ಆಟ ನಡೆಯುತ್ತದೆ. ಈ ಕಾರಣಕ್ಕಾಗಿಯೇ ಮೂಡಲ ಪಾಯಕ್ಕೆ ಅಟ್ಟದಾಟ ಎಂಬ ಹೆಸರು ಹೊಂದಿಕೊಳ್ಳುತ್ತದೆ. ಮೂಡಲ ಪಾಯದ ಬಯಲಾಟ ಪ್ರಕಾರಗಳಲ್ಲಿ ದೊಡ್ಡಾಟ, ಸಣ್ಣಾಟಗಳು ಬಹಳ ಪ್ರಖ್ಯಾತ.

ಬಯಲಾಟದಲ್ಲಿ ಪ್ರಸಂಗವೊಂದು ನೆಪ ಮಾತ್ರ. ನೃತ್ಯ, ಗಾನ, ವಾದ್ಯ, ವೇಷಭೂಷಣಗಳೇ ಅಲ್ಲಿ ಪ್ರಧಾನ. ಈ ಪರಿಕರಗಳ ಮೂಲಕವೇ ಪ್ರೇಕ್ಷಕರಿಗೆ ಪ್ರಸಂಗ ಅರ್ಥವಾಗಬೇಕು. ಅರ್ಥವಾಗದಿದ್ದಾಗ ಮಾತು ಸಹಾಯಕ್ಕೆ ಬರುತ್ತದೆ. ಯಕ್ಷಗಾನ ಸಾಹಿತ್ಯ ಮೂಲತಃ ಪದ್ಯಾತ್ಮಕವಾದುದು. ಹಿಂದಿನ ಕಾಲದಲ್ಲಿ ಭಾಗವತನೇ ಅದನ್ನು ಕಟ್ಟಿರಬೇಕು. ಬಳಿಕ ಅದು ಬಾಯಿಂದ ಬಾಯಿಗೆ ಹರಿಯುತ್ತಾ ನಾನಾ ರೂಪಾಂತರಗಳನ್ನು ಪಡೆದಿರಬಹುದು. ತಾಳ, ಜಾಗಟೆ, ಮುಖವೀಣೆ, ಹಾರ್ಮೋನಿಯಂ, ಮದ್ದಲೆ, ಮೃದಂಗ, ಚಂಡೆಗಳೇ ಇಲ್ಲಿ ಬಳಕೆಯಾಗುವ



11th_Kannada_Reader_Final_16-07-2018.indd 102 16-07-2018 18:43:05

ವಾದ್ಯಗಳು. ಮೈಲಿಗಟ್ಟಲೆ ಕೇಳಿಸುವ ಚಂಡೆಗೂ, ಬಯಲಾಟಕ್ಕೂ ಹತ್ತಿರದ ನಂಟು.

ಮೂಡಲಪಾಯದ ರಂಗಸಜ್ಜಿಕೆಯಲ್ಲಿ ಪಾತ್ರ ಪ್ರವೇಶಕ್ಕನುಗುಣವಾಗಿ ವಿಶೇಷ ವ್ಯವಸ್ಥೆ ಇರುತ್ತದೆ. ಉದಾಹರಣೆಗೆ ರಾಮಾಯಣದಂತಹ ಪ್ರಸಂಗಗಳಲ್ಲಿ ಆಂಜನೇಯನ ಪಾತ್ರ ಪ್ರಥಮ ಬಾರಿ ಪ್ರವೇಶಿಸುವಾಗ ಗಂಭೀರ ಪಾತ್ರಗಳಂತೆ ರಂಗದ ಒಳಭಾಗದಿಂದಾಗಲೀ, ರಾಕ್ಷಸ ಪಾತ್ರಗಳಂತೆ ರಂಗದ ಮುಂಭಾಗದಿಂದಾಗಲೀ ಕಾಣಿಸಿಕೊಳ್ಳದೆ, ಆಕಾಶದಿಂದ ಅಥವಾ ಮರದ ಮೇಲಿನಿಂದ ಧರೆಗೆ ಇಳಿದು ಬರುವಂತೆ ವ್ಯವಸ್ಥೆಗಳನ್ನು ಮಾಡಿರುತ್ತಾರೆ.

ಪಡುವಲ ಪಾಯದ ಬಯಲಾಟವನ್ನು ತೆಂಕುತಿಟ್ಟು, ಬಡಗುತಿಟ್ಟುಗಳೆಂದು ವಿಭಾಗಿಸಿದ್ದಾರೆ. ಬಯಲಾಟವೆಂದರೆ ರಾತ್ರಿಯಲ್ಲಿ ಆಡುವಂತಹುದು. ಉತ್ತರ ಕರ್ನಾಟಕದಲ್ಲಿ ಬಯಲಾಟವನ್ನು ದೊಡ್ಡಾಟವೆಂದು ಕರೆದಿದ್ದು ರಾತ್ರಿಯಿಂದ ಸೂರ್ಯೋದಯದವರೆಗೆ ಯಕ್ಷಗಾನ ನಡೆಯುತ್ತದೆ. ಆದರೆ ಅಷ್ಟು ಕಾಲ ಕುಳಿತುಕೊಳ್ಳುವ ತಾಳ್ಮೆ ಎಲ್ಲರಿಗೂ ಯಾವಾಗಲೂ ಇರುವುದಿಲ್ಲ. ಆದ್ದರಿಂದ ಮೂರ್ನಾಲ್ಕು ಗಂಟೆಗಳಲ್ಲೇ ಮುಗಿಯುವಂತಹ ಸಣ್ಣಾಟಗಳು ಬಳಕೆಗೆ ಬಂದವು.

ದೊಡ್ಡಾಟವು ಪೌರಾಣಿಕ ಅಥವಾ ಊಹಾತ್ಮಕ ಕಥಾನಕಗಳನ್ನು ಒಳಗೊಂಡಿರುತ್ತದೆ. ದೊಡ್ಡಾಟವು ಪ್ರಾಚೀನತೆಯನ್ನು ಉಳಿಸಿಕೊಂಡಿದೆ. ಸಂಭಾಷಣೆ, ಅಭಿನಯ, ಸಂಗೀತ, ವೇಷಭೂಷಣ, ವಾದ್ಯ, ರಂಗ ವ್ಯವಸ್ಥೆ ಮುಂತಾದವುಗಳಲ್ಲಿ ದೊಡ್ಡಾಟವು ಇತರ ಯಾವುದೇ ಕಲೆ ಸಂಗೀತದ ಪ್ರಭಾವಕ್ಕೆ ಒಳಗಾಗಿಲ್ಲವೆಂಬುದು ಇದರ ವೈಶಿಷ್ಟ್ಯ. ಅಧಿಕವಾಗಿ ಪುರಾಣದ ಅದ್ಭುತ ರಮ್ಯ ಕಥೆಗಳೇ ಇದರ ಕಥಾ ವಸ್ತುವಾಗಿರುತ್ತದೆ. ಹಾಸ್ಯ ರಸಕ್ಕೂ ಇಲ್ಲಿ ಪ್ರಾಧಾನ್ಯತೆ ಇದೆ.

ದೊಡ್ಡಾಟದ ಸಂಪ್ರದಾಯದವು ಹಲವು ದೃಷ್ಟಿಯಿಂದ ಕುತೂಹಲಕಾರಿಯಾಗಿದೆ. ಪ್ರಸಂಗದ ಆರಂಭ ರಂಗದ ಮೇಲೆಯೇ ಆಗುತ್ತದೆಯಾದರೂ ನಾಂದಿ ಭಾಗಕ್ಕೆ ಸಂಬಂಧಿಸಿದ ಕೆಲವು ಸಂಪ್ರದಾಯಗಳು ನೇಪಥ್ಯ ಗೃಹದಿಂದಲೇ ಪ್ರಾರಂಭವಾಗುತ್ತವೆ. ಪಾತ್ರಧಾರಿಗಳು ವೇಷ ಧರಿಸುವುದಕ್ಕೆ ಮುನ್ನವೇ ಆಭರಣ, ವೇಷಭೂಷಣ ಹಾಗೂ ವಾದ್ಯಗಳನ್ನೆಲ್ಲ ಒಂದೆಡೆ ಇಟ್ಟು ಪೂಜಿಸುತ್ತಾರೆ. ಬಳಿಕ ಪಾತ್ರಧಾರಿಗಳು ಭಾಗವತರಿಗೆ ವಂದಿಸಿ ಅವರಿಂದ ಆಶೀರ್ವಾದ ಪಡೆದು ವೇಷ ಧರಿಸುತ್ತಾರೆ. ಆಮೇಲೆ ಭಾಗವತರು ಮತ್ತು ಹಿಮ್ಮೇಳದವರು ನೇಪಥ್ಯ ಗೃಹದಿಂದಲೇ ಭಜನೆಯನ್ನು ಆರಂಭಿಸುತ್ತಾರೆ. ರಂಗಪೂಜೆ ಮುಗಿದ ಮೇಲೆ ಭಾಗವತರೂ ಹಿಮ್ಮೇಳದವರೂ ರಂಗದ ಬಲಭಾಗದಲ್ಲಿ ನಿಲ್ಲುತ್ತಾರೆ. ಆಟ ಮುಗಿಯುವವರೆಗೂ ಇವರು ಇಲ್ಲೇ ನಿಂತಿರುತ್ತಾರೆ. ರಂಗದ ಮೇಲೆ ಪೂಜಾರಿಯನ್ನು ಬರಮಾಡಿಕೊಳ್ಳುವ ರೀತಿ ಹಾಗೂ ಅವರಿಬ್ಬರಿಗೂ ನಡೆಯುವ ಸಂಭಾಷಣೆ ಸ್ವಾರಸ್ಯಕರವಾಗಿರುತ್ತದೆ.

ಗಣಪತಿ ಪೂಜೆಯ ಅನಂತರ ಪಾರ್ವತಿ ಪರಮೇಶ್ವರ ಶಿವಶರಣರನ್ನು ಸ್ಮರಿಸಿ ಶಾರದಾ ಸ್ತುತಿಯನ್ನು ಮಾಡುತ್ತಿದ್ದಂತೆ ಹನುಮನಾಯಕ ಹಾಗೂ ಬಾಲಗೋಪಾಲಕರು ಪ್ರವೇಶಿಸುತ್ತಾರೆ. ಇವರೆಲ್ಲರೂ ಬಂದು ಮುಂದೆ ನಡೆಯಲಿರುವ ಬಯಲಾಟಕ್ಕೆ ಶುಭ ಹಾರೈಸಿದ ಮೇಲೆ ಭಾಗವತರು ಸಭಿಕರನ್ನುದ್ದೇಶಿಸಿ ಅಂದಿನ ಕಥೆಗೆ ನಾಂದಿ ಹಾಡುವರು.

ಬಣ್ಣಗಾರಿಕೆಯು ಪಾತ್ರಗಳನ್ನು ಅವಲಂಬಿಸಿರುತ್ತದೆ. ಸಾತ್ವಿಕ ಸೌಮ್ಯ ಸ್ವಭಾವದ ಪಾತ್ರಗಳಿಗೆ ಒಂದು ಬಗೆಯ ಬಣ್ಣವಾದರೆ ವೀರ ಪಾತ್ರಗಳಿಗೆ ಬೇರೊಂದು ಬಗೆಯ ಬಣ್ಣವಿರುತ್ತದೆ. ರಾಕ್ಷಸ ಪಾತ್ರಗಳ ವೇಷ ಭೂಷಣ ಬಣ್ಣಗಳಂತೂ ಮಿಶ್ರವಾಗಿದ್ದು ನೋಡಲು ಭಯವನ್ನುಂಟು ಮಾಡುತ್ತವೆ. ಸ್ತ್ರೀ ಪಾತ್ರಗಳನ್ನು ಪುರುಷರೇ ವಹಿಸುತ್ತಾರೆ.

ತಾಳ ಮದ್ದಳೆ ಎಂಬುದು ಯಕ್ಷಗಾನ ಆಟದ ಒಂದು ಪ್ರಭೇದ. ಅದರಲ್ಲಿ ಕಥಾನಕ ಹಾಡುವ ಭಾಗವತನ ಸುತ್ತಲೂ ಪಾತ್ರಧಾರಿಗಳು ತಮ್ಮ ನಿತ್ಯ ಉಡುಗೆಯಲ್ಲೇ ಕುಳಿತು ಮಾತಿನ ಮೂಲಕ ಕಥಾನಕವನ್ನು ಸಾಧಿಸಿದ್ದಾರೆ. ಅದರಲ್ಲಿ



11th_Kannada_Reader_Final_16-07-2018.indd 103 16-07-2018 18:43:05

ಗದ್ಯವೇ ಮುಖ್ಯ ಮಾಧ್ಯಮ. ಆ ಗದ್ಯ ಸ್ವಯಂ ಸ್ಫೂರ್ತಿಯಿಂದ ಹೇಳುವಂತಹುದು. ಅದರಲ್ಲಿ ಕುಣಿತವಿಲ್ಲ. ವೇಷಗಳೂ ಇಲ್ಲ. ಇಂದಿಗೂ ಕರ್ನಾಟಕದಲ್ಲಿ ಈ ತಾಳಮದ್ದಳೆ ರೂಢಿಯಲ್ಲಿದೆ. ಸಾಂಪ್ರದಾಯಿಕ ಯಕ್ಷಗಾನದ ಆಟದವರನ್ನು ಯಾರಾದರೂ ತಮ್ಮ ಊರಿಗೆ ಆಮಂತ್ರಿಸಿದರೆ ಆಟದವರು ಆ ಊರನ್ನು ಸೇರುತ್ತಲೇ ತಮ್ಮನ್ನು ಕರೆದವರ ಮನೆಯಲ್ಲೂ ಅನಂತರ ಆ ಊರಿನ ದೇವಸ್ಥಾನದಲ್ಲೂ ಕುಳಿತು 'ತಾಳ ಮದ್ದಳೆ ಸೇವೆ' ಮಾಡುವ ರೂಢಿಯಿದೆ. ಈ ಸೇವೆಯಲ್ಲಿ ಭಾಗವತ, ದೇವತಾ ಸ್ತುತಿ ಹಾಡುತ್ತಾನೆ, ತಾಳ ಬಾರಿಸುತ್ತಾನೆ. ಅವನ ಜೊತೆಯಲ್ಲಿ ಮದ್ದಳೆಗಾರ ತನ್ನ ವಾದ್ಯವನ್ನು ನುಡಿಸುತ್ತಾನೆ. ಇಲ್ಲಿ ಕಥಾನಕದ ಅಂಶ ಬರುವುದಿಲ್ಲ.

ಯಕ್ಷಗಾನದಲ್ಲಿ ಭಾಗವತನೇ ಸೂತ್ರಧಾರ. ಕೈಯಲ್ಲಿ ತಾಳ ಅಥವಾ ಜಾಗಟೆ ಹಿಡಿದು ಕಥೆಯ ಪಾತ್ರಕ್ಕನುಗುಣವಾಗಿ ಹಾಡನ್ನು ಹಾಡುತ್ತಾನೆ. ಹಾಡಿನ ಮೇಳಕ್ಕೆ ಮದ್ದಲೆಗಾರ, ಚಂಡೆಗಾರ ಹಾಗೂ ಶ್ರುತಿ ಹಿಡಿಯುವವನು ಸಹಾಯಕರು.

ಯಕ್ಷಗಾನವೆಂಬುದು ಸಂಗೀತ, ನೃತ್ಯ, ಮಾತುಗಾರಿಕೆಗಳ ಸಮ್ಮಿಶ್ರ ಕಲೆ. ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮನೆ ಮಾತಾಗಿರುವ ಈ ಬಯಲಾಟದ ಕಲೆ ತನ್ನದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ.

ಯಕ್ಷಗಾನ ಕಲೆಯನ್ನು ಪ್ರದರ್ಶಿಸುವ ಗುಂಪನ್ನು 'ಮೇಳ' ಎಂದು ಕರೆಯುತ್ತಾರೆ. ಊರಿನ ಪ್ರಮುಖ ದೇವಾಲಯಗಳ ಆಶ್ರಯದಲ್ಲಿ ಇಂತಹ ಮೇಳಗಳವರು ಮಳೆಗಾಲ ಮುಗಿದ ನಂತರ ಸೇವೆಯಾಟವಾಡಿ ಪ್ರವಾಸವನ್ನಾರಂಭಿಸಿ ನಾಲ್ಕೈದು ತಿಂಗಳು ಬೇರೆ ಬೇರೆ ಊರುಗಳಲ್ಲಿ ಕಲೆಯನ್ನು ಪ್ರದರ್ಶಿಸುತ್ತಾರೆ. ಇವರು ರಾಮಾಯಣ ಭಾರತ ಭಾಗವತ ಮುಂತಾದ ಪೌರಾಣಿಕ ಕಥೆಗಳಲ್ಲಿ ಬರುವ ಗದಾಯುದ್ಧ, ಬಭ್ರುವಾಹನ ಕಾಳಗ, ಸುಧನ್ವ ಕಾಳಗ, ತಾಮ್ರಧ್ವಜನ ಕಾಳಗ, ಕಂಸ ವಧೆ, ಭೀಷ್ಮವಿಜಯ, ದ್ರೌಪದೀ ಸ್ವಯಂವರ, ಸುಭದ್ರಾ ಪರಿಣಯ, ರತಿ ಕಲ್ಯಾಣ, ನಳಚರಿತ್ರೆ ಮುಂತಾದ ಪ್ರಸಂಗಗಳನ್ನು ಪ್ರದರ್ಶಿಸುತ್ತಾರೆ. ಪ್ರದರ್ಶನ ಪ್ರವಾಸ ಮುಗಿದ ನಂತರ ತಮ್ಮ ಊರಿನ ದೇವಾಲಯದ ಮುಂದೆ ಮತ್ತೊಮ್ಮೆ ಸೇವೆಯ ಆಟವಾಡಿ ಆ ವರ್ಷದ ಪ್ರದರ್ಶನಕ್ಕೆ ಮಂಗಳ ಹಾಡುತ್ತಾರೆ.

ಬಯಲಾಟದ ವೈಭವವಿರುವುದೇ ವೇಷಭೂಷಣಗಳಲ್ಲಿ. ಈ ವೇಷಭೂಷಣಗಳು ಪ್ರೇಕ್ಷಕರನ್ನು ಭ್ರಮಾಲೋಕಕ್ಕೆ ಕೊಂಡೊಯ್ಯುತ್ತವೆ. ಬಹುತೇಕವಾಗಿ ಈ ವೇಷಭೂಷಣಗಳಲ್ಲಿ ಕೆಲವನ್ನು ಮರದಿಂದಲೂ, ಕೆಲವನ್ನು ಬಟ್ಟೆಯಿಂದಲೂ ತಯಾರಿಸಿರುತ್ತಾರೆ. ಈ ವೇಷಭೂಷಣಗಳು ಪಾತ್ರಗಳಿಗೆ ಅನುಗುಣವಾಗಿ ವಿವಿಧ ಬಗೆಯಲ್ಲಿರುತ್ತವೆ. ಒಂದೊಂದೂ ಕಲಾತ್ಮಕವಾಗಿರುತ್ತದೆ. ಕಿರೀಟ, ಪಗಡೆ, ಕೇದಿಗೆ, ಎದೆಹಾರ, ಭುಜಕೀರ್ತಿ, ಕೈಕಟ್ಟು, ತೋಳಬಂದಿ, ನಡುಗಟ್ಟು, ಕರ್ಣಕುಂಡಲ, ವೀರಗಾಸೆ, ಕಾಲ್ಕಡಗಗಳನ್ನು ಪುರುಷ ಪಾತ್ರಧಾರಿಗಳು ಬಳಸಿದರೆ ಮೂಗುತಿ, ಕೈಬಳೆ, ಝುಲ್ಲರಿಗಳು, ಉಂಗುರ, ಗೆಜ್ಜೆಗಳನ್ನು ಸ್ತ್ರೀಪಾತ್ರಧಾರಿಗಳು ಪ್ರಧಾನವಾಗಿ ಧರಿಸುತ್ತಾರೆ. ಕಿರೀಟವು ಮರದಿಂದ ತಯಾರಾಗಿದ್ದು ಇದರ ಎರಡೂ ಬದಿಗೆ ಅಲಂಕಾರಗಳನ್ನು ಮಾಡಿರುತ್ತಾರೆ. ಕಿರೀಟ ಸುಂದರವಾಗಿ ಕಾಣಲು ಬೇಗಡೆ ಕಾಗದವನ್ನು ಅಂಟಿಸಿ ಅಲ್ಲಲ್ಲಿ ಹೊಳೆಯುವ ಹರಳುಗಳು ಅಥವಾ ಮುತ್ತುಗಳನ್ನು ಜೋಡಿಸಿರುತ್ತಾರೆ.

ವೇಷಧಾರಿಗಳು ಭಾಗವತನ ಹಾಡಿಗೆ ಅನುಗುಣವಾಗಿ ಕುಣಿಯುತ್ತಾರೆ. ಕುಣಿತದಲ್ಲಿ ಅಭಿನಯ, ಪುರುಷ–ಸ್ತ್ರೀ ಪಾತ್ರಧಾರಿಗಳಲ್ಲಿ ವ್ಯತ್ಯಾಸವಿರುತ್ತದೆ. ಯುದ್ಧ, ವೀರ ಪೌರುಷಗಳಲ್ಲಿ ಕುಣಿತದ ಭಾವೋದ್ವೇಗವನ್ನೇ ತೀವ್ರವಾಗಿ ಕಾಣಬಹುದು. ಒಟ್ಟಿನಲ್ಲಿ ವೀರ ರಸ, ರೌದ್ರರಸಗಳೇ ದೊಡ್ಡಾಟದ ಜೀವಾಳ.

ಸಣ್ಣಾಟದ ಪ್ರಸಂಗಗಳು ದೊಡ್ಡಾಟಕ್ಕಿಂತ ಚಿಕ್ಕವು. ಇದು ದೊಡ್ಡಾಟದಂತೆ ರಾತ್ರಿಯಿಡೀ ನಡೆಯುವುದಿಲ್ಲ. ದೊಡ್ಡಾಟದಲ್ಲಿ ಕಾಣುವ ರಂಗಸಜ್ಜಿಕೆಯಾಗಲೀ, ವೇಷಭೂಷಣಗಳಾಗಲೀ ಇಲ್ಲಿ ಇರುವುದಿಲ್ಲ. ಭಕ್ತಿಯ ಕಥೆಗಳೇ ಇಲ್ಲಿಯ



11th_Kannada_Reader_Final_16-07-2018.indd 104 16-07-2018 18:43:05

ವಸ್ತುವಾಗಿದ್ದರೂ ಈಗೀಗ ಸಾಮಾಜಿಕ ಕಥೆಗಳೂ ಪ್ರವೇಶ ಮಾಡುತ್ತಿವೆ. ಸಣ್ಣಾಟವನ್ನು ಶೈವ, ವೈಷ್ಣವ ಸಣ್ಣಾಟಗಳೆಂದು ವಿಭಜಿಸುತ್ತಾರೆ. ಈ ಆಟಗಳೆಲ್ಲವೂ ಹೆಚ್ಚಾಗಿ ಗೀತ ನಾಟಕಗಳೇ ಆಗಿವೆ. ಎಲ್ಲಾ ಆಟಗಳೂ ಬರವಣಿಗೆಯಲ್ಲಿವೆ. ಇಲ್ಲಿನ ನೃತ್ಯಕ್ಕೂ ದೊಡ್ಡಾಟದ ನೃತ್ಯಕ್ಕೂ ಯಾವ ಬಗೆಯ ಸಂಬಂಧವೂ ಇಲ್ಲ. ಒಂದು ಬಗೆಯ ಲಾಸ್ಯ, ನೃತ್ಯ ಇಲ್ಲಿ ಕಂಡು ಬರುತ್ತದೆ. ವೇಷಭೂಷಣಗಳೂ ಸರಳ. ಸಂಭಾಷಣೆಯನ್ನು ಗೀತೆಗಳ ಹಿನ್ನೆಲೆಯಲ್ಲಿ ರಚಿಸಿಕೊಳ್ಳುತ್ತಾರೆ. ರಾಧಾಕೃಷ್ಣರ ಪ್ರಸಂಗವನ್ನು ರಾಧನಾಟವೆಂದೂ, ಅಲ್ಲಮಪ್ರಭು–ಮಾಯೆಯರ ಪ್ರಸಂಗವನ್ನು ಶರಣರಾಟವೆಂದೂ ಕರೆಯುತ್ತಾರೆ.

ಗೋರ ಕುಂಬಾರ, ಭಕ್ತ ಪ್ರಹ್ಲಾದ ಮುಂತಾದ ವೈಷ್ಣವ ಸಂಪ್ರದಾಯದ ಆಟಗಳಂತೆಯೇ ಸಂಗ್ಯಾಬಾಳ್ಯ, ರೂಪಾಸಿಂಗ್, ಮುಕುಂದ ಗೋವಿಂದದಂತಹ ಸಾಮಾಜಿಕ ಆಟಗಳೂ ಸಣ್ಣಾಟದಲ್ಲಿವೆ. ಸಣ್ಣಾಟದಲ್ಲಿ ಹೆಚ್ಚು ಜನಪ್ರಿಯವಾಗಿರುವ ಪ್ರಸಂಗ 'ಶ್ರೀಕೃಷ್ಣಪಾರಿಜಾತ'. ಶ್ರೀಕೃಷ್ಣಭಕ್ತಿಯೇ ಈ ಕೃತಿಯ ಜೀವಾಳ.

ವೈಷ್ಣವರು ಹರಿದಾಸರನ್ನು ಕುರಿತು ಕಥೆ ಕಟ್ಟಿ ಬಯಲಾಟ ಆಡಿದರು. ವೈಷ್ಣವರು ಆಡುವ ಆಟಗಳು ದಾಸರಾಟವೆಂದು ಪ್ರಸಿದ್ಧವಾಗಿವೆ. ಆಟವಾಡುವುದನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡ ವೈಷ್ಣವ ಮೇಳದವರು ಸ್ತ್ರೀಯರೇ ಸ್ತ್ರೀ ಪಾತ್ರವನ್ನು ವಹಿಸುವಂತೆ ಏರ್ಪಾಡು ಮಾಡಿದರು. ಸ್ತ್ರೀ ಪಾತ್ರಧಾರಿಗಳು ಸಾಮಾನ್ಯವಾಗಿ 'ರಾಧನಾಟ'ದಲ್ಲಿ ಭಾಗವಹಿಸುತ್ತಾರೆ. ಶೃಂಗಾರ ಭಕ್ತಿರಸವನ್ನು ಪ್ರಕಟಿಸುವ ಹಾಡುಗಳು, ಸಂಭಾಷಣಾ ರೂಪದಲ್ಲಿರುವುದು ಇದರ ವೈಶಿಷ್ಟ್ಯ. ಸಣ್ಣಾಟವನ್ನು ಗೀತ ನಾಟಕವೆಂದೂ ಕರೆಯುತ್ತಾರೆ. ಹಾಡುಗಳ ಮೂಲಕ ನೀತಿ ಪಾಠವನ್ನೂ, ಮನೋರಂಜನೆಯನ್ನೂ ಒದಗಿಸುವುದೇ ಸಣ್ಣಾಟಗಳ ವಸ್ತು.

ಒಟ್ಟಿನಲ್ಲಿ ದೊಡ್ಡಾಟ, ಸಣ್ಣಾಟಗಳು ಪ್ರಖ್ಯಾತ ದೃಶ್ಯ ಪ್ರಕಾರಗಳು. ಇವುಗಳು ಬಯಲಿನಲ್ಲಿ ರಂಗ ಮಂದಿರಗಳಲ್ಲಿ ವಿಜೃಂಭಣೆಯಿಂದ ಪ್ರದರ್ಶನವಾಗುವ ರಂಗ ಕಲೆಯಾಗಿದೆ. ಪ್ರೇಕ್ಷಕರನ್ನು ಅತ್ಯಂತ ಅನಿರ್ವಚನೀಯವಾದ ಆನಂದಾನುಭವ ಪ್ರಪಂಚಕ್ಕೆ ಎಳೆದೊಯ್ಯುವ ಈ ರಂಗಕಲೆಯು ಅಳಿಯದಿರಲು ನಾವೆಲ್ಲರೂ ಬಯಲಾಟಕ್ಕೆ ಹೋಗೋಣ.

## ಕೃತಿ–ಕರ್ತೃ ವಿಚಾರ

ಕೆ. ಕುಮಾರ್ ಆಚಾರ್ ಅವರು ಚೆನ್ನೈ ನಗರದ ತ್ಯಾಗರಾಯನಗರದಲ್ಲಿರುವ ಕರ್ನಾಟಕ ಸಂಘ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸುಮಾರು ಮುವ್ವತ್ತು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ಇವರ ಹುಟ್ಟೂರು. ಶೈಕ್ಷಣಿಕ ದೃಷ್ಟಿಯಿಂದ ಹುಟ್ಟೂರಿನಿಂದ ಚೆನ್ನೈಗೆ ಆಗಮಿಸಿ, ಮುಂದೆ ಚೆನ್ನೈ ನಗರವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ಚೆನ್ನೈನ ಕನ್ನಡ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ಲೋಕಕ್ಕೂ ತಮ್ಮಿಂದಾದ ಕಿರು ಕೈಂಕರ್ಯವನ್ನು ಸಲ್ಲಿಸಿದ್ದಾರೆ. ಪ್ರಸ್ತುತ ಪಠ್ಯ ಪುಸ್ತಕಕ್ಕಾಗಿ ಈ ಕಿರುಲೇಖನವನ್ನು ಬರೆದಿದ್ದಾರೆ.

## ಕಠಿಣ ಪದಗಳ ಅರ್ಥ

ಪರಿಣತ–ನಿಷ್ಣಾತ; ಮತಿ–ಬುದ್ಧಿ; ಪ್ರಭೇದ–ಪ್ರಕಾರ, ರೀತಿ; ಮೂಡಲ–ಮೂಡಣ, ಪೂರ್ವ; ಪಡುವಲ–ಪಡುವಣ, ಪಶ್ಚಿಮ; ಅಟ್ಟ–ವೇದಿಕೆ; ನಾಂದಿ–ಮೊದಲು; ನೇಪಥ್ಯ–ಹಿನ್ನೆಲೆ; ಹಿಮ್ಮೇಳ–ಹಿಂಭಾಗದಲ್ಲಿದ್ದು ಹಾಡುವವರ ಗುಂಪು; ಸಾತ್ವಿಕ–ಸಾಧು ಸ್ವಭಾವ; ಭ್ರಮೆ–ಬೆರಗಾಗು, ದಿಗ್ಭ್ರಮೆ; ಕೇದಿಗೆ–ತಾಳೆ ಹೂ, ಯಕ್ಷಗಾನದಲ್ಲಿ ಬಳಸುವ ಒಂದು ತೊಡುಗೆ, ಆಭರಣ; ಕರ್ಣಕುಂಡಲ–ಕಿವಿಯ ಆಭರಣ; ವೀರಗಾಸೆ–ವೀರಗಚ್ಚೆ; ಕಡಗ–ದೊಡ್ಡ ಗಾತ್ರದ ಬಳೆ; ಝಲ್ಲರಿ–ಬಲೆಯಂತಹ ಸಿಂಗಾರ ವಸ್ತ್ರ; ಲಾಸ್ಯ–ಶೃಂಗಾರ; ಅನಿರ್ವಚನೀಯ–ವಿವರಿಸಿ ಹೇಳಲು ಶಕ್ತವಲ್ಲದ.



11th_Kannada_Reader_Final_16-07-2018.indd 105 16-07-2018 18:43:05

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಶ್ರೀವಿಜಯನು ಗ್ರಾಮೀಣರ ಬಗ್ಗೆ ಹೇಳಿರುವ ಮಾತೇನು?
2. ಪ್ರಾಚೀನ ರಂಗಭೂಮಿಯ ಜೀವಾಳ ಯಾವುದು?
3. ಬಯಲಾಟದ ಎರಡು ಪ್ರಕಾರಗಳಾವುವು ?
4. ಯಕ್ಷಗಾನ ಬಯಲಾಟದ ವಿವಿಧ ಹೆಸರುಗಳಾವುವು?
5. ಬಯಲಾಟದಲ್ಲಿ ಯಾವುದು ಪ್ರಧಾನವಾಗಿರುತ್ತದೆ ?
6. ಬಯಲಾಟದಲ್ಲಿ ಬಳಕೆಯಾಗುವ ವಾದ್ಯಗಳಾವುವು?
7. ದೊಡ್ಡಾಟದಲ್ಲಿ ಯಾವ ರಸಗಳು ಪ್ರಧಾನವಾಗಿವೆ.?
8. ಸಣ್ಣಾಟವನ್ನು ಯಾವ ಯಾವ ಆಟಗಳೆಂದು ವಿಭಜಿಸುತ್ತಾರೆ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಗ್ರಾಮೀಣ ರಂಗಭೂಮಿಯ ಹುಟ್ಟು, ವಿಕಾಸದ ಕುರಿತು ಬರೆಯಿರಿ.
2. ಮೂಡಲಪಾಯದ ರಂಗ ಸಜ್ಜಿಕೆಯ ವಿಶೇಷತೆಗಳನ್ನು ತಿಳಿಸಿರಿ.
3. ದೊಡ್ಡಾಟದ ವೈಶಿಷ್ಟ್ಯವನ್ನು ವಿವರಿಸಿ.
4. ಸಣ್ಣಾಟದ ವಿವಿಧ ಪ್ರಸಂಗಗಳ ವಿವರಗಳನ್ನು ನೀಡಿರಿ.
5. ಬಯಲಾಟದಲ್ಲಿ ಪುರುಷ ಹಾಗೂ ಸ್ತ್ರೀ ಪಾತ್ರಧಾರಿಗಳು ಏನೇನು ವೇಷಭೂಷಣಗಳನ್ನು ಧರಿಸುತ್ತಾರೆ?
6. ಸಣ್ಣಾಟದ ವೈಶಿಷ್ಟ್ಯವೇನು? ವಿವರಿಸಿ.

## ಚಟುವಟಿಕೆ

1. ದೊಡ್ಡಾಟ–ಸಣ್ಣಾಟ, ಯಕ್ಷಗಾನಕ್ಕೆ ತೊಡುವ ಉಡುಪು, ಆಭರಣಗಳನ್ನು ನೀವೇ ತಯಾರಿಸಿಕೊಂಡು ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಯೋಗಾತ್ಮಕವಾಗಿ ನಟಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರಿ.

2. ತಮಿಳುನಾಡಿನ ಜನಪ್ರಿಯ ಕಲೆಯಾದ ತೆರುಕೂತ್ತನ್ನು ನೋಡಿ, ಆ ಕಲೆಯ ಅದ್ಭುತ ಪ್ರೌಢಿಮೆಯ ಬಗ್ಗೆ ಅರಿತುಕೊಳ್ಳಿರಿ.







11th_Kannada_Reader_Final_16-07-2018.indd 106 16-07-2018 18:43:06

# ಘಟಕ ಐದು

# ದ್ವಿರುಕ್ತಿ, ಅನ್ಯದೇಶ್ಯ, ತತ್ಸಮ–ತದ್ಭವ, ಜೋಡಿಪದ, ಅನುಕರಣವಾಚಕ, ನುಡಿಗಟ್ಟು, ಗಾದೆಗಳು.

## ದ್ವಿರುಕ್ತಿ

ಒಂದೇ ಪದವನ್ನು ಅರ್ಥದ ಪರಿಣಾಮ ಹೆಚ್ಚಿಸಲು ಎರಡು ಸಲ ಬಳಸುವುದನ್ನೇ ದ್ವಿರುಕ್ತಿ ಎನ್ನಲಾಗುವುದು. ಅಭಿವ್ಯಕ್ತಿಯ ವಿಶೇಷತೆ, ಸಂಭ್ರಮ, ತ್ವರೆ, ಆವೃತ್ತಿ, ಎಚ್ಚರಿಕೆ, ವೀಪ್ಸೆ(ವೀಪ್ಸೆ ಎಂದರೆ ಒಂದನ್ನು ಬಿಡದೆ ಹೇಳುವುದು) ಮೊದಲಾದ ವಿಶೇಷವಾದ ಅರ್ಥಗಳು ತೋರುವಾಗ ಒಂದು ಪದವನ್ನಾಗಲೀ, ವಾಕ್ಯವನ್ನಾಗಲೀ ಎರಡೆರಡು ಬಾರಿ ಪ್ರಯೋಗಿಸುತ್ತೇವೆ. ಇದಕ್ಕೆ ದ್ವಿರುಕ್ತಿ ಎಂದು ಹೆಸರು.

ಉದಾಹರಣೆಗೆ:

ಸಂಭ್ರಮ : ಭಲೆಭಲೆ, ಗೆದ್ದೆಗೆದ್ದೆ

ತ್ವರೆ : ಬಂದೆಬಂದೆ, ನಿಲ್ಲುನಿಲ್ಲು

ಎಚ್ಚರಿಕೆ : ಹಳ್ಳಹಳ್ಳ, ಮುಳ್ಳುಮುಳ್ಳು, ಕಲ್ಲುಕಲ್ಲು

ವೀಪ್ಸೆ : ಕೇರಿಕೇರಿಯಲ್ಲಿ, ಮನೆಮನೆಯಲ್ಲಿ

ಲಾಸ್ಯ : ಬೇಗ ಹೋಗು, ಬೇಗಹೋಗು;

ನನಗೆ ಕೊಡು, ನನಗೆ ಕೊಡು.

## ಅನ್ಯದೇಶ್ಯಗಳು

ಯಾವುದೇ ಭಾಷೆಯ ಚರಿತ್ರೆಯನ್ನು ಗಮನಿಸಿದಾಗ ಅದರ ಶಬ್ದಕೋಶಕ್ಕೆ ಕಾಲಕ್ರಮದಲ್ಲಿ ಇತರ ಭಾಷೆಗಳ ಅನೇಕ ಶಬ್ದಗಳು ಸೇರಿಕೊಂಡಿರುವುದು ಕಂಡು ಬರುತ್ತದೆ. ಹೀಗೆ ಬೇರೆ ಭಾಷೆಗಳಿಂದ ಬಂದಿರುವ ಪದಗಳನ್ನು ಅನ್ಯದೇಶ್ಯಗಳೆಂದು ಕರೆಯುವರು.

ಉದಾಹರಣೆಗೆ :

ಅರ್ಜಿ, ಕಛೇರಿ, ಜಮೀನು, ಕಾರ್ಖಾನೆ, ಕಾಗದ, ರೈಲು, ಬ್ಯಾಂಕ್, ಕೋರ್ಟು, ಹೋಟೆಲ್, ಕವರ್, ಸ್ಕೂಟರ್, ದವಾಖಾನೆ, ಕುರ್ಚಿ, ಬೆಂಚ್ ಇತ್ಯಾದಿ.

ಇದರಲ್ಲೂ ಮುಖ್ಯವಾಗಿ ಸಂಸ್ಕೃತದಿಂದ ಕನ್ನಡಕ್ಕೆ ಹಲವು ಪದಗಳು ಬಂದು ಸೇರಿವೆ. ಅವುಗಳನ್ನು ತತ್ಸಮ–ತದ್ಭವಗಳೆಂಬ ಹೆಸರಿನಿಂದ ಗುರುತಿಸುತ್ತೇವೆ.

## ತತ್ಸಮ–ತದ್ಭವ

ತತ್ಸಮ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದರ್ಥ. ತದ್ಭವ ಎಂದರೆ ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡಕ್ಕೆ ಪರಿವರ್ತನೆ ಮಾಡಿಕೊಂಡ ಪದ ಅಥವಾ ಸಂಸ್ಕೃತದಿಂದ ಹುಟ್ಟಿದ ಪದ ಎಂದು ಅರ್ಥ. ಸಂಸ್ಕೃತ



11th_Kannada_Reader_Final_16-07-2018.indd 107 16-07-2018 18:43:06

ಭಾಷೆಯ ಶಬ್ದವನ್ನು ಅದು ಇರುವಂತೆಯೇ ಅಥವಾ ಕಡೆಯಲ್ಲಿ ಬದಲಾವಣೆಯೊಂದಿಗೆ ಕನ್ನಡದಲ್ಲಿ ಬಳಸಿದರೆ ಅಂತಹ ಪದಗಳನ್ನು ತತ್ಸಮ ಅಥವಾ ಸಮಸಂಸ್ಕೃತಗಳೆಂದು ಕರೆಯುತ್ತಾರೆ.

ಉದಾಹರಣೆಗೆ :

ಸೀತೆ, ದೇವತೆ, ಗಂಗೆ, ಯಶ, ರಾಜ, ವಿಪತ್ತು ಇತ್ಯಾದಿ.

ಸಂಸ್ಕೃತದಿಂದ ರೂಪ ವ್ಯತ್ಯಾಸಗೊಂಡು ಕನ್ನಡದಲ್ಲಿ ಬಳಕೆಯಲ್ಲಿರುವ ಪದಗಳಿಗೆ ತದ್ಭವಗಳೆಂದು ಹೆಸರು.

ಉದಾಹರಣೆಗೆ :

| **ತತ್ಸಮ** | **ತದ್ಭವ** |
|---|---|
| ಆಕಾಶ | ಆಗಸ |
| ಅಟವಿ | ಅಡವಿ |
| ಶರ್ಕರಾ | ಸಕ್ಕರೆ |
| ವಿದ್ಯೆ | ಬಿಜ್ಜೆ |
| ಕಾರ್ಯ | ಕಜ್ಜ |
| ಕಾವ್ಯ | ಕಬ್ಬ |
| ನಿತ್ಯ | ನಿಚ್ಚ |

## ಜೋಡಿ ಪದಗಳು

ಭಾಷೆಯಲ್ಲಿ ತಮ್ಮ ವಿಚಾರಗಳನ್ನು ಹೆಚ್ಚು ಅರ್ಥೈಸಿಕೊಳ್ಳಲು ಹಲವು ಬಾರಿ ಪದಗಳ ಜೋಡಣೆಯನ್ನು ಮಾಡಿಕೊಂಡಿದ್ದೇವೆ. ಅಂತಹ ಅರ್ಥಪೂರ್ಣ ಪದಗಳ ಹಿಂಡನ್ನು ಜೋಡು ಪದಗಳೆನ್ನುವರು.

ಉದಾಹರಣೆಗೆ : ದಷ್ಟಪುಷ್ಟ, ಲಾಲನೆಪಾಲನೆ, ಅರ್ಧಂಬರ್ಧ, ತಳಬುಡ.

## ಅನುಕರಣ ವಾಚಕಗಳು

ಪ್ರಕೃತಿಯಲ್ಲಿ ಕೇಳುವ ಕಾಣುವ ಧ್ವನಿಗಳನ್ನು ಭಾಷೆಯಲ್ಲಿ ಹಲವು ಬಾರಿ ಉಪಯೋಗಿಸುತ್ತೇವೆ. ಆ ಬಗೆಯ ಧ್ವನಿಮಾಗಳನ್ನು ಅನುಕರಣ ವಾಚಕಗಳೆಂದು ಕರೆಯಲಾಗಿದೆ.

ಉದಾಹರಣೆಗೆ :

ಢವಢವ, ಕಿರ್ರನೆ, ಗಕ್ಕನೆ, ಲೊಚಲೊಚ, ಕಿಲಕಿಲ, ಥಟಕ್ಕನೆ, ಪಿಸಿಪಿಸಿ ಇತ್ಯಾದಿ.

## ನುಡಿಗಟ್ಟುಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥವತ್ತಾಗಿ ಸೇರಿ ವಿಶೇಷ ಪದವಾದರೆ ನುಡಿಗಟ್ಟು ಎನ್ನಿಸುವುದು. ಇಲ್ಲಿ ಬಳಕೆಯಾದ ಪ್ರತ್ಯೇಕಪದಗಳ ಅರ್ಥಕ್ಕೂ, ನುಡಿಗಟ್ಟಿನ ಅರ್ಥಕ್ಕೂ ಸಾಕಷ್ಟು ವ್ಯತ್ಯಾಸವಿರುತ್ತದೆ.

ಉದಾಹರಣೆಗೆ :

ಲೆಕ್ಕ ಹಾಕು. ಇದರ ಶಾಬ್ದಿಕ ಅರ್ಥ ಎಣಿಸು ಎಂದಾಗುತ್ತದೆ. ಆದರೆ ನುಡಿಗಟ್ಟಿನ ವಾಸ್ತವಿಕ ಅರ್ಥ, 'ಚಿಂತಿಸು, ಆಲೋಚಿಸು' ಎಂದಾಗುತ್ತದೆ.



11th_Kannada_Reader_Final_16-07-2018.indd 108 16-07-2018 18:43:06

## ಕೆಲವು ಪ್ರಚಲಿತ ನುಡಿಗಟ್ಟುಗಳು

ಅಗ್ನಿಪರೀಕ್ಷೆ–ಕಠಿಣವಾದ ಸಂದರ್ಭ
ಅನ್ನದ ಋಣ–ಆಯಸ್ಸು, ಜೀವನ ಕಾಲ
ಅರ್ಧಜೀವ–ಬಹಳತೊಂದರೆ ಪಡು
ಆಕಾಶ ಮುಟ್ಟು–ಬಹಳ ಎತ್ತರವಾಗು
ಆಳಿನ ಮೇಲೆ ಬೀಳು–ಬಹಳ ಜನ ಸೇರಿ ಕೆಲಸ ಮಾಡು
ಇಕ್ಕಳ ಹಾಕು–ಅಡ್ಡಿ ಮಾಡು
ಉಗುಳು ದಾಟು–ಮಾತು ಮೀರು
ಉತ್ತರಕುಮಾರ–ಹೇಡಿ
ಉಸಿರು ಅಡಗಿಸು–ನಾಶಪಡಿಸು
ಎಂಟೆದೆ–ಧೈರ್ಯ
ಎದೆಯೊಡೆ–ಧೈರ್ಯಗುಂದು
ಎದೆ ಭಾರವಾಗು–ದುಃಖವಾಗು
ಎರಡುಬಗೆ–ಮೋಸಮಾಡು
ಒಡೆದ ಕನ್ನಡಿ–ಸರಿಪಡಿಸಲಾಗದ ಸ್ಥಿತಿ
ಕಂಚಿನ ಕಂಠ–ದೊಡ್ಡ ಧ್ವನಿ
ಭರತವಾಕ್ಯ–ಕೊನೆಯ ಮಾತು
ಕಂಬಿಕೀಳು–ಓಡಿಹೋಗು
ಕವಳ ಕತ್ತರಿಸು–ಬಿಟ್ಟು ಊಟ ಮಾಡು
ಕೈಹಾಕು–ಆರಂಭ ಮಾಡು
ಗಂಟುಕರಗು–ಖರ್ಚಾಗು
ಗಾಡಿ ಬಿಡು–ಹೊರಟು ಹೋಗು
ಚಾಣಕ್ಯ–ತಂತ್ರಗಾರ
ಜಪಮಾಡು–ಒಂದೇ ಸಮನೆ ಚಿಂತಿಸು
ಜೀವಹಿಡಿ–ಸಹನೆಯಿಂದ ಇರು
ಮೋಡಿ ಹಾಕು–ಮೋಸ ಮಾಡು
ತಲೆಕೆಡು–ಬುದ್ಧಿಭ್ರಮಣೆಯಾಗು
ದಿಕ್ಕುತಪ್ಪಿಸು–ತಪ್ಪುದಾರಿಗೆ ಒಯ್ಯಿ
ದೌಲತ್ತು ಮಾಡು–ಅಧಿಕಾರ ಚಲಾಯಿಸು
ಧ್ವಜ ಊರು–ಇದ್ದಲ್ಲಿಯೇ ನೆಲೆಯಾಗು
ನಮಹಾಕು–ಮೋಸ ಮಾಡು
ನಿದ್ದೆ ಹರಿ–ಎಚ್ಚರವಾಗು
ನ್ಯಾಯ ತೀರಿಸು–ಇತ್ಯರ್ಥ ಪಡಿಸು
ಪುಂಗಿಊದು–ಪ್ರಭಾವ ಬೀರು
ಬಗ್ಗು ಬಡಿ–ಸುಮ್ಮನಿರಿಸು, ನಾಶಮಾಡು.
ಬೆಕ್ಕು ಅಡ್ಡಬರುವುದು–ಅಪಶಕುನವಾಗು
ಮಟ್ಟ ಹಾಕು–ನಾಶಮಾಡು
ಮಾತುತಪ್ಪು–ಕೊಟ್ಟ ಮಾತನ್ನು ಉಳಿಸಿಕೊಳ್ಳದಿರುವುದು
ಯಮಭಾರ–ಅತಿಯಾದ ಭಾರ
ರಕ್ತಕುದಿ–ಅತಿಯಾಗಿ ಕೋಪಗೊಳ್ಳು
ರೆಕ್ಕೆಮೂಡು–ಉತ್ಸಾಹಗೊಳ್ಳು
ಲೆಕ್ಕಕ್ಕೆ ಬರುವುದು–ಗಮನಕ್ಕೆ ಬರುವುದು
ವಿಷ ಕಕ್ಕುವುದು–ಅಸೂಯೆ ಪಡುವುದು
ಶತಮೊಂಡ–ಹಠಮಾರಿ

## ಗಾದೆಗಳು

ಜನಪದರ ವೇದಗಳೆಂದೇ ಹೆಸರಾದ ಅನುಭವದ ನುಡಿಗಳು. ಸಿಂಧುವನ್ನು ಬಿಂದುವಿನಲ್ಲಿ ಹಿಡಿದಿಡುವ ಮಹತ್ತರವಾದ ಕಾರ್ಯವನ್ನು ಗಾದೆಗಳು ಮಾಡುತ್ತವೆ. ಇವು ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗಿರದೆ ಸಮಷ್ಟಿ ಪ್ರಜ್ಞೆಯನ್ನು ತೋರುತ್ತವೆ. ಗಾದೆಗಳ ಅರ್ಥವನ್ನು ಅರಿತು ಸಾರ್ಥಕ ಅರ್ಥವನ್ನು ರೂಪಿಸಿಕೊಳ್ಳಲು ಸಾಧ್ಯವಿದೆ.

ಗಾದೆಗಳಲ್ಲಿ ಮೇಲ್ನೋಟಕ್ಕೆ ಕಾಣುವ ಅರ್ಥ ಒಂದಿದ್ದರೆ ಅವುಗಳ ಒಳ ಅರ್ಥ ಬೇರೆಯದೇ ಆಗಿರುತ್ತದೆ. ಇವುಗಳ ಒಳ ಅರ್ಥವನ್ನು ಗ್ರಹಿಸುವ ಪ್ರಯತ್ನ ನಮ್ಮದಾಗಬೇಕು.

ಮನಸ್ಸಿದ್ದರೆ ಮಾರ್ಗ



11th_Kannada_Reader_Final_16-07-2018.indd 109 16-07-2018 18:43:06

## ಕೆಲವು ಪ್ರಸಿದ್ಧ ಗಾದೆಗಳು

ಕೈಕೆಸರಾದರೆ ಬಾಯಿ ಮೊಸರು
ಅಟ್ಟಕ್ಕೆ ಹಾರದವ ಬೆಟ್ಟಕ್ಕೆ ಹಾರಿಯಾನೆ?
ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು
ಅತಿಯಾಸೆ ಗತಿಗೇಡು
ಆಪತ್ತಿಗಾದವನೇ ನಂಟ
ಕೊಟ್ಟದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ
ಹಾಸಿಗೆ ಇದ್ದಷ್ಟು ಕಾಲು ಚಾಚು
ದುಡ್ಡೇ ದೊಡ್ಡಪ್ಪ, ವಿದ್ಯೆ ಅದರಪ್ಪ
ಕೆಟ್ಟ ಮೇಲೆ ಬುದ್ಧಿ ಬಂತು
ಬೆಳೆವ ಸಿರಿ ಮೊಳಕೆಯಲ್ಲಿ
ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?
ನಾಳೆಯೆಂಬುದು ಹಾಳು
ಮಾತು ಬೆಳ್ಳಿ, ಮೌನ ಬಂಗಾರ
ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ
ಅಲ್ಪರ ಸಂಗ, ಅಭಿಮಾನ ಭಂಗ
ಸಜ್ಜನರ ಸಂಗ ಹೆಜ್ಜೇನು ಸವಿದಂತೆ
ಮಾಡಿದ್ದುಣ್ಣೋ ಮಹರಾಯ
ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು
ಕುಲಕ್ಕೆ ಮೃತ್ಯು ಕೊಡಲಿ ಕಾವು
ಹೊಳೆಯುವುದೆಲ್ಲಾ ಬಂಗಾರವಲ್ಲ
ಆಳಾಗಿ ದುಡಿ, ಅರಸಾಗಿ ಉಣ್ಣು
ಶಕ್ತಿಗಿಂತ ಯುಕ್ತಿ ಮೇಲು
ಮನೆಗೆ ಮಾರಿ, ಪರರಿಗೆ ಉಪಕಾರಿ

## ಗಾದೆಗಳ ವಿಸ್ತರಣೆ(ಮಾದರಿ)

### 1. ಮನಸ್ಸಿದ್ದರೆ ಮಾರ್ಗ

ಯಾವುದೇ ಕೆಲಸವನ್ನು ಮಾಡಲು ದೃಢವಾದ ನಿರ್ಧಾರ ಬೇಕು. ಇಂತಹ ನಿರ್ಧಾರದಿಂದ ಕೆಲಸವನ್ನು ಸಫಲವಾಗಿ ಮಾಡಬಹುದೆಂದು ಈ ಗಾದೆ ಹೇಳುತ್ತದೆ. ಕೆಲಸ ಮಾಡುವಾಗ ಅದರ ಬಗ್ಗೆ ಆಸಕ್ತಿ, ನಿಷ್ಠೆ ಇದ್ದರೆ ಇನ್ನೂ ಸುಲಭವಾಗಿ ಆ ಕೆಲಸವನ್ನು ಸಾಧಿಸಬಹುದು. 'Where there is a will, there is a way' ಎಂಬ ಆಂಗ್ಲ ಗಾದೆಯೂ ಇದನ್ನೇ ಹೇಳುತ್ತದೆ. ಮನಸ್ಸಿಟ್ಟು ಕೆಲಸ ಮಾಡಿದರೆ ಬೆಟ್ಟವನ್ನೂ ಸಹ ಕುಟ್ಟಿ ಪುಡಿ ಮಾಡಬಹುದು.

### 2. ಶಕ್ತಿಗಿಂತ ಯುಕ್ತಿ ಮೇಲು

ದೈಹಿಕ ಶಕ್ತಿಗಿಂತ ಹೆಚ್ಚು ಸಮರ್ಥವಾದುದು ಬುದ್ಧಿಶಕ್ತಿ. ಬೌದ್ಧಿಕ ಸಾಮರ್ಥ್ಯದಿಂದ ಎಂತಹ ಕಷ್ಟಕರ ಸಮಸ್ಯೆಯನ್ನೂ ಸಹ ಸುಲಭವಾಗಿ ಮಾಡಿ ಮುಗಿಸಬಹುದು. ಕಥೆಯೊಂದರಲ್ಲಿ ಬರುವ ಮೊಲವು ತನ್ನ ಬುದ್ಧಿಶಕ್ತಿಯಿಂದ ಬಲಿಷ್ಠ ಸಿಂಹವನ್ನೇ ನಾಶ ಮಾಡಿತು. ಶಕ್ತಿಯಿದ್ದರೂ ಬುದ್ಧಿಯ ಪ್ರಭಾವವಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಶಕ್ತಿಗಿಂತ ಯುಕ್ತಿ ಮೇಲು ಎಂಬುದು ಈ ಗಾದೆಯ ಅರ್ಥ.



11th_Kannada_Reader_Final_16-07-2018.indd 110 16-07-2018 18:43:07

ಘಟಕ
ಆರು

# ನಾಗರಿಕತೆ/ಸಂಸ್ಕೃತಿ



**ಪದ್ಯ :** ಸೋಮೇಶ್ವರ ಶತಕ – ಪುಲಿಗೆರೆ ಸೋಮನಾಥ.

**ಗದ್ಯ :** ಕರ್ನಾಟಕದ ಪುರಾತನ ಸಂಸ್ಕೃತಿಯ ಒಂದು ಮುಖ – ಡಾ.ಕೆ.ಶಿವರಾಮ ಕಾರಂತ

**ಉಪಪಠ್ಯ :** ಯಯಾತಿ(ನಾಟಕ) –ಗಿರೀಶ್ ಕಾರ್ನಾಡ್

**ವ್ಯಾಕರಣ :** ಸಂಧಿಗಳು



11th_Kannada_Reader_Final_16-07-2018.indd 111 16-07-2018 18:43:07

ಘಟಕ ಆರು

# ಸೋಮೇಶ್ವರ ಶತಕ

– ಪುಲಿಗೆರೆ ಸೋಮನಾಥ




ಸೋಮೇಶ್ವರ ಶತಕವು ನೀತಿ ಬೋಧಕವಾದ ಗ್ರಂಥ. ಇದರಲ್ಲಿ 107 ಪದ್ಯಗಳಿದ್ದು ಪ್ರತಿ ಪದ್ಯವೂ 'ಹರಹರಾ ಶ್ರೀಚನ್ನಸೋಮೇಶ್ವರಾ' ಎಂದು ಮುಗಿಯುತ್ತದೆ. ಒಂದೊಂದು ಪದ್ಯದಲ್ಲಿಯೂ ಒಂದೊಂದು ವಿಷಯದ ಬಗ್ಗೆ ತಿಳಿಸಿದ್ದಾರೆ. ಮನುಷ್ಯನು ಜ್ಞಾನಿಯಾಗಲು ಬಲ್ಲವರಿಂದ, ಹಿರಿಯರಿಂದ ಜ್ಞಾನಿಗಳಿಂದ ತಿಳಿಯಬೇಕು. ಹೊಟ್ಟೆಯಲ್ಲಿ ಕೆಸರು ತುಂಬಿಕೊಂಡು ಮೇಲೆ ದೇಹವನ್ನು ತೊಳೆದರೆ ಮನುಷ್ಯನು ಶುದ್ಧನಾಗಲಾರ. ಬಂಡೆಯನ್ನು ಸೀಳಬೇಕಾದರೆ ಉಪಾಯದಿಂದ ಸೀಳಬೇಕು. ದೇಹಬಲಕ್ಕಿಂತ ಬುದ್ಧಿಬಲ ಹೆಚ್ಚು. ತಂದೆತಾಯಿಯನ್ನು ನೋಡಿಕೊಳ್ಳದ ಮಗ, ಪೈರು ಒಣಗಿದ ಮೇಲೆ ಮಳೆ ಬಂದರೆ ವ್ಯರ್ಥ. ಯುದ್ಧ ಬಲ್ಲವನಾದರೆ ಸೈನಿಕನಾಗು; ಬುದ್ಧಿ ಚಮತ್ಕಾರವಿದ್ದರೆ ಮಂತ್ರಿಯಾಗು; ತಾಳ್ಮೆಯಿದ್ದರೆ ರಾಜನಾಗು; ವೈರಿಗಳನ್ನು ಗೆಲ್ಲುವುದಾದರೆ ಯೋಗಿಯಾಗು –ಎಂದು ಇಲ್ಲಿನ ಪದ್ಯಗಳಲ್ಲಿ ತಿಳಿಸಲಾಗಿದೆ.

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಗದಿಂದರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೧ ॥

ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ
ಕಡು ಪಾಪಂ ಬಲು ಮೀಯಲಾತ ಶುಚಿಯೇ ಕಾಕಾಳಿ ತಾಂ ಮೀಯದೆ
ಗುಡಪಾನಂಗಳೊಳದ್ದೆ ಬೇವಿನ ಫಲಂ ಸ್ವಾದಪ್ಪುದೇ ಲೋಕದೊಳ್
ನುಡಿಯೇ ನಿರ್ಮಲ ಚಿತ್ತವೈ ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೨ ॥



11th_Kannada_Reader_Final_16-07-2018.indd 112 16-07-2018 18:43:07

ಅರೆಯಂ ಸೀಳುವೊಡಾನೆ ಮೆಟ್ಟಲಹುದೇ ಚಾಣಂಗಳಿಂದಲ್ಲದೇ
ಕಿರುದಾಗಿರ್ದೊಡದೇನುಪಾಯಪರನೋರ್ವಂ ಕೋಟಿಗೀಡಕ್ಕು ಹೆ
ಮ್ಮರನಿರ್ದೇನದರಿಂದಲೆತ್ತಬಹುದೇ ಬಲ್ಪಾರಮಂ ಸನ್ನೆ ಸಾ
ವಿರ ಕಾಲಾಳಿನ ಸತ್ವವೈ ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೩ ॥

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ
ಒಣಗಲ್ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನಾಪತ್ತಿನೊಳ್
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ
ತೃಣವೇ ಪರ್ವತವಲ್ಲವೇ ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೪ ॥

ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ ನಾನಾ ಚಮತ್ಕಾರಮಂ
ಅರಿಯಲ್ ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ ಕೋಪಮಂ
ತೊರೆಯಲ್ ಬಲ್ಲೊಡೆ ಯೋಗಿಯಪ್ಪುದರಿಷಡ್ವರ್ಗಂಗಳಂ ಗೆಲ್ವೊಡೇ
ತರ ಬಲ್ಲರ್ಪೊಣೆಯಪ್ಪುದೈ ಹರಹರಾ ಶ್ರೀ ಚನ್ನಸೋಮೇಶ್ವರಾ ॥ ೫ ॥



11th_Kannada_Reader_Final_16-07-2018.indd 113 16-07-2018 18:43:07

## ಕವಿ–ಕಾವ್ಯ ವಿಚಾರ

ಪುಲಿಗೆರೆ ಸೋಮನಾಥನು (ಕ್ರಿ.ಶ.ಸುಮಾರು 1299) ಧಾರವಾಢ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆಯವನು. ಪುಲಿಗೆರೆಯು ಈಗಿನ ಲಕ್ಷ್ಮೇಶ್ವರ. ಸಂಸ್ಕೃತ ಮತ್ತು ಕನ್ನಡ ಭಾಷಾ ಪಂಡಿತನಾಗಿದ್ದ ಈತ 'ಸೋಮೇಶ್ವರ ಶತಕ' ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದೊಂದು ನೀತಿಬೋಧಕ ಗ್ರಂಥ. 'ಹರಹರಾ ಶ್ರೀ ಚನ್ನಸೋಮೇಶ್ವರಾ' ಎಂಬುದು ಈತನ ಅಂಕಿತ ನಾಮ.

ಪ್ರಸ್ತುತ ಈ ಪದ್ಯಗಳನ್ನು ಈತನ 'ಸೋಮೇಶ್ವರ ಶತಕ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ. ಹಲವು ಹಳ್ಳಗಳು ಸೇರಿ ಹೇಗೆ ಸಮುದ್ರವಾಗುತ್ತವೆಯೋ ಹಾಗೆ ಹಲವು ಮಾರ್ಗಗಳಿಂದ ಜ್ಞಾನವನ್ನು ಸಂಪಾದಿಸಿ ಸರ್ವಜ್ಞನಾಗಬೇಕು. ಬಾಹ್ಯ ಸ್ವಚ್ಛತೆಗಿಂತ ಅಂತಃಸತ್ವ ಗುಣ, ಮನಸ್ಸಿನ ಶುದ್ಧಿ ಮುಖ್ಯ. ದೇಹಬಲಕ್ಕಿಂತ ಬುದ್ಧಿಬಲ ಮುಖ್ಯ. ಶಕ್ತಿಗಿಂತ ಯುಕ್ತಿ ಮೇಲು. ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠವಾದುದು. ಯಾವುದೇ ಕೆಲಸವನ್ನು ನಿರ್ವಹಿಸಲು ಸಾಮರ್ಥ್ಯ, ಅರ್ಹತೆಯುಳ್ಳವನೇ ಅದರ ಹೊಣೆಯನ್ನು ನಿರ್ವಹಿಸಬೇಕು ಎಂಬ ಆಶಯ ಈ ಪದ್ಯಗಳಲ್ಲಿದೆ.

## ಸಾರಾಂಶ

1. ಮನುಷ್ಯನು ಜ್ಞಾನಿಯಾಗಲು ಕೆಲವು ವಿಷಯಗಳನ್ನು ಬಲ್ಲವರಿಂದ ಹೇಳಿಸಿಕೊಂಡು ಕಲಿಯಬೇಕು. ಕೆಲವು ವಿಷಯಗಳನ್ನು ಶಾಸ್ತ್ರ ಗ್ರಂಥಗಳನ್ನು ಓದುವ, ಕೇಳುವ ಮೂಲಕ ತಿಳಿಯಬೇಕು. ಕೆಲವನ್ನು ಮಾಡುವವರನ್ನು ನೋಡಿ ಕಲಿಯಬೇಕು. ಕೆಲವನ್ನು ವಿಚಾರದೃಷ್ಟಿಯಿಂದಲೂ, ಕೆಲವನ್ನು ಸ್ವಬುದ್ಧಿಯಿಂದಲೂ, ಜ್ಞಾನಬಲದಿಂದಲೂ ಕಲಿಯಬೇಕು. ಕೆಲವು ವಿಚಾರಗಳನ್ನು ಸಜ್ಜನರ ಸಹವಾಸದಿಂದಲೂ ಅರಿತುಕೊಳ್ಳಬೇಕು. ಆಗ ಮನುಷ್ಯನು ಹಲವು ಹಳ್ಳಗಳು ಸೇರಿ ಸಮುದ್ರವಾಗುವಂತೆ ಹಲವು ವಿಚಾರಗಳನ್ನು ಅರಿತು ಸರ್ವಜ್ಞಾನ ಸಂಪನ್ನನಾಗಿ ಸರ್ವಜ್ಞನಾಗುತ್ತಾನೆ ಎಂದು ಕವಿ ಮನುಷ್ಯನು ಜ್ಞಾನ ಗಳಿಸಿ ಸರ್ವಜ್ಞನಾಗುವ ಬಗೆಯಲ್ಲಿ ಈ ಪದ್ಯದಲ್ಲಿ ತಿಳಿಸಿದ್ದಾನೆ.

2. ಹೊಟ್ಟೆಯಲ್ಲಿ ಕೆಸರು ತುಂಬಿಕೊಂಡು ಮೇಲೆ ದೇಹವನ್ನು ತೊಳೆದರೆ ಮನುಷ್ಯನು ಶುದ್ಧನಾಗಲಾರ. ಹಲವಾರು ಪಾಪದ ಕಾರ್ಯಗಳನ್ನು ಮಾಡಿ ಕಡು ಪಾಪಿಯಾದವನು ಎಷ್ಟೇ ಸ್ನಾನ ಮಾಡಿದರೂ ಆ ಪಾಪ ಹೋಗುವುದಿಲ್ಲ. ಕಾಗೆಗಳೂ ಸಹ ನೀರಿನಲ್ಲಿ ಸ್ನಾನ ಮಾಡುತ್ತವೆ. ಆದರೆ ಫಲವೇನು ? ಬೆಲ್ಲದ ಪಾನಕದಲ್ಲಿ ಬೇವಿನ ಹಣ್ಣನ್ನು ಅದ್ದಿದರೂ ಅದು ರುಚಿಯೆನಿಸುವುದಿಲ್ಲ. ಆದ್ದರಿಂದ ಮನಃಶುದ್ಧಿಯೇ ಮಡಿಯಲ್ಲದೆ ಬೇರೆ ಮಡಿಯಿಲ್ಲ. ನಿರ್ಮಲಚಿತ್ತವೇ ನಿಜವಾದ ಮಡಿ ಎಂದು ಇಲ್ಲಿ ಕವಿ ಬಾಹ್ಯ ಸ್ವಚ್ಛತೆಗಿಂತ ಅತಃಸ್ವತ್ವ ಗುಣ, ಮನಸ್ಸಿನ ಶುದ್ಧಿ ಮುಖ್ಯ ಎಂಬುದನ್ನು ತಿಳಿಸುತ್ತಾನೆ.

3. ಬಂಡೆಯನ್ನು ಸೀಳಬೇಕಾದರೆ ಸಣ್ಣದಾಗಿರುವ ಚಾಣ(ಉಳಿ)ದಿಂದ ಸೀಳಬಹುದೇ ಹೊರತು ದೊಡ್ಡದಾಗಿರುವ ಆನೆ ತುಳಿದರೆ ಬಂಡೆ ಒಡೆಯುವುದಿಲ್ಲ. ಯಾವನು ಉಪಾಯದಿಂದ ಕಾರ್ಯ ಸಾಧಿಸುವನೋ ಅವನು ಕೋಟಿ ಜನರಿಗೆ ಸಮ. ದೊಡ್ಡ ಭಾರವನ್ನು ಮೇಲಕ್ಕೆತ್ತಬೇಕಾದರೆ ಸನ್ನೆಯಿಂದಲ್ಲದೆ ದೊಡ್ಡ ಮರದಿಂದ ಸಾಧ್ಯವಾಗಲಾರದು. ಸನ್ನೆಗೆ ಸಾವಿರ ಸೈನಿಕರ ಬಲವಿರುತ್ತದೆ. ದೇಹ ಬಲಕ್ಕಿಂತ ಸೂಕ್ಷ್ಮಮತಿಗಳ ಬುದ್ಧಿಬಲ ಮುಖ್ಯ. ಆದ್ದರಿಂದ ಶಕ್ತಿಗಿಂತ ಯುಕ್ತಿಗೆ ಪ್ರಾಮುಖ್ಯತೆ ಕೊಡಬೇಕೆಂಬುದು ಕವಿಯ ಆಶಯವಾಗಿದೆ.

4. ಹೊಟ್ಟೆಗೆ ತಿನ್ನಲಾಗದ ದುಡ್ಡು ಎಷ್ಟಿದ್ದರೇನು ? ಮುಪ್ಪಿನಲ್ಲಿ ತಂದೆ ತಾಯಿಯರನ್ನು ನೋಡಿಕೊಳ್ಳದ ಮಗನಿದ್ದೇನು ? ಪೈರು ಒಣಗಿದ ಮೇಲೆ ಮಳೆ ಬಂದು ಪ್ರಯೋಜನವೇನು ? ಅದು ವ್ಯರ್ಥ. ಹಳೆಯ ದ್ವೇಷವನ್ನು ಮರೆತು ಕಷ್ಟ ಕಾಲದಲ್ಲಿ ಆಸರೆಯಾಗದ ಬಂಧುಗಳಿದ್ದೇನು



11th_Kannada_Reader_Final_16-07-2018.indd 114 16-07-2018 18:43:07

ಪ್ರಯೋಜನ ? ಯೋಚಿಸಿ ನೋಡಿದರೆ ಕಷ್ಟದ ಸಮಯದಲ್ಲಿ ದೊರೆತ ಒಂದು ಹುಲ್ಲಿಕಡ್ಡಿಯಷ್ಟು ಸಹಾಯವೂ ಕೂಡ ಪರ್ವತದಂತಿರುತ್ತದೆ ಎಂದು ಕವಿ ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠವಾದದ್ದು ಎಂಬ ಸತ್ಯವನ್ನು ಸಾರಿದ್ದಾನೆ.

5. ಯುದ್ಧ ಮಾಡುವ ಕಲೆಯನ್ನು ಬಲ್ಲವನಾದರೆ ಯುದ್ಧದಲ್ಲಿ ಜಯಿಸುವ ಸೈನಿಕನಾಗು; ಎಲ್ಲಾ ರೀತಿಯ ಬುದ್ಧಿ ಚಮತ್ಕಾರಗಳನ್ನು ಬಲ್ಲವನಾದರೆ ಮಂತ್ರಿಯಾಗು; ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಆಳುವವನಾದರೆ ರಾಜನಾಗು; ಕಾಮ ಕ್ರೋಧ ಮೊದಲಾದ ಆರು ವೈರಿಗಳನ್ನು ಗೆಲ್ಲುವುದಾದರೆ ಯೋಗಿಯಾಗು; ದಂಡ ತೆರುವ ಯೋಗ್ಯತೆಯಿದ್ದವನೇ ಮತ್ತೊಬ್ಬರ ಸಾಲಕ್ಕೆ ಹೊಣೆಯಾಗಬೇಕು. ಯಾವುದೇ ಕೆಲಸವನ್ನು ನಿರ್ವಹಿಸಲು ಸಾಮರ್ಥ್ಯ ಅರ್ಹತೆ ಇರುವವನೇ ಆ ಕೆಲಸವನ್ನು ನಿರ್ವಹಿಸಬೇಕು ಎಂದು ಕವಿ ಇಲ್ಲಿ ಹೇಳುತ್ತಾನೆ.

## ಕಠಿಣ ಪದಗಳ ಅರ್ಥ

1. ಕೆಲವಂ–ಕೆಲವನ್ನು; ಬಲ್ಲವರು–ತಿಳಿದವರು, ಜ್ಞಾನಿಗಳು; ಕಲ್ತು–ಕಲಿತು; ಶಾಸ್ತ್ರ–ಸಂಪ್ರದಾಯ, ಆಚರಣೆ, ನಿಯಮ, ಮತ, ವಿಜ್ಞಾನ ಮುಂತಾದವುಗಳ ಬಗೆಗೆ ಬರೆದ ಗ್ರಂಥ; ಮಾಳ್ಪವರು–ಮಾಡುವವರು, ಆಚರಿಸುವವರು; ಸುಜ್ಞಾನ–ಉತ್ತಮವಾದ ತಿಳುವಳಿಕೆ; ಸಜ್ಜನರು–ಒಳ್ಳೆಯವರು; ಸಂಗ–ಸಹವಾಸ, ಒಡನಾಟ; ಅರಿಯಲ್–ತಿಳಿದುಕೊಂಡಾಗ; ಸರ್ವಜ್ಞನಪ್ಪಂ–ಸರ್ವಜ್ಞನಾಗುತ್ತಾನೆ, ಎಲ್ಲವನ್ನೂ ತಿಳಿದವನಾಗುತ್ತಾನೆ; ನರ–ಮನುಷ್ಯ; ಪಲವು–ಹಲವು; ಪಳ್ಕ–ಹಳ್ಳ, ಆಳವಾದ.
2. ಪೊಡೆ–ಪೊಟ್ಟೆ, ಹೊಟ್ಟೆ; ಪಂಕ–ಕೆಸರು, ಕೊಳೆ; ಮೀಯಲ್–ಸ್ನಾನ ಮಾಡಲು; ಕಾಕಾಳಿ–ಕಾಗೆಗಳ ಗುಂಪು; ಗುಡಪಾನಂ–ಬೆಲ್ಲದ ಪಾನಕ; ಸ್ವಾದ–ರುಚಿ; ಮಡಿ–ನೈರ್ಮಲ್ಯ–ಪರಿಶುದ್ಧತೆ; ನಿರ್ಮಲ–ಶುದ್ಧ; ಚಿತ್ತ–ಮನಸ್ಸು.
3. ಅರೆ–ಬಂಡೆ; ಸೀಳುವೊಡೆ–ಸೀಳಬೇಕಾದರೆ; ಆನೆ ಮೆಟ್ಟಲಹುದೇ–ಆನೆ ತುಳಿದರಾದೀತೇ?; ಚಾಣ–ಉಳಿ; ಕಿರು–ಚಿಕ್ಕದಾದ; ಉಪಾಯಪರ–ಉಪಾಯವನ್ನು ಬಲ್ಲವನು; ಓರ್ವಂ–ಒಬ್ಬನು; ಈಡು–ಸಮಾನ; ಹೆಮ್ಮರ, ದೊಡ್ಡದಾದ ಮರ; ಬಲ್ಪಾರಮಂ–ಬಲುಭಾರವಾದುದನ್ನು; ಸನ್ನೆ–ಮೀಟುಗೋಲು, ಭಾರ ಎತ್ತಲು ಆಧಾರವಾಗಿ ಬಳಸುವ ಕಂಬಿ; ಕಾಲಾಳು–ಚತುರಂಗ ಬಲದಲ್ಲಿ ಒಂದು ಸೈನ್ಯ.
4. ಉಣದಿರ್ಪ–ಅನುಭೋಗಿಸಲಾಗದ; ಧನ–ಹಣ, ಸಂಪತ್ತು; ಸುತನಿರ್ದೇಂ–ಮಗನಿದ್ದೇನು ಪ್ರಯೋಜನ; ಆಪತ್ತಿನೊಳ್–ಕಷ್ಟಕಾಲದಲ್ಲಿ ಮಣಿದು, ಸೋತು; ಎಣಿಸಲ್–ಲೆಕ್ಕ ಮಾಡಿ ನೋಡಲು, ಆಲೋಚಿಸಿ ನೋಡಲು; ಕಾಲೋಚಿತಕೆ–ಸಮಯಕ್ಕೆ ಸರಿಯಾಗಿ; ಐದಿದ–ಒದಗಿಬಂದ; ತೃಣ–ಹುಲ್ಲು.
5. ಇರಿ–ಕೊಲ್ಲು, ಚುಚ್ಚು, ತಿವಿ; ಧರೆ–ಭೂಮಿ; ಚಮತ್ಕಾರ–ಚಾತುರ್ಯ, ಚತುರತೆ, ಕೌಶಲ; ಅರಿಯಲ್–ತಿಳಿಯಲು; ವಿಭು–ದೊರೆ, ರಾಜ; ತೊರೆ–ತ್ಯಜಿಸು, ಬಿಡು; ಯೋಗಿ–ಸನ್ಯಾಸಿ, ಯತಿ, ಚಿತ್ತವೃತ್ತಿ ನಿರೋಧ ಮಾಡಬಲ್ಲವನು; ಅರಿಷಡ್ವರ್ಗಗಳು– ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು; ಪೊಣೆ–ಹೊಣೆ.

## ಟಿಪ್ಪಣಿಗಳು

ಶತಕ ಸಾಹಿತ್ಯ: ಶತಕ ಎಂಬುದು ಒಂದು ಸಾಹಿತ್ಯ ಪ್ರಕಾರ. ನೂರು ಪದ್ಯಗಳಿರುವ ಗ್ರಂಥವನ್ನು ಶತಕ ಎಂದು ಕರೆಯುವರು. ಇದೊಂದು ಆತ್ಮನಿಷ್ಠವಾದ ಭಾವನಿಷ್ಠವಾದ ಒಂದು ಕಾವ್ಯ ಪ್ರಕಾರ. ಮಹಾಕಾವ್ಯ, ಖಂಡಕಾವ್ಯಗಳಂತೆ ವಸ್ತುನಿಷ್ಠವಲ್ಲ, ಕಥಾವಸ್ತುವನ್ನೊಳಗೊಂಡಿರುವುದಿಲ್ಲ. ಇಲ್ಲಿನ ಪ್ರತಿಯೊಂದು ಪದ್ಯವೂ ಒಂದು ಮುಕ್ತಕ. ಸ್ವಯಂಪೂರ್ಣ ಭಾವವುಳ್ಳ ಸ್ವತಂತ್ರ ಪದ್ಯ.



11th_Kannada_Reader_Final_16-07-2018.indd 115 16-07-2018 18:43:07

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಮನುಷ್ಯನು ಸರ್ವಜ್ಞನಾಗಲು ಏನನ್ನು ಮಾಡಬೇಕೆಂದು ಕವಿ ಹೇಳಿದ್ದಾನೆ ?
2. ನಿರ್ಮಲ ಚಿತ್ತವನ್ನು ಗಳಿಸುವ ಬಗೆಯನ್ನು ಕವಿ ಹೇಗೆ ತಿಳಿಸಿದ್ದಾನೆ ?
3. ದೇಹ ಬಲಕ್ಕಿಂತ ಬುದ್ಧಿ ಬಲ ಮುಖ್ಯ ಎಂಬುದನ್ನು ಕವಿ ಹೇಗೆ ನಿರೂಪಿಸಿದ್ದಾನೆ ?
4. ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠ ಎಂಬುದನ್ನು ಕವಿ ಹೇಗೆ ತಿಳಿಸಿದ್ದಾನೆ?
5. ಸೈನಿಕ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಜ್ಞಾನವನ್ನು ಹೊಂದಿ ಸರ್ವಜ್ಞನಾಗುವ ಬಗೆ ಮತ್ತು ನಿರ್ಮಲ ಚಿತ್ತದ ಅಗತ್ಯವನ್ನು ಕವಿ ಹೇಗೆ ನಿರೂಪಿಸಿದ್ದಾನೆ ?
2. ದೇಹ ಬಲಕ್ಕಿಂತ ಬುದ್ಧಿ ಬಲ ಮುಖ್ಯ ಮತ್ತು ಕೆಲಸ ನಿರ್ವಹಿಸುವವರಿಗೆ ಇರಬೇಕಾದ ಸಾಮರ್ಥ್ಯ ಅರ್ಹತೆಗಳ ಬಗ್ಗೆ ಕವಿ ಏನು ಹೇಳುತ್ತಾನೆ ?
3. 'ಸೋಮೇಶ್ವರ ಶತಕ' ಪದ್ಯ ಭಾಗದ ಸಾರಾಂಶವನ್ನು ಬರೆಯಿರಿ.

**III. ಕೆಳಗಿನ ವಾಕ್ಯಗಳಿಗೆ ಸಂದರ್ಭ ಸಹಿತ ಉತ್ತರಿಸಿ.**

1. 'ಪಲವುಂ ಪಳ್ಳ ಸಮುದ್ರವೈ'
2. 'ಲೋಕದೊಳ್ ಮಡಿಯೇ ನಿರ್ಮಲ ಚಿತ್ತವೈ'
3. 'ಅರೆಯಂ ಸೀಳುವೊಡಾನೆ ಮೆಟ್ಟಲಹುದೇ?'
4. 'ಕಾಲೋಚಿತಕ್ಕೈದಿದಾ ತೃಣವೇ ಪರ್ವತವಲ್ಲವೇ'
5. 'ಯೋಗಿಯಪ್ಪುದರಿಷಡ್ವರ್ಗಗಂಗಳಂ ಗೆಲ್ವೊಡೆ'

## ಭಾಷಾಭ್ಯಾಸ

**1. ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಸುಜ್ಞಾನ, ಸರ್ವಜ್ಞ, ನಿರ್ಮಲ, ಕಾಲಾಳು, ಚಿತ್ತ, ಚಮತ್ಕಾರ.

**2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಸಜ್ಜನ, ಶುದ್ಧ, ಪಾಪ, ಶುಚಿ, ಸ್ವಾದ, ಸತ್ವ, ಮುಪ್ಪು, ಒಣಗು.

**3. ಈ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಸಂಗ, ಶ್ರೀ, ಪಾಪ, ಕಾಕ, ಫಲ, ಲೋಕ, ಸಾವಿರ, ವೀರ, ಯೋಗಿ.

**4. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**

ಮೀಯಲಾತ, ಕಾಕಾಳಿ, ಕಾಲಾಳು, ಮುಪ್ಪಿನಲ್ಲಾಗದ, ಬಂಧುವೇತಕೆ, ಕಾಲೋಚಿತ, ವೀರನಾಗು, ವಿಭುವಾಗು.

## ಚಟುವಟಿಕೆ

1. 'ಸೋಮೇಶ್ವರ ಶತಕ' ಕೃತಿಯಲ್ಲಿನ ಇತರ ಪದ್ಯಗಳನ್ನು ಓದಿರಿ.
2. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ಕೃತಿ ಮತ್ತು ಸರ್ವಜ್ಞನ ವಚನಗಳನ್ನು ಓದಿ ತಿಳಿಯಿರಿ.







11th_Kannada_Reader_Final_16-07-2018.indd 116 16-07-2018 18:43:08

ಗದ್ಯ ವಿಹಾರ

ಘಟಕ ಆರು

# ಕರ್ನಾಟಕದ ಪುರಾತನ ಸಂಸ್ಕೃತಿಯ ಒಂದು ಮುಖ

– ಡಾ.ಕೆ.ಶಿವರಾಮ ಕಾರಂತ




ಮಾನವನು ತಾನು ಬೆಳೆದಂತೆ ತನ್ನ ಸುತ್ತಮುತ್ತಲಿನ ಪರಿಸರವನ್ನು ಅಧ್ಯಯನ ಮಾಡುತ್ತಾ ಅದಕ್ಕೆ ಹೊಂದಿಕೊಳ್ಳಲು ಕಲಿಯುತ್ತಾನೆ. ಹೀಗೆ ತಾನು ಕಲಿತದ್ದನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುತ್ತಾನೆ. ತನ್ನ ಸ್ವಂತ ಅನುಭವಗಳ ಆಧಾರದ ಮೇಲೆ ಸುಧಾರಣೆಗಳನ್ನು ತರುವುದನ್ನು ಸಂಸ್ಕೃತಿ ಎನ್ನುತ್ತೇವೆ. ಇದನ್ನು ಇಂಗ್ಲಿಷ್‌ನಲ್ಲಿ ಕಲ್ಚರ್ ಎನ್ನುವರು. ಸಂಸ್ಕೃತಿ ಎಂದರೆ ಒಳ್ಳೆಯ ಸಂಸ್ಕಾರ, ಒಳ್ಳೆಯ ಕೆಲಸ, ಉತ್ತಮ ಗುಣ ಬೆಳೆಸಿಕೊಳ್ಳುದೇ ಸಂಸ್ಕೃತಿ. ನಮ್ಮ ಭಾರತೀಯ ಸಂಸ್ಕೃತಿ ಬಹಳ ಪುರಾತನವಾದ ಸಂಸ್ಕೃತಿ. ಇಲ್ಲಿಯ ಜನ ಆದಿಯಿಂದಲೂ ಗಳಿಸಿಕೊಂಡು, ಉಳಿಸಿಕೊಂಡು, ಬೆಳೆಸಿಕೊಂಡು ಬಂದಂತಹ ಉತ್ತಮ ಸಂಸ್ಕೃತಿಯಾಗಿದೆ ಇದು. ಪ್ರತಿಯೊಂದು ದೇಶಕ್ಕೂ, ಭಾಷೆಗೂ ಅದರದ್ದೇ ಆದ ಸಂಸ್ಕೃತಿ ಇದೆ. ನಮ್ಮ ಭಾರತ ಅನೇಕ ಭಾಷೆ, ಧರ್ಮ, ಜಾತಿ, ಪಂಗಡಕ್ಕೆ ಸೇರಿದ ವಿಶೇಷ ಸಂಸ್ಕೃತಿಯಾಗಿದೆ.





11th_Kannada_Reader_Final_16-07-2018.indd 117 16-07-2018 18:43:08

ದೇಶದ ಯಾವತ್ತೂ ಜನತೆ ತಂತಮ್ಮ ಹಿಂದಿನ ಪರಿಸ್ಥಿತಿಯನ್ನು ಕಂಡು ನೆನೆದು ವರ್ತಮಾನ ಕಾಲದ ದುಸ್ಥಿತಿಗಳನ್ನು ನೆನೆದು ಸದಾ 'ಸಂದ ಕಾಲವೇ ಒಳಿತು, ಬಂದ ಕಾಲ ಅಸಹನೀಯ'ವೆಂದು ತಿಳಿಯುವ ಮನೋಧರ್ಮ ಎಲ್ಲ ಜನತೆಗೂ ಅನ್ನಿಸುವ ಒಂದು ಅನುಭವ. ಹಿಂದಿನವು ಒಳ್ಳೆಯ ದಿನಗಳು ಎಂದು ನೆನೆಯಲು ಏನು ಆಧಾರಗಳಿವೆ. ಯುದ್ಧಗಳೋ, ಪಿಡುಗುಗಳೋ, ಕ್ಷಾಮಡಾಮರಗಳೋ ಆ ದುಸ್ಥಿತಿಗಳ ಕಲ್ಪನೆಯನ್ನು ಒದಗಿಸಬಹುದು. ನಿತ್ಯ ಹಸಿವು, ಅಭಿಲಾಷೆಗಳು ಇರುವ ಯಾವತ್ತೂ ಜನತೆಗೆ ಹಾಗೆನಿಸೀತು. ನಿತ್ಯಜೀವನದ ಕಷ್ಟ ಕೊರಗುಗಳನ್ನು ಕಂಡು ಹಾಗೆನ್ನುವುದು ರೂಢಿ.

ಹಿಂದಿನ ಯುಗ ಇಲ್ಲವೇ ಶತಮಾನ ಒಳಿತೆಂದೂ ಜನರು ಒಳ್ಳೆಯವರಾಗಿದ್ದರೆಂದೂ ಸರಿಯಾದ ಲಿಖಿತ ದಾಖಲೆಗಳನ್ನು ಕಂಡು ಆ ಭಾವನೆ ಉಂಟಾಗುತ್ತಿದೆಯೇ, ಅವೆಲ್ಲಾ ಆಚೀಚಿನವರ ಬಾಯ್ಮಾತುಗಳಿಂದ ತಿಳಿದ ಅಭಿಪ್ರಾಯಗಳು. ಅವನ್ನು ಹೇಳುವವರಿಗೂ ವರ್ತಮಾನ ಕಾಲದ ಸಾಕಷ್ಟು ಅತೃಪ್ತ ಭಾವನೆಗಳಿರುತ್ತವೆ. ನಾನು ವಿದ್ಯಾರ್ಥಿಯಾಗಿದ್ದಾಗ ನಮ್ಮ ಹಿರಿಯರಲ್ಲಿ ಕೆಲವರು ಕುಂದಾಪುರದಲ್ಲೊಮ್ಮೆ ಒಂದು ಉಪನ್ಯಾಸ ಏರ್ಪಡಿಸಿದರು. ಉತ್ತರ ಕರ್ನಾಟಕದ ಇಬ್ಬರು ಮಹಾನುಭಾವರಾಗಿದ್ದ ಆಲೂರು ವೆಂಕಟರಾಯರು ಮತ್ತು ಮುದವೀಡು ಕೃಷ್ಣರಾಯರೆಂಬುವರು ನಮ್ಮ 'ಕರ್ನಾಟಕ ಗತ ವೈಭವ'ಗಳ ಕುರಿತು ಸುದೀರ್ಘ ಭಾಷಣ ಮಾಡಿದರು. ಅದನ್ನು ಕೇಳಿ ನನ್ನ ಬಾಯಲ್ಲೂ ನೀರೂರಿತು. ಅದು ನಿಜವೇ ಎಂದು ತಿಳಿಯಲು ನಾನು ಪ್ರಯತ್ನಿಸಿದ್ದೆ. ಅದು 1923–24ರಲ್ಲಿ ಒಂದು ಮಾಸಪತ್ರಿಕೆಯನ್ನು ಹೊರಡಿಸಿ ಅದರ ಪುಟಗಳನ್ನು ತುಂಬಿಸಲು ನಾನೇ ಯತ್ನಿಸಿದಾಗ ಈ ನಾಡಿನ ಹೊಗಳಿಕೆಗೆ ಅವರು ಹಲವಾರು ನಿದರ್ಶನಗಳನ್ನು ಸಾರಿದ್ದರು. ಅವುಗಳು ನನ್ನನ್ನು ಜಾಗೃತಗೊಳಿಸಿ ಅದರ ನಿಜವನ್ನು ಪ್ರೇರೇಪಿಸಿವೆ. ಅವರು ಅಂದು ಸಾರಿದ ನಿದರ್ಶನಗಳು ಈ ದೇಶವನ್ನು ಆಳಿದ ಅಶೋಕ ಚಕ್ರವರ್ತಿಯಂತಹ ಉದ್ದಾಮ ಚಕ್ರವರ್ತಿಗಳಲ್ಲ; ಅಂತಹ ರಾಜರೋ ಚಕ್ರವರ್ತಿಗಳೋ ಕಾಲವಾದ ಬಳಿಕವೂ ಅವರು ಬಿಟ್ಟು ಹೋದ ಸಾಕ್ಷಿಗಳು, ಅವರ ಶಾಸನಗಳು. ಪಂಡಿತರು ಅವನ್ನು ಓದಿ ಹೇಳಿದರೆ – ಅದರಲ್ಲಿ ಇಂತಿಂತಹುದಿತ್ತು, ಇದೆ – ಎಂದರೆ ಅವನ್ನು ಊಹಿಸುವ ಸ್ಥಿತಿ ನನ್ನದಿರಲಿಲ್ಲ. ಎಂದೋ ಯಾರೋ ಉಂಡ ಪಂಚಭಕ್ಷ್ಯ ಪರಮಾನ್ನಗಳನ್ನು ನೆನೆದು ನಮ್ಮ ಬಾಯಲ್ಲಿ ಜೊಲ್ಲು ಸುರಿಯಲಾರದಷ್ಟೆ.

ಅವರು – ಇಂಥ ಊರು, ಇಂಥ ಕಾಲಗಳ ಜೊತೆಗೆ ಇಂದಿಗೂ ಉಳಿದಿರುವ ಸಾಕ್ಷ್ಯಗಳನ್ನು ತಿಳಿಸಿದ್ದರು. ಬುದ್ಧಿ ಬಂದ ಮೇಲೆ ನಾನು ಹೇಗಾದರೂ ಮಾಡಿ, ಅಲ್ಲೆಲ್ಲ ಹೋಗಿ ನೋಡಿ – ಇವು ಅಚ್ಚರಿ ಪಡುವ ಸಾಧನೆಗಳೇ ಎಂಬುದನ್ನು ಕಂಡು ಹಿಡಿಯಲು ಛಲ ಹೊತ್ತೆ. ಇಂತಹವುಗಳಲ್ಲಿ ಹೆಚ್ಚಿನ ಸ್ಮಾರಕಗಳು ಶಾಸನಗಳಲ್ಲ. ಓದಿದ ವಿಷಯಗಳನ್ನು ಮನಸ್ಸಿನ ಮಂಡಿಗೆಗಳನ್ನಾಗಿ ಮಾಡಿಕೊಂಡ ವಿಷಯಗಳು. ಅಶೋಕನ ಕಾಲದಲ್ಲಿ ಅಲ್ಲಲ್ಲಿ ಧರ್ಮಶಾಲೆಗಳಿದ್ದವು, ಎಂಬ ಮಾತಿನಿಂದ ಇಂದು ನಾನು ಯಾತ್ರಿಯಾಗಿ ಹೋದರೆ, ಅನ್ನ ಹಾಕುವವರು ಸಿಗಲಾರರಷ್ಟೆ. ಅವರೋ - ಕನ್ನಡ ನಾಡಿನ ಹಿರಿಮೆಯನ್ನು ನೋಡಲು - ಪಟ್ಟದ ಕಲ್ಲು, ಬಾದಾಮಿ, ಐಹೊಳೆಗಳಿಗೆ ಹೋಗಿ ಎಂದರು. ನಡೆದೂ ದಣಿದೂ ಅಲ್ಲೆಲ್ಲ ತಿರುಗಾಡಿದೆ; ನೋಡಿದೆ. ಈ ಐಹೊಳೆಯಲ್ಲಿ ಚಾಲುಕ್ಯರು ರಚಿಸಿದ ಅಸಂಖ್ಯ ಮರಳುಗಲ್ಲಿನ ದೇಗುಲಗಳನ್ನು ಕಂಡಾಗ ಇಂತಹವೂ ಇವೆಯೇ ಎಂದು ಅಚ್ಚರಿಯಾಯಿತು. ಅವುಗಳ ಭವ್ಯತೆಗೆ ಚೆಲುವಿಗೆ ಅಜರಾಮರತ್ವಕ್ಕೆ ನನ್ನ ಊರಿನ ಶಿವಾಲಯ ಅವುಗಳ ಮುಂದೆ ಏನೇನೂ ಸಾಲದೆಂದೆನಿಸಿತು.

ಐಹೊಳೆ ಒಂದು ಊರಲ್ಲೇ 20–30 ವಿವಿಧ ಶೈಲಿನ ದೇಗುಲಗಳನ್ನು ಮರಳುಗಲ್ಲಿಂದ ರಚಿಸಿದ್ದಾರೆ. ಅವುಗಳು ಸಾವಿರಾರು ವರ್ಷಗಳಿಂದ ಇಂದಿಗೂ ಕೆಡದೆ ಉಳಿದಿವೆ! ಅದೊಂದು ಸ್ವಪ್ನ ರಾಜ್ಯ. ಅನಾದಿ ಕಾಲದಿಂದಲೂ ತಂತಮ್ಮ ದೇವರಿಗಾಗಿ ನಿರ್ಮಿಸಿದ



11th_Kannada_Reader_Final_16-07-2018.indd 118 16-07-2018 18:43:08


ವಾಸ್ತುಗಳು ಸಾಮುದಾಯಿಕ ಭಕ್ತಿಯ ಸ್ಮಾರಕಗಳು. ಅದೊಂದೇ ಸ್ಥಳದಲ್ಲಿ ಅಖಿಲ ಭಾರತದ ದ್ರಾವಿಡ, ನಾಗರ ಶೈಲಿಯ ಪ್ರಪ್ರಥಮ ನಿದರ್ಶನಗಳಿವೆ. ಐಹೊಳೆಗೆ ಸಮೀಪದ ಪಟ್ಟದಕಲ್ಲಿನಲ್ಲಿ ಇನ್ನಷ್ಟು ಸಂಪುಷ್ಟ ವೈಭವದ ನಿದರ್ಶನಗಳಿವೆ. ಇಲ್ಲಿನ 'ಮರಿದೇಗುಲ'ಗಳೇ ಕೊನಾರ್ಕದಲ್ಲಿ ದೆವ್ವ ಗಾತ್ರದ ಅದ್ಭುತ ರಚನೆಗಳಾದವು. ಅದೇ ರೀತಿಯಲ್ಲಿ ಎಲ್ಲೋರದ ಮಹಾಮಹಾ ಗುಹಾಲಯಗಳ ಪಂಕ್ತಿಗಳಾದವು. ಪುಣೆಯ ಸಮೀಪದ ಕಾರ್ಲಾ ಎಂಬಲ್ಲಿನ ಗುಹಾಲಯವನ್ನು ಕನ್ನಡದ ಒಬ್ಬ ನಾಟ್ಯಕಾರ ಕಟ್ಟಿಸಿದನಂತೆ.

ಇಂತಹ ಅದ್ಭುತಗಳನ್ನು ಕಂಡ ನಾನು ಮುಂದೊಂದು ದಿನ ಎಲ್ಲೋರಾ, ಅಜಂತಾಗಳಿಗೂ ಹೋಗಿ ನೋಡಿ ಬಂದೆ. ಕೊನಾರ್ಕ್ ಪುರಿಗಳಿಗೂ ಹೋಗಿ ಬಂದೆ.

ನಮ್ಮವರು ಕನ್ನಡ ನಾಡನ್ನು 'ಕಾವೇರಿ ಗೋದೆಯರು ಮೈದಳೆದ ನಲುನಾಡು' ಎಂದು ಕರೆದರು. ನಿಜಕ್ಕೂ ಅದಕ್ಕಿಂತ ಆಚೆಯ ತನಕವೂ ಚಾಚಿತ್ತು ನಮ್ಮ ನಾಡು. ಮುಂದೊಂದು ದಿನ ನರ್ಮದಾ ನದೀ ತೀರಕ್ಕೆ ಹೋದಾಗ ಈಗಣ ಪ್ರಸಿದ್ಧಿಯ ಅಮೃತ ಶಿಲಾ ಜಲಪಾತಕ್ಕೆ ಸಾಕ್ಷಿಯಾದೆ. ಅಲ್ಲೆ ನರ್ಮದೆಯ ದಂಡೆಯಲ್ಲಿ ಕಲಚುರ್ಯ ರಾಣಿ ಅಲ್ಹಣಾ ದೇವಿ ಕಟ್ಟಿಸಿದ ಒಂದು ದೇಗುಲವನ್ನು ಕಂಡೆ. ವೃತ್ತಾಕಾರದ ಆ ದೇಗುಲದಲ್ಲಿ 'ಚೌಷಟ್' ಎಂದರೆ 64 ದೇವಿಯರನ್ನು ಕೆತ್ತಿ ನಿಲ್ಲಿಸಿದ ಅದ್ಭುತವನ್ನೂ ಕಂಡೆ. ಒಂದೊಂದು ದೇವಿಯ ವಿಗ್ರಹವೂ 4–5 ಅಡಿ ಎತ್ತರದ ಭವ್ಯ ಮೂರ್ತಿಗಳು. ಎಲ್ಲ ಮೂರ್ತಿಗಳೂ ಮಾತೃದೇವತಾ ಸ್ವರೂಪಗಳು. ಈ ತಾಣಿಗೆ 'ಬೆಹರಾಘಾಟ್' ಎನ್ನುತ್ತಾರೆ. ಕಲಚುರ್ಯರು ಮುಂದೆ ರಾಷ್ಟ್ರಕೂಟ ಅರಸರನ್ನು ಸೋಲಿಸಿದರು. ಈ ಎಲ್ಲ ಸಂಭ್ರಮವನ್ನೂ ಕಂಡಾಗ – ಅವಕ್ಕಾಗಿ ವ್ಯಯಿಸಿದ ಶ್ರಮ, ಬೆಳೆಸಿದ ಕನಸು, ತೋರಿಸಿದ ಭಕ್ತಿಗಳನ್ನು ನೆನೆಯುವಾಗ – ಕನ್ನಡನಾಡು 'ಸ್ವರ್ಗಾದಪೀ ಗ–ರೀಯಸೀ' ಆಗಿತ್ತು.

ಅವು ನಮ್ಮನ್ನು ಕೇಳುವ ಪ್ರಶ್ನೆ 'ಕನ್ನಡದ ನೆಲದಲ್ಲೇ ಉಂಡು ತಿಂದು ಬೆಳೆದ ನೀವು ಏನನ್ನು ಸಾಧಿಸಿದ್ದೀರಿ?' ಎಂದು. ಅದು ಬರಿಯ ಮಾತೇ? ಕೃತಿಯೇ? ಹುಸಿಕನಸೇ?

### ಕೃತಿ–ಕರ್ತೃ ವಿಚಾರ



ಡಾ.ಕೆ.ಶಿವರಾಮ ಕಾರಂತರು 1902ರಲ್ಲಿ ಉಡುಪಿ ಜಿಲ್ಲೆಯ ಕೋಟದಲ್ಲಿ ಜನಿಸಿದರು. ಇವರು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸುಮಾರು ನೂರಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಚೋಮನದುಡಿ, ಮರಳಿಮಣ್ಣಿಗೆ, ಬೆಟ್ಟದ ಜೀವ, ಅಳಿದ ಮೇಲೆ, ಗೆದ್ದದೊಡ್ಡಸ್ತಿಕೆ, ಮೂಕಜ್ಜಿಯ ಕನಸುಗಳು ಕಾದಂಬರಿಗಳು ಪ್ರಸಿದ್ಧವಾಗಿವೆ. ರಾಷ್ಟ್ರಗೀತೆ, ಸುಧಾಕರ, ಸೀಳ್ಗವನಗಳು ಇವರ ಕವನ ಸಂಕಲನಗಳು. ನಾಟಕ, ಹರಟೆ, ಬಾಲ ಸಾಹಿತ್ಯ, ವಿಜ್ಞಾನ ಸಾಹಿತ್ಯ, ನಿಘಂಟುಗಳನ್ನು ರಚಿಸಿದ್ದಾರೆ. ಇವರ ಮೂಕಜ್ಜಿಯ ಕನಸುಗಳು ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಯಕ್ಷಗಾನ–ಬಯಲಾಟ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಮೈಮನಗಳ ಸುಳಿಯಲ್ಲಿ ಕಾದಂಬರಿಗೆ ಪಂಪ ಪ್ರಶಸ್ತಿ ದೊರೆತಿದೆ. ಕನ್ನಡದಲ್ಲಿ ವೈಚಾರಿಕ ಪ್ರಜ್ಞೆಯನ್ನು ಜಾಗೃತಗೊಳಿಸುಂತಹ ಹಲವು ಲೇಖನಗಳನ್ನು ಇವರು ಪ್ರಕಟಿಸಿದ್ದಾರೆ.



11th_Kannada_Reader_Final_16-07-2018.indd 119 16-07-2018 18:43:08

## ಕಠಿಣ ಪದಗಳ ಅರ್ಥ

ಪೀಳಿಗೆ–ವಂಶ, ತಲೆಮಾರು; ಪುರಾತನ–ಹಳೆಯ, ಪ್ರಾಚೀನ; ಅಭಿಲಾಷೆ–ಆಸೆ, ಬಯಕೆ; ಗತವೈಭವ–ಹಿಂದಿನ ವೈಭವ; ನಿದರ್ಶನಗಳು–ದೃಷ್ಟಾಂತಗಳು, ಉದಾಹರಣೆಗಳು; ಮಂಡಿಗೆ–ಒಂದು ಬಗೆಯ ಭಕ್ಷ್ಯ, ಅವಲಕ್ಕಿಯಿಂದ ಮಾಡಿದ ತಿನಿಸು.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಸಂಸ್ಕೃತಿ ಎಂದರೇನು ?
2. ನಮ್ಮ ಭಾರತೀಯ ಸಂಸ್ಕೃತಿ ಏಕೆ ವಿಶೇಷವಾಗಿದೆ ?
3. ಮಾನವ ಸಂದ ಕಾಲವೇ ಒಳಿತು ಎಂದು ಏಕೆ ಹೇಳುತ್ತಾನೆ ?
4. ಕುಂದಾಪುರದಲ್ಲಿ ಉಪನ್ಯಾಸ ನೀಡಿದ ಮಹನೀಯರ ಹೆಸರೇನು ?
5. ಲೇಖಕರು ಅಶೋಕ ಚಕ್ರವರ್ತಿಯ ಬಗ್ಗೆ ಏನು ಹೇಳಿದ್ದಾರೆ ?
6. ಐಹೊಳೆ ದೇಗುಲದ ಬಗ್ಗೆ ಲೇಖಕರು ಏನು ಹೇಳುತ್ತಾರೆ ?
7. ಪಟ್ಟದ ಕಲ್ಲಿನ ದೇವಾಲಯದ ವರ್ಣನೆ ಬಗ್ಗೆ ತಿಳಿಸಿ.
8. ಕನ್ನಡ ನಾಡು ಎಲ್ಲಿಂದ ಎಲ್ಲಿಯವರೆಗೆ ಹಬ್ಬಿತ್ತು ಎಂದು ತಿಳಿಸಿದ್ದಾರೆ ?
9. ಬೆಹರಾಫಾಟ್ ಎಂದರೇನು ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಸಂಸ್ಕೃತಿ ಎಂದರೇನು ತಿಳಿಸಿ.
2. ಲೇಖಕರು ವರ್ತಮಾನ ಕಾಲದ ಬಗ್ಗೆ ಏನು ಹೇಳಿದ್ದಾರೆ ?
3. ಲೇಖಕರು ವಿದ್ಯಾರ್ಥಿಯಾಗಿದ್ದಾಗ ನಡೆದ ಘಟನೆಯೇನು ? ತಿಳಿಸಿ.
4. ಅಶೋಕನ ಶಿಲಾಶಾಸನಗಳ ಬಗ್ಗೆ ತಿಳಿಸಿ.
5. ಐಹೊಳೆ, ಪಟ್ಟದ ಕಲ್ಲು ದೇವಾಲಯಗಳ ಬಗ್ಗೆ ತಿಳಿಸಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಪ್ರತಿಯೊಂದು, ಆಚೀಚೆ, ಮಹಾನುಭಾವ, ನೀರೂರಿತು, ಅಜರಾಮರ.

**2. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಮಾಡಿರಿ.**

ವೈಭವ, ಪೀಳಿಗೆ, ಜಾಗೃತಿ, ಉದ್ಧಾಮ, ಹಿರಿಮೆ.

**3. ಕೆಳಗಿನ ಪದಗಳಿಗೆ ವಿಗ್ರಹ ವಾಕ್ಯ ಬರೆದು ಸಮಾಸದ ಹೆಸರನ್ನು ತಿಳಿಸಿ**

ಕ್ಷಾಮಡಾಮರಗಳು, ಪಂಚಭಕ್ಷ್ಯ, ಪರಮಾನ್ನ, ಧರ್ಮಶಾಲೆ, ಶಿವಾಲಯ, ಗುಹಾಲಯ.

## ಚಟುವಟಿಕೆ

1. ಕರ್ನಾಟಕದ ಐತಿಹಾಸಿಕ ಸ್ಥಳಗಳಿಗೆ ಭೇಟಿ ಕೊಟ್ಟು ನಮ್ಮ ಸಂಸ್ಕೃತಿಯ ಹಿನ್ನೆಲೆಯನ್ನು ಅರಿತುಕೊಳ್ಳಿ.

2. ತಮಿಳುನಾಡಿನ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಿ.



11th_Kannada_Reader_Final_16-07-2018.indd 120 16-07-2018 18:43:08

ಉಪಪಠ್ಯ


ಘಟಕ
ಆರು

# ಯಯಾತಿ
## (ನಾಟಕ)

– ಗಿರೀಶ್ ಕಾರ್ನಾಡ್




ಗಿರೀಶ್ ಕಾರ್ನಾಡರು ಸಾಮಾನ್ಯವಾಗಿ ಪುರಾಣ, ಜಾನಪದ ಮತ್ತು ಇತಿಹಾಸದ ವಸ್ತುಗಳನ್ನು ತಮ್ಮ ನಾಟಕಗಳಿಗೆ ವಸ್ತುವನ್ನಾಗಿ ಬಳಸಿಕೊಂಡಿದ್ದಾರೆ. ಮೇಲು ಪದರದಲ್ಲಿ ಇವು ಹಿಂದಿನ ಕಥೆಯಾದರೂ ಆಳದಲ್ಲಿ ಇಂದಿನ ಬದುಕಿನ ಸ್ಥಿತಿಗತಿಗಳಿಗೆ ಇವರು ವ್ಯಾಖ್ಯಾನ ನೀಡುತ್ತಾರೆ. ಯಯಾತಿ ಚಂದ್ರವಂಶ ರಾಜನಾದ ನಹುಷನ ಮಗ. ಇಂದ್ರನಿಂದ ವ್ರತಭಂಗಗೊಂಡ ಯಯಾತಿ ಭೋಗ ಜೀವನದಲ್ಲಿ ಮೈಮರೆತನು. ಯಯಾತಿಯ ಮೊದಲ ಪತ್ನಿ ದೇವಯಾನಿ. ಇವಳು ಶುಕ್ರಾಚಾರ್ಯರ ಮಗಳು. ದೇವಯಾನಿ ಪತಿಯ ನಡವಳಿಕೆಯಿಂದ ಬೇಸತ್ತು ಮನೆ ಬಿಟ್ಟು ಹೋಗುತ್ತಾಳೆ. ಅದಕ್ಕೆ ಕಾರಣವಾದ ಯಯಾತಿಗೆ ಅಕಾಲ ವೃದ್ಧಾಪ್ಯ ಬರುವಂತೆ ಆಕೆಯ ತಂದೆ ಶಾಪ ನೀಡುತ್ತಾನೆ. ನಂತರ ಮಗಳ ಕೋರಿಕೆಯಂತೆ ಯಯಾತಿಯ ಪರವಾಗಿ ಬೇರೆ ಯಾರಾದರೂ ಅಕಾಲ ವೃದ್ಧಾಪ್ಯವನ್ನು ಸ್ವೀಕರಿಸಬಹುದೆಂದು ಉಪಾಯವನ್ನು ಸೂಚಿಸುತ್ತಾರೆ. ದೇವಯಾನಿಯ ದಾಸಿ ಶರ್ಮಿಷ್ಠೆಗೆ ಯಯಾತಿ ಮಾರು ಹೋಗುತ್ತಾನೆ. ಶರ್ಮಿಷ್ಠೆ ಅಸುರ ರಾಜನಾದ ವೃಷಪರ್ವನ ಮಗಳು. ಇವಳ ಕಿರಿಯ ಮಗ ಪುರು ತಂದೆಯ ಅಕಾಲವೃದ್ಧಾಪ್ಯವನ್ನು ಸ್ವೀಕರಿಸಿ ತನ್ನ ಯೌವನವನ್ನು ತಂದೆಗೆ ಧಾರೆಯೆರೆದನು. ಈ ನಾಟಕದಲ್ಲಿ ನಾಲ್ಕು ಅಂಕ(ಭಾಗ)ಗಳಿದ್ದು ಮೂರನೇ ಅಂಕವನ್ನು ಮಾತ್ರ ಇಲ್ಲಿ ಸಂಗ್ರಹಿಸಿ ನೀಡಲಾಗಿದೆ.





11th_Kannada_Reader_Final_16-07-2018.indd 121 16-07-2018 18:43:09

## ಅಂಕ – ಮೂರು

(**ದೃಶ್ಯ :** ಹಿಂದಿನ ಅಂಕಕ್ಕೂ ಇದಕ್ಕೂ ಕೆಲ ನಿಮಿಷಗಳ ಅಂತರ ಮಾತ್ರ ಇದೆ. ಪ್ರತೀಕ್ಷೆಯ ಬಿಗಿಯಿಂದಾಗಿ ಯಯಾತಿ ಚಿತ್ರಾರ್ಪಿತವಾದಂತೆ ನಿಂತಿದ್ದಾನೆ. ಶರ್ಮಿಷ್ಠೆಯೂ ಸ್ತಬ್ಧಳಾಗಿದ್ದಾಳೆ. ಪುರು ಬರುತ್ತಾನೆ.)

**ಯಯಾತಿ:** (ಪುರುವನ್ನು ಹಿಡಿದು) ಏನಾಯಿತು ಪುರು ?

**ಪುರು:** (ಬಿಡಿಸಿಕೊಂಡು) ನಾನು ಮುಂಬಾಗಿಲನ್ನು ಮುಟ್ಟುವ ಮೊದಲು ಶುಕ್ರಾಚಾರ್ಯರು ಹೋಗಿ ಬಿಟ್ಟಿದ್ದರು, ತಮ್ಮ ಮಗಳೊಡನೆ. ಅವರ ಶಿಷ್ಯನೊಬ್ಬ ಅಲ್ಲಿ ನಮ್ಮ ದಾರಿ ನೋಡುತ್ತಾ ನಿಂತಿದ್ದ. ಅವನೇ ನನಗೆ ಎಲ್ಲವನ್ನೂ ಹೇಳಿದ.

**ಯಯಾತಿ:** ಏನೆಂದು ? ಉಃಶಾಪ ಸಿಕ್ಕಿತೇ ?

**ಪುರು:** ನೀನು ದೇವಯಾನಿಯನ್ನು ಬಾವಿಯಿಂದ ಉಳಿಸಿದ ನೆನಪಿಗೆ... ಕೊಟ್ಟರು... ನಿನ್ನ ವೃದ್ಧಾಪ್ಯವನ್ನು ಸ್ವೀಕರಿಸಲಿಕ್ಕೆ ಯಾವನಾದರೂ ತರುಣ ದೊರೆತರೆ ನಿನ್ನ ತಾರುಣ್ಯ ಉಳಿಯುತ್ತದೆ ಎಂದರು.

**ಸ್ತಬ್ಧತೆ. ಯಯಾತಿಯ ಮುಖ ಆನಂದದಿಂದ ಮೆಲ್ಲಗೆ ಬೆಳಗತೊಡಗುತ್ತದೆ. ಎಡಬಲಕ್ಕೆ ನೋಡುತ್ತಾನೆ; ಶರ್ಮಿಷ್ಠೆ ಹಾಗೂ ಪುರು ಇಬ್ಬರೂ ಗಂಭೀರರಾಗಿ ನಿಂತಿದ್ದಾರೆ. ಪುರುವಿನ ಮುಖದ ಮೇಲೆ ಮಾತ್ರ ಇನ್ನೂ ವ್ಯಂಗ್ಯ ನಗೆ ಇದೆ.**

**ಯಯಾತಿ:** (ಆನಂದದಿಂದ ಕೂಗಿ) ಆಮೇಲೇನು ತೊಡಕು ? ಶರ್ಮಿ, ಶರ್ಮಿ..... ನನ್ನ ತಾರುಣ್ಯ ಹೋಗಿಲ್ಲ. ನಾನಿನ್ನು ನನ್ನ ವಿಜಯವನ್ನು ಪೂರ್ಣಗೊಳಿಸಬಲ್ಲೆ. ನನ್ನ ಪತಾಕೆಯನ್ನು ದಿಗಂತದಲ್ಲಿ ಹಾರಿಸಬಲ್ಲೆ..... ದೇವಯಾನಿ! ಪಾಪ! ಅವಳ ಸಿಡುಕೆಲ್ಲಾ ವ್ಯರ್ಥವಾಗಿ ಹೋಯಿತು. ನಾನು ಹೇಳಿದೆ : ನನ್ನ ಮಾತನ್ನು ಕೇಳು ಎಂದು. ನನ್ನನ್ನು ನಾಶ ಮಾಡಲಿಕ್ಕೆ ಹೊರಟಿದ್ದಳು! ನನ್ನ ಚಿತೆಯಿಂದ ತನ್ನ ನೀಲಾಂಜನವನ್ನು ಉರಿಸಲು ಹೊರಟಿದ್ದಳು! ನೋಡಿದೆಯಾ ಶರ್ಮಿಷ್ಠೆ ? ಮುಪ್ಪೇ ಇರಲಿ ಎನ್ನುತ್ತಿದ್ದೆ ನೀನು, ಶಾಪವೇ ಇರಲಿ ಎನ್ನುತ್ತಿದ್ದೆ. ಆದರೆ ಜಗತ್ತು – ಶುಕ್ರಾಚಾರ್ಯರಂತಹ ಮುದಿಗೊರಡು ಕೂಡ – ಯೌವನವನ್ನು ಪ್ರೀತಿಸುತ್ತಿದೆ. ಇಂದಲ್ಲಾ ನಾಳೆ, ನಾಳೆಯಲ್ಲ ನಾಡಿದ್ದು... (ಅವರಿಬ್ಬರ ಕಡೆಗೆ ನೋಡಿ) ಇದೇನು ನೀವಿಬ್ಬರೂ ಸುಮ್ಮನೆ ನಿಂತಿದ್ದೀರಲ್ಲಾ... ? ಯಾಕೆ ನಿಮಗೆ ಆನಂದವಾಗಲಿಲ್ಲವೇ ? ನಾನು ಉರಿಯ ಕುಂಡದಿಂದ ಪಾರಾಗಿ ಬಂದೆನೆಂದು ನಿಮಗೆ ಹರ್ಷವಾಗಲಿಲ್ಲವೇ ? ಏನಾದರೂ ಹೇಳಬಾರದೇ ? ಕೊನೆಗೆ ತಿರಸ್ಕಾರವನ್ನಾದರೂ ತೋರಿಸಬಾರದೇ ? ಯಾಕೆ ನಿಮಗೆ ನನ್ನ ಆನಂದದಲ್ಲಿ ಏನಾದರೂ ತಪ್ಪಿದೆಯೇ ?

**ಪುರು:** ಇಲ್ಲ ಅಪ್ಪ, ಆದರೆ ನಿನ್ನ ವಾರ್ಧಕ್ಯವನ್ನು ಸ್ವೀಕರಿಸುವವರು ಯಾರು ?

**ಯಯಾತಿ:** ಇಷ್ಟೇ ಅಲ್ಲವೇ ? (ನಕ್ಕು) ಅದಕ್ಕೇ ನೀನು ಹುಡುಗನೆನ್ನುವುದು ? ಅದಕ್ಕೇನು ಕಡಿಮೆ ? ಆರ್ಯಾವರ್ತದ ಚಕ್ರವರ್ತಿಗೆ ಜನಕ್ಕೇನು ಕಡಿಮೆ. ನನ್ನ ಸೈನಿಕರಿದ್ದಾರೆ. ಪ್ರಜೆಗಳಿದ್ದಾರೆ, ಮಂತ್ರಿಗಳಿದ್ದಾರೆ. ಅವರೆಲ್ಲ ನನ್ನ ಆಜ್ಞಾನುವರ್ತಿಗಳು. ಅಲ್ಲದೆ ನನ್ನನ್ನು ಪ್ರೀತಿಸುತ್ತಾರೆ. ನಾನು ಅವರನ್ನು ಜೀವದ ಹಂಗು ಬಿಟ್ಟು ರಕ್ಷಿಸಿದ್ದೇನೆ. ಇವರಲ್ಲಿ ಒಬ್ಬರೂ ಬರುವುದಿಲ್ಲವೆಂದರೇನು ಹುಚ್ಚು ?



11th_Kannada_Reader_Final_16-07-2018.indd 122 16-07-2018 18:43:09

**ಶರ್ಮಿಷ್ಠೆ:** ಏಕೆ ಬರಬೇಕು ? ನಿಮ್ಮ ಕೃತ್ಯದ ಫಲವನ್ನು ಅವರೇಕೆ ಸ್ವೀಕರಿಸಬೇಕು ? ಪಾಪ ಪುಣ್ಯಗಳೆಂದರೆ ಧನವೇ, ಕೊಟ್ಟು ಕೊಂಡು ಮಾಡಲಿಕ್ಕೆ ? ನನ್ನ ಮಾತು ಕೇಳಿರಿ ಸ್ವಾಮೀ. ಈ ಶಾಪವನ್ನು ತೆಗೆದುಕೊಳ್ಳಲಿರುವ ಹುಚ್ಚನಿಗಾಗಿಯೋ ಯೋಗಿಗಾಗಿಯೋ ನಾವು ಬಿಕ್ಕೆ ಬೇಡುವುದು ಬೇಡ. ನಾವು ಸುಮ್ಮನೆ ವಾನಪ್ರಸ್ಥಕ್ಕೆ ಹೊರಟು ಹೋಗೋಣ.

**ಯಯಾತಿ:** (ತನ್ನ ಕಿವಿಗಳನ್ನು ನಂಬಲಾಗದೆ) ಅಂದರೆ ? ನಾನು ಈ ಉಃಶಾಪವನ್ನು ಒದ್ದು ಮತ್ತೆ ಅಗ್ನಿಕುಂಡದಲ್ಲಿ ಬೀಳಬೇಕೇ ? ಇದೇ ಏನು ನಿನ್ನ ಪ್ರೀತಿ, ಕಾರುಣ್ಯ ? ನಾನು ಮತ್ತೆ ವಾರ್ಧಕ್ಯವನ್ನು ಸ್ವೀಕರಿಸಬೇಕೇ ? ಒಮ್ಮೆ ನನ್ನನ್ನು ಪಂಜರದಲ್ಲಿ ಹಿಡಿದೆ. ಈಗ ನಾನು ಜರ್ಜರಿತನಾಗಿ, ನಿನ್ನ ಸಹಾಯಕ್ಕಾಗಿ ನಿನ್ನ ಕಾಲಡಿಯಲ್ಲಿ ಬೀಳಬೇಕೇ ? ಇವಳನ್ನು ನಂಬಬೇಕಂತೆ, ಇಂತಹ ರಾಕ್ಷಸಿಯನ್ನು !

**ಪುರು:** (ಸಹಿಸಲಾರದೆ) ಅಪ್ಪಾ...!

**ಯಯಾತಿ:** ನೀನು ಸುಮ್ಮನಿರು... ಇವಳನ್ನು... ಇವಳನ್ನು...

**ಪುರು:** (ಅವರಿಬ್ಬರ ನಡುವೆ ಬಂದು) ನೀನು ಹೊರಗೆ ಹೋಗು... ತಾಯೇ...

**ಶರ್ಮಿಷ್ಠೆ:** ಬೇಡ ಯುವರಾಜ...

**ಯಯಾತಿ:** ತೊಲಗು, ನನ್ನ ಕಣ್ಣ ಮುಂದೆ ನಿಲ್ಲಬೇಡ.....

**ಪುರು:** ದಯಮಾಡಿ ಹೊರಗು ಹೋಗು ತಾಯೆ. ನಾನೆಲ್ಲಾ ನಿನಗೆ ವಿವರಿಸಿ ಹೇಳುತ್ತೇನೆ.

**ಪುರು ಶರ್ಮಿಷ್ಠೆಯನ್ನು ಹೊರಗೆ ಕರೆದೊಯ್ದು ಬಿಟ್ಟು ಬರುತ್ತಾನೆ.**

**ಯಯಾತಿ:** (ಕರ್ಕಶ ಧ್ವನಿಯಲ್ಲಿ) ಈಗ ನೀನನ್ನುವುದೇನು ?

**ಪುರು:** ಅನ್ನುವ ಮಾತಲ್ಲ ಅಪ್ಪಾ! ಇದು ಪ್ರತ್ಯಕ್ಷದ ಮಾತು...

**ಯಯಾತಿ:** ಏನಾಯಿತು ಪ್ರತ್ಯಕ್ಷದಲ್ಲಿ ?

**ಪುರು:** ನಿನ್ನ ವಾರ್ಧಕ್ಯವನ್ನು ಸ್ವೀಕರಿಸಲಿಕ್ಕೆ ಯಾರೂ ಸಿದ್ಧರಿಲ್ಲ.

**ಯಯಾತಿ:** ಯಾರೂ ಎಂದರೆ ಯಾರು ? ನಾನು ಮಕ್ಕಳಂತೆ ಕಾಪಾಡಿದ ಪ್ರಜೆಗಳು? ಅವರಿಗಾಗಿ ನಾನು ನೂರು ಸಲ ರಣರಂಗದಲ್ಲಿ ಜೀವವನ್ನು ಪಣಕ್ಕೆ ಹಚ್ಚಿದೆ. ಅವರಲ್ಲಿ ಒಬ್ಬರೂ ಸಿದ್ಧರಿಲ್ಲ.

**ಪುರು:** ಅದರ ಬಗ್ಗೆ ಕರ ಕಾಣಿಕೆ ಕೊಟ್ಟಿದ್ದೇವೆ ಎನ್ನುತ್ತಾರವರು.

**ಯಯಾತಿ:** ಯಾರಂದವರು ಹಾಗೆ ? ಅವನನ್ನು ಎಳೆದು ತರಲಿಲ್ಲವೇಕೆ ? ಬೆನ್ನು ಸುಲಿಸುತ್ತೇನೆ..... ವರ್ಷಕ್ಕೊಮ್ಮೆ ಹಿಡಿ ಸುವರ್ಣ ವರಹ ಕೊಟ್ಟರೆ ತಲೆ ತಿರುಗಿತೇ ಇವರದು? ಸೈನಿಕರಿಗೆ ಆಜ್ಞೆ ಕೊಡು.

**ಪುರು ಸುಮ್ಮನೆ ನಿಲ್ಲುತ್ತಾನೆ.**

ರೊಕ್ಕಕ್ಕಾಗಿ ಜೀವವನ್ನು ತೆರಲು ಸಿದ್ಧವಿದ್ದ ಜನ... ಅವರಲ್ಲಿ ಒಬ್ಬರಾದರೂ ನಿಶ್ಚಿತವಾಗಿ ಸ್ವೀಕರಿಸಿಯಾರು...

**ಪುರು:** ಯಾವ ಮುಖದಿಂದ ಅವರನ್ನು ಕೇಳಲಿ ? ರಣಾಂಗಣದಲ್ಲಿ ಸಾಯುವುದು ಬೇರೆ. ಇನ್ನೊಬ್ಬರ ಪಾಪದ ಹೊರೆ ಹೊತ್ತು ಕಳವಳಿಸುವುದು ಬೇರೆ.



11th_Kannada_Reader_Final_16-07-2018.indd 123 16-07-2018 18:43:09

**ಯಯಾತಿ:** (ಅವನ ಅಜ್ಞಾನಕ್ಕೆ ಕನಿಕರಗೊಂಡು) ಪುರು, ನಿನಗಿನ್ನೂ ಮನುಷ್ಯನ ಗುಣ ಸಂಪೂರ್ಣವಾಗಿ ಅರಿವಾಗಿಲ್ಲ. ಸೂರ್ಯನ ತೇಜದಲ್ಲಿ ಆಗದ ಕೆಲಸ ಸುವರ್ಣ ನಾಣ್ಯಗಳ ಪ್ರತಿಬಿಂಬಿತ ಕಾಂತಿಯಲ್ಲಾಗುತ್ತದೆ. ನನ್ನ ವಾರ್ಧಕ್ಯವನ್ನು ಸ್ವೀಕರಿಸಿದವರ ಕುಟುಂಬಕ್ಕೆ ಉಂಬಳಿ ಹಾಕಿಕೊಡುತ್ತೇನೆಂದು ಹೇಳಿದೆಯಾ ? ಸಂಪೂರ್ಣ ಗ್ರಾಮ... ಹತ್ತು ಗ್ರಾಮ... ನೂರು... ಅರ್ಧ ರಾಜ್ಯ... (ಏರುವ ಧ್ವನಿಯಲ್ಲಿ) ಬೇಕಾದುದನ್ನು ಕೊಡುತ್ತೇನೆಂದು ಹೇಳು. ಈ ಕೆಲಸ ಆಗಲೇಬೇಕು.

**ಪುರು:** ಎಲ್ಲ ಹೇಳಿದೆ... ಆದರೆ...

**ಯಯಾತಿ:** ಏಕೆ ? ಏಕೆ ?

**ಪುರು:** ಈ ಗ್ರಾಮ, ಹತ್ತು ಗ್ರಾಮ, ಅರ್ಧ ರಾಜ್ಯ...ಗಳನ್ನು ಯಾರಿಗಾಗಿ ಅವರು ಸ್ವೀಕರಿಸಬೇಕು. ಜನ ಏನು ಬೇಕಾದರೂ ಸಹಿಸಬಹುದು. ಆದರೆ ತಮ್ಮ ಬಲಿದಾನವನ್ನು ತಮ್ಮೆದುರಿಗೇ ಇನ್ನೊಬ್ಬರು ಉಪಯೋಗಿಸುವುದನ್ನು ಅವರು ಸಹಿಸಲಾರರು.

**ಯಯಾತಿ:** ತ್ಯಾಗದ ಬೆಲೆ ಇಷ್ಟೇನೇ ? ಅದರ ಜೊತೆಗೆ ಬರುವ ಅಮರತ್ವ, ಕೀರ್ತಿ... ?

**ಪುರು:** ತ್ಯಾಗದ ಅರ್ಥ ಅವರಿಗೇನೆಂದು ಹೇಳಲಿ ? ಕೀರ್ತಿ ಬಂದೊಡನೆ ಮನುಷ್ಯ ದೇವರಿಗೆ ಸರಿಯಾಗುತ್ತಾನೆ ನಿಜ. ಆದರೆ ಸಾಮಾನ್ಯ ಮನುಷ್ಯನಿಗೆ ಸಾಮಾನ್ಯತೆ ಸಾಕು. ಅದರಲ್ಲೇ ಶಾಶ್ವತತೆ ಇದೆ. ಅವರ ಕ್ಷುದ್ರತೆ, ಅವರ ಚಿಕ್ಕಪುಟ್ಟ ಮತ್ಸರ, ದ್ವೇಷಗಳು, ಕ್ಷುಲ್ಲಕತೆಯಲ್ಲಿ ಅವರಿಗೆ ದೊರೆಯುವ ಆನಂದ ಇಷ್ಟೇ ಸಾಕು! ದೈವಿಕತೆ ಕಲ್ಲಿನಂತೆ. ಪೂಜಿಸಲಿಕ್ಕೆ ಅಡ್ಡಿಯಿಲ್ಲ. ತಲೆಯ ಮೇಲೆ ಹೊತ್ತು ಜಯಘೋಷ ಮಾಡುತ್ತಾ ಮೆರವಣಿಗೆ ತೆಗೆಯಲಿಕ್ಕೆ ಅಡ್ಡಿಯಿಲ್ಲ. ಆದರೆ ಅದನ್ನು ಕುತ್ತಿಗೆಯಲ್ಲಿ ಧರಿಸಿಕೊಳ್ಳಲಿಕ್ಕಾಗುವುದಿಲ್ಲ.

**ಯಯಾತಿ:** ಇಲ್ಲ ಪುರು, ಏನಾದರೂ ಹಾದಿ ಒಂದು ಇರಲೇ ಬೇಕು. ಚಿಕ್ಕ ದಾರಿ ? ನಮಗೆ ಮರೆಯಾಗಿರುವ ದಾರಿ ! ಸ್ವಲ್ಪ ವಿಚಾರ ಮಾಡು! (ಒಮ್ಮೆಲೇ ನಕ್ಕು) ಮೂರ್ಖ, ಒಂದನ್ನು ಕೇಳಿದೆಯೋ ಇಲ್ಲವೋ ? ಖಂಡಿತ ಮರೆತಿರಬೇಕು... ನಾನು ಅರ್ಧ ರಾಜ್ಯವನ್ನೂ ಕೊಡುವುದಲ್ಲದೆ ಐದಾರು ವರ್ಷಗಳಲ್ಲಿ ನನ್ನ ವೃದ್ಧಾಪ್ಯವನ್ನೂ ತಿರುಗಿ ಸ್ವೀಕರಿಸುತ್ತೇನೆಂಬುದನ್ನೂ ಹೇಳಿದೆಯಾ ? ಇಲ್ಲವಲ್ಲವೇ ? ನನಗೆ ಗೊತ್ತಿತ್ತು. ಹೋಗು, ಹೇಳಿ ಬಾ... ನಡೆ, ಏಕೆ ನಿಂತಿರುವೆ ?

**ಪುರು:** ಐದಾರು ವರ್ಷ ಏಕೆ, ಮುಂದಿನ ವರ್ಷವೇ ಮರಳಿ ಸ್ವೀಕರಿಸುತ್ತೀರಿ ಎಂದೂ ಹೇಳಿದೆ.

**ಯಯಾತಿ:** ಆಮೇಲೆ ಅವರಿಗೆ ವಿಶ್ವಾಸವಾಗಲಿಲ್ಲವೇಕೆ ? ನಾನೆಂದಾದರೂ ಕೊಟ್ಟ ಮಾತನ್ನು ಮುರಿದಿದ್ದೇನೆಯೇ ?

**ಪುರು:** ಆ ಪ್ರಶ್ನೆಯಿಲ್ಲ ಅಪ್ಪಾ, ಇಲ್ಲಿ ನೀತಿಯ ಪ್ರಶ್ನೆಯಿಲ್ಲ. ವಿಶ್ವಾಸದ ಪ್ರಶ್ನೆಯಿಲ್ಲ, ಧರ್ಮದ ಪ್ರಶ್ನೆಯಿಲ್ಲ. ಕೇವಲ ಅದಷ್ಟೇ ಆಗಿದ್ದರೆ ಹೇಗಾದರೂ ಉತ್ತರ ಹುಡುಕಬಹುದಾಗಿತ್ತು. ಇಲ್ಲಿ ಮನುಷ್ಯರ ಪ್ರಶ್ನೆಯಿದೆ. ಅವರಿಗೆ ತ್ಯಾಗ ಬೇಡ. ಕೀರ್ತಿ ಬೇಡ. ಜೀವನದಲ್ಲಿ ಬದಲಾವಣೆಯೊಂದಿಲ್ಲದಿದ್ದರೆ ತೀರಿತು. ಯಾರಾದರೂ ದೇವತೆಗಳಾಗಿದ್ದರೆ ನಿಮ್ಮ ಮುಪ್ಪನ್ನು ಆನಂದದಿಂದ ಸ್ವೀಕರಿಸಬಹುದಾಗಿತ್ತು. ಇವರು ಮನುಷ್ಯರು. ಒಂದೆಡೆಗೆ ಮೃತ ವಿಶ್ವ. ಇನ್ನೊಂದೆಡೆಗೆ ಅಜಾತ ಯುಗ. ಅವೆರಡರ ನಡುವಿನ ತ್ರಿಶಂಕು ನರಕ ಅವರಿಗೆ ಬೇಡ. ಇವರಿಗೆ.....



11th_Kannada_Reader_Final_16-07-2018.indd 124 16-07-2018 18:43:09

**ಯಯಾತಿ:** (ಜುಗುಪ್ಸೆಯಿಂದ) ಹುಟ್ಟುವುದು, ಮಕ್ಕಳನ್ನು ಹಡೆಯುವುದು, ಸಾಯುವುದು, ಕೆಸರಿನಲ್ಲಿಯ ಹುಳುಗಳಂತೆ...

**ಪುರು ಸಪ್ಪಳ ಮಾಡದೆ ನಗುತ್ತಾನೆ. ಯಯಾತಿಯ ಲಕ್ಷ್ಯಕ್ಕೆ ಅದು ಬರುವುದಿಲ್ಲ.**

ಎಲ್ಲರೂ ಇದನ್ನೇ ಎಂದರೇ ? ಎಲ್ಲರಿಗೂ ಕೇಳಿ ಬಂದೆಯಾ ?

**ಪುರು:** ನಾನು ಕೇಳಿದಷ್ಟು ಜನ ಇದನ್ನೇ ಅಂದರು. ಉಳಿದವರು ನನ್ನ ಮಾತನ್ನೇ ಕೇಳಲಿಕ್ಕೆ ಸಿದ್ಧರಾಗಲಿಲ್ಲ. ನಾನು ಬಂದೊಡನೆ ನನಗೆ ಮಹಾರೋಗವಾದಂತೆ ದೂರ ಸರಿದರು.

**ಯಯಾತಿ:** ಇದೇನೆನ್ನುತ್ತಿ ಪುರು ? ಹಿಂದೆ ಜನ ನಿನ್ನನ್ನು ನೋಡಲಿಕ್ಕೆ ಇರುವೆಗಳಂತೆ ನೆರೆದಿದ್ದರಲ್ಲವೇ ? ನಿನ್ನ ಜಯಘೋಷ ಮಾಡಲಿಕ್ಕೆಂದು ಕೂಡಿದ್ದರಲ್ಲವೇ ?

**ಪುರು:** ದೇವಯಾನಿ ಶುಕ್ರಾಚಾರ್ಯರನ್ನು ಭೆಟ್ಟಿಯಾಗುವ ಮೊದಲಿನ ಸುದ್ದಿ ಅದು! ಆಗ ಶುಕ್ರಾಚಾರ್ಯರು ನನ್ನನ್ನು ಕಾಣಲಿಕ್ಕೆಂದು ಹೆಬ್ಬಾಗಿಲಿಗೆ ಬಂದಿದ್ದರು. ಅವರು ಶಾಪ ಕೊಡುವಾಗ ಸುತ್ತಲೂ ಜನ ಆಟವನ್ನು ನೋಡುತ್ತಾ ನಿಂತಿದ್ದರು. ಎಷ್ಟು ಜನ ಆ ಶಾಪವನ್ನು ಕೇಳಿದರೋ ಎಷ್ಟು ಜನ ಕೇಳಲಿಲ್ಲವೋ ! ಆದರೆ ಈಗ ಆ ವಾರ್ತೆ ಊರ ತುಂಬಾ ಹರಡಿದೆ. (ಬೇಸರದಿಂದ) ನಿನಗೆ ಗೊತ್ತು ಈ ರೀತಿ. ಈ ಊರೆಲ್ಲಾ ಏನೇನೋ ಅನಾಹುತದ ಸುದ್ದಿಗಳು ಎದ್ದಿವೆಯಂತೆ. ನಾನು ಜೀವ ಬಿಟ್ಟು ಓಡಿ ಹೋಗಿ ಶುಕ್ರಾಚಾರ್ಯರನ್ನು ಹುಡುಕುವುದನ್ನು ನೋಡಿದಾಗಲಂತೂ ಅವರಿಗೆ ಖಂಡಿತವಾಯಿತು. ಈಗ ನಿಜವಾದ ಶಾಪವೇನು ಎಂದು ಯಾರಿಗೂ ಗೊತ್ತಿಲ್ಲ. ಇಷ್ಟರಲ್ಲಿ ಅದು ಮೃತ್ಯು ಶಾಪವಾಗಿದ್ದರೂ ಆಗಿರಬಹುದು.

**ಯಯಾತಿ:** ಈಗ ಏನು ಮಾಡಲಿ, ಪುರು ? ಈಗಲಾದರೂ ಶುಕ್ರಾಚಾರ್ಯರನ್ನು ಭೆಟ್ಟಿಯಾಗಿ ಬಾ. ಇನ್ನೊಂದೇನಾದರೂ ಉಃಶಾಪವಿದ್ದರೆ ಕೇಳಿಬಾ ಹೋಗು.

**ಪುರು:** ಅದು ಸಾಧ್ಯವಿಲ್ಲ ಅಪ್ಪಾ! ನನ್ನ ಹಿಂದೆ ಯಾರಾದರೂ ಬಂದರೆ ಒಳ್ಳೆಯದಾಗಲಿಕ್ಕಿಲ್ಲ ಎಂದು ತಮ್ಮ ಶಿಷ್ಯನ ಹತ್ತಿರ ಎಚ್ಚರಿಕೆ ಹೇಳಿ ಹೋಗಿದ್ದಾರವರು. ನೀನು ಒಂದೇ ಮಾಡಬಹುದು.....

**ಯಯಾತಿ:** ಏನು ? ಏನದು ?

**ಪುರು:** ತಾಯಿ ಹೇಳಿದಂತೆ ಮಾಡುವುದು ?

**ಯಯಾತಿ:** ತಾಯಿ ? ಅಂದರೆ ?

**ಪುರು:** (ಚುಚ್ಚುವಂತೆ) ತಾಯಿ ಶರ್ಮಿಷ್ಠೆ ಹೇಳಿದಂತೆ ಮಾಡುವುದು. ವಾನಪ್ರಸ್ಥಕ್ಕೆ ಹೋಗುವುದು.

**ಯಯಾತಿ:** ಪುರು, ಈಗಲಾದರೂ ನನ್ನನ್ನು ಕಾಡಬೇಡ. ನಿನ್ನ ಕಾಲು ಬೀಳುತ್ತೇನೆ. ನನ್ನ ವೇದನೆಯ ಕಲ್ಪನೆಯಿಲ್ಲದವನಂತೆ ಮಾತಾಡಬೇಡ. ಈಗ ಅಮಾನುಷ ಚೇಷ್ಟೆ ಬೇಡ. ಮುಪ್ಪು ಬರುವಾಗ ಬಂದಿದ್ದರೆ ಅದನ್ನು ಎದುರಿಸುವ ಧೈರ್ಯವೂ ಬರಬಹುದಾಗಿತ್ತು..... ಇದು ಶಾಪ! ಯಾರಾದರೂ ನನ್ನ ಶಾಪವನ್ನು ಧರಿಸಿದರೆ ಅವನನ್ನು ಐದಾರು ವರ್ಷಗಳಲ್ಲಿ ನಾನು ಮುಕ್ತಗೊಳಿಸುತ್ತೇನೆ..... ಅವನ ಎದೆ ಕತ್ತಲೆಯಿಂದ ತುಂಬ ಬೇಕಾಗಿಲ್ಲ. ಆದರೆ ನಾನು ಶಾಪವನ್ನು ಧರಿಸಿದರೆ... ಯೋಚಿಸು ಪುರು. ಆಗ ನಾನು ಹೋಗುವ ದಾರಿಗೊಂದೇ ದಿಕ್ಕು..... ಮುಂದೆ, ಮುಂದೆ. ತಿರುಗಿ ಬರಲಾರದ ದಾರಿಯದು. ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು ಪುರು. ಕನಸುಗಳಿಲ್ಲದ ದಾರಿಯಲ್ಲಿ ಹೇಗೆ ಹೋಗುವುದು ?



11th_Kannada_Reader_Final_16-07-2018.indd 125 16-07-2018 18:43:09

**ಬಿಕ್ಕಿ ಬಿಕ್ಕಿ ಅಳುತ್ತಾನೆ. ಪುರು ಎರಡು ಕೈಕಟ್ಟಿಕೊಂಡು ಅವನತ್ತ ಕನಿಕರದಿಂದ ಆದರೆ ಸ್ಥಿರಮುದ್ರೆಯಿಂದ ನೋಡುತ್ತಿದ್ದಾನೆ.**

**ಪುರು:** (ಒಂದು ಕ್ಷಣ ತಡೆದು) ಒಂದು ಉಪಾಯವಿದೆ ಅಪ್ಪಾ! ಇನ್ನೂ ಒಬ್ಬನಿದ್ದಾನೆ.

**ಯಯಾತಿ:** (ಜಿಗಿದೆದ್ದು) ಯಾರು ? ಯಾರವನು ಪುರು ?

**ಪುರು:** ತನ್ನ ವಂಶದವರೆಂದೂ ಮಾಡದಿದ್ದನ್ನು ಹೊರಟ ಕೀಟಕ!

**ಒಂದೆರಡು ಕ್ಷಣ ಯಯಾತಿಗೆ ಏನೂ ಅರ್ಥವಾಗುವುದಿಲ್ಲ. ಆಮೇಲೆ ಒಮ್ಮೆಲೇ ಆ ಮಾತಿನ ಅರ್ಥದ ಅರಿವಾಗುತ್ತದೆ.**

**ಯಯಾತಿ:** ಬಾಯಿ ಮುಚ್ಚು ಮೂರ್ಖ! ಉಪಾಯವಿದೆಯಂತೆ... ಒಂದು ಗಳಿಗೆ ಸಹ ನಿನ್ನೆದುರಿನಲ್ಲಿ ನಿಲ್ಲುವುದಿಲ್ಲ ನಾನು...!

**ವೇಗದಿಂದ ಹೋಗುತ್ತಾನೆ. ಪುರು ಅದೇ ಸ್ಥಿರಮುದ್ರೆಯಿಂದ ಅವನೆಡೆಗೆ ನೋಡುತ್ತಿದ್ದಾನೆ. ಈ ಹೊತ್ತಿಗೆ ಅವನು ಆತ್ಮೀಯತೆಯ ಕನಿಕರಮೂರ್ತಿಯಾಗಿದ್ದಾನೆ. ಆ ಹೊತ್ತಿಗೆ ಶರ್ಮಿಷ್ಠೆ ಒಳಗೆ ಬರುತ್ತಾಳೆ.**

**ಶರ್ಮಿಷ್ಠೆ:** ಅವರು ಎಲ್ಲಿ ಹೋದರು ? ಏನಾಯಿತು ಯುವರಾಜರೇ ? ಮಹಾರಾಜರು ಈಗಷ್ಟೇ ಹೋದರು. ನಾನು ತಡೆಯಲು ಯತ್ನಿಸಿದರೆ ನನ್ನನ್ನು ದೂಡಿ ಹೋದರು. ಏನಾಯಿತು ?

**ಪುರು:** ಅದರ ಮೊದಲು ನಾನೊಂದು ಮಾತು ಕೇಳಲೇ ?

**ಶರ್ಮಿಷ್ಠೆ:** ಹೂಂ ಆಗಲಿ.

**ಪುರು:** ನನ್ನನ್ನು ಬಹುವಚನದಿಂದ ಸಂಬೋಧಿಸಬೇಡ ತಾಯೇ. ನನಗೆ ಸರಿಯೆನಿಸುವುದಿಲ್ಲ. ನಾನಿಲ್ಲಿಗೆ ಬರುವ ಮೊದಲು ನಿನ್ನ ಬಗ್ಗೆ ಅನೇಕ ಕ್ರೂರ ಕಥೆಗಳನ್ನು ಕೇಳಿದ್ದೆ. ನೀನು ಇಲ್ಲಿ ಬಂದಂದಿನಿಂದ ಅರಮನೆಯಲ್ಲಿ ಸುಖದ ಕ್ಷಣ ಬಹಳ ಅಪರೂಪವೆಂದು ಕೇಳಿದ್ದೆ. ನಿನ್ನನ್ನು ಕಾಣಲು ಉತ್ಸುಕನಾಗಿ ಬಂದೆ ನಾನು. ಈ ಅಸಹ್ಯ ಅರಮನೆಯ ವಿರುದ್ಧ ನಿನ್ನ ದ್ವೇಷದಲ್ಲಿ ಸಹಕರಿಸಲು ಬಂದೆ. ಇಲ್ಲಿ ಬಂದರೇನು ? ಅಪ್ಪನ ಬಗ್ಗೆ ನಿನ್ನಲ್ಲಿರುವ ಪ್ರೀತಿಯನ್ನು ಕಂಡು ಬೆರಗಾದೆ. ಅವನೊಡನೆ ನರಕದಲ್ಲಿ ಪಾಲುಗಾರ್ತಿಯಾಗಲು ಹೊರಟಿರುವೆ. ಕೌತುಕ, ಸ್ತುತಿ, ಯಶಸ್ಸುಗಳನ್ನು ಗೆಲ್ಲಬಲ್ಲಂತಹ ಗುಣಗಳು ಅವನಲ್ಲಿ ಸಾಕಷ್ಟಿವೆ. ಆದರೆ ಇಂತಹ ನಿಸ್ವಾರ್ಥ ಪ್ರೇಮಕ್ಕೆ ಅವನು ಯೋಗ್ಯನಾಗಿರುವನೇ ?

**ಶರ್ಮಿಷ್ಠೆ:** (ನಕ್ಕು) ನನ್ನ ಮನಸ್ಸು ಬಿರುಗಾಳಿಗೆ ಸಿಕ್ಕ ತಾಮ್ರಸ್ಥಂಭದಂತೆ ಅಂಕುಡೊಂಕಾಗಿದೆ. ಅದರ ತರ್ಕ ನಿನಗೆ ತಿಳಿದೀತೆಂಬ ಭರವಸೆ ನನಗಿಲ್ಲ.

**ಪುರು:** ಪ್ರಯತ್ನವನ್ನಾದರೂ ಮಾಡಬಹುದಷ್ಟೆ?

**ಶರ್ಮಿಷ್ಠೆ:** ಒಂದು ಸರಳ ಮಾತು ಹೇಳುತ್ತೇನೆ. ಮಹಾರಾಜರು ರೇಗಾಡಿದರು, ಕೂಗಾಡಿದರು, ಎದೆ ಬಡಿದುಕೊಂಡರು. ನನ್ನನ್ನು ಇಲ್ಲಿ ಒದ್ದು ಓಡಿಸಿದ್ದರೆ ಎಲ್ಲ ತೊಡಕು ಬಿಡುತ್ತಿತ್ತೆಂದು ಸ್ಪಷ್ಟವಾಗಿದೆ. ಆದರೆ ಈ ವಿಚಾರಕ್ಕೆ ಅವರು ಆಸ್ಪದ ಕೊಡಲಿಲ್ಲ.



11th_Kannada_Reader_Final_16-07-2018.indd 126 16-07-2018 18:43:09

ಅರ್ಥವಾಗಲಿಲ್ಲವೇ ?

**ಪುರು:** (ನಕ್ಕು) ಅರ್ಥವಾಯಿತು ತಾಯಿ. ಇಷ್ಟು ದಿನವಾಗಿದ್ದರೆ ಆಗುತ್ತಿರಲಿಲ್ಲ. ಆದರೆ ಈಗ ನನ್ನ ಮನಸ್ಸು ಪರೆ ಬಿಟ್ಟು ಹೊರಗೆ ಬರುತ್ತಿರುವ ಹಾವಿನಂತಾಗಿದೆ. ಈಗ ಅರ್ಥವಾಗಲು ಕಠಿಣವೆನ್ನಿಸುವುದಿಲ್ಲ.

**ಶರ್ಮಿಷ್ಠೆ:** (ಮುಂದುವರೆಸುತ್ತಾ) ಅವರಿಗೆ ಭೋಗದ ಅನುಭವವಿತ್ತು. ಪ್ರೀತಿಯ ಅನುಭವವಿರಲಿಲ್ಲ. ಆ ಅನುಭವ ಬಂದಾಗ ಚಿಕ್ಕ ಮಕ್ಕಳಂತೆ ತಮ್ಮ ಭಾವನೆಗಳಿಗೆ ತಾರ್ಕಿಕ ಕಾರಣಗಳನ್ನು ಹುಡುಕುತ್ತಾ ಹೊರಟರು. ಈ ಮಾತಿನಲ್ಲಿ ಅವರ ನಿಷ್ಪಾಪತೆಯಿದೆ ಪುರು. ಅದಿರಲಿ, ಈಗ ಏನಾಯಿತು ಹೇಳು ?

**ಪುರು:** ಅಪ್ಪನ ಶಾಪವನ್ನು ಸ್ವೀಕರಿಸಲು ಯಾರೂ ಸಿದ್ಧರಾಗಲಿಲ್ಲ. ಒಬ್ಬನು ಮಾತ್ರ ಸಿದ್ಧನಾಗಿದ್ದಾನೆ. ಅವನ ಹೆಸರನ್ನು ಹೇಳಲಿಕ್ಕೆ ಯತ್ನಿಸಿದೆ.

**ಶರ್ಮಿಷ್ಠೆ:** ಆಮೇಲೆ ?

**ಪುರು:** ಅಪ್ಪ ಆ ಹೆಸರನ್ನು ಕೇಳಲಿಕ್ಕೇ ಸಿದ್ಧನಾಗಲಿಲ್ಲ.

**ಶರ್ಮಿಷ್ಠೆ:** ಸಿದ್ಧರಾಗಲಿಲ್ಲ ?

**ಪುರು:** ಉಹುಂ! ಅದರ ಕಾರಣವೂ ಬೀಳಲಿಲ್ಲ. ಅವರಿಗೆ ಆ ಹೆಸರು ಮೊದಲೇ ಗೊತ್ತಾಗಿದೆ.

**ಶರ್ಮಿಷ್ಠೆ:** ಯಾರದು ?

**ಪುರು:** ನಾನು !

**ಶರ್ಮಿಷ್ಠೆ:** (ಕೋಪದಿಂದ) ಪುರು, ಮೂರ್ಖತನ ಮಾಡಬೇಡ. ಕಾರಣವಿಲ್ಲದೆ ಬಲಿದಾನ ಮಾಡುವುದು ವಿಕೃತಿಯ ಲಕ್ಷಣ. (ಪುರು ನಗುತ್ತಾನೆ.) ನಗಬೇಡ. ತ್ಯಾಗದ ಅಭಿಮಾನವೂ ಒಂದು ವಿಷ. ನೆನಪಿರಲಿ.

**ಪುರು:** ಅಭಿಮಾನವಲ್ಲ. ಆನಂದ. ನನಗೆ ಈ ವಂಶದ ಅಂತಃಸತ್ವವನ್ನು ಅರಿಯಬೇಕಾಗಿದೆ. ಮುತ್ತಾತಂದಿರನ್ನು ಯಾವ ಶಕ್ತಿ ರೂಪಿಸಿತ್ತೆಂಬುದನ್ನು ತಿಳಿಯಬೇಕಾಗಿದೆ.

**ಶರ್ಮಿಷ್ಠೆ:** ಮತ್ತು ಭೂತಕಾಲದ ಮೃಗಜಲದ ಹಿಂದೆ ಓಡಬೇಕಾಗಿದೆ ! ಚಿತ್ರಲೇಖೆಯ ಬಗ್ಗೆಯೇನು ?

**ಪುರು:** ಅದನ್ನೊಂದು ನೆನೆಸಬೇಡ ತಾಯೆ. ಹೊಸ ಜನನದ ಬಾಗಿಲಲ್ಲಿ ನಿಂತ ಶಿಶುವಿನಂತಿದ್ದೇನೆ. ಆ ಒಂದು ಶಬ್ದದಿಂದ ನನ್ನನ್ನು ಹಿಂದೂಡಬೇಡ.

**ಒಮ್ಮೆಲೇ ಕಾಲು ಕುಸಿದಂತಾಗಿ ಬೀಳಲಾಗುತ್ತಾನೆ. ಆಸನವನ್ನು ಹಿಡಿದು ಸಾವರಿಸಿಕೊಳ್ಳುತ್ತಾನೆ. ಮುಖದ ಮೇಲೆ ವೇದನೆ.**

**ಶರ್ಮಿಷ್ಠೆ:** ಪುರು ಏನಾಯಿತು ?

**ಪುರು:** (ವೇದನೆಯಲ್ಲೇ ನಗುತ್ತಾ) ಶಾಪ ತಾಯೇ ! ಹೊಸ ಜನನದ ವೇದನೆ!

**ನಗುತ್ತಾನೆ.**



11th_Kannada_Reader_Final_16-07-2018.indd 127 16-07-2018 18:43:09

## ಕೃತಿ–ಕರ್ತೃ ವಿಚಾರ



ಗಿರೀಶ್ ಕಾರ್ನಾಡರು 19.05.1938ರಲ್ಲಿ ಮಹಾರಾಷ್ಟ್ರದಲ್ಲಿ ಜನಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿದರು. ಮದ್ರಾಸಿನ 'ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್'ನಲ್ಲಿ ಕಾರ್ಯ ನಿರ್ವಹಿಸಿದರು. ಅನಂತರ ಪುಣೆಯ ಪಾಲಂ ಇನ್ಸ್‌ಟಿಟ್ಯೂಟ್‌ನ ನಿರ್ದೇಶಕರಾದರು. ಇವರ ತುಘಲಕ್, ಹಯವದನ, ಯಯಾತಿ, ನಾಟಕಗಳು ತುಂಬಾ ಪ್ರಸಿದ್ಧವಾಗಿವೆ. ಇವರಿಗೆ 1974ರಲ್ಲಿ ಪದ್ಮಶ್ರೀ ಪ್ರಶಸ್ತಿ, 1992ರಲ್ಲಿ ಪದ್ಮಭೂಷಣ ಪ್ರಶಸ್ತಿ, 1970ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1998ರಲ್ಲಿ ಸಮಗ್ರ ಸಾಹಿತ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

ಪ್ರಸ್ತುತ ಭಾಗವನ್ನು ಅವರ ಯಯಾತಿ ನಾಟಕದಿಂದ ಆರಿಸಿಕೊಳ್ಳಲಾಗಿದೆ.

## ಕಠಿಣ ಪದಗಳ ಅರ್ಥ

ಚಿತ್ರಾವೃತ–ಚಿತ್ರದಲ್ಲಿ ಬರುವಂತಹ; ಅಜಾತಯುಗ–ಹುಟ್ಟದಿರುವ ಯುಗ, ಮುಂಬರಲಿರುವ ಕಾಲ; ಉಂಬಳಿ–ಮಾನ್ಯವಾಗಿ ಕೊಡುವ ಭೂಮಿ, ಗ್ರಾಮ; ತ್ರಿಶಂಕು–ಸೂರ್ಯವಂಶದ ಸತ್ಯವ್ರತನೆಂಬ ರಾಜ; ಶಂಕು–ಪಾಪ; ಮೃಗಜಲ–ಮರೀಚಿಕೆ; ನೀರವತೆ–ಮೌನ; ಆರ್ತಸ್ವರ–ದೀನಸ್ವರ; ಧೃತಿ–ಧೈರ್ಯ; ಪತಿತೆ–ನೀತಿಗೆಟ್ಟವಳು; ಕರಂಡಿಕೆ–ಭರಣಿ, ಡಬ್ಬಿ; ಉಃಶ್ಶಾಪ–ಶಾಪಪರಿಹಾರ, ವಿಮೋಚನೆ; ವಾರ್ಧಕ್ಯ–ವೃದ್ಧಾಪ್ಯ; ಅಮಾನುಷ–ಕ್ರೂರ; ಆರ್ಯಾವರ್ತ–ಆರ್ಯರು ನೆಲೆಸಿದ ಸ್ಥಳ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ದೇವಯಾನಿಯ ತಂದೆ ಯಾರು ?
2. ಶರ್ಮಿಷ್ಠೆ ಯಾವ ವಂಶದವಳು ?
3. ಶುಕ್ರಾಚಾರ್ಯರು ಯಯಾತಿಗೆ ಕೊಟ್ಟ ಶಾಪ ಯಾವುದು ?
4. ತ್ಯಾಗದ ಬೆಲೆ ಇಷ್ಟೇನಾ ಎಂದು ಯಯಾತಿ ಕೊರಗಿದ್ದು ಏಕೆ ?
5. ಪುರುವಿನ ತಾಯಿ ಯಾರು ?
6. ಶರ್ಮಿಷ್ಠೆಯು ವಾನಪ್ರಸ್ಥಕ್ಕೆ ಹೋಗೋಣ ಎಂದು ಯಯಾತಿಗೆ ಏಕೆ ಹೇಳುತ್ತಾಳೆ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ವಂಶದ ಹಿರಿಮೆಯ ವಿಷಯದಲ್ಲಿ ಯಯಾತಿ–ಪುರುವಿಗಿರುವ ಭಿನ್ನಾಭಿಪ್ರಾಯಗಳನ್ನು ತಿಳಿಸಿ.
2. ತನ್ನ ವಾರ್ಧಕ್ಯವನ್ನು ಸ್ವೀಕರಿಸುವವರಿಗೆ ಯಯಾತಿ ಯಾವ ಯಾವ ಸೌಲಭ್ಯಗಳನ್ನು ಘೋಷಿಸುತ್ತಾನೆ ?
3. ಮನುಷ್ಯರು ವಾರ್ಧಕ್ಯವನ್ನು ಸ್ವೀಕರಿಸಿಸಲು ಏಕೆ ಮುಂದೆ ಬರುವುದಿಲ್ಲ ಎಂದು ಪುರು ಹೇಳುತ್ತಾನೆ ?
4. 'ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು; ಆದರೆ ಕನಸುಗಳಿಲ್ಲದ ದಾರಿಯಲ್ಲಿ ಹೇಗೆ ಹೋಗುವುದು' ಎಂದು ಯಯಾತಿ ಹೇಳುವುದೇಕೆ ?
5. ಶುಕ್ರಾಚಾರ್ಯರು ಅಲ್ಲಿಗೆ ಏಕೆ ಬಂದರು ? ಏನೆಂದು ಶಾಪ ಕೊಟ್ಟರು ?

## ಚಟುವಟಿಕೆ

1. ಯಯಾತಿ ನಾಟಕದ ಪೂರ್ಣ ಪ್ರತಿಯನ್ನು ಪಡೆದು ಓದಿರಿ.
2. ಗಿರೀಶ್ ಕಾರ್ನಾಡರು ರಚಿಸಿರುವ ತುಘಲಕ್ ನಾಟಕವನ್ನು ಶಾಲೆಯಲ್ಲಿ ಅಭಿನಯಿಸಿ.



11th_Kannada_Reader_Final_16-07-2018.indd 128 16-07-2018 18:43:10

ಘಟಕ ಆರು

# ಸಂಧಿ ಪ್ರಕರಣ

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೆ ಒಂದನ್ನೊಂದು ಸೇರಿ ಒಂದೇ ಪದವಾಗುವುದಕ್ಕೆ ಸಂಧಿ ಎನ್ನುತ್ತೇವೆ. ಸಂಧಿಯಲ್ಲಿ ಸ್ವರ ಸಂಧಿ, ವ್ಯಂಜನ ಸಂಧಿ ಎಂದು ಎರಡು ವಿಧಗಳಿವೆ.

## ಕನ್ನಡ ಸಂಧಿಗಳು

ಕನ್ನಡದಲ್ಲಿ ಒಟ್ಟು ಮೂರು ಬಗೆಯ ಸಂಧಿಗಳಿವೆ. ಅವುಗಳು : ಲೋಪಸಂಧಿ, ಆಗಮಸಂಧಿ, ಆದೇಶಸಂಧಿ.

### ಲೋಪಸಂಧಿ

ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವ ಪದದ ಕೊನೆಯ ಅಕ್ಷರವು ಲೋಪವಾಗುವುದನ್ನೇ ಲೋಪಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಊರು+ಅನ್ನು=ಊರನ್ನು(ಉಕಾರ ಲೋಪವಾಗಿದೆ)

ಕಾಡು+ಇಗೆ=ಕಾಡಿಗೆ(ಉಕಾರ ಲೋಪವಾಗಿದೆ)

### ಆಗಮಸಂಧಿ

ಸ್ವರದ ಮುಂದೆ ಸ್ವರವು ಬಂದು ಲೋಪ ಸಂಧಿಯಾದರೆ; ಆಗ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ನಡುವೆ 'ಯ'ಕಾರವೋ ಅಥವಾ 'ವ'ಕಾರವೋ ಹೊಸದಾಗಿ ಬಂದು ಸೇರಿಕೊಳ್ಳುತ್ತದೆ. ಇದನ್ನು ಆಗಮಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಹಳ್ಳಿ+ಅಲ್ಲಿ=ಹಳ್ಳಿಯಲ್ಲಿ(ಯಕಾರಾಗಮ)

ಕರು+ಅನ್ನು=ಕರುವನ್ನು(ವಕಾರಾಗಮ)

### ಆದೇಶಸಂಧಿ

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರವು ಆದೇಶವಾಗಿ



11th_Kannada_Reader_Final_16-07-2018.indd 129 16-07-2018 18:43:10

ಬರುವುದನ್ನೇ ಆದೇಶಸಂಧಿ ಎಂದು ಕರೆಯುತ್ತಾರೆ. ಮುಖ್ಯವಾಗಿ ಉತ್ತರ ಪದದ ಮೊದಲಿನ ಅಕ್ಷರಗಳಾದ ಕ,ತ,ಪ–ಗಳಿಗೆ ಅದೇ ವರ್ಗದ ತೃತೀಯಾಕ್ಷರಗಳಾದ ಗ,ದ,ಬ–ಗಳು ಆದೇಶವಾಗುತ್ತವೆ.

ಉದಾಹರಣೆಗೆ:

ಅಡಿ+ಕಲ್ಲು=ಅಡಿಗಲ್ಲು(ಕಕಾರಕ್ಕೆ ಗಕಾರ ಆದೇಶವಾಗಿದೆ)

ಕೆಳ+ತುಟಿ=ಕೆಳದುಟಿ(ತಕಾರಕ್ಕೆ ದಕಾರ ಆದೇಶವಾಗಿದೆ)

ಕಣ್+ಪನಿ=ಕಂಬನಿ(ಪಕಾರಕ್ಕೆ ಬಕಾರ ಆದೇಶವಾಗಿದೆ)

### ಪ್ರಕೃತಿಭಾವ

ಸ್ವರದ ಮುಂದೆ ಸ್ವರವು ಬಂದರೂ, ಕೆಲವು ಕಡೆಗಳಲ್ಲಿ ಲೋಪ–ಆಗಮ–ಆದೇಶ ಸಂಧಿಗಳಾಗದೆ ಇರುವ ಪದಗಳು ಇರುವ ಹಾಗೆಯೇ ಇರುವುದಕ್ಕೆ ಪ್ರಕೃತಿಭಾವ ಎಂದು ಎಂದು ಕರೆಯುತ್ತಾರೆ.

ಉದಾಹರಣೆಗೆ:

ಆ+ಅರಸ=ಆ ಅರಸ

ಓಹೋ+ನಿಧಿ ಸಿಕ್ಕಿತು!=ಓಹೋ ನಿಧಿ ಸಿಕ್ಕಿತು!

ದೇವರೇ+ಅವರನ್ನು ಕಾಪಾಡು=ದೇವರೇ ಅವರನ್ನು ಕಾಪಾಡು!

## ಸಂಸ್ಕೃತ ಸಂಧಿಗಳು

ಸಂಸ್ಕೃತ ಸಂಧಿಗಳನ್ನು ಸ್ವರ ಸಂಧಿಗಳು, ವ್ಯಂಜನ ಸಂಧಿಗಳೆಂದು ಎರಡು ರೀತಿಯಲ್ಲಿ ಗುರುತಿಸಬಹುದು.

## ಸಂಸ್ಕೃತ ಸ್ವರ ಸಂಧಿಗಳು

### ಸವರ್ಣದೀರ್ಘಸಂಧಿ

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಸ್ವರದ ದೀರ್ಘ ಸ್ವರವು ಬರುವುದನ್ನು ಸವರ್ಣದೀರ್ಘ ಸಂಧಿ ಎಂದು ಎಂದು ಕರೆಯುತ್ತಾರೆ.

ಉದಾಹರಣೆಗೆ:

ಭೀಮ+ಅರ್ಜುನ=ಭೀಮಾರ್ಜುನ(ಅ+ಅ=ಆ)

ಕವಿ+ಇಂದ್ರ=ಕವೀಂದ್ರ(ಇ+ಇ=ಈ)

ಗುರು+ಉಪದೇಶ=ಗುರೂಪದೇಶ(ಉ+ಉ=ಊ)



11th_Kannada_Reader_Final_16-07-2018.indd 130 16-07-2018 18:43:10

## ಗುಣಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಇಈ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏ–ಕಾರವೂ, ಉಊ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಓ–ಕಾರವೂ; ಋ–ಕಾರವು ಪರವಾದರೆ ಅವೆರಡರ ಸ್ಥಾನದಲ್ಲಿ ಅರ್–ಕಾರವೂ ಆದೇಶವಾಗಿ ಬರುವುದನ್ನು ಗುಣಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಸುರ+ಇಂದ್ರ=ಸುರೇಂದ್ರ(ಅ+ಇ=ಏ)

ಚಂದ್ರ +ಉದಯ=ಚಂದ್ರೋದಯ(ಅ+ಉ=ಓ)

ಮಹ+ಋಷಿ=ಮಹರ್ಷಿ(ಅ+ಋ=ಅರ್/ರ್)

## ವೃದ್ಧಿಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಉತ್ತರ ಪದದ ಮೊದಲಲ್ಲಿ ಏಐ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಐಕಾರವೂ; ಓಔ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಔಕಾರವೂ ಬರುವುದನ್ನು ವೃದ್ಧಿ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಏಕ+ಏಕ=ಏಕೈಕ(ಅ+ಏ=ಐ)

ಮಹಾ+ಔನ್ನತ್ಯ=ಮಹೌನ್ನತ್ಯ(ಆ+ಔ=ಔ)

## ಯಣ್‌ಸಂಧಿ

ಪೂರ್ವ ಪದದ ಕೊನೆಯಲ್ಲಿ ಇಈಉಊಋ–ಕಾರಗಳಿಗೆ ಸವರ್ಣವಲ್ಲದ ಅಕ್ಷರಗಳು ಪರವಾದರೆ, ಇಈ–ಕಾರಗಳಿಗೆ 'ಯ'ಕಾರವೂ; ಉಊ–ಕಾರಗಳಿಗೆ 'ವ'ಕಾರವೂ; ಋಕಾರಕ್ಕೆ 'ರ'ಕಾರವೂ ಆದೇಶವಾಗಿ ಬರುವುದನ್ನು ಯಣ್ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಪ್ರತಿ+ಉತ್ತರ=ಪ್ರತ್ಯುತ್ತರ(ಇಕಾರಕ್ಕೆ ಯಕಾರ)

ಮನು+ಅಂತರ=ಮನ್ವಂತರ(ಉಕಾರಕ್ಕೆ ವಕಾರ)

ಪಿತೃ+ಆರ್ಜಿತ(ಋಕಾರಕ್ಕೆ ರಕಾರ)



11th_Kannada_Reader_Final_16-07-2018.indd 131 16-07-2018 18:43:10

# ಸಂಸ್ಕೃತ ವ್ಯಂಜನ ಸಂಧಿಗಳು

## ಜಸ್ತ್ವಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಕ,ಚ,ಟ,ತ,ಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಆಯಾ ವರ್ಗದ ಮೂರನೆಯ ವ್ಯಂಜನಾಕ್ಷರಗಳಾದ ಗ,ಜ,ಡ,ದ,ಬ–ಗಳು ಆದೇಶವಾಗಿ ಬರುವುದನ್ನು ಜಸ್ತ್ವಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ದಿಕ್+ಅಂತ=ದಿಗಂತ(ಕಕಾರಕ್ಕೆ ಗಕಾರ ಆದೇಶವಾಗಿದೆ)

ಸತ್+ಆನಂದ=ಸದಾನಂದ(ತಕಾರಕ್ಕೆ ದಕಾರಾದೇಶ)

ಷಟ್+ಆನನ=ಷಡಾನನ(ಟಕಾರಕ್ಕೆ ಡಕಾರಾದೇಶ)

## ಶ್ಚುತ್ವಸಂಧಿ

ಪೂರ್ವ ಪದದ ಕೊನೆಯಲ್ಲಿ ಸಕಾರ ಹಾಗೂ ತವರ್ಗಾಕ್ಷರಗಳಿಗೆ ಶಕಾರ ಮತ್ತು ಚವರ್ಗಾಕ್ಷರಗಳು ಪರವಾದರೆ; ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶವಾಗಿ ಬರುವುದನ್ನೇ ಶ್ಚುತ್ವಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಮನಸ್+ಶಾಂತಿ=ಮನಶ್ಶಾಂತಿ(ಸಕಾರಕ್ಕೆ ಶಕಾರಾದೇಶ)

ಸತ್+ಚಿತ್ತ=ಸಚ್ಚಿತ್ತ(ತಕಾರಕ್ಕೆ ಚಕಾರಾದೇಶ)

## ಅನುನಾಸಿಕಸಂಧಿ

ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಾದ ಕಚಟತಪ ವ್ಯಂಜನಗಳಿಗೆ ಯಾವುದೇ ವ್ಯಂಜನಗಳು ಪರವಾದರೂ ಅದೇ ವರ್ಗದ ಅನುನಾಸಿಕಗಳಾದ ಙಞಣನಮಗಳು ಆದೇಶವಾಗಿ ಬರುವುದನ್ನೇ ಅನುನಾಸಿಕಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ :

ದಿಕ್+ನಾಗ=ದಿಙ್ನಾಗ

ಷಟ್+ಮುಖ=ಷಣ್ಮುಖ

ಸತ್+ಮಾನ=ಸನ್ಮಾನ



11th_Kannada_Reader_Final_16-07-2018.indd 132 16-07-2018 18:43:10

ಘಟಕ ವಿಳು

# ವಿಜ್ಞಾನ



| | | |
|---|---|---|
| **ಪದ್ಯ** | : ಮನ್ವಂತರ | – ಟಿ.ಆರ್.ಕಣ್ಣನ್. |
| **ಗದ್ಯ** | : ಸರ್ಪಗಂಧಿ | – ಬಿ.ಜಿ.ಎಲ್. ಸ್ವಾಮಿ |
| **ಉಪಪಠ್ಯ** | : ಸೌಂದರ್ಯ ವರ್ಧಕಗಳು ಎಷ್ಟು ಸುರಕ್ಷಿತ? | – ಡಿ.ವಿ.ಹೆಗಡೆ |
| **ವ್ಯಾಕರಣ** | : ಸಮಾಸಗಳು | |



11th_Kannada_Reader_Final_16-07-2018.indd 133 16-07-2018 18:43:10

ಕಾವ್ಯ ಕಣಜ

ಘಟಕ ವಿಳು

# ಮನ್ವಂತರ

– ಟಿ.ಆರ್.ಕಣ್ಣನ್




ಇಂದು ವಿಜ್ಞಾನ, ತಂತ್ರಜ್ಞಾನಗಳೇ ನಿತ್ಯವೂ ಎಲ್ಲಾ ಹಂತಗಳಲ್ಲೂ ಬಳಕೆಗೊಳ್ಳುತ್ತಾ ಮಾನವ ಬದುಕಿನ ರೀತಿಯನ್ನೇ ಬದಲಿಸಿವೆ. ಈ ವಿಜ್ಞಾನದ ಕ್ರಾಂತಿಕಾರಕ ಸಂಶೋಧನೆಗಳನ್ನು ಅಳವಡಿಸಿಕೊಂಡು ಮಾನವ ಅವುಗಳನ್ನು ತನ್ನ ಬದುಕಿಗೆ ಪೂರಕವಾಗಿಸಿಕೊಂಡಿದ್ದಾನೆ. ಮಾನವ ಕುಲಕ್ಕೆ ಒಳಿತನ್ನುಂಟು ಮಾಡಲು ವಿಜ್ಞಾನ, ತಂತ್ರಜ್ಞಾನಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬ ಚಿಂತನೆಯತ್ತ ನಮ್ಮನ್ನು ಈ ಕವಿತೆಯು ಕೊಂಡೊಯ್ಯುತ್ತದೆ.





11th_Kannada_Reader_Final_16-07-2018.indd 134 16-07-2018 18:43:10

ಅಂದು.....
ಅಂದಿನ ಮನುಜರು
ಇಳೆಯಲಿ ಬಾಳಲು ನೆಮ್ಮದಿ ಕಾಣಲು
ಹಲಬಗೆ ಯತ್ನವ ಮಾಡಿದರು.
ಗುಹೆಯಲಿ ವಾಸವ ಮಾಡಿದರು
ಬದುಕನು ಬೇಟೆಗೆ ಹೂಡಿದರು
ಬಿರುಗಾಳಿಗೆ, ಬಿರುಮಳೆಗೆ
ಮಿಂಚಿನ ಸಂಚಿಗೆ, ಸಿಡಿಲಿನ ಸಿಡಿಲಿಗೆ
ಕಾರ್ಮೋಡದ ಕಬ್ಬೊಗೆ ಚಲನೆಗೆ
ಬೆಚ್ಚಿದರು ಬಹುಭಯದಿಂ ಜೀವನ ನಡೆಸಿದರು.
ಹಸಿ ಮಾಂಸವನುಣ್ಣುತ ಬಾಳಿದರು
ಚರ್ಮವ ಉಡುಗೆಗೆ ಬಳಸಿದರು
ಮನಮನ ತುತ್ತಾಗಿ ಔಷಧಿ ಕಾಣದೆ ತೊತ್ತಾಗಿ
ನರಳುತ–ಕೊರಗುತ ವಿಧಿಯನ್ನಳಿಯುತ
ಜೀವನ ತೆತ್ತರು ನೋವಿನಲಿ.
ಇಂದು.....
ವಿಜ್ಞಾನದ ಮುನ್ನಡೆಯಿಂದ
ವಿಶ್ವವೆ ಒಂದು ಮನೆಯಾಯ್ತು
ಬಗೆ ಬಗೆ ಶೋಧನೆ ನಡೆಸುತ
ಸಾಧನ ಪಥದಲಿ ತೊಡಗಿಹರು
ಕೃತಕ ಉಪಗ್ರಹಗಳ ತಯಾರಿಸಿ
ಬಾನಿನ ಕಕ್ಷೆಗೆ ಸೇರ್ಪಡಿಸಿ
ಹಲ ವಿಧ ಮಾಹಿತಿ ಸಂಗ್ರಹಿಸಿ
ವಿಶ್ವದ ಜನತೆಗೆ ಕೊಡುತಿಹರು
ವಿಶ್ವದ ಪ್ರಗತಿಗೆ ಪೂರಕವಾಗಲು
ವಿಜ್ಞಾನವು ನಿಜಕೂ ವರವಹುದು
ವಿಶ್ವಮಾನ್ಯರ ವಾಣಿಯನರಿತು
ನಡೆಯಲು ವಿಶ್ವಕೆ ಸೊಗವಿಹುದು.



11th_Kannada_Reader_Final_16-07-2018.indd 135 16-07-2018 18:43:10

## ಕವಿ–ಕಾವ್ಯ ಪರಿಚಯ

ಈ ಕವನದ ಕರ್ತೃ ತ.ರಂ.ಕಣ್ಣನ್. ಶ್ರೀಯುತರು ಕನ್ನಡ ಸ್ನಾತಕೋತ್ತರ ಪದವೀಧರರಾಗಿದ್ದು ಪ್ರಸ್ತುತ ಸರ್ಕಾರಿ ಉನ್ನತ ಪ್ರೌಢಶಾಲೆ, ಮದಗೊಂಡಹಳ್ಳಿಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಕನ್ನಡ ಪ್ರೇಮ ಉಜ್ವಲವಾದುದು. ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳನ್ನು ಚೆನ್ನಾಗಿ ಬಲ್ಲವರು. ಸಾಹಿತ್ಯ ರಚನೆಯಲ್ಲಿ ತೊಡಗಿರುವ ಇವರು 'ಮನ್ವಂತರ' ಎನ್ನುವ ಕವನವನ್ನು ವಿಜ್ಞಾನ ವಿಷಯದಲ್ಲಿ ವಿದ್ಯಾರ್ಥಿಗಳು ಆಸಕ್ತಿ ಬೆಳೆಸಿಕೊಂಡು ವಿಶ್ವದ ಅಭಿವೃದ್ಧಿಗೆ ಶ್ರಮಿಸಲೆಂಬ ಉದ್ದೇಶದಿಂದ ರಚಿಸಿದ್ದಾರೆ.

## ಕಠಿಣ ಪದಗಳ ಅರ್ಥ

ಇಳೆ–ಭೂಮಿ; ದೂಡು–ತಳ್ಳು, ನೂಕು; ಸಂಚು–ಪಿತೂರಿ; ಬೆಚ್ಚು–ಹೆದರು, ಭಯಗೊಳ್ಳು; ವಿಧಿ–ಹಣೆಬರಹ; ಮುನ್ನಡೆ–ಪ್ರಗತಿ, ಅಭಿವೃದ್ಧಿ, ಬೆಳವಣಿಗೆ; ಕೃತಕ–ಮಾನವ ನಿರ್ಮಿತವಾದ, ಸಹಜವಲ್ಲದ; ಕಕ್ಷೆ–ಪಥ, ಗ್ರಹತಾರೆಗಳು ತಿರುಗುವ ಪಥ; ವಿಶ್ವ–ಪ್ರಪಂಚ; ಮಾನ್ಯರು–ಪ್ರಸಿದ್ಧಿ ಪಡೆದವರು.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಜನರು ಹಲವು ಬಗೆಯ ಯತ್ನವ ಏಕೆ ಮಾಡುತ್ತಿದ್ದರು ?
2. ಆದಿ ಮಾನವನು ಹೇಗೆ ಬಾಳುತ್ತಿದ್ದನು ?
3. ಪ್ರಾಚೀನರು ಏತಕ್ಕಾಗಿ ಭಯ ಬೀಳುತ್ತಿದ್ದರು ?
4. ಜನರು ಹೇಗೆ ಜೀವ ತೆತ್ತರು ?
5. ವಿಶ್ವ ಹೇಗೆ ಒಂದು ಮನೆಯಾಯ್ತು ?
6. ವಿಜ್ಞಾನಿಗಳು ಮಾಹಿತಿಗಳನ್ನು ಹೇಗೆ ಸಂಗ್ರಹಿಸುತ್ತಾರೆ ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಆದಿ ಕಾಲದ ಜೀವನದ ಬಗ್ಗೆ ಕವಿಯ ಅಭಿಪ್ರಾಯವೇನು ?
2. ವಿಜ್ಞಾನದಿಂದ ಜನಜೀವನ ಹೇಗೆ ಸರಳವಾಯಿತು ?
3. ಆದಿ ಮತ್ತು ಆಧುನಿಕ ಕಾಲಗಳ ನಡುವಿನ ವ್ಯತ್ಯಾಸವನ್ನು ಕವಿ ಹೇಗೆ ವಿವರಿಸಿದ್ದಾರೆ?

## ಭಾಷಾಭ್ಯಾಸ

**1. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ**

ಭಯ, ಜೀವ, ನೋವು, ಮುನ್ನಡೆ, ನಿಜ, ಪೂರಕ.

**2. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಮಾಡಿರಿ.**

ಉಡುಗೆ, ಪ್ರಗತಿ, ಮಾನ್ಯರು, ಶೋಧನೆ, ಸಾಧನ.

**3. ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ತಿಳಿಸಿ**

ವಿಶ್ವ, ವಿಧಿ, ವಾಣಿ, ಪ್ರಗತಿ, ಔಷಧಿ, ಸೊಗ.

**4. ಈ ಪದಗಳ ವಿಗ್ರಹ ವಾಕ್ಯ ರಚಿಸಿ ಸಮಾಸ ಹೆಸರಿಸಿ:**

ಬಿರುಗಾಳಿ, ಬಿರುಮಳೆ, ಕಾರ್ಮೋಡ, ಕಬ್ಬೊಗೆ

## ಚಟುವಟಿಕೆ

1. ಪ್ರಸಿದ್ಧ ವಿಜ್ಞಾನಿಗಳ ಭಾವಚಿತ್ರ ಹಾಗೂ ಅವರ ಬಗೆಗಿನ ವಿವರಗಳನ್ನು ಸಂಗ್ರಹಿಸಿರಿ.
2. ಶಾಲೆಯಲ್ಲಿ ನಡೆಯುವ ವೈಜ್ಞಾನಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಳ್ಳಿ.



11th_Kannada_Reader_Final_16-07-2018.indd 136 16-07-2018 18:43:10

ಘಟಕ ವಿಳು

# ಸರ್ಪಗಂಧಿ

– ಬಿ.ಜಿ.ಎಲ್.ಸ್ವಾಮಿ



ದೋಣಿ ಕಡವಿನಲ್ಲಿ ಸರ್ಪಗಂಧಿ–ರವುಲ್ಫಿಯಾ ಸರ್ಪೆಂಟೈನ (Rauwalfia Serpentina) ಗಿಡ ಬೆಳೆಯುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಭಾರತದ ಕಾಡುಗಳಲ್ಲಿ ಹೇರಳವಾಗಿದ್ದ ಈ ಗಿಡ ಬರಬರುತ್ತಾ ಮಾನವನ ದುರಾಸೆಗೀಡಾಗಿ ಈಗ ಅಪರೂಪವಾಗಿದೆ. ಈ ಗಿಡದ ಬೇರಿನ ಚಿಕಿತ್ಸಾ ಗುಣಗಳು ಚರಕ ಸಂಹಿತೆಯ ಕಾಲದಲ್ಲಿಯೇ ಪ್ರಸಿದ್ಧಿ ಪಡೆದುಕೊಂಡಿತ್ತು. ಡೊಂಕು ಹಾವಿನಂತಿರುವ ಬೇರಿಗೆ ಹಾವಿನ ವಿಷವನ್ನು ಗುಣಪಡಿಸುವ ಶಕ್ತಿಯುಂಟೆಂದೂ, ಕೆಲವು ಬಗೆಯ ಜ್ವರಕ್ಕೆ ತಕ್ಕ ಸಮರ್ಪಕ ಔಷಧವೆಂದೂ ಇದು ಪ್ರಖ್ಯಾತಿ ಪಡೆದಿದೆ. ಮುಂಗುಸಿ ಈ ಬೇರನ್ನು ತಿಂದ ಬಳಿಕ ಹಾವಿನೊಂದಿಗೆ ಜಗಳವಾಡಿ ಅದನ್ನು ಕೊಲ್ಲುವುದೆಂದೋ, ಇಲ್ಲವೇ ಹಾವಿನ ತಲೆಯನ್ನು ಕಚ್ಚಿ ಕೊಂದ ಬಳಿಕ ಉಂಟಾಗಬಹುದಾದ ವಿಷದ ನಂಜನ್ನು ಹೋಗಲಾಡಿಸಲು ಇದರ ಬೇರನ್ನು ಅಗೆದು ತಿನ್ನುವುದೆಂದೋ ಬಗೆಬಗೆಯಾದ ದಂತಕಥೆಗಳು ಜನರಲ್ಲಿ ಪ್ರಚಲಿತದಲ್ಲಿದೆ. ಈ ಗಿಡಕ್ಕೆ, ಚಂದ್ರ ಎಂಬ ಪರ್ಯಾಯ ಹೆಸರೂ ಇದೆ. ಇದು ಚಂದ್ರನಿಂದ ಅಂಕುರಗೊಳ್ಳುವುದೆಂದೂ, ವೃದ್ಧಿಗೊಳ್ಳುವುದೆಂದೂ ನಂಬಲಾಗಿದೆ.

ಕೆಲವು ಬಗೆಯ ಮನೋರೋಗಗಳನ್ನು ವಾಸಿ ಮಾಡುವ ಪ್ರಕೃತಿಯುಳ್ಳದ್ದೆಂದೂ ಪ್ರತೀತಿ ಇದೆ. ಕೆಲವು ವೇಳೆಗಳಲ್ಲಿ ಈ ಗಿಡದ ಬೇರು ಎಲ್ಲ ವ್ಯಾಧಿಗಳಿಗೂ ಒಂದೇ ಔಷಧವಾಗಬಲ್ಲದು. ಇದು ಮೂರ್ಛೆ, ಕಾಲರಾ, ರಕ್ತಸ್ರಾವ, ತಲೆಶೂಲೆ ಮೊದಲಾದ ರೋಗಗಳಿಗೆ ಸಿದ್ಧೌಷಧ. ಬೇರಿನಲ್ಲಿರುವ ಯಾವುದೋ ಒಂದು ಅಂಶಕ್ಕೆ ಶಾಮಕ ಗುಣವಿರುವುದು ದಿಟವಾದದ್ದರಿಂದ ಅನೇಕ ಉಹಾಪೋಹಗಳಿಗೆ ಕಾರಣವಾಯಿತು.

ಲಿಯೋನಾರ್ಡಾ ರವುಲ್ಫ್ ಜರ್ಮನ್ ದೇಶದ ವಿಜ್ಞಾನಿ, ವೈದ್ಯ ಮತ್ತು ಸಸ್ಯಶಾಸ್ತ್ರಜ್ಞ. ಹದಿನಾರನೇ



11th_Kannada_Reader_Final_16-07-2018.indd 137 16-07-2018 18:43:10

ಶತಮಾನದ ಕೊನೆಯಲ್ಲಿ ಆಫ್ರಿಕಾ ಮತ್ತು ಏಷ್ಯಾ ಖಂಡಗಳ ಕೆಲವು ಭಾಗಗಳಿಗೆ ಪ್ರವಾಸ ಬಂದಿದ್ದಾಗ ಈ ಗಿಡದ ಮಾದರಿಗಳನ್ನು ಸಂಗ್ರಹಿಸಿಕೊಂಡು ಹೋಗಿದ್ದ. ಈ ಪ್ರಕರಣಕ್ಕೆ ಎರಡು ನೂರು ವರ್ಷಗಳ ಹಿಂದೆಯೇ ಈ ಮೂಲಿಕೆಯ ಉಪಯೋಗದಿಂದ ಮನದ ತಲ್ಲಣ ನಿಂತು ಚೈತನ್ಯ ಮೂಡುವುದನ್ನು ಕೆಲವು ಯೂರೋಪಿಯನ್ನರು ಕಂಡು ಕೊಂಡಿದ್ದರು. ಭಾರತದಲ್ಲಿ ನೂರಾರು ವರ್ಷಗಳಿಂದ ಇದು ಆಯುರ್ವೇದ ವೈದ್ಯರಲ್ಲಿ ಅಮೂಲ್ಯ ಔಷಧವೆಂದೂ ಬಳಕೆಗೊಂಡಿದ್ದಿತಾದರೂ ಯೂರೋಪ್ ಖಂಡದಲ್ಲೂ ಇದರ ಗುಣವಿಶೇಷ ಪ್ರಖ್ಯಾತಿ ಪಡೆದಿತ್ತಾದರೂ 1930ರವರೆಗೆ ಇದರ ವಿಷಯದ ಅರಿವು ಗೌಣವಾಗಿಯೇ ಉಳಿದಿತ್ತು.

1931ರಲ್ಲಿ ಇಬ್ಬರು ಭಾರತೀಯ ರಸಾಯನತಜ್ಞ ವಿಜ್ಞಾನಿಗಳು ಸರ್ಪಗಂಧಿಯ ಬೇರುಗಳಿಂದ ಎರಡು ಬಗೆಯ ಹರಳುಗಳನ್ನು ಬೇರ್ಪಡಿಸಿ, ಅವಕ್ಕೆ ರಕ್ತದ ಅಧಿಕ ಒತ್ತಡ ಕಡಿಮೆ ಮಾಡುವ ಶಕ್ತಿಯುಂಟೆಂದು ಕಂಡು ಹಿಡಿದರು. ಒಣಗಿದ ಬೇರಿನ ಪುಡಿಯನ್ನು ಮಾನಸಿಕ ರೋಗಿಗಳಿಗೆ ತಿನ್ನಿಸಿದಾಗ ಅವರು ಶಾಂತ ಸ್ವಭಾವಕ್ಕೆ ಮರಳಿ ತಿಳಿವು ಪಡೆದದ್ದನ್ನೂ ಪ್ರದರ್ಶಿಸಿದರು. ರವುಲ್ಫಿಯಾ ಅವರು ಮದ್ದನ್ನು ಅಪರೂಪದ ಗುಣವುಳ್ಳ ಔಷಧಿ ಮೂಲಿಕೆಯೆಂದು ಸಿದ್ಧಪಡಿಸಿ ಇತರ ವಿಜ್ಞಾನಿಗಳನ್ನು ಈ ಮದ್ದಿನ ಸಂಬಂಧ ಮರುಪರೀಕ್ಷೆಗೆ ಹುರಿದುಂಬಿಸಿದರು. ವಿದೇಶದ ವಿಜ್ಞಾನಿಗಳು ಕಿವಿಗೊಡಲಿಲ್ಲ. ಭಾರತದ ವಿಜ್ಞಾನಿಗಳು ಪರಿಶೋಧನೆಯನ್ನು ಮುಂದುವರೆಸಿದರು. ಬೇರಿನ ಪುಡಿಯನ್ನು ರಕ್ತದ ಒತ್ತಡದಿಂದ ನರಳುತ್ತಿದ್ದ ಸಾವಿರಾರು ರೋಗಿಗಳಿಗೆ ಸೇವಿಸಲು ಕೊಟ್ಟರು. ಅದೇನು ಪವಾಡ! ಉಲ್ಬಣಾವಸ್ಥೆಯಲ್ಲಿದ್ದ ರೋಗಿಗಳು ಕೂಡ ಪೂರ್ಣವಾಗಿ ಗುಣಮುಖರಾದರು!

1949ರಲ್ಲಿ ಮುಂಬೈಯಿಯ ಡಾಕ್ಟರ್ ವಕೀಲ್ ಎಂಬ ವೈದ್ಯ ವಿಜ್ಞಾನಿ ರಕ್ತದ ಅಧಿಕ ಒತ್ತಡಕ್ಕೆ ಸರ್ಪಗಂಧಿ ಮೂಲಿಕೆಯ ಸೇವನೆಯಿಂದಾಗುವ ಅದ್ಭುತ ಫಲಿತಾಂಶಗಳನ್ನು ಇಂಗ್ಲೆಂಡಿನ ಶಾಸ್ತ್ರ ಪತ್ರಿಕೆಯೊಂದರಲ್ಲಿ ಪ್ರಚುರ ಪಡಿಸಿದರು.

ಸರ್ಪಗಂಧಿಯ ಕೀರ್ತಿಧ್ವಜ ಪಾಶ್ಚಾತ್ಯ ದೇಶಗಳಲ್ಲಿ ಮೇಲೆದ್ದಿತು. ಡಾಕ್ಟರ್ ವಕೀಲ ಅವರ ಲೇಖನ ಇಂಗ್ಲೆಂಡಿನಲ್ಲಿಯೂ, ಅಮೇರಿಕದಲ್ಲಿಯೂ ವೈದ್ಯರನ್ನು ಜಾಗೃತಿಗೊಳಿಸಿತು. ಬಾಸ್ಟನ್ನಿನ ಅನೇಕ ಮಂದಿ ವೈದ್ಯರು ಬೇರಿನ ಪುಡಿಯನ್ನು ಮಾತ್ರೆಗಳನ್ನಾಗಿ ಮಾಡಿ ರಕ್ತದ ಅಧಿಕ ಒತ್ತಡದಿಂದ ನರಳುತ್ತಿರುವವರಿಗೆ ಕೊಟ್ಟು ಅವರು ಗುಣಮುಖರಾದದ್ದನ್ನು ಕಂಡರು. ಈ ಫಲಿತಾಂಶ ಅಮೇರಿಕದ ವೈದ್ಯಕೀಯ ಪತ್ರಿಕೆಗಳಲ್ಲಿ ಪ್ರಕಟವಾಯಿತು.

ಮೊದಮೊದಲು ರಾಸಾಯನಿಕ ವಿಧಾನಗಳಿಂದ ಬೇರ್ಪಡಿಸಿದ ತನಿದ್ರವ್ಯಗಳಿಗೆ ಬೇರಿನ ಪುಡಿಯಲ್ಲಿದ್ದ ಎಲ್ಲ ಗುಣಗಳೂ ರವಾನೆಯಾಗಲಿಲ್ಲ; ಒಟ್ಟು ಪುಡಿಯನ್ನೇ ಉಪಯೋಗಿಸಿದರು. ಬೇರಿನ ಯಾವುದೋ ಒಂದು ಪ್ರತ್ಯೇಕವಾದ ಆ ಅಮೃತ ದ್ರವ ಯಾವುದೆಂದು ತಿಳಿಯಲಿಲ್ಲ. ಬೇರು ಈಯುವ ಕಂದು ಬಣ್ಣದ ರಾಳದಲ್ಲಿ ಆ ದ್ರವ್ಯ ಅಡಗಿದೆಯೆಂದು 1944ರಲ್ಲಿಯೂ ಭಾರತೀಯ ವಿಜ್ಞಾನಿಗಳು ಕಂಡು ಹಿಡಿದರು. ಆದರೂ ವಿಶ್ಲೇಷಣೆಯನ್ನು ಮುಂದುವರೆಸಲಾಗಲಿಲ್ಲ. 1952ರಲ್ಲಿ ಸ್ವೀಡನ್ನಿನ ವಿಜ್ಞಾನಿಗಳು ಕೆಲವು ಹೊಸ ಸಂಶೋಧನೆಗಳನ್ನು ಮಾರ್ಗಗಳನ್ನು ಕಂಡು ಹಿಡಿದು ತನ್ಮೂಲಕ ಕಂದು ರಾಳದಿಂದ ಬಿಳಿಯ ಹರಳುಗಳನ್ನು ಬೇರ್ಪಡಿಸಿದರು. ಈ ದ್ರವ್ಯಕ್ಕೆ ರಿಸರ್ಪಿನ್ ಎಂದು ಹೆಸರಿಟ್ಟರು. ಈ ರಿಸರ್ಪಿನ್ ದ್ರವ್ಯವೇ ರಕ್ತದ ಹೆಚ್ಚಿನ ಒತ್ತಡವನ್ನು ಇಳಿಸುವ ಪ್ರಕ್ರಿಯೆಯುಳ್ಳದ್ದು ಎಂಬುದು ಸ್ಥಿರವಾಯಿತು.

ರಕ್ತದ ಅಧಿಕ ಒತ್ತಡದಿಂದ ನರಳುವ ರೋಗಿಗಳಿಗೆ ಸರ್ಪಗಂಧಿಯನ್ನು ಕೊಟ್ಟಾಗ ಅವರ ತಲ್ಲಣಗೊಂಡ ಮನೋನೆಲೆ ಶಾಂತವಾದುದನ್ನೂ ವೈದ್ಯರು ಕಂಡು ಕೊಂಡರು. ಅಲ್ಲೋಲಕಲ್ಲೋಲವಾದ ಮನಸ್ಸಿಗೆ ನೆಮ್ಮದಿ ತಂದೀಯುವ ಗುಣದಿಂದ ಸರ್ಪಗಂಧಿ ಮನೋವ್ಯಾಧಿಗಳಿಂದ ನರಳುವವರನ್ನು ಸೂರೆಗೊಂಡಿತು. ಮಾನಸಿಕ ರೋಗಿಗಳ ಆಸ್ಪತ್ರೆಗಳಲ್ಲಿ ಅತ್ಯಂತ ಉಪಯೋಗವಾಯಿತು. ನೆಮ್ಮದಿ ತರುವ



11th_Kannada_Reader_Final_16-07-2018.indd 138 16-07-2018 18:43:10

ಔಷಧ ದ್ರವ್ಯಗಳಲ್ಲಿ ರಿಸರ್ಪಿನ್ನೇ ಅಗ್ರಸ್ಥಾನ ಪಡೆಯಿತು. ಮನೋರೋಗ ಪೀಡೆಯನ್ನು ತೊಲಗಿಸುವುದಕ್ಕೆ ಹೊಸ ಮಾರ್ಗವೊಂದಾಯಿತು.

ಹೀಗಾಗಿ ಸರ್ಪಗಂಧಿಯನ್ನು ಹುಡುಕಿ ಬೇರುಗಳನ್ನು ಅಮೇರಿಕ ಮೊದಲಾದ ದೇಶಗಳಿಗೆ ರಫ್ತು ಮಾಡುವ ಹವ್ಯಾಸ ವಿವೇಚನೆಯಿಲ್ಲದೆ ಮೈಮರೆತು, ಮುಂದಾಲೋಚನೆಯಿಲ್ಲದೆ ನಡೆಯಿತು; ಹವ್ಯಾಸಿಗಳಿಗೆ ಸಾವಿರಾರು ಡಾಲರುಗಳು ಸಂದವು. ಉದ್ಯೋಗವಿಲ್ಲದೆ ಅಲೆಯುತ್ತಿದ್ದವರು ಕೆಲವೇ ತಿಂಗಳುಗಳಲ್ಲಿ ಐಶ್ವರ್ಯವಂತರಾದರು. ಹೀಗಾಗಿ ಸರ್ಪಗಂಧಿ ನಿಸರ್ಗದಿಂದ ನಿರ್ಮೂಲವಾಗುತ್ತಾ ಬಂದಿತು.

## ಕೃತಿ ಕರ್ತೃ ಪರಿಚಯ



ಡಾ.ಬಿ.ಜಿ.ಎಲ್.ಸ್ವಾಮಿಯವರು ಒಬ್ಬ ಖ್ಯಾತ ಸಸ್ಯ ವಿಜ್ಞಾನಿ ಹಾಗೂ ಸಸ್ಯ ಸಾಹಿತಿ. ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಅತ್ಯಂತ ಸರಳವಾಗಿಯೂ ಆಕರ್ಷಕ ಶೈಲಿಯಲ್ಲಿಯೂ ರಚಿಸುವ ಪಾಂಡಿತ್ಯವುಳ್ಳವರು. ಇವರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಸ್ಯಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕ ಸೇವೆ ಸಲ್ಲಿಸಿದ್ದಾರೆ. ಇವರ ಹಸಿರು ಹೊನ್ನು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇದೇ ಕೃತಿಯಿಂದಲೇ ಪ್ರಸ್ತುತ ಲೇಖನವನ್ನು ಆಯ್ದು ಕೊಳ್ಳಲಾಗಿದೆ. ಸಾಕ್ಷಾತ್ಕಾರದ ದಾರಿಯಲ್ಲಿ, ಕಾಲೇಜು ರಂಗ, ಕಾಲೇಜು ತರಂಗ, ಬೆಳದಿಂಗಳಲ್ಲಿ ಅರಳಿದ ಮೊಲ್ಲೆ ಮತ್ತು ಇತರ ಕಥೆಗಳು, ತಮಿಳು ತಲೆಗಳ ನಡುವೆ, ಪ್ರಾಧ್ಯಾಪಕನ ಪೀಠದಲ್ಲಿ ಮೊದಲಾದವು ಇವರ ಕೃತಿಗಳು.

## ಕಠಿಣ ಪದಗಳ ಅರ್ಥ

ನಂಜು–ವಿಷ; ಅಂಕುರ–ಚಿಗುರು; ಪ್ರತೀತಿ–ಹೇಳಿಕೆ; ರೂಢಿ–ಸಂಪ್ರದಾಯ; ಸಿದ್ಧೌಷಧ–ತಯಾರಿಸಿದ ಔಷಧ; ಊಹಾಪೋಹ–ವದಂತಿ; ಕಿವಿಗೊಡು–ಆಲಿಸು; ಉಲ್ಬಣ–ವಿಷಮ ಸ್ಥಿತಿ; ಜಾಗೃತಿ–ಎಚ್ಚರಿಕೆ; ರವಾನೆ–ಸಾಗಣೆ; ಈಯು–ಕೊಡು; ಪ್ರಕ್ರಿಯೆ–ವಿಧಿ,ವಿಧಾನ; ತಲ್ಲಣ–ತಳಮಳ, ತುಮುಲ; ಸೂರೆಗೊಳ್ಳು–ಲೂಟಿಮಾಡು; ಪೀಡೆ–ಬಾಧೆ, ತೊಂದರೆ; ವಿವೇಚನೆ–ಯೋಚಿಸುವ ಶಕ್ತಿ.

## ಟಿಪ್ಪಣಿ

ತನಿದ್ರವ್ಯ–ಪಕ್ವವಾದ ದ್ರವ್ಯ, ಕಾಂತಿಯುಳ್ಳ ದ್ರವ್ಯ.

ರಾಳ–ಮರದಿಂದ ಹೊರಬರುವ ಮೇಣ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ದೋಣಿಕಡವಿನಲ್ಲಿ ಯಾವ ಸಸ್ಯ ಪ್ರಭೇದ ಹೆಚ್ಚು ಬೆಳೆಯುತ್ತಿತ್ತು ?
2. ಸರ್ಪಗಂಧಿ ಗಿಡಕ್ಕೆ ಇರುವ ಪರ್ಯಾಯ ಪದ ಯಾವುದು ?
3. ಸರ್ಪಗಂಧಿಯ ವೈಜ್ಞಾನಿಕ ಹೆಸರೇನು ?
4. ಸರ್ಪಗಂಧಿ ಗಿಡದ ಮಾದರಿಗಳನ್ನು ಸಂಗ್ರಹಿಸಿಕೊಂಡು ಹೋದ ಜರ್ಮನ್ ವೈದ್ಯವಿಜ್ಞಾನಿ ಯಾರು ?
5. ಸರ್ಪಗಂಧಿ ಮೂಲಿಕೆಯ ಸೇವನೆಯಿಂದಾಗುವ ಅದ್ಭುತ ಫಲಿತಾಂಶಗಳನ್ನು ಇಂಗ್ಲೆಂಡಿನ ಶಾಸ್ತ್ರ ಪತ್ರಿಕೆಯೊಂದರಲ್ಲಿ ಪ್ರಚುರ ಪಡಿಸಿದ ಮುಂಬೈ ವೈದ್ಯ ವಿಜ್ಞಾನಿ ಯಾರು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಸರ್ಪಗಂಧಿಗೆ ಚಂದ್ರ ಎಂಬ ಹೆಸರು ಬರಲು ಕಾರಣವೇನು
2. ರಿಸರ್ಪಿನಾದ ಮಹತ್ವವೇನು ?
3. ಸರ್ಪಗಂಧಿಗೆ ಮಹತ್ವ ಬಂದುದರ ಪರಿಣಾಮವೇನಾಯಿತು ?



11th_Kannada_Reader_Final_16-07-2018.indd 139 16-07-2018 18:43:11

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ರಕ್ತದ ಹೆಚ್ಚಿದ ಒತ್ತಡವನ್ನು ಇಳಿಸುವ ಪ್ರಕ್ರಿಯೆಯನ್ನು ವಿವರಿಸಿ
2. ಲಿಯೋನಾರ್ಡಾ ರವುಲ್ಫ್‌ರವರ ಕೊಡುಗೆಗಳನ್ನು ವಿವರಿಸಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ವರ್ಷ, ಚಂದ್ರ , ಪ್ರಕರಣ, ರಕ್ತ, ಅಮೃತ, ಕೀರ್ತಿ

**2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ದಿಟವಾದ, ನೂರಾರು, ಸಿದ್ಧೌಷಧ, ಕಿವಿಗೊಡಲಿಲ್ಲ, ಉಲ್ಬಣಾವಸ್ಥೆ

**3. ಕೆಳಗಿನ ಪದಗಳಿಗೆ ವಿಗ್ರಹ ವಾಕ್ಯ ಬರೆದು ಸಮಾಸದ ಹೆಸರನ್ನು ತಿಳಿಸಿ**

ಮನೋರೋಗ, ತಲೆಶೂಲೆ, ಇಪ್ಪತ್ತು

## ಚಟುವಟಿಕೆ

1. ಹಳ್ಳಿಯ ವೈದ್ಯ ಪದ್ಧತಿಯನ್ನು ಹಿರಿಯರಿಂದ ಕೇಳಿ ತಿಳಿಯಿರಿ.
2. ರಜಾ ದಿನಗಳಲ್ಲಿ ವೈದ್ಯಕೀಯ ಸಸ್ಯಗಳನ್ನು ಗುರುತಿಸಿ, ಮನೆಯ ಆಸುಪಾಸಿನಲ್ಲಿ ಬೆಳೆಸಿರಿ.





11th_Kannada_Reader_Final_16-07-2018.indd 140 16-07-2018 18:43:11

ಉಪಪಠ್ಯ

ಘಟಕ ಏಳು

# ಸೌಂದರ್ಯವರ್ಧಕಗಳು ಎಷ್ಟು ಸುರಕ್ಷಿತ?

– ಡಿ.ವಿ.ಹೆಗಡೆ







ಗಣ್ಯ ವ್ಯಕ್ತಿಯಾಗುತ್ತೀರೆನ್ನುವ ತಪ್ಪು ಕಲ್ಪನೆ ಅನಂತ ಅವಾಂತರಗಳಿಗೂ ಕಾರಣವಾಗುತ್ತಿದೆ. ಇದರ ಅರಿವೂ ಇಲ್ಲದಿರುವುದು ಇನ್ನೊಂದು ದುರಂತವೇ ಸರಿ. ಇಂದಿನ ತಾಂತ್ರಿಕ ಯುಗದ ಮಾಲಿನ್ಯದ ಪರಿಣಾಮಗಳ ನಡುವೆಯೂ ನಮ್ಮ ದೇಹವನ್ನು ನಿಜವಾಗಿ ರಕ್ಷಿಸುವ ರಕ್ಷಣಾ ಕವಚವೆಂದರೆ ಚರ್ಮ. ಇದು ಅತ್ಯಂತ ದೊಡ್ಡದಾದ ಅಂಗವೂ ಹೌದು. ಇದರ ತೂಕ ಸರಿಸುಮಾರು ಏಳು ಕೆ.ಜಿ.ಯಾಗಿರುತ್ತದೆ. ಇದನ್ನು ಹೊಳೆಯುವಂತೆ ಮಾಡಲು, ಸುರಕ್ಷಿತವಾಗಿರಿಸಲು ಇನ್ನಿಲ್ಲದ ಪ್ರಯತ್ನ ನಮ್ಮದು. ಅದನ್ನು ಚಳಿ, ಮಳೆ, ಬಿಸಿಲಿನಿಂದ ಕಾಪಾಡುತ್ತೇವೆ. ದೇಹದ ಮೇಲಿನ ಕೊಳೆ ತೊಳೆದು ಶುದ್ಧ ಪಡಿಸುತ್ತೇವೆ. ಅದನ್ನು ಸುಸ್ಥಿತಿಯಲ್ಲಿಡಲು ಅನೇಕ ಬಗೆಯ ಕ್ರೀಂ/ಲೋಷನ್ ಮುಂತಾದ ವಸ್ತುಗಳನ್ನೂ ದ್ರವಗಳನ್ನೂ ಲೇಪಿಸುತ್ತೇವೆ. ಅಷ್ಟೇ ಅಲ್ಲ, ಅಗತ್ಯವಾದರೆ ಸೂಕ್ತ ಆಹಾರ ಸೇವನೆಗೂ ಮುಂದಾಗುತ್ತೇವೆ.

ಈ ರೀತಿಯ ಕಾಳಜಿಯೇ ಅನೇಕ ಬಾರಿ ಆಪತ್ತಿಗೂ ಕಾರಣವಾದೀತೆಂಬುದು ಅರಿವಿಗೇ ಬರುವುದಿಲ್ಲ. ನಮ್ಮ ಚರ್ಮಕ್ಕೆ ಲೇಪಿಸಿದ ವಸ್ತುಗಳಲ್ಲಿ ಶೇಕಡಾ 60ರವರೆಗಿನ ಭಾಗ ರೋಮ ರಂಧ್ರಗಳ ಮೂಲಕ ದೇಹದಲ್ಲಿ ಪ್ರವೇಶಿಸಿ ರಕ್ತನಾಳಗಳಲ್ಲಿ ಸೇರಿಕೊಳ್ಳುತ್ತದೆ. ವೈದ್ಯರು ಕೆಲವು ಬಗೆಯ ಕ್ಯಾನ್ಸರ್ ಗಡ್ಡೆಗಳಲ್ಲಿ ಮತ್ತು ಹುಣ್ಣುಗಳಲ್ಲಿ ದೇಹಕ್ಕೆ ಲೇಪಿಸಿದ ಅಥವಾ ಸಿಂಚನ ಮಾಡಿದ ವಸ್ತುಗಳನ್ನು ನಿಖರವಾಗಿ ಪತ್ತೆ ಹಚ್ಚಿದ್ದಾರೆ. ಈ ವಸ್ತುಗಳಲ್ಲಿನ ರಾಸಾಯನಿಕಗಳು ದೇಹದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆಯೋ ಹೇಳಲು ಅಸಾಧ್ಯ. ಇದನ್ನೇ ಒಟ್ಟಾರೆಯಾಗಿ 'ಕಾಕ್ಟೇಲ್ ಎಫೆಕ್ಟ್'(ಒಟ್ಟಾರೆ ಪರಿಣಾಮ) ಎಂದು ನಾವು ಹೇಳಬಹುದು.



11th_Kannada_Reader_Final_16-07-2018.indd 141 16-07-2018 18:43:11

ಈ ವಸ್ತುಗಳಲ್ಲಿನ ರಾಸಾಯನಿಕಗಳ ಪರಿಣಾಮ ಎರಡು ರೀತಿಯದ್ದಾಗಿರುತ್ತದೆ. ಒಂದು : ಅಲ್ಪಕಾಲಿಕವಾದ ಚಿಕ್ಕ ಪರಿಣಾಮ; ಇನ್ನೊಂದು : ದೀರ್ಘಕಾಲಿಕ ದೂರಗಾಮಿ ಪರಿಣಾಮ. ಇಂದಿನ ವೇಗದ ಯುಗದಲ್ಲಿ ದೀರ್ಘಕಾಲಿಕ ಪರಿಣಾಮದ ಬಗ್ಗೆ ಯೋಚಿಸುವುದಕ್ಕಾದರೂ ವ್ಯವಧಾನವೆಲ್ಲಿದೆ ? ಮೇಕಪ್‌ಗಳಲ್ಲಿ ಚರ್ಮರಕ್ಷಣೆಗೆ, ಬಣ್ಣ ಬದಲಿಸಲು ಮತ್ತು ಮತ್ತಿತರ ಉದ್ದೇಶಗಳಿಗೆ ಬಳಸುವ ಬಹುತೇಕ ವಸ್ತುಗಳ ದೀರ್ಘಕಾಲಿಕ ಪರಿಣಾಮದ ಬಗ್ಗೆ ಯಾವುದೇ ಬಗೆಯ ಪರೀಕ್ಷೆ ಅಥವಾ ಪರಿಶೀಲನೆ ನಡೆಸಲಾಗಿಲ್ಲ. ಎರಡೂ ರೀತಿಯ ಪರಿಣಾಮದ ಕುರಿತು ಪರೀಕ್ಷಿಸುವುದಂತೂ ದೂರವೇ ಉಳಿಯಿತು.

ಚರ್ಮಕ್ಕೆ ಪೋಷಕಾಂಶ, ವಿಟಮಿನ್‌ಗಳ ಪೂರೈಕೆ, ಚರ್ಮ ಒಣಗದಂತೆ ಅದಕ್ಕೆ ತೈಲ ಅಥವಾ ಕೊಬ್ಬಿನ ಅಂಶದ ಲೇಪನ, ಕಾಂತಿಯುತ ಹೊರಪದರ, ಮುಖದಲ್ಲಿನ ಸುಕ್ಕು ನಿವಾರಿಸುವುದು, ಮೈಮೇಲಿನ ಬೆವರು ಒರೆಸಿ ಸುಗಂಧ ದ್ರವ್ಯಗಳನ್ನು ಸಿಂಪಡಿಸುವುದರಿಂದ ದೇಹ ಓರಣವಾಗಿರುವಂತೆ ಮಾಡುವುದು ಮುಂತಾದುವು ನಿರೀಕ್ಷಿತ ಅಲ್ಪಕಾಲಿಕ ಪರಿಣಾಮಗಳು. ಆದರೆ ದೀರ್ಘಕಾಲಿಕ ಪರಿಣಾಮ ಇದಕ್ಕೆ ತೀರ ವಿರುದ್ಧವಾಗುವ ಸಾಧ್ಯತೆಯೂ ಇದೆ. ದಿನಕಳೆದಂತೆ ಮುಖದ ಸುಕ್ಕು ಹೆಚ್ಚಾಗತೊಡಗುತ್ತದೆ. ಚರ್ಮ ಒಣಗಿ ಕಪ್ಪು ಬಣ್ಣಕ್ಕೆ ತಿರುಗಬಹುದು. ತಲೆಗೂದಲು ಬೇಗ ಬೆಳ್ಳಗಾಗಬಹುದು ಅಥವಾ ಉದುರತೊಡಗಬಹುದು. ಇದಕ್ಕಿಂತ ಹೆಚ್ಚಾಗಿ ಅಲರ್ಜಿ, ಅನೇಕ ಬಗೆಯ ಚರ್ಮರೋಗಗಳು ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗೂ ಕಾರಣವಾಗಿ ಪರಿಣಮಿಸಬಹುದು.

ಇಂತಹ ಹಾನಿಕಾರಕ ವಸ್ತುಗಳಲ್ಲಿ ಅಲ್ಯೂಮಿನಿಯಂ ಕೂಡ ಒಂದು. ಕೆಲವು ಬಗೆಯ ಕಾಯಿಲೆಗೂ ಇದು ಕಾರಣವಾದೀತು. ಡೈ ಇಥೇನೊ ಆಮೈನ್, ಮೊನೋ ಇಥೇನೋ ಅಮೈನ್, ಡೈ ಇಥೇನೋ ಅಮೈನ್‌ನಂತಹ ರಾಸಾಯನಿಕಗಳನ್ನು ಷಾಂಪೂ, ಮುಖಮಾರ್ಜಕಗಳಲ್ಲಿ, ಸಾಬೂನಿನಲ್ಲಿ ಬಳಸುತ್ತಾರೆ. ಇವು ಹಾನಿಕಾರಕ ನೈಟ್ರೇಟ್, ನೈಟ್ರೋಸೊ ಅಮೈನ್‌ಗಳಂತಹ ಅಪಾಯಕಾರಿ ವಸ್ತುಗಳು ದೇಹದಲ್ಲಿ ಸೃಷ್ಟಿಯಾಗಲು ಕಾರಣವಾಗಬಹುದು. ಅವುಗಳಿಂದ ಕಣ್ಣುರಿ, ಅಲರ್ಜಿ, ಚರ್ಮ ಒಣಗುವುದು, ಕೂದಲು ಬಿರುಸಾಗುವುದು ಮುಂತಾದ ತೊಂದರೆಗಳು ಕಂಡು ಬರತೊಡುತ್ತವೆ. ಕೆಲವು ಬಾರಿ ಕ್ಯಾನ್ಸರ್‌ಗಳ ಪ್ರಚೋದನೆಯೂ ಕಂಡು ಬರಬಹುದು. ಮೂತ್ರಪಿಂಡ, ಜಠರಗಳ ಮೇಲೂ ದುಷ್ಪರಿಣಾಮ ಬೀರುತ್ತವೆ ಎಂಬುದು ಸಂಶೋಧನೆಗಳಿಂದ ತಿಳಿದು ಬಂದಿದೆ.

ಉಗುರುಗಳನ್ನು ಪಾಲಿಷ್ ಮಾಡಲು ಮತ್ತು ಕೂದಲು ಸಿಂಪಡಣೆ (ಹೇರ್ ಸ್ಪೇಯರ್)ಗಳಿಗೆ ಉಪಯೋಗಿಸುವ ವಸ್ತುಗಳಲ್ಲಿ ಥ್ಯಾಲೇಟ್‌ಗಳೆಂಬ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇವು ಹಾರ್ಮೋನ್‌ಗಳ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತವೆ. ಕೆಲವೊಮ್ಮೆ ಹೆರಿಗೆ ಸಂದರ್ಭಗಳಲ್ಲಿ ತೊಡಕನ್ನುಂಟು ಮಾಡುತ್ತವೆ.

ಕಾಂತಿ ವರ್ಧಕಗಳು ಕೆಡದಂತೆ ಹೆಚ್ಚು ಕಾಲ ಅವುಗಳನ್ನು ಕಾಯ್ದಿರಿಸಲು ಮಿಥೈನ್, ಇಥೈಲ್, ಪ್ರೊಟೈಲ್, ಬ್ರುಡಾಯಿಲ್, ಪ್ಯಾರಾಫಿನ್‌ಗಳನ್ನು ಬಳಸುತ್ತಾರೆ. ಆದರೆ ಇವು ಚರ್ಮಕ್ಕೆ ಅಲರ್ಜಿಯನ್ನುಂಟು ಮಾಡುತ್ತವೆ. ಅಮೇರಿಕಾ, ಯೂರೋಪ್‌ಗಳಲ್ಲಿ ಇವು ಹಾನಿಕಾರಕಗಳೆಂದು ಪರಿಣಗಣಿಸಲಾಗಿದೆ. ತಜ್ಞರು ಇವುಗಳ ಬಳಕೆಯಿಂದ ಮೆದುಳಿನ ತೊಂದರೆ ಮತ್ತು ಮೂತ್ರಪಿಂಡದ ಮೇಲೆ ಬಹಳ ಪರಿಣಾಮ ಬೀರುತ್ತವೆ ಎಂದು ಎಚ್ಚರಿಕೆಯನ್ನೂ ನೀಡಿದ್ದಾರೆ. ಈ ರಾಸಾಯನಿಕಗಳು ಅಗ್ಗವಾಗಿರುವುದೂ ಕೂಡ ಇವುಗಳ ಅತಿಯಾದ ಬಳಕೆಗೆ ಇನ್ನೊಂದು ಪ್ರಮುಖ ಕಾರಣವಾಗಿದೆ ಎಂದರೆ ತಪ್ಪಾಗಲಾರದು.



11th_Kannada_Reader_Final_16-07-2018.indd 142 16-07-2018 18:43:12

ಸಾಬೂನು ಅಥವಾ ಡಿಟರ್ಜೆಂಟ್‌ಗಳಲ್ಲಿ ಸೋಡಿಯಂ ಲಾರಿಲ್ ಸಲ್ಫೇಟ್ ಎನ್ನುವ ರಾಸಾಯನಿಕವನ್ನು ಬಳಸುತ್ತಾರೆ ಇದು ನೊರೆ ಬರುವಂತೆ ಮಾಡುತ್ತದೆ. ಇದು ಮೂತ್ರಕೋಶ, ಮೂತ್ರಪಿಂಡಗಳಲ್ಲಿ ನಂಜುಂಟು ಮಾಡುತ್ತದೆ. ಹೆಚ್ಚು ಕಡಿಮೆ ಪ್ರತಿಯೊಂದೂ ಶಾಂಪೂನಲ್ಲೂ ಇದನ್ನು ಬಳಸಲಾಗುತ್ತದೆ. ಈ ವಸ್ತು ಎಷ್ಟು ಪರಿಣಾಮಕಾರಿಯಾದ ಜಿಡ್ಡು ನಿವಾರಕವೆಂದರೆ ಇದನ್ನು ಗ್ಯಾರೇಜ್‌ಗಳಲ್ಲಿ ನೆಲವನ್ನು ತೊಳೆಯಲು, ಎಂಜಿನ್ ತೊಳೆಯಲು ಬಳಸಲಾಗುತ್ತದೆ. ಇದ–ರಿಂದ ನೈಟ್ರೊಸೊ ಅಮೈನ್ಸ್‌ಗಳೆಂಬ ಹಾನಿಕಾರಕ ರಾಸಾಯನಿಕಗಳು ಉತ್ಪತ್ತಿಯಾಗುತ್ತವೆ.

ಚರ್ಮದ ಮೇಲಿನ ಸುಕ್ಕು ಅಥವಾ ನಿರಿಗೆಗಳನ್ನು ನಿವಾರಿಸಲು ಆಲ್ಫಾ ಹೈಡ್ರೋಕ್ಸಿಲ್ ಆಸಿಡ್ ಎನ್ನುವ ಆಮ್ಲ ಬಳಕೆಯಲ್ಲಿದೆ. ಆದರೆ ಇದನ್ನು ದೀರ್ಘ ಕಾಲ ಬಳಸಿದರೆ ಇದು ಸೂರ್ಯನ ಬೆಳಕಿಗೆ ಚರ್ಮ ಪ್ರತಿಕ್ರಿಯಿಸುವಂತೆ ಮಾಡುತ್ತದೆ. ಇದು ಚರ್ಮದ ಕ್ಯಾನ್ಸರ್‌ಗೆ ಕಾರಣವಾಗುತ್ತದೆ.

ಕೆಲವೊಂದು ಕಾಂತಿವರ್ಧಕಗಳ ಪ್ಯಾಕ್‌ಗಳ ಮೇಲೆ ಅವು ಹೊಂದಿರುವ ಎಲ್ಲಾ ವಸ್ತುಗಳ ಬಗೆಗಿನ ಮಾಹಿತಿ ಇರುವುದಿಲ್ಲ. ಇದ್ದರೂ ಓದಿ ಅರ್ಥ ಮಾಡಿಕೊಳ್ಳುವ ನೈಪುಣ್ಯ ಇರುವವರ ಸಂಖ್ಯೆ ತುಂಬ ಕಡಿಮೆ. ಇವುಗಳ ಅತಿಯಾದ ಬಳಕೆಯಿಂದ ಸಂಭವಿಸಬಹುದಾದ ಅಡ್ಡ ಪರಿಣಾಮಗಳ ಬಗೆಗಂತೂ ಅಪ್ಪಿತಪ್ಪಿಯೂ ಯಾವುದೇ ವಿವರ ಪ್ಯಾಕ್‌ಗಳ ಮೇಲ್ಭಾಗದಲ್ಲಿ ಇರುವುದಿಲ್ಲ. ಅಬ್ಬರದ ಪ್ರಚಾರವೊಂದೇ ಅವುಗಳಿಗೆ ಸಂಬಂಧಿಸಿದ ಮಾಹಿತಿಯಾಗಿರುತ್ತದೆ.

ಈ ವಸ್ತುಗಳನ್ನು ಬಳಸಿದ ನಂತರ ಅವು ನೀರಿನಲ್ಲಿ ತೊಳೆದು ಹೋಗಿ ನೀರಿನಲ್ಲಿ ಸೇರಿ ಜಲಮಾಲಿನ್ಯಕ್ಕೂ ಕಾರಣವಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಜಲಚರ ಪ್ರಾಣಿಗಳ ಮೇಲೆ ಈಗಾಗಲೇ ಅವುಗಳ ದುಷ್ಪರಿಣಾಮ ಅಮೆರಿಕದಂತಹ ಮುಂದುವರೆದ ದೇಶಗಳಲ್ಲಿ ದೃಢಪಟ್ಟಿದೆ. ಸ್ವಾಭಾವಿಕವಾಗಿ ಇಂತಹ ನೀರನ್ನು ಅಡಿಗೆಗೆ, ಗೃಹಕೃತ್ಯಗಳಲ್ಲಿ ಬಳಸಿದಾಗ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮಗಳೂ ಉಂಟಾಗುತ್ತವೆ. ಹೀಗೆ ಅಮೆರಿಕದಲ್ಲಿ ಮುನ್ನೂರಕ್ಕೂ ಹೆಚ್ಚು ಕಂಪನಿಗಳು ತಮ್ಮ ಉತ್ಪನ್ನಗಳಲ್ಲಿ ದುಷ್ಪರಿಣಾಮ ಉಂಟು ಮಾಡುವಂತಹ ಹಾನಿಕಾರಕ ರಾಸಾಯನಿಕಗಳನ್ನು ಬಳಸುವುದಿಲ್ಲವೆಂದು ಆಶ್ವಾಸನೆ ನೀಡಿವೆ. ಇದಕ್ಕೆ ಕಾರಣ ಅಲ್ಲಿನ ಸಾರ್ವಜನಿಕರ ಜಾಗೃತಿಯಿಂದಾಗಿ ಉಂಟಾದ ಪ್ರಬಂಧನೆಯ ಪರಿಣಾಮವೇ ಆಗಿದೆ.

ಇದಕ್ಕೆ ಪರ್ಯಾಯವಾಗಿ ಆಯುರ್ವೇದ ಮೂಲದ ಗಿಡಮೂಲಿಕೆಗಳ ಆಧರಿತ ವಸ್ತು ಎಂದು ಕಾಂತಿ ವರ್ಧಕಗಳ ಮೇಲೆ ನಮೂದಿಸುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚುತ್ತಿದೆ. ಇದೂ ಸಹ ಪಾಶ್ಚಿಮಾತ್ಯ ದೇಶಗಳ ಪ್ರಭಾವದ ಪರಿಣಾಮವೇ! ಅನೇಕ ಶಾಂಪೂಗಳಲ್ಲಿ, ಕ್ರೀಂಗಳಲ್ಲಿ ಇಂತಹ ಪ್ರಚಾರವನ್ನು ನಾವು ಇಂದು ನೋಡುತ್ತೇವೆ. ಆದರೆ ಹಾಗೆಂದಾಕ್ಷಣ ಅವು ಸಂಪೂರ್ಣ ಸುರಕ್ಷಿತ ಎನ್ನುವಂತಿಲ್ಲ. ಏಕೆಂದರೆ ಅವುಗಳಲ್ಲಿರುವ ವಸ್ತುಗಳೂ ಭಿನ್ನವಾದುವೇನಲ್ಲ. ಅವುಗಳ ಪ್ರಮಾಣ ಸ್ವಲ್ಪ ಕಡಿಮೆಯಾಗಿದ್ದೀತು, ಇನ್ನೂ ಒಂದು ಮುಖ್ಯ ವಿಷಯವೆಂದರೆ ಅವುಗಳಲ್ಲಿ ಪ್ಯಾರಾಬೆನ್‌ಗಳನ್ನು ಸೇರಿಸಿರುತ್ತಾರೆ. ಇದರಿಂದ ಕನಿಷ್ಠ ಮೂರು ವರ್ಷಗಳವರೆಗೂ ಅವುಗಳನ್ನು ಕಾಯ್ದಿಡಬಹುದು. ಆದರೆ ಇವು ಕ್ಯಾನ್ಸರ್‌ಗೆ ಕಾರಣವಾಗಬಲ್ಲ ರಾಸಾಯನಿಕಗಳು. ಹೀಗಾಗಿ ಇಲ್ಲಿಯೂ ಸಮಸ್ಯೆ ಇದ್ದೇ ಇರುತ್ತದೆ.

ಇದಕ್ಕಿರುವ ಒಂದು ಪರಿಹಾರವೆಂದರೆ ನಮ್ಮ ಸಾಂಪ್ರದಾಯಿಕ ಪದ್ಧತಿಯ ಪುನರುಜ್ಜೀವನ ಎನ್ನಬಹುದು. ಉದಾಹರಣೆಗೆ ಹಾಲಿನ ಕೆನೆ, ಹಣ್ಣು ಹೂಗಳ ರಸ, ಹರಿಷಿಣ, ಚಂದನದಂತಹ



11th_Kannada_Reader_Final_16-07-2018.indd 143 16-07-2018 18:43:12

ವಸ್ತುಗಳನ್ನು ಬಳಸುವುದು, ಜೇನುತುಪ್ಪ, ಸೌತೆಕಾಯಿ, ನಿಂಬೆಹಣ್ಣು, ಹಿಟ್ಟು, ಗುಲಾಬಿ ನೀರು ಇತ್ಯಾದಿ. ಇವುಗಳನ್ನು ಸೌಂಧರ್ಯ ವರ್ಧಕ ವಸ್ತುಗಳಂತೆ ಬಳಸುವುದರಿಂದ ಈಗ ಮಾರುಕಟ್ಟೆಯಲ್ಲಿ ಹೇರಳವಾಗಿ ಸಿಗುವ ಕೃತಕ, ಪೆಟ್ರೋಲಿಯಂ ಉತ್ಪನ್ನಗಳನ್ನು ಆಧರಿಸಿದ ಅಲಂಕಾರ ಸಾಮಗ್ರಿಗಳ ದುಷ್ಪರಿಣಾಮವನ್ನು ತಡೆಗಟ್ಟಬಹುದೆಂಬುದು ತಜ್ಞರ ಅಭಿಪ್ರಾಯವಾಗಿದೆ. ಏಕೆಂದರೆ ಸ್ವಾಭಾವಿಕ ವಸ್ತುಗಳ ಬಳಕೆಯು, ಕೃತಕ ವಸ್ತುಗಳ ಬಳಕೆಗಿಂತ ಕಡಿಮೆ ಅಪಾಯಕಾರಿಯಾಗಿದೆ.

### ಕೃತಿ–ಕರ್ತೃ ಪರಿಚಯ

ಡಿ.ವಿ.ಹೆಗಡೆಯವರು ಹೆಸರಾಂತ ವೈಜ್ಞಾನಿಕ ಲೇಖಕರು. ಅವರ ಲೇಖನಗಳು ಕನ್ನಡದ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸುಮಾರು ಮೂರು ದಶಕಗಳಿಂದ ವಿಜ್ಞಾನ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಹಲವಾರು ಲೇಖನಗಳನ್ನು ಅವರು ರಚಿಸುತ್ತಿದ್ದು, ಈ ಲೇಖನವು ಅವುಗಳಲ್ಲಿ ಒಂದಾಗಿದೆ. ಅವರ ಲೇಖನಗಳು ಬಹಳ ಸರಳ, ನೇರ ಪರಿಚಯಾತ್ಮಕ ರೀತಿಯಲ್ಲಿರುತ್ತವೆ. ಪ್ರಸ್ತುತ ಲೇಖನವನ್ನು ಇವರ 'ವಿಜ್ಞಾನ ವೈವಿಧ್ಯ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ನಮ್ಮ ದೇಹದ ರಕ್ಷಣಾ ಕವಚ ಯಾವುದು ?
2. ಚರ್ಮಕ್ಕೆ ಅಲರ್ಜಿಯನ್ನುಂಟು ಮಾಡುವ ರಾಸಾಯನಿಕಗಳು ಯಾವುವು ?
3. ಚರ್ಮದ ಸುಕ್ಕು–ನೆರಿಗೆಯನ್ನು ನಿವಾರಿಸುವ ರಾಸಾಯನಿಕ ಯಾವುದು ?
4. ಮಿಥೈಲ್ ಮತ್ತು ಇಥೈಲ್‌ಗಳನ್ನು ಏತಕ್ಕಾಗಿ ಬಳಸುತ್ತಾರೆ ?
5. ಶಾಂಪೂ ಮತ್ತು ಸಾಬೂನುಗಳಲ್ಲಿ ಬಳಸುವ ರಾಸಾಯನಿಕ ಯಾವುದು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕಾಕ್‌ಟೈಲ್ ಎಫೆಕ್ಟ್ ಅಥವಾ ಒಟ್ಟಾರೆ ಪರಿಣಾಮ ಎಂದರೇನು ?
2. ಸೌಂದರ್ಯ ವರ್ಧಕಗಳ ದೀರ್ಘಕಾಲೀನ ಪರಿಣಾಮಗಳನ್ನು ಪಟ್ಟಿ ಮಾಡಿ ?
3. ಮೂತ್ರಪಿಂಡ ಹಾಗೂ ಜಠರಗಳ ಮೇಲೆ ದುಷ್ಪರಿಣಾಮ ಬೀರುವ ರಾಸಾಯನಿಕಗಳು ಯಾವುವು ?
4. ಹಾರ್ಮೋನ್‌ಗಳ ಮೇಲೆ ದುಷ್ಪರಿಣಾಮ ಬೀರುವ ವಸ್ತುಗಳು ಯಾವುವು?
5. ಅಮೇರಿಕಾದಲ್ಲಿ ಸಾರ್ವಜನಿಕ ಜಾಗೃತಿಯಿಂದ ಉಂಟಾದ ಪರಿಣಾಮವೇನು ?
6. ಸಾಂಪ್ರದಾಯಿಕ ಸೌಂದರ್ಯ ವರ್ಧಕಗಳಾವುವು?

## ಚಟುವಟಿಕೆ

1. ಮೂತ್ರಪಿಂಡ ಹಾಗೂ ಜಠರದ ನಿರ್ವಹಣೆಯ ಬಗ್ಗೆ ವಿವರಗಳನ್ನು ಸಂಗ್ರಹಿಸಿರಿ.
2. ಆಯ್ಕೆಯ ಮೂಲಕ ಬದುಕನ್ನು ರೂಪಿಸಿಕೊಳ್ಳುವುದರ ಬಗ್ಗೆ ಒಂದು ಲೇಖನ ರಚಿಸಿ.
3. ಅದೃಷ್ಟವನ್ನು ನಂಬದೆ ಆತ್ಮಬಲವನ್ನು ನಂಬಿ ಬದುಕನ್ನು ರೂಪಿಸಿಕೊಂಡ ವ್ಯಕ್ತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿರಿ.





11th_Kannada_Reader_Final_16-07-2018.indd 144 16-07-2018 18:43:12

ಘಟಕ ವಿಳು

# ಸಮಾಸಗಳು

ಎರಡು ಅಥವಾ ಹಲವು ಪದಗಳು ಅರ್ಥಕ್ಕೆ ಅನುಸಾರವಾಗಿ ಒಟ್ಟು ಸೇರಿ ಒಂದು ಪದವಾಗುವುದಕ್ಕೆ ಸಮಾಸವೆನ್ನುವರು. ಹೀಗೆ ಎರಡು ಪದಗಳು ಸೇರುವಾಗ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವು ಲೋಪವಾಗುತ್ತದೆ. ಸಮಾಸ ಪದಗಳನ್ನು ಅರ್ಥವಾಗುವಂತೆ ಬಿಡಿಸಿ ಹೇಳುವುದಕ್ಕೆ ವಿಗ್ರಹ ವಾಕ್ಯಗಳೆಂದು ಹೆಸರು. ವಿಗ್ರಹ ವಾಕ್ಯದ ಮೊದಲ ಪದವನ್ನು ಪೂರ್ವ ಪದವೆಂದೂ, ಅದರ ಮುಂದಿನ ಪದವನ್ನು ಉತ್ತರ ಪದವೆಂದೂ ಕರೆಯುತ್ತಾರೆ.

ಉದಾಹರಣೆಗೆ :

ತಾಯಿಯ+ನುಡಿ=ತಾಯ್ನುಡಿ.

ಅರಸನ+ಮನೆ=ಅರಮನೆ

ಸಮಾಸದಲ್ಲಿ ಸೇರಿರುವ ಪದಗಳ ಅರ್ಥದ ಮುಖ್ಯತೆಯ ಮೇಲೆ ಸಮಾಸ ಭೇದಗಳಾಗುವುವು. ನಾವು ಹೇಳುವ ಮಾತಿನ ಅರ್ಥವು ಯಾವ ಪದಕ್ಕೆ ನೇರವಾಗಿ ಅನ್ವಯಿಸುವುದೋ ಆ ಪದದ ಅರ್ಥ ಮುಖ್ಯವೆಂದು ತಿಳಿಯಬೇಕು.

ಸಮಾಸಗಳಲ್ಲಿ ಮುಖ್ಯವಾಗಿ ತತ್ಪುರುಷ, ಕರ್ಮಧಾರಯ, ಅಂಶಿ, ಬಹುವ್ರೀಹಿ, ದ್ವಂದ್ವ, ಗಮಕ, ಕ್ರಿಯಾ ಮತ್ತು ದ್ವಿಗು ಸಮಾಸಗಳೆಂದು ಎಂಟು ವಿಧಗಳಿವೆ.

## 1. ತತ್ಪುರುಷ ಸಮಾಸ

ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸವೆಂದು ಹೆಸರು. ತತ್ಪುರುಷ ಸಮಾಸದಲ್ಲಿ ದ್ವಿತೀಯಾ, ತೃತೀಯಾ, ಚತುರ್ಥಿ, ಪಂಚಮೀ, ಷಷ್ಠಿ ಹಾಗೂ ಸಪ್ತಮೀ ತತ್ಪುರುಷ ಎಂದು ಆರು ಭೇದಗಳಿವೆ.

ಉದಾಹರಣೆಗೆ :

ಹಣ್ಣನ್ನು ಮಾರುವವನು – ಹಣ್ಣು ಮಾರುವವನು(ದ್ವಿತೀಯಾ)
ವಯಸ್ಸಿನಿಂದ ವೃದ್ಧ–ವಯೋವೃದ್ಧ(ತೃತೀಯಾ)
ಭೂತಗಳಿಗೆ ತೃಪ್ತಿ–ಭೂತ ತೃಪ್ತಿ(ಚತುರ್ಥಿ)
ಚೋರನ ದೆಸೆಯಿಂದ ಭಯ–ಚೋರಭಯ(ಪಂಚಮೀ)
ಎಲೆಯ ಮನೆ–ಎಲೆವನೆ/ಎಲೆಮನೆ(ಷಷ್ಠೀ)
ವನದಲ್ಲಿ ವಾಸ–ವನವಾಸ(ಸಪ್ತಮೀ)



11th_Kannada_Reader_Final_16-07-2018.indd 145 16-07-2018 18:43:12

## 2. ಕರ್ಮಧಾರಯ ಸಮಾಸ

ಪೂರ್ವಪದದಲ್ಲಿ ವಿಶೇಷಣವಿದ್ದು, ಉತ್ತರ ಪದದ ಅರ್ಥ ಮುಖ್ಯವಾಗಿದ್ದು, ವಿಶೇಷಣ, ವಿಶೇಷ್ಯಗಳಿಗೆ ಸಂಬಂಧವಿದ್ದರೆ ಅದು ಕರ್ಮಧಾರಯ ಸಮಾಸವೆನ್ನಿಸುತ್ತದೆ.

ಉದಾಹರಣೆಗೆ :

ಹೊಸದು+ಕನ್ನಡ=ಹೊಸಗನ್ನಡ

ಹಿರಿದು+ಬಾಗಿಲು=ಹೆಬ್ಬಾಗಿಲು

## 3. ದ್ವಿಗು ಸಮಾಸ

ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸವೆನ್ನಿಸುತ್ತದೆ.

ಉದಾಹರಣೆಗೆ :

ಒಂದು+ಕಟ್ಟು=ಒಗ್ಗಟ್ಟು

ಎರಡು+ಮಡಿ=ಇಮ್ಮಡಿ

ಮೂರು+ಪುರಿ=ಮುಪ್ಪುರಿ

## 4. ಅಂಶಿ ಸಮಾಸ

ಪೂರ್ವೋತ್ತರ ಪದಗಳು ಅಂಶಾಂಶಿ ಭಾವ ಸಂಬಂಧದಿಂದ ಸೇರಿ ಪೂರ್ವ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಅಂಶಿ ಸಮಾಸವೆನ್ನುವರು.

ಉದಾಹರಣೆಗೆ :

ತಲೆಯ+ಮುಂದು=ಮುಂದಲೆ

ಕೈಯ+ಅಡಿ=ಅಂಗೈ

ಕಾಲಿನ+ಮುಂದು=ಮುಂಗಾಲು

## 5. ದ್ವಂದ್ವ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿ ಉಳ್ಳ ಸಮಾಸಕ್ಕೆ ದ್ವಂದ್ವ ಸಮಾಸವೆಂದು ಹೆಸರು.

ಉದಾಹರಣೆಗೆ :

ಆನೆಯೂ ಕುದುರೆಯೂ ಒಂಟೆಯೂ–ಆನೆಕುದುರೆಒಂಟೆಗಳು

ಗಿಡವೂ ಮರವೂ ಬಳ್ಳಿಯೂ–ಗಿಡಮರಬಳ್ಳಿಗಳು



11th_Kannada_Reader_Final_16-07-2018.indd 146 16-07-2018 18:43:12

## 6. ಬಹುವ್ರೀಹಿ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಪೂರ್ವಪದ ಉತ್ತರ ಪದಗಳಲ್ಲಿ ಯಾವುದರ ಅರ್ಥವೂ ಮುಖ್ಯವಾಗಿರದೆ ಅನ್ಯ ಪದದ ಅರ್ಥವು ಮುಖ್ಯವಾಗಿದ್ದರೆ ಅದಕ್ಕೆ ಬಹುವ್ರೀಹಿ ಸಮಾಸ ಎಂದು ಹೆಸರು.

ಉದಾಹರಣೆಗೆ :

ಮೂರು ಕಣ್ಣುಗಳು ಯಾರಿಗೆ ಇವೆಯೋ ಅವನು–ಮುಕ್ಕಣ್ಣ
ಕಮಲದಂತಹ ಮುಖವು ಯಾರಿಗೆ ಇದೆಯೋ ಅವಳು–ಕಮಲಮುಖಿ

## 7. ಕ್ರಿಯಾ ಸಮಾಸ

ಪೂರ್ವಪದವು ನಾಮಪದವಾಗಿದ್ದು ಉತ್ತರ ಪದವು ಕ್ರಿಯಾರೂಪವಾಗಿದ್ದರೆ ಕ್ರಿಯಾಸಮಾಸವಾಗುವುದು.
ಉದಾಹರಣೆಗೆ :
ಮೈಯನ್ನು+ತಡವು=ಮೈದಡವು
ಕಣ್ಣನ್ನು+ತೆರೆ=ಕಣ್ದೆರೆ

## 8. ಗಮಕ ಸಮಾಸ

ಪೂರ್ವಪದವು ಸರ್ವನಾಮ ಅಥವಾ ಕೃದಂತವಾಗಿದ್ದು, ಉತ್ತರಪದವು ನಾಮಪದವಾಗಿದ್ದರೆ ಗಮಕಸಮಾಸವಾಗುವುದು.

ಉದಾಹರಣೆಗೆ :
ಅವನು+ಹುಡುಗ=ಆ ಹುಡುಗ
ಅದು+ಕಲ್ಲು=ಆ ಕಲ್ಲು
ಮಾಡಿದುದು+ಅಡಿಗೆ=ಮಾಡಿದಡಿಗೆ
ಸಿಡಿಯುವುದು+ಮದ್ದು=ಸಿಡಿಮದ್ದು
ಹುರಿದ+ಕಡಲೆ=ಹುರಿಗಡಲೆ

## ಅರಿ ಸಮಾಸ

ಕನ್ನಡ ಮತ್ತು ಸಂಸ್ಕೃತ ಶಬ್ದಗಳನ್ನು ಸೇರಿಸಿ ಮಾಡುವ ಸಮಾಸವನ್ನು ಅರಿಸಮಾಸವೆನ್ನುತ್ತಾರೆ. ಇದೊಂದು ದೋಷ. ರೂಢಿಯ ವ್ಯಾಕರಣದ ಪ್ರಕಾರ ಇದು ನಿಷಿದ್ಧ. ಆದರೆ ಭಾಷೆಯಲ್ಲಿ ಇಂತಹ ಪ್ರಯೋಗಗಳು ಕಂಡು ಬರುತ್ತವೆ. ಪೂರ್ವದ ಪ್ರಸಿದ್ಧ ಕವಿಗಳು ಮಾಡಿರುವ ಪ್ರಯೋಗಗಳಲ್ಲಿ ಬಿರುದಾವಳಿಗಳಲ್ಲಿ ಗಮಕ ಮತ್ತುಕ್ರಿಯಾ ಸಮಾಸಗಳಲ್ಲಿ ಅರಿಸಮಾಸವನ್ನು ದೋಷವೆಂದು ಪರಿಗಣಿಸಬಾರದು.

ಉದಾಹರಣೆಗೆ :

ಪೂರ್ವ ಕವಿ ಪ್ರಯೋಗಕ್ಕೆ – ತುರಗದಳ, ಮಂಗಳಾರತಿ

ಬಿರುದಾವಳಿಗೆ – ದಳಮುಖಾದಿತ್ಯ, ರಾಯಕೋಲಾಹಲ.

ಗಮಕಸಮಾಸಕ್ಕೆ – ಪೊಡೆವ ಭೇರಿ, ಆ ಕಾರ್ಯ.

ಕ್ರಿಯಾಸಮಾಸಕ್ಕೆ – ಧೈರ್ಯ ಹೊಂದು, ಧರ್ಮ ಮಾಡು.



11th_Kannada_Reader_Final_16-07-2018.indd 147 16-07-2018 18:43:12

ಘಟಕ ಎಂಟು

# ಧರ್ಮ/ತತ್ವ/ಚಿಂತನೆ



| | | |
|---|---|---|
| ಪದ್ಯ | : ಎಲ್ಲಾರು ಮಾಡುವುದು | – ಕನಕದಾಸ |
| ಗದ್ಯ | : ಅಹಂಕಾರ | – ರಾ.ಯ.ಧಾರವಾಡಕರ. |
| ಉಪಪಠ್ಯ | : ಸುಮತಿಯ ಕಥೆ | – ಶಿವಕೋಟ್ಯಾಚಾರ್ಯ |
| ವ್ಯಾಕರಣ | : ಛಂದಸ್ಸು | |



11th_Kannada_Reader_Final_16-07-2018.indd 148 16-07-2018 18:43:13

ಕಾವ್ಯ ಕಣಜ

ಘಟಕ ಎಂಟು

# ಎಲ್ಲಾರು ಮಾಡುವುದು

– ಕನಕದಾಸರು




ಮನುಷ್ಯನು ಹೊಟ್ಟೆಯನ್ನೇ ಕೇಂದ್ರವನ್ನಾಗಿಟ್ಟುಕೊಂಡು ಹಲವಾರು ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು ದುಡಿಯುತ್ತಿದ್ದಾನೆ. ಈ ಹೊಟ್ಟೆಯನ್ನು ಆದರಿಸಿಯೇ ಹಲವಾರು ವೃತ್ತಿಗಳು ಮೈದಾಳಿವೆ. ಆದರೆ ಮನುಷ್ಯ ಹೊಟ್ಟೆ ಬಟ್ಟೆಯ ಚಿಂತೆಯನ್ನು ಬಿಡಿಸಿಕೊಂಡು ದೈವಭಕ್ತಿಯನ್ನು ಮೈಗೂಡಿಸಿಕೊಂಡು ಆತ್ಮ ಸಂತೋಷವನ್ನು ಪಡೆಯಬೇಕೆನ್ನುವುದು ಕನಕದಾಸರ ಆಶಯ. ಹಲವಾರು ವೃತ್ತಿಗಳ ಬೆನ್ನು ಹತ್ತಿದ ಮಾನವ ಇಂದು ಹಣ ಗಳಿಕೆಯನ್ನೇ ಕೇಂದ್ರ ಗುರಿಯನ್ನಾಗಿಸಿಕೊಂಡಿದ್ದಾನೆ. ಇಂತಹ ಧೋರಣೆ ಅವನನ್ನು ಅನೇಕ ಗೊಂದಲಗಳಿಗೆ, ತಾಕಲಾಟಗಳಿಗೆ ಈಡು ಮಾಡುತ್ತದೆ. ಸಾಹಿತ್ಯ ಸಂಗೀತಗಳ ಸಾಮರಸ್ಯಗಳನ್ನು ಮೈಗೂಡಿಸಿಕೊಂಡಿರುವ ಕೀರ್ತನ ಸಾಹಿತ್ಯ ಪ್ರಕಾರದಲ್ಲಿ ಕನಕದಾಸರದು ವಿಶಿಷ್ಟ ಸಾಧನೆ. ಗ್ರಾಹಕ ಧೋರಣೆಯ ಇಂದಿನ ಬದುಕಿಗೆ ಎಚ್ಚರಿಕೆಯ ಗಂಟೆಯಾಗಿದೆ.





11th_Kannada_Reader_Final_16-07-2018.indd 149 16-07-2018 18:43:13

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥ಪ॥

ವೇದಶಾಸ್ತ್ರ ಪಂಚಾಂಗವ ಓದಿಕೊಂಡು ಅನ್ಯರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ॥1॥

ಚಂಡಭಟರಾಗಿ ನಡೆದು ಕತ್ತಿ ಢಾಲು ಕೈಲಿ ಹಿಡಿದು
ಖಂಡತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥2॥

ಅಂಗಡಿ ಮುಂಗಟ್ಟನ್ಹೂಡಿ ವ್ಯಂಗ್ಯಮಾತುಗಳನ್ಹಾಡಿ
ಭಂಗ ಬಿದ್ದು ಗಳಿಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥3॥

ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮನು ಮಾಡಿ
ರಂಟೆ ಹೊಡೆದು ಬೆಳೆಸುವದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥4॥

ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮರುಳು ಮಾಡಿ
ಸುಳ್ಳುಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥5॥

ಕೊಟ್ಟಣವನ್ನು ಕುಟ್ಟಿಕೊಂಡು ಕಟ್ಟಿಗೆಯನ್ನು ಹೊತ್ತುಕೊಂಡು
ಕಷ್ಟ ಮಾಡಿ ಉಣ್ಣುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥6॥

ಸನ್ಯಾಸಿ ಜಂಗಮ ಜೋಗಿ ಜಟ್ಟಿ ಮೊಂಡ ಭೈರಾಗಿ
ನಾನಾ ವೇಷಗಳೆಲ್ಲ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥7॥

ಹಳ್ಳದಲ್ಲಿ ಕುಳಿತುಕೊಂಡು ಕಲ್ಲು ದೊಣ್ಣೆ ಹಿಡಿದುಕೊಂಡು
ಕಳ್ಳತನವ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥8॥

ಅಂದಣ ಪಲ್ಲಕ್ಕಿಯೇರಿ ಮಂದಿ ಮಾರ್ಬಲ ಕೂಡಿ
ಚಂದದಿಂದ ಮೆರೆಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥9॥

ಉನ್ನತ ಕಾಗಿನೆಲೆಯಾದಿಕೇಶವನಾ ಧ್ಯಾನವನ್ನು
ಮನಮುಟ್ಟಿ ಮಾಡುವುದು ಮುಕ್ತಿಗಾಗಿ, ಆನಂದಕಾಗಿ ॥10॥



11th_Kannada_Reader_Final_16-07-2018.indd 150 16-07-2018 18:43:13

## ಕವಿ–ಕಾವ್ಯ ಪರಿಚಯ

ಕೀರ್ತನ ಸಾಹಿತ್ಯ ಪ್ರಕಾರದಲ್ಲಿ ಗಮನಾರ್ಹ ಸಾಧನೆ ಮಾಡಿರುವ ಕನಕದಾಸರು ತಮ್ಮ ಕಾವ್ಯರಚನೆ, ಸಾಮಾಜಿಕ ಪ್ರಜ್ಞೆಗಳಿಂದಲೂ ವಿಶಿಷ್ಟರೆನಿಸಿದ್ದಾರೆ. ಭಾಷೆ, ಸಾಹಿತ್ಯ, ತತ್ವಜ್ಞಾನಗಳೆಲ್ಲವೂ ಜನಸಮ್ಮುಖವಾಗಿರಬೇಕೆಂಬ ಇವರ ನಿಲುವು ಗಮನಾರ್ಹವಾದುದು. ವ್ಯಾಸರಾಯರಿಂದ ದೀಕ್ಷೆ ಪಡೆದ ಇವರು ಪುರಂದರ ದಾಸರ ಸಮಕಾಲೀನರು.

ಹಾವೇರಿ ಜಿಲ್ಲೆಯ ಬಾಡದಲ್ಲಿ 1509ರಲ್ಲಿ ಜನಿಸಿದ ಇವರು ಕಾಗಿನೆಲೆಯ ಆದಿಕೇಶವನನ್ನು ಆರಾಧ್ಯ ದೈವವನ್ನಾಗಿ ಮಾಡಿಕೊಂಡು ಅಲ್ಲಿ ನೆಲೆ ನಿಂತರು. ಮೋಹನತರಂಗಿಣಿ, ನಳಚರಿತೆ, ರಾಮಧಾನ್ಯಚರಿತೆ, ಹರಿಭಕ್ತಿಸಾರ – ಇವು ಇವರ ಕಾವ್ಯಕೃತಿಗಳು. ಹಲವಾರು ಕೀರ್ತನೆಗಳು, ಉಗಾಭೋಗ, ಸುಳಾದಿಗಳನ್ನೂ ಇವರು ರಚಿಸಿದ್ದಾರೆ. ಗೂಡಾರ್ಥದ 'ಮುಂಡಿಗೆಗಳಿ'ಗಾಗಿ ಇವರು ಪ್ರಸಿದ್ಧರಾಗಿದ್ದಾರೆ. 'ಕಾಗಿನೆಲೆಯಾದಿಕೇಶವ' ಇವರ ಕೀರ್ತನೆಗಳ ಅಂಕಿತ.

ವ್ಯಕ್ತಿಗಳ ಪರಮ ಧ್ಯೇಯ ಹೊಟ್ಟೆ ಬಟ್ಟೆಯ ಚಿಂತೆ. ಅದಕ್ಕೂ ಮೀರಿದ ಹಂತವನ್ನು ಪಡೆಯುವುದು ದೈವಭಕ್ತಿಯ ಮೂಲಕ ಎನ್ನುವುದು ಕನಕದಾಸರ ನಿಲುವು. ವ್ಯಾವಹಾರಿಕ ಬದುಕಿನ ಜನರು ಹೊಟ್ಟೆಬಟ್ಟೆಗಳ ಕೇಂದ್ರೀಕೃತ ಉದ್ದೇಶದಲ್ಲಿ ಮಗ್ನರಾಗಿರುವ ರೀತಿಯನ್ನು ದೃಷ್ಟಾಂತಗಳ ಮೂಲಕ ಇವರು ವಿವರಿಸುತ್ತಾರೆ. ಲೌಕಿಕ ಸಂತೃಪ್ತಿ, ಸಂತೋಷವನ್ನು ಮೀರಿ ದೈವ ಭಕ್ತಿಯಿಂದ ಪಡೆಯುವ ಸಂತೋಷ, ಸಂತೃಪ್ತಿ ಅಧಿಕವಾದದ್ದು. ವೇದಶಾಸ್ತ್ರ ಮತ್ತು ಪಂಚಾಂಗಗಳು ಬೌದ್ಧಿಕ ಚಟುವಟಿಕೆಗಳಾದರೂ ಕೂಡ ಸಾಮಾಜಿಕ ಸ್ತರದಲ್ಲಿ ಹೊಟ್ಟೆಪಾಡಿಗಾಗಿಯೇ ಮೀಸಲಾಗಿವೆ ಎಂಬುದು ಕೀರ್ತನೆಯ ಆಶಯ.

ಕೀರ್ತನೆಯು ರಾಗ ತಾಳ ಭಾವ ಲಯಗಳನ್ನು ಹೊಂದಿದ ವಿಶಿಷ್ಟ ಸಾಹಿತ್ಯ ಪ್ರಕಾರ.

## ಕಠಿಣ ಪದಗಳ ಅರ್ಥ

ಪಂಚಾಂಗ–ತಿಥಿ, ವಾರ, ನಕ್ಷತ್ರ, ಯೋಗ, ಕರಣ ಎಂಬ ಅಂಗಗಳನ್ನು ತಿಳಿಸುವ ದಿನಸೂಚಿ ಸಾಧನ; ಚಂಡಭಟ–ಪರಾಕ್ರಮಿ, ಶೂರ; ಢಾಲು–ಖಡ್ಗ ಇತ್ಯಾದಿ ಆಯುಧಗಳ ಹೊಡೆತದಿಂದ ತಪ್ಪಿಸಿಕೊಳ್ಳಲು ಬಳಸುವ ರಕ್ಷಾಕವಚದಂತಹ ಸಾಧನ, ಗುರಾಣಿ; ಖಂಡ–ತುಂಡು, ಮಾಂಸದ ತುಂಡು; ಭಂಗ–ಅಪಮಾನ; ಕುಂಟೆ–ವ್ಯವಸಾಯದ ಒಂದು ಉಪಕರಣ; ಕೊರಡು–ಒಣಗಿದ ಮರದ ತುಂಡು; ಹೆಂಟೆ–ಗಟ್ಟಿಮಣ್ಣಿನಮುದ್ದೆ; ರಂಟೆ–ನೇಗಿಲು; ಬೊಗಳು–ಬಾಯಿಗೆ ಬಂದಂತೆ ಮಾತನಾಡುವುದು; ಕೊಟ್ಟಣ–ಧಾನ್ಯ ಕುಟ್ಟುವ ಮರದ ಒನಕೆ; ಅಂದಣ–ಅಂಬಾರಿ, ಪಲ್ಲಕ್ಕಿ; ಮಾರ್ಬಲ–ಸೈನ್ಯ ಸಮೂಹ; ಗೇಣು–ಹೆಬ್ಬೆಟ್ಟು ಮತ್ತು ಕಿರುಬೆರಳನ್ನು ಅಗಲಿಸಿ ಹಿಡಿದಾಗ ಆಗುವ ಅಳತೆ ಪ್ರಮಾಣ.

## ಅಭ್ಯಾಸ

### I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಅನ್ಯರಿಗೆ ಬೋಧಿಸುವುದು ಹೇಗೆ ?
2. ಚಂಡಭಟರು ಏನು ಮಾಡುತ್ತಾರೆ ?
3. ವರ್ತಕರು ಹೇಗೆ ಗಳಿಸುತ್ತಾರೆ ?
4. ರೈತರು ಮಣ್ಣನ್ನು ಹೇಗೆ ಸಮ ಮಾಡುತ್ತಾರೆ ?
5. ಎಲ್ಲರನ್ನೂ ಮರುಳು ಮಾಡುವುದು ಹೇಗೆ ?
6. ನಾನಾ ವೇಷಗಳನ್ನು ಯಾರು ಧರಿಸುತ್ತಾರೆ ?
7. ಅರಸರು ಚಂದದಿಂದ ಮೆರೆಯುವುದು ಹೇಗೆ ?
8. ಆದಿಕೇಶವನ ಧ್ಯಾನವನ್ನು ಏತಕ್ಕಾಗಿ ಮಾಡಬೇಕು ?

### II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ರೈತರು ಹೊಟ್ಟೆಗಾಗಿ ಹೇಗೆ ಶ್ರಮ ಪಡುತ್ತಾರೆ ?
2. ಸೈನಿಕರು ಮತ್ತು ವ್ಯಾಪಾರಿಗಳು ಹೊಟ್ಟೆಪಾಡಿಗಾಗಿ ಏನೇನು ಮಾಡುತ್ತಾರೆ ?
3. ಮರುಳು ಮಾತುಗಳಿಂದ ಮತ್ತು ಕಷ್ಟದಿಂದ ಹೊಟ್ಟೆಪಾಡಿಗಾಗಿ ಏನು ಮಾಡುತ್ತಾರೆ ?
4. ಹೊಟ್ಟೆಪಾಡಿಗಾಗಿ ಜನರು ಯಾವ ಯಾವ ಮಾರ್ಗಗಳನ್ನು ಹಿಡಿಯುತ್ತಾರೆ ?



11th_Kannada_Reader_Final_16-07-2018.indd 151 16-07-2018 18:43:13

5. ಮುಕ್ತಿಗಾಗಿ ಯಾರನ್ನು ಹೇಗೆ ಧ್ಯಾನ ಮಾಡಬೇಕು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಹೊಟ್ಟೆಬಟ್ಟೆಗಾಗಿ ಮನುಷ್ಯರು ಮಾಡುವ ನಾನಾ ಪ್ರಯತ್ನಗಳನ್ನು ಕನಕದಾಸರು ಹೇಗೆ ವಿಡಂಬಿಸಿದ್ದಾರೆ ?
2. ಮಾನವ ನಿಜವಾಗಿ ಮಾಡಬೇಕಾದದ್ದು ಏನು, ಮಾಡುತ್ತಿರುವುದೇನು– ಎಂಬುದನ್ನು 'ಎಲ್ಲಾರು ಮಾಡುವುದು' ಕೀರ್ತನೆಯ ಹಿನ್ನೆಲೆಯಲ್ಲಿ ವಿವರಿಸಿ.

**IV. ಕೆಳಗಿನ ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.**

1. 'ಕತ್ತಿ ಢಾಲು ಕೈಲಿ ಹಿಡಿದು ಖಂಡತುಂಡ ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ'
2. 'ರಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ'
3. 'ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ'
4. 'ಕಲ್ಲು ದೊಣ್ಣೆ ಹಿಡಿದುಕೊಂಡು ಕಳ್ಳತನವ ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ'
5. 'ಕೇಶವನ ಧ್ಯಾನವನ್ನು ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕಾಗಿ'



## ಭಾಷಾಭ್ಯಾಸ

**1. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ವೇದ, ಶಾಸ್ತ್ರ, ಭಟ, ಸನ್ಯಾಸಿ, ವೇಷ, ಪಲ್ಲಕ್ಕಿ, ಮುಕ್ತಿ.

**2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಪಂಚಾಂಗ, ಕೊಟ್ಟಣವನ್ನು, ವೇಷಗಳೆಲ್ಲ, ಕಾಗಿನೆಲೆಯಾದಿ, ಧ್ಯಾನವನ್ನು.

**3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಕಷ್ಟ, ಜಂಗಮ, ಧ್ಯಾನ, ಮುಕ್ತಿ, ಆನಂದ.

## ಚಟುವಟಿಕೆ

1. ಪುರಂದರ ದಾಸರ 'ಉದರ ವೈರಾಗ್ಯ' ಎನ್ನುವ ಕೀರ್ತನೆಯನ್ನು ಓದಿ ತಿಳಿಯಿರಿ.
2. ದಾಸರುಗಳ ಚರಿತ್ರೆಯನ್ನು ಓದಿ ತಿಳಿಯಿರಿ.
3. ದಾಸರ ಪದಗಳನ್ನು ಧ್ವನಿ ಸುರುಳಿ ಮೂಲಕ, ಕಲಾವಿದರ ಬಾಯಲ್ಲಿ ಕೇಳಿ ಆನಂದಿಸಿ.





11th_Kannada_Reader_Final_16-07-2018.indd 152 16-07-2018 18:43:14

ಗದ್ಯ ವಿಹಾರ

ಘಟಕ ಎಂಟು

# ಅಹಂಕಾರ

– ರಾ.ಯ.ಧಾರವಾಡಕರ



ಅಹಂಕಾರವೆಂಬುದು ವಿನಾಶದ ದಾರಿ. Pride goes before fall ಎಂದು ಡೇನ್ ಆಸ್ಟೆನ್ ಹೇಳಿದರು. ಮನುಷ್ಯನ ತಲೆಯಲ್ಲಿ ಮದ ತುಂಬಿತೋ ಪಾಪದ ಕೊಡ ತುಂಬಿದ ಹಾಗೆ, 'ನೂರು ತೀವಿತ್ತೆಂದಂ'!. ಬಸವಣ್ಣನವರನ್ನು ವರ್ಣಿಸುವಾಗ ಹರಿಹರನೇನೋ 'ಅಹಂಕಾರದೊಳ್ ಗರ್ವವಿಲ್ಲ' ಎಂದು ಹೇಳಿದ. ಆದರೆ ಇಂದು ಅಹಂಕಾರ, ಗರ್ವ, ಮದ, ಸೊಕ್ಕು ಇವೆಲ್ಲಾ ಹೆಚ್ಚೂ ಕಡಿಮೆ ಒಂದೇ ಅರ್ಥವನ್ನು ಕೊಡುತ್ತವೆ. ಅತಿವಿನಯ, ಧೂರ್ತ ಲಕ್ಷಣವಾದ ಹಾಗೆ ಜಂಭ ಅವಸಾನದ ಲಕ್ಷಣ. ಮನುಷ್ಯನಲ್ಲಿ ಸ್ವಾಭಿಮಾನವಿರಬೇಕು. ಇಲ್ಲವಾದರೆ ಜನ ಅವನನ್ನು ಹುಳು ತುಳಿದ ಹಾಗೆ ತುಳಿದು ಹೋಗುತ್ತಾರೆ. ಆದರೆ ಆ ಸ್ವಾಭಿಮಾನ, ಅಹಂಕಾರಕ್ಕೆ ಮದಕ್ಕೆ ವಾಲದ ಹಾಗೆ ನೋಡಿಕೊಳ್ಳಬೇಕು.

ಮದಕ್ಕೆ ಎಂಟು ಸೆಲೆಗಳು. ಕುಲ, ಶೀಲ, ರೂಪ, ಯೌವ್ವನ, ಧನ, ವಿದ್ಯೆ, ರಾಜ್ಯ, ವೃದ್ಧಿ – ಎಂಬ ಎಂಟು ಮದಗಳನ್ನು ಹೇಳುತ್ತಾರೆ. ತಾಮಸ ಮದವಿದ್ದ ಹಾಗೆ. ಸಾತ್ವಿಕವೂ ಮದಕ್ಕೆ ತಿರುಗಿಕೊಳ್ಳಬಹುದು. ಅಂತಲೇ ಹಲವರು ತಪೋ ಮದವನ್ನು ಅಷ್ಟಮದಗಳಲ್ಲಿ ಒಂದಾಗಿ ಹೇಳಿದರು. ತಪೋಮದವಿದ್ದ ಎಷ್ಟೋ ಋಷಿಗಳು, ರಾಕ್ಷಸರು ಕಂಡಕಂಡವರಿಗೆಲ್ಲ ಶಾಪ ಕೊಡುತ್ತಲೇ ಹೊರಟರು. ಅವರನ್ನು ಸಾತ್ವಿಕ ಶಕ್ತಿ, ಕಾಲಕಾಲಕ್ಕೆ ನಿಗ್ರಹಿಸಬೇಕಾಯಿತು. ಈ ಮದಮತ್ತರಾದವರ ಕಾಲು



11th_Kannada_Reader_Final_16-07-2018.indd 153 16-07-2018 18:43:14

ನೆಲದ ಮೇಲೆಯೇ ನಿಲ್ಲುವುದಿಲ್ಲ. ಅಷ್ಟ ಮದಗಳಲ್ಲಿ ಅಷ್ಟಿಷ್ಟಿದ್ದರೂ ಎಷ್ಟೋ ಆಗುವಾಗ ಅಷ್ಟೂ ಇದ್ದರಂತೂ ಎಷ್ಟಾಗಬೇಡ. ಇವು ಏಕೈಕಮಪಿ ಅನರ್ಥಾಯ. ಅಗ್ರಹಾರಕ್ಕೆ ಹೋದರೂ ಇವರಿಗೆ ದುರಾಗ್ರಹ ಬಿಡುವುದಿಲ್ಲ. ಆದ್ದರಿಂದ ವ್ಯಕ್ತಿಯಲ್ಲಿ ಉಳಿದ ಎಷ್ಟೇ ಸದ್ಗುಣಗಳಿದ್ದರೂ ಅಹಂಕಾರದ ದೌರ್ಬಲ್ಯ ಒಂದು ಸಲ ಉಂಟಾದರೆ ಮಸಿ ಚಿತ್ರವನ್ನು ನುಂಗಿದಂತೆ. ಅದರಿಂದ ಅವನಿಗೆ ಏಳಿಗೆಯೇ ಇಲ್ಲ.

ರಾವಣ ಸುಂದರ, ಧಾರ್ಮಿಕ, ಸಾತ್ವಿಕ, ಶೂರ, ದೈವ ಶ್ರದ್ಧೆಯುಳ್ಳವ. ಆದರೆ ಯಾವುದೋ ಒಂದು ವಿಷಗಳಿಗೆಯಲ್ಲಿ ಸ್ತ್ರೀ ಮೋಹ, ಅಹಂಕಾರಗಳು ಅವನೊಳಗೆ ಪ್ರವೇಶಿಸುತ್ತವೆ. ರಾವಣನ ವೈಭೋಗಕ್ಕೆ ಏನು ಕಡಿಮೆಯಿದೆ. ಸೀತೆಗೆ ಮನಸೋತ ರಾವಣ ಅವಳಿಗೆ ತನ್ನವಳಾಗಲು ಹೇಳುವಾಗ ಎಂತಹ ಪಲ್ಯಂಕದಲ್ಲಿ ಎಂತಹ ಹಾಸುಗೆಯಲ್ಲಿ ಹೇಗೆ ಮಲಗಿಕೊಳ್ಳಬಹುದೆಂಬುದರ ಬಗ್ಗೆ ಹೀಗೆ ಹೇಳುತ್ತಾನೆ :

ಎನ್ನೊಳ್ ಪೋರ್ದುಡಿದ ಇಂದ್ರಸಿಂಧುರದ
ಕೋಡಿಂದಾದ ಪಲ್ಯಂಕದೊಳ್
ಮುನ್ನಂ ಪದ್ಮಜನಂಚೆಯಂ ತರಿದು
ತುಪ್ಪುಳ್ಗೊಂಡು ದಿಕ್ಪಾಲಕರ್
ಬೆನ್ನೆತ್ತಿಕ್ಕಿದ ಚೀಲದಿಂದ ಸಮೆದ ಕೇಳೀ
ತಲ್ಪದೊಳ್ ನಿದ್ರೆಗೆಯ್ ನಿನ್ನಂ
ನಿದ್ರೆಯಿಂ ಎಳ್ಪುವನ್ನಂ
ಅಮರೀಮಾಂಗಲ್ಯಗೀತಸ್ವನಂ

ನನ್ನ ಕೂಡ ಹೋರಾಡಿ ಸೋತ ಇಂದ್ರನ ಐರಾವತದ ಕೋರೆಯಿಂದ ಮಾಡಲಾದ ಪಲ್ಲಂಗದ ಮೇಲೆ (ಹಸ್ತಿದಂತವೇ ತುಂಬಾ ಬೆಲೆಯುಳ್ಳದ್ದು. ಅದರಲ್ಲಿ ಇಂದ್ರನ ಐರಾವತದ ಕೋರೆ ಎಂದ ಮೇಲೆ ಕೇಳಬೇಕೇ?) ಬ್ರಹ್ಮನ ಹಂಸದ ತುಪ್ಪುಳಗಳನ್ನೆಲ್ಲಾ ಹರಿದು ತಮ್ಮ ಬೆನ್ನ ಮೇಲೆ ಹೊತ್ತುಕೊಂಡು ತಂದು, ದಿಕ್ಪಾಲಕರು ಸ್ವತಃ ಸಿದ್ಧ ಮಾಡಿದ ಶೃಂಗಾರದ ಗಾದೆಯಲ್ಲಿ ದೇವತೆಯರು ನಿನ್ನನ್ನು ಉದಯರಾಗ ಹಾಡಿ ಎಬ್ಬಿಸುವವರೆಗೆ ಸುಖವಾಗಿ ನಿದ್ರೆ ಮಾಡು (ಐರಾವತದ ಕೋರೆಯಲ್ಲಿ ಮಾಡಿದ ಮಂಚ, ಬ್ರಹ್ಮನ ಹಂಸದ ತುಪ್ಪುಳದ ಗಾದಿ, ಅದನ್ನು ಬೆನ್ನಲ್ಲಿ ಹೊತ್ತು ತಂದವರು ದಿಕ್ಪಾಲಕರು, ಅವಳನ್ನು ಎಬ್ಬಿಸುವವರು ಸ್ವರ್ಗಲೋಕದ ದೇವತೆಗಳು! ಎಂತಹ ವೈಭವವದು!) ಇಂತಹ ಔನ್ನತ್ಯದ ಮಾತನ್ನು ಹೇಳಿದ ರಾವಣನ ಅಹಂಕಾರದ ಬಗ್ಗೆ ಕವಿ ಹೀಗೆ ಹೇಳುತ್ತಾನೆ :

ಕುಲಮದವೊಂದು ರೂಪಮದವೊಂದು
ವಯೋಮದವೊಂದು ತನ್ನ ದೋರ್ಬಲ
ಮದವೊಂದು ಜಾತಿ ಮತವೊಂದು ಕಲಾ
ಮದವೊಂದು ದೇವತಾ ಬಲ ಮದವೊಂದು
ರಾಜ್ಯಮದವೊಂದು ಇನಿತಲ್ಲದೆ ಬೇರೆ ರಾಗಂ
ಅಗ್ಗಲಿಸಿದ ದೋಷದೃಷ್ಟಿ ವಿಷಯಾತುರರೇನ್ ಗಡ
ಮುಂದುಗಾಣ್ಬರೇ ?

ಇದರಿಂದ ತಲೆಯಲ್ಲಿ ಗಾಳಿ ತುಂಬಿಕೊಂಡ ರಾವಣ 'ಸ್ತ್ರೀ ರತ್ನಕ್ಕಾನಿರೆ, ಪೆರರಾರ್ ಒಡೆಯರ್' ಎಂದು ಹೇಳುವ ಔನ್ನತ್ಯದವರೆಗೆ ತನ್ನ ಅಹಂಕಾರವನ್ನು ಜೀಕಿದ. ಅಂತಲೇ 'ಅತಿ ಗರ್ವಾತ್ ರಾವಣೋಹತಃ' ಎಂದು ಹೇಳುವುದು.

ಅಹಂಕಾರದ ವಿಷದ ನಾಲಿಗೆ ನಹುಷ ಚಕ್ರವರ್ತಿಯಂತಹವರನ್ನೂ ಬಿಡಲಿಲ್ಲ. ಬ್ರಹ್ಮ ಹತ್ಯಾ ಪಾಪಕ್ಕೆ ಗುರಿಯಾದ ಇಂದ್ರ ಅದರ ಪರಿಮಾರ್ಜನೆಗಾಗಿ ಸ್ವರ್ಗವನ್ನು ಬಿಟ್ಟು ಹೋದಾಗ ಇಂದ್ರನ ಸ್ಥಾನದಲ್ಲಿ ನಹುಷ ಚಕ್ರವರ್ತಿಯನ್ನು ಸ್ವತಃ ಬ್ರಹ್ಮನೇ ಆಯ್ಕೆ ಮಾಡಿದ. ಏಕೆಂದರೆ ಸ್ವರ್ಗಕ್ಕೆ ಅಧಿಪತಿಗಳಿಲ್ಲದಿರುವಾಗ, ದೇವತೆಗಳೆಲ್ಲರೂ ಬ್ರಹ್ಮನಲ್ಲಿ ಹೋಗಿ ಸ್ವರ್ಗಕ್ಕೆ ಅಧಿಪತಿಯಿಲ್ಲವೆಂದು ಹೇಳಿದಾಗ, ಈ ಸ್ಥಾನಕ್ಕೆ ಯೋಗ್ಯ ವ್ಯಕ್ತಿ ಭೂಲೋಕದ ನಹುಷ ಚಕ್ರವರ್ತಿಯೇ ಎಂದು ಬಗೆದು ಬ್ರಹ್ಮ ನಹುಷನನ್ನು ಆರಿಸಿದ. ಸ್ವತಃ ದೇವತೆಗಳೇ ಪ್ರಾರ್ಥಿಸಿಕೊಂಡರೂ ಮೊದಮೊದಲು ಇಂದ್ರ ಪದವಿಯನ್ನು ಒಲ್ಲೆನೆಂದ ನಹುಷ ಕೊನೆಗೆ ಅನಿವಾರ್ಯವಾಗಿ ಒಪ್ಪಿಕೊಂಡ.



11th_Kannada_Reader_Final_16-07-2018.indd 154 16-07-2018 18:43:14

ಆದರೆ ಒಂದು ಸಲ ಇಂದ್ರನ ಸಿಂಹಾಸನದಲ್ಲಿ ಕುಳಿತ ನಹುಷ ಚಕ್ರವರ್ತಿಗೆ ಇಂದ್ರನ ವೈಭೋಗಗಳೆಲ್ಲವೂ ಬೇಕೆನಿಸಿತು. ಇಂದ್ರನ ಅರಮನೆ, ಸಿಂಹಾಸನ ಎಲ್ಲವೂ ಆಯಿತು. ಆದರೆ ಶಚಿದೇವಿ ಕೇವಲ ಇಂದ್ರನ ರಾಣಿಯಾಗೇಕಿರಬೇಕು ? ಅವಳು ತನ್ನೊಡನೆ ಏಕಿರಬಾರದು ? ಎಂಬ ಅಹಂಕಾರದ ಹುಳು ಅವನ ತಲೆಯಲ್ಲಿ ಕೊರೆಯಹತ್ತಿತು. 'ಅಹಂಕಾರ ಮದಿರಾಸವ ಮತ್ತರಿಗೆ ಮೇಲಿನ ಮುಗಿಲು ಮಾತ್ರ ಕಾಣಿಸುತ್ತದೆಯೋ ವಿನಾ ಕಾಲ ಕೆಳಗಿನ ನೆಲ ಕಾಣುವುದೇ ಇಲ್ಲ. ನಹುಷನ ಗತಿಯೂ ಹೀಗೆಯೇ ಆಯಿತು. ತನ್ನನ್ನು ಒಡಗೂಡಬೇಕೆಂದು ಅವನು ಶಚೀದೇವಿಗೆ ಹೇಳಿ ಕಳಿಸಿದ. ಶಚೀದೇವಿ ತಬ್ಬಿಬ್ಬಾದಳು. ಅವಳಿಗೆ ಏನು ಮಾಡಬೇಕೋ ತಿಳಿಯದಾಯಿತು. ಅವಳು ಸಪ್ತರ್ಷಿಗಳಲ್ಲಿ ಹೋಗಿ ತನ್ನ ಮನದಳಲನ್ನು ತೋಡಿಕೊಂಡಳು. ಆಗ ಋಷಿಗಳು ಅವಳಿಗೆ ಒಂದು ಉಪಾಯವನ್ನು ಹೇಳಿಕೊಟ್ಟರು. 'ನೀನು ಸಪ್ತರ್ಷಿಗಳನ್ನು ವಾಹವನ್ನಾಗಿ ಮಾಡಿಕೊಂಡು ನನ್ನಲ್ಲಿಗೆ ಬಂದರೆ ನಾನು ಅವಶ್ಯವಾಗಿ ನಿನ್ನೊಡನೆ ಇರುವೆನು' ಎಂದು ಅವನಿಗೆ ಹೇಳಿ ಕಳುಹಿಸು' ಎಂದು ಅವರು ತಿಳಿಸಿದರು. ಶಚೀದೇವಿ ಹಾಗೆಯೇ ಮಾಡಿದಳು. 'ಓಹ್! ಇದೇನು ಮಹಾ! ಎಂದು ನಹುಷ ಸಪ್ತರ್ಷಿಗಳಿಗೆ ತನ್ನ ವಾಹನವಾಗಿ ಬರಲು ಆಜ್ಞಾಪಿಸಿದ. ಯಾವ ಋಷಿಗಳ ಸಾತ್ವಿಕ ತಪಸ್ಸಾಮರ್ಥ್ಯದೆದುರಿಗೆ ಸ್ವತಃ ಆ ಪರಮಾತ್ಮನಿಗೇ ನಿಲ್ಲಲು ಸಾಧ್ಯವಿಲ್ಲವೋ ಅಂತಹ ಸಪ್ತರ್ಷಿಗಳು ಹೊತ್ತ ಪಲ್ಲಕ್ಕಿಯಲ್ಲಿ ಸೆಟೆದು ಕುಳಿತು ಶಚೀದೇವಿಯಿದ್ದಲ್ಲಿಗೆ ಹೋಗುವಷ್ಟು ನಹುಷ ಮದಾಂಧನಾಗಿದ್ದ. ನಹುಷನ ಆಜ್ಞೆಯಂತೆ ಏಳೂ ಜನ ಋಷಿಗಳೂ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೊರಟರು. ಅದರಲ್ಲಿ ಆಸೀನನಾಗಿದ್ದ ನಹುಷನಿಗೆ ಯಾವಾಗ ತಾನು ಶಚೀದೇವಿ ಇರುವ ಸ್ಥಾನವನ್ನು ತಲುಪೇನೋ ಎಂಬ ಆತುರ. ಆದ್ದರಿಂದ ಅವರಿಗೆ 'ಬೇಗ ಬೇಗ ನಡೆಯಿರಿ' ಎಂದು ಕೂಗಹತ್ತಿದ. ಪಲ್ಲಕ್ಕಿ ಹೊತ್ತ ಈ ಏಳು ಜನ ಋಷಿಗಳಲ್ಲಿ ಅಗಸ್ತ್ಯರೂ ಒಬ್ಬರಾಗಿದ್ದರು. ಅಗಸ್ತ್ಯರು ಕುಳ್ಳರು. ಉಳಿದವರಷ್ಟು ವೇಗವಾಗಿ ನಡೆಯಲು ಅವರಿಗೆ ಆಗದು.

ಇದರಿಂದ ಕ್ರುದ್ಧನಾದ ನಹುಷ ಅಗಸ್ತ್ಯರ ತಲೆಯನ್ನು ತನ್ನ ಕಾಲಿನಿಂದ ಒದ್ದು, 'ಸರ್ಪ, ಸರ್ಪ' ಎಂದರೆ 'ಬೇಗ ಬೇಗ ನಡೆ' ಎಂದು ಕಿರುಚಿದ. ಇದರಿಂದ ಕ್ರುದ್ಧರಾದ ಅಗಸ್ತ್ಯರು, 'ಹಾಗೆಯೇ ಆಗಲಿ, ಸರ್ಪೋಭವ. ನೀನು ಸರ್ಪವೇ ಆಗು' ಎಂದು ಶಾಪವಿತ್ತರು. ತತ್‌ಕ್ಷಣವೇ ಪಲ್ಲಕ್ಕಿಯಲ್ಲಿ ಕುಳಿತಿದ್ದ ನಹುಷ ಚಕ್ರವರ್ತಿ ಘಟಸರ್ಪವಾಗಿ ನೆಲಕ್ಕೆ ಉರುಳಿದ. ಪಲ್ಲಕ್ಕಿಯಲ್ಲಿ ಕುಳಿತಿದ್ದ ಅಹಂಕಾರ ನೆಲಕ್ಕುರುಳಿ ವಿಷ ಪೂತ್ಕರಿಸುವ ಘಟಸರ್ಪವಾಯಿತು. ಮಣ್ಣಲ್ಲಿ ಬಿದ್ದು ಅದು ಹೊರಳಾಡ ಹತ್ತಿತು. ಅನಂತರ ಈ ಘಟಸರ್ಪಕ್ಕೆ ಭೀಮಸೇನನ ಭೀಮ ಶಕ್ತಿಯಿಂದಲೂ ಉಶ್ಶಾಪವಾಗಲಿಲ್ಲ. ಕೊನೆಗೆ ಅಹಂಕಾರದ ಈ ಅಜಗರಕ್ಕೆ ಉಶ್ಶಾಪ ದೊರೆತದ್ದು ಯುಧಿಷ್ಠಿರನ ಸಾತ್ವಿಕ ಶಕ್ತಿಯಿಂದಲೇ. ಅಹಂಕಾರ ವಿನಾಶದ ಹಾದಿ.

ಈ ಅಹಂಕಾರ ಎಂತೆಂತಹ ಸಾತ್ವಿಕರನ್ನೂ ಬಿಟ್ಟಿಲ್ಲ. ಅಹಂಕಾರ ಒಂದು ಅಜಗರ. ಅದು ಒಬ್ಬರನ್ನು ಸುತ್ತಿಕೊಂಡಿತೆಂದರೆ ಅವರ ಎಲುವುಗಳೆಲ್ಲಾ ಆ ಹಿಡಿತದಿಂದ ಪುಡಿಪುಡಿಯಾಗಲೇ ಬೇಕು. ಅದಕ್ಕೆ ಎಂತೆಂತಹವರೂ ಅಪವಾದವಾಗಿಲ್ಲ.

ಸುಪ್ರಸಿದ್ಧ ಭರತ ಚಕ್ರವರ್ತಿ ಮಹಾ ಪರಾಕ್ರಮಿ. ಬಾಹುಬಲಿಯ ಅಣ್ಣ. ಅವನು ಸಕಲ ಭೂಮಂಡಲವನ್ನೂ ಗೆಲ್ಲುತ್ತಾನೆ. ಅವನು ಹಲವು ಅರಸರನ್ನು ಸೋಲಿಸಿದರೆ ಹಲವರು ತಾವಾಗಿಯೇ ಬಂದು ಅವನಿಗೆ ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಮಾಗಧ, ವರತನು, ಪ್ರಭಾಸಾಮರ, ವಿಜಯಾರ್ಧಕುಮಾರ ಮೊದಲಾದವರಲ್ಲದೆ ಗಂಗಾ ಸಿಂಧುಗಳ ಮಧ್ಯದಲ್ಲಿನ ಎಲ್ಲ ಕುರು ರಾಜರೂ ಅವನಿಗೆ ಶರಣಾಗತರಾಗುತ್ತಾರೆ. ಹೀಗೆ ವಿಜಯದ ಮೇಲೆ ವಿಜಯವನ್ನು ಸಂಪಾದಿಸಿದ ಭರತ



11th_Kannada_Reader_Final_16-07-2018.indd 155 16-07-2018 18:43:14

ಚಕ್ರವರ್ತಿ ಉತ್ತರ ಭರತ ಮಧ್ಯಮ ಖಂಡದಲ್ಲಿರುವ ವೃಷಭಾಚಲಕ್ಕೆ ಬಂದು ತಾನೇ ಏಕೈಕ ಚಕ್ರವರ್ತಿ ಎನ್ನುವ ಹಮ್ಮಿನಲ್ಲಿ ಅದರ ಗೋಡೆಯ ಮೇಲೆ ತನ್ನ ವಿಶ್ವ ವಿಶ್ವಂಬರಾವಿಜಯ ಪ್ರಶಸ್ತಿಯನ್ನು ಬರೆಯಿಸಬೇಕೆಂದು ಬಯಸುತ್ತಾನೆ. ಆದರೆ ಅಲ್ಲಿ ಹೋಗಿ ಅದರೆದುರಾಗಿ ನಿಂತಾಗ ಅಲ್ಲಿ ಅವನು ಕಾಣುವುದೇನು ? ವೃಷಭಾಚಲದ ಮೇಖಲಾ ಭಿತ್ತಿಯಲ್ಲಿ ತನ್ನ ವಿಜಯಶ್ರೀಯನ್ನು ಬರೆಯಿಸಲು ಅವನಿಗೆ ಸ್ಥಳವೇ ಇರುವುದಿಲ್ಲ. ಏಕೆಂದರೆ,

ಅದರೊಳ್ ಅನೇಕ ಕಲ್ಪಶತಕೋಟಿಗಳೊಳ್
ಸಲೆ ಸಂದ ಚಕ್ರಿ
ವೃಂದದ ಛಲದ ಆಯದ ಆಯತಿಯ
ಬೀರದ ಚಾಗದ ಮಾತುಗಳ್
ಪೊದಳ್ದೊದವಿರೆ ತತ್‌ಪ್ರಶಸ್ತಿಗಳೊಳ್
ಅಂತವಂ ಒಯ್ಯನೆ ನೋಡಿ ನೋಡಿ
ಸೋರ್ದುದು ಕೊಳಗೊಂಡ ಗರ್ವರಸಂ ಆ
ಭರತೇಶ್ವರ ಚಕ್ರವರ್ತಿಯಾ !

ಆ ವೃಷಭಾಚಲದ ಗೋಡೆಯ ಮೇಲೆ ಬರೀ ಒಂದು ಕಲ್ಪದಲ್ಲಲ್ಲ. ಭರತ ಚಕ್ರವರ್ತಿಗಿಂತ ಅನೇಕ ಕಲ್ಪಗಳ ಪೂರ್ವದಲ್ಲಿ ಆಗಿ ಹೋಗಿದ್ದ ಮಹಾಮಹಾ ಚಕ್ರವರ್ತಿಗಳ ಛಲದ, ಶೌರ್ಯದ, ವೈಭವದ, ವೀರ್ಯದ, ತ್ಯಾಗದ ಮಾತುಗಳನ್ನು ಆ ಮೊದಲೇ ಅಲ್ಲಿ ಕೊರೆಯಲಾಗಿತ್ತು. ಅವುಗಳನ್ನೆಲ್ಲ ನಿಧಾನವಾಗಿ ನೋಡ ನೋಡುತ್ತಿರುವ ಹಾಗೆಯೇ ಭರತ ಚಕ್ರವರ್ತಿಯಲ್ಲಿ ತಾನೇ ಏಕಮೇವ ಅದ್ವಿತೀಯ ಚಕ್ರವರ್ತಿ ಎಂದು ಮಡುಗಟ್ಟಿ ನಿಂತಿದ್ದ ಗರ್ವರಸವೆಲ್ಲ ಸೋರಿ ಹೋಗಿ ಅವನಲ್ಲಿ ನಾಚಿಕೆ ತುಂಬಿಕೊಂಡಿತು. ಆದರೆ ಬಹಳ ದೂರ ಹೋದವನು ಮರಳಿ ಬರುವುದು ತುಂಬಾ ದುಸ್ತರ. ಆಲ್ಲಿನ ಗೋಡೆಯ ಮೇಲೆ ತನ್ನ ಹೆಸರನ್ನು ಬರೆಯಿಸಬೇಕೆಂದರೆ ಭರತ ಚಕ್ರವರ್ತಿಗೆ ಅಲ್ಲಿ ಸ್ಥಳವೇ ಇರಲಿಲ್ಲ. ಆದ-ರೂ ಅವನು ಸುಮ್ಮನಿರಲಿಲ್ಲ. ಅಲ್ಲಿ ಬರೆಯಲಾದ ಪ್ರಶಸ್ತಿಗಳನ್ನು ತನ್ನ ದಂಡರತ್ನದಿಂದ ಸೀಂಟಿ ತೆಗೆದು, 'ದೇವಾಂಗನೆಯರ್ ಕೊಡುವರಾವನ ಜಸಮಂ ಕುಳಾಚಳಾವಳಿಯೊಳ್ ಶೌರ್ಯಾವಷ್ಟಂಭದಿಂದ ಆಳ್ದವಂ ಆವಂ ಷಟ್ಖಂಡಮಂಡಿತ ಕ್ಷಿತ ತಳಮಂ ಆತಂ ಭರತೇಶಂ; ಇಂತೀ ತೆರದಿಂ ನೆಗಳ್ದ ತನ್ನ ಕೀರ್ತಿಯಂ ವಿಖ್ಯಾತ ವೃಷಭಾದ್ರಿಯೊಳ್ ಸುರಗೀತ ಯಶಂ ಇರಿಸಿದಂ ನೆಲಂ ನಿಲ್ವಿನೆಗಂ' ಎಂದು ಮೊದಲಾಗಿ ಬರೆಯಿಸಿದ. ಈ ಕೀರ್ತಿ ಪ್ರಶಸ್ತಿ ಎಲ್ಲಿದೆಯೋ, ಉಳಿದವರ ಹೆಸರಾದರೂ ಎಲ್ಲಿದೆಯೋ ಯಾರು ಬಲ್ಲರು ? ಭರತನ ಬಾಹುಬಲದ ಜಂಭ ಕೊನೆಗೆ ಮಾಯವಾದುದು ಬಾಹುಬಲಿಯ ಧರ್ಮಬಲದಿಂದ ಮಾತ್ರ.

ಹೀಗೆಯೇ ಉಮರ್‌ಖಯ್ಯಾಂ ಹೇಳಿದಂತೆ 'ಜಂಷೇಡ್' ವೈಭೋಗದಲ್ಲಿ ಸುರಾಪಾನ ಮಾಡಿ ಸತ್ತ ಸ್ಥಳದಲ್ಲಿನ ಅವನ ಸಮಾಧಿಯ ಮೇಲೆ ಕತ್ತೆಗಳು ತುಳಿದಾಡುತ್ತಿವೆ.

ರಾವಣ, ನಹುಷ, ಭರತ, ಜಂಷೇಡರಂತೆ ವೀರಾಧಿವೀರರೆಂದು ಹೇಳಿಕೊಂಡ 'ಎಲ್ಲ ಪರಾಕ್ರಮಿ'ಗಳ ಪಾಡು ಹೀಗೆಯೇ ಆಗಿದೆ. 'ಬಂಡತನವೇನವನ, ನಂಟುತನವೇನವನ ಎಲ್ಲವೂ ಹುಲ್ಲಗಿಚ್ಚು ಪೊಳ್ಳು ಬಿಂಕದ ಮೂಗು'.

ತನ್ನ (Ozymandias) ಓಝಿಮ್ಯಾಂಡಿಯಾಸ್ ಎನ್ನುವ ಸುಂದರ ಕವಿತೆಯಲ್ಲಿ ಷೆಲ್ಲಿ ಮಹಾಕವಿಯು ಇಂತಹುದೇ ಒಂದು ಸನ್ನಿವೇಶವನ್ನು ವಿವರಿಸುತ್ತಾನೆ: "I met a traveller from an antique land. ಪುರಾತನ ನಾಡಿನ ಒಬ್ಬ ಪಾಂಥಸ್ಥ ನನಗೆ ಸಿಕ್ಕಿದ್ದ. ಅವನು, 'ಮರುಭೂಮಿಯಲ್ಲಿ ಕಲ್ಲಿನಲ್ಲಿ ಕಟೆದ ಮುಂಡವಿರದ ಎರಡು ಕಾಲುಗಳು ಹಾಗೆಯೇ ನಿಂತಿವೆಯೆಂದೂ ಪಕ್ಕದಲ್ಲಿಯೇ ಆ ಸುಡುಮಳಲಲ್ಲಿ ಒಡೆದು ಹೋದ ಒಂದು ಕಲ್ಲಿನ ಮುಖ ಅರ್ಧ ಹೂಳಿ ಬಿದ್ದಿದೆಯೆಂದೂ' ಹೇಳಿದ. ಅಲ್ಲದೆ ಕಾಲುಗಳ ಕೆಳಗಿರುವ ಪೀಠದ ಮೇಲೆ ಹೀಗೆ ಬರೆಯಲಾಗಿದೆ



11th_Kannada_Reader_Final_16-07-2018.indd 156 16-07-2018 18:43:14

ಎಂದೂ ಹೇಳಿದ :

My name is Ozymandias,
King of kings.

Look on my work.
Ye mighty and despair.

'ನನ್ನ ಹೆಸರು ಓಝಿಮ್ಯಾಂಡಿಯಾಸ್. 'ಅರಸರ ಅರಸ; ನಿಮ್ಮಲ್ಲಿ ಸಾಮರ್ಥ್ಯವಿದ್ದವರು ನನ್ನ ಮಹಾಕೃತಿಗಳನ್ನು ನೋಡಿ ಎದೆಯೊಡೆದುಕೊಳ್ಳಿರಿ' ಆದರೆ ಆ ಪಾಂಥಸ್ಥನೇ ಹೇಳಿದ ಹಾಗೆ, 'Nothing besides remains, round the decay of that colosall wreck boundlelss and lone level sands stretch for away' ನನ್ನ ಮಹಾಕೃತಿಗಳನ್ನು ನೋಡಿ ಎದೆಯೊಡೆದುಕೊಳ್ಳಿರಿ ಎಂದು ಘೋಷಿಸಿದ ಓಝಿಮ್ಯಾಂಡಿಯಾಸ್‌ನ ಮುರಿದ ಕಾಲುಗಳ ಸುತ್ತೆಲ್ಲ ಯೋಜನ ಯೋಜನ ವಿಸ್ತೀರ್ಣ ಸುಡು ಸುಡು ಮರಳು ಮಾತ್ರ ವ್ಯಾಪಿಸಿ ಚಾಚಿಕೊಂಡಿದೆ".

ಹೀಗೆಯೇ ಹತ್ತಾರು ಉದಾಹರಣೆಗಳು. ಹಾಗೆ ನೋಡಿದರೆ ಮನುಷ್ಯ ನಿಜವಾಗಿ ಉಪ್ಪಿನ ಬೊಂಬೆ. ಮೇಣದ ತಲೆಯಿದ್ದವರು ಬಿಸಿಲಲ್ಲಿ ಹೋಗಬಾರದು; ಉಪ್ಪಿನ ಬೊಂಬೆ ಸಮುದ್ರದತ್ತ ಸಾಗಬಾರದು. ಉಪ್ಪಿನ ಬೊಂಬೆ ನೀರಿನಲ್ಲಿ ಕಾಲಿಟ್ಟಿತೋ ಕಾಲೇ ಕಳಚಿ ಬೀಳುತ್ತದೆ. ಒಂದು ಸಲ ಹೀಗೆಯೇ ಆಯಿತು: ಒಂದು ಉಪ್ಪಿನ ಬೊಂಬೆ ಅಂಗಿ, ಕೋಟು, ಟೊಪ್ಪಿಗೆ ಧರಿಸಿ ಸಮುದ್ರದ ಕಡೆಗೆ ಅಡ್ಡಾಡಲು ಹೊರಟಿತು. ಅನೇಕ ಜನ ಅದನ್ನು ತಡೆದರು. ಕೆಲವು ಬುದ್ಧಿವಂತರು ಸಮುದ್ರದ ಕಡೆಗೆ ಹೋದರೂ ಪರವಾಗಿಲ್ಲ, ಆದ–ರೆ ಸಮುದ್ರದ ನೀರಲ್ಲಿ ಕಾಲಿಡಬೇಡ ಎಂದು ಅದಕ್ಕೆ ಬುದ್ಧಿವಾದ ಹೇಳಿದರು. ಆದರೆ ಉಪ್ಪಿನ ಬೊಂಬೆಗೆ ಅವರ ಮಾತನ್ನು ಕೇಳುವ ವ್ಯವಧಾನವೆಲ್ಲಿದೆ ? ಹಾಗೆಯೇ ಎದೆ ಸೆಟೆಸಿ ಪುಟುಪುಟನೆ ಹೊರಟೇ ಬಿಟ್ಟಿತು. ನೀರಿನ ತೀರ ಸಮೀಪಕ್ಕೆ ಹೋದಾಗಲೂ ಜನ ಹೇಳಿದರು, ಕಿರುಚಿಕೊಂಡರು. ಈ ಬೊಂಬೆ ಕೇಳಲಿಲ್ಲ. 'ನನಗೇನಾಗುತ್ತದೆ? ನನ್ನನ್ನು ಸರಿಗಟ್ಟುವವರಾರು ?' ಎಂದು ಸಮುದ್ರದ ನೀರಿನಲ್ಲಿ ತನ್ನ ಬಲಗಾಲನ್ನಿರಿಸಿತು. ಇರಿಸಿದಲ್ಲಿಯೇ ಅದರ ಬಲಗಾಲು ಕರಗಿ ಹೋಯಿತು. 'ಈಗಾದರೂ ಹಿಂದಕ್ಕೆ ಸರಿ. ಸತ್ತು ಹೋಗುತ್ತೀಯೆ' ಎಂದು ಜನ ಕೂಗಿಕೊಂಡರು. ಆದ–ರೂ ಅದು ಆವರ ಮಾತನ್ನು ಕೇಳಲಿಲ್ಲ. ತನ್ನ ಎಡಗಾಲನ್ನೂ ಇರಿಸಿತು. ಅದೂ ಕರಗಿ ಹೋಯಿತು. ಜನ ಪುನಃ ಕಿರುಚಿಕೊಂಡರು. 'ನನಗೇನು? ನನಗೇನು?' ಎನ್ನುತ್ತಾ ಮೈಯನ್ನೇ ಮುಂದೆ ತೂರಿಕೊಂಡು ಬೊಂಬೆ ಪುನಃ ಮುಂದೆ ಸಾಗಿತು. ನೀರಲ್ಲಿ ನುಗ್ಗುತ್ತಿರುವಂತೆಯೇ ಹೊಟ್ಟೆ, ಎದೆ, ಗದ್ದ ಎಲ್ಲವೂ ಕರಗಿ ಹೋದವು. ಜನ ಮತ್ತೂ ಕಿರುಚಿಕೊಂಡರು. 'ನ..... ನ..... ಗೇ..... ನು.....?' ಎನ್ನುವುದರೊಳಗೆಯೇ ಬೊಂಬೆಯ ನಾಲಗೆಯೂ ಕರಗಿ ಹೋಯಿತು. ಆಮೇಲೆ ಅದರ ಧ್ವನಿ ಕೇಳಿ ಬರಲಿಲ್ಲ. ಜೀವವಿರದ ಅದರ ಬುರುಡೆ ಮಾತ್ರ ಕೆಲ ಕ್ಷಣ ಕಾಣಿಸಿತು. ಉಪ್ಪಿನ ಬೊಂಬೆ ಪಾಪ! ನಾಲಿಗೆಯಿರುವವರೆಗೂ ನನಗೇನು ? ನನಗಾರು? ಎಂದು ಸಾರುತ್ತಲೇ ನೀರಲ್ಲಿ ಲೀನವಾಯಿತು. ಮನುಷ್ಯನೂ ಈ ಉಪ್ಪಿನ ಬೊಂಬೆಗೆ ವ್ಯತಿರಿಕ್ತವಾಗಿಲ್ಲ. ದೇವರು ಕೊಟ್ಟ ಎರಡಂಗುಲ ನಾಲಿಗೆ ಇರುವವರೆಗೂ ಕೊಚ್ಚುತ್ತಲೇ ಇರುತ್ತಾನೆ. ಅದು ಕಳಚಿ ಬೀಳುತ್ತಲೇ ಅವನ ಅಹಂಕಾರ ನಿಲ್ಲುತ್ತದೆ. ಟೊಂಕ ಮುರಿದರೂ ಬಿಂಕ ಮುರಿಯುವುದಿಲ್ಲ. ಹಾಗಿದ್ದರೆ ಜೀವನದಲ್ಲಿ ಅಹಂಕಾರವನ್ನು ಎದುರಿಸುವುದು ಹೇಗೆ ? ಒಂದು – ಅವನ ಹಣೆಬರಹವನ್ನು ದೇವರಿಗೇ ಒಪ್ಪಿಸಿಬಿಡುವುದು. ಹೀಗೆ ಉರಿದುರಿದು ಬೀಳುವವವರನ್ನು ದೇವರೇ ನೋಡಿಕೊಳ್ಳುತ್ತಾನೆ ಎಂದು ಸುಮ್ಮನಿದ್ದು ಬಿಡುವುದು. ಇಲ್ಲವಾದರೆ ಸೇರಿಗೆ ಸವ್ವಾಸೇರಾಗುವುದು. ಅವನ ಅಹಂಕಾರವನ್ನು ಮೀರಿದ ಅಹಂಕಾರವನ್ನು ನಾವೂ ಪ್ರದರ್ಶಿಸುವುದು. ಉದ್ದುರುಟುತನಕ್ಕೆ ಗುದ್ದೇ ಮದ್ದು. ಈ ಸಾಮರ್ಥ್ಯ



11th_Kannada_Reader_Final_16-07-2018.indd 157 16-07-2018 18:43:14

ಎಲ್ಲರಿಗೂ ಸಾಧ್ಯವಿರುವುದಿಲ್ಲ. 'ಒಡ್ಡರ ರಾಮನೆಂದು ಹೇಳಿ ಅವನನ್ನು ಕರೆ' ಎಂದು ಸಿದ್ಧರಾಮನನ್ನು ಕುರಿತು ಅಲ್ಲಮ ಪ್ರಭುವು ಗುಡ್ಡರಿಗೆ ಹೇಳಿದಾಗ ಸಿದ್ಧರಾಮ, 'ಘುಡುಘುಡಿಸಿ ಆರು ನಮ್ಮನು ಜರೆದವನು, ಜಂಭಾರಿಯೋ ಧನುಜಾರಿಯೋ, ಕಾಮಾರಿಯೋ ತೋರವನ, ಹೆಡತಲೆಗುಗಿವೆ. ನಾಲಗೆಯ ಬೇರು ಸಹಿತವೆ ಕೀಳುವೆನು, ಹಣೆಯ ಕಣ್ಣಿನ ಕಿಡಿಯ ಕೆದರುವೆ' ಎನ್ನುತ್ತಾನೆ. ಆಗ ಯಾವ ರೀತಿಯಿಂದಲೂ ಕ್ರೋಧವನ್ನು ಪ್ರದರ್ಶಿಸದೆ ಪ್ರಸನ್ನವದನನಾಗಿ ನಿಂತ ಅಲ್ಲಮಪ್ರಭುಗಳ ಅಡಿಗಳೆಡೆಯನು ಸಿದ್ಧರಾಮನ ನೊಸಲಕಣ್ಣಿನ ಕಿಡಿಗಳು ಹೊದ್ದದೆ, ಉಳಿದ ಜೀವರನ್ನೇ ಸುಡುತ್ತದೆ. ಹೀಗೆ ಹಣೆಗಣ್ಣ ಕಿಡಿಯನ್ನು ತೋರುವವರಿಗೆ, ಅಂಗಾಲಿನಿಂದ ಅದನ್ನು ಆರಿಸುವ ಸಾಮರ್ಥ್ಯವುಳ್ಳವರೂ ಇದ್ದಾರೆ. ಆದರೆ ಈ ಸೇರಿಗೆ ಸವ್ವಾಸೇರು ತೋರಿಸಬೇಕಾದರೆ ಅಂತಹ ಹೆಚ್ಚಿನ ಯೋಗ್ಯತೆಯೇ ಬೇಕಾಗುತ್ತದೆ. ಇದು ಎಲ್ಲರಿಗೂ ಸಾಧ್ಯವಿಲ್ಲ.

ಆದ್ದರಿಂದ, ಸಾಮಾನ್ಯರು ಅಹಂಕಾರವನ್ನು ಎದುರಿಸಬೇಕಾದರೆ ಅಹಂಕಾರಿಗಳ ಬಗ್ಗೆ ಉದಾಸೀನವಾಗಿರುವುದೇ ಒಳಿತು. ಅಹಂಕಾರಕ್ಕೆ ಔದಾಸೀನ್ಯವೇ ಮದ್ದು. ಆಗ ಅಹಂಕಾರಿ ಹುಚ್ಚನ ಹಾಗೆ ಗಳಹಿ ಗಳಹಿ ತಾನೇ ಸುಮ್ಮನಾಗುತ್ತಾನೆ. ಕೇಳುವವರೇ ಕಿವುಡರಂತೆ ಏನೂ ಕೇಳದವರಂತೆ ಸುಮ್ಮನಿದ್ದು ಬಿಟ್ಟರೆ ಹೇಳುವವರೇನು ಗೋಡೆಗೆ ಹೇಳುತ್ತಾರೆಯೇ ? ಆದ್ದರಿಂದ ಅಹಂಕಾರದ ಪ್ರತೀಕಾರಕ್ಕೆ ಔದಾಸೀನ್ಯವೇ ಸರಳವಾದ ಯುಕ್ತವಾದ ದಾರಿ.

## ಕೃತಿ–ಕರ್ತೃ ಪರಿಚಯ



ನವೋದಯ ಕಾಲದ ಆರಂಭದ ಸಾಹಿತಿಗಳಲ್ಲಿ ರಾ.ಯ.ಧಾರವಾಡಕರ ಅವರ ಹೆಸರು ಪ್ರಸಿದ್ಧವಾದುದು. ಸುಮಾರು ನಲ್ವತ್ತು ವರ್ಷಗಳ ಕಾಲ ಅವರು ಲೇಖನ ವ್ಯವಸಾಯ ನಡೆಸಿದರು. ಪ್ರಾಧ್ಯಾಪಕರಾಗಿ, ಭಾಷಾಶಾಸ್ತ್ರಜ್ಞರಾಗಿ, ಪ್ರಬಂಧಕಾರರಾಗಿ, ಪ್ರಾಚಾರ್ಯರಾಗಿ ಅದ್ವಿತೀಯ ವಾಗ್ಮಿಯಾಗಿ ಬಾಳಿದ ಅವರ ವ್ಯಕ್ತಿತ್ವ ಬಹುಮುಖವಾದುದು. ಅವರು ಬದುಕಿನಲ್ಲಿಯೂ ಬರವಣಿಗೆಯಲ್ಲಿಯೂ ವಿಶಿಷ್ಟ ಹಾಗೂ ಸೋಪಜ್ಞ ಎನ್ನಿಸಬಹುದಾದ ಸಮತೋಲವನ್ನು ಉಳಿಸಿಕೊಂಡು ಬಂದ ಪ್ರಮುಖ ಸಾಹಿತಿ. ವೃತ್ತಿ ಗೌರವದ ಜೊತೆಗೇ ಜೀವನ ಘನತೆಯನ್ನೂ ಅವರು ಉಳಿಸಿಕೊಂಡು ಬಂದಿದ್ದಾರೆ. ತುಂಬಿದ ಬದುಕು ನಡೆಸಿದ್ದಾರೆ. ತೂಕದ ಬರವಣಿಗೆ ಮಾಡಿದ್ದಾರೆ. ಅವರು ಮಾಡಿರುವ ನೂರಾರು ಉಪನ್ಯಾಸಗಳ ಮೊತ್ತಕ್ಕೆ ಹೋಲಿಸಿದಾಗ ಅವರು ಬರೆದದ್ದು ಕಡಿಮೆಯೇ ಎನ್ನಿಸಿದರೂ ಬರೆದುದಷ್ಟೂ ಜನಪ್ರಿಯವಾಗಿದೆ. ಪತ್ರಿಕಾ ವ್ಯವಸಾಯ, ಕರ್ನಾಟಕದಲ್ಲಿ ವೃತ್ತಪತ್ರಿಕೆಗಳು, ಸಾಹಿತ್ಯ ಸಮೀಕ್ಷೆ, ಆರು ಪ್ರಬಂಧಗಳು, ನಮ್ಮ ದೇಶದ ಯೋಜನೆಗಳು, ಕನ್ನಡ ಭಾಷಾ ಶಾಸ್ತ್ರ, ಧೂಮ್ರವಲಯಗಳು, ಹೊಸಗನ್ನಡ ಸಾಹಿತ್ಯದ ಉದಯ ಕಾಲ, ಕನ್ನಡದಲ್ಲಿ ಕಾನೂನು ಶಾಸ್ತ್ರ, ವೆಂಕಟರಂಗೋಕಟ್ಟಿ, ತೂರಿದ ಚಿಂತನಗಳು, ನವಿಲುಗರಿ, ಶಾಂತಕವಿಗಳ ಮೂರು ಕೀರ್ತನೆಗಳು, ಶ್ರೀ ನಮನ, ಡಾ.ನಂದೀಮಠ ನೆನಪು, ಮೊದಲಾದವುಗಳು ರಾ.ಯ. ಧಾರವಾಡಕರ ಅವರ ಕೃತಿಗಳು.

ಈ ಲೇಖನವನ್ನು ಅವರ 'ತೂರಿದ



11th_Kannada_Reader_Final_16-07-2018.indd 158 16-07-2018 18:43:15

ಚಿಂತನಗಳು' ಎಂಬ ಪ್ರಬಂಧ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಜಗತ್ತಿನ ಜಂಜಾಟದಿಂದ ಬಿಡಿಸಿಕೊಳ್ಳಲು ಅಪೇಕ್ಷಿಸುವವರಿಗೆ ಬೇಕಾದ ಮನೋಭೂಮಿಕೆ ಇಲ್ಲಿದೆ. ತಮ್ಮ ಹೇಳಿಕೆಗಳನ್ನು ಸ್ಥಾಪಿಸಲು ಸಮರ್ಥಿಸಲು ಲೇಖಕರು ವಿವಿಧ ದೃಷ್ಟಾಂತಗಳನ್ನು, ಗಾದೆ ಮಾತುಗಳನ್ನು ಮತ್ತು ಸಾಮತಿಗಳನ್ನೂ ನೀಡಿದ್ದಾರೆ. ಅಹಂಕಾರವು ವಿನಾಶದ ಹಾದಿ, ಅವಸಾನದ ಲಕ್ಷಣ. ಅಹಂಕಾರ ಎಂತೆಂತಹ ಸಾತ್ವಿಕ, ಶೂರರನ್ನೂ ಬಿಟ್ಟಿಲ್ಲ. ಅದೊಂದು ಅಜಗರ. ಅದು ಒಬ್ಬರನು ಸುತ್ತಿಕೊಂಡಿತೆಂದರೆ ಅವರ ಎಲುಬುಗಳೆಲ್ಲಾ ಆ ಹಿಡಿತದಲ್ಲಿ ಪುಡಿಪುಡಿಯಾಗಲೇ ಬೇಕು. ಇದಕ್ಕೆ ಎಂತೆಂತಹವರೂ ಅಪವಾದವಾಗಿಲ್ಲ ಎಂದು ಹೇಳಿ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಅಹಂಕಾರಕ್ಕೆ ಔದಾಸೀನ್ಯವೇ ಮದ್ದು. ಅಹಂಕಾರದ ಪ್ರತೀಕಾರಕ್ಕೆ ಔದಾಸೀನ್ಯವೇ ಸರಳವಾದ ಯುಕ್ತವಾದ ದಾರಿ ಎಂಬ ಸೂಚನೆಯನ್ನೂ ನೀಡಿದ್ದಾರೆ.

## ಕಠಿಣ ಪದಗಳ ಅರ್ಥ

ವಂಚಕ–ದುಷ್ಟ; ತಾಮಸ–ತಮೋಗುಣ, ಅಜ್ಞಾನ; ದೋರ್ಬಲ–ಭುಜಬಲ; ಸಾತ್ವಿಕ–ಸಾಧುಗುಣ; ಪಲ್ಲಂಕ–ಪಲ್ಲಕ್ಕಿ; ಔದ್ಧತ್ಯ–ಉದ್ಧಟತನ; ಜೀಕು–ತೂಗಾಡು, ಓಲಾಡು; ಅಗ್ಗಲಿಸು–ಹೆಚ್ಚಾಗು; ಪರಿಮಾರ್ಜನೆ–ತೊಳೆಯುವಿಕೆ; ಕ್ರುದ್ಧ–ಕೋಪ, ಸಿಟ್ಟು, ಉಶ್ಶಾಪ–ಉಃಶಾಪ, ಶಾಪವಿಮೋಚನೆ; ಅಜಗರ–ಹೆಬ್ಬಾವು; ದುಸ್ತರ–ಸಹಿಸಲಾಗದ, ದಾಟಲಾಗದ: ಪಾಂಥ–ದಾರಿಹೋಕ, ಪ್ರಯಾಣಿಕ; ಸಪ್ತರ್ಷಿ–ಏಳು ಜನ ಮಹಾಋಷಿಗಳು, ವಿಶ್ವಾಮಿತ್ರ ಜಮದಗ್ನಿ, ಭಾರದ್ವಾಜ, ಗೌತಮ, ಅತ್ರಿ, ವಸಿಷ್ಠ, ಕಶ್ಯಪ ಅಥವಾ ಮರೀಚಿ, ಅತ್ರಿ, ಆಂಗೀರಾ, ಅಗಸ್ತ್ಯ, ಪುಲಹ, ಕ್ರತು, ವಸಿಷ್ಠ ಎಂಬ ಋಷಿಗಳು.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಅಹಂಕಾರ ಯಾವುದರ ಹಾದಿ ?
2. ಮಸಿ ಯಾವುದನ್ನು ನುಂಗಿದಂತೆ ?
3. ಅತಿ ವಿನಯ ಧೂರ್ತ ಲಕ್ಷಣವಾದಂತೆ ಜಂಭ ಯಾವುದರ ಲಕ್ಷಣ ?
4. ಯಾರು ಮುಂದನ್ನು ಕಾಣುವುದಿಲ್ಲ ?
5. ದೈವೀ ಶ್ರದ್ಧೆಯುಳ್ಳವನು ಯಾರು ?
6. ಬಾಹುಬಲಿಯ ಅಣ್ಣ ಯಾರು ?
7. ಯಾರು ಮರಳಿ ಬರುವುದು ತುಂಬಾ ದುಸ್ತರ ?
8. ಉದ್ದುರುಟುತನಕ್ಕೆ ಯಾವುದು ಮದ್ದು ?
9. ಔದಾಸೀನ್ಯ ಯಾವುದಕ್ಕೆ ಮದ್ದು ?
10. ಯಾರು ಬಿಸಿಲಲ್ಲಿ ಹೋಗಬಾರದು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಅತಿವಿನಯ ಹಾಗೂ ಜಂಭದ ಕುರಿತು ಲೇಖಕರ ಅಭಿಪ್ರಾಯವೇನು ?
2. ಎಂಟು ಮದಗಳಾವುವು ?
3. ರಾವಣನ ಅಹಂಕಾರಕ್ಕೆ ಕಾರಣವಾದವುಗಳು ಯಾವುವು ?
4. ನಹುಷ ಚಕ್ರವರ್ತಿಗೆ ಇಂದ್ರನ ಸ್ಥಾನ ದೊರೆತಿದ್ದು ಹೇಗೆ ?
5. ಭರತ ಯಾರು ?
6. ಪುರಾತನ ನಾಡಿನ ಪಾಂಥಸ್ಥ ಹೇಳಿದ ಕಥೆಯೇನು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ರಾವಣನು ಸೀತೆಯ ಮನವನ್ನು ಓಲೈಸಲು ಹೇಳುವ ಮಾತುಗಳೇನು ?
2. ನಹುಷ ಚಕ್ರವರ್ತಿಯು ಅಜಗರವಾದ ಕಥೆಯನ್ನು ವಿವರಿಸಿ.
3. ಭರತ ಚಕ್ರವರ್ತಿಯ ಗರ್ವ ರಸ ಹೇಗೆ ಸೋರಿ ಹೋಯಿತು ?
4. ಉಪ್ಪಿನ ಬೊಂಬೆಯ ಕಥೆಯನ್ನು ವಿವರವಾಗಿ ಬರೆಯಿರಿ.



11th_Kannada_Reader_Final_16-07-2018.indd 159 16-07-2018 18:43:15

## ಭಾಷಾಭ್ಯಾಸ

**1. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಅಹಂಕಾರ, ಅವಸಾನ, ಸ್ವಾಭಿಮಾನ, ಪರಿಮಾರ್ಜನೆ, ಉತ್ಸಾಹ, ಬಾಹುಬಲ, ಆಜ್ಞಾಪಿಸು.

**2. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಯೌವನ, ವಿದ್ಯೆ, ಲಕ್ಷಣ, ಋಷಿ, ರಾಕ್ಷಸ, ಬ್ರಹ್ಮ, ಹಂಸ, ಶೃಂಗಾರ, ಸ್ವರ್ಗ, ಬೀರ, ಚಾಗ, ಪಲ್ಯಂಕ.

**3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ಪಾಪ, ಸ್ವಾಭಿಮಾನ, ಯೌವನ, ಶಾಪ, ಸುಂದರ, ಶೂರ, ಶ್ರದ್ಧೆ, ಸ್ವರ್ಗ.

**4. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ತಲೆಯಲ್ಲಿ, ಏಕೈಕ, ಸುಖವಾಗಿ, ಸಪ್ತರ್ಷಿ, ಒಡಗೂಡು, ಮದಾಂಧ, ಪರಮಾತ್ಮ, ವೃಷಭಾಚಲ, ಭರತೇಶ್ವರ, ದೇವಾಂಗನೆ, ಬಲಗಾಲು, ಮಡುಗಟ್ಟಿ, ದನುಜಾರಿ.




**5. ಕೆಳಗಿನ ಪದಗಳಿಗೆ ವಿಗ್ರಹ ವಾಕ್ಯ ಬರೆದು ಸಮಾಸದ ಹೆಸರನ್ನು ತಿಳಿಸಿ**

ಅರಮನೆ, ವಯೋಮದ, ಗಂಗಾಸಿಂಧು, ಕುರುರಾಜ, ಮರುಭೂಮಿ, ಹಣೆಬರಹ, ಅಂಗಾಲು.

## ಚಟುವಟಿಕೆ

1. ಅಹಂಕಾರದಿಂದ ಸರ್ವನಾಶ ಎಂಬ ನೀತಿಯನ್ನು ಕುರಿತ ಇತರ ಕಥೆಗಳನ್ನೂ ಓದಿರಿ.
2. ಪಾಠದಲ್ಲಿ ಬಂದಿರುವ ಕಥೆಗಳನ್ನು ಆದರಿಸಿ ನಾಟಕಗಳನ್ನು ರಚಿಸಿ, ಅಭಿನಯಿಸಿರಿ.





11th_Kannada_Reader_Final_16-07-2018.indd 160 16-07-2018 18:43:15

ಉಪಪಠ್ಯ

ಘಟಕ ಎಂಟು

# ಸುಮತಿಯ ಕಥೆ

– ಶಿವಕೋಟ್ಯಾಚಾರ್ಯ




ಎದುರಾಗುವ ಆಪತ್ತುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಉಪಾಯದಿಂದ ಅವುಗಳನ್ನು ಪರಿಹರಿಸುವಲ್ಲಿ ವ್ಯಕ್ತಿತ್ವದ ಗಟ್ಟಿತನ ಪ್ರಕಟಗೊಳ್ಳುತ್ತದೆ. ಯಾವುದೇ ವಿಪತ್ತಿನ ಸಂದರ್ಭದಲ್ಲಿ ಅಂಜಿಕೆಯಿಂದ ಆತ್ಮವಿಶ್ವಾಸವನ್ನು ಕಳೆದುಕೊಂಡರೆ ಅದರಿಂದ ಅನಾಹುತವೇ ಉಂಟಾಗುತ್ತದೆ. ಕಥನ ತಂತ್ರ, ವಿಶಿಷ್ಟ ಭಾಷಾ ಬಳಕೆ, ಸಜೀವ ಪಾತ್ರ ಚಿತ್ರಣಗಳಿಂದ ವಡ್ಡಾರಾಧನೆ ವಿಶಿಷ್ಟ ಪ್ರಾಚೀನ ಗದ್ಯ ಕೃತಿಯಾಗಿದೆ; ಕನ್ನಡ ಗದ್ಯ ಪರಂಪರೆಯನ್ನು ಗಮನಿಸಲು ಪ್ರಾತಿನಿಧಿಕ ಕೃತಿಯಾಗಿದೆ.



ಕೌಶಾಂಬಿಯೆಂಬ ಪೊಟಿಲೊಳ್ ಸುಮಿತ್ರನೆಂಬೊಂ ಶ್ರೇಷ್ಠಿ ಕೋಟಿ ಕಸವರಮನೊಡೆಯೊನಾತನ ಮಗಂ ವಸುಮಿತ್ರನೆಂಬೊಂಗೆ ಸರ್ಪದಷ್ಟಮಾದೊಡೆ ಸತ್ತನೆಂದು ಶ್ಮಶಾನಕ್ಕೆ ಕೊಂಡು ಪೋಗಿ ಇಟಿಪಿದೊಡಲ್ಲಿ ಗರುಡನಾಭಿಯೆಂಬ ಮಂತ್ರವಾದಿ ಪೋಗಿ ನೋಡಿ ಈತನನಾಂ ನಾಳೆಯಭಿಮಂತ್ರಿಸಿ ಬಾಟಿಸುವೆನಂಜದಿರಿಯಿಲ್ಲಿಯೆ ಇರುಳೀ ದಾಷ್ಟಿಕಂಗೆ ಜಾವಮಿರಿಮೆಂದು ಪೇಟ್ದು ಪೋದಂ ಸುಮಿತ್ರಸೆಟ್ಟಿಯುಂ ನಾಲ್ವರೊಳ್ಳಿದರಪ್ಪ ಸುಭಟರಂ ಜಾವಮಿರಿಸಿ ಪೋದನಾ ನಾಲ್ವರುಂ ಜಾವಮಿರ್ದ ಭಟರೊಳಗೊರ್ವನಿರುಳ್ ಕುಜೆಯಂ ಕಳ್ದು ತರಲ್



11th_Kannada_Reader_Final_16-07-2018.indd 161 16-07-2018 18:43:16

ಪೋದಂ ಮತ್ತೊರ್ವಂ ಪುಳ್ಳಿಯಂ ತರಲ್ ಪೋದಂ ಮತ್ತೊರ್ವಂ ಕಿಚ್ಚಂ ತರಲ್ ಪೋದಂ ಮತ್ತೊರ್ವಂ ದಾಷ್ಟಿಕನಾ ಪಕ್ಕದೆ ಕಾಪಿರ್ದನಂತಾ ನಾಲ್ವರುಂ ಕುಜಿಯಂ ಕೊಂದು ಸುಟ್ಟು ತಿಂದರೆಂಬ ಕಥೆಯುಮಂ ಪೊಟ್ಟಜೆನೆ ನೇಸರ್ಮೂಡೆ ಗರುಡನಾಭಿಯೆಂಬ ಮಂತ್ರವಾದಿ ಬಂದು ಪಱೆಗುಟ್ಟಿ ಮಂತ್ರಿಸಿ ದಾಷ್ಟಿಕನನೆತ್ತಿದಂ ಸುಮಿತ್ರ ಸೆಟ್ಟಿಯುಮಿರುಳ್ ಜಾವಮಿರ್ದ ನಾಲ್ವರ್ ಸುಭಟರ್ಗೋರೊರ್ವರ್ಗೆ ಸಾಸಿರ ದೀನಾರದ ಪೊಟ್ಟಳಿಗೆಗಳಂ ಪ್ರಾಸಾದದ ಮೇಗಿರ್ದು ಜನಸಂಕೀರ್ಣದ ನಡುವೆ ನಾಲ್ಕು ಪೊಟ್ಟಳಿಗೆಯನೀಡಾಡಿದೊಡಾ ಪೊಟ್ಟಳಿಗೆಯಂ ಕೊಂಡು ಕೊಳ್ಳೆನೆಂದು ಪುಸಿದೊಡಾ ಶ್ರೇಷ್ಠಿಯುಮರಸರ್ಗೆ ಪೋಗಿ ಬಿನ್ನಪಂಗೆಯ್ದನ್ ಎನ್ನ ಸಾಸಿರ ದೀನಾರದ ಪೊಟ್ಟಳಿಗೆ ಕೆಟ್ಟುದದಂ ದೇವರಾರೈವುದೆಂದು ಪೇೞ್ದೊಡೆ ತಳಾೞನಂ ಕರೆದು ಬೇಗಂ ಕಳ್ಳನನಾರಯ್ಯಲಾರದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ಮಾೞ್ಪೆನೆಂದರಸನಾತನಂ ಬಗ್ಗಿಸಿ ನುಡಿದೊಡಾತನುಮಱಿಸಿ ಕಳ್ಳನನಾರಯ್ಯಲಾಱದೆ ನಾಲ್ವರ್ ಸುಭಟರುಮಂ ಮನೆಗೊಡಗೊಂಡು ಬಂದು ಭೀತನಾಗಿ ಬಿನ್ನನೆ ಮೊಗಂ ಬಾಡಿ ಚಿಂತಿಸುತಿರ್ದೊಡಾತನ ಮಗಳ್ ಸುಮತಿಯೆಂಬಳಂತೇಕೆ ಬಿನ್ನನಾಗಿ ಚಿಂತಿಸುರ್ದೆಯಮ್ಮಾ ಎಂದು ತಂದೆಯಂ ಬೆಸಗೊಂಡೊಡಾತನುಂ ತದ್ವೃತ್ತಾಂತಮನೆಲ್ಲಮಂ ಮಗಳ್ಗಱಿಯೆ ಪೇೞ್ದೊಡೆ ಅಂಜಲ್ವೇಡಿ ಇದನೆಲ್ಲಮನ್ ಆನ್ ಆರಯ್ದು ಕಳ್ಳನುಮಂ ಕಸವರಮುಮಂ ನಾಳೆ ನಿಮಗೊಪ್ಪಿಸುವೆಂ ನೀಮುಂ ನಿಶ್ಚಿಂತಮಿರಿಯೆಂದು ತಂದೆಯನೇಕಾಂತದೊಳ್ ನುಡಿದು ತಂದೆಯಂ ಸಂತವಿಸಿದಾಗಳ್ ಸುಮತಿಯುಮಿರುಳ್ ಕಳ್ಳರಂ ಪರೀಕ್ಷಿಸಲ್ವೇಡಿಯಾ ನಾಲ್ವರುಂ ಸುಭಟರ ಪಕ್ಕದಿರ್ದೇನಂದವರ್ಗೆ ಕಥೆಯಂ ಪೇೞ್ದುಂ ಪಾಟಳೀಪುತ್ರಮೆಂಬ ಪುರಮಲ್ಲಿ ಶ್ರೇಷ್ಠಿ ಸುದತ್ತನೆಂಬೊನಾತನ ಮಗಳ್ ಸುದಾಮೆಯೆಂಬ ಕನ್ನೆಯೊಂದು ದಿವಸಂ ಗಂಗೆಯಂ ಮೀಯಲ್ವೋಗಿ ಮೀವಲ್ಲಿ ನೆಗೞ್ ಪಿಡಿದೊಡೆ ಆದಮಾನುಂ ಅಂಜಿ ತಡಿಯೊಳಿರ್ದ ಧನದತ್ತನೆಂಬೊಂ ಸೋದರಮಯ್ದುನನಂ ಕಂಡೆನ್ನ ಬೇಗಂ ಬಿಡಿಸೆಂದೊಡೆ ಆತನಿಂತೆಂದನ್ ಎನ್ನ ಬೇಡಿದುದನೀವೊಡೆ ನಿನ್ನಂ ಕಾವೆನೆಂದೊಡಾಕೆಯುಮ್ ಈವೆನೆಂದು ಪೂಣ್ದೊಡೆ ಬೇಗಂ ನೀರಂ ಪೊಕ್ಕು ನೆಗೞಂ ಬಿಡಿಸಿದ ಬೞಿಕ್ಕಂ ಪೇೞಿನಂ ಬೇಡುವಯ್ ನಿನ್ನ ಬೇಡಿದುದನೆಲ್ಲಮನೀವೆನೆಂದು ಕನ್ನೆ ನುಡಿದೊಡಾತನಿಂತೆಂದಂ ನಿನ್ನ ಮದುವೆಯಂದು ಪ್ರಥಮ ದಿವಸದ ಪಸದನಮನೆನಗೆ ವಂದು ತೋಱಲ್ವೇೞ್ಕುಮೆಂದು ಬೇಡಿದೊಡಾಕೆಯುಂ ಅಂತೆಗೆಯ್ವೆನೆಂದು ಪೂಣ್ದಳಿಂತು ಕಾಲಂ ಸಲೆ ಮತ್ತಾ ಕನ್ನೆಗೆ ಯೌವನಂ ನೆಱಿದಂದು ಮದುವೆಯಾದೊಡೆ ತನ್ನ ಪೂಣ್ಕೆಯಂ ನೆನೆದು ಸರ್ವಾಲಂಕಾರ ಭೂಷಿತೆಯಾಗಿಯಾದಮಾನುಂ ಕೈಗೆಯ್ದು ಚೆಲ್ವೆಯಾಗಿ ನಟ್ಟ ನಡುವಿರೊಳ್ ಮನೆಯಿಂದಂ ಪೊಱಮಟ್ಟು ಮೈದುನನಿರ್ದಾಪಣಕ್ಕೆ ಪೋಪನ್ನೆಗಮೆಡೆಯೊಳ್ ಕಳ್ಳನೊರ್ವಂ ಕಂಡು ನಿನ್ನ ತೊಟ್ಟಾಭರಣಮೆಲ್ಲಮಂ ಕೊಟ್ಟು ಪೋಗಲ್ಲದಾಂ ಪೋಗಲೀಯೆನೆಂದೊಡೀಗಳೆ ಪೋಗಿ ಬಂದು ನಿನಗೆನ್ನ ತುಡುಗೆಯೆಲ್ಲಮಂ ಕುಡುವೆನನ್ನೆಗಮಿಲ್ಲಿ ಎನ್ನ ಬರ್ಪನ್ನೆಗಮೆತ್ತಂ ಪೋಗದಿರೆಂದು ನಂಬೆ ನುಡಿದು ಸಂತೈಸಿ ಕಿರಿದಂತರಮಂ ಪೋದೊಡೆ ತಳಾೞಂ ಕಂಡೀ ಪೊೞ್ತೆತ್ತ ಪೋದಪಯ್ ಪೊಲ್ಲಮಾನಸಿಯೆ ಎಂದಾತಂ ಪಿಡಿದು ಕಾಡೆ ಪಿರಿದೊಂದು ಮನೆವಾೞ್ತೆಯುಂಟೆನ್ನಂ ಕಾಡದೆ ಪೋಗಲೀಯಾನೀಗಳೆ ಪೋಗಿ ನಿನ್ನಲ್ಲಿಗೆ ಬಂದಪ್ಪೆಂ ಬಂದೊಡೆ ನಿನ್ನ ಮೆಚ್ಚುಗೆಯ್ದೆನೆಂದು ನಂಬೆ ನುಡಿದು ನನ್ನಿಗೊಟ್ಟು ಕಿೞಿದಂತರಮಂ ಪೋಪನ್ನೆಗಮೆಡೆಯೊಳ್ ಬ್ರಹ್ಮರಾಕ್ಷಸಂ ಕಂಡು ತನ್ನಂ ತಿನ್ನಲ್ ಬಗೆದೊಡೆ ಬ್ರಹ್ಮರಾಕ್ಷಸಂಗೆಂದಳ್ ಪಿರಿಯದೊಂದು ಮನೆವಾೞ್ತೆಯುಂಟೀಗಳೆ ಪೋಗಿ ಬಂದಪ್ಪೆಂ ಬಂದ ಬೞಿಕ್ಕೆನ್ನಂ ಮೆಚ್ಚಿದಂತೆ ಮಾಡೆಂದು ನನ್ನಿಗೊಟ್ಟು ನಂಬಿಸಿ ಪೋದೊಡಾ ಕಳ್ಳನುಂ ತಳಾೞನುಂ ಬ್ರಹ್ಮರಾಕ್ಷಸನುಮಂತುಮೀಕೆಯೀ ಪೊೞ್ತು ತುರಿಪದಿಂದಱ್ಕಿಜೆಂದೆತ್ತ ಪೋದಪ್ಪಳೆಂದು



11th_Kannada_Reader_Final_16-07-2018.indd 162 16-07-2018 18:43:16

ಬಟಿವಟಿಯನೆ ನೋಡುತ್ತಂ ಪೋಪರನ್ನೆಗಂ ಮಯ್ದುನಂ ಪಟ್ಟಿರ್ದಾಪಣಕ್ಕೆ ಪೋಗಿ ಬಾಗಿಲಂ ತೆಱೆಯಿಮೆಂದಾಗಳವರಾರೆಂದು ಬೆಸಗೊಂಡಾಗಳಾನಲ್ತೆ ಸುದಾಮೆಯೆನೆಂದೊಡೆ ಬಾಗಿಲಂ ತೆಱೆದಾಪಣದೊಳಗಂ ಪೊಕ್ಕಳನೀ ಪೊಟ್ಟಿಕೆ ಬಂದೆಯೆಂದು ಬೆಸಗೊಂಡೊಡೆ ನೀನಲ್ತೆ ಎನ್ನ ನನ್ನಿಗೊಂಡಯ್ ಎನ್ನ ಮದುವೆಯಂದು ಪ್ರಥಮ ದಿವಸದ ಪಸದನಮನೆನಗೆ ತೋಱಲ್ವೇಟ್ಕುಮೆಂದು ಬೇಡಿದೊಡಾಂ ಪ್ರತಿಜ್ಞೆಯಂ ನೆಱಪಲ್ ಬಂದೆನೆಂದು ತನ್ನ ತೋಱಿದೊಡಾತನುಮಾಕೆಯ ರೂಪಂ ನೋಡಿ ಮೆಚ್ಚಿ ವಿದ್ಯಾಧರಿಯ ದೇವಗಣಿಕೆಯ ರೂಪನೆಪೋಲ್ವೆ ಎಂದು ಪೊಗಟ್ಟು ಮತ್ತಮಿಂತೆಂದಂ ಪ್ರತಿಜ್ಞೆಯಂ ನೆಱಪಿದೆ ಒಳ್ಳಿತಾಯ್ತೀ ಪೊಟ್ಟು ಪೊಲ್ಲದುವಂದೆ ನಟ್ಟನಡುವಿರುಳ್ ಕಳ್ಳರುಂ ತಳಾಱಿರುಂ ಕಾಡುವರ್ ಬೇಗಂ ಪೋಗೆಂದು ನುಡಿದು ಪೋಗಲ್ವೇಱೊಡಮೆಲ್ಲಮನಾ ಮೂವರುಂ ಪೊಱಗೆ ಕೇಳ್ದು ಮತ್ತಂ ಬೇಗವೇಗಂ ಪೋಗಿ ತಮ್ಮಿರ್ದೆಡೆಗಳೊಳಿರ್ದರನ್ನೆಗಮಾ ಮದೆವಳ್ ರಕ್ಕಸನಲ್ಲಿಗೆ ಬಂದೇನೆನ್ನಂ ನೀಂ ಮೆಚ್ಚಿದಂತಂ ಮಾಡೆಂದು ತನ್ನ ತೋಱಿದೊಡಾ ಬ್ರಹ್ಮರಾಕ್ಷಸನಿಂತೆಂದಂ ನೀ ಸತ್ಯವಾದಿಯಯ್ ಆದಮಾನುಂ ರೂಪು ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯಯ್ ನಿನ್ನಂ ತಿಂದಾನಾವ ಗತಿಗೆ ಪೋಪೆಂ ನಿನ್ನ ರೂಪನಟಿಯಲಾಱೆನ್ ಅದಱಿನಂಜದೆ ಪೋಗೆಂದು ಪೋಗಲ್ವೇಱೊಡೆ ಬರ್ಪಳನ್ನೆಗಂ ತಳಾಱಿನಂ ಕಂಡಿನ್ನೆನ್ನಂ ನೀಂ ಮೆಚ್ಚುಗೆಯ್ಯೆಂದು ನುಡಿದೊಡಾತನಿಂತೆಂದಂ ನೀಂ ಪೊಲ್ಲಮಾನಸಿಯೆ ಎಂದು ಮನದೊಳೆ ಬಗೆದೆಂ ನಿನ್ನಂತೊಳ್ಳಿದರಾರುಮಿಲ್ಲ ನುಡಿದ ನನ್ನಿಯಂ ತಪ್ಪದೆ ಬಂದೆ ಸತ್ಯವಾದಿಯಯ್ ಪೋಗಬ್ಪಾ ಎಂದು ಪೋಗಲ್ವೇಱೊಡೆ ಬರ್ಪಳನ್ನೆಗಂ ಕಳ್ಳನಂ ಕಂಡು ತನ್ನ ತೊಟ್ಟಾಭರಣಮನೆಲ್ಲಮಂ ಕಳೆದೊಪ್ಪಿಸೆಯಾತನಿಂತೆಂದನ್ ಎನಗೇನೊಂದೆ ಭವಮೆ ನಿನ್ನ ಕೈಯದಂ ಕೊಂಡಾನೇನಾ ಚಂದ್ರಾರ್ಕತಾರಂಬರಂ ಬರ್ದಪ್ಪೆನೆ ಎಣಿಕೊಂಡ ಕಸವರಂ ತವನಿಧಿಯಂತೆ ತವದಿರ್ದಪ್ಪುದೆ ನಿನ್ನ ಕೈಯಿಂದಂ ಕೊಳ್ಳೆ ಪೋಗಬ್ಪಾ ಎಂದು ಪೋಗಲ್ವೇಟ್ಟನಂತಾ ಮೂವರುಂ ಮದೆವಳಂ ಪೋಗಲ್ವೇಟ್ಟು ಪೂಜಿಸಿ ಕಟಿಪಿದೊಡಾಕೆಯುಂ ತನ್ನ ಮನೆಗೆ ಪೋದಳಿಂದವರೊಳಗೊಳ್ಳಿದರಾರ ಣ್ಣಂಗಳಿರಾ ಪೇಟಿಮೆಂದು ಸುಮತಿಯೆಂಬ ಕನ್ನೆ ಬೆಸಗೊಂಡಾಗಳಾ ಸುಭಟರೊಳೊರ್ವನಿರುಳ್ ಕುಱಿಯಂ ಕೊಂದವಂ ಬೊಮ್ಮರಾಕ್ಷಸನಾಕೆಯಂ ತಿನ್ನದೆ ಕಟಿಪಿದೊಡಾತನೊಳ್ಳಿದನೆಂದಂ ಸರ್ಪದಷ್ಟನಂ ಕಾದಿರ್ದಾತಂ ತಳಾಱಿಂ ಕಾಡದೆ ಕಟಿಪಿದನಾತನೊಳ್ಳಿದನೆಂದಂ ಕಿಚ್ಚಂ ತರಲ್ ಪೋದಾತನಿಂತೆಂದಂ ಮದೆವಳಂ ಸೋದರ ಮಯ್ದುನನತ್ಯಂತ ರೂಪ ಲಾವಣ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯೊಳಂ ಸೋದರಮಾವನ ಮಗಳಂ ತನ್ನಲ್ಲಿಗೆ ವಂದೊಳನೇಕಾಂತಂ ಸಮನಿಸಿದೊಡಾಕೆಗಳಿಪದೆ ಪೋಗಲ್ವೇಟ್ಟ ಧನದತ್ತನೊಳ್ಳಿದನೆಂದಂ ಪುಳ್ಳಿಯಂ ತರಲ್ ಪೋದಾತಂ ಸಾಸಿರ ದೀನಾರದ ಪೊಟ್ಟಳಿಗೆಯಂ ಕಳ್ದಾತನಿಂತೆಂದಂ ಮದೆವಳ್ ತೊಟ್ಟಾಭರಣಮೆಲ್ಲಮುಂ ಕೊಳ್ಳದೆ ಕಟಿಪಿದ ಕಳ್ಳನೊಳ್ಳಿದನೆಂದೊಡಾತನ್ ಕಳ್ಳನಪ್ಪುದನಱಿದು ಕಿರಿದು ಬೇಗಮಿರ್ದಾ ನುಡಿಗಳೆಲ್ಲಮಂ ಮಱೆಯಿಸಿ ಎಲ್ಲರುಮಂ ಮಱಲುಂದಿಸಿದ ಬಟಿಕ್ಕಮಾ ಕಳ್ಳನನೆಟ್ಟಿ ಏಕಾಂತದೊಳಿಂತೆಂದು ನುಡಿಗುಂ ನಿನಗಾನಾಟಿಸಿದೆನೆನಗೆ ನೆಱೆಯೆ ತುಡುಗೆಯಂ ಮಾಡಿಸಲ್ ಭಾಗಸಮುಳ್ಳೊಡೆ ನಿನಗಾಂ ಪೆಂಡತಿಯಾಗಿ ನಿನ್ನೊಡವರ್ಪೆನೆಂದವನನುರ್ಕೆವ ದಿಂದಂ ಮನಂಗೊಳೆ ನಂಬೆ ನುಡಿದೊಡಾತನುಂ ಮೆಯ್ಯಱೆಯದೆ ದೀನಾರದ ಸಹಸ್ರದ ಪೊಟ್ಟಳಿಗೆಯಂ ತೆಗೆದು ಕೊಟ್ಟಾನಿದಱೊಳಗೆ ನಿನಗೆ ತುಡುಗೆಯಂ ಮಾಡಿಸುವೆಂ ಬಾ ಪೋಪಮಿರ್ವಮೆಂದೊಡಂತ ಗೆಯ್ವೆನೆಂದು ಪೊನ್ನ ಪೊಟ್ಟಳಿಗೆಯಂ ತಂದೆಯ ಮಱಲುಂದಿದಲ್ಲಿಗೆ ಪೋಗಿ ಬರುಂಟಿ ಎಟ್ಟಿ ಪೊಟ್ಟಟಿಗೆಯಂ ತಂದೆಗೆ ಕೊಟ್ಟಳ್ ಕೊಟ್ಟೊಡಾತನುಂ ಕಳ್ಳನುಮಂ ದೀನಾರದ ಸಹಸ್ರದ ಪೊಟ್ಟಳಿಗೆಯುಮಂ ಕೊಂಡು ಪೋಗಿಯರಸಂಗೊಪ್ಪಿಸಿದಂ.



11th_Kannada_Reader_Final_16-07-2018.indd 163 16-07-2018 18:43:16

## ಕೃತಿ–ಕರ್ತೃ ಪರಿಚಯ

ಶಿವಕೋಟ್ಯಾಚಾರ್ಯನ ಕಾಲ ಕ್ರಿ.ಶ. ಸುಮಾರು 920. ಈತನು ರಚಿಸಿದ ಕೃತಿ 'ವಡ್ಡಾರಾಧನೆ'. ಈ ಕೃತಿಯಿಂದ ಪ್ರಸ್ತುತ ಪಾಠವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದು ಕನ್ನಡದಲ್ಲಿ ಮೊದಲ ಗದ್ಯ ಕೃತಿ. ಇದು ಕಥೆಗಳ ಕೋಶ. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯ 'ಕೋಗಳಿ' ಎಂಬ ಪ್ರದೇಶಕ್ಕೆ ಸೇರಿದವನು. ಇವನ ಕೃತಿಗೆ ಮೂಲ ಹರಿಷೇಣನ ಬೃಹತ್ ಕಥಾಕೋಶ.

ವಡ್ಡಾರಾಧನೆ ಎಂದರೆ ವೃದ್ಧರ ಆರಾಧನೆ. ಲೌಕಿಕ ಆಕರ್ಷಣೆಗಳನ್ನು ಮೀರಿದ ತಪಸ್ವಿಗಳೇ ವೃದ್ಧರು. ಇಂತಹ ವೃದ್ಧ ತಪಸ್ವಿಗಳಿಗೆ ಅಡ್ಡಿಯಾಗುವ ತೊಂದರೆಗಳೇ ಉಪಸರ್ಗಗಳು. ಉಪಸರ್ಗಗಳನ್ನು ಸಹಿಸಿ ಮೋಕ್ಷದ ಆಕಾಂಕ್ಷೆಯಿಂದ ಕೈಗೊಳ್ಳುವ ತಪಸ್ವಿಗಳ ಉಪಾಸನೆಯೇ ಆರಾಧನೆ. ಈ ಬಗೆಯ ಆರಾಧನೆಗಳನ್ನು ವಿವರಿಸುವಾಗ ದೃಷ್ಟಾಂತಗಳಾಗಿ ಕಥೆಗಳು ರಚನೆಯಾದವು.

ಈ ಕಥಾಕೋಶವೇ 'ವಡ್ಡಾರಾಧನೆ'. ಇಂದಿಗೂ ಇದೊಂದು ಮಾದರಿಯ ಗದ್ಯ ಕೃತಿ.

ಪ್ರಸ್ತುತ ಕಥಾ ಭಾಗವನ್ನು ವಡ್ಡಾರಾಧನೆಯ ಸುಕುಮಾರ ಸ್ವಾಮಿ ಕಥೆಯಿಂದ ಆರಿಸಲಾಗಿದೆ. ಇದು ವೈನಯಿಕನೆಂಬ ವ್ಯಾಪಾರಿಯು ಗ್ರಾಹಕರಿಗೆ ಹೇಳಿದ ಕಥೆಯಾಗಿದೆ. ಸುಮತಿ ಎಂಬ ಜಾಣೆ ತನ್ನ ತಂದೆಯನ್ನು ಸಂಕಷ್ಟದಿಂದ ಪಾರು ಮಾಡಿದ ಸಂಗತಿ ಈ ಕಥೆಯ ಪ್ರಮುಖ ವಸ್ತು. ಸುಮತಿಯ ಬುದ್ಧಿ ಕುಶಲತೆ, ಸುಧಾಮೆಯ ಸತ್ಯಸಂಧತೆ, ಇಂದಿಗೂ ಪ್ರಸ್ತುತವಾಗಿದೆ. ಇಬ್ಬರು ಹೆಣ್ಣುಮಕ್ಕಳ ಆತ್ಮವಿಶ್ವಾಸ ಇಲ್ಲಿ ಅನಾವರಣಗೊಂಡಿದೆ.

## ಕಠಿಣ ಪದಗಳ ಅರ್ಥ

ಪೊಟಿಲ್–ಹೊಳಲು, ಪಟ್ಟಣ; ಶ್ರೇಷ್ಠಿ–ಶೆಟ್ಟಿ, ಸೆಟ್ಟಿ, ವ್ಯಾಪಾರಿ; ಕಸವರ–ಚಿನ್ನ; ಸರ್ಪ ದಷ್ಟಮಾದೊಡೆ–ಹಾವು ಕಚ್ಚಲು; ಇಟಿಪಿದೊಡೆ–ಕೆಳಕ್ಕೆ ಇಳಿಸಿದಾಗ; ಬಾಟಿಸುವೆಂ–ಬದುಕಿಸುತ್ತೇನೆ; ದಾಷ್ಟ್ರಿಕಂಗೆ–ಕಚ್ಚಲ್ಪಟ್ಟವನಿಗೆ; ಜಾವಮಿರಿಂ–ಕಾವಲಾಗಿರಿ; ಕಳ್ದು–ಕದ್ದು; ಕಾಪು–ಕಾವಲು; ಪುಳ್ಳಿಯಂ–ಪುರುಳೆ, ಒಣಗಿದ ತರಗೆಲೆ, ಕಡ್ಡಿ ರೆಂಬೆಗಳು; ಪೊಟ್ಟಿರೆ–ಹೊತ್ತಾರೆಯೇ; ನೇಸಱ್–ಸೂರ್ಯ; ಪಱಿಗುಟ್ಟಿ–ಚರ್ಮವಾದ್ಯ ಬಾರಿಸಿ; ಎತ್ತಿದಂ–ಬದುಕಿಸಿದ; ದೀನಾರ–ಚಿನ್ನದ ನಾಣ್ಯ; ಪೊಟ್ಟಳಿಗೆ–ಪೊಟ್ಟಣ, ಚೀಲ; ಜನಸಂಕೀರ್ಣದ–ಜನರಗುಂಪಿನ; ಪ್ರಾಸಾದ–ಕಟ್ಟಡದ ಮೇಲ್ಭಾಗ, ಉಪ್ಪರಿಗೆ, ಮಹಡಿಯ ಮೇಲ್ಭಾಗ, ಮಾಳಿಗೆ; ಈಡಾಡು–ಬಿಸಾಡು; ಭಿನ್ನಹ–ಬಿನ್ನಪ, ವಿನಂತಿ, ವಿಜ್ಞಾಪನೆ; ಆರೈವುದು–ವಿಚಾರ ಮಾಡುವುದು; ಆರಯ್–ಹುಡುಕು; ನಿಗ್ರಹ–ಶಿಕ್ಷೆ; ಬಗ್ಗಿಸಿ–ಗದರಿಸಿ; ಭೀತ–ಭಯಗೊಂಡ; ಬಿನ್ನನೆ ಮೊಗಂ ಮಾಡಿ–ಬಾಡಿದ ಮುಖವುಳ್ಳವನಾಗಿ; ಖಿನ್ನನಾಗಿ–ದಿಕ್ಕುತೋಚದೆ; ಅಮ್ಮ–ತಂದೆ; ನೆಗಟ್–ಮೊಸಳೆ; ಆದಮಾನುಂ–ಚೆನ್ನಾಗಿ, ಬಹಳವಾಗಿ; ತಡಿ–ದಡ, ತೀರ; ಬೇಡಿದುದಂ–ಬಯಸಿದ್ದನ್ನು–ಪೂಣ್ದೊಡೆ–ಭಾಷೆಯಿತ್ತರೆ, ವಚನ ಕೊಟ್ಟರೆ; ಪಸದನ(ಪ್ರಸಾಧನ)–ಅಲಂಕಾರ, ಸಿಂಗಾರ; ಕೈಗೆಯ್ದು–ಸಿಂಗರಿಸಿಕೊಂಡು; ಆಪಣ–ಅಂಗಡಿ; ಎಡೆಯೊಳ್–ನಡುವೆ; ತುಡುಗೆ–ಆಭರಣ; ಪೊಲ್ಲಮಾನಸಿ–ಕೆಟ್ಟವಳು; ಮನೆವಾಟ್ತಿ–ಮನೆವಾರ್ತೆ, ಮನೆಗೆಲಸ, ಗೃಹಕೃತ್ಯ; ಮೆಚ್ಚುಗೆಯ್ವೆಂ–ಮೆಚ್ಚಿದ್ದನ್ನು ಮಾಡುತ್ತೇನೆ, ಇಷ್ಟಪಟ್ಟದನ್ನು ನೀಡುತ್ತೇನೆ; ನನ್ನಿಗೊಟ್ಟು–ಸತ್ಯವನ್ನು ಹೇಳಿ, ಮಾತುಕೊಟ್ಟು; ತುರಿಪ–ಬೇಗ, ತ್ವರಿತ; ಅಳ್ತಿ–ಪ್ರೀತಿ; ಬಟಿವಟಿಯನೆ–ಹಿಂಬಾಲಿಸಿ, ಮದೆವಳ್–ಮದುವಣಗಿತ್ತಿ, ಮದುಮಗಳು; ಒಡೆಯಯ್–ಉಳ್ಳವಳಾಗಿದ್ದೀಯ; ಅಟಿಯಲಾಱೆ–ಹಾಳು ಮಾಡಲಾರೆ; ಎಣೆಕೊಂಡ–ಎಣಿಸಿ ತೆಗೆದುಕೊಂಡ;



11th_Kannada_Reader_Final_16-07-2018.indd 164 16-07-2018 18:43:16

ಭವ–ಹುಟ್ಟು; ತವನಿದಿ–ಅಕ್ಷಯನಿಧಿ; ತವದೆ–ಕ್ಷವದೆ, ನಾಶವಾಗದೆ; ಸಮನಿಸಿದೊಡೆ–ಉಂಟಾದರೆ; ಅಳಿಪು–ಆಸೆ; ಮಱಿಲುಂದು–ಮೈಮರೆತು ನಿದ್ದೆ ಮಾಡು; ಆಟಿಸು–ಆಶಿಸು, ಬಯಸು; ನೆಱಿಯೆ–ಪೂರ್ಣವಾಗಿ; ಭಾಗಸ–ಐಶ್ವರ್ಯ, ಹಣ; ಕೆಟ್ಟುದು–ಕಳೆದುಹೋಯಿತು; ಉಕ್ಕೆವ–ಉತ್ಸವ; ಮನಂಗೊಳೆ–ನಂಬುವಂತೆ ಮಾಡಿ; ಬರುಂಟಿ–ಬೆರಳಿನಿಂದ ಚುಚ್ಚಿ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಕೋಟಿ ಕಸವರದ ಒಡೆಯನಾರು ?
2. ಸುಮಿತ್ರನ ಮಗನಾರು ?
3. ವಸುಮಿತ್ರನಿಗೆ ಒದಗಿದ ಕಷ್ಟ ಯಾವುದು ?
4. ಗರುಡನಾಭಿಯು ಯಾರು ?
5. ಸುಮಿತ್ರ ಸೆಟ್ಟಿಯು ಎಷ್ಟು ಮಂದಿಯನ್ನು ಶವದ ಕಾವಲಿಗಿರಿಸಿದನು ?
6. ಕಾವಲಿನವರಿಗೆ ಸೆಟ್ಟಿ ನೀಡಿದ ಬಹುಮಾನ ಯಾವುದು ?
7. ಸುಭಟರು ಏನೆಂದು ಸುಳ್ಳು ಹೇಳಿದರು ?
8. ಸುಮತಿ ಕಳ್ಳರನ್ನು ಪತ್ತೆ ಮಾಡಲು ಹೇಳಿದ ಕಥೆ ಯಾವುದು ?
9. ಸುದತ್ತ ಸೆಟ್ಟಿಯ ಊರು ಯಾವುದು ?
10. ಸುಧಾಮೆಯು ಯಾರ ಮಗಳು ?
11. ಸುಧಾಮೆಯು ಯಾರಿಗೆ ಭಾಷೆ ಕೊಟ್ಟಳು ?
12. ಸುಧಾಮೆಯು ಸೋದರ ಮೈದುನನನ್ನು ಏನೆಂದು ಬೇಡಿಕೊಂಡಳು ?
13. ಕಳ್ಳನು ಸುಧಾಮೆಯನ್ನು ಏನೆಂದು ಹೆದರಿಸಿದನು ?
14. ಬ್ರಹ್ಮರಾಕ್ಷಸನು ಸುಧಾಮೆಯನ್ನು ಕಂಡು ಏನೆಂದುಕೊಂಡನು ?
15. ಧನದತ್ತನು ಸುಧಾಮೆಯನ್ನು ಹೇಗೆ ವರ್ಣಿಸಿದ್ದಾನೆ ?
16. ಸುಮತಿಯು ಯಾರನ್ನು ಕಳ್ಳನೆಂದು ತೀರ್ಮಾನಿಸಿದಳು ?
17. ತಳವಾರನು ಯಾರಿಗೆ ಹಣವನ್ನು ಒಪ್ಪಿಸಿದನು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಮಂತ್ರವಾದಿಯು ಸುಮಿತ್ರ ಸೆಟ್ಟಿಗೆ ಏನೆಂದು ಹೇಳಿದನು ?
2. ಸುಮಿತ್ರ ಸೆಟ್ಟಿಯು ರಾಜನಿಗೆ ಏನೆಂದು ದೂರಿದನು ?
3. ರಾಜನು ತಳಾರನನ್ನು ಕರೆದು ಏನೆಂದು ಹೇಳಿದನು ?
4. ಸುಮತಿಯು ಆತಂಕಗೊಂಡ ತಂದೆಗೆ ಏನೆಂದಳು ?
5. ಸುಧಾಮೆಗೆ ಬಂದ ಕಷ್ಟ ಯಾವುದು ?
6. ಸುಧಾಮೆಯು ಧನದತ್ತನಿಗೆ ಏನೆಂದು ಭಾಷೆ ಕೊಟ್ಟಳು ?
7. ಸುಧಾಮೆಯು ಬ್ರಹ್ಮರಾಕ್ಷಸನಿಗೆ ಏನೆಂದು ಹೇಳಿದಳು ?
8. ಸುಮತಿಯು ಕಳ್ಳನನ್ನು ಪತ್ತೆ ಮಾಡಿದ ನಂತರ ಏನು ಮಾಡಿದಳು ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ನಾಲ್ವರು ಭಟರು ಕುರಿಯನ್ನು ಸುಟ್ಟು ತಿಂದ ಪ್ರಸಂಗವನ್ನು ವಿವರಿಸಿ.
2. ಸುಮತಿಯು ಕಳ್ಳನನ್ನು ಪತ್ತೆ ಮಾಡಲು ಹೇಳಿದ ಕಥೆಯ ಸ್ವಾರಸ್ಯವೇನು ?
3. 'ಸುಧಾಮೆ ಮಾತಿಗೆ ತಪ್ಪದ ಹೆಣ್ಣು'– ಹೇಗೆ ? ವಿವರಿಸಿ.
4. ನಾಲ್ವರು ಸುಭಟರ ಪ್ರಸಂಗದಲ್ಲಿ ಸುಮತಿಯ ಜಾಣ್ಮೆ ಹೇಗೆ ವ್ಯಕ್ತವಾಗಿದೆ ?
5. ತಳಾರನಿಗೆ ಒದಗಿದ ಕಷ್ಟ ಯಾವುದು ? ಅದರಿಂದ ಸುಮತಿಯು ಅವನನ್ನು ಹೇಗೆ ಪಾರು ಮಾಡಿದಳು ?
6. ಕುರಿ ಕೊಂದವನು, ಬೆಂಕಿ ತರಲು ಹೋದವನು, ಕಟ್ಟಿಗೆ ತರಲು ಹೋದವನು –ಇವರುಗಳು ಯಾರು ಯಾರನ್ನು ಮೆಚ್ಚಿಕೊಂಡರು ? ಏಕೆ ?

## ಚಟುವಟಿಕೆ

1. ಪಂಚತಂತ್ರದಲ್ಲಿ ಬರುವ 'ಮೊಲವು ಸಿಂಹವನ್ನು ಕೊಂದ ಕಥೆ', ಹಾಗೂ 'ಕಪಿಯು ಮೊಸಳೆಯ ಕುತಂತ್ರದಿಂದ ಪಾರಾದ ಕಥೆ'ಗಳನ್ನು ಓದಿ ತಿಳಿಯಿರಿ.
2. ಈ ಕಥೆಯನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.



11th_Kannada_Reader_Final_16-07-2018.indd 165 16-07-2018 18:43:16

ಘಟಕ ಎಂಟು

# ಛಂದಸ್ಸು

ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ವ್ಯಾಕರಣದಂತೆ ಛಂದಸ್ಸಿನ ಅನುಭವವನ್ನು ಮಾಡಿಕೊಳ್ಳುವುದೂ ಅಗತ್ಯವಾಗಿದೆ. ಛಂದಸ್ಸು ಎಂದರೆ ಪದ್ಯದ ನಿಯಮವನ್ನು ತಿಳಿಸುವ ಶಾಸ್ತ್ರ. ವ್ಯಾಕರಣವು ಗದ್ಯ ಪದ್ಯಗಳೆರಡರ ಭಾಷಾನಿಯಮವನ್ನು ತಿಳಿಸುವುದು. ಛಂದಸ್ಸು ಪದ್ಯಗಳ ನಿಯಮವನ್ನು ಮಾತ್ರ ತಿಳಿಸುವುದು. ಮಹತ್ತಾದ ವಿಷಯಗಳನ್ನು ಸಂಗ್ರಹಿಸಿ ಹೇಳುವುದಕ್ಕೂ ರಸವತ್ತಾದ ಅಂಶಗಳನ್ನು ಮನೋಹರವಾಗಿ ಹೇಳುವುದಕ್ಕೂ ನೆನಪಿನಲ್ಲಿಟ್ಟುಕೊಳ್ಳುವುದಕ್ಕೂ ಪದ್ಯವು ಗದ್ಯಕ್ಕಿಂತ ಸುಲಭ. ಆದುದರಿಂದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳಲ್ಲಿ ಗದ್ಯಕ್ಕಿಂತ ಪದ್ಯವೇ ಅಧಿಕ. ವ್ಯಾಕರಣ, ಛಂದಸ್ಸು, ಅಲಂಕಾರಾದಿಗಳನ್ನು ತಿಳಿಸುವ ಗ್ರಂಥಗಳು ಹಿಂದಿನ ಕಾಲದಲ್ಲಿ ಪದ್ಯಮಯವಾಗಿಯೇ ರಚಿತವಾಗಿವೆ. ಆದುದರಿಂದ ಹಿಂದಿನ ಪದ್ಯಗಳನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೂ ಹೊಸದಾಗಿ ಪದ್ಯಗಳನ್ನು ಬರೆಯುವುದಕ್ಕೂ ಛಂದಸ್ಸಿನ ಅಭ್ಯಾಸವು ಅಗತ್ಯವಾಗಿದೆ.

ಪದ್ಯ ಅಥವಾ ವೃತ್ತವು ಪಾದದಿಂದ ಕೂಡಿರುವುದು. ಪಾದಗಳು ಗಣ ಮತ್ತು ಪ್ರಾಸ ನಿಯಮವುಳ್ಳ ಶಬ್ದ ಸಂಘಟನೆಗಳು. ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದಿಂದ ಬಂದಿರುವ ಛಂದಸ್ಸು ಹಾಗೂ ಅಚ್ಚಗನ್ನಡ ಛಂದಸ್ಸು ಎಂದು ಎರಡು ವಿಧಗಳಿವೆ. ಪದ್ಯಗಳ ಪಾದಗಳು ವರ್ಣಗಣ, ಮಾತ್ರಾಗಣ ಮತ್ತು ಅಂಶಗಣ ನಿಯಮಗಳಿಂದ ಕೂಡಿದವುಗಳಾಗಿರುತ್ತವೆ. ಸಂಸ್ಕೃತದಿಂದ ಬಂದಿರುವ ವೃತ್ತ ಜಾತಿಗಳು ವರ್ಣ ಗಣ ನಿಯಮವುಳ್ಳವು. ಕನ್ನಡದ ವೃತ್ತಗಳು ಮಾತ್ರಾಗಣ ಮತ್ತು ಅಂಶಗಣ ನಿಯಮದಿಂದ ಕೂಡಿದವುಗಳು.

## ಮಾತ್ರೆ

ಮಾತ್ರೆಗಳಲ್ಲಿ ಲಘು, ಗುರು ಮತ್ತು ಪ್ಲುತವೆಂದು ಮೂರು ವಿಧಗಳಿವೆ. ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲ ಪರಿಮಾಣಕ್ಕೆ 'ಮಾತ್ರೆ' ಎಂದು ಹೆಸರು. ಇದಕ್ಕೆ 'ಲಘು' ಎಂದು ಸಂಜ್ಞೆ. ಒಂದು ದೀರ್ಘಾಕ್ಷರವನ್ನು ಉಚ್ಚರಿಸಲು ಎರಡು ಮಾತ್ರೆಯಷ್ಟು ಕಾಲಾವಧಿ ಬೇಕು. ಇದಕ್ಕೆ 'ಗುರು' ಎಂದು ಸಂಜ್ಞೆ. ಅದೇ ದೀರ್ಘಾಕ್ಷರವನ್ನು ಇನ್ನಷ್ಟು ಎಳೆದು ಉಚ್ಚರಿಸಿದಲ್ಲಿ ಅದಕ್ಕೆ ಮೂರು ಮಾತ್ರೆಗಳ ಕಾಲಾವಧಿ ಬೇಕು. ಇದಕ್ಕೆ 'ಪ್ಲುತ' ಎಂದು ಸಂಜ್ಞೆ. ಲಘುವನ್ನು ಸೂಚಿಸಲು 'ು' ಎಂಬ ಸಂಜ್ಞೆಯನ್ನೂ; ಗುರುವನ್ನು ಸೂಚಿಸಲು '–' ಎಂಬ ಸಂಜ್ಞೆಯನ್ನೂ; ಪ್ಲುತವನ್ನು ಸೂಚಿಸಲು 's' ಎಂಬ ಸಂಜ್ಞೆಯನ್ನೂ ಉಪಯೋಗಿಸುತ್ತಾರೆ.

**ಉದಾಹರಣೆ :**

ಲಘುವಿಗೆ : ುುು ುು ುು

ಹರಕೆ ವಿಧಿ ಕೃಪೆ

ಗುರುವಿಗೆ : – – – –

ಬಾ ಇಂದಲ್ಲಾ

ಪ್ಲುತಕ್ಕೆ : ಹಾ ರಾಮಾ ರಾಮಾs ಎಂದು ಸೀತೆ ಬಾಯಳಿದಳ್ತಳ್



11th_Kannada_Reader_Final_16-07-2018.indd 166 16-07-2018 18:43:16

ಎಲ್ಲಾ ಹ್ರಸ್ವಾಕ್ಷರಗಳು ಲಘುಗಳಾಗುತ್ತವೆ. ಅವನ್ನು ಗುರುತಿಸುವುದು ಸುಲಭ. ಪ್ಲುತಾಕ್ಷರಗಳು ಪದ್ಯಗಳಲ್ಲಿ ಬರುವುದು ಬಹು ವಿರಳ. ಅವನ್ನು ಗುರುತಿಸುವುದು ಕಷ್ಟವಲ್ಲ. ಆದರೆ ಒಂದು ಅಕ್ಷರವು ಈ ಕೆಳಗಿನ ಆರು ಕಾರಣಗಳಿಂದ ಗುರುವಾಗಬಹುದು.

**ಉದಾಹರಣೆ :**

| | | |
|---|---|---|
| | – | – – – – |
| 1. ದೀರ್ಘಸ್ವರಯುಕ್ತವಾದ ಅಕ್ಷರ : | **ಆ**ಟ | **ಕಾ**ಲಾಳು **ಮೇ**ಲಾಟ |
| | – | – – |
| 2. ಅನುಸ್ವಾರಯುಕ್ತವಾದ ಅಕ್ಷರ : | **ಅಂ**ದು | **ಇಂ**ದು **ಚಂ**ದ |
| | – | – |
| 3. ವಿಸರ್ಗದ ಹಿಂದಿನ ಅಕ್ಷರ : | **ದುಃ**ಖ | ಅಂ**ತಃ**ಕರಣ |
| | – | – – |
| 4. ಸಂಯುಕ್ತಾಕ್ಷರದ ಹಿಂದಿನ ಅಕ್ಷರ : | **ಎ**ಲ್ಲ | **ಬ**ಲ್ಲವರಿಲ್ಲ |
| | – | – – |
| 5. ಸ್ವರ ರಹಿತ ವ್ಯಂಜನದ ಹಿಂದಿನ ಅಕ್ಷರ : | **ನಿ**ಲ್ | **ಕ**ಣ್ **ಪೆ**ಸರ್ |

6. ಮಾತ್ರಾ ಗಣ ನಿಯಮದ ಪದ್ಯಾರ್ಧದ ಕಡೆಯ ಹ್ರಸ್ವಾಕ್ಷರ

ಏನ ಕಲಿತರದೇನು ಯತ್ನದೊ
ಳೇನ ಮಾಡಿದರೇನು ಸರ್ವವು
ಕಾನನದ ಬೆಳದಿಂಗಳಂದದಿ ವ್ಯರ್ಥವಾಗಿಹುದು ॥

ಒಂದು ಅಕ್ಷರವು ಎರಡು ಕಾರಣಗಳಿಂದ ಗುರುವಾದರೂ ಅದಕ್ಕೆ ಒಂದೇ ಸಂಜ್ಞೆ ಬರುತ್ತದೆ ಎಂಬುದನ್ನೂ, ಶಿಥಿಲದ್ವಿತ್ವದ ಹಿಂದಿನ ಅಕ್ಷರಕ್ಕೆ ಗುರು ಸಂಜ್ಞೆಯಿಲ್ಲವೆಂಬುದನ್ನೂ ತಿಳಿಯಿರಿ.

## ಗಣ

ಗಣವೆಂದರೆ ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಅಥವಾ ಮಾತ್ರೆಗಳ ಗುಂಪು. ಇದರಲ್ಲಿ ವರ್ಣಗಣ(ಅಕ್ಷರಗಣ), ಮಾತ್ರಾಗಣ ಮತ್ತು ಅಂಶಗಣವೆಂದು ಮೂರು ವಿಧಗಳಿವೆ. ವರ್ಣಗಣ ನಿಯಮಕ್ಕೆ ಒಳಪಟ್ಟ ಪದ್ಯಗಳನ್ನು ವರ್ಣವೃತ್ತಗಳೆಂದೂ; ಮಾತ್ರಾಗಣ ನಿಯಮಕ್ಕೆ ಒಳಪಟ್ಟವುಗಳನ್ನು ಮಾತ್ರಾವೃತ್ತಗಳೆಂದೂ; ಅಂಶಗಣಗಳುಳ್ಳ ವೃತ್ತಗಳನ್ನು ಅಂಶಗಣ ವೃತ್ತಗಳೆಂದೂ ಕರೆಯುವರು.

## ವರ್ಣಗಣ (ಅಕ್ಷರ ಗಣ)

ವರ್ಣಗಣಗಳಿಂದ ಕೂಡಿದ ಪಾದವುಳ್ಳ ವೃತ್ತಗಳನ್ನು ಮೂರು ಮೂರು ಅಕ್ಷರಗಳ ಗುಂಪುಗಳನ್ನಾಗಿ ವಿಭಾಗಿಸುವರು. ಮೂರು ಮೂರು ಅಕ್ಷರಗಳು ಸೇರಿ ಒಂದು ಗಣವಾಗುವುದು. ಈ ವರ್ಣಗಣವನ್ನು ಮಗಣ, ನಗಣ, ಯಗಣ, ಜಗಣ, ರಗಣ, ಸಗಣ ಮತ್ತು ತಗಣವೆಂದು ಎಂಟು ವಿಧವಾಗಿ ವಿಂಗಡಿಸಿದ್ದಾರೆ. ಅವುಗಳ ಲಕ್ಷಣವನ್ನು ಈ ಪದ್ಯದಿಂದ ತಿಳಿಯಬಹುದು.



11th_Kannada_Reader_Final_16-07-2018.indd 167 16-07-2018 18:43:16

**ಗುರು ಲಘು ಮೂರಿರೆ ಮ ನ ಗಣ**

**ಗುರು ಲಘು ಮೊದಲಲ್ಲಿ ಬರಲು ಭ ಯ ಗಣ**

**ಗುರು ಲಘು ನಡುವಿರೆ ಜ ರ ಗಣ**

**ಗುರು ಲಘು ಕಡೆಯಲ್ಲಿ ಬರಲು ಸ ತ ಗಣಮಕ್ಕುಂ ॥**

**ಉದಾಹರಣೆಗೆ :**

| | | | |
|---|---|---|---|
| | | | – – – |
| ಗುರು ಮೂರಿದ್ದರೆ | – – – | ಮಗಣ | ಮಾರ್ತಾಂಡಂ |
| | | | ಽಽಽ |
| ಲಘು ಮೂರಿದ್ದರೆ | ಽ ಽ ಽ | ನಗಣ | ಕನಕ |
| | | | – ಽ ಽ |
| ಗುರು ಮೊದಲಿದ್ದರೆ | – ಽ ಽ | ಭಗಣ | ಚಾಮರ |
| | | | ಽ – – |
| ಲಘು ಮೊದಲಿದ್ದರೆ | ಽ – – | ಯಗಣ | ಸುಧಾಮಂ |
| | | | ಽ – ಽ |
| ಗುರು ನಡುವಿದ್ದರೆ | ಽ – ಽ | ಜಗಣ | ಸಮಾಜ |
| | | | – ಽ – |
| ಲಘು ನಡುವಿದ್ದರೆ | – ಽ – | ರಗಣ | ರಾಜಸಂ |
| | | | ಽ ಽ – |
| ಗುರು ಕಡೆಯಲ್ಲಿದ್ದರೆ | ಽ ಽ – | ಸಗಣ | ವನಜಂ |
| | | | – – ಽ |
| ಲಘು ಕಡೆಯಲ್ಲಿದ್ದರೆ | – – ಽ | ತಗಣ | ಸಂತೋಷ |

ಇದನ್ನು ಸುಲಭವಾಗಿ ನೆನಪಿಲ್ಲಿಟ್ಟುಕೊಳ್ಳಲು 'ಯ ಮಾ ತಾ ರಾ ಜ ಭಾ ನ ಸ ಲ ಗಂ' ಎಂಬ ಸೂತ್ರವನ್ನು ಮಾಡಿಕೊಂಡಿರುವರು. ಈ ಸೂತ್ರದಲ್ಲಿ ಮೊದಲಿನಿಂದ ಕ್ರಮವಾಗಿ ಮೂರು ಅಕ್ಷರಗಳನ್ನು ತೆಗೆದುಕೊಂಡಾಗ ಪ್ರತಿ ಗುಂಪಿನ ಮೊದಲನೆಯ ಅಕ್ಷರವು ಗಣದ ಹೆಸರನ್ನು ಸೂಚಿಸುತ್ತದೆ.

**ಉದಾಹರಣೆ :**

| | | |
|---|---|---|
| ಯ ಮಾ ತಾ | ಽ – – | ಯಗಣ |
| ಮಾ ತಾ ರಾ | – – – | ಮಗಣ |
| ತಾ ರಾ ಜ | – – ಽ | ತಗಣ |
| ರಾ ಜ ಭಾ | – ಽ – | ರಗಣ |
| ಜ ಭಾ ನ | ಽ – ಽ | ಜಗಣ |
| ಭಾ ನ ಸ | – ಽ ಽ | ಭಗಣ |
| ನ ಸ ಲ | ಽ ಽ ಽ | ನಗಣ |
| ಸ ಲ ಗಂ | ಽ ಽ – | ಸಗಣ |



11th_Kannada_Reader_Final_16-07-2018.indd 168 16-07-2018 18:43:16

# ಮಾತ್ರಾಗಣ

ಕನ್ನಡ ಛಂದೋನಿಯಮಕ್ಕೆ ಒಳಪಟ್ಟ ವೃತ್ತಗಳಲ್ಲಿ ಹೆಚ್ಚಿನವು ಮಾತ್ರಾಗಣ ನಿಯಮದಿಂದ ಕೂಡಿದವುಗಳಾಗಿವೆ. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ರಗಳೆ ಮುಂತಾದವು ಮಾತ್ರಾಗಣ ನಿಯಮಕ್ಕೆ ಒಳಪಟ್ಟವುಗಳಾಗಿವೆ. ಬ್ರಹ್ಮಗಣ, ವಿಷ್ಣುಗಣ, ರುದ್ರಗಣ ಮೊದಲಾದವು ಕೂಡ ಮಾತ್ರಾ ನಿಯಮದಿಂದಲೇ ಉಂಟಾದವುಗಳಲ್ಲದೆ ಅಕ್ಷರಗಣ ನಿಯಮವುಳ್ಳವುಗಳಲ್ಲ. ಕಂದಪದ್ಯ ಮಾತ್ರಾಗಣ ಮತ್ತು ಅಕ್ಷರಗಣ ನಿಯಮವೆಂಬ ಎರಡು ನಿಯಮಗಳ ಮಿಲನದಿಂದ ಉಂಟಾದಂತೆ ಕಂಡು ಬರುತ್ತದೆ.

ಮಾತ್ರಾಗಣಗಳಲ್ಲಿ ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣಗಳೆಂದು ಮುಖ್ಯವಾಗಿ ಮೂರು ವಿಧಗಳಿವೆ. ಇವುಗಳಲ್ಲಿ ಮೂರು ಮಾತ್ರೆಯ ಗಣಗಳಲ್ಲಿ ಮೂರು ವಿಧಗಳಿವೆ. ನಾಲ್ಕು ಮಾತ್ರೆಯ ಗಣಗಳಲ್ಲಿ ಐದು ವಿಧಗಳಿವೆ. ಐದು ಮಾತ್ರೆಯ ಗಣಗಳಲ್ಲಿ ಎಂಟು ವಿಧಗಳಿವೆ.

**ಉದಾಹರಣೆ :**

1. ಮೂರು ಮಾತ್ರೆಯ ಗಣಗಳು ಮೂರು ವಿಧ

ಽ ಽ ಽ

– ಽ

ಽ –

2. ನಾಲ್ಕು ಮಾತ್ರೆಯ ಗಣಗಳು ಐದು ವಿಧ

ಽ ಽ ಽ ಽ

– –

ಽ ಽ –

– ಽ ಽ

ಽ – ಽ

3. ಐದು ಮಾತ್ರೆಯ ಗಣಗಳು ಎಂಟು ವಿಧ

ಽ ಽ ಽ ಽ ಽ

– ಽ ಽ ಽ

ಽ ಽ – ಽ

– – ಽ

– ಽ –

ಽ ಽ ಽ –

ಽ – ಽ ಽ

ಽ – –



11th_Kannada_Reader_Final_16-07-2018.indd 169 16-07-2018 18:43:16

## ಅಂಶಗಣ

ಅಂಶಗಣವನ್ನು ಅವುಗಳ ಅಂಶಗಳಿಂದ ನಿಶ್ಚಯಿಸಬೇಕು. ಗಣದ ಆದಿಯಲ್ಲಿ ಬರುವ ಅಂಶವನ್ನು ಮೂಲಾಂಶವೆಂದು ಕರೆಯುತ್ತಾರೆ. ಇದರಲ್ಲಿ ಒಂದು ಗುರು ಅಥವಾ ಎರಡು ಲಘುಗಳು ಇರಬೇಕು. ಮುಂದೆ ಬರುವ ಒಂದು ಗುರು ಅಥವಾ ಒಂದು ಲಘುವನ್ನು ಒಂದು ಅಂಶವೆಂದು ಪರಿಗಣಿಸಲಾಗುತ್ತದೆ. ಅಂಶಗಣದಲ್ಲಿ ಬ್ರಹ್ಮಗಣ, ವಿಷ್ಣುಗಣ ಮತ್ತು ರುದ್ರಗಣವೆಂದು ಮೂರು ವಿಧಗಳಿವೆ. ಬ್ರಹ್ಮಗಣದಲ್ಲಿ ಎರಡು ಅಂಶಗಳೂ ವಿಷ್ಣುಗಣದಲ್ಲಿ ಮೂರು ಅಂಶಗಳೂ ರುದ್ರಗಣದಲ್ಲಿ ನಾಲ್ಕು ಅಂಶಗಳೂ ಇರುತ್ತವೆ. ಬ್ರಹ್ಮಗಣಗಳು ನಾಲ್ಕು ವಿಧವಾಗಿಯೂ ವಿಷ್ಣುಗಣಗಳು ಎಂಟು ವಿಧವಾಗಿಯೂ, ರುದ್ರಗಣಗಳು ಹದಿನಾರು ವಿಧವಾಗಿಯೂ ಬರುತ್ತವೆ.

**ಉದಾಹರಣೆಗೆ :**

ಬ್ರಹ್ಮಗಣಗಳು 4 ವಿಧವಾಗಿವೆ :–

| | |
|---|---|
| – – | ಬ್ರಹ್ಮಂ |
| ∪ ∪ – | ಸುರಪಂ |
| – ∪ | ಧಾತೃ |
| ∪ ∪ ∪ | ಅಜನು |

ವಿಷ್ಣುಗಣಗಳು 8 ವಿಧವಾಗಿವೆ :–

| | |
|---|---|
| – – – | ಗೋವಿಂದಂ |
| – – ∪ | ಕಂಸಾರಿ |
| – ∪ ∪ | ಶ್ರೀಪತಿ |
| ∪ ∪ ∪ – | ಪರಹಿತಂ |
| ∪ ∪ – ∪ | ನರಕಾರಿ |
| ∪ ∪ – – | ಹೃಷಿಕೇಶಂ |
| – ∪ – | ಮಾಧವಂ |
| ∪ ∪ ∪ ∪ | ನರಹರಿ |

ರುದ್ರಗಣಗಳು 16 ವಿಧವಾಗಿವೆ :–

| | |
|---|---|
| – – – – | ಗಂಗಾಧೀಶಂ |
| – – – ∪ | ಕಂದರ್ಪಾರಿ |
| – – ∪ ∪ | ಭೂತಾಗ್ರಣಿ |
| – ∪ ∪ ∪ | ಕಾಮರಿಪು |
| – ∪ – – | ನೀಲಕಂಠಂ |
| – – ∪ – | ಕಾಮಾಂತಕಂ |



11th_Kannada_Reader_Final_16-07-2018.indd 170 16-07-2018 18:43:16

| | |
|---|---|
| ಲ ಲ – – – | ಗಿರಿಜಾನಾಥಂ |
| ಲ ಲ ಲ – – | ವೃಷಭಲಕ್ಷ್ಯಂ |
| – ಲ ಲ – | ಶೂಲಧರಂ |
| ಲ ಲ ಲ ಲ – | ಪುರಮಥನಂ |
| ಲ ಲ – – ಲ | ಮದನಧ್ವಂಸಿ |
| – ಲ – ಲ | ಚಂದ್ರಮೌಳಿ |
| ಲ ಲ ಲ – ಲ | ಭುಜಗಧಾರಿ |
| ಲ ಲ – ಲ ಲ | ತ್ರಿಜಗದ್ಗುರು |
| ಲ ಲ ಲ ಲ ಲ | ಮದನರಿಪು |

## ಪ್ರಾಸ

ಪ್ರಾಸವು ಪದ್ಯದ ಜೀವಾಳವಾಗಿದೆ. ಸರ್ವಜ್ಞ ಕವಿಯು ಪ್ರಾಸವಿಲ್ಲದ ಪದವ ತಾಸು ಹಾಡಿದರೇನು? ಸಾಸಿವೆಯೆಣ್ಣೆ ಹದ ಮಾಡಿ ಹೂಸಿಕೊಂಡಂತೆ ಎಂದಿರುವನು. ಪದ್ಯದ ಪ್ರತಿಪಾದದಲ್ಲಿಯೂ ಮೊದಲೆರಡು ಸ್ವರಗಳ ಮಧ್ಯೆ ಒಂದೇ ವಿಧವಾದ ವ್ಯಂಜನವು ಇರುವುದಕ್ಕೆ ಪ್ರಾಸವೆಂದು ಹೆಸರು. ಇದನ್ನು ಆದಿಪ್ರಾಸವೆಂದು ಕರೆಯುವರು. ಎಂದರೆ ಒಂದೇ ಅಕ್ಷರವು ಎಲ್ಲ ಸಾಲುಗಳಲ್ಲೂ ಅದೇ ಸ್ಥಾನದಲ್ಲಿ, ಮತ್ತೆ ಮತ್ತೆ ಬರುವುದನ್ನೇ ಪ್ರಾಸವೆಂದು ಕರೆಯುವರು. ಸಾಮಾನ್ಯವಾಗಿ ಪ್ರಾಸವೆಂದರೆ ಆದಿಪ್ರಾಸವೆಂದೇ ಕೆಲವರು ಊಹಿಸುವುದುಂಟು. ಆದರೆ ಪಾದದ ಕಡೆಯ ಅಕ್ಷರವು ಒಂದೇ ವಿಧದ ಸ್ವರದಿಂದ ಕೂಡಿದ ಸಜಾತೀಯ ವ್ಯಂಜನಗಳಾಗಿದ್ದಲ್ಲಿ ಅದು ಅಂತ್ಯಪ್ರಾಸವಾಗುತ್ತದೆ. ಅಂತ್ಯಪ್ರಾಸ ನಿಯಮದಿಂದ ಕೂಡಿದ ಪದ್ಯಗಳನ್ನು ಕೆಲವು ಕವಿಗಳು ರಚಿಸಿದ್ದಾರೆ.

**ಉದಾಹರಣೆ :**

ಹೆತ್ತ ಹೊಟ್ಟೆಯುರಿಯುತ್ತಿದೆ **ಮಗನೇ**
ಎತ್ತಿದ ತೋಳನು ಕೆತ್ತಿದೆ **ಮಗನೇ**
ಹಾವು ಕಡಿಯೆ ಹಾ ಎಂದೆಯೊ **ಕಂದಾ**
ಸಾವಾಗವ್ವಾ ಎಂದೆಯೊ **ಕಂದಾ** ॥

ಅಂತ್ಯ ಪ್ರಾಸವಾಗಬೇಕಾದರೆ ಕಡೆಯ ವ್ಯಂಜನದ ಸ್ವರ ಕೂಡಾ ಒಂದೇ ವಿಧವಾಗಿರಬೇಕು. 'ಮಗನೇ' ಎಂಬ ಪದಕ್ಕೆ 'ಮಗನೂ' ಎಂಬ ಪದ ಅಂತ್ಯ ಪ್ರಾಸಾಕ್ಷರವಾಗಿ ಬರಕೂಡದು.

ಆದಿಪ್ರಾಸದಲ್ಲಿ ಸಿಂಹ, ಗಜ, ವೃಷಭ, ಅಜ, ಹಯ, ಶರಭ ಪ್ರಾಸಗಳೆಂಬ ಆರು ವಿಧಗಳಿವೆ. ಛಂದೋಬುಧಿಕಾರನು ಇವುಗಳ ಲಕ್ಷಣಗಳನ್ನು ಹೀಗೆ ನಿರೂಪಿಸಿರುವನು.

**ಉದಾಹರಣೆ :**

ನಿಜದಿಂ ಬಂದೊಡೆ ಸಿಂಹಂ
ಗಜದೀರ್ಘಂ ಬಿಂದು ವೃಷಭ ವ್ಯಂಜನ ಶರಭಂ



11th_Kannada_Reader_Final_16-07-2018.indd 171 16-07-2018 18:43:16

ಅಜಂ ವಿಸರ್ಗಂ ಹಯಮಂ

ಬುಜಮುಖಿ ದಡ್ಡಕ್ಕರಂಗಳಿವು ಷಟ್‌ಪ್ರಾಸಂ ॥

ಪ್ರತಿಪಾದದ ಎರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ಒಂದು ವ್ಯಂಜನವು ಬಂದು ಅದರ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಸಿಂಹಪ್ರಾಸ ದೀರ್ಘವಾಗಿದ್ದರೆ ಗಜಪ್ರಾಸ. ಎಂದರೆ ಪ್ರಾಸಾಕ್ಷರದ ಹಿಂದಿನ ಅಕ್ಷರವು ಸ್ವರದಿಂದ ಕೂಡಿದ್ದರೆ ಅದು ಗಜಪ್ರಾಸ. ಉದಾಹರಣೆ :

**ಸಿಂಹ ಪ್ರಾಸ**

ಗಿರಿಗಳ್ ಪರಮಾಣುಗಳೆನೆ

ಸರೋಜ ಭವನೀ ಕರೀನ್ದ್ರಮಂ ಮಾಡಿದೆನೆಂ

ದಿರದಿದರ ಕಾಯಬಲಮಂ

ನಿರೂಪಿಸಲ್ ನಾಗರಾಜನಂ ನೆಱೆದಪನೇ ॥

**ಗಜಪ್ರಾಸ**

ವೇಷವನೂ ವೇಶಿಯನೂ ಸರಿಯೆಂಬೆ

ವೇಷವು ಲೋಕವ ಹಾರುವುದು

ವೇಶಿಯೂ ಲೋಕವ ಹಾರುವಳು

ವೇಷವ ಹೊತ್ತು ಲೋಕವ ಹಾರದಿದ್ದರೆ ಆತನ

ಈಶ್ವರನೆಂಬೆ ರಾಮನಾಥಾ ॥

**ವೃಷಭಪ್ರಾಸ**

ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಒಂದು ವ್ಯಂಜನವಾಗಲೀ, ಅನೇಕ ವ್ಯಂಜನಗಳಿಗಾಗಲೀ ಹಿಂದೆ ಅನುಸ್ವಾರವಿರಲು ವೃಷಭಪ್ರಾಸ, ವಿಸರ್ಗವಿರಲು ಅಜಪ್ರಾಸ.

ಒಂದು ವ್ಯಂಜನಕ್ಕೆ :

ಕಂಸವಧಂಗೆಯ್ದ ಮುರ

ಧ್ವಂಸಿಗೆ ಪೂಜಾರ್ಥಮೆಂದು ಮಾರುತ ಕೊಟ್ಟೆಂ ॥

ನೀಂ ಸಭೆಯಂ ಕೊಣ್ಡುಯ್ವುದಿ

ದಂ ಸಲಿಸಿದೆನೆಂದು ವಜ್ರಿ ನುಡಿವುದುಮಾಗಳ್ ॥

ಎರಡು ವ್ಯಂಜನಗಳಿಗೆ :

ಸಂಗ್ರಹಣಶೀಲ ಮನುಜನ

ವಂಗ್ರಹ ಯಾಳುವೆನಿಸಿರ್ಕ್ಕುಮೀ ಜನ ತತಿಯೊಳ್ ॥

**ಅಜಪ್ರಾಸ**

ಒಂದು ವ್ಯಂಜನಕ್ಕೆ :



11th_Kannada_Reader_Final_16-07-2018.indd 172 16-07-2018 18:43:16

ಅಃ ಪೊರೆವನಿವನೆ ಪರಮ ಯ

ಶಃ ಪಾತ್ರನೆನಲ್ಕೆ ಜನಮನಿನಿಸಲಸದೆಯುಂ ॥

ಅಃ ಪೇಟಲದೇನಿವನಿಂ

ಸ್ಷಃ ಪದವಾಚ್ಯಂ ಸಮಂತು ಮೆಱೆವೀದೇಶಂ ॥

ಎರಡು ವ್ಯಂಜನಗಳಿಗೆ :

ಅಃ ಪ್ರಥಮನನುಟಿದಿಂತ ಯ

ಶಃ ಪ್ರಾರ್ಥನೆಯಿಂದೆ ಗೆಯ್ವುದುಚಿತಮೆ ನಿನಗಂ ॥

**ಶರಭಪ್ರಾಸ**

ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ವಿಜಾತೀಯ ಸಂಯುಕ್ತ ವ್ಯಂಜನಗಳು ಬಂದು ಅವುಗಳ ಹಿಂದೆ ಅನುಸ್ವಾರ ವಿಸರ್ಗಗಳಿಲ್ಲದಿರಲು ಶರಭ ಪ್ರಾಸವಾಗುವುದು.

ಎರಡು ವ್ಯಂಜನಗಳ ಸಂಯೋಗಕ್ಕೆ

ಆ ಕ್ಷಣದೊಳ್ ಪರಸ್ಪರ ನಿರೀಕ್ಷಣದಿಂ ಮುಳಿಸುಣ್ಮೆ ಪೊಣ್ಮೆ ರ

ಕ್ತೇಕ್ಷಣರಾತ್ಮಶಕ್ತಿಗೆ ಶರೀರ ಬಲಕ್ಕನುರೂಪಮಪ್ಪುದಂ ॥

ಲಕ್ಷಣಯುಕ್ತಮಪ್ಪ ಗದೆಯಂ ತಳೆದಿರ್ವರುಮಿರ್ವಲಂ ಬಿಗು

ರ್ತೀಕ್ಷಿಸೆ ಮೀಱಿದರ್ ವಿಕಟಶೃಂಗ ಸಮಗ್ರಕುಲಾಚಲಂಗಳಂ ॥

ಮೂರು ವ್ಯಂಜನಗಳ ಸಂಯೋಗಕ್ಕೆ

ಇನ್ದ್ರಂಬೊಲ್ ವಿಭವಯುತಂ

ಚನ್ದ್ರಂಬೊಲ್ ಕಾಂತಿವಂತನಾದಿತ್ಯಂಬೊಲ್ ॥

ಸಾನ್ದ್ರ ಪರಿಪೂರ್ಣ ತೇಜನು

ಪೇನ್ದ್ರಂಬೊಲ್ ನೀತಿನಿಪುಣನಾ ನರನಾಥಂ ॥

**ಹಯಪ್ರಾಸ**

ಪ್ರತಿಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಸಜಾತೀಯ ಸಂಯುಕ್ತ ವ್ಯಂಜನಗಳು ಬರಲು ಹಯಪ್ರಾಸವೆನಿಸುವುದು

ನಿನ್ನನೆ ನಚ್ಚಿದಂ ಕುರುಮಹೀಪತಿ ನಿನ್ನ ಶರಾಳಿಗಳ್ಗೆ ಮು

ನ್ನನ್ನಡುಗುತ್ತಮಿರ್ಮದರಿಸಾಧನ ಸಂಪದಮಂತೆ ಶಸ್ತ್ರಸಂ ॥

ಪನ್ನನೆ ಆಗಿ ಶಲ್ಯನನೆ ಸಾರಥಿಯಾಗಿರೆ ಮಾಡಿ ಕಾದು ನೀಂ

ನಿನ್ನಯ ಬಲ್ಲ ಮಾಟಕ್ಕೆಯೊಳಿದಂ ನುಡಿದೆಂ ನಿನಗಂಗವಲ್ಲಭಾ ॥



11th_Kannada_Reader_Final_16-07-2018.indd 173 16-07-2018 18:43:16

## ವರ್ಣಗಣ (ಅಕ್ಷರಗಣ) ವೃತ್ತಗಳು

ಕನ್ನಡದಲ್ಲಿ ಬಳಕೆಯಲ್ಲಿರುವ ವರ್ಣವೃತ್ತಗಳು ಸಂಸ್ಕೃತ ಛಂದಸ್ಸಿನಿಂದ ಬಂದವುಗಳು. ಅವುಗಳಲ್ಲಿ ಸಮ, ಅರ್ಧ ಸಮ ಮತ್ತು ವಿಷಮ ಎಂಬ ಮೂರು ಜಾತಿಯ ವೃತ್ತಗಳಿವೆ. ಇವುಗಳಿಗೆ ನಾಲ್ಕೇ ಪಾದಗಳಿರುತ್ತವೆ. ನಾಲ್ಕು ಪಾದಗಳಲ್ಲಿಯೂ ಒಂದೇ ಲಕ್ಷಣವಿರುವುದು ಸಮವೃತ್ತ. ಒಂದು ಮೂರನೆಯ ಪಾದಗಳೂ ಎರಡು ನಾಲ್ಕನೆಯ ಪಾದಗಳೂ ಸಮಾನವಾಗಿರುವುದು ಅರ್ಧ ಸಮವೃತ್ತ. ನಾಲ್ಕು ಪಾದಗಳೂ ಬೇರೆ ಬೇರೆ ಲಕ್ಷಣದಿಂದ ಕೂಡಿರುವುದು ವಿಷಮವೃತ್ತ. ಇದು ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಸಮವೃತ್ತಗಳಲ್ಲಿ ಒಂದರಿಂದ ಇಪ್ಪತ್ತಾರರವರೆಗೆ ಅಕ್ಷರಗಳಿರುವ ವೃತ್ತಗಳಿವೆ. ಕನ್ನಡಿಗರು ಸಂಸ್ಕೃತ ಛಂದಸ್ಸಿನಿಂದ ಹೆಚ್ಚಾಗಿ ಆರಿಸಿಕೊಂಡ ಛಂದಸ್ಸುಗಳೆಂದರೆ ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ. ಇವುಗಳನ್ನು ಖ್ಯಾತ ಕರ್ನಾಟಕಗಳೆಂದು ಹೇಳುವರು.

## ಮಾತ್ರಾಗಣ ವೃತ್ತಗಳು

ಕನ್ನಡ ಛಂದಸ್ಸಿನ ಪದ್ಯಗಳೆಲ್ಲ ಮಾತ್ರಾಗಣ ವೃತ್ತಗಳೇ ಆಗಿವೆ. ದ್ವಿಪದಿ, ಚೌಪದಿ, ಷಟ್ಪದಿ, ರಗಳೆ ಮೊದಲಾದವುಗಳು ಕನ್ನಡ ಭಾಷೆಯ ಛಂದಸ್ಸುಗಳಾಗಿವೆ. ಬ್ರಹ್ಮಗಣ, ವಿಷ್ಣುಗಣ, ರುದ್ರಗಣಗಳೆಂಬ ಕನ್ನಡದ ಅಂಶಗಣಗಳೇ ರೂಪಾಂತರ ಹೊಂದಿ ಈ ಮಾತ್ರಾಗಣ ನಿಯಮವನ್ನು ಪಡೆದುವು. ತ್ರಿಪದಿ, ಸಾಂಗತ್ಯ, ಪಿರಿಯಕ್ಕರ ಮೊದಲಾದವು ಅಂಶಗಣ ವೃತ್ತಗಳಾಗಿಯೇ ಉಳಿದಿವೆ. ಇವುಗಳನ್ನು ಕೂಡ ಕೆಲವರು ಮಾತ್ರಾಗಣ ನಿಯಮದ ಪದ್ಯಗಳೆಂದು ತಿಳಿಯುವರು.

### ಷಟ್ಪದಿಗಳು

ಷಟ್ಪದಿಗಳು ಆರು ಪಾದಗಳುಳ್ಳ ಮಾತ್ರಾ ವೃತ್ತಗಳು. ಇವುಗಳ ಒಂದು, ಎರಡು, ನಾಲ್ಕು, ಐದನೆಯ ಪಾದಗಳು ಒಂದು ಸಮವಾಗಿಯೂ; ಮೂರನೆಯ ಮತ್ತು ಆರನೆಯ ಪಾದಗಳು ಒಂದು ಸಮವಾಗಿಯೂ ಇರುತ್ತವೆ. ಮೂರನೆಯ ಮತ್ತು ಆರನೆಯ ಪಾದಗಳಲ್ಲಿ ಒಂದೆರಡನೆಯ ಪಾದಗಳ ಒಂದೂವರೆ ಪಾಲಷ್ಟು ಗಣಗಳೂ, ಜೊತೆಗೆ ಒಂದು ಗುರುವೂ ಇರುತ್ತವೆ. ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕಗಳೆಂದು ಆರು ವಿಧಗಳಿವೆ. ಛಂದೋಂಬುಧಿಕಾರನು ಒಂದು ಕಂದ ಪದ್ಯದಲ್ಲಿ ಈ ಆರು ಷಟ್ಪದಿಗಳ ಹೆಸರುಗಳನ್ನು ಅವುಗಳ ಪ್ರಥಮ ಪಾದದ ಮಾತ್ರೆಗಳ ಸಂಖ್ಯೆಯನ್ನೂ ನಿರೂಪಿಸಿರುವನು.

**ಉದಾಹರಣೆ :**

**ಶರ, ಕುಸುಮ, ಭೋಗ, ಭಾಮಿನಿ**

**ಪರಿವರ್ಧಿನಿ, ವಾರ್ಧಕಂಗಳೆಂದಾರು ತೆರಂ**

| | | | | |
|---|---|---|---|---|
| 8 | 10 | 12 | 14 | 16 |
| ಕರಿ | ದಶ | ರವಿ | ಮನು | ರಾಜರ್ |

20

ಬರೆ, ವಿಂಶತಿ ಮಾತ್ರೆಯಿಂದೆ ಷಟ್ಪದಿ ನಡೆಗುಂ

ನಾಗವರ್ಮನ ಪ್ರಕಾರ ಷಟ್ಪದಿಯ ಲಕ್ಷಣ ಈ ರೀತಿಯಿದೆ.

**ಮಂದರ ಧರ ಗಣ**

**ಬಂದಿರ್ಕುಂತ್ಯದೊಳ್**



11th_Kannada_Reader_Final_16-07-2018.indd 174 16-07-2018 18:43:16

**ಕುಂದದೆ ನೆಲಸುಗೆ ಮದನಹರಂ ॥**

**ಇಂದು ನಿಭಾನನೆ**

**ಮುಂದಣ ತೆಱನುಮೀ**

**ಯಂದಮೆಯಾಗಲೆ ಷಟ್ಪದಿ ಕೇಳ್ ॥**

ಇದು ಅಂಶಗಣ ಸಹಿತವಾಗಿದೆ.

## ಶರ ಷಟ್ಪದಿ

ನಾಲ್ಕು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಮೂರು ಮತ್ತು ಒಂದು ಗುರುವೂ ಇರಲು ಶರಷಟ್ಪದಿಯೆನಿಸುವುದು. ಇದರಲ್ಲಿ ನಡುವೆ ಎಲ್ಲೂ ಜಗಣ(– ᴗ –)ವು ಬರಬಾರದು.

**ಉದಾಹರಣೆ :**

– ᴗ ᴗ ᴗ ᴗ ᴗ ᴗ

ಈಶನ | ಕರುಣೆಯ

– ᴗ ᴗ ᴗ ᴗ ᴗ ᴗ

ನಾಶಿಸು | ವಿನಯದಿ

– ᴗ ᴗ – ᴗ ᴗ – ᴗ ᴗ –

ದಾಸನ | ಹಾಗೆಯೆ | ನೀ ಮನ | ವೇ ॥

ಕ್ಲೇಶದ ವಿಧ ವಿಧ

ಪಾಶವ ಹರಿದು ವಿ

ಲಾಸದಿ ಸತ್ಯವ ತಿಳಿ ಮನವೇ ॥

## ಕುಸುಮ ಷಟ್ಪದಿ

ಐದು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಐದು ಮಾತ್ರೆಯ ಗಣಗಳು ಮೂರು ಮೂರೂ ಮತ್ತು ಒಂದು ಗುರುವೂ ಇರಲು ಕುಸುಮ ಷಟ್ಪದಿಯೆನಿಸುವುದು. ಇದರಲ್ಲಿ ನಡುವೆ ಎಲ್ಲೂ ಜಗಣ(–ᴗ–), ಯಗಣ(ᴗ – –)ಗಳು ಬರಬಾರದು.

**ಉದಾಹರಣೆ :**

– ᴗ ᴗ ᴗ ᴗᴗᴗ ᴗ ᴗ

ನಾಡು ಮನ | ಸಿಜನೊಲವಿ

– ᴗ ᴗ ᴗ – ᴗ –

ನಾಡುವೆಡೆ | ಸಂತತಂ

–ᴗ ᴗᴗ ᴗᴗᴗ ᴗᴗ ᴗ ᴗ–ᴗ –

ಬೀಡು ರತಿ | ಪತಿಗೆ ಸತ | ತ ನಿಧಾನ | ವು ॥



11th_Kannada_Reader_Final_16-07-2018.indd 175 16-07-2018 18:43:16

ನೋಡಿದನಿಮಿಷಪತಿಗೆ

ಮಾಡುವುದು ವಿನಯವನು

ನಾಡಾಡಿಯವರ್ಗೆ ಬಣ್ಣಿಸಲು ಮೊಗ್ಗೇ ॥

## ಭೋಗ ಷಟ್ಪದಿ

ಮೂರು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು; ಮೂರು, ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಬರಲು ಭೋಗಷಟ್ಪದಿಯೆನಿಸುವುದು. ಇದರಲ್ಲಿ ಜಗಣ(ᴗ–)ವು ಬರಬಾರದು.

**ಉದಾಹರಣೆ :**

ᴗ ᴗ ᴗ – ᴗ – ᴗ – ᴗ

ಮೆರೆಯು | ತಿದ್ದ | ಭಾಗ್ಯ | ವೆಲ್ಲ

ᴗ ᴗ ᴗ – ᴗ ᴗᴗᴗ ᴗᴗᴗ

ಹಜಿದು | ಹೋಯಿ | ತೆನುತ | ತಿರುಕ

ᴗᴗᴗ – ᴗ – ᴗ – ᴗ ᴗ ᴗ ᴗ – ᴗ –

ಮರಳಿ | ನಾಚಿ | ಪೋಗು | ತಿದ್ದ | ಮರುಳ | ನಂತೆ | ಯೇ ॥

ಧರೆಯ ಭೋಗವನ್ನು ಮೆಚ್ಚಿ

ಪರವ ಮಱೆತು ಕೆಡಲು ಬೇಡ

ಧರೆಯ ಭೋಗ ಕನಸಿನಂತೆ ಕೇಳು ಮಾನವಾ ॥

## ಭಾಮಿನೀ ಷಟ್ಪದಿ

ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣವು ಬರುವಂತೆ ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಈ ಗಣಗಳು ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಮೂರು ಮೂರೂ ಮತ್ತು ಒಂದು ಗುರುವೂ ಇದ್ದಲ್ಲಿ ಭಾಮಿನೀ ಷಟ್ಪದಿಯೆನಿಸುವುದು. ಇದರಲ್ಲಿ ಈ ᴗ–ᴗ ಗಣವು ಬರಬಾರದು.

**ಉದಾಹರಣೆ :**

ᴗᴗᴗ ᴗ ᴗ – – ᴗ ᴗᴗ–

ವರುಷ | ಹದಿನಾ | ರಾಯ್ತು | ಧರಣೀ

ᴗᴗᴗ ᴗ ᴗ ᴗ ᴗ – ᴗ – ᴗ ᴗ

ಶ್ವರನ | ಹಿರಿಯ ಮ | ಗಂಗೆ | ಭೀಮಗೆ

ᴗᴗᴗ ᴗᴗ– – ᴗ ᴗᴗᴗᴗ – ᴗ ᴗ ᴗ – –

ವರುಷ | ಹದಿನೈ | ದರ್ಜು | ನಗೆ ಹದಿ | ನಾಲ್ಕು | ಹದಿಮೂ | ರು ॥

ಕಿರಿಯರಿಬ್ಬರಿಗೆ ನಿಬರಾ ಮುನಿ



11th_Kannada_Reader_Final_16-07-2018.indd 176 16-07-2018 18:43:16

ವರರಿನಧ್ಯಯನಾದಿ ವಿದ್ಯಾ

ನಿರತರಾದರು ಬಂದುದೊಂದು ವಸಂತಮಯ ಸಮಯ ॥

## ಪರಿವರ್ಧಿನೀ ಷಟ್ಪದಿ

ಚತುರ್ಮಾತ್ರಾ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು, ಮೂರು; ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಇದ್ದಲ್ಲಿ ಅದು ಪರಿವರ್ಧಿನೀ ಷಟ್ಪದಿಯೆನಿಸುವುದು. ಇದರಲ್ಲಿ ಈ ∪–∪ ಗಣವು ಬರಬಾರದು.

**ಉದಾಹರಣೆ :**

∪∪∪∪ – ∪ ∪ ∪ ∪ ∪ ∪ – ∪ ∪

ದುರಿತವ | ನಂಬೆಳೆ | ವುದಕೆ ಪೊ | ಲಂ ಕೊಲೆ

∪∪∪∪ ∪ ∪ ∪ ∪ – ∪ ∪ ∪ ∪ –

ಪರಕಲಿ | ಸಿದ ನವ | ದೋಹಳ | ಮನ್ಯತಂ

∪∪– ∪∪∪∪ ∪∪∪∪ – – – – ∪∪ – –

ಪರಿಕಾ | ಲುದಕಮ | ದಕೆಕಳ | ವನ್ಯ | ಸ್ತ್ರೀ ಸಂ | ಗಮೆ ಗೆ | ಯ್ಮೆ ॥

ಪರಿರಕ್ಷಣೆಯತಿಕಾಂಕ್ಷೆಯದಱಿನವು

ನಿರುತಂ ಪೊರ್ದದೊಡಿಲ್ಲಂ ಸಂಸ್ಕೃತಿ

ಯುರುಕಿಲ್ಬಿಷಮೆಲ್ಲಿಯದು ವಿಚಾರಿಸೆ ಭವ್ಯಜನೋತ್ತಂಸಾ ॥

## ವಾರ್ಧಕ ಷಟ್ಪದಿ

ಪಂಚಮಾತ್ರಾ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು ಮಾತ್ರೆಯ ಗಣಗಳು ಮೂರು; ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಇದ್ದಲ್ಲಿ ಅದು ವಾರ್ಧಕ ಷಟ್ಪದಿಯೆನಿಸುವುದು. ಇದರಲ್ಲಿ ಈ ∪–∪∪, ∪ – – ಗಣವು ಬರಬಾರದು.

**ಉದಾಹರಣೆ :**

∪∪–∪ – ∪ – – ∪ ∪ ∪ – ∪ –

ಜನನಾಥ | ಕೇಳ್ ಮಯೂ | ರ ಧ್ವಜ ಮ | ಹೀಶ್ವರಂ

∪∪–∪ ∪ ∪ ∪ – ∪ ∪ ∪ – – ∪ ∪ ∪

ದಿನನಾಥ | ನುದಯದೊಳ್ | ವಿಮಲ ಸಂ | ಧ್ಯಾ ವಿಧಿಯ

∪∪∪∪∪ –∪– ∪ ∪ ∪ – – ∪– ∪∪–∪ – ∪∪∪ –

ನನುಕರಿಸಿ | ಕೃಷ್ಣನಿ | ದ್ದೆಡೆಗೆ ತಾಂ | ಪೋಗಿ ಕಂ | ಡಪೆನೆಂಬ | ಕಾರಿಯವ | ನು ॥

ಮನದೊಳಗೆ ನಿಶ್ಚೈಸಿ ಪೊರಮೊಡುವನಾಗಿ ನಿಜ

ತನುಜನಂ ಕರೆಸಿ ಮಂತ್ರಿಗಳೆಲ್ಲರಂ ಬರಿಸಿ



11th_Kannada_Reader_Final_16-07-2018.indd 177 16-07-2018 18:43:16

ವಿನುತ ಭೂಸುರ ನೃಪಾಲ ಸ್ತೋಮ ದೊಡಗೂಡಿ ಕುಳ್ಳಿರ್ದನೋಲಗದೊಳು ॥

## ದ್ವಿಪದಿ

ದ್ವಿಪದಿ ಎಂದರೆ ಎರಡು ಪಾದಗಳುಳ್ಳ ಪದ್ಯ. ದ್ವಿಪದಿ, ತ್ರಿಪದಿ, ಚೌಪದಿ, ಸಾಂಗತ್ಯ ಮೊದಲಾದವುಗಳು ಹಾಡಿನ ರೂಪದಲ್ಲಿರುವುದರಿಂದ ಇವನ್ನು ಹಾಡಿನ ವೃತ್ತಗಳು ಎನ್ನುವುದುಂಟು. ದ್ವಿಪದಿಗಳಲ್ಲಿ ಎರಡು ವಿಧಗಳಿವೆ. ಮೊದಲನೆಯ ರೀತಿಯ ದ್ವಿಪದಿಯ ಪ್ರತಿಪಾದದಲ್ಲಿ ಐದು ಮಾತ್ರೆಯ ಒಂದು ಗಣ ಇದ್ದು, ಒಟ್ಟು ಹತ್ತೊಂಬತ್ತು ಮಾತ್ರೆಗಳಿರುತ್ತವೆ.

**ಉದಾಹರಣೆ :**

| ಪರಮಾತ್ಮ | ನಾರೆಂದು | ಚಿರವಗೊಳಿ | ಸುವೆಯಾ | 5x3+4=19 |
|---|---|---|---|---|
| ಇರುವನವ | ನೆತ್ತಲೆಂ | ದರಿಯಲೆಳ | ಸುವೆಯಾ ॥ | 5x3+4=19 |

ಎರಡನೆಯ ವಿಧದ ದ್ವಿಪದಿಯ ಪ್ರತಿಪಾದದಲ್ಲಿ 3+4+3+4+3+4+3+2 ಹಾಗೂ ಒಂದು ಗುರು ಎಂಬಂತೆ ಗಣಗಳಿದ್ದು, ಒಟ್ಟು 26 ಮಾತ್ರೆಗಳಿರುತ್ತವೆ.

**ಉದಾಹರಣೆ :**

| ಮಗನೆ | ನೀನಿಂ | ತಳಿಯೆ | ಸೈರಿಪೆ | ನೆಂತೊ | ಪೇಳ್ಕೈ | ಶಂಕ | ರಾ |
|---|---|---|---|---|---|---|---|
| ಸುಗುಣ | ನಿಧಿ ನೀ | ನೆಮ್ಮ | ಮೊರೆಗಳ | ನೊಮ್ಮೆ | ಕೇಳ್ಕೈ | ಶಂಕ | ರಾ ॥ |

## ರಗಳೆಗಳು

ಸಮಾನವಾದ ಮಾತ್ರಾಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆಯೆನಿಸುವುದು. ಇದರಲ್ಲಿ ಪ್ರಾಸವು ಇತರ ವೃತ್ತಗಳಲ್ಲಿರುವಂತೆ ನಿಯತವಾದ ಸ್ಥಾನದಲ್ಲಿರುವುದಿಲ್ಲ. ಪಾದದ ಆದಿಯಲ್ಲಾಗಲಿ, ಮಧ್ಯದಲ್ಲಾಗಲಿ, ಅಂತ್ಯದಲ್ಲಾಗಲಿ, ಆದಿಮಧ್ಯಾಂತಗಳಲ್ಲಾಗಲಿ ಪ್ರಾಸಗಳಿರುತ್ತವೆ. ಮಂದಾನಿಲ, ಲಲಿತ ಮತ್ತು ಉತ್ಸಾಹಗಳೆಂಬ ಮೂರು ವಿಧದ ರಗಳೆಗಳು ಹಳೆಯ ಕಾವ್ಯಗಳಲ್ಲಿ ಪ್ರಸಿದ್ಧವಾಗಿವೆ.

### ಮಂದಾನಿಲ ರಗಳೆ

**ಉದಾಹರಣೆ**

| ಹಾವು ಕ | ಡಿ ಯೆ ಹಾ | ಎಂದೆಯೊ | ಕಂದಾ |
|---|---|---|---|



11th_Kannada_Reader_Final_16-07-2018.indd 178 16-07-2018 18:43:16

– –  – –  – ᴗ ᴗ  – –

ಸಾವಾ | ಗವ್ವಾ | ಎಂದೆಯೊ | ಕಂದಾ ॥

ಹಾಡುವ ಬಾಯೊಳು ಸುಣ್ಣವ ಹೊಯ್ದೇ

ನೋಡುವ ಕಣ್ಣೊಳು ಸುಣ್ಣವ ಹೊಯ್ದೇ ॥

ಮಂದಾನಿಲ ರಗಳೆಯಲ್ಲಿ ನಾಲ್ಕು ನಾಲ್ಕು ಮಾತ್ರೆಗಳಿರುವ ನಾಲ್ಕು ಗಣಗಳಿದ್ದು ಒಟ್ಟು ಹದಿನಾರು ಮಾತ್ರೆಗಳಿವೆ. ಈ ಪದ್ಯದಲ್ಲಿ ಆದಿ ಮಧ್ಯಾಂತ್ಯ ಪ್ರಾಸ ನಿಯಮವನ್ನು ಮೀರಿಲ್ಲ. ಇದರಲ್ಲಿ ಇಂತಿಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲ. ಪ್ರಾಸಕ್ಕಾಗಿ ಎರಡೆರಡು ಪಾದಗಳನ್ನು ಒಂದು ಅಂಶವಾಗಿ ಗಮನಿಸಲಾಗುತ್ತದೆ.

## ಲಲಿತ ರಗಳೆ

## ಉದಾಹರಣೆ

ᴗᴗ–ᴗ  – ᴗ –  – ᴗ –  ᴗᴗ–ᴗ

ಶಿವನೂರು | ದಂಡದಿಂ | ದಾದ ಬಾ | ಳೆಗಳಿಲ್ಲಿ

ᴗᴗᴗᴗᴗ  ᴗᴗ–ᴗᴗ  – ᴗ –  ᴗᴗ–ᴗ

ಶಿವನಕರ | ನಖದಿಂದ | ಲಾದ ಕೇ | ತಕಿಯಿಲ್ಲಿ ॥

ಹರನ ಚರಣಂಗಂಡು ಬೆಳೆದಸರಜದದಿಲ್ಲಿ

ಹರ ಕಾಂತಿಯಿಂದಾದ ವಿಮಳ ಸರಸಿಗಳಿಲ್ಲಿ ॥

ಲಲಿತ ರಗಳೆಯಲ್ಲಿಯೂ ಇಂತಿಷ್ಟೇ ಚರಣಗಳಿರಬೇಕೆಂಬ ನಿಯಮವಿಲ್ಲ. ಇದರ ಪ್ರತಿಪಾದದಲ್ಲಿಯೂ ಐದು ಮಾತ್ರೆಯ ನಾಲ್ಕು ಗಣಗಳು ಇದ್ದು ಒಟ್ಟು ಇಪ್ಪತ್ತು ಮಾತ್ರೆಗಳಿರುತ್ತವೆ.

## ಉತ್ಸಾಹ ರಗಳೆ

ನಾಗವರ್ಮನು ಛಂದೋಂಬುಧಿಯಲ್ಲಿ ಉತ್ಸಾಹ ರಗಳೆಗೆ ಪ್ರತಿಪಾದದಲ್ಲಿ ಮೂರು ಮಾತ್ರೆಯ ಎಂಟು ಗಣಗಳಿದ್ದು 24 ಮಾತ್ರೆಗಳಿವೆಯೆಂದು ಹೇಳಿರುವನು.

## ಉದಾಹರಣೆ

–ᴗ  –ᴗ  –ᴗ  ᴗᴗᴗ  –ᴗ  –ᴗ  ᴗ–  ᴗᴗᴗ

ಅಟ್ಟ | ಅನ್ನ | ವುಣ್ಣ | ಬಿಡನು | ಕೊಟ್ಟ | ಸಾಲ | ಕೇಳ | ಬಿಡನು

–ᴗ  ᴗᴗᴗ  – ᴗ  ᴗᴗᴗ  –ᴗ  ᴗᴗᴗ  ᴗᴗᴗ  ᴗᴗᴗ

ಪೆಟ್ಟಿ | ಯೊಳಿಹ | ಚಿನ್ನ | ದೊಡವೆ | ತೊಟ್ಟೆ | ನೆನಲು | ಯಮನು | ಬಿಡನು ॥

ಆದರೆ ಇದು ಮೂರು ಮಾತ್ರೆಯ ನಾಲ್ಕು ಗಣಗಳಿರುವ ಪಾದಗಳಿಂದ ಕೂಡಿದೆಯೆಂದು ಆಧುನಿಕರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಅವರು ಈ ಕೆಳಗಿನ ಪದ್ಯವನ್ನು ಉದಾಹರಿಸುತ್ತಾರೆ.



11th_Kannada_Reader_Final_16-07-2018.indd 179  16-07-2018 18:43:16

**ಉದಾಹರಣೆ**

ು ು ು – ು – ು – ು

ಕುಳಿರ್ವ | ಪೂಗೊ | ಳಂಗ | ಳಲ್ಲಿ

ುುು – ು – ು – ು

ತಳಿರ | ಕಾವ | ಣಂ ಗ | ಳಲ್ಲಿ ॥

ತುಂಬಿವಿಂಡಿನಂತೆ ಪಾಡಿ

ಜಕ್ಕ ವಕ್ಕಿ ಯಂತೆ ಕೂಡಿ ॥

**ಸರಳ ರಗಳೆ**

– – ು ುುುುು – – ು ುು–ು

ಬಾ ಕಂದ | ಹಿರಿಗುವರ | ಬಾರೆನ್ನ | ಬಿಗಿದಪ್ಪು

– – ು –ುುು –ುುು ುು ುುು

ಉಪ್ಪನ್ನ | ವಿತ್ತವಗೆ | ತಪ್ಪೆಣಿಸ | ದಿರು ಮಗನೆ ॥

**ಹೇಡಿಯೆನೆ ಹಿಂದುಳಿಯದಿರು ರಣದಿ ಬೇಡುವೆಂ**

**ಚಂದ್ರವಂಶದ ಕುಡಿಯ ಕಾಪಾಡು, ತೊಟ್ಟ ಶರ**

**ಮಂ ಬರಳಿ ಮರೆತು ಬಿಡು, ನಿನಗಕ್ಕೆ ಮಂಗಳಂ ॥**

ಇದು ಸರಳ ರಗಳೆ. ಇದರ ಪ್ರತಿಪಾದದಲ್ಲಿ ಐದೈದು ಮಾತ್ರೆಗಳ ನಾಲ್ಕು ಗಣಗಳಿವೆ. ಪಾದ ಮತ್ತು ಪ್ರಾಸದ ನಿಯಮಗಳು ಇಲ್ಲಿಲ್ಲ. ಆಧುನಿಕ ಕನ್ನಡ ಕಾವ್ಯದಲ್ಲಿ ಸರಳ ರಗಳೆ ತುಂಬ ಪ್ರಸಿದ್ಧವಾಗಿದೆ.

## ಕಂದ ಪದ್ಯ

ಯಾವ ಹಳೆಯ ಕಾವ್ಯವನ್ನು ತೆಗೆದು ನೋಡಿದರೂ ಅದರಲ್ಲಿ ಕಂದಗಳ ಸಂಖ್ಯೆ ಇತರ ವೃತ್ತಗಳಿಗಿಂತ ಅಧಿಕ. ಹಾಗೆಯೇ ಅದೊಂದು ಹಾಡುಗಳ ಸಾಲಿಗೆ ಸೇರಿದ ಬಂಧ. ಇದು ಮಾತ್ರಾ ವೃತ್ತಗಳ ಮತ್ತು ವರ್ಣ ವೃತ್ತಗಳ ಮಿಲನದಿಂದಾದ ಬಂಧವಾಗಿದೆ.

ಕಂದದಲ್ಲಿ ನಾಲ್ಕು ಪಾದಗಳಿವೆ. ಚತುರ್ಮಾತ್ರಾ ಗಣವು ಒಂದು, ಮೂರನೆಯ ಪಾದಗಳಲ್ಲಿ ಮೂರು ಮೂರು(ಹನ್ನೆರಡು ಮಾತ್ರೆಗಳು); ಎರಡು, ನಾಲ್ಕನೆಯ ಪಾದಗಳಲ್ಲಿ ಐದೈದು (ಇಪ್ಪತ್ತು ಮಾತ್ರೆಗಳು) ಇರಬೇಕು. ಪೂರ್ವೋತ್ತರಾರ್ಧಗಳ ವಿಷಮ ಸ್ಥಾನಗಳಲ್ಲಿ ಮಧ್ಯೆ ಗುರುವುಳ್ಳ ಗಣಗಳು ಬರಕೂಡದು. ಆರನೆಯ ಸ್ಥಾನದಲ್ಲಿ ಜಗಣ(ು–ು)ವಾಗಲೀ ನಾಲ್ಕು ಲಘುವುಳ್ಳ ಗಣ(ುುು)ವಾಗಲೀ ಬಂದು ಮೊದಲಿನ ಹ್ರಸ್ವದ ಮುಂದೆ ಯತಿ ಇರಬೇಕು. ಎಂಟನೆಯ ಸ್ಥಾನಗಳಲ್ಲಿ ಅಂತ್ಯ ಗುರುವುಳ್ಳ ಗಣ (ು ು _ _ _)ಗಳೇ ಬರಬೇಕು.

**ಉದಾಹರಣೆ**

ುುುು ು ು – ುು –

ಪುಸಿಯೆನೆ | ರಥಮಂ | ಹರಿ ಚೋ



11th_Kannada_Reader_Final_16-07-2018.indd 180 16-07-2018 18:43:16

ಽ ಽ–  ಽ ಽ –  ಽ – ಽ  ಽಽ–  ಽಽ–

ದಿಸುವಂ | ತೆ ವೊಲಿ | ರ್ದ ದೆಂತು | ನರನಂ | ಗೆಲಿಪಂ ॥

ಽಽಽಽ  ಽ – ಽ  – –

ವಿಸಸನ | ದೊಳಂತೆ | ನೀ ಮುಂ

ಽ ಽ–  – –  ಽ – ಽ  – –  – –

ಪೆಸರಂ | ಕರ್ಣಂ | ಗೆ ಮಾಡಿ | ಗೆಲ್ಲಂ | ಗೊಳ್ಳಿಂ ॥

## ಅಂಶಗಣ ವೃತ್ತಗಳು

ಅಂಶ ಗಣಗಳ ಆಧಾರದಲ್ಲಿ ರಚಿತವಾದ ವೃತ್ತಗಳೇ ಅಂಶ ಗಣ ವೃತ್ತಗಳು. ಇವು ದೇಶೀ ವೃತ್ತಗಳಾಗಿವೆ. ತ್ರಿಪದಿ, ಸಾಂಗತ್ಯ, ಅಕ್ಕರ, ಮದನವತಿ, ಅಕ್ಕರಿಕೆ, ಛಂದೋವತಂಸ ಮೊದಲಾದುವು ಅಂಶಗಣ ವೃತ್ತಗಳು.

## ತ್ರಿಪದಿ

ತ್ರಿಪದಿಗಳಲ್ಲಿ ಸರ್ವಜ್ಞನ ತ್ರಿಪದಿಗಳು ಪ್ರಖ್ಯಾತವಾಗಿವೆ. ತ್ರಿಪದಿಯಲ್ಲಿ ಮೂರು ಪಾದಗಳಿವೆ. ತ್ರಿಪದಿಯ ಲಕ್ಷಣವನ್ನು ನಾಗವರ್ಮನು ಹೀಗೆ ಹೇಳಿರುವನು.

ವಿ  ವಿ  ವಿ  ವಿ

ಬಿಸರು ಹೋ | ದ್ಭವಗಣಂ | ರಸ ದಶ | ಸ್ಥಾನದೊಳ್

ವಿ  ಬ್ರ  ವಿ  ವಿ

ಬಿಸರುಹ | ನೇತ್ರ | ಗಣಮೇ ಬ | ರ್ಕುಳಿದುವು ॥

ವಿ  ಬ್ರ  ವಿ

ಬಿಸರುಹ | ನೇತ್ರೆ | ತ್ರಿಪದಿಗೆ ॥

ಈ ತ್ರಿಪದಿಯಲ್ಲಿ ಪ್ರಥಮ ಪಾದದಲ್ಲಿ ನಾಲ್ಕು ವಿಷ್ಣು ಗಣಗಳೂ ಎರಡನೆಯ ಪಾದದ ಎರಡನೆಯ ಸ್ಥಾನದಲ್ಲಿ ಒಂದು ಬ್ರಹ್ಮ ಗಣವೂ ಮೂರನೆಯ ಪಾದದ ಎರಡನೆಯ ಸ್ಥಾನದಲ್ಲಿ ಒಂದು ಬ್ರಹ್ಮ ಗಣವೂ ಬಂದು ಉಳಿದ ಎಲ್ಲ ಸ್ಥಾನಗಳಲ್ಲಿ ವಿಷ್ಣುಗಣಗಳೂ ಬಂದಿವೆ.

| | | | | |
|---|---|---|---|---|
| ಒಂದನೇ ಪಾದ | ವಿ | ವಿ | ವಿ | ವಿ |
| ಎರಡನೇ ಪಾದ | ವಿ | ಬ್ರ | ವಿ | ವಿ |
| ಮೂರನೇ ಪಾದ | ವಿ | ಬ್ರ | ವಿ | |

## ಸಾಂಗತ್ಯ

ಸಾಂಗತ್ಯವು ಅರ್ಧ ಸಮ ವೃತ್ತವಾಗಿದೆ. ಇದಕ್ಕೆ ನಾಲ್ಕು ಪಾದಗಳಿವೆ. ಪೂರ್ವಾರ್ಧವು ಉತ್ತರಾರ್ಧಕ್ಕೆ ಸಮಾನವಾಗಿದೆ. ಮೊದಲನೆಯ ಪಾದದಲ್ಲಿ 4 ಗಣಗಳೂ ಎರಡನೆಯ ಪಾದದಲ್ಲಿ 3 ಗಣಗಳೂ ಇವೆ.

ವಿ  ವಿ  ವಿ  ವಿ



11th_Kannada_Reader_Final_16-07-2018.indd 181  16-07-2018 18:43:16

ಽಽಽ– ಽಽಽ– –ಽ – – ಽಽ

ಕುಲಿಶ ದೇ | ಹಿಗಳು ನೀ | ವಿಬ್ಬರಿ | ನ್ನಂ ಕದ

ವಿ ವಿ ಬ್ರ

ಽಽ–ಽ – –ಽ –ಽ

ತಲದಲ್ಲಿ | ಕಾಲಿಕ್ಕು | ವಾಗ ।

ವಿ ವಿ ವಿ ವಿ

ಽಽ–ಽ ಽಽಽಽಽ ಽಽ–ಽ – ಽ –

ಬಳೆಗಾರ | ವಸರದೊ | ಳೆರಡಾನೆ | ವೊಕ್ಕು ಹೋ

ವಿ ವಿ ಬ್ರ

ಽಽಽ– ಽ ಽ – ಽ ಽಽಽ

ಕುಳಿಸಿದಂ | ತಹುದೆಂದ | ರವರು ॥

ಇದರ ಒಂದನೆಯ ಪಾದದಲ್ಲಿ 4 ವಿಷ್ಣುಗಣಗಳಿವೆ. ಎರಡನೆಯ ಪಾದದಲ್ಲಿ 2 ವಿಷ್ಣುಗಣಗಳೂ, 1 ಬ್ರಹ್ಮಗಣವೂ ಇವೆ. ವಿಷ್ಣುಗಣಕ್ಕೆ ಬದಲಾಗಿ ಬ್ರಹ್ಮ ಗಣವೂ ಬರಬಹುದು. ಇದು ಹಾಡಿನ ವೃತ್ತ.



11th_Kannada_Reader_Final_16-07-2018.indd 182 16-07-2018 18:43:16

ಘಟಕ ಒಂಬತ್ತು

# ಮಾನವೀಯತೆ



| | | |
|---|---|---|
| ಪದ್ಯ | : ದೀನಗಿಂತ ದೇವ ಬಡವ | – ಪು.ತಿ.ನ |
| ಗದ್ಯ | : ಮಹಾರಾತ್ರಿ (ನಾಟಕ) | – ಕುವೆಂಪು |
| ಉಪಪತ್ಯ | : ಮಿರ್ಜಾರ ಮಾನವೀಯತೆ | – ಡಿ.ವಿ.ಜಿ |
| ವ್ಯಾಕರಣ | : ಅಲಂಕಾರ | |



11th_Kannada_Reader_Final_16-07-2018.indd 183 16-07-2018 18:43:16

ಘಟಕ ಒಂಬತ್ತು

# ದೀನಗಿಂತ ದೇವ ಬಡವ

– ಪು.ತಿ.ನ.




ಡಾಂಭಿಕ ಭಕ್ತಿಗೆ ದೇವನು ಒಲಿಯುವವನಲ್ಲ. ಅಚಲ ಭಕ್ತಿಯೊಂದೇ ದೇವನನ್ನು ಒಲಿಸುವ ಸಾಧನ. ಮನಸ್ಸಿನಿಂದಲೂ ಬಡವರಾದ ಮಾನವರು ತಮ್ಮ ಇಷ್ಟಾರ್ಥ ನೆರವೇರಿದರೆ ತಮ್ಮ ರೋಗ ವಾಸಿಯಾದರೆ ತಮಗೆ ನ್ಯಾಯಾಲಯದಲ್ಲಿ ಜಯ ದೊರೆತರೆ ದೇವರಿಗೆ ಇಂತಿಷ್ಟು ಹಣವನ್ನೋ, ವಸ್ತುವನ್ನೋ ಹರಕೆಯ ರೂಪದಲ್ಲಿ ಅರ್ಪಿಸುವೆವು ಇಲ್ಲವೇ ದೇವಾಲಯಗಳನ್ನು ಕಟ್ಟಿಸುವೆವು ಎಂದು ಪ್ರಾರ್ಥಿಸಿಕೊಂಡು ಅದರಂತೆ ನಡೆಯುವರು. ಆದರೆ ಭಗವಂತನಿಗೆ ಇವರ ಹಣ, ದೇವಾಲಯಗಳ ನಿರ್ಮಾಣ ಬೇಕಿಲ್ಲ ಎಂಬ ಸಂದೇಶವನ್ನು ಕವಿಯು ಇಲ್ಲಿ ಸಾರುತ್ತಾರೆ. ಮಾನವನ ಬಡ ಮನಸ್ಸು ಭಗವಂತನನ್ನು ಕೇವಲ ಬಡವನೆಂದು ಭಾವಿಸಿತೋ ಏನೋ, ವಿಷ್ಣು ತ್ರಿವಿಕ್ರಮನಾಗಿ ತನ್ನ ಪಾದದಿಂದಲೇ ಭೂಮಿ ಆಕಾಶಗಳೆರಡನ್ನೂ ಅಳೆದ ಭಗವಂತನಿಗೆ ಒಂದು ಮನೆಯನ್ನು ಕಟ್ಟುವೆನೆಂದು ಹೊರಡುವುದು ಅದೆಂತಹ ಅವಿವೇಕ, ಅದೆಂತಹ ದೈನ್ಯಸ್ಥಿತಿ ! ಶಿವನಿಗೆ ಸ್ಮಶಾನವೇ ವಾಸಸ್ಥಾನ. ಮಸಣದ ಬೂದಿಯೇ ಲೇಪನ, ಚರ್ಮವೇ ವಸ್ತ್ರ, ಹಾವೇ ಆಭರಣ, ಭಿಕ್ಷೆಯೇ ವೃತ್ತಿ ಎಂದು ಭಾವಿಸಿರುವಂತೆ ತೋರುತ್ತದೆ. ಆದರೆ ಅವನು 'ಬೆಳ್ಳಿ ಬೆಟ್ಟದ ಒಡೆಯ, ಚಂದ್ರನನ್ನು ತಲೆಯಲ್ಲಿ ಮುಡಿದುಕೊಂಡವನು, ಪ್ರೇಮ ಮೂರ್ತಿಯಾದ ಗಿರಿಜೆ ಅವನ ಪ್ರಣಯಕ್ಕೆ ಆರ್ತಳಾಗಿದ್ದಾಳೆ ಎನ್ನುವುದನ್ನು ಮಾನವ ಮರೆತು ಬಿಟ್ಟಿದ್ದಾನೆ. ದೇವರಿಗೆ ವಾಸಿಸಲು ಮಾನವನ ಹೃದಯವೆಂಬ ಪುಟ್ಟ ಗುಡಿಸಲೇ ಸಾಕು. ಆತನಿಗಾಗಿ ನಮ್ಮ ಹೃದಯದಲ್ಲಿ ಒಂದು ಗುಡಿಯನ್ನು ಕಟ್ಟಿದರೆ ಸಾಕು, ಅವನಿಗೆ ಗುಡಿಯನ್ನು ಕಟ್ಟುವುದಕ್ಕೆ ಆತನೇನು ನಮಗಿಂತ ಬಡವನೇ ಎಂದು ಈ ಪದ್ಯದಲ್ಲಿ ಕವಿ ತಿಳಿಸುತ್ತಾರೆ.





11th_Kannada_Reader_Final_16-07-2018.indd 184 16-07-2018 18:43:17

ಹರಿಗೆ ಎಂದು ಎದೆಯೊಳೊಂದು
ಗುಡಿಯನೊಂದ ಕಟ್ಟುತಿರುವೆನು
ದೀನಗಿಂತ ದೇವ ಬಡವ
ನೆಂದು ಬಗೆವೆನು

ನಿಜವು ವಿಷ್ಣು ವಿಶ್ವದರಸು, ವಿಶ್ವಧಾಮನು
ಒಂದೆ ಹೆಜ್ಜೆಯಿಟ್ಟು ಬುವಿಯ ನಾಕವಳೆದನು
ಎಷ್ಟು ಚಿಕ್ಕದೆನ್ನ ಹೃದಯ, ಏನು ಹೊಲಸದು
ಇಲ್ಲು ನೆಲೆಯ ಬೇಡುವವನ ದೈನ್ಯವೆಂತದು

ಬೆಳ್ಳಿಬೆಟ್ಟದೊಡೆಯ ಶಿವನು ಚಂದ್ರಮೌಳಿಯು
ಪ್ರೇಮ ಮೂರ್ತಿ ಗಿರಿಜೆ ಅವನ ಪ್ರಣಯಕಾರ್ತೆಯು
ಆದರವನ ಬೀಡು ಮಸಣ ಲೇಪ ಬೂದಿಯ
ಚರ್ಮ ಉಡಿಗೆ ಹಾವು ತೊಡಿಗೆ ಬದುಕು ಬಿಕ್ಕೆಯು

ದೀನಗೊಂದು ವಿಶ್ವ ಸಾಲದಾಸೆ ತಣಿಸಲು
ದೇವಗೆದೆಯ ಗುಡಿಲೆ ಸಾಕು ನಲಿದು ನೆಲೆಸಲು
ಹರಿಗೆ ಎದೆಯೊಳೊಂದು ಗುಡಿಯ ಕಟ್ಟುತಿರುವೆನು
ದೀನಗಿಂತ ದೇವ ಬಡವನೆಂದು ಬಗೆವೆನು



11th_Kannada_Reader_Final_16-07-2018.indd 185 16-07-2018 18:43:17

## ಕವಿ–ಕೃತಿ ಪರಿಚಯ



ಪು.ತಿ.ನ. ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಪುರೋಹಿತ ತಿರುನಾರಾಯಣಯ್ಯಂಗಾರ್ ರವರು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ 17.03.1905ರಂದು ಜನಿಸಿದರು.

ಇವರು ಹಣತೆ, ಮಾಂದಳಿರು, ಶಾರದಾ ಯಾಮಿನಿ, ಅತಿಥಿ, ಗಣೇಶ ದರ್ಶನ, ಮಲೆದೇಗುಲ, ರಸಸರಸ್ವತಿ, ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ಅಹಲ್ಯಾ, ಗೋಕುಲ ನಿರ್ಗಮನ, ಸತ್ಯಾಯನ ಹರಿಶ್ಚಂದ್ರ, ಹಂಸ ದಮಯಂತಿ, ಇತ್ಯಾದಿ ಗೀತ ನಾಟಕಗಳನ್ನೂ ರಾಮಾಚಾರಿಯ ನೆನಪು, ಧ್ವಜರಕ್ಷಣೆ, ರಥಸಪ್ತಮಿ ಮುಂತಾದ ಕಥಾ ಸಂಕಲನಗಳನ್ನೂ ರಚಿಸಿದ್ದಾರೆ.

ಪ್ರಸ್ತುತ ಕವಿತೆಯನ್ನು ಇವರ ಶಾರದಾ ಯಾಮಿನಿ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ಕಠಿಣ ಪದಗಳ ಅರ್ಥ

ದೀನ–ಬಡವ; ವಿಶ್ವಧಾಮ–ಜಗತ್ತೇ ಮನೆ; ಹರಿ–ವಿಷ್ಣು; ಬುವಿ–ಭೂಮಿ; ನಾಕ–ಸ್ವರ್ಗ; ಮೌಳಿ–ತಲೆ; ಪ್ರಣಯಕಾರ್ತೆ–ಪ್ರೇಮವನ್ನು ಬಯಸುವವಳು; ಬೀಡು–ವಾಸಸ್ಥಾನ, ಮನೆ; ಉಡುಗೆ–ವಸ್ತ್ರ; ತೊಡುಗೆ–ಆಭರಣ; ಬಿಕ್ಕೆ(ದ್ಭ)–ಭಕ್ಷೆ(ತ್ಸ);ತಣಿ–ತೃಪ್ತಿಹೊಂದು; ಗುಡಿಲು–ಗುಡಿಸಲು.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ವಿಷ್ಣು ಹೇಗೆ ಆಕಾಶ ಭೂಮಿಗಳನ್ನು ಅಳೆದನು ?
2. ಬೆಳ್ಳಿ ಬೆಟ್ಟದೊಡೆಯ ಯಾರು ?
3. ಶಿವನು ಎಲ್ಲಿ ವಾಸಿಸುತ್ತಾನೆ ?
4. ದೇವನಿಗೆ ಯಾವುದು ಸಾಕು ಎಂದು ಕವಿ ಹೇಳುತ್ತಾರೆ ?
5. ಮಾನವ ದೇವರನ್ನು ಏನೆಂದು ಬಗೆದಿದ್ದಾನೆ ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಕವಿಯು ವಿಷ್ಣುವಿನ ಮಹತ್ವವನ್ನು ಹೇಗೆ ವರ್ಣಿಸಿದ್ದಾನೆ ?
2. ಕವಿಯು ಶಿವನನ್ನು ಹೇಗೆ ಬಣ್ಣಿಸಿದ್ದಾನೆ ?
3. ಮಾನವನು ದೇವನನ್ನು ದೀನನೆಂದು ಭಾವಿಸಿರುವುದೇಕೆ ?
4. ದೀನಗಿಂತ ದೇವ ಬಡವ ಕವಿತೆಯ ಸಾರಾಂಶವನ್ನು ಬರೆಯಿರಿ.

**III. ಕೆಳಗಿನ ವಾಕ್ಯಗಳ ಸಂದರ್ಭ ಹಾಗೂ ಸ್ವಾರಸ್ಯವನ್ನು ಬರೆಯಿರಿ.**

1. 'ಒಂದೆ ಹೆಜ್ಜೆಯಿಟ್ಟು ಬುವಿಯ ನಾಕವಳೆದನು'
2. 'ಬೆಳ್ಳಿ ಬೆಟ್ಟದೊಡೆಯ ಶಿವನು ಚಂದ್ರಮೌಳಿಯು'
3. 'ಆದರವನ ಬೀಡು ಮಸಣ'
4. 'ಹರಿಗೆ ಎದೆಯೊಳೊಂದು ಗುಡಿಯ ಕಟ್ಟುತಿರುವೆನು'

## ಭಾಷಾಭ್ಯಾಸ

**1. ಕೆಳಗಿನ ಪದಗಳಿಗೆ ವಿಗ್ರಹ ವಾಕ್ಯ ಬರೆದು ಸಮಾಸದ ಹೆಸರನ್ನು ತಿಳಿಸಿ**

ಚಂದ್ರಮೌಳಿ, ಬೆಳ್ಳಿಬೆಟ್ಟದೊಡೆಯ, ವಿಶ್ವಧಾಮ.

**2. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಮಸಣ, ಬಿಕ್ಕೆ, ಬುವಿ.

**3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಎದೆಯೊಳೊಂದು, ಹೆಜ್ಜೆಯಿಟ್ಟು, ಆದರವನ, ಸಾಲದಾಸೆ, ಕಟ್ಟುತಿರುವೆನು.

## ಚಟುವಟಿಕೆ

1. ಕವಿ ಪು.ತಿ.ನ. ಅವರ ಇನ್ನಿತರ ಕವನ ಸಂಗ್ರಹಗಳನ್ನು ಸಂಗ್ರಹಿಸಿ ಅವರ ಮಾನವೀಯತೆಯ ದಿವ್ಯ ದರ್ಶನವನ್ನು ಅನುಭವಿಸಿರಿ.
2. ಮಾನವೀಯತೆಯನ್ನು ತೋರ್ಪಡಿಸುವ ಇನ್ನಿತರ ಕವಿಗಳ ಕವನಗಳನ್ನು ಸಂಗ್ರಹಿಸಿರಿ.



11th_Kannada_Reader_Final_16-07-2018.indd 186 16-07-2018 18:43:17

ಘಟಕ ಒಂಬತ್ತು

# ಮಹಾರಾತ್ರಿ (ನಾಟಕ)

– ಕುವೆಂಪು



## ದೃಶ್ಯ – 1

(ಅರಮನೆಯ ಪಕ್ಕದ ಒಂದು ಉದ್ಯಾನವನದಲ್ಲಿ ಸಿದ್ಧಾರ್ಥನು ತಿರುಗಾಡುತ್ತಿದ್ದಾನೆ.)

ಸಿದ್ಧಾರ್ಥ : ಇಲ್ಲ; ಇನ್ನಿಲ್ಲಿ ಇರಲಾರೆ. ಇರಲಾರೆ !
ಎಳೆಯ ಕರೆಯನು ಕೇಳಿಯೂ ಸುಮ್ಮನಿರಲಾರೆ.
ಆತ್ಮದಾಮಂತ್ರಣವನೋದಿಯೂ ಭೋಗಾಭಿ
ಲಾಷೆಯಿಂದಿನ್ನು ನಾನಿರಲಾರೆ. ಪರಧರ್ಮ
ದೇವತೆಯು ಗುಡಿಗಳಿಂ ಹೊಲಗಳಿಂ ವನಗಳಿಂ
ಸೌಧಸೌಧಗಳಿಂ ಕೈಬೀಸಿ ಗೋಳಾಡಿ
ಕರೆವುದನು ಕಂಡು ಮೊದ್ದನಾಗಿರಲಾರೆ (ವಾದ್ಯ)
ನಾದವಿದೇನಿದು ? ವಾದ್ಯಗಳ ನಿನದ ! ನನಗರಿಯ
ದಂತಾವ ಶುಭವಿಂದು ಬಂದಿಹುದು ? – ನನಗೇನು ?



11th_Kannada_Reader_Final_16-07-2018.indd 187 16-07-2018 18:43:18

ದನಿಯ ಬೀರಿರಿ ವಾದ್ಯಗಳಿರಾ ! ನಿಮ್ಮಗಳ
ಭಾಗಕ್ಕೆ ಕಿವುಡನಾಗಿಹೆನಿಂದು : ಇಲ್ಲ, ನಾನ್
ಇರಲಾರೆನಿನ್ನು ! ಇಂದಿನಿರುಳನು ಬಿಟ್ಟರೆ
ಎನಗಿನ್ನು ಗತಿಯಿಲ್ಲ. ನಾಳೆ ನಾಳೇ ಎಂದು
ವರ್ಷಗಳ ಕಳೆದಾಯ್ತು ! ನಾಳೆ ಎಂದಿಗೂ ನಾಳೆ!
ಇಂದಿಂದೆ!

(ಚನ್ನನು ಓಡುತ್ತಾ ಬರುತ್ತಾನೆ)

**ಚನ್ನ** : ಶುಭ ಸುದ್ದಿ! ಶುಭ ಸುದ್ದಿ ! ನನ್ನೊಡೆಯಾ !
(ಸಿದ್ಧಾರ್ಥನು ಗಂಭೀರವಾಗುತ್ತಾನೆ)

ಏನುದಾಸೀನವಾಗಿಹೆಯಲ್ಲ ಸಿದ್ಧಾರ್ಥ ?

**ಸಿದ್ಧಾರ್ಥ** : ಏನು ಶುಭಸುದ್ದಿ, ಚನ್ನಜ್ಜ ? ಮಂಗಳ
ನಿನಾದಗಳು ನಭಕೇರುತಿಹವಲ್ಲ, ಏಕೆ ?

**ಚನ್ನ** : ಅದೇ ಶುಭದ ವಾರ್ತೆ ಸಿದ್ಧಾರ್ಥ
ನಿನಗೊಂದು ಗಂಡು ಶಿಶು ಹುಟ್ಟಿಹುದು !
ಪುಣ್ಯಕುದಿಸುವ ತೆರದಿ ಬಣ್ಣ !

**ಸಿದ್ಧಾರ್ಥ** : (ಅಂತರ್ಮುಖಿಯಾಗಿ) ಮತ್ತೊಂದು
ಪಾಶ. ಕಬ್ಬಿಣದ ಸರಪಣಿಯ ಬಂಧನ !
ದಿನ ಕಳೆದ ಹಾಗೆಲ್ಲ ಬುವಿಯ ಜಾಲವು ನಮ್ಮ
ಸುತ್ತುವುದೇ ಹೊರತು, ಬಿಗಿ ಬಿಗಿಯುವುದೇ ಹೊರತು
ಬಿಚ್ಚಿ ಬಿಡುವುದು ಎಂಬ ನೆಚ್ಚ ನಾ ಕಾಣೆ.

**ಚನ್ನ** : ಏಕಿಂತು ಮೌನವಾಗಿಹೆ ಒಡೆಯಾ ?

**ಸಿದ್ಧಾರ್ಥ** : (ಗಂಭೀರವಾಗಿ) ಸಾರಥಿ,
ಚೆನ್ನ, ಇತ್ತ ಬಾ ! ನನಗಿಂದು ನಿನ್ನ ನೆರ
ವಾಗಲೇ ಬೇಕು... (ಸಂಗೀತ) ಏನು ಸಂಗೀತವಿದು ?

**ಚನ್ನ** : ಪುತ್ರೋದಯದ ಹರುಷಕಾಗಿ ಅಂಗನೆಯರ್
ಉಲಿಯುವರು ಮಂಗಳದ ಹಾಡುಗಳ. ಕೇಳು,
ಎಷ್ಟು ಮೃದು ಮಧುರವಾಗಿಹುದು !

**ಸಿದ್ಧಾರ್ಥ** : (ಸ್ವಗತ) ಎಲೆ ಗಾನ ದೇವತೆಯೇ,
ನಿನ್ನ ಮೋಹದ ಮುಡಿಯ ಸಿಡಿದೊಡೆವು
ದಿಂದು ! ಆತ್ಮಗೀತವು ಕರ್ಣಗೀತವನು
ಏಳಿಸುತಲಿಹುದಿಂದು. ಅಮೃತಪಾನದ ಬಯಕೆ



11th_Kannada_Reader_Final_16-07-2018.indd 188 16-07-2018 18:43:18

ನಾಡ ಹಾಲಿನ ಬಯಕೆಯನ್ನಟ್ಟಿ ಬಿಟ್ಟಿಹುದು.
(ಗಟ್ಟಿಯಾಗಿ) ಚನ್ನ!

**ಚನ್ನ** : (ಅನ್ಯಮನಸ್ಕನಾಗಿ) ಎಷ್ಟು ಹೃದಯಂಗಮ, ಸಂಗೀತ!
ಏಕೆ ? ಸಿದ್ಧಾರ್ಥ, ಗಾನವೆನೆ ತನುಮನಗಳ್
ಎಲ್ಲವನು ಮರೆತು ಕೇಳುತಲಿದ್ದ ನೀನಿಂದು
ಸರಗೈಯ್ವ ರಮಣಿಯರನಾಲಿಸದೆ ಚಿಂತಾತ್ಮನ್
ಆಗಿರುವೆಯಲ್ಲ ?

**ಸಿದ್ಧಾರ್ಥ** : (ನಟ್ಟ ನೋಟದಿಂದ) ಹೌದು, ಚನ್ನ, ಹೌದು!
ಇರಲಿಯದು. ಇತ್ತ ಬಾ. ನನಗಿಂದು ನಿನ್ನ ನೆರ
ವಾಗಲೇಬೇಕು.

**ಚನ್ನ** : ಸಾರಥಿಯನೀ ರೀತಿ
ಕೇಳುವರೇ ? ಬೆಸಸು, ಕಿಂಕರ ನಾನು.

**ಸಿದ್ಧಾರ್ಥ** : ಇನ್ನು ನೀನ್ ಎನ್ನ ಸಾರಥಿಯಲ್ಲ.

**ಚನ್ನ** : (ದೈನ್ಯದಿಂದ) ಕೆಲಸದಿಂ ಬಿಡಿಸುವೆಯಾ ?
ಬೇಡ, ಗೌತಮಾ, ಬೇಡ. ನಾಂ ಮುದುಕ. ನಿರ್ಗತಿಕ!
ನಾನೆಸಗಿದಪರಾಧವಾದರೂ ಏನು ?
ಮನ್ನಿಸೆನ್ನೊಡೆಯ.

**ಸಿದ್ಧಾರ್ಥ** : (ಕರುಣೆಯಿಂದ) ಹಾಗಲ್ಲ, ಕೇಳಿಲ್ಲಿ.

**ಚನ್ನ** : ಇಲ್ಲ, ಬೇಡ! ಬೇಡ! ನಿನ್ನ ಬಿಟ್ಟರೆ ನಾನು
ಸಾಯುವುದೆ ಸರಿ. ಚನ್ನನೆದೆಯಲ್ಲಿ ನೀನಲ್ಲ
ದಿನ್ನಾರು ನೆಲೆಸಿಲ್ಲ.

**ಸಿದ್ಧಾರ್ಥ** : (ಸ್ವಗತ) ಪಾಪ! ಮುದುಕನಿವ !
(ಗಟ್ಟಿಯಾಗಿ) ಚನ್ನಜ್ಜ, ಕೇಳಿಲ್ಲಿ, ನಿನ್ನ ನಾ ಬಿಡಲಾರೆ,
ಹೆದರದಿರು.

**ಚನ್ನ** : (ಆಶ್ಚರ್ಯದಿಂದ) ಯಾವೆಡೆಗೆ ಸಿದ್ಧಾರ್ಥ ? ಇಂದೇಕೆ ? ಮಾತೇನು ?
ಮಗನು ಹುಟ್ಟಿದ ದಿನವೇ ತಂದೆ ಹೋದರೆ ದೂರ
ಲೋಕವೇನೆನ್ನುವುದು ?

**ಸಿದ್ಧಾರ್ಥ** : ಚನ್ನ, ನೀನೆನಗೆ
ಬೇಕಾದವನು, ಕೇಳು. ಇಂದಿನಿರುಳೇ ನಾನು
ತಿರೆ ಸಿರಿಗಳೆಲ್ಲವನು ಬಿಸುಟು ಮುಕ್ತಿಶ್ರೀ
ಯನ್ನರಸಿ ಹೊರಡುವೆನು.



11th_Kannada_Reader_Final_16-07-2018.indd 189 16-07-2018 18:43:18

ಚನ್ನ : ಏಕೆ ನನ್ನೊಡೆಯ, ಇಲ್ಲಿ ಸೊಗಮಿಲ್ಲವೇ ನಿನಗೆ ?

ಸಿದ್ಧಾರ್ಥ : (ವ್ಯಾಕುಲತೆಯಿಂದ) ಚನ್ನಜ್ಜ,
ನಾನೊಬ್ಬ ಸುಖಿಯಾದರೇನಾಯ್ತು ? ಲೋಕವೇ
ಬೊಬ್ಬಿರಿಯುತಿಹುದಲ್ಲ ಬೆಂದು ಬಡತನದಲ್ಲಿ.
ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯ ತಪ್ಪಿ,
ಕಾಡು ಪಾಲಾಗಿಹಳು ಭಾರತಾಂಬೆಯು ಚನ್ನ,
ಕಾಡು ಪಾಲಾಗಿಹಳು! (ನಿಟ್ಟುಸಿರು ಬಿಟ್ಟು )
ಚನ್ನಜ್ಜ ನಿನಗೆಲ್ಲ ಬಣ್ಣಿಸಲು ಸಮಯವಿಲ್ಲೀಗ. ನನಗಿಂದು
ನೆರವಾಗುವೆಯ ಹೇಳು.

ಚನ್ನ : ಎದೆಯೇಕೋ ನಡುಗುತಿದೆ, ಒಡೆಯ, ನೀನೇನು
ಮಾಡುವೆಯೊ ನಾನರಿಯೆ.
ನಿನ್ನ ಚಿತ್ತವನರಿಯೆ. ಆದೊಡೆಯು ನಿನ್ನಲ್ಲಿ
ನಚ್ಚುಂಟು ಎನಗೆ. ಇಂದು ಹೋದವನೆಂದು
ಹಿಂದಕ್ಕೈತರುವೆ ?

ಸಿದ್ಧಾರ್ಥ : ಎಂದಿಗೋ ನಾನರಿಯೆ ಸಾರಥಿ.

ಚನ್ನ : ಒಂದು ವಾರವೇ ? ಮೇಣ್ ಮೂರೇ ?

ಸಿದ್ಧಾರ್ಥ : ಅದಕ್ಕಿಂತ ಹೆಚ್ಚು ಚನ್ನಜ್ಜ, ಅದಕ್ಕಿಂತ ಹೆಚ್ಚು.

ಚನ್ನ : ಹಾಗಾದರೇನೊಂದು ತಿಂಗಳೇ ?

ಸಿದ್ಧಾರ್ಥ : (ಮುಗುಳ್ನಗೆಯಿಂದ) ಅಲ್ಲ ಚನ್ನ, ಅಲ್ಲ.

ಚನ್ನ : ಒಂದು ಸಂವತ್ಸರವೇ ?

ಸಿದ್ಧಾರ್ಥ : ಏನೋ ನಾನರಿಯೆ.

ಚನ್ನ : ಸಿದ್ಧಾರ್ಥ ಏನು ನೀನನ್ನುವುದು !
ನಿನ್ನ ಪಯಣದ ಸುದ್ದಿ ರಾಜರಿಗೆ ಗೊತ್ತೆ ?

ಸಿದ್ಧಾರ್ಥ : ಗೊತ್ತಿಲ್ಲ.

ಚನ್ನ : ಹೇಳದೇ ಕೇಳದೇ ಓಡುವೆಯ ? ಹೋಗಿ ತಿಳಿಸಲೆ ನಾನು ?

ಸಿದ್ಧಾರ್ಥ : (ಆಜ್ಞಾವಾಣಿಯಿಂದ)
ನಿಲ್ಲು, ಚನ್ನ ನಿಲ್ಲು! ಗುಟ್ಟಾದ ಪಯಣವಿದು.
ಗುಟ್ಟಾದ ಪಯಣ! (ಸ್ವಗತ) ಬಡಪಾಯಿ ಚನ್ನಜ್ಜ
ಮುಗ್ಧ ಚನ್ನಜ್ಜ, ನನ್ನ ಮನವನ್ನರಿಯ (ಗಟ್ಟಿಯಾಗಿ)
ಕೇಳಿಲ್ಲಿ, ಚನ್ನಜ್ಜ, ಕೇಳಿಲ್ಲಿ ; ನಿನಗೆಲ್ಲ
ವಿಷದವಾಗುಸುರುವೆನು, ಆ ದಿನದ ನೆನಪಿದೆಯೇ ?

ಚನ್ನ : ಯಾವ ದಿನ ?



11th_Kannada_Reader_Final_16-07-2018.indd 190 16-07-2018 18:43:19

ಸಿದ್ಧಾರ್ಥ : (ಭಾವದಿಂದ) ಮುದುಕನೊಬ್ಬನ ಕಂಡ ಪುಣ್ಯ ದಿನ!
ರೋಗಿಯನು ಕಂಡ ದಿನ ! ಸತ್ತವನ ಕಂಡ ದಿನ !
ಯೋಗೀಶನೊಬ್ಬನನು ಕಂಡತುಳ ಪುಣ್ಯದಿನ!
ಆ ದಿನದ ನೆನಪಿದೆಯೆ ನಿನಗೆ ?

ಚನ್ನ : ಹೌದೊಡೆಯ.

ಸಿದ್ಧಾರ್ಥ : ಅಂದಿನಿಂದಲೂ ತಾನು ಬುದ್ಧನೆಂದಾಗುವೆನೊ
ಜಗವನೆಂದುಳುಹುವೆನೋ ಎಂದು ಹಂಬಲಿಸುತಿರುವೆ.

ಚನ್ನ : (ಸ್ವಗತ) ಜಾತಕದ ಜೋಯಿಸನು ಅಂತೆಯೇ ನುಡಿದಿದ್ದ.

ಸಿದ್ಧಾರ್ಥ : ರಾಜ್ಯವನ್ನಗಲುವಾ ದಿನವೇ
ಮದುವೆ ಬಂದೆನ್ನ ನಿಲ್ಲಿಸಿತ್ತು.

ಚನ್ನ : ಇಂದು ಸುತನುದಯ ನಿಲ್ಲಿಸದೇ ?

ಸಿದ್ಧಾರ್ಥ : ಇಲ್ಲ, ಎಂದೂ ಇಲ್ಲ ಚನ್ನ.
ಇಂದು ಜವ ಬಂದರೂ ತಡೆಯಲಾರನು ಎನ್ನ.
ಕೇಳದಿರು ಪ್ರಶ್ನೆಯನು. ಇಷ್ಟು ದಿನ ನಿನ್ನ ನಾ
ಸಲಹಿದೆನು. ನೀನು ಇಂದಿನೊಂದಿರುಳಲ್ಲಿ
ಸಲಹಲಾರೆಯಾ ಎನ್ನ.

ಚನ್ನ : ನಿನ್ನ ಪ್ರೇಮಕೆ ಸೋತೆ, ಸಿದ್ಧಾರ್ಥ; ಹೇಳು
ಮಾರ್ನುಡಿಯದೆಯೆ ಮಾಡುವೆನು.

ಸಿದ್ಧಾರ್ಥ : ಯಾರಿಗಿದನರುಹದಿರು

ಚನ್ನ : ಇಲ್ಲ, ನನ್ನೆದೆಗೂ ನಾ ಹೇಳೆ.

ಸಿದ್ಧಾರ್ಥ : ಇಂದು ನೀನೆನ್ನ ಕೋಣೆಯೆಡೆ ಮಲಗಿಕೋ.
ರಾತ್ರಿ ನಿನ್ನನು ಕರೆವ ಸಮಯ ಬರಬಹುದು.

ಚನ್ನ : ತಪ್ಪದೇ ಮಲಗುವೆನು.

ಸಿದ್ಧಾರ್ಥ : ವಾದ್ಯಗಳು ನಿಂತಿಹವು. ನನಗಾಗಿ ಕಾಯುವರೋ ಏನೋ.
ಹೋಗುವೆನು. ಮರೆಯದಿರು, ತೊರೆಯದಿರು(ತೆರಳುತ್ತಾನೆ).

ಚನ್ನ : ಸಿದ್ಧಾರ್ಥ, ಗೌತಮಾ, ನಿನ್ನ ಮನವರಿಯೆ.
ಮಿಂಚುಹುಳು ಬಲ್ಲುದೇ ಚಂದ್ರ ತಾರೆಗಳೇಕೆ
ಬೆಳಗುತ್ತಿವೆ ಎಂದು. ಆದರೂ ಮಿಣುಕುವುದು
ಚುಕ್ಕಿಗಳನನುಕರಿಸಿ. ಅಂತೆಯೇ ನಾನೂ.
ಅವನು ತೊಳಗುವನೆಂಬುದನು ಬಲ್ಲೆ. ಏತಕೆಂ
ಬುದನರಿಯೆ. ಆದರಾತನು ಬರಿದೆ ತೊಳಗುವವನ್
ಅಲ್ಲ. ಏನನೋ ಬೆಳಗಲೆಂದೇ ಅವನು



11th_Kannada_Reader_Final_16-07-2018.indd 191 16-07-2018 18:43:19

ತೊಳಗುವನು. ಸಿದ್ಧಾರ್ಥ ತೊಳಗಿದರೆ ಬೆಳಗುವನು!
(ಹೋಗುತ್ತಾನೆ).

## ಪರದೆ

## ದೃಶ್ಯ – 2

(ಅರಮನೆಯಲ್ಲಿ ಒಂದು ಕೋಣೆ. ಸಿದ್ಧಾರ್ಥನು ಹಾಸುಗೆಯ ಮೇಲೆ ಕುಳಿತಿದ್ದಾನೆ. ದೀಪವೊಂದುರಿಯುತ್ತಿದೆ).

**ಸಿದ್ಧಾರ್ಥ** : ಹಿಂಜರಿಯದಿರು ಮನವೇ. ಕಲ್ಲಾಗು ಎದೆಯೇ.
ಬೆಣ್ಣೆಯಾಗುವೆ ಮುಂದೆ ! ವ್ಯಾಮೋಹವೇ ಸಾಯಿ!
ವೈರಾಗ್ಯವೇ ಕಾಯಿ ! ಮುಕ್ತಿದೇವತೆ, ತಾಯಿ
ಬಂದೆನ್ನ ಹೃದಯ ಕಮಲದಿ ನೃತ್ಯವಾಡು.
ಮಾಯೆಯನು ದೂಡು. ಶಕ್ತಿಯನು ನೀಡು!
(ಎದ್ದು ಕಿಟಕಿಯ ಬಳಿಗೆ ಹೋಗಿ ಹೊರಗೆ ನೋಡಿ)
ಮಲಗಿ ಕೈವಾರಿಗಳೇ, ಮಲಗಿ ಏಳದಿರಿ.
ವಾದ್ಯಗಾರರೇ, ನಿದ್ದೆ ದೇವತೆಯೇ, ನಿನ್ನ
ಮಧುರ ಚುಂಬನವಿಂದು ಮಧುರತರವಾಗಲಿ!
ನಿನ್ನ ಮುತ್ತಿನೊಳಿಂದು ಎಲ್ಲ ಕಣ್ಣೆವೆಗಳನೂ
ಒತ್ತಿ ಹಿಡಿ. ಮೌನದೇವತೆಯೇ ಬಾ. ನಿನ್ನ
ಸಾಮ್ರಾಜ್ಯವಾಳು (ಹಿಂದಿರುಗಿ ಬಂದು ಕುಳಿತು)
ಎಲೆ ಸೆಜ್ಜೆ, ಇದೇ ನಿನ್ನ ಕಡೆಯ ಸಂದರ್ಶನ!
ಇದೇ ಅಂತ್ಯ ಸ್ಪರ್ಷ!
ಇಂದಿಗೇ ಸಾಕು ನೀನೆನಗಿತ್ತ ಹರ್ಷ! (ಹೆಜ್ಜೆಗಳ ಸದ್ದು)
ಪಾದರವ ! ಪಹರಿ ಇರಬಹುದು. ಇರಲಿ. ನೋಡುವೆನು.
(ಬಾಗಿಲು ತೆರೆದು) ಕೈಲಾಸ !

**ಕೈಲಾಸ** : (ಹೊರಗಿನಿಂದ) ನನ್ನೊಡೆಯಾ !

**ಸಿದ್ಧಾರ್ಥ** : ಏನಿನ್ನೂ ಮಲಗಿಲ್ಲ ? (ಕೈಲಾಸನ ಪ್ರವೇಶ)

**ಕೈಲಾಸ** : ಇಲ್ಲ ನನ್ನೊಡೆಯಾ, ಇಲ್ಲ.

**ಸಿದ್ಧಾರ್ಥ** : ಹೋಗು, ಮಲಗಿಕೋ. ಭಯವೇನೂ ಇಲ್ಲ.

**ಕೈಲಾಸ** : ಕರ್ತವ್ಯ ?

**ಸಿದ್ಧಾರ್ಥ** : ಬಹಳ ಬಳಲಿಹೆ ನೀನು. ನನ್ನಾಜ್ಞೆ !
ಹೋಗು ಮಲಗಿಕೋ (ಹೋಗುವನನ್ನು ಕುರಿತು)
ಇರು ಸ್ವಲ್ಪ ಕೈಲಾಸ.

**ಕೈಲಾಸ** : (ಹಿಂದಿರುಗಿ) ಅಪ್ಪಣೆ.



11th_Kannada_Reader_Final_16-07-2018.indd 192 16-07-2018 18:43:19

ಸಿದ್ಧಾರ್ಥ : ನಿನಗೆಷ್ಟು ವಯಸ್ಸೀಗ ?

ಕೈಲಾಸ : ತಮ್ಮ ತಂದೆ ಪಟ್ಟಕ್ಕೆ ಬಂದಾಗ
ನನಗೆಂಟು ತುಂಬಿತ್ತು.

ಸಿದ್ಧಾರ್ಥ : (ಮುಗುಳ್ನಗೆಯಿಂದ) ನೀನು ಬಹು ಬಡವನಲ್ಲವೇ ?

ಕೈಲಾಸ : ತಮ್ಮ... ಕೃಪೆಯಿಂದ...

ಸಿದ್ಧಾರ್ಥ : ಇರಲಿ ಬಿಡು, ಬಾ ಇಲ್ಲಿ.
ತೊಡವುಗಳು ಬೇಕೇನು ನಿನಗೆ ? ದುರುದುರುನೆ
ನೋಡುತಿಹೆಯೇಕೆ ? ಬೇಕೇನು ? ಹೇಳು!

ಕೈಲಾಸ : ಇಂದು ಒಡೆಯರ ರೀತಿ ಬೇರೆಯಾಗಿಹುದೆಂದು
ಸೋಜಿಗವು ಎನಗೆ.

ಸಿದ್ಧಾರ್ಥ : ಸೋಜಿಗವ ಪಡಬೇಡ, ಪಹರಿ!
ತೆಗೆದುಕೋ (ತನ್ನ ಆಭರಣಗಳನ್ನು ಕೊಡುತ್ತಾನೆ).

ಕೈಲಾಸ : (ಹಿಂಜರಿದು) ನನಗೇಕೆ, ನನ್ನೊಡೆಯಾ ?
ಆ ರನ್ನದೊಡವೆಗಳು, ರಾಜರೇನೆಂದಾರು ?

ಸಿದ್ಧಾರ್ಥ : ನಾನಿತ್ತೆನೆನು ಪಹರಿ. ನಾನಿತ್ತೆನೆಂದರುಹು!
ಭಯವೇಕೆ ತೆಗೆದುಕೋ. ಈ ರಾತ್ರಿ ನಿನ್ನ ಮನ
ದೊಳು ಚಿರಸ್ಮರಣೀಯವಾಗಿರಲಿ(ಕೊಡುತ್ತಾನೆ)

ಕೈಲಾಸ : (ತೆಗೆದುಕೊಂಡು) ನನ್ನೊಡೆಯಾ !

ಸಿದ್ಧಾರ್ಥ : ನಿನ್ನೊಡವೆ ! (ಮರಳಿ ಮತ್ತೊಂದು ಕೊಡುತ್ತಾನೆ).

ಕೈಲಾಸ : (ತೆಗೆದುಕೊಂಡು) ನನ್ನೊಡೆಯಾ !

ಸಿದ್ಧಾರ್ಥ : ನಿನ್ನೊಡವೆ! ತೆಗೆದುಕೋ!
ಮಲಗಿಕೋ ಹೋಗು, ನನ್ನಿಷ್ಟ.

ಕೈಲಾಸ : ನನ್ನೊಡೆಯಾ! (ಅಡ್ಡಬಿದ್ದು ಹೋಗುತ್ತಾ, ಆತ್ಮಗತ)
ಮುಂದೆ ಏನಾಗುವುದೋ ದೇವರೇ ಬಲ್ಲ.

ಸಿದ್ಧಾರ್ಥ : (ಬಾಗಿಲು ಹಾಕಿ)
ಹೊತ್ತಾಯ್ತು ಕಾಲಚಕ್ರವೇ, ತಿರುಗು ಮೆಲ್ಲನೆಯೆ.
ಇದೊಂದು ದಿನ. ಚನ್ನನೆಚ್ಚೆತ್ತಿಹನೋ ? ಇಲ್ಲವೋ ?
(ಮತ್ತೊಂದು ಬಾಗಿಲು ತೆರೆದು)
ಎಂತು ಮಲಗಿಹನು. ನಿದ್ದೆಯವನನು ಶಾಂತಿ
ಸಾಗರದೊಳದ್ದಿಹಳು. ಎಲೆ ನಿದ್ದೆ, ಎನಿತು ಮೃದು



11th_Kannada_Reader_Final_16-07-2018.indd 193 16-07-2018 18:43:19

ಮಧುರಳೌ ನೀನು, ಸಮತೆಯೀಯುವೆ ಜಗದ
ಜೀವಿಗಳಿಗೆಲ್ಲ. ನಿನ್ನ ಗಾಢಾಲಿಂಗ
ನದೊಳೆಲ್ಲರೂ ಒಂದೇ. ನಿಷ್ಪಕ್ಷಪಾತಳೌ
ನೀನು. ಬಡಕೂಲಿಯಾದೊಡೆಯು, ಮೇಣರಸ
ನಾದೊಡೆಯು ಭೇದ ತೋರದೆ ನೀನು ಮುತ್ತಿಡುವೆ.
ಯೋಗಿಯಾದರೂ ಅಥವಾ ತಲೆಬಡಿಗನಾದರೂ
ನಿನ್ನ ದಿಟ್ಟಿಯೊಳೆಲ್ಲರೊಂದೆ. ಜಗದೆನಿತು
ಬಳಲಿಕೆಯ ಕೋಟಲೆಯ ನುಂಗುತಿಹೆ ನೀನು!

**ಚನ್ನ** : (ಕನವರಿಸಿ) ಬಂದೆ ನನ್ನೊಡೆಯಾ, ಬೇಡ, ಬೇಡಾ! ಬೇಡ !

**ಸಿದ್ಧಾರ್ಥ** : ಕನವರಿಸುತಿಹನು. (ಮೆಲ್ಲಗೆ) ಚನ್ನಜ್ಜಾ, ಚನ್ನಜ್ಜಾ !
ಎಲೆ ನಿದ್ದೆ, ನಿನ್ನ ಕಡಲೆನಿತಾಳವಿಹುದು ?
(ಮೈಮುಟ್ಟಿ) ಚನ್ನಜ್ಜಾ ! ಚನ್ನಜ್ಜಾ !

**ಚನ್ನ** : (ಗಾಬರಿಯಿಂದ) ಅಯ್ಯಯ್ಯೋ ! ಅಯ್ಯಯ್ಯೋ! ಏನು ನನ್ನೊಡೆಯಾ !
(ಎದ್ದು ಕಣ್ಣುಜ್ಜಿಕೊಂಡು ಸುತ್ತಲೂ ನೋಡಿ, ಸಿದ್ಧಾರ್ಥನನ್ನು ನೋಡುವನು).

**ಸಿದ್ಧಾರ್ಥ** : ಬೆದರದಿರು ಬೆದರದಿರು. ನಾನು, ಸಿದ್ಧಾರ್ಥ.

**ಚನ್ನ** : ಏನು ನನ್ನೊಡೆಯಾ ?

**ಸಿದ್ಧಾರ್ಥ** : ಒಳಗೆ ಬಾ! ಕನಸು ಕಂಡೆಯಾ ಏನು ?

**ಚನ್ನ** : (ಒಳಗೆ ಬಂದು) ಏನು ಕನಸಪ್ಪಾ !
ದುಃಸ್ವಪ್ನ ನನ್ನೊಡೆಯಾ !

**ಸಿದ್ಧಾರ್ಥ** : ಏನು ಕನಸದು ಚನ್ನಾ ?

**ಚನ್ನ** : ನಾಲಗೆಯೇ ಬಾರದೆನಗಷ್ಟು ದುಃಸ್ವಪ್ನ!

**ಸಿದ್ಧಾರ್ಥ** : ಹೇಳಬಾರದೇ ಎನಗೆ ?

**ಚನ್ನ** : ಹೇಳಬಾರದ ದುಃಸ್ವಪ್ನ! ಕೇಳಬಾರದ ದುಃಸ್ವಪ್ನ !

**ಸಿದ್ಧಾರ್ಥ** : ಇರಲಿ ಬಿಡು. ಹೋಗಿ
ಕಡಿವಾಣ ಹಾಕದೆ ಕಂದಕನ ಕರೆದು ತಾ
ಜತೆಗೆ ಇನ್ನೊಂದು ಹಯವನ್ನೂ ತಾ.

**ಚನ್ನ** : ಏತಕ್ಕೆ ?

**ಸಿದ್ಧಾರ್ಥ** : ಆಗಲೇ ಮರೆತೆಯಾ, ಬೈಗಿನಲ್ಲಂದದ್ದು ?

**ಚನ್ನ** : ಏನದು ?

**ಸಿದ್ಧಾರ್ಥ** : (ಸ್ವಗತ) ಸ್ಮೃತಿ ಕೂಡ ನರೆ ನವಿರ ಕಂಡೊಡನೆ
ದೂರಾಗುವುದು ಹೇಸಿ (ಅವನ ತಲೆ ಹಿಡಿದು ಮೆಲ್ಲನೆ ಅಲುಗಿಸಿ)
ಉದುರುದುರು ನೆನಪೇ ? ಈಗ ನೆನಪಾಯ್ತೇ ?(ಮುಗುಳ್ನಗೆ)



11th_Kannada_Reader_Final_16-07-2018.indd 194 16-07-2018 18:43:19

ಚನ್ನ : ಅಯ್ತಾಯ್ತು !

ಸಿದ್ಧಾರ್ಥ : ನಡೆ ಬೇಗ.
ಅರಮನೆಯ ಪಶ್ಚಿಮ ದ್ವಾರದೊಳು ಕಾಯುತಿರು.
ಬರುವೆನಲ್ಲಿಗೆ ಬೇಗ.

ಚನ್ನ : (ಕೈಮುಗಿದು) ಅಪ್ಪಣೆ ನನ್ನೊಡೆಯಾ.
(ಹೋಗುತ್ತಾನೆ).

ಸಿದ್ಧಾರ್ಥ : (ದೀಪದ ಬಳಿ ಸಂದು)
ಬಾ ಬೆಳಕೇ, ಬಾ ಬೇಗ. ನೀನು ಹೊರಗಿನ ಬೆಳಕು
ಜ್ಞಾನ ಒಳಗಿನ ಬೆಳಕು. ನೀನಡಿಗಡಿಗೆ ದಾರಿ
ತೋರಿಸುವೆ. ಅರಿವಾದರಾತ್ಮನನು ಕೈ ಹಿಡಿದು
ನಡೆಸುವುದು. ಎಲೆಲೆ ಹೊರಗಿನ ಬೆಳಕೆ, ಒಳಗಿನಾ
ಬೆಳಕ ಪಡೆಯಲು ಹೋಗುತಿಹೆನು. ನೆರವಾಗು.
ಬಾ ಬೆಳಕೆ, ಬಾ ಬೇಗ. (ದೀಪವಿಡಿದು ಬಾಗಿಲ ಬಳಿ ಸಂದು)
ಕಡೆಯ ವಂದನೆ ನಿನಗೆ.
ಕೋಣೆಯೇ, ಕಡೆಯ ವಂದನೆ ನಿನಗೆ. ಸವಿಯಾದ
ನೆನಪುಗಳಿಗಾವಾಸವಾಗಿರುವೆ. ಕಡೆಯ ವಂದನೆ
ನಿನಗೆ ಕೋಣೆಯೇ, ಕಡೆಯ ವಂದನೆ ನಿನಗೆ.
(ಹೋಗಿ ಮತ್ತೆ ಬಂದು)
ಪತ್ರವನು ಬರೆದಿಟ್ಟು ಹೋಗುವೆನು. ನನ್ನಿಂದ
ಅವರಿಗೇಕುದ್ವೇಗ ? (ಪತ್ರ ಬರೆದಿಟ್ಟು, ದೀಪ ತೆಗೆದುಕೊಂಡು)
ನಡೆಸೆನ್ನ ಬೆಳಕೇ, ನಡೆಸು. ಬೆಳಬೆಳಗಿ ಮುಂದೆ
ಅಡಿಯಿಡಿಸು. ನಂಬಿಹೆನು ; ಋಜು ಮಾರ್ಗವನೆ ಹಿಡಿಸು!
(ತೆರಳುತ್ತಾನೆ)

## ಪರದೆ



11th_Kannada_Reader_Final_16-07-2018.indd 195 16-07-2018 18:43:19

## ಕೃತಿ – ಕರ್ತೃ ಪರಿಚಯ



ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ ಎಂಬಲ್ಲಿ 1904ರಲ್ಲಿ ಜನಿಸಿದರು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ವೃತ್ತಿಯನ್ನು ಆರಂಭಿಸಿದ ಇವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಮಕ್ಕಳ ಕಥನ ಕವನವಾದ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ'ಯಿಂದ ತೊಡಗಿ, 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದವರೆಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕುವೆಂಪು ಅವರು ವೈವಿಧ್ಯಮಯವಾದ ಕೃತಿಗಳನ್ನು ರಚಿಸಿದರು. ನವಿಲು, ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಕಲಾಸುಂದರಿ, ಜೇನಾಗುವಾ ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. 'ನನ್ನ ದೇವರು ಮತ್ತು ಇತರ ಕಥೆಗಳು', 'ಸಂನ್ಯಾಸಿ ಮತ್ತು ಇತರ ಕಥೆಗಳು' ಇವು ಇವರ ಕಥಾ ಸಂಕಲನಗಳು. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಇವರ ಬೃಹತ್ ಕಾದಂಬರಿಗಳು. ರಕ್ತಾಕ್ಷಿ, ಬೆರಳ್ಗೆ ಕೊರಳ್, ಬಿರುಗಾಳಿ, ಯಮನ ಸೋಲು, ಜಲಗಾರ, ಧನ್ವಂತರಿಯ ಚಿಕಿತ್ಸೆ ಮೊದಲಾದವು ಅವರ ನಾಟಕಗಳು. 'ನೆನಪಿನ ದೋಣಿಯಲ್ಲಿ' ಎಂಬುದು ಅವರ ಆತ್ಮಕಥನ. 'ದ್ರೌಪದಿಯ ಶ್ರೀಮುಡಿ' ಮೊದಲಾದ ವಿಮರ್ಶಾ ಕೃತಿಗಳನ್ನೂ ರಚಿಸಿದ್ದಾರೆ. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ 1955ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1968ರಲ್ಲಿ ಭಾರತೀಯ 'ಜ್ಞಾನಪೀಠ ಪ್ರಶಸ್ತಿ' ಮತ್ತು 1988ರಲ್ಲಿ ಪಂಪ ಪ್ರಶಸ್ತಿಗಳು ಲಭಿಸಿವೆ. 1957ರಲ್ಲಿ ಧಾರವಾಡದಲ್ಲಿ ನಡೆದ 39ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸರ್ಕಾರವು ಇವರಿಗೆ 'ಪದ್ಮಭೂಷಣ' ಹಾಗೂ 'ಪದ್ಮವಿಭೂಷಣ' ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರವು 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ನಾಡೋಜ, ರಾಷ್ಟ್ರಕವಿ ಎಂಬ ಬಿರುದುಗಳೂ ಕೂಡ ಇವರಿಗೆ ದೊರಕಿವೆ. ಮೈಸೂರು, ಕರ್ನಾಟಕ, ಬೆಂಗಳೂರು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿವೆ. ಇವರು 9.11.1994ರಂದು ನಿಧನರಾದರು.

## ಕಠಿಣ ಪದಗಳ ಅರ್ಥ

ಇಳೆಯ–ಭೂಮಿಯ; ಆಮಂತ್ರಣ–ಕತೆ, ಆಹ್ವಾನ; ಭೋಗಾಭಿಲಾಷೆ–ಲೋಕಸುಖಗಳ ಆಸೆ, ಸೌಧ–ಕಟ್ಟಡ; ಮೊದ್ದ–ದಡ್ಡ, ಪೆದ್ದ; ನಿನಾದ–ಧ್ವನಿ, ಶಬ್ದ; ನಭ–ಆಕಾಶ; ಜಾಲ–ಬಲೆ; ಅಂಗನೆ–ಸ್ತ್ರೀ; ಏಳಿಸು–ಅಣಕಿಸು, ನಿಂದಿಸು; ರಮಣಿ–ಹೆಂಗಸು; ಬೆಸಸು–ಕೇಳು; ಸಾರಥಿ–ರಥವನ್ನು ಓಡಿಸುವವನು; ಕಿಂಕರ–ಸೇವಕ; ನಿರ್ಗತಿಕ–ಗತಿ ಇಲ್ಲದವನು; ತಿರೆ–ಭೂಮಿ; ಚಿತ್ತ–ಮನಸ್ಸು; ಮನ್ನಿಸು–ಕ್ಷಮಿಸು; ನೆಚ್ಚು–ನಂಬಿಕೆ; ಮೇಣ್–ಮತ್ತೆ; ಸಂವತ್ಸರ–ವರ್ಷ; ವಿಶದ–ವಿವರ; ಅತುಳ–ಹೆಚ್ಚು; ಚುಕ್ಕಿ–ನಕ್ಷತ್ರ; ಜವ–ಯಮ; ಮಾರ್ನುಡಿ–ಪ್ರತಿಮಾತು; ತೊಳಗು–ಹೊಳೆ; ಕೈವಾರಿ–ಹೊಗಳುಭಟ್ಟ; ಸೆಜ್ಜೆ–ಹಾಸಿಗೆ; ಪಹರೆ–ಕಾವಲು; ರವ–ಶಬ್ದ; ತೊಡವು– ಆಭರಣ; ಸೋಜಿಗ–ಆಶ್ಚರ್ಯ; ಕೋಟಲೆ–ಕಷ್ಟ; ಕಂಧಕ–ಸಿದ್ಧಾರ್ಥನ ಕುದುರೆಯ ಹೆಸರು; ಕಡಿವಾಣ–ಲಗಾಮು; ಹಯ–ಕುದುರೆ; ನರೆನವಿರು–ಬಿಳಿಕೂದಲು; ಉದ್ವೇಗ–ಆತಂಕ; ಋಜುಮಾರ್ಗ–ಸತ್ಯದ ಹಾದಿ.



11th_Kannada_Reader_Final_16-07-2018.indd 196 16-07-2018 18:43:19

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಸಿದ್ಧಾರ್ಥನಿಗೆ ಚನ್ನನು ತಿಳಿಸಿದ ಶುಭ ಸುದ್ದಿ ಯಾವುದು ?
2. ಸಿದ್ಧಾರ್ಥನು ಸಂಗೀತದಲ್ಲಿ ಏಕೆ ಆಸಕ್ತಿ ತೋರಲಿಲ್ಲ ?
3. 'ಇನ್ನು ನೀನು ನನ್ನ ಸಾರಥಿಯಲ್ಲ' ಎಂದು ಸಿದ್ಧಾರ್ಥನು ಹೇಳಿದಾಗ ಚನ್ನನು ಏಕೆ ಆತಂಕಗೊಂಡನು ?
4. ಹಿಂದೊಮ್ಮೆ ರಾಜ್ಯ ಬಿಟ್ಟು ಹೋಗಬೇಕೆಂದು ಸಿದ್ಧಾರ್ಥನು ಬಯಸಿದಾಗ ಬಂದ ಅಡ್ಡಿ ಏನು?
5. ಸಿದ್ಧಾರ್ಥನು ತನ್ನ ಪ್ರಯಾಣವನ್ನು ಗುಟ್ಟಾಗಿಡಲು ಕಾರಣವೇನು ?
6. ಸಿದ್ಧಾರ್ಥನು ಕೈಲಾಸನನ್ನು ಹೇಗೆ ಉಪಚರಿಸಿದನು ?
7. ಸಿದ್ಧಾರ್ಥನು ಮನೆ ಬಿಡುವಾಗ ಪತ್ರ ಬರೆದಿಡಲು ಕಾರಣವೇನು ?

**II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ತಾನು ಈ ದಿನವೇ ಮನೆ ಬಿಟ್ಟು ಹೋಗಬೇಕೆಂದು ಸಿದ್ಧಾರ್ಥನು ಆಲೋಚಿಸಲು ಕಾರಣವೇನು ?
2. ಗಂಡು ಮಗು ಹುಟ್ಟಿದ ಸುದ್ದಿಯನ್ನು ಕೇಳಿಯೂ ಸಿದ್ಧಾರ್ಥನು ಸಂತೋಷಗೊಳ್ಳಲಿಲ್ಲ. ಏಕೆ ?
3. ಸಿದ್ಧಾರ್ಥನು ಅರಮನೆಯನ್ನು ಬಿಟ್ಟು ದೂರ ಹೋಗಲು ನಿರ್ಧರಿಸಿದ್ದೇಕೆ ?
4. ಸಿದ್ಧಾರ್ಥನ ಪಯಣದ ಉದ್ದೇಶವನ್ನು ಅರಿಯಲಾರದ ಚೆನ್ನನು ತನ್ನಲ್ಲಿ ಹೇಳಿಕೊಂಡ ಮಾತುಗಳಾವುವು ?
5. ಹೊರಗಿನ ಬೆಳಕು, ಒಳಗಿನ ಬೆಳಕುಗಳಾವುವು? ಅವುಗಳ ಪ್ರಯೋಜನವೇನು? ವಿವರಿಸಿ.

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಸಿದ್ಧಾರ್ಥನು ಚೆನ್ನನಿಗೆ ನೆನಪು ಮಾಡಿಕೊಟ್ಟ ಆ ಪುಣ್ಯದಿನದ ಸಂಗತಿಗಳು ಯಾವುವು ?
2. ಸಿದ್ಧಾರ್ಥನು ನಿದ್ದೆಯ ಮಹಿಮೆಯನ್ನು ವರ್ಣಿಸಿರುವುದು ಹೇಗೆ ?
3. ಅರಮನೆಯಿಂದ ಹೊರಬೀಳುವ ಸಂದರ್ಭದ ಸಿದ್ಧಾರ್ಥನ ವರ್ತನೆಯನ್ನು ವರ್ಣಿಸಿ.

## ಭಾಷಾಭ್ಯಾಸ

**1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಪುತ್ರೋದಯ, ಗಾಢಾಲಿಂಗನ, ನಾನರಿಯೆ, ಮೌಢ್ಯಾಂಧಕಾರ.

**2. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**

ಹೃದಯಂಗಮ, ಚಿರಸ್ಮರಣೆ, ಬೆಸಸು, ಸೋಜಿಗ, ಋಜುಮಾರ್ಗ.

**3. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಬುವಿ, ಅಮೃತ, ಸರ, ಸಿರಿ, ಪಯಣ, ಜೋಯಿಸ, ಜವ, ರನ್ನ, ಯೋಗಿ.

**4. ಕೆಳಗಿನ ಪದಗಳ ಅರ್ಥ ವ್ಯತ್ಯಾಸಗಳನ್ನು ತಿಳಿಸಿ.**

ಎಳೆ–ಇಳೆ, ತೊರೆ–ಮರೆ, ತೊಳಗು–ಪಳಗು; ಸ್ಪರ್ಷ–ಹರ್ಷ; ಬೈಗು–ಬೆಳಗು; ಒಡವೆ–ಒಡೆಯ.

## ಚಟುವಟಿಕೆ

1. ಕುವೆಂಪು ಅವರು ರಚಿಸಿರುವ ಇನ್ನಿತರ ನಾಟಕ, ಕಥೆ, ಕಾದಂಬರಿಗಳನ್ನು ಸಂಗ್ರಹಿಸಿ ಓದಿರಿ..
2. ಮಹಾರಾತ್ರಿ ನಾಟಕವನ್ನು ಅಭಿನಯಿಸಿ ತೋರಿಸಿರಿ.





11th_Kannada_Reader_Final_16-07-2018.indd 197 16-07-2018 18:43:19

ಉಪಪಠ್ಯ

ಘಟಕ ಒಂಬತ್ತು

# ಮಿರ್ಜಾರ ಮಾನವೀಯತೆ

– ಡಿ.ವಿ.ಜಿ.




**ಕಾಯಕವೇ ಕೈಲಾಸವೆಂದು ಪ್ರಾಜ್ಞರು ಸಾರಿದ ವಾಣಿಯನ್ನು ಅರಿವು ಮಾಡಿಕೊಂಡು ಸೇವೆಯನ್ನು ಸಲ್ಲಿಸುವುದು ಉತ್ತಮರ ಲಕ್ಷಣವಾಗಿದೆ. ಅಧಿಕಾರ ದೊರೆತಾಗ ತನಗಾಗಿ ತಾನು ಎಂದು ಭಾವಿಸದೆ ಪರರಿಗಾಗಿ ತಾನು ಎಂದು ಭಾವಿಸಿ ಜನ ಸೇವೆಯನ್ನು ಮಾಡುವುದು ಎಲ್ಲರ ಕರ್ತವ್ಯವಾಗಿದೆ ಎಂಬುದು ಈ ಪಾಠದ ಆಶಯವಾಗಿದೆ.**



ಸರ್ ಮಿರ್ಜಾ ಇಸ್ಮಾಯಿಲ್‌ರವರು 24.10.1833ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರು ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ ಕಾರ್ಯ ನಿರ್ವಹಿಸಿದರು.

ಸರ್ಕಾರದ ಪ್ರತಿಯೊಂದು ಇಲಾಖೆಗೂ ಮಿರ್ಜಾರವರು ತಕ್ಕಷ್ಟು ಗಮನ ಕೊಟ್ಟಿದ್ದರು. ಎಲ್ಲಿ ಯಾವ ಚೆನ್ನು(ಇಂಪ್ರೂವ್‌ಮೆಂಟ್) ಮಾಡುವ ಯೋಚನೆ ಬಂದರೂ ಮಿರ್ಜಾರವರು ಅದನ್ನು ಉತ್ಸಾಹದಿಂದ ಗ್ರಹಿಸಿ ಕಾರ್ಯಸಾಧ್ಯ ಮಾಡುತ್ತಿದ್ದರು.

ಬೆಂಗಳೂರು ಪಟ್ಟಣದಲ್ಲಿ ಬೆಳಿಗ್ಗೆ ಹತ್ತು ಹನ್ನೊಂದು ಘಂಟೆಯವರೆಗೂ ಅವರು ಕುದುರೆಯ ಮೇಲೆ ಕುಳಿತು ಬೀದಿ ಬೀದಿಯಲ್ಲಿ ಸಂಚಾರ ಮಾಡಿ ಅಲ್ಲಲ್ಲಿ ಕಂಡು ಬಂದ ಕೊರತೆಗಳನ್ನು ನಿವಾರಣೆ ಮಾಡಿಸುತ್ತಿದ್ದರು.

ಈ ಸಂದರ್ಭದಲ್ಲಿ ಒಂದು ಸಂಗತಿ ನನ್ನ ನೆನಪಿಗೆ ಬರುತ್ತದೆ. ಮಿರ್ಜಾರವರು ನಿಧನ ಹೊಂದಿದ ದಿವಸ ನಾನು ಸ್ಮಶಾನಕ್ಕೆ ಹೋಗಿದ್ದೆ. ಶವಸಂಸ್ಕಾರಾದಿಗಳು ಮುಗಿಯುವ ವೇಳೆಗೆ ರಾತ್ರಿ ಒಂಬತ್ತು–ಹತ್ತು ಗಂಟೆಯಾಗಿತ್ತು. ಜನಸಂದಣಿ ಬಹಳ ದೊಡ್ಡದಾಗಿತ್ತು. ಆ ಗದ್ದಲದಲ್ಲಿ ಎಂ.ಪಿ.ಸೋಮಶೇಖರರಾಯರೂ ನಾನೂ ಬೇರೆಬೇರೆಯಾದೆವು. ನಾನು ಅವರನ್ನು ಹುಡುಕಾಡುತ್ತಾ ಸ್ಮಶಾನ ಪ್ರದೇಶದ ಗೇಟಿನವರೆಗೂ ಬಂದೆ. ಅಲ್ಲಿ ಒಬ್ಬಾತ ಬಿಕ್ಕಿಬಿಕ್ಕಿ ಅಳುತ್ತ ನಿಂತಿದ್ದ. ಆತನ ಬಟ್ಟೆಯ ರೀತಿಯಿಂದ ಆತ ಹಿಂದೂ ಎಂದು ನನಗೆ ತೋರಿತು. ನಾನು ಆತನನ್ನು ವಿಚಾರಿಸಿದೆ:

ನಾನು : 'ನೀವು ಯಾರು?'

ಆತ : "ಸ್ವಾಮಿ, ನಾನು ಕಬ್ಬನ್ ಪೇಟೆಯವನು. ಒಂದು ದಿನ ಬೆಳಿಗ್ಗೆ ನನ್ನ ಹೆಂಡತಿ ನೀರಿಗಾಗಿ ಬನಪ್ಪ ಪಾರ್ಕಿನ ಪಕ್ಕದ ಕೊಳಾಯಿಗೆ ಹೋದಳು. ಬಹಳ



11th_Kannada_Reader_Final_16-07-2018.indd 198 16-07-2018 18:43:20

ಹೊತ್ತಾದರೂ ಹಿಂದಿರುಗಲಿಲ್ಲ. ಆ ದಿನ ನೀರು ಹಿಡಿಯುವುದಕ್ಕೆ ಹೋದವರು ಬಹು ಮಂದಿ ಅಲ್ಲಿ ಸೇರಿದ್ದರು. ಆದ್ದರಿಂದ ಜಗಳಗಳೂ ಗಲಾಟೆಯೂ ನಡೆಯಿತು. ಸುಮಾರು ಒಂದು ಘಂಟೆ ಕಾದ ಮೇಲೆ ನನ್ನ ಹೆಂಡತಿಗೆ ನೀರು ಸಿಕ್ಕಿತು.

ಆಕೆ ಬಸುರಿ, ಆ ದೊಡ್ಡ ಕೊಡವನ್ನು ಹೊರಲಾರದೆ ಹೊತ್ತುಕೊಂಡು ಬಂದಳು. ಅಲ್ಲಿ ಜಗಳವಾದದ್ದರಿಂದಲೂ ಯಾರೋ ಆಕೆಯನ್ನು ಬೈದದ್ದರಿಂದಲೂ ಆಕೆಗೆ ನೋವಾಗಿದ್ದದ್ದರಿಂದಲೂ ಮೈಸ್ವಸ್ಥವಿಲ್ಲದೆ ಆಕೆ ಕಣ್ಣೀರು ಹಾಕುತ್ತ ಮನೆಗೆ ಬಂದಳು. ಆಕೆಯ ಹಿಂದೆ ಒಬ್ಬ ಸರಕಾರದ ಜವಾನ ಬಂದು, 'ಈ ಮನೆ ಯಾರದು?' ಎಂದು ಕೇಳಿದ. ನಾನು 'ಏಕೆ?' ಎಂದೆ. ಆತ ಹೇಳಿದ : 'ದಿವಾನ್ ಸಾಹೇಬರ ಸವಾರಿ ಸೇಂಟ್ ಮಾರ್ಥಾ ಆಸ್ಪತ್ರೆಯ ಹತ್ತಿರ ನಿಂತಿದೆ. ಸಾಹೇಬರು ಈ ಹೆಂಗಸಿನ ಜೊತೆಯಲ್ಲಿ ಹೋಗಿ ಮನೆ ತಿಳಿದುಕೊಂಡು ಬರುವಂತೆ ಹೇಳಿದರು. ಅದಕ್ಕಾಗಿ ಬಂದಿದ್ದೇನೆ' ಎಂದ.

ಅದನ್ನು ಕೇಳಿ ನನಗೆ ಗಾಬರಿಯಾಗಿ ಏನು ಸಮಾಚಾರವೋ ನೋಡೋಣವೆಂದು ಆ ಜವಾನನ ಜೊತೆಯಲ್ಲಿ ದಿವಾನರಿರುವ ಕಡೆಗೆ ಹೋದೆ. ನಾನು ಹೋಗಿ ಕೈಮುಗಿಯುತ್ತಲೇ ಸಾಹೇಬರು, 'ನೀನು ಯಾರು?' ಎಂದು ಮುಂತಾಗಿ ವಿಚಾರಿಸಿದರು. ನಾನು ಇದ್ದ ಸಂಗತಿ ಹೇಳಿದೆ. ಅವರು, 'ನಿಮ್ಮ ಮನೆಯಲ್ಲಿ ಕೊಳಾಯಿ ಇಲ್ಲವೋ?' ಎಂದು ಕೇಳಿದರು. ನಾನು, 'ಇಲ್ಲ ಸ್ವಾಮಿ. ಅಷ್ಟಕ್ಕೆ ಅನುಕೂಲವಿಲ್ಲ. ಬೀದಿ ಕೊಳಾಯಿಂದಲೇ ನೀರು ತಂದುಕೊಳ್ಳುತ್ತೇವೆ' ಎಂದೆ. ಸಾಹೇಬರು, 'ಬೀದಿ ಕೊಳಾಯಿಗೂ ನಿಮ್ಮ ಮನೆಗೂ ಎಷ್ಟು ದೂರ?' ಎಂದು ಕೇಳಿದರು. ನಾನು, 'ಅರ್ಧ ಮೈಲಿ ಆದೀತು ಸ್ವಾಮಿ. ನನ್ನ ಮನೆ ಇರುವುದು ಹಿಂದುಗಡೆಯ ಸಂದಿಯಲ್ಲಿ. ಸಂದಿಗೊಂದಿ ಸುತ್ತಿಕೊಂಡು ಹೋಗಬೇಕು' ಎಂದೆ.

ದಿವಾನ್ ಸಾಹೇಬರು ಆಗ ಅವರ ಜೊತೆಯಲ್ಲಿದ್ದ ಇಂಜಿನಿಯರ್ ಸಾಹೇಬರನ್ನು ಕುರಿತು, 'ಈತನ ಮನೆಯ ಹತ್ತಿರ ಎಲ್ಲಾದರೂ ಒಂದು ಕೊಳಾಯಿ ಹಾಕಿಸಿ ಕೊಡಲಾದೀತೇ?' ಎಂದರು. ಇಂಜಿನಿಯರು, 'ಪ್ಲಾನು ಬರೆಸಿ ಸಾದರ ಮಾಡುತ್ತೇನೆ. ಅದನ್ನು ಮಂಜೂರು ಮಾಡಿದರೆ ಕೆಲಸ ಮಾಡಿಸುತ್ತೇನೆ' ಎಂದರು. ದಿವಾನರು, 'ಈಗಲೇ ಇಲ್ಲೇ ಮಂಜೂರು ಮಾಡಿದ್ದೇನೆ. ಕೆಲಸ ಪ್ರಾರಂಭ ಮಾಡಿಸಿ. ನಾಳೆ ಬೆಳಿಗ್ಗೆ ಅವರ ಮನೆಗೆ ನೀರು ಆ ಹೊಸ ಕೊಳಾಯಿಂದ ಬರಬೇಕು. ಜನ ನಿಬಿಡವಾಗಿರುವ ಈ ಪ್ರದೇಶದಲ್ಲಿ ಒಂದೋ ಎರಡೋ ಕೊಳಾಯಿಗಳನ್ನಿಟ್ಟರೆ ಬಹು ಜನಕ್ಕೆ ಸಹಾಯ ಮಾಡಿದಂತಲ್ಲ. ಒಂದೊಂದು ಸಣ್ಣ ಪ್ರದೇಶಕ್ಕೂ ಮಧ್ಯೆ ಅನುಕೂಲವಾದ ಕಡೆ ಕೊಳಾಯಿ ಇಡಬೇಕು. ನಾನು ನಾಳೆ ಇಲ್ಲಿಗೆ ಬರುವ ವೇಳೆಗೆ ಇವರಿಗೆ ನೀವು ಕೊಳಾಯಿ ನೀರು ಕೊಟ್ಟು ಉಪಕಾರ ಮಾಡಬೇಕು' ಎಂದರು.

ಸ್ವಾಮಿ, ಅದರಂತೆ ಕೆಲಸ ನಡೆಯಿತು ಎರಡು ದಿವಸಗಳೊಳಗಾಗಿ ಕೊಳಾಯಿ ಬಂತು. ಈಗ ಆ ನೀರನ್ನು ಕುಡಿಯುತ್ತಿದ್ದೇವೆ. ನೂರಾರು ಮಂದಿ ಹೆಂಗಸರು ನೀರಿಗೆ ಜಗಳವಾಡುತ್ತಿದ್ದುದನ್ನೂ ಬಸುರಿ ಹೆಂಗಸು ಕಷ್ಟ ಪಡುತ್ತಿದ್ದುದನ್ನೂ ನೋಡಿ ಕನಿಕರಪಟ್ಟವರು ಆ ಧಣಿ. ನಮ್ಮನ್ನು ಹಾಗೆ ನೋಡಿಕೊಳ್ಳುವವರು ಬೇರೆ ಯಾರಿದ್ದಾರೆ?"

ಹೀಗೆ ಹೇಳುತ್ತ ಗೋಳಿಟ್ಟ.

**ಕೃತಿ – ಕರ್ತೃ ಪರಿಚಯ**



ಡಿ.ವಿ.ಜಿ. ಎಂಬ ಹೆಸರಿನಿಂದ ಪ್ರಸಿದ್ಧರಾಗಿರುವ ದೇವನಹಳ್ಳಿ



11th_Kannada_Reader_Final_16-07-2018.indd 199 16-07-2018 18:43:20

ವೆಂಕಟರಮಣಯ್ಯ ಗುಂಡಪ್ಪ ಅವರು 1887ರಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನಲ್ಲಿ ಜನಿಸಿದರು. ಇವರು ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿದ್ದಾರೆ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರ ಜೊತೆ ಗುಂಡಪ್ಪನವರು ನಿಕಟ ಸಂಪರ್ಕವನ್ನು ಹೊಂದಿದ್ದರು. 1932ರಲ್ಲಿ ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. 1967ರಲ್ಲಿ ಮೈಸೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವ ಸಲ್ಲಿಸಿದೆ. ಇವರ 'ಶ್ರೀ ಮದ್ಭಗವದ್ಗೀತಾ ತಾತ್ಪರ್ಯ' ಎನ್ನುವ ಕೃತಿಗೆ 1967ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರು, ಮಂಕುತಿಮ್ಮನ ಕಗ್ಗ, ಮರುಳ ಮುನಿಯನ ಕಗ್ಗ, ಉಮರನ ಒಸಗೆ, ಅಂತಃಪುರ ಗೀತೆಗಳು, ಶ್ರೀರಾಮ ಪರೀಕ್ಷಣಂ, ಸಂಸ್ಕೃತಿ, ನಿವೇದನ, ಬಾಳಿಗೊಂದು ನಂಬಿಕೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರು 7.10.1975ರಲ್ಲಿ ನಿಧನರಾದರು.

ಪ್ರಸ್ತುತ 'ಮಿರ್ಜಾರ ಮಾನವೀಯತೆ' ಎನ್ನುವ ಪಾಠವನ್ನು ಡಿ.ವಿ.ಜಿ.ಯವರು ರಚಿಸಿರುವ 'ಜ್ಞಾಪಕ ಚಿತ್ರಶಾಲೆ' ಎನ್ನುವ ಕೃತಿಯಲ್ಲಿನ ಮೈಸೂರು ದಿವಾನರುಗಳು ಎಂಬ ಭಾಗದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

### ಕಠಿಣ ಪದಗಳ ಅರ್ಥ

ಗ್ರಹಿಸಿ–ಅರ್ಥ ಮಾಡಿಕೊಂಡು, ತಿಳಿದುಕೊಂಡು; ಮಂಜೂರು–ಅನುಮತಿ ನೀಡುವುದು; ಪ್ಲಾನು–ನಕ್ಷೆ, ನಕಾಶೆ; ಧಣಿ–ಒಡೆಯ; ಕೊಳಾಯಿ–ನಲ್ಲಿ, ನಳ;

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಮಿರ್ಜಾರವರು ಎಲ್ಲಿ, ಯಾವಾಗ ಜನಿಸಿದರು?
2. ಮಿರ್ಜಾರವರು ನಿಧನ ಹೊಂದಿದ ದಿನ ಸ್ಮಶಾನಕ್ಕೆ ಹೋಗಿದ್ದವರಾರು ?
3. ಕೊಳಾಯಿ ನೀರು ತರಲು ಹೋದವರಾರು ?
4. ಸರಕಾರದ ಜವಾನ ಬಂದು ಏನು ಹೇಳಿದ ?
5. ದಿವಾನರು ಇಂಜಿನಿಯರಿಗೆ ಏನು ಕೇಳಿದರು ?

**II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಹೆಂಗಸು ಮನೆಗೆ ಹಿಂದಿರುಗಲು ತಡವಾದುದೇಕೆ?
2. ಮನೆಯ ಯಜಮಾನನು ದಿವಾನರ ಪ್ರಶ್ನೆಗೆ ಏನೆಂದು ಉತ್ತರಿಸಿದನು ?
3. ದಿವಾನರು ಮತ್ತು ಇಂಜಿನಿಯರ ನಡುವೆ ನಡೆದ ಸಂವಾದವೇನು ?
4. ದಿವಾನ್ ಮಿರ್ಜಾರಲ್ಲಿದ್ದ ಮಾನವೀಯತೆ ಎಂತಹುದು ?
5. ಸ್ಮಶಾನದಲ್ಲಿ ಲೇಖಕರಿಗಾದ ಅನುಭವವೇನು ?

## ಚಟುವಟಿಕೆ

1. ಮೈಸೂರು ಸಂಸ್ಥಾನದ ಚರಿತ್ರೆಯನ್ನು ಓದಿ ತಿಳಿಯಿರಿ.
2. ಸರ್. ಎಂ. ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನಕ್ಕೆ ನೀಡಿದ ಕೊಡುಗೆಯ ಕುರಿತು ಪ್ರಬಂಧವನ್ನು ಬರೆಯಿರಿ.



11th_Kannada_Reader_Final_16-07-2018.indd 200 16-07-2018 18:43:20

ಘಟಕ ಒಂಬತ್ತು

# ಅಲಂಕಾರ

ಮನುಷ್ಯರು, ತಾವು ಸುಂದರವಾಗಿ ಕಾಣಿಸಿಕೊಳ್ಳುವುದಕ್ಕಾಗಿ ವಿವಿಧ ಬಗೆಯ ಬಟ್ಟೆ ಬರೆ ಮತ್ತು ಆಭರಣಗಳಿಂದ ಅಲಂಕಾರ ಮಾಡಿಕೊಳ್ಳುತ್ತಾರೆ. ಹಾಗೆಯೇ ಮಾತನಾಡುವಾಗ ತಾವು ಆಡುವ ಮಾತು ಕೇಳುವವರಿಗೆ ಹಿತವಾಗುವಂತೆ, ಆಕರ್ಷಕವಾಗಿ ಕಾಣುವಂತೆ, ಮನಮುಟ್ಟುವಂತಿರುವುದಕ್ಕಾಗಿ ಚಮತ್ಕಾರದಿಂದ ಹೇಳುವುದುಂಟು. ಉದಾಹರಣೆಗೆ : 'ಸೂರ್ಯನು ಉದಯಿಸಿದನು' ಎಂಬ ವಾಕ್ಯದ ಬದಲಿಗೆ 'ಉದಯಿಸಿದ ಸೂರ್ಯನು, ಧರೆ ಸುಮಂಗಲಿಯ ಹಣೆಯ ಕುಂಕುಮದ ಬೊಟ್ಟಿನಂತೆ' ಎಂದು ಹೇಳುವಲ್ಲಿ ಒಂದು ರೀತಿಯ ಚಮತ್ಕಾರ ಕಾಣುತ್ತದೆ. ಹೀಗೆ ಚಮತ್ಕಾರದ ಮಾತುಗಳಿಂದ ವರ್ಣಿಸುವುದನ್ನು ಅಲಂಕಾರ ಎನ್ನಲಾಗುವುದು. ಹೀಗೆ ಕವಿಗಳು ಬರೆದ ಕಾವ್ಯಮಯ ಭಾಷೆಯಲ್ಲಿ ಬರುವ ಶಬ್ದ, ಅರ್ಥ ವೈಚಿತ್ರ್ಯದಿಂದ ಉಂಟಾಗುವ ಕಾವ್ಯ ಸೌಂದರ್ಯಕ್ಕೆ ಅಲಂಕಾರ ಎಂದು ಹೆಸರು. ಅಲಂಕಾರ, ಕಾವ್ಯ ಸೌಂದರ್ಯವನ್ನು ಹೆಚ್ಚಿಸುವಂತಹುದು.

ಅಲಂಕಾರಗಳನ್ನು ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂದು ಎರಡು ವಿಭಾಗ ಮಾಡಲಾಗಿದೆ.

## ಶಬ್ದಾಲಂಕಾರಗಳು

ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿದರೆ ಅದನ್ನು ಶಬ್ದಾಲಂಕಾರ ಎಂದು ಕರೆಯುತ್ತಾರೆ. ಶಬ್ದಾಲಂಕಾರದಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಅವು: 1. ಅನುಪ್ರಾಸ 2. ಯಮಕ 3. ಚಿತ್ರಕವಿತ್ವ.

### 1. ಅನುಪ್ರಾಸ

ಅನುಪ್ರಾಸದಲ್ಲಿ ವೃತ್ತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ಎರಡು ವಿಧಗಳಿವೆ.

ಅ) ವೃತ್ತ್ಯನುಪ್ರಾಸ : ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನರಾವರ್ತಿತವಾಗಿದ್ದರೆ ಅದನ್ನು ವೃತ್ಯನುಪ್ರಾಸ ಎನ್ನುವರು.

ಉದಾಹರಣೆ 1 :

ಎಳೆಗಿಳಿಗಳ ಬಳಗಂ ಗಳ

ಗಳನಿಳಿತಂದೆಳಸಿ ಬಳಸಿ ಸುಳಿದೊಳವುಗುತಂ।

ನಳನಳಿಸಿ ಬೆಳೆದು ಕಳಿಯದ

ಕಳವೆಯ ಕಳಶಂಗಳಂ ಕರಂ ಖಂಡಿಸುಗುಂ॥

ಈ ಪದ್ಯದಲ್ಲಿ ಗ, ಳ, ಕ ಅಕ್ಷರಗಳು ಮತ್ತೆ ಮತ್ತೆ ಪುನರಾವರ್ತಿತವಾಗಿರುವುದನ್ನು ಕಾಣಬಹುದು.



11th_Kannada_Reader_Final_16-07-2018.indd 201 16-07-2018 18:43:20

ಉದಾಹರಣೆ 2 :

'ಬಲ್ಲವನೇ ಬಲ್ಲ ಬೆಲ್ಲದ ಸವಿಯ'

ಇಲ್ಲಿ ಲ ಮತ್ತು ಬ ಅಕ್ಷರಗಳು ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಅ) ಛೇಕಾನುಪ್ರಾಸ : ಎರಡೆರಡು ವ್ಯಂಜನಾಕ್ಷರಗಳು ಜೋಡಿಯಾಗಿ ಪದ್ಯದ ಸಾಲುಗಳಲ್ಲಿ ಹಲವೆಡೆ ಪುನರಾವರ್ತಿತವಾಗಿದ್ದರೆ ಅದನ್ನು ಛೇಕಾನುಪ್ರಾಸ ಎನ್ನುವರು.

ಉದಾಹರಣೆ 1 :

ಕೆಲದೊಳ್ ಪುಳಿಂದಿಯಿರೆ ಪೆ

ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ।

ಚಲದಿಂ ಕಾಡಂ ಕಾಡಂ

ಸಲೆ ಪಸಿವಂ ಮರೆದು ತಣಿದು ಬೇಡಂ ಬೇಡಂ॥

ಈ ಪದ್ಯದಲ್ಲಿ ನೋಡಂ ನೋಡಂ, ಕಾಡಂ ಕಾಡಂ, ಬೇಡಂ ಬೇಡಂ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಉದಾಹರಣೆ 2 :

ತರತರದ ಕಲ್ಲೋಲ ಮಾಲೆಗಳ ಲೀಲೆಗಳ

ಬೆರೆಬೆರೆವ ರಾಜ ಹಂಸಾಳಿಗಳ ಕೇಳಿಗಳ

ಪರಿಪರಿವನೇರ್ವನಿಗಳಾ ಕರದ ಶೀಕರದ ನೋರೆಯ ಬೊಬ್ಬುಳಿಯ ಸುಳಿಯ।

ಮೊರೆಮೊರೆದು ಘೂರ್ಮಿಸುವ ಪರಿವುಗಳ ಮುರಿವುಗಳ

ತಿರುತಿರುಗಿ ಸುಳಿವ ಜಲಜಂತುಗಳಗೊಂತುಗಳ

ನೆರೆನೆರೆದು ಮುನಿಜಂ ಸೇವಿಸುವ ಭಾವಿಸುವ ಗಂಗೆಗವನಿಜೆ ಬಂದಳು॥

ಈ ಪದ್ಯದಲ್ಲಿ ತರತರ, ಬೆರೆಬೆರೆ, ಪರಿಪರಿ, ಮೊರೆಮೊರೆ, ತಿರುತಿರುಗಿ, ನೆರೆನೆರೆದು ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿ ಬಂದು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ.

ಉದಾಹರಣೆ 3 :

ಉಗುಳಿ ಉಗುಳಿ ರೋಗ

ಹಾಡಿ ಹಾಡಿ ರಾಗ

ಮಾಡಿ ಮಾಡಿ ಕೆಟ್ಟರು

ನೀಡಿ ನೀಡಿ ಕೆಟ್ಟರು

ಇಲ್ಲಿ ಉಗುಳಿ ಉಗುಳಿ, ಹಾಡಿ ಹಾಡಿ, ನೀಡಿ ನೀಡಿ, ಮಾಡಿ ಮಾಡಿ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿವೆ.



11th_Kannada_Reader_Final_16-07-2018.indd 202 16-07-2018 18:43:20

## 2. ಯಮಕಾಲಂಕಾರ

ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದಗಳು ಒಂದು ಪದ್ಯದ ಆದಿ, ಮಧ್ಯ ಅಥವಾ ಅಂತ್ಯ ಸ್ಥಾನಗಳಲ್ಲಿ ನಿಯತವಾಗಿ ಮತ್ತೆ ಮತ್ತೆ ಬರುವುದನ್ನು ಯಮಕಾಲಂಕಾರ ಎನ್ನುವರು.

ಉದಾಹರಣೆ 1 :

ಅಲ್ಲಿಗಲ್ಲಿಗೆ ಬೆಳೆದ ಬೆಳಿಗಳಿಂ ಮೆಳೆಗಳಿಂ

ದಲ್ಲಿಗಲ್ಲಿಗೆ ವನಸ್ಥಲಗಳಿಂ ಕೊಳಗಳಿಂ

ದಲ್ಲಿಗಲ್ಲಿಗೆ ರನ್ನದೆರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ

ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ

ದಲ್ಲಿಗಲ್ಲಿಗೆ ನರೆದ ಶುಕಗಳಿಂ ಪಿಕಗಳಿಂ

ದಲ್ಲಿಗಲ್ಲಿಗೆ ಗವಾಸ್ವದಗಳಿಂ ನದಿಗಳಿಂದಾದೇಶಮೊಪ್ಪಿರ್ದುದು

ಈ ಪದ್ಯದಲ್ಲಿ ಪ್ರತಿಸಾಲಿನ ಆದಿಯಲ್ಲಿ 'ಅಲ್ಲಿಗಲ್ಲಿಗೆ' ಎಂಬ ಪದ ನಿಯತವಾಗಿ ಮತ್ತೆ ಮತ್ತೆ ಬಂದಿದೆ.
ಉದಾಹರಣೆ 2 :

ಎಳೆವಾಸೆ ತೊಡರ್ದುದೆನೆ ಮಿಸು

ಪೆಳೆವಾಸೆಯ ದೆಸೆಯೆ ನಿಂದಳಂ ಕೈವಿಡಿದೊ

ಲ್ದೆಳೆವಾಸೆಯಾಂತನಂಬುಜ

ದೆಳೆವಾಸೆಡೆಗೊಂಡ ಪುಳಿನದೆಡೆಗವನೀಶಂ

ಈ ಪದ್ಯದಲ್ಲಿ ಎಳವಾಸೆ ಎನ್ನುವ ಪದವು ನಿಯತವಾಗಿ ಮತ್ತೆ ಮತ್ತೆ ಬಂದಿರುವುದನ್ನು ಕಾಣಬಹುದು.

## 3. ಚಿತ್ರಕವಿತ್ವ

ಅಕ್ಷರ ಅಥವಾ ಪದಗಳ ಚಮತ್ಕಾರ ಹುಟ್ಟಿಸಿ ರಚಿಸಿದ ಪದ್ಯಗಳೇ ಚಿತ್ರಕವಿತ್ವ

ಉದಾಹರಣೆ 1 :

ನನ್ದನ ನನ್ದನ ನಿನ್ನೊ

ನ್ದನ್ದದ ಮೈ ಮುನ್ದೆ ನಿನ್ದುದೆನ್ದೆನೆ ಮುದದಿ

ನ್ದನ್ದಿನ್ದುನ್ದೆನ್ನದೆ ನೀ

ನೆನ್ದುಂ ಮನ್ಮನದೆ ನಿಮ್ಮಿನಿನ್ದೀ ಮುದಮಂ



11th_Kannada_Reader_Final_16-07-2018.indd 203 16-07-2018 18:43:20

# ಅರ್ಥಾಲಂಕಾರಗಳು

ಪದಗಳ ಅರ್ಥ ಚಮತ್ಕಾರದಿಂದ ಕಾವ್ಯ ಸೌಂದರ್ಯ ಹೆಚ್ಚಿದರೆ ಅದನ್ನು ಅರ್ಥಾಲಂಕಾರ ಎನ್ನುವರು. ಅರ್ಥಾಲಂಕಾರದಲ್ಲಿ ನೂರಕ್ಕೂ ಹೆಚ್ಚು ವಿಧಗಳಿವೆ. ಅವುಗಳಲ್ಲಿ ಪ್ರಮುಖವಾದ ಕೆಲವು ಅರ್ಥಾಲಂಕಾರಗಳನ್ನು ಇಲ್ಲಿ ಪರಿಚಯ ಮಾಡಿಕೊಳ್ಳೋಣ.

## 1. ಉಪಮಾಲಂಕಾರ

ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ಹೇಳುವುದಕ್ಕೆ ಉಪಮಾಲಂಕಾರ ಎಂದು ಹೆಸರು. ಹೋಲಿಸಲ್ಪಡುವ ಮತ್ತು ಹೋಲಿಸುವ ವಸ್ತುಗಳು ಸಮಾನ ಧರ್ಮವನ್ನು ಹೊಂದಿರಬೇಕು.

ಎರಡು ವಸ್ತುಗಳನ್ನು ಪರಸ್ಪರ ಹೋಲಿಸಿ ಉಪಮಾಲಂಕಾರವನ್ನು ಮಾಡುವಾಗ ಅದರಲ್ಲಿ ಈ ಸಂಗತಿಗಳಿರಬೇಕು.

ಅ. ಉಪಮೇಯ : ಯಾವ ವಸ್ತುವನ್ನು ಹೋಲಿಸುತ್ತೇವೆಯೋ ಅದು.

ಆ. ಉಪಮಾನ : ಯಾವುದಕ್ಕೆ ಹೋಲಿಸುತ್ತೇವೆಯೋ ಅದು.

ಇ. ಉಪಮಾವಾಚಕ : 'ಅಂತೆ', 'ವೋಲ್' ಮುಂತಾದ ಶಬ್ದಗಳು ಉಪಮಾನ ಮತ್ತು ಉಪಮೇಯಕ್ಕೆ ಹೋಲಿಕೆ ತರುವುದರಿಂದ ಅವು ಉಪಮಾಚಾಚಕಗಳು.

ಈ. ಸಮಾನ ಧರ್ಮ : ಉಪಮಾನ ಉಪಮೇಯಗಳಲ್ಲಿರುವ ಸಮಾನ ಗುಣಗಳು.

ಉದಾಹರಣೆಗೆ : ಶಕುಂತಲಳ ಮುಖ ಕಮಲದಂತೆ ಅರಳಿತು.

ಎನ್ನುವಾಗ ಇಲ್ಲಿ,

ಉಪಮೇಯ : ಶಕುಂತಲಳ ಮುಖ

ಉಪಮಾನ : ಕಮಲ

ಉಪಮಾವಾಚಕ : ಅಂತೆ

ಸಮಾನ ಧರ್ಮ : ಅರಳುವುದು.

ಇಲ್ಲಿ ಉಪಯಮೇಯವಾದ ಶಕುಂತಲಾಳ ಮುಖವನ್ನು ಉಪಮಾನವಾದ ಕಮಲಕ್ಕೆ ಹೋಲಿಸಲಾಗಿದೆ.

## 2. ರೂಪಕಾಲಂಕಾರ

ಎರಡೂ ಒಂದೆ ಎಂದು ಅಭೇದ(ಭೇದವಿಲ್ಲದೆ) ಕಲ್ಪಿಸಿ ಹೇಳಿದರೆ ಅದನ್ನು ರೂಪಕಾಲಂಕಾರ ಎನ್ನುವರು.

ಉದಾಹರಣೆಗೆ : ದ್ರೌಪದಿಯ ಮುಖ ಕಮಲ ಅರಳಿತು.

ಇಲ್ಲಿ ಮುಖ ಎಂಬುದು ಉಪಮೇಯ, ಕಮಲ ಎಂಬುದು ಉಪಮಾನ. ಮುಖವೇ ಕಮಲವಾಗಿರುವುದ–ರಿಂದ ಅದು ಮುಖ ಕಮಲ. ಆದ್ದರಿಂದ ಇದು ರೂಪಕಾಲಂಕಾರ.

## 3. ಉತ್ಪ್ರೇಕ್ಷಾಲಂಕಾರ

ಒಂದು ಪದಾರ್ಥವನ್ನಾಗಲೀ ಸನ್ನಿವೇಶವನ್ನಾಗಲೀ ಮತ್ತೊಂದನ್ನಾಗಿ ಸಂಭಾವಿಸಿ(ಕಲ್ಪಿಸಿ) ವರ್ಣಿಸಿದರೆ ಅದನ್ನು ಉತ್ಪ್ರೇಕ್ಷಾಲಂಕಾರ ಎನ್ನುವರು. ಅಂದರೆ ಉಪಮೇಯವನ್ನು ಉಪಮಾನವನ್ನಾಗಿ ಕಲ್ಪಿಸಿ ವರ್ಣಿಸುವುದು.



11th_Kannada_Reader_Final_16-07-2018.indd 204 16-07-2018 18:43:20

ಉದಾಹರಣೆ :

ತ್ರೈಲೋಕ್ಯ ಸುಂದರಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಅಚ್ಚೊದ ಸರೋವರವು ಕಂಗೊಳಿಸುತ್ತಿತ್ತು.

ಉಪಮೇಯ : ಅಚ್ಚೊದ ಸರೋವರ

ಉಪಮಾನ : ರನ್ನಗನ್ನಡಿ

ಇಲ್ಲಿ ಉಪಮೇಯವಾದ ಅಚ್ಚೊದ ಸರೋವರವು ಉಪಮಾನವಾದ ರನ್ನದ ಕನ್ನಡಿ ಎಂದು ಸಂಭಾವಿಸ(ಕಲ್ಪಿಸಿ)ಲಾಗಿದೆ. ಆದುದರಿಂದ ಇದು ಉತ್ಪ್ರೇಕ್ಷಾಲಂಕಾರ.

## 4. ದೃಷ್ಟಾಂತಾಲಂಕಾರ

ಎರಡು ಬೇರೆ ಬೇರೆ ವಾಕ್ಯಗಳು ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು ದೃಷ್ಟಾಂತಾಲಂಕಾರ ಎನ್ನುವರು.

ಉದಾಹರಣೆ : 'ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ಕಾವ್ಯವನ್ನು ರಚಿಸದಿರುವನೆ? ಕತ್ತಲೆಯ ಭಯದಿಂದ ಸೂರ್ಯನು ತನ್ನ ಕಿರಣಗಳನ್ನು ಪ್ರಸರಿಸದಿರುವನೆ ?'

ಇಲ್ಲಿ ಉಪಮಾನವಾದ ಸೂರ್ಯನು ಕತ್ತಲೆಗೆ ಹೆದರದೆ ತನ್ನ ಕಿರಣಗಳನ್ನು ಪಸರಿಸಿಯೇ ತೀರುತ್ತಾನೆಂದೂ, ಉಪಮೇಯವಾದ ಸತ್ಕವಿಯಾದವನು ದುರ್ಜನರು ತನ್ನನ್ನು ನಿಂದಿಸುವರೆಂದು ಹೆದರದೆ ಕಾವ್ಯವನ್ನು ರಚಿಸಿಯೇ ತೀರುತ್ತಾನೆಂದೂ ಹೇಳಲಾಗಿದೆ. ಉಪಮೇಯ ಉಪಮಾನಗಳಲ್ಲಿ ಬಿಂಬ ಪ್ರತಿಬಿಂಬ ಭಾವ ಇರುವುದನ್ನು ಕಾಣಬಹುದು.

## 5. ಅರ್ಥಾಂತರನ್ಯಾಸಾಲಂಕಾರ

ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದಾಗಲೀ ಅಥವಾ ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದಾಗಲೀ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸಾಲಂಕಾರ.

ಉದಾಹರಣೆ 1 :

ಆತ ಉಂಡ ಮನೆಗೆ ಕೇಡು ಬಗೆದ. ಕೃತಜ್ಞರು ಏನನ್ನು ತಾನೇ ಮಾಡರು ?

ಉಪಮೇಯ : (ವಿಶೇಷ ವಾಕ್ಯ) ಆತ ಉಂಡ ಮನೆಗೆ ಕೇಡು ಬಗೆದ.

ಉಪಮಾನ : (ಸಾಮಾನ್ಯ ವಾಕ್ಯ) ಕೃತಜ್ಞರು ಏನನ್ನು ತಾನೇ ಮಾಡರು ?

ಸಮರ್ಥನ : (ಸಮನ್ವಯ) ಇಲ್ಲಿ ಉಪಮಾನವಾದ 'ಕೃತಜ್ಞರು ಏನನ್ನು ತಾನೇ ಮಾಡರು' ಎಂಬ ಲೋಕ ರೂಢಿಯ ಮಾತನ್ನು ಆಧರಿಸಿ ಉಪಮೇಯವಾದ 'ಆತ ಉಂಡ ಮನೆಗೆ ಕೇಡು ಬಗೆದ' ಎಂಬ ವಿಶೇಷ ವಾಕ್ಯವನ್ನು ಸಮರ್ಥಿಸಲಾಗಿದೆ.

ಉದಾಹರಣೆ 2 :

ಪ್ರಕಾಶನು ಹನ್ನೆರಡನೇ ತರಗತಿ ಪರೀಕ್ಷೆಯಲ್ಲಿ ರಾಜ್ಯದಲ್ಲೇ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣವಾದನು. ಪ್ರತಿಭಾವಂತರಿಗೆ ಯಾವುದು ತಾನೇ ಅಸಾಧ್ಯ ?



11th_Kannada_Reader_Final_16-07-2018.indd 205 16-07-2018 18:43:20

## 6. ಶ್ಲೇಷಾಲಂಕಾರ

ಅನೇಕ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದನ್ನು ಶ್ಲೇಷಾಲಂಕಾರ ಎನ್ನುವರು.

ಉದಾಹರಣೆಗೆ : ಆ ವಿವಾಹ ಮಂಟಪ ಪುರಂದರಪುರದಂತೆ ಸದಾ ರಂಭಾನ್ವಿತ ವಿಬುಧ ಮಿಳಿತವಾಗಿತ್ತು.

ಇಲ್ಲಿ ವಿವಾಹ ಮಂಟಪವೊಂದರ ವರ್ಣನೆ ಮಾಡಲಾಗಿದೆ. ಪುರಂದರಪುರವೆಂದರೆ ದೇವೇಂದ್ರನ ಪಟ್ಟಣ ಅದು. ಎಂದರೆ ಸ್ವರ್ಗ. ರಂಭಾನ್ವಿತ ಮತ್ತು ವಿಬುಧ ಮಿಳಿತ ಎರಡು ಪದಗಳು ಉಪಮೇಯ ಉಪಮಾನಗಳಿಗೆ ಬೇರೆ ಬೇರೆ ಅರ್ಥ ನೀಡುತ್ತವೆ.

| ಪದ | ವಿವಾಹ ಮಂಟಪದ ಪರವಾಗಿ | ಸ್ವರ್ಗದ ಪರವಾಗಿ |
|---|---|---|
| ರಂಭಾನ್ವಿತ | ಬಾಳೆಯ ಗಿಡಗಳಿಂದ ಕೂಡಿತ್ತು | ರಂಭೆಯೆಂಬ ಅಪ್ಸರೆಯಿಂದ ಕೂಡಿತ್ತು |
| ವಿಬುಧ ಮಿಳಿತ | ಬ್ರಾಹ್ಮಣರಿಂದ ಕೂಡಿತ್ತು | ದೇವತೆಗಳಿಂದ ಕೂಡಿತ್ತು. |



11th_Kannada_Reader_Final_16-07-2018.indd 206 16-07-2018 18:43:20

ಘಟಕ
ಹತ್ತು

# ಸೌಂದರ್ಯ ಮೀಮಾಂಸೆ



**ಪದ್ಯ** : ಹಕ್ಕಿ ಹಾರುತಿದೆ ನೋಡಿದಿರಾ! – ದ.ರಾ.ಬೇಂದ್ರೆ
**ಗದ್ಯ** : ಜನಪದ ಕವಿಗಳು ಕಂಡ ಸೌಂದರ್ಯ – ಜಿ.ಎಸ್.ಎಸ್.
**ಉಪಪತ್ಯ** : ನಾಣಿ – ಗೊರೂರು ರಾಮಸ್ವಾಮಿ ಅಯ್ಯಂಗಾರ್
**ವ್ಯಾಕರಣ** : ಪತ್ರಲೇಖನ, ಪ್ರಬಂಧಗಳು.



11th_Kannada_Reader_Final_16-07-2018.indd 207 16-07-2018 18:43:20

ಘಟಕ ಹತ್ತು

# ಹಕ್ಕಿ ಹಾರುತಿದೆ ನೋಡಿದಿರಾ !

– ದ.ರಾ.ಬೇಂದ್ರೆ




ಹಾಡೆಂಬುದು ಮಾನವನ ಭಾವನೆಗಳ ಅಭಿವ್ಯಕ್ತಿಗೆ ಸುಂದರ ಮಾಧ್ಯಮ. ಇದಕ್ಕೆ ಯಾವುದೇ ಸೀಮಿತತೆ ಇಲ್ಲ. ಪ್ರಕೃತಿಯು ಮಾನವ ಜೀವನದ ಅವಿಭಾಜ್ಯ ಅಂಗ. ಪ್ರಕೃತಿ ಸೌಂದರ್ಯ ಗೀತೆಗಳು ಜೀವನಕ್ಕೆ ಸ್ಫೂರ್ತಿಯಾಗಿರುವ ಎಷ್ಟೋ ಉದಾಹರಣೆಗಳಿವೆ. ಬದುಕನ್ನು ನಿತ್ಯನೂತನವಾಗಿಸುವ, ಹೊಸ ಚೈತನ್ಯ ಮೂಡಿಸುವ, ಶಕ್ತಿ ತುಂಬುವ, ಜಗತ್ತನ್ನೇ ಬೆಳಗಿಸುವ, ಬದುಕಿನ ಗತಿಯನ್ನೇ ಬದಲಿಸುವ ಶಕ್ತಿ ಹಾಡಿಗಿರುತ್ತದೆ. ಅಂತಹ ಒಂದು ಪ್ರಕೃತಿ ಸೌಂದರ್ಯ ಗೀತೆಯಿದು. ದ.ರಾ.ಬೇಂದ್ರೆಯವರು ಜೀವನವನ್ನು ಒಂದು ದೃಶ್ಯಕಾವ್ಯವಾಗಿ ಕಂಡವರು. ಜೀವನವನ್ನು ಸಾಕ್ಷಿಪ್ರಜ್ಞೆಯಿಂದ ಅವಲೋಕಿಸಿದ ಕವಿ ಅವರು. ಅವರ ಕಾವ್ಯದಲ್ಲಿ ಜೀವನದೃಷ್ಟಿ, ಸಾಕ್ಷಿಪ್ರಜ್ಞೆ ಮತ್ತು ಅನುಭಾವ ಇವು ಢಾಳವಾಗಿ ವಿಜೃಂಭಿಸುತ್ತವೆ.





11th_Kannada_Reader_Final_16-07-2018.indd 208 16-07-2018 18:43:20

ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆ ತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ !

ಕರಿನೆರೆ ಬಣ್ಣದ ಪುಚ್ಛಗಳುಂಟು
ಬಿಳಿ ಹೊಳೆ ಬಣ್ಣದ ಗರಿ ಗರಿಯುಂಟು
ಕೆನ್ನ ಹೊನ್ನ ಬಣ್ಣ ಬಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿ ಹಾರುತಿದೆ ನೋಡಿದಿರಾ !

ನೀಲ ಮೇಘ ಮಂಡಲ–ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ !

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ–ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ !

ಯುಗಯುಗಗಳ ಹಣೆ ಬರಹವ ಒರೆಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ !



11th_Kannada_Reader_Final_16-07-2018.indd 209 16-07-2018 18:43:21

## ಕವಿ–ಕೃತಿ ಪರಿಚಯ



ಅಂಬಿಕಾತನಯದತ್ತ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಧಾರವಾಡದ ಸಾಧನಕೇರಿಯವರು. ಶಾಲಾ ಶಿಕ್ಷಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಇವರು ಸೊಲ್ಲಾಪುರದ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿಯೂ, ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯ ನವೋದಯದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಇವರು ನಾದಲೀಲೆ, ಗಂಗಾವತರಣ, ಸೂರ್ಯಪಾನ, ಸಖೀಗೀತ ಮುಂತಾದ ಕನವ ಸಂಕಲನಗಳನ್ನು ರಚಿಸಿ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಇವರ ಅರಳು–ಮರಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 'ನಾಕುತಂತಿ' ಎಂಬ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ ದೊರೆತಿದೆ.

ಕೇಂದ್ರ ಸರ್ಕಾರದ ಪದ್ಮಶ್ರೀ ಪುರಸ್ಕಾರಕ್ಕೂ ಭಾಜನರಾದ ಇವರು ಶಿವಮೊಗ್ಗದಲ್ಲಿ ನಡೆದ ಇಪ್ಪತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಉತ್ತರ ಕರ್ನಾಟಕದ ಆಡುಭಾಷೆಯನ್ನು ಜಾನಪದ ಲಯ ಗೇಯಗಳೊಂದಿಗೆ ಸಮರ್ಥವಾಗಿ ಬಳಸಿ ಗಾರುಡಿಗ ಕವಿಯೆಂದೇ ಖ್ಯಾತರಾಗಿದ್ದಾರೆ.

## ಕವನದ ಆಶಯ

ಚಲನಶೀಲತೆಯು ಜೀವಂತಿಕೆಯ ಗುಣವಾಗಿದೆ. ಪ್ರಕೃತಿಯ ಹೊಂದಾಣಿಕೆಯೊಂದಿಗೆ ಕಾಲ ಉರುಳುತ್ತದೆ. ಈ ಕ್ರಿಯೆಗೆ ತಡೆ ಎಂಬುದು ಇಲ್ಲ. ಎಷ್ಟೇ ಪ್ರಭಾವೀ ವ್ಯಕ್ತಿಯಾದರೂ ಕಾಲ ಚಕ್ರದ ಎದುರು ಆತ ತಲೆ ಬಾಗಬೇಕು. ಅದಕ್ಕೆ ಹೊಂದಿಕೊಳ್ಳಬೇಕು. ಆಯಾ ಕಾಲಘಟ್ಟದಲ್ಲಿ ನಡೆದ ಪ್ರತಿಯೊಂದು ಸಂಗತಿಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತದೆ. ಈ ಕ್ರಿಯೆಯನ್ನು ದಾರ್ಶನಿಕರಾದ ಬೇಂದ್ರೆಯವರು ಹಾರುವ ಹಕ್ಕಿಗೆ ಹೋಲಿಸಿದ್ದಾರೆ.

ಬೇಂದ್ರೆಯವರ ಗರಿ ಸಂಕಲನದಿಂದ 'ಹಕ್ಕಿ ಹಾರುತಿದೆ ನೋಡಿದಿರಾ?' ಕವನವನ್ನು ಆಯ್ದುಕೊಳ್ಳಲಾಗಿದೆ. ಜಗತ್ತನ್ನು ಜೀವ–ಜೀವನಗಳನ್ನು ಮಾತ್ರವಲ್ಲ, ಅಖಿಲ ಬ್ರಹ್ಮಾಂಡವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡಿರುವ 'ಕಾಲ'ವನ್ನು ಹಕ್ಕಿಗೆ ಹೋಲಿಸಿ ವರಕವಿ ರಚಿಸಿರುವ ರೂಪಕ 'ಹಕ್ಕಿ ಹಾರುತಿದೆ ನೋಡಿದಿರಾ!' ಇದು ಕನ್ನಡ ಸಾರಸ್ವತ ಲೋಕದ ಶ್ರೇಷ್ಠ ಕವಿತೆಗಳಲ್ಲೊಂದು. ಕಾಲದ ಗತಿಯನ್ನು ಮತ್ತು ಆಯಾಮವನ್ನು ಹಕ್ಕಿಯ ಹಾರಾಟಕ್ಕೆ ಹೋಲಿಸಿ ಕವಿಯಿಲ್ಲಿ ಹಕ್ಕಿಯ ರೂಪ(ಕ)ದಲ್ಲಿ ಕಾಲಕೋಶದಲ್ಲಿ ಪಯಣಿಸಿದ್ದಾರೆ. ಅಮೂರ್ತ ಸ್ವರೂಪದ ಕಾಲವನ್ನು ಮೂರ್ತ ರೂಪದ ಹಕ್ಕಿಗೆ ಸಮೀಕರಿಸಿ ದೃಶ್ಯ ರೂಪ ನೀಡಿದ್ದಾರೆ.

## ಕಠಿಣ ಪದಗಳ ಅರ್ಥ

ಇರುಳು–ರಾತ್ರಿ, ಕತ್ತಲು; ಗಾವುದ–ದೂರವನ್ನಳೆಯುವ ಪ್ರಮಾಣ, ಹನ್ನೆರಡು ಮೈಲು ದೂರ; ಪುಚ್ಛ–ಗರಿ; ಕೆನ್ನ–ಕೆಂಪು; ಮೇಘ–ಮೋಡ; ಎವೆ–ಕಣ್ಣಿನ ರೆಪ್ಪೆ, ಒಕ್ಕಿ–ಬೇರ್ಪಡಿಸಿ; ಮುಕ್ಕಿ–ಆತುರದಿಂದ ತಿನ್ನು; ಸಾರ್ವಭೌಮರು–ಅರಸರು, ಚಕ್ರವರ್ತಿಗಳು; ಮನ್ವಂತರ–ಕಾಲ, ಯುಗ.



11th_Kannada_Reader_Final_16-07-2018.indd 210 16-07-2018 18:43:21

## ಕವನದ ಭಾವಾರ್ಥ

ಈ ಚರಣದಲ್ಲಿ ಕವಿ ಕಾಲದ ಗತಿಯನ್ನು ವೇಗವನ್ನು ಚಿತ್ರಿಸಿದ್ದಾರೆ. ಕಾಲದ ಹಕ್ಕಿಯು ಅಗಣಿತ ಇರುಳುಗಳನ್ನು ಕಳೆದು, ಅಪರಿಮಿತ ದಿನಗಳನ್ನು ಬೆಳಗುತ್ತಾ ಸುತ್ತಮುತ್ತ, ಮೇಲೆ–ಕೆಳಗೆ, ಹೀಗೆ ವಿಶ್ವವ್ಯಾಪಿಯೂ ಅನಂತವೂ ಆಗಿ (ಗಾವುದ ಗಾವುದ) ಮುಂದೆ ಮುಂದೆ ಸಾಗುತ್ತಿರುತ್ತದೆ. ಯಾರ ಯಾವ ನಿಯಂತ್ರಣಕ್ಕೂ ಸಿಕ್ಕದೆ ಕಣ್ಣುರೆಪ್ಪೆ ಮಿಟುಕಿಸುವಷ್ಟರಲ್ಲಿ ಕಾಲ ಸಾಗಿರುತ್ತದೆ. ಹೀಗೆಯೇ ದಿನರಾತ್ರಿಗಳು ಕಳೆಯುತ್ತವೆ. ಕಾಲದ ಹಕ್ಕಿ ನಿರಂತರವಾಗಿ ಹಾರುತ್ತಿರುತ್ತದೆ.

ಕಾಲದ ಹಕ್ಕಿಯ ಬಣ್ಣ ನೀಲಮೇಘಮಂಡಲ ಸದೃಶ್ಯವಾದುದು. ನೀಲಿ ಅಂದರೆ ವೈಶಾಲ್ಯ. ನೀಲ ಮೇಘಮಂಡಲದಂತೆ ಸಮಬಣ್ಣವೂ ಹೌದು. ಕಾಲದ ದೃಷ್ಟಿ ತರತಮರಹಿತ. ಕಾಲದ ಹಕ್ಕಿಯು ನೀಲಮೇಘಮಂಡಲದಂತೆ ಅಗಾಧ ವ್ಯಾಪಕ ವಿಶಾಲ. ಎಷ್ಟೆಂದರೆ, ಆಕಾಶಕ್ಕೆ ರೆಕ್ಕೆಗಳು ಮೂಡಿ ಆಕಾಶವೇ ಹಾರುತ್ತ ಸಾಗಿದಂತೆ! ಕಾಲದ ಹಕ್ಕಿಯ 'ಹಾರಾಟ' (ಶ್ಲೇಷೆಯನ್ನು ಗಮನಿಸಿರಿ) ಅಂಥದು! ಅನಾದಿಯೆಂಬ ಮುಗಿಲಿಗೆ ಮೂಡಿದ ರೆಕ್ಕೆಗಳೊಡನೆ, ಅನಂತವೆಂಬ ನೀಲ ಮೇಘ ಮಂಡಲದಲ್ಲಿ, ದಿನ ಮಾಸ ವರ್ಷ ಯುಗ ಮನ್ವಂತರ ಕಲ್ಪ...ಗಳೆಂಬ ನಕ್ಷತ್ರಗಳ ಮಾಲೆ ಧರಿಸಿ, ದಿನ ರಾತ್ರಿಗಳೆಂಬ ಸೂರ್ಯ ಚಂದ್ರರನ್ನು ಕಣ್ಣುಗಳಾಗಿ ಹೊಂದಿ, ನೋಡುತ್ತ ತೋರುತ್ತ ತೋರಿಸುತ್ತ ಕಾಲದ ಹಕ್ಕಿಯು ಹಾರುತ್ತಿದೆ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?
2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?
3. ಹಕ್ಕಿಯ ಕಣ್ಣುಗಳು ಯಾವುವು ?
4. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?
5. ಹಕ್ಕಿಯು ಯಾವುದರ ಸಂಕೇತವಾಗಿದೆ ?
6. ಹಕ್ಕಿಯು ಯಾರನ್ನು ಹರಸಿದೆ ?

**II. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಯಾವುದಕ್ಕೆ ಹೋಲಿಸಿದ್ದಾರೆ ?
2. ಹೊಸಗಾಲದ ಹಸುಮಕ್ಕಳನ್ನು ಹೇಗೆ ಹಕ್ಕಿ ಹರಸಿದೆ ? ತಿಳಿಸಿ.
3. ಕಾಲ ಉರುಳಿದಂತೆಲ್ಲಾ ಏನಾಗುತ್ತದೆ ಎಂದು ಕವಿ ತಿಳಿಸಿದ್ದಾರೆ ?
4. ಕವಿ ಹಾರುವ ಹಕ್ಕಿಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳುವ ಮಾತುಗಳೇನು ?
2. 'ಹಕ್ಕಿ ಹಾರುತಿದೆ ನೋಡಿದಿರಾ ?' ಕವನದ ಆಶಯವೇನು ?

**IV. ಕೆಳಗಿನ ವಾಕ್ಯಗಳ ಸಂದರ್ಭ ಹಾಗೂ ಸ್ವಾರಸ್ಯವನ್ನು ಬರೆಯಿರಿ.**

1. 'ಸಾರ್ವಭೌಮರಾ ನೆತ್ತಿಯ ಕುಕ್ಕಿ'
2. 'ಹಕ್ಕಿ ಹಾರುತಿದೆ ನೋಡಿದಿರಾ?'
3. 'ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ'
4. 'ಮನ್ವಂತರಗಳ ಭಾಗ್ಯವ ತೆರೆಸಿ'

## ಭಾಷಾಭ್ಯಾಸ

1. ಕೆಳಗಿನ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.
   ಎದೆ, ಗಡ, ಸೂರ್ಯ, ಹರಸು.
2. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.
   ಬ್ರಹ್ಮ, ಹಕ್ಕಿ, ಚಂದ್ರ.

## ಚಟುವಟಿಕೆ

1. ದ.ರಾ.ಬೇಂದ್ರೆಯವರ ಇತರ ಕವನ ಸಂಗ್ರಹಗಳನ್ನು ವಾಚನಾಲಯದಿಂದ ಸಂಗ್ರಹಿಸಿ ಓದಿರಿ.
2. ಸೌಂದರ್ಯ ಪ್ರಜ್ಞೆಯನ್ನು ಪ್ರತಿಫಲಿಸುವ ಇನ್ನಿತರ ಕವಿಗಳ ಕವನಗಳನ್ನು ಸಂಗ್ರಹಿಸಿರಿ.



11th_Kannada_Reader_Final_16-07-2018.indd 211 16-07-2018 18:43:21

ಘಟಕ ಹತ್ತು

# ಜನಪದ ಕವಿಗಳು ಕಂಡ ಸೌಂದರ್ಯ

– ಜಿ.ಎಸ್.ಎಸ್.



1

ನಗರ ನಾಗರಿಕತೆಯ ರಭಸಮಯ ಗೊಂದಲದ ಸದ್ದು ಸೋಂಕದ ದೂರದ ಹಳ್ಳಿಯೊಂದರಲ್ಲಿ, ಮೂಡಣದ ಹಣೆಯಲ್ಲಿ ಬೆಳ್ಳಿ ಮೂಡಿ, ಹೊಲ ಗದ್ದೆಗಳ ಪೈರಿನ ಮೇಲೆ ತಂಗಾಳಿ ತೀಡಿ, ಮೌನ ಗರ್ಭಿತವಾದ ಮುಂಜಾವಿನಲ್ಲಿ ಕೋಳಿಯ ತುತ್ತೂರಿ ಮೊಳಗಿ ಬೆಳಕು ಮೂಡುವ ಹೊತ್ತಿನಲ್ಲಿ, ಮನೆಯೊಂದರಿಂದ ಬೀಸುವ ಕಲ್ಲಿನ ಗರಗಟದ ನಾದದೊಂದಿಗೆ ಅತಿ ಮಂಜುಳವಾದ ಹೆಣ್ಣು ದನಿಯೊಂದು ಅಲೆ ಅಲೆಯಾಗಿ ತೇಲಿ ಬರುತ್ತಿದೆ :

ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ ।
ಎಳ್ಳು ಜೀರಿಗೆ ಬೆಳೆಯೋಳ ಭೂಮಿ ತಾಯ
ಎದ್ದೊಂದು ಗಳಿಗೇ ನೆನೆದೇನ ॥

**(ಜನಪದ ಗೀತೆ : ಪು.7)**

ಎಂದು ಮುಂಬೆಳಗಿನ ಪ್ರಶಾಂತ ಗಂಭೀರ ವಾತಾವರಣದಲ್ಲಿ ಬೀಸುಗಲ್ಲಿನ ನಾದದ ಜೊತೆಗೆ ತೇಲಿ ಬರುವ ಈ ಮಧುರವಾಣಿ ನಮ್ಮನ್ನು ವಿಸ್ಮಯಗೊಳಿಸುತ್ತದೆ. ಏನು ಹಾಡಿದು, ಯಾವ ಧಾಟಿಯಿದು, ಏನು ಮೋಡಿಯಿದು! ಯಾವ ಪಂಡಿತ ಕವಿಯೂ ತನ್ನ ಕಾವ್ಯದಲ್ಲಿ, ಈ ಭೂಮಿತಾಯಿಯನ್ನು ಕಂಡಿಲ್ಲವಲ್ಲ. ಪಂಡಿತ ಕವಿಗಳು ಕಂಡ 'ಭೂರಮೆ'ಯೋ 'ವಿಷಯ ವನಿತೆ'ಯೋ' ಎಲ್ಲಿ ? ಈ ಹಳ್ಳಿಯ ಹೆಣ್ಣು ಮಗಳ ಹಾಡಿನಲ್ಲಿ ಮೈದೋರುವ



11th_Kannada_Reader_Final_16-07-2018.indd 212 16-07-2018 18:43:22

ಎಳ್ಳು ಜೀರಿಗೆ ಬೆಳೆಯುವ ಭೂಮಿ ತಾಯಿ ಎಲ್ಲಿ ? ಈ ಹಾಡುಗಳನ್ನು ಬರೆದವರು ಯಾರು ?

ಬರೆದವರು ಯಾರೋ – ಹೆಸರಿಲ್ಲದ ನೂರಾರು ಅಜ್ಞಾತ ಕವಿಗಳು ! ಯಾವ ರಾಜಮಹಾರಾಜರ ಅರಮನೆಯ ನೆಳಲಿನ ಸೋಂಕೂ ಇಲ್ಲದ, ತಮ್ಮ ಹಾಡಿನ ಮಹತ್ತನ್ನು ತಾವೇ ತಿಳಿಯದ ಮುಗ್ಧ ಜನತೆ ಈ ಹಾಡುಗಳನ್ನು ಕಟ್ಟಿತು. ಈ ಹಾಡುಗಳ ಅಧಿದೈವ ಭೂಮಿತಾಯಿ; ಈ ಹಾಡುಗಳ ಸ್ಫೂರ್ತಿ ಕಾಯಕ. ಬೀಸುವಾಗ, ಕುಟ್ಟುವಾಗ, ನೆಡುವಾಗ, ಉಳುವಾಗ, ಕಳೆ ಕೀಳುವಾಗ, ಪೈರು ಕೊಯ್ಯುವಾಗ, ಕಾಳು ತೂರುವಾಗ, ತೊಟ್ಟಿಲನ್ನು ತೂಗುವಾಗ –ಮಾಡುವ ಕೆಲಸದೊಂದಿಗೇ ಮೂಡಿ ಬಂದ ಹಾಡುಗಳಿವು; ಮಾಡುವ ಕೆಲಸಗಳನ್ನು ಹಗುರವನ್ನಾಗಿ ಮಾಡಿದ ಶಕ್ತಿಗಳಿವು. ಅಂದಂದಿನ ಅನುಭವಕ್ಕೆ ತಾನು ಕವಿ ಎಂಬ ಹೆಮ್ಮೆಯ ಸೋಂಕಿಲ್ಲದ ಜೀವ ಪಡಿಮಿಡಿದ ಕಿಡಿಗಳಿವು. ನೆಲಕ್ಕೆ ಹಸಿರು ಮೂಡುವಷ್ಟು ಸಹಜವಾಗಿ, ಮೋಡಕ್ಕೆ ಹನಿಯೊಡೆಯುವಷ್ಟು ಸಹಜವಾಗಿ, ಗಿಡದಲ್ಲಿ ಹೂವರಳುವಷ್ಟು ಸಹಜವಾಗಿ ಮೂಡಿದ ಮುಕ್ತಕಗಳಿವು. ಶತಶತಮಾನಗಳಿಂದ ಎದೆಯಿಂದ ಎದೆಗೆ ಪರಂಪರಾಗತವಾಗಿ ಸಾಗಿ ಬಂದ ಅಚ್ಚಳಿಯದ ಆಸ್ತಿಗಳಿವು.

ಒಂದು ಕಡೆ ಪಂಡಿತರಿಗೂ ವಿವಿಧ ಕಲಾ ಮಂಡಿತರಿಗೂ ಪ್ರಿಯವಾದ ಪ್ರೌಢ ಕಾವ್ಯ ಅರಮನೆಯ ಮಹಾಕವಿಗಳಿಂದ ರಚಿವಾಗುತ್ತಿದ್ದರೆ; ಮತ್ತೊಂದು ಕಡೆ ಮುಗ್ಧವಾದ ಜನತೆ ತನ್ನ ಸಾಮಾನ್ಯ ಶ್ರೀಮದನುಭವನ್ನು ಜನಪದ ಗೀತೆಗಳಲ್ಲಿ ಮೂಡಿಸುತ್ತಿತ್ತು. ಇವುಗಳಲ್ಲಿ ಪಂಡಿತಪ್ರಿಯವಾದ ಸಂಸ್ಕೃತ ಭೂಯಿಷ್ಟವಾದ ಪದ ಚಮತ್ಕಾರಗಳಿಲ್ಲ; ಇಲ್ಲಿನ ಮಾತು ಜನಸಾಮಾನ್ಯರ ಆಡು ಮಾತು. ಇಲ್ಲಿ ಚಿತ್ರಿತವಾಗಿರುವುದು ರಾಜ ಮಹಾರಾಜರ ವಸಂತ ವಿಹಾರವೋ, ವಿಜಯಯಾತ್ರೆಯೋ ಅಲ್ಲ; ದೈನಂದಿನ ಸಾಮಾನ್ಯ ಸಂಗತಿ. ಇಲ್ಲಿ ಯಾವ ಅಷ್ಟಾದಶ ವರ್ಣನೆಗಳ ಸಂಪ್ರದಾಯದ ಬಂಧನವೂ ಇಲ್ಲ; ಇಲ್ಲಿರುವುದು ನಿಜವಾದ ಜೀವನದ ಅಕೃತಕವಾದ ನಿರೂಪಣೆ. ಈ ಅನುಭವ ಯಾವ ಸನ್ಮಾನ ಪ್ರಶಸ್ತಿಗಳ ಪ್ರೇರಣೆಯಿಂದಲಾಗಲೀ, ಬರೆಯವುದಾದರೆ ನೀನೇ ಬರೆಯಬೇಕೆಂಬ 'ಪಂಡಿತರ್ ತಗುಳ್ದು ಬಿಚ್ಚಳಿಸೆ' ಕಾವ್ಯವಾದುದಲ್ಲ; ತುಂಬಿದ ಅನುಭವ ತನಗೆ ತಾನೇ ಬಿಡುಗಡೆಗೊಂಡು ತನಗರಿಯದೆಯೇ ಕಾವ್ಯವಾಗಿದೆ. ಬರೆದವರೂ ಬಹುಮಟ್ಟಿಗೆ ನಮ್ಮ ಅಕ್ಕ–ತಂಗಿ–ತಾಯಂದಿರು. ಹೆಣ್ತನದ ಮಾರ್ದವತೆಯಿಂದ ಮೂಡಿದ ಈ ಹಾಡುಗಳಲ್ಲಿ ವೈವಿಧ್ಯವಿದೆ, ಒಲವಿದೆ, ಚೆಲುವಿದೆ, ನಲವಿದೆ, ನವ್ಯತೆಯಿದೆ, ಸರ್ವಾಕರ್ಷಕ ಶಕ್ತಿಯಿದೆ.

2

ಬದುಕನ್ನು ಕುರಿತು, ಬದುಕಿನ ಎಲ್ಲ ಮುಖಗಳನ್ನು ಕುರಿತು, ಈ ಜನಪದ ಕವಿಗಳಿಗೆ ಆತ್ಮೀಯತೆ ಇದೆ. ಈ ಆತ್ಮೀಯತೆಗೆ ಆಧಾರ ಜೀವನ ಪ್ರೀತಿ. ಈ ಪ್ರೀತಿಯ ಬೆಳಕು ತುಳುಕುವುದು ತಾಯ್ತನದ ಕಣ್ಣುಗಳಿಂದ. ಪ್ರೀತಿಯ ಮಾತೃಹೃದಯ ಎಲ್ಲ ಕಡೆಯೂ ಆತ್ಮೀಯತೆಯಿಂದ ಒಂದಾಗಿ ಸೌಂದರ್ಯವನ್ನು ಕಾಣುತ್ತದೆ. ಕಂಡ ಚೆಲುವನ್ನು ತನ್ನ ಅನುಭವಗಳಿಂದ ಬಣ್ಣಿಸುತ್ತದೆ. ಪ್ರಕೃತಿ ಲೋಕದ, ಮಾನವ ಲೋಕದ ಮತ್ತು ತಾನು ಭಾವಿಸುವ ದೇವಲೋಕದ ಎಲ್ಲ ಚೇತನಗಳ ಬಗೆಗೂ ಈ ಜೀವ ನಂಟನ್ನು ನೇಯುತ್ತದೆ. ಬೆಳದಿಂಗಳನ್ನು ಕಂಡು –

ಬಾರಯ್ಯ ಬೆಳುದಿಂಗಳೇ
ನಮ್ಮೂರ ಹಾಲಿನಂಥ ಬೆಳುದಿಂಗಳೇ ॥

ಎನ್ನುತ್ತದೆ. ಬೆಳುದಿಂಗಳನ್ನು ಬದುಕಿನ ನಂಟನೆಂಬಂತೆ ಪ್ರೀತಿಯಿಂದ 'ಬಾರಯ್ಯ' ಎನ್ನುತ್ತದೆ. ತನ್ನ ಊರಿನ ಹಾಲಿನ ನೆನಪನ್ನು ತರುವ ಈ ಬೆಳದಿಂಗಳು ಕವಿಯ ಅಕ್ಕರೆಯ ಆಹ್ವಾನದಲ್ಲಿ ಒಂದು ವ್ಯಕ್ತಿಯಾಗುತ್ತದೆ. ಗೌರಿ ಹಬ್ಬದ ಕತೆಯಲ್ಲಿಯೂ ಇದೇ ಆತ್ಮೀಯತೆ ಕಾಣುತ್ತದೆ. ಕೈಲಾಸದ ಮಹಾರಾಣಿಯಾದ ಪಾರ್ವತಿಗೆ ತನ್ನ ತೌರೂರಾದ ಭೂಲೋಕಕ್ಕೆ ಹೋಗಬೇಕೆಂದು ಆಸೆಯಾಯಿತಂತೆ. ಅವಳು ಶಿವನನ್ನು ಒಂದು ದಿನ ಕುರಿತು ಕೇಳಿದಳಂತೆ –



11th_Kannada_Reader_Final_16-07-2018.indd 213 16-07-2018 18:43:22

ಹರದಿ ಪಾರ್ವತಿ ದೇವಿ ಪರಮ ಸಂತೋಷದಲಿ
ಸರಸವಾಡುತ ತನ್ನ ಪುರುಷನೊಡನೆ
ವರ ಭಾದ್ರಪದ ಶುದ್ಧ ತದಿಗೆ ನಾಳೆ ದಿವಸ
ಅರಸರೇ ತೌರೂರಿಗ್ಹೋಗಿ ಬರುವೆ ॥

**(ನಾಡಪದಗಳು : ಪು. 196)**

ಎಂದು. ಸರಿ, ಶಿವ ಅವಳನ್ನು ಒಲ್ಲದ ಮನಸ್ಸಿನಿಂದ ಕಳುಹಿಸಿದನಂತೆ. ಪಾರ್ವತಿ ತೌರೂರಿಗೆ ಹೋಗಿ ಬರುತ್ತಾಳೆ. ಇದೊಂದು ಕಥನ ಕವನ. ಈ ಕವನದಲ್ಲಿ ಕವಿ ಒಂದು ತತ್ವವನ್ನು ಹೇಳಿದ್ದಾನೆ. ಹೇಳುವುದರಲ್ಲೂ ಅದನ್ನು ಅತಿ ಸರಳವಾಗಿ ಹೇಳಿದ್ದಾನೆ. ಪಾರ್ವತಿ ಕೈಲಾಸದ ಮಹಾರಾಣಿಯಾದರೂ ಮಣ್ಣಿನಮಗಳು; ಅವಳು ಲೋಕಮಾತೆಯಾದರೂ ತೌರೂರಿನ ಹಂಬಲವನ್ನು ತುಂಬಿಕೊಂಡ ಹೆಣ್ಣು! ಅವಳ ತೌರೂರು ಈ ಭೂಮಿ. ಅದರ ಮೇಲಿನ ಅಕ್ಕರೆಗಾಗಿ ಅವಳು ವರುಷಕ್ಕೊಮ್ಮೆ ಗೌರಿ ಹಬ್ಬದಲ್ಲಿ ಇಲ್ಲಿಗೆ ಬರುತ್ತಾಳೆ. ಹೀಗಾಗಿ ಅವಳ ತೌರಿನವರಾದ ನಮಗೆಲ್ಲಾ ಪಾರ್ವತಿ ಅಕ್ಕನಾಗಬೇಕು. ಅವಳ ಕೈ ಹಿಡಿದ ಶಿವ ನಮಗೆ ಭಾವನಾಗಬೇಕು! ನೆಲ ಮುಗಿಲಿಗೆ ಬಾಂಧವ್ಯವನ್ನು ಬೆಸೆಯುವ ಈ ಶಿವ ಪಾರ್ವತಿಯರ ಪ್ರೀತಿಯ ಬೆಳದಿಂಗಳಿನಲ್ಲಿ ನಾವು ಕೈಲಾಸದ ನಂಟರಾಗಿ ಬಿಟ್ಟಿದ್ದೇವೆ. ಈ ಒಂದು ಸುಂದರ ಆತ್ಮೀಯ ಭಾವನೆಯನ್ನು ಜನಪದ ಕವಿ ಈ ಹಾಡಿನಲ್ಲಿ ಹೇಳಿದ್ದಾನೆ. ಈ ಕವಿಗಳ ಕಣ್ಣಿಗೆ ದೇವರೆಂದರೆ, ಕೇವಲ ಪೂಜನೀಯವಾದ ಆದರೆ ನಮ್ಮಿಂದಾಚೆಗೆ ಎಲ್ಲೋ ಇರುವ ಶಕ್ತಿಯಲ್ಲ. ದೇವರೂ ನಮ್ಮವನೇ, ಅಣ್ಣನೋ, ಅಕ್ಕನೋ ಭಾವನೋ ಇದ್ದಂತೆ – ಅಷ್ಟು ಹಿತವಾದವನು, ಪ್ರಿಯವಾದವನು, ಸಮೀಪದವನು ಎನ್ನುವ ಆತ್ಮೀಯತೆ ತುಂಬಿಕೊಂಡಿದೆ. ಬೀರೇ ದೇವರೋ, ತಿರುಪತಿ ತಿಮ್ಮಪ್ಪನೋ, ಕಬ್ಬಲ್ಲ ಬೆನುವನೋ, ಮೈಸೂರು ಚಾಮುಂಡಿಯೋ, ನಂಜನಗೂಡಿನ ನಂಜುಂಡನೋ ಇವರೆಲ್ಲ ಬಲು ಹತ್ತಿರದವರು. ನಂಜನಗೂಡಿನ ದೇವರನ್ನು ಕುರಿತು,

ನಂಜನಗೂಡಾಗೆ ನಮಗ್ಯಾರೆ ನೆಂಟರು
ನಂಜಪ್ಪ ಕಾಣೆ ಮನೆ ಸ್ವಾಮಿ ॥

**(ನಾಡಪದಗಳು : ಪು. 101)**

ಎನ್ನುವ ಮಾತಿನಲ್ಲಿ ಕೇವಲ ಸಲಿಗೆಯ ಭಾವವನ್ನು ಮಾತ್ರವಲ್ಲ; ಬದುಕಿನ ಪರಮ ಸತ್ಯವನ್ನೇ ಈ ಕವಿಗಳು ನುಡಿದಿದ್ದಾರೆ. ಈ ಭಾವನೆಗಳು ದೇವರ ಮಹತ್ತನ್ನು ತಗ್ಗಿಸದೆ, ಮಾನವ ವ್ಯಕ್ತಿಗಳಂತೆ ಮೂರ್ತೀಕರಿಸಿ ದೇವರು ಬಲು ಹತ್ತಿರದವನೆಂಬಂತೆ ಚಿತ್ರಿಸಿ ಮಾನವತ್ವದ ಬೆಲೆಯನ್ನು ಹೆಚ್ಚಿಸಿವೆ – ಎನ್ನಿಸುತ್ತದೆ. ಕೇವಲ ಸುಂದರವಾದ ಕಾಪಾಡುವ ಶಕ್ತಿಗಳನ್ನು ಮಾತ್ರ ತನಗೆ ಬೇಕಾದವರೆಂಬಂತೆ, ನಂಟನೆಂಬಂತೆ ಭಾವಿಸುವುದರಲ್ಲಿ ಮಾತ್ರ ಇವರ ಪ್ರೀತಿ ನಿಲ್ಲುವುದಿಲ್ಲ. ಮೃತ್ಯುವನ್ನು 'ಜವರಾಯ'ನೆಂದು ಕರೆದು, ಅವನು ಮನೆಯ ಬಾಗಿಲಿಗೆ ಬಂದಾಗಲೂ –

ಎಂದೂ ಬಾರದ ಜವರಾಯ ಇಂದೇಕೆ ಬಂದೀರಿ
ಕೊಳ್ಳಯ್ಯ ನೀರ ಕುಡಿನೀರ ॥

**(ನಾಡಪದಗಳು : ಪು. 26)**

ಎನ್ನುತ್ತದೆ ಒಂದು ಗೀತೆ. ಕರಾಳವಾದ ಮೃತ್ಯುವನ್ನೂ ಮನೆಯ ನೆಂಟನೆಂಬಂತೆ ಆಹ್ವಾನಿಸಿ ಉಪಚರಿಸುತ್ತದೆ! ಈ ಚೇತನಕ್ಕೆ ಎಲ್ಲವೂ ಶುಭ; ಎಲ್ಲವೂ ಪ್ರಿಯ; ಎಲ್ಲವೂ ಆತ್ಮೀಯ. ಏಕೆಂದರೆ ಕ್ಷಣಿಕವಾದ ತುಮುಲಗಳಿಗೆ ಬೆದರಿ ನಿಲ್ಲುವ ಅಳ್ಳೆದೆಯ ಸೋಂಕು ಇಲ್ಲಿಲ್ಲ. ಇಲ್ಲಿರುವುದು ಎಲ್ಲವನ್ನೂ ಪ್ರೀತಿಯ ತೋಳಿನಲ್ಲಿ ತಬ್ಬುವ ಕೆಚ್ಚು. ಬಂದುದೆಲ್ಲವೂ ದೈವದ ಪ್ರೀತಿಯ ಲೀಲೆ ಎಂಬ ಅನುಭವವಿರುವುದರಿಂದಲೇ....

ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೋ
ಕರುಣಿ ಕಲ್ಯಾಣ ಬಸವಣ್ಣ । ಕಾಸಿ ಲಿಂಗ
ಕಡಿತನಕ ಕಾಯೊ ಅಭಿಮಾನ ॥

**(ಗರತಿಯ ಹಾಡು : ಪು. 5)**



11th_Kannada_Reader_Final_16-07-2018.indd 214 16-07-2018 18:43:22

ಎನ್ನುತ್ತದೆ. ದೈವೀ ಶ್ರದ್ಧೆಯಿಂದ ತುಂಬಿದ ಈ ಚೇತನ, ಪ್ರೀತಿಯ ಮೂಲಕ ಎಲ್ಲದರೊಂದಿಗೆ ಆತ್ಮೀಯತೆಯನ್ನು ಸಾಧಿಸಿರುವುದರಿಂದಲೇ ಅದು ಎಲ್ಲೆಲ್ಲಿಯೂ ಚೆಲುವನ್ನು ಕಾಣಲು ಸಮರ್ಥವಾಗಿರುವುದು.

3

ಜನಪದ ಗೀತಗಳಲ್ಲಿ ಬಹುಮಟ್ಟಿಗೆ ಮಿಡಿಯುತ್ತಿರುವುದು ಹೆಣ್ಣಿನ ಪಾಡು. ತಾಯಾಗಿ, ತಂಗಿಯಾಗಿ, ಅಕ್ಕನಾಗಿ, ಸೊಸೆಯಾಗಿ ತೋರುವ ಹೆಣ್ಣಿನ ಭಾವತರಂಗಗಳೇ ಈ ಕವಿತೆಯ ವಸ್ತು. ಈ ಹೆಣ್ಣುಮಕ್ಕಳು ತಮ್ಮ ಸುತ್ತ ಕಂಡ ಚೆಲುವಿನ ವಸ್ತುಗಳ ನೆನಕೆಯಿಂದ ತಾವು ಕಂಡ ವ್ಯಾಪಾರವನ್ನು ವರ್ಣಿಸುತ್ತಾರೆ. ತನ್ನ ತಮ್ಮನನ್ನು ವರ್ಣಿಸುವ ಅಕ್ಕ ಒಬ್ಬಳು –

ಬಾವೂಲಿ ಇಟ್ಟುಕೊಂಡು ಕಾವೂಲಿ ತಿದ್ದುವ
ಗಾಳಿ ಬಂದತ್ತ ಬಳಕೂತ । ನನ ತಮ್ಮ
ಬಾಳಿಯೆಲಿಗಿಂತ ಬಲು ಚಲುವ ॥

**(ಗರತಿಯ ಹಾಡು : ಪು. 24)**

ಎಂದು ಸುಳಿಗಾಳಿಗೆ ಬಳುಕಾಡುವ ಬಾಳೆಯ ಎಲೆಯ ಸೊಗಸನ್ನು ಕಂಡ ಅಕ್ಕ, ತನ್ನ ತಮ್ಮನನ್ನು ಬಾಳೆ ಎಲೆಗೆ ಹೋಲಿಸುತ್ತಾಳೆ; ಅಷ್ಟೇ ಅಲ್ಲ, ಅವನು ಅದಕ್ಕಿಂತ ಚೆಲುವ ಎನ್ನುತ್ತಾಳೆ. ಇಂತಹ ಹೆಣ್ಣು ತನ್ನ ತಮ್ಮ ತೌರಿಗೆ ಬರುವ ಸುಳುವನ್ನು ತಿಳಿದು–

ಎಂದು ಇಲ್ಲದ ನನ್ನ ಎಡಗಣ್ಣ ಹಾರೀತ
ಚಂದರ ಹುಬ್ಬ ಕುಡಿಬೆಳಕ । ನನ ತಮ್ಮ
ಸಂಜೀಗ್ಹಡೆದವ್ನ ಮಗ ಬಂದ ॥

**(ಗರತಿಯ ಹಾಡು : ಪು. 18)**

ಎನ್ನುತ್ತಾಳೆ. ಹಿಂದಿನ ಪದ್ಯ ತಮ್ಮನ ನಿಲುವನ್ನು ಬಾಳೆ ಎಲೆಗಿಂತ ಚೆಲುವ ಎಂದು ಬಣ್ಣಿಸಿದರೆ, ಇಲ್ಲಿ ತಮ್ಮನ ಕಣ್ಣನ್ನು ಅದರ ಬೆಳಕನ್ನು ಮಾತ್ರ ಬಣ್ಣಿಸುತ್ತದೆ. 'ಚಂದರ ಹುಬ್ಬು ಕುಡಿ ಬೆಳಕ' ಎಂಬ ಪ್ರತಿಮೆ ಮುಖದಲ್ಲಿ ಮುಖ್ಯವಾದ ಚೆಲುವಿನ ಅಂಶವನ್ನು ಗುರುತಿಸಿ ರೂಪಿಸಿದೆ. ರೇಖಾ ಚಂದ್ರನನ್ನು ತಮ್ಮನ ಹುಬ್ಬಿಗೂ ಎಳೆ ಬೆಳುದಿಂಗಳ ಮಂದಸ್ಮಿತವನ್ನು ಅವನ ಕಣ್ ಬೆಳಕಿಗೂ ಹೊಂದಿಸಿಕೊಂಡು ನುಡಿಯುವ ಈ ಮಾತು ಎಂತಹ ಅಪೂರ್ವವಾದ ಚೆಲುವನ್ನು ತೋರುತ್ತದೆ. ತನ್ನ ಅಣ್ಣನ ಸೌಂದರ್ಯ ಪ್ರಿಯತೆಯನ್ನು ಗುರುತಿಸಿದ ತಂಗಿಯೊಬ್ಬಳು –

ತೋಟಕ್ಕೆ ಹೋದಣ್ಣ ಊಟಕ್ಕೆ ಬರಲಿಲ್ಲ
ತೋಟದಾ ಹೂವ ತಲಿ ತುಂಬ । ಇಟಗೊಂಡು
ಊಟದ್ಹಂಬಲವ ಮರೆತಾನ ॥

**(ಗರತಿಯ ಹಾಡು : ಪು. 22)**

ಎನ್ನುತ್ತಾಳೆ. ತೋಟದ ಹೂವನ್ನು ತಲೆ ತುಂಬ ಮುಡಿದ ಅಣ್ಣನಿಗೆ ಊಟದ ಹಂಬಲವೇ ಮರೆತು ಹೋಯಿತಂತೆ. ಊಟದ ಹಂಬಲವನ್ನು ಮರೆತು ಆ ಹೂವುಗಳ ಸೊಗಸಿಗೆ ಮಾರುವೋದ ಅವನ ಸೌಂದರ್ಯಪ್ರಿಯತೆಯಾದರೂ ಎಷ್ಟು ದೊಡ್ಡದು ! ಚೆಲುವಾದ ಹೂವುಗಳನ್ನು ಕಂಡರೆ ಅವನಿಗೆ ಅಷ್ಟೊಂದು ಪ್ರೀತಿ; ಆ ಪ್ರೀತಿಯನ್ನು ಗುರುತಿಸಿ ಬಣ್ಣಿಸುವವಳು ಈ ತಂಗಿ! ಅಂತೆಯೇ ತಾಯಿಯಾದವಳು ಮಗುವಿನ ಸೌಂದರ್ಯವನ್ನು ಬಣ್ಣಿಸಿರುವ ರೀತಿ ಅಪೂರ್ವವಾಗಿದೆ. ಮಗುವಿನ ಎಲ್ಲ ಚರ್ಯೆಗಳೂ ತಾಯಿಗೆ ಪ್ರಿಯವಾಗಿಯೆ ತೋರುತ್ತವೆ. ಮಗುವಿನ ಚೆಲುವನ್ನು ತಾಯಿ ಹೀಗೆ ವರ್ಣಿಸುತ್ತಾಳೆ –

ಕಾಡೀಗ್ಹಚ್ಚಿದ ಕಣ್ಣು, ತೀಡಿ ಮಾಡಿದ ಹುಬ್ಬು
ಮಾವಿನ ಹೋಳು ನಿನ ಕಣ್ಣು । ಕಂದಯ್ಯಾ
ಮಾವ ಬಣ್ಣಿಸಿ ಕರೆದಾನ ॥

**(ಗರತಿಯ ಹಾಡು : ಪು. 44)**

ಕಾಡಿಗೆ ಹಚ್ಚಿದ ಕಣ್ಣು, ತೀಡಿ ಮಾಡಿದ ಹುಬ್ಬು ಹಾಗಿರಲಿ, ಮಗುವಿನ ಕಣ್ಣನ್ನು ಮಾವಿನ ಹೋಳು



11th_Kannada_Reader_Final_16-07-2018.indd 215 16-07-2018 18:43:22

ಎನ್ನುವುದು ಎಷ್ಟು ಸೊಗಸಾಗಿದೆ! ಮಾತೆತ್ತಿದರೆ ಕಮಲವೊಂದನ್ನೇ ತಂದು ಕಣ್ಣಿಗೆ ಹೋಲಿಸುತ್ತಾರೆ ಪ್ರೌಢ ಕವಿಗಳು. ತೊಟ್ಟಿಲೊಳಗೆ ಕೈಕಾಲು ಆಡಿಸುವ ಮಗುವನ್ನು ಕಂಡು ಒಬ್ಬ ತಾಯಿ –

ತೊಟ್ಟಿಲೊಳಗಿನ ಕಂದ ಕೈಯ ಬೀಸುವ ಚಂದ
ರಟ್ಟಿ ನೊಂದಾವು ಎಲೆ ಕಂದ । ನಿಮ್ಮವ್ವ
ದೃಷ್ಟಿ ಮುರಿಲಾಕೆ ಅರಿಯಳು ॥

**(ಗರತಿಯ ಹಾಡು : ಪು. 54)**

ಎನ್ನುತ್ತಾಳೆ. ತೊಟ್ಟಿಲ ಒಳಗೆ ತನ್ನಷ್ಟಕ್ಕೆ ತಾನೇ ತೋಳನ್ನು ಬೀಸುವ ಮಗುವಿನ ಚಂದವನ್ನು ಇವಳು ಸವಿದರೂ, ಒಡನೆಯೇ ಅದಕ್ಕೆ ಎಷ್ಟು ನೋಯುತ್ತದೆಯೋ ಎಂದು ಕೊರಗುತ್ತಾಳೆ.

4

ಮಾನವ ಲೋಕದ ಹಲವು ಬಿಡಿ ಬಿಡಿ ಚಿತ್ರಗಳನ್ನು ಕೊಡುವುದರಲ್ಲಿ ಈ ಜನಪದ ಕಾವ್ಯ ಕಲೆ ನುರಿತದ್ದು. ಜನಪದ ಕವಿಗಳ ಕಣ್ಣು ಯಾವ ವಸ್ತುವಿನಲ್ಲೇ ಆಗಲಿ, ಮುಖ್ಯವಾಗಿ ಮನಸ್ಸಿನ ಮೇಲೆ ಯಾವ ಅಂಶ ಪರಿಣಾಮ ಮಾಡುವುದೋ ಅದನ್ನು ಬಲು ಸೊಗಸಾಗಿ ನಿರೂಪಿಸುತ್ತದೆ. ವಸ್ತುವಿನ ಸಮಗ್ರ ಸೌಂದರ್ಯಕ್ಕಿಂತ, ವಿವರ ವಿವರವಾದ ಬಣ್ಣನೆಗಿಂತ ಆ ಕ್ಷಣದಲ್ಲಿ ಹೊಳೆಯುವ ಅಂತಃಸೌಂದರ್ಯವನ್ನು ಬಣ್ಣಿಸುವುದರಲ್ಲಿ ಇದು ನಿಸ್ಸೀಮ ಕಲೆ. ಕಾವ್ಯ ಪದ್ಧತಿಯನ್ನು ಬಲ್ಲ, ಪಾಂಡಿತ್ಯ ವ್ಯುತ್ಪತ್ತಿಗಳಿದ್ದ ಕವಿಗಳು ವಸ್ತುವನ್ನೋ ವ್ಯಕ್ತಿಯನ್ನೋ ಸಮಗ್ರವಾಗಿ ಅಡಿಯಿಂದ ಮುಡಿಯತನಕ ಬಣ್ಣಿಸುವಂತೆ ಈ ಸಹಜ ಕವಿಗಳು ಬಣ್ಣಿಸುವುದಿಲ್ಲ. ಇಲ್ಲಿನ ಕಲ್ಪನೆ ಪಾಂಡಿತ್ಯಾದಿಗಳಿಂದ ಸಂಸ್ಕಾರಗೊಂಡುದಲ್ಲ. ಪ್ರಾಮಾಣಿಕವಾದ ಅನುಭವದಿಂದ ರೂಪಿತವಾದುದು. ಆದುದರಿಂದಲೇ ತಮ್ಮನ ಮುಖದಲ್ಲಿ ಅಕ್ಕನಿಗೆ ಕಾಣುವುದು 'ಚಂದರ ಹುಬ್ಬು ಕುಡಿ ಬೆಳಕು'; ಮಗುವಿನ ಮುಖದಲ್ಲಿ, 'ಹವಳದ ತುಟಿ, ಬೇವಿನೆಸಳಿನಂತ ಹುಬ್ಬು, ಶಿವನ ಕೈ ಅಲಗಿನಂಥ ಕಣ್ ಬೆಳಕು'. ಲಕ್ಕವ್ವ ಕಾಲು ತೊಳೆಯುವಾಗ ಈ ಕವಿಗಳ ಕಣ್ಣಿಗೆ ಕಾಣುವುದು ಇಷ್ಟು ಮಾತ್ರ –

ಪಿಲ್ಲಿ ಕಾಲಿನೋಳೆ ಚೆಲ್ಲಿದ ನೆರಿಗ್ಯೋಳೆ
ಕಲ್ಮೇಲೆ ಕಾಲ ತೊಳೆಯೋಳೆ । ಲಕ್ಕವ್ವ
ಪಿಲ್ಲಿ ಹೊಳೆದವು ಬಿಸಿಲಿಗೆ ॥

**(ನಾಡ ಪದಗಳು : ಪು.23)**

ಲಕ್ಕವ್ವನ ಸಮಗ್ರ ಶರೀರವಲ್ಲ; ಅವಳ ಮುಖವೂ ಅಲ್ಲ. ಅವಳು ಕಲ್ಲ ಮೇಲೆ ಕಾಲು ತೊಳೆಯುತ್ತಿದ್ದಾಳೆ, ಅದೂ ಬಿಸಿಲಲ್ಲಿ. ಕವಿಯ ಕಣ್ಣು ಕಾಲು ತೊಳೆಯುವ ಕ್ರಿಯೆಯಷ್ಟನ್ನೇ ಗಮನಿಸಿದೆ. ಅಲ್ಲಿ ಕಾಣುವುದು ಪಿಲ್ಲಿ ಹಾಕಿದ ಕಾಲು, ಚೆಲ್ಲಿದ ನೆರಿಗೆ, ಅವಳು ನಿಂತ ಕಲ್ಲು, ಕಾಲು ತೊಳೆಯುವಾಗ ಬಿಸಿಲಿಗೆ ಹೊಳೆಯುವ ಪಿಲ್ಲಿ : ಇಷ್ಟು ಚಿತ್ರವನ್ನು ಮಾತ್ರ ಈ ಕವಿಯ ಕಣ್ಣು ಚಿತ್ರಿಸಿದೆ. ಸಾಮಾನ್ಯ ಹಳ್ಳಿಯ ಹೆಣ್ಣು ಮಗಳು ಲಕ್ಕವ್ವ ಕಲ್ಲಿನ ಮೇಲೆ ಕಾಲು ತೊಳೆಯುವುದು ಅಂತಹ ವಿಶೇಷದ ಸಂಗತಿಯಲ್ಲ. ಕವಿಯ ಕಣ್ಣು ಆ ಪ್ರಸಂಗದಲ್ಲಿ ಮುಖ್ಯವಾದುದನ್ನು ಸ್ವಭಾವೋಕ್ತಿಯಿಂದ ಚಿತ್ರಿಸಿರುವುದೇ ವಿಶೇಷ. ಇದೇ ಕುಶಲತೆ ಹಲಸಂಗಿಯ ಜಕ್ಕವ್ವನನ್ನು ಜಾನಪದ ಕವಿಯೊಬ್ಬ ವರ್ಣಿಸುವ ಮಾತಿನಲ್ಲೂ ಕಾಣಿಸುತ್ತದೆ.

ಮುಗಿನಾಗ ಮೂಗುತಿ ನಕ್ಕರೆ ಕರಿಹಲ್ಲು
ಅಕ್ಕ ನೀನ್ಯಾರ ಮಗಳವ್ವ । ಹಲಸಂಗಿ
ಗಚ್ಚೀನ ಗುಡಿಯ ಜಕ್ಕವ್ವ ॥

**(ಗರತಿಯ ಹಾಡು : ಪು. 3)**

ಹಲಸಂಗಿಯ ಗುಡಿಯಲ್ಲಿ ಜಕ್ಕವ್ವ ಎನ್ನುವುದೊಂದು ಮೂರ್ತಿ. 'ಜಕ್ಕವ್ವನ ಮೂರ್ತಿಯಲ್ಲಿ ಮುಖವೆಲ್ಲ ಇರುವುದಾದರೂ ಕಾಣುವುದು ಕರಿ ಹಲ್ಲು, ಮೂಗು, ಮೂಗುತಿ. ಮೂಗುತಿ ಇರುವ ಕಾರಣದಿಂದ ಮೂಗು–ಹೊಳೆಯುವ ಕಾರಣದಿಂದ ಮೂಗುತಿ, ಕಪ್ಪಾಗಿರುವ ಕಾರಣದಿಂದ ಹಲ್ಲು ಇವನ ಕರಣಗಳನ್ನು ವಿಶೇಷವಾಗಿ ಸೆಳೆಯುತ್ತದೆ. ಇದೇ



11th_Kannada_Reader_Final_16-07-2018.indd 216 16-07-2018 18:43:22

ರೀತಿಯಲ್ಲಿ ಈ ಕವಿತೆಯ ವರ್ಣನೆ ಮುಖ್ಯವಾಗಿ ಇಂದ್ರಿಯಗಳ ಅನುಭವವನ್ನು ಬಿಡಿಬಿಡಿಯಾಗಿ ಚಿತ್ರಿಸತಕ್ಕದ್ದು ಅಥವಾ ಇತರ ಅಂಶಗಳನ್ನು ಕಂಡರೂ ಕವಿ ಅದನ್ನು ಉದ್ದೇಶ ಪೂರ್ವಕವಾಗಿ ಹಿಂದಕ್ಕೆ ಇರಿಸುತ್ತಾನೆ.

5

ಮಾನವ ಲೋಕದ ನಲವನ್ನು ಮಾತ್ರವಲ್ಲ, ನೋವನ್ನೂ ಹಾಡಾಗಿ ತೋಡಿಕೊಂಡಿದೆ ಜನಪದ ಕವಿಗಳ ವಾಣಿ. ಹೆಣ್ಣು ಮಕ್ಕಳ ಜೀವನದಲ್ಲಿ ಬರುವ ಮೊದಲ ನೋವು ಹುಟ್ಟಿ ಬೆಳೆದ ತೌರೂರನ್ನು ತೊರೆದು ಹೋಗುವುದು. ಆ ಸಂದರ್ಭದಲ್ಲಿ ಸಂಸಾರದಲ್ಲಿ ಯಾರು ಯಾರ ಮನಸ್ಸಿನಲ್ಲಿ ಏನೇನು ಪರಿಣಾಮಗಳಾಯಿತು ಎನ್ನುವುದನ್ನು ಈ ಗೀತಗಳು ಕರುಣಾಪೂರ್ಣವಾಗಿ ಚಿತ್ರಿಸುತ್ತವೆ. ಮಗಳಿಗೆ ತೌರೂರಿನ ಪ್ರೀತಿ ಬಲು ಹಿರಿದು. ತೌರೂರನ್ನು ಕುರಿತು –

ತೌರೂರ ದಾರೀಲಿ ಮುಳ್ಳಿಲ್ಲ ಕಲ್ಲಿಲ್ಲ
ಸಾಸುವೆಯಷ್ಟು ಮರಳಿಲ್ಲ । ಬಾನಲ್ಲಿ
ಬಿಸಿಲಿನ ಬೇಗೆ ಸುಡಲಿಲ್ಲ ॥

**(ಜನಪದ ಗೀತೆ : ಪು. 29)**

ಮಗಳು ಹೇಳುವ ಅನುಭವ ಇದು. ತೌರೂರಿನಲ್ಲಿ ಬಾಣಂತಿತನವನ್ನು ಮುಗಿಸಿ ತನ್ನ ಮಗುವಿನೊಡನೆ ಗಂಡನ ಮನೆಗೆ ಹೋಗುವಾಗ –

ತೊಟ್ಟಿಲ ಹೊತ್ತುಕೊಂಡು ತೌರು ಬಣ್ಣ ಉಟ್ಟುಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು । ತೌರೂರ
ತಿಟ್ಟತ್ತಿ ತಿರುಗಿ ನೋಡ್ಯಾಳ ॥

**(ಜನಪದ ಗೀತೆ : ಪು. 31)**

ಮೂರೇ ಮಾತಿನಲ್ಲಿ ಸಮಗ್ರ ಚಿತ್ರವನ್ನು ಬರೆದು, ಮಗಳು ಒಂದೇ ಒಂದು ಸಲ ತಿಟ್ಟನ್ನು ಇಳಿದರೆ ಮರೆಯಾಗುವ ತೌರೂರನ್ನು ತಿರುಗಿ ನೋಡಿದಳು ಎಂಬ ಮಾತಿನಲ್ಲಿ ಕವಿ ಎಂತಹ ಅಪಾರ ವ್ಯಥೆಯನ್ನು ಧ್ವನಿಸುತ್ತಾನೆ. ಇಷ್ಟೊಂದು ಪ್ರಿಯವಾದ ತೌರೂರು ಕೂಡ ದಾರುಣವಾಗುತ್ತದೆ ತಾಯಿ ಇಲ್ಲದಿದ್ದರೆ; ತಾಯಿಯಿಲ್ಲದ ತೌರೂರಿಗೆ ಹೋಗಿ ಪಡೆದು ಬಂದ ಕಹಿ ಅನುಭವವನ್ನು ಹೆಣ್ಣು ಮಗಳೊಬ್ಬಳು ಹೀಗೆ ತೋಡಿಕೊಳ್ಳುತ್ತಾಳೆ –

ತಾಯಿಲ್ದ ತವರಿಗೆ ಹೋಗದಿರು ನನ ಮನವೆ
ನೀರಿಲ್ದ ಕೆರಿಗೆ ಕರು ಬಂದ । ತಿರುಗಾಗ
ಆಗ ನೋಡಿದರ ದುಃಖಗಳ ॥

**(ಗರತಿಯ ಹಾಡು : ಪು. 13)**

ಇಲ್ಲಿ ಆಕೆ ತನ್ನ ಅನುಭವಕ್ಕೆ ಎಷ್ಟು ಉಚಿತವಾದ ಹೋಲಿಕೆಯಿಂದ ಅಭಿವ್ಯಕ್ತಿಯನ್ನು ನೀಡಿದ್ದಾಳೆ. ಹೆಣ್ಣಿನ ಜೀವನದಲ್ಲಿ ಇದಕ್ಕೂ ಮಿಗಿಲಾದ ವ್ಯಥೆ ಬಂಜೆತನ ಎಂಬುದು. ಬಂಜೆ ತನ್ನ ಬದುಕನ್ನು ಕುರಿತು –

ಬಾಲಕರಿಲ್ಲದ ಬಾಲೀದಾತರ ಜನ್ಮ
ಬಾಡಗಿ ಎತ್ತು ದುಡಿದಂಗೆ । ಬಾಳೆಲೆಯ
ಹಾಸ್ಯುಂಡು ಬೀಸಿ ಎಸದಂಗ ॥

**(ಗರತಿಯ ಹಾಡು : ಪು. 67)**

ಎಂದು ನಿಂದಿಸಿಕೊಳ್ಳುತ್ತಾಳೆ. ಅಂದಂದಿನ ಮನೋವ್ಯಥೆ ಹಾಡಾಗುವಾಗ, ಅದು ಮೈದಾಳುವ ಉಚಿತವಾದ, ಧ್ವನಿಪೂರ್ಣವಾದ ಉಪಮೆಗಳ ಸೊಗಸು ಅಪೂರ್ವವಾಗಿದೆ.



11th_Kannada_Reader_Final_16-07-2018.indd 217 16-07-2018 18:43:22

## ಕೃತಿ–ಕರ್ತೃ ಪರಿಚಯ



ಜಿ.ಎಸ್.ಶಿವರುದ್ರಪ್ಪನವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ 1926ರಲ್ಲಿ ಜನಿಸಿದರು. ಇವರು ನವೋದಯ ಮತ್ತು ನವ್ಯ ಎರಡೂ ಸಂಪ್ರದಾಯಗಳಲ್ಲೂ ಕಾವ್ಯ ರಚಿಸಿದ ಕವಿಯೆನಿಸಿದ್ದಾರೆ.ಸೌಂದರ್ಯ ಪ್ರಜ್ಞೆ,ನವಜೀವನದ ಆದರ್ಶ ಮತ್ತು ವೈಚಾರಿಕತೆ ಶಿವರುದ್ರಪ್ಪನರ ಕವಿತೆಗಳ ಜೀವ ದ್ರವ್ಯ. ಮೈಸೂರು ಮತ್ತು ಹೈದರಾಬಾದುಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನಿರ್ವಹಿಸಿದ ಸಾಂಸ್ಕೃತಿಕ ಆಧುನಿಕ ಕನ್ನಡದ ಅಭಿವೃದ್ಧಿಗೆ ಪ್ರೇರಕವಾಗಿವೆ.

ಸೌಂದರ್ಯ ಸಮೀಕ್ಷೆ ಶಿವರುದ್ರಪ್ಪನವರ ಮಹಾಪ್ರಬಂಧ ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯನ್ನು ಅತ್ಯಂತ ಪ್ರೌಢಶೈಲಿಯಲ್ಲಿ ನಿರೂಪಿಸುವ ಕೃತಿ. ವಿಮರ್ಶೆಯ ಪೂರ್ವ ಪಶ್ಚಿಮ, ಗತಿಬಿಂಬ, ಕಾವ್ಯಾರ್ಥ ಚಿಂತನ ಗ್ರಂಥಗಳು ಶಿವರುದ್ರಪ್ಪನವರ ವಿಮರ್ಶಾ ಪ್ರಜ್ಞೆಗೆ ನಿದರ್ಶನವಾಗಿದೆ. ಚೆಲುವು ಒಲವು, ದೇವಶಿಲ್ಪ, ಕಾರ್ತಿಕ, ದೀಪದ ಹೆಜ್ಜೆ, ಗೋಡೆ, ಪ್ರೀತಿ ಇಲ್ಲದ ಮೇಲೆ, ಚಕ್ರಗತಿ ಮುಂತಾದ 13 ಕವನ ಸಂಕಲನಗಳನ್ನು ಇವರು ರಚಿಸಿದ್ದಾರೆ. ಇವರ ಬರಹಗಳ ವೈವಿಧ್ಯತೆ ಹಾಗೂ ವ್ಯಾಪಕತೆಯನ್ನು ಈ ಕವನ ಸಂಕಲನಗಳಲ್ಲಿ ಕಾಣಬಹುದು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಸಂದಿವೆ. ಇವರು ದಾವಣಗೆರೆಯಲ್ಲಿ 1992ರಲ್ಲಿ ನಡೆದ 61ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಈ ಲೇಖನವನ್ನು ಇವರ 'ಸೌಂದರ್ಯ ಸಮೀಕ್ಷೆ' ಎನ್ನುವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಕಠಿಣ ಪದಗಳ ಅರ್ಥ

ಮೂಡಣ–ಪೂರ್ವದಿಕ್ಕು; ತಂಗಾಳಿ–ತಂಪಾದ ಗಾಳಿ; ಮೌನ–ಪ್ರಶಾಂತತೆ, ನಿಶ್ಶಬ್ದತೆ; ಬೆಳ್ಳಿ–ನಕ್ಷತ್ರ; ಮುಕ್ತಕ–ಮುತ್ತುಗಳು; ಮಾರ್ದವತೆ–ಕೋಮಲತೆ, ಮೃದುತ್ವದಿಂದ ಕೂಡಿದ್ದು; ಬಾಂಧವ್ಯ–ನಂಟಸ್ತಿಕೆ; ಜವರಾಯ–ಯಮರಾಯ; ಕರಾಳ–ಕಪ್ಪು, ಕ್ರೂರ; ತೀಡು–ಬೀಸು, ನೇವರಿಸು; ತುಮುಲ–ಗೊಂದಲ, ಗಲಿಬಿಲಿ; ನಿಸ್ಸೀಮ–ಚತುರ, ನಿಪುಣ; ಪಿಲ್ಲಿ–ಕಾಲುಂಗುರ; ವ್ಯಥೆ–ದುಃಖ, ವೇದನೆ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಮುಂಬೆಳಕಿನ ಪ್ರಶಾಂತ ವಾತಾವರಣದಲ್ಲಿ ಹಳ್ಳಿ ಹೆಣ್ಣು ಮಗಳು ಯಾರನ್ನು ನೆನೆಯುತ್ತಾಳೆ ?
2. ಹಳ್ಳಿಯ ಹಾಡುಗಳನ್ನು ರಚಿಸಿದವರು ಯಾರು?
3. ಕವಿ ಯಾವುದನ್ನು ಅಚ್ಚಳಿಯದ ಆಸ್ತಿ ಎಂದು ಪ್ರಶಂಸಿಸಿದ್ದಾರೆ?
4. ಜನಪದ ಹಾಡುಗಳಲ್ಲಿ ವ್ಯಕ್ತವಾಗುವ ಸಂಗತಿಗಳಾವುವು?
5. ಬೆಳದಿಂಗಳನ್ನು ಜನಪದರು ಏನೆಂದು ಕರೆದಿದ್ದಾರೆ?
6. ಪಾರ್ವತಿಗೆ ಎಲ್ಲಿಗೆ ಹೋಗಬೇಕೆಂದು ಆಸೆಯಾಯಿತು?



11th_Kannada_Reader_Final_16-07-2018.indd 218 16-07-2018 18:43:22

7. ಪಾರ್ವತಿ ಯಾರ ಮಗಳು?
8. ಕೈಲಾಸದ ಒಡೆಯನಾರು?

**II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ಕವಿಯ ಕಣ್ಣಿಗೆ ದೇವರು ಹೇಗೆಲ್ಲ ಕಾಣುತ್ತಾನೆ ?
2. ಜನಪದ ಗೀತೆಗಳಲ್ಲಿ ಯಾವ ಅಂಶಗಳು ಹೆಚ್ಚಾಗಿ ಮಿಡಿಯುತ್ತವೆ?
3. ಬಾಳೆಯ ಎಲೆಯ ಸೊಬಗನ್ನು ಅಕ್ಕ ಯಾವುದಕ್ಕೆ ಹೋಲಿಸಿದ್ದಾಳೆ?
4. ತಾಯಿಯು ತೊಟ್ಟಿಲೊಳಗೆ ಕೈಕಾಲು ಆಡಿಸುವ ಮಗುವನ್ನು ಕುರಿತು ಹೇಳುವ ಮಾತುಗಳಾವುವು?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ಜನಪದ ಹಾಡುಗಳಿಗೆ ಸ್ಫೂರ್ತಿ ಯವುದು ?
2. ಕವಿ ಜನಪದ ಹಾಡುಗಳನ್ನು ಸಹಜವಾಗಿ ಮೂಡಿದ ಮುಕ್ತಕಗಳೆಂದು ವರ್ಣಿಸಲು ಕಾರಣವೇನು ?
3. ಜನಪದ ಹಾಡುಗಳಲ್ಲಿರುವ ಸರ್ವಾಕರ್ಷಕ ಶಕ್ತಿಗಳು ಯಾವುವು ?
4. ಜನಪದ ಕವಿಗಳಿಗೆ ಯಾವುದರಲ್ಲಿ ಆತ್ಮೀಯತೆ ಇದೆ. ಏಕೆ ?
5. ಬೆಳದಿಂಗಳನ್ನು ಕುರಿತು ಗ್ರಾಮೀಣ ಹೆಣ್ಣುಮಗಳು ಏನು ಹೇಳುತ್ತಾಳೆ ?
6. ಶಿವನ ಬಳಿ ಪಾರ್ವತಿ ದೇವಿ ಏನು ಕೇಳಿದಳು ?
7. ಜನಪದರು ಶಿವ ಪಾರ್ವತಿಯರನ್ನು ಹೇಗೆ ವರ್ಣಿಸಿದ್ದಾರೆ ?
8. ಮೃತ್ಯುವನ್ನು ಜನಪದರು ಹೇಗೆ ಉಪಯೋಗಿಸುತ್ತಾರೆ ?
9. ಹೆಣ್ಣು ಮಕ್ಕಳು ತಮ್ಮ ಸುತ್ತಲಿನ ಚೆಲುವನ್ನು ಹೇಗೆ ವರ್ಣಿಸಿದ್ದಾರೆ ?
10. ತಾಯಿ ಮಗುವಿನ ಸೌಂದರ್ಯವನ್ನು ಬಣ್ಣಿಸಿರುವ ಪರಿ ಯಾವುದು ?

## ಭಾಷಾಭ್ಯಾಸ

**1. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಬರೆಯಿರಿ.**

ಪ್ರಶಾಂತ, ವಿಸ್ಮಯ, ಮುಂಜಾವು, ಪರಂಪರೆ, ಸೌಂದರ್ಯ, ಮಧುರವಾಣಿ, ಆತ್ಮೀಯತೆ, ಉದ್ದೇಶ, ಕರುಣೆ.

**2. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**

ನಗರ, ದೂರ, ಹಗುರ, ಅನುಭವ, ಪ್ರಿಯ, ಆಹಾರ, ಸಹಜ, ಜೀವ, ಸಾಮಾನ್ಯ, ಪಂಡಿತ.

**3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**

ಸರ್ವಾಕರ್ಷಕ, ಅತ್ಯಾಕರ್ಷಣೆ, ಪ್ರಿಯವಾದ, ಎಲ್ಲೆಲ್ಲಿ, ಸ್ವಭಾವೋಕ್ತಿ, ಕವಿಯೊಬ್ಬ, ಮೈದಾಳು, ಬಾಳೆಲೆ.

## ಚಟುವಟಿಕೆ

1. ಜನಪದ ಗೀತೆಗಳ ಸಂಗ್ರಹವನ್ನು ಪುಸ್ತಕಾಲಯದಿಂದ ಸಂಪಾದಿಸಿ ಅದರ ಸ್ವಾದವನ್ನು ಅನುಭವಿಸಿ.
2. ನಿಮ್ಮ ಊರಿನ ಜನಪದೀಯ ಕಲೆಗಳನ್ನು ನೋಡಿ, ಆಡಿ ಅದರ ಮಹತ್ವವನ್ನು ಅರಿಯಿರಿ.





11th_Kannada_Reader_Final_16-07-2018.indd 219 16-07-2018 18:43:23

ಉಪಪಠ್ಯ

ಘಟಕ ಹತ್ತು

# ನಾಣಿ

– ಗೊರೂರು ರಾಮಸ್ವಾಮಿ ಅಯ್ಯಂಗಾರ್

ನಮ್ಮ ಊರಿನ ನಾಣಿಯ ಪರಿಚಯ ನಿಮಗೆ ಸ್ವಲ್ಪ ಮಾಡಿಕೊಡಬೇಕು. ನಾಣಿಯ ಪೂರ್ಣವಾದ ಹೆಸರು ನಾರಾಯಣಯ್ಯಂಗಾರ್ ಎಂದು. ಅವನಿಗೆ ವಯಸ್ಸು ಸುಮಾರು ನಲ್ವತ್ತು ಇರಬಹುದು. ಇಪ್ಪತ್ತೆರಡನೆಯ ವಯಸ್ಸಿನಲ್ಲಿಯೇ ಮದುವೆಯಾಗಿ ವಿದುರನಾದನು. ಈಚೆಗೆ ಅನೇಕರು ಹೇಳಿದರೂ ಎರಡನೆಯ ಮದುವೆ ಮಾಡಿಕೊಳ್ಳಲಿಲ್ಲ. ಅವನಿಗೆ ಸ್ವಲ್ಪ ಪಿತ್ರಾರ್ಜಿತ ಆಸ್ತಿ ಇದೆ. ಅವನ ಅವಶ್ಯಕತೆಗಳು ಹೆಚ್ಚಾಗಿಲ್ಲವಾದುದರಿಂದ ಇದ್ದುದರಲ್ಲಿಯೇ ಸಾಲಗಾರನಾಗದೆ ಮಿತವ್ಯಯದಿಂದ ಸುಖಿಯಾಗಿದ್ದಾನೆ.

ಜೋಡಿದಾರರಿಗೂ ಅವನಿಗೂ ಬಹಳ ಸ್ನೇಹ. ಅವರೇ ಅವನನ್ನು ಮೊದಲು ನಾಣಿ ಎಂದು ಕರೆಯುವುದಕ್ಕೆ ಪ್ರಾರಂಭಿಸಿದರು. ಈಚೆಗೆ ಎಲ್ಲರೂ ಅವನನ್ನು ಹಾಗೆಯೇ ಕರೆಯುತ್ತಾರೆ. ನಾಣಿ ನಮ್ಮ ಊರಿಗೆ ಒಬ್ಬ ಬಾಲಚಾರ. ಯಾರಿಗೆ ಯಾವ ಕಾಲದಲ್ಲಾದರೂ ತನ್ನಿಂದಾಗಬಹುದಾದ ಸಹಾಯವನ್ನು ಮಾಡಲು ಸಿದ್ಧನಾಗಿರುತ್ತಾನೆ. ಜೋಡಿದಾರರಿಗೆ ಅವರ ಕೆಲಸಗಳಲ್ಲೆಲ್ಲಾ ನಾಣಿಯೇ ಬಲಗೈ. ನಾಣಿಯು ನಮ್ಮ ಊರಿನ ಇತರರಂತೆ ಬಹಳ ವಿನೋದಪ್ರಿಯ. ನಾವೆಲ್ಲ ಅವನನ್ನು ಜವಾಬ್ದಾರಿಯಿಲ್ಲದ ಮನುಷ್ಯನೆಂದು ಕರೆಯುತ್ತೇವೆ. ರೈತರಿಗಂತೂ ಅವನನ್ನು ಕಂಡರೆ ಬಹಳ ವಿಶ್ವಾಸ. ಅವನನ್ನು 'ಸರ್ವಗ್ನೆ ನಾಣಪ್ಪ' ಎನ್ನುತ್ತಾರೆ.

ನಾಣಿಯು ಯಾವಾಗಲೂ ಪಾದರಸದಂತೆ ಚಟುವಟಿಕೆಯಾದ ಮನುಷ್ಯ. ಮುಖವು ದಪ್ಪವಾಗಿ ಲಕ್ಷಣವಾಗಿದೆ. ಮೂಗು ಗಿಣಿಯ ಕೊಕ್ಕಿನಂತೆ ಸ್ವಲ್ಪವಾಗಿದೆ. ಕಣ್ಣು ಹೊಳಪಾಗಿಯೂ ತೀಕ್ಷ್ಣವಾಗಿಯೂ ಇರುವುದಲ್ಲದೆ ವಿನೋದವೂ ಕುಚೇಷ್ಟೆಯೂ ಅದರಲ್ಲಿ ತುಂಬಿದೆ. ಅವನೆಲ್ಲಿದ್ದರೆ ಅಲ್ಲಿ ನಗು, ಗದ್ದಲ. ಯಾವಾಗಲೂ ಇರುವುದರಲ್ಲಿ ತೃಪ್ತನಾಗಿರುವುದು ಅವನ ಸ್ವಭಾವ. ಸಮಯಕ್ಕೂ ಸ್ಥಳಕ್ಕೂ ತಕ್ಕಂತೆ ತನ್ನ ನಡತೆಯನ್ನೂ ಮಾತನ್ನೂ ಬದಲಾಯಿಸಿಕೊಂಡು ಎಲ್ಲರಿಗೂ ಸ್ನೇಹಿತನಾಗಿರುವ ಶಕ್ತಿಯೂ ಅವನಿಗಿದೆ. ನಮ್ಮ ಊರಿಗೆ ಅವನು ಸ್ಥಳಪುರಾಣದಂತೆ. ಪ್ರತಿಯೊಬ್ಬರ ಮನೆಯ ವಿಷಯಗಳೂ ಅವನಿಗೆ ಗೊತ್ತು. ಎರಡು ಮೂರು ತಲೆಗಳಿಗೆ ಸಂಬಂಧಪಟ್ಟ ಕಥೆಗಳನ್ನೆಲ್ಲಾ ಇವನು ಹೇಳುತ್ತಾನೆ. ಇದರಿಂದ ಮುದುಕರಿಗೂ ಅವನಲ್ಲಿ ಗೌರವ. ಯಾವಾಗಲೂ, ಯಾರಿಗಾದರೂ ಸಹಾಯ ಮಾಡಲು ಸಿದ್ಧನಾಗಿರುವುದರಿಂದ ಹೆಂಗಸರಿಗೆ ಅವನನ್ನು ಕಂಡರೆ ಗೌರವ ವಿಶ್ವಾಸಗಳಿವೆ. ನಾಣಿಯು ಎರಡು ಮೂರು ಸಂಸ್ಕೃತ ಪುಸ್ತಕಗಳಿಂದ ಆಗಾಗ್ಗೆ ಒಂದೊಂದು ಶ್ಲೋಕವನ್ನು ಹೇಳುತ್ತಾನೆ. ಜೈಮಿನಿ ಭಾರತದಿಂದ ಮೂರು ನಾಲ್ಕು ಪದ್ಯಗಳನ್ನೂ ಹೇಳುತ್ತಾನೆ. ಮಾತು ಮಾತಿಗೂ ಒಂದೊಂದು ಗಾದೆಯನ್ನು ಹೇಳುತ್ತಾನೆ. ತನಗೆ ತಿಳಿಯದ ವಿಷಯವೇ ಇಲ್ಲವೆಂದು ನಂಬಿಸುತ್ತಾನೆ. ಇದನ್ನು ನೋಡಿ ನಮ್ಮ ಊರಿನಲ್ಲಿ ಅನೇಕರು, 'ಇವನೇ ವಿದ್ಯಾವಾಚಸ್ಪತಿ. ಇವನಿಗಿಂತ ಹೆಚ್ಚು ಜ್ಞಾನಿಗಳು ಪ್ರಪಂಚದಲ್ಲಿಯೇ ಇಲ್ಲ'ವೆಂದು ತಿಳಿದುಬಿಟ್ಟಿದ್ದಾರೆ. ಚಿಕ್ಕ ಹುಡುಗರಿಗಂತೂ ಅವನು ಗುರು. ನಾಣಿಯು ಅವರ ಮುಂದೆ ಬಯಲಾಟದ ಭೀಮ ಮತ್ತು ಕೀಚಕರ



11th_Kannada_Reader_Final_16-07-2018.indd 220 16-07-2018 18:43:23

ಪಾತ್ರಗಳನ್ನು ಬಹಳ ಚೆನ್ನಾಗಿ ಅಭಿನಯಿಸುತ್ತಾನೆ. ನಶ್ಯದ ಡಬ್ಬಿ ಮತ್ತು ಕರವಸ್ತ್ರದ ಸಹಾಯದಿಂದ ಕೈಯಲ್ಲಿ ಒಂದು ಮುದಿ ಹೆಂಗಸನ್ನು ಮಾಡಿ ತೋರಿಸುತ್ತಾನೆ. ಸೀಬೆ ಹಣ್ಣನ್ನು ಚಾಕುವಿನಿಂದ ಅವನು ವಿಚಿತ್ರವಾಗಿ ಕುಯ್ದರೆ ಒಂದು ಕಡೆ ಬಸವನಂತೆಯೂ ಇನ್ನೊಂದು ಕಡೆ ಒಂಟೆಯಂತೆಯೂ ಕಾಣುತ್ತದೆ. ಇದನ್ನು ನೋಡಿ ಹುಡುಗರು ನಕ್ಕು ಸಾಯುತ್ತಾರೆ.

ಹುಡುಗರಿಗೆ ನಾಣಿಯಲ್ಲಿ ವಿಶ್ವಾಸವೂ, ಅವನನನ್ನು ಕಂಡರೆ ಆನಂದವೂ ಉಂಟಾಗಲು ಮತ್ತೊಂದು ಕಾರಣವೂ ಇದೆ. ನಾಣಿಯು ಯಾವಾಗ ಮಾತನಾಡಬೇಕಾದರೂ ಅಂತ್ಯಪ್ರಾಸವಿಲ್ಲದೇ ಮಾತನಾಡುವುದೇ ಇಲ್ಲ. ಅವನಿಗೆ ಒಂದು ಪದವನ್ನು ಹೇಳಿ ಬಿಡಿ; ಅವನು ಅದೇ ರೀತಿಯ ಮುವ್ವತ್ತು ಪದಗಳನ್ನು ಹೇಳುತ್ತಾನೆ. ಸರಿ, ಹುಡುಗರು ನಗುತ್ತಾರೆ. ನಾಣಿಯು ಒಂದು ಸಾಲು :

ನಮ್ಮೊಳಗೇ ಭೇದ

ನಮಗಿರೋದೆಂದೇ ವೇದ

ಎಂದನು. ಕೂಡಲೇ ಹುಡುಗರೆಲ್ಲಾ 'ಪ್ರಾಸಿಗೆ ಪ್ರಾರಂಭವಾಯಿತು' ಎಂದರು. ತಾನು ಹೇಳುವ ಎಲ್ಲಾ ಮಾತುಗಳಲ್ಲಿಯೂ ಅರ್ಥವಿದೆ ಎಂದು ನಾಣಿ ತಿಳಿದಿಲ್ಲ. ಆದರೆ ಒಂದೊಂದು ಸಲ ಅವನು ಬಾಯಿಗೆ ಬಂದ ಹಾಗೆ ಹೇಳುವ ಮಾತಿನಲ್ಲಿ ಅರ್ಥವೂ ಸೇರುತ್ತದೆ. ಹುಡುಗರಿಗೆ ಅರ್ಥದ ಕಡೆಗೆ ಗಮನವಿರುವುದಿಲ್ಲ. ಯಾವಾಗಲೂ ಒಂದೇ ಸಮವಾದ ಪದಗಳನ್ನು ಸ್ವಲ್ಪವೂ ತಡವರಿಸದೆ ಸಾಸಿವೆ ಸಿಡಿದಂತೆ ನಾಣಿಯು ಹೇಳುತ್ತಾನಲ್ಲಾ ಎಂಬುದೇ ಅವರಿಗೆ ಆನಂದ. ತನ್ನ ಶಕ್ತಿಯ ಈ ರೂಪವನ್ನು ನಾಣಿಯು ಒಂದು ಸಲ ಮುಂದೆ ಹೇಳುವಂತೆ ತೋರಿಸಿದನು.... 'ಯಾರೋ ಎಲ್ಲಿಗೋ ಹೋದರು' ಎಂಬ ಮಾತು ಬಂದ ಕೂಡಲೇ ನಾಣಿಯು –

'ಅವರು ಹೋಗ್ದೆ ಇದ್ರೆ ಕಷ್ಟ

ಆಗ ದೇಶಕ್ಕೆ ನಷ್ಟ

ನಮಗೆಲ್ಲಾ ಜಾತಿ ಭ್ರಷ್ಟ

ನಾವ್ಹೇಳೋ ಮಾತೆಲ್ಲಾ ಸ್ಪಷ್ಟ

ಎಂದನು. ಹುಡುಗರೆಲ್ಲಾ ಮತ್ತೊಂದು ಸಲ ನಕ್ಕರು. ನಾಣಿಯು ಇನ್ನೊಂದು ಸಲ –

ಅವರ್ಗೆ ಸುಖ

ನಮ್ಗೆ ದುಃಖ

ಉರಿಯುತ್ತೆ ಮುಖ

ಕೇಳೋನಿಲ್ಲ ಸುಖ

ಎಂದನು. ನಮ್ಮೂರ ಒಬ್ಬ ಹುಡುಗನಿಗೆ ಮುಂಜಿಯ ಮಾತು ಬಂತು. ಕೂಡಲೇ ನಾಣಿಯು –

ಅವನ್ಗೆ ಯಾಕೆ ಮುಂಜಿ

ಕುಡಿಯೋಕೆ ಇಲ್ಲ ಗಂಜಿ

ನೊಲ್ಲಿ ಹತ್ತಿ ಹಿಂಜಿ

ಸಿಕ್ಕುತ್ತೆ ಹೊಟ್ಟೆಗೆ ಗಂಜಿ

ಎಂದನು. ಪೇಟೆಯ ಬೋರನು ಯಾರಿಗೋ ಲಗ್ನವಾಗುತ್ತಿದೆ ಎಂದ ಕೂಡಲೇ ನಾಣಿಯು –

ಅವನ್ಗೆ ಇಲ್ಲ ಲಗ್ನ

ಮನೆಗೆ ಬಂದಿಲ್ಲ ಹೆಗ್ಣ (ಹೆಂಡತಿ)

ಇರೋದೆಲ್ಲ ಆ ಮೇಲೆ ಭಗ್ನ

ಮೈಯೆಲ್ಲಾ ಬರಿ ನಗ್ನ(ಸಾಲ)

ಎಂದನು.


ನಾಣಿಯು ಈ ರೀತಿಯಾಗಿ ತಾನು ನಿಂತ ಕಡೆ ಜನರನ್ನು ನಗಿಸುತ್ತಿರುವುದನ್ನು ನಮ್ಮ ಊರಿನಲ್ಲಿ ನಿತ್ಯ ಕಾಣಬಹುದು.

* * *



11th_Kannada_Reader_Final_16-07-2018.indd 221 16-07-2018 18:43:23

## ಕೃತಿ–ಕರ್ತೃ ಪರಿಚಯ



ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕ್ರಿ.ಶ. 1904ರಲ್ಲಿ ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಗಾಂಧೀಜಿಯವರ ನೇರ ಸಂಪರ್ಕ ಹೊಂದಿದ್ದ ಇವರು ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಯಾಗಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದುದಲ್ಲದೆ ಗಾಂಧೀ ತತ್ವ ಪ್ರಸಾರದಲ್ಲಿ ತೊಡಗಿದ್ದರು. ಕನ್ನಡ ನವೋದಯ ಗದ್ಯ ಪ್ರಕಾರದ ಪ್ರಮುಖ ಲೇಖಕರಾದ ಇವರು ಸಣ್ಣ ಕಥೆ, ಪ್ರಬಂಧ, ಪ್ರವಾಸ ಕಥನ, ಕಾದಂಬರಿ, ಜೀವನ ಚರಿತೆ, ಅನುವಾದವು ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ಗರುಡಗಂಬದ ದಾಸಯ್ಯ, ಮೆರವಣಿಗೆ, ಹೇಮಾವತಿ, ಪುನರ್ಜನ್ಮ ಇವರ ಪ್ರಮುಖ ಕೃತಿಗಳು. ಅಮೇರಿಕಾದಲ್ಲಿ ಗೊರೂರು ಕೃತಿ ಪ್ರವಾಸ ಕಥನವಾಗಿದ್ದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿದೆ. ಮೈಸೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್., ಪದವಿಯನ್ನೂ ಗಳಿಸಿರುವ ಗೊರೂರರು 1967ರಲ್ಲಿ ತರೀಕೆರೆಯಲ್ಲಿ ನಡೆದ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1982ರಲ್ಲಿ ಶಿರಸಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

## ಕಠಿಣ ಪದಗಳ ಅರ್ಥ

ವಿದುರ–ಹೆಂಡತಿ ಇಲ್ಲದವನು; ಪಿತ್ರಾರ್ಜಿತ–ಹಿರಿಯರು ಸಂಪಾದಿಸಿದ ಆಸ್ತಿ; ಮಿತವ್ಯಯ–ಕಡಿಮೆ ಖರ್ಚು; ಸರ್ವಜ್ಞ–ಎಲ್ಲ ಬಲ್ಲವನು ವಿನೋದ; ಹಾಸ್ಯ, ಭಗ್ನ–ನಾಶ, ಹಾಳು; ಲಗ್ನ–ಮದುವೆ, ವಿವಾಹ.

## ಅಭ್ಯಾಸ

**I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.**

1. ನಾಣಿಯ ಪೂರ್ಣ ಹೆಸರೇನು ?
2. ನಾಣಿಯ ವಯಸ್ಸು ಎಷ್ಟು ?
3. ನಾಣಿ ಯಾರೊಂದಿಗೆ ಸ್ನೇಹ ಬೆಳಿಸಿದ್ದ ?
4. ರೈತರು ನಾಣಿಯನ್ನು ಏನೆಂದು ಕರೆಯುತ್ತಿದ್ದರು?

**II. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

1. ನಾಣಿ ಹೇಗೆ ಸುಖವಾಗಿದ್ದನು ?
2. ನಾಣಿಯನ್ನು ಮೊದಲು ಆ ಹೆಸರಿನಿಂದ ಕರೆದದ್ದು ಯಾರು ?
3. ಜೋಡಿದಾರರ ಕೆಲಸಗಳಲ್ಲಿ ನೆರವಾಗುತ್ತಿದ್ದವರು ಯಾರು? ಹೇಗೆ ?
4. ನಾಣಿಯನ್ನು ಸರ್ವಗ್ನ ಎಂದು ಕರೆಯುತ್ತಿದ್ದವರು ಯಾರು? ಏಕೆ ?

**III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.**

1. ನಾಣಿಯ ಪರಿಚಯವನ್ನು ಮಾಡಿ ಕೊಡಿ
2. ಜೋಡಿದಾರರಿಗೆ ನಾಣಿಯನ್ನು ಕಂಡರೆ ಹೆಚ್ಚು ಪ್ರೀತಿ. ಏಕೆ ?
3. ನಾಣಿಯನ್ನು ಊರಿನ ಜನರು ಏನೆಂದು ಕರೆಯುತ್ತಿದ್ದರು ?
4. ಮುಂಜಿಯ ಮಾತು ಬಂದಾಗ ನಾಣಿ ಹೇಳಿದ ಪ್ರಾಸ ಪದ್ಯ ಯಾವುದು ?

## ಚಟುವಟಿಕೆ

1. ಗೊರೂರು ರಾಮಸ್ವಾಮಿ ಅಯ್ಯಂಗಾರರ ಇನ್ನಿತರ ಕೃತಿಗಳನ್ನು ಓದಿರಿ.
2. ಮಾತೃಭಾಷೆ ತಮಿಳಾಗಿದ್ದೂ ಕನ್ನಡ ಭಾಷೆಯಲ್ಲಿ ಸಾಹಿತ್ಯ ಸೇವೆಗೈದ ಮಹನೀಯರನ್ನು ಪರಿಚಯಿಸಿ.



11th_Kannada_Reader_Final_16-07-2018.indd 222 16-07-2018 18:43:23

ಘಟಕ ಹತ್ತು

# ಪತ್ರಲೇಖನ, ಪ್ರಬಂಧಗಳು.

## ಪತ್ರಲೇಖನ

ಒಬ್ಬರು ಮತ್ತೊಬ್ಬರೊಂದಿಗೆ ಬರಹದ ಮೂಲಕ ಕುಶಲೋಪರಿ ಅಥವಾ ವ್ಯವಹಾರಕ್ಕಾಗಿ ಸಂಪರ್ಕ ಮಾಡುವುದನ್ನು ಪತ್ರಲೇಖನ ಎನ್ನುತ್ತೇವೆ. ಇದೊಂದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಬರಹದ ಪದ್ಧತಿಯಾಗಿದೆ. ಪ್ರಾಚೀನ ಕಾಲದಲ್ಲಿ ಎಲೆಯ(ಪತ್ರದ) ಮೇಲೆ, ಬಟ್ಟೆಯ ಮೇಲೆ, ತಾಳೆಗರಿಗಳ ಮೇಲೆ ಪತ್ರಗಳನ್ನು ಬರೆದು ಕಳಿಸುತ್ತಿದ್ದರು. ಈಗ ಕಾಗದದ ಮೇಲೆ ಬರೆಯುತ್ತಿದ್ದರೂ ಪತ್ರ ಬರೆಯುವ ಅದೇ ಪದ್ಧತಿ ಮುಂದುವರೆಯುತ್ತಿದೆ. ಇಂದು ದೂರವಾಣಿ, ಮೊಬೈಲ್‌ಫೋನ್, ಕಂಪ್ಯೂಟರ್ ಮುಂತಾದ ಸಂಪರ್ಕ ಮಾಧ್ಯಮಗಳು ಪ್ರಚಾರದಲ್ಲಿವೆ. ಇವುಗಳ ಮೂಲಕ ಎಸ್.ಎಂ.ಎಸ್, ಇ–ಮೆಯಿಲ್, ಮುಂತಾದವುಗಳ ಮೂಲಕ ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಕ್ಷಣ ಮಾತ್ರದಲ್ಲಿ ಯಾರನ್ನು ಬೇಕಾದರೂ ಸಂಪರ್ಕಿಸಬಹುದು. ಹಾಗಿದ್ದೂ ಸಹ ಪತ್ರಗಳು ಮನುಷ್ಯನು ಅಕ್ಷರ ಜ್ಞಾನ ಪಡೆದಂದಿನಿಂದಲೂ ಮಹತ್ವವನ್ನು ಪಡೆದುಕೊಂಡು ಬಂದಿದೆ. ಅವು ಸಾರ್ವಕಾಲಿಕ ದಾಖಲೆಗಳು. ಪತ್ರಗಳಿಗೆ ಅದರದ್ದೇ ಆದ ವಿಶಿಷ್ಟತೆ ಇದೆ.

ಪತ್ರಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ.

1. ವೈಯಕ್ತಿಕ ಪತ್ರ.
2. ವ್ಯಾವಹಾರಿಕ ಪತ್ರ.

### 1. ವೈಯಕ್ತಿಕ ಪತ್ರ

ಬಂಧು–ಮಿತ್ರರು ಪರಸ್ಪರ ಬರೆಯುವ ಪತ್ರಗಳನ್ನು ವೈಯಕ್ತಿಕ ಪತ್ರಗಳೆಂದು ಕರೆಯಲಾಗುವುದು.

### 2. ವ್ಯಾವಹಾರಿಕ ಪತ್ರ

ಬೇರೆ ಬೇರೆ ಕಾರಣಗಳಿಗಾಗಿ ವ್ಯಕ್ತಿಯು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗೆ ಬರೆಯುವ ಪತ್ರಗಳನ್ನು ವ್ಯಾವಹಾರಿಕ ಪತ್ರಗಳೆಂದು ಕರೆಯುವರು.

ಪತ್ರದ ಅಂಗಗಳು/ಪತ್ರದಲ್ಲಿರಬೇಕಾದ ಅಂಶಗಳು :

### 1. ಪತ್ರದ ಪ್ರಾರಂಭ (ವಿಳಾಸ ಮತ್ತು ದಿನಾಂಕ)

ಪತ್ರವನ್ನು ಬರೆಯುವವರು, ಸ್ಥಳ ಮತ್ತು ದಿನಾಂಕವನ್ನು ಪತ್ರದ ಬಲಭಾಗದ ಮೇಲಿನ ಮೂಲೆಯಲ್ಲಿ ಬರೆಯಬೇಕು. ಎಡಬದಿಯ ಮೇಲ್ಭಾಗದಲ್ಲಿ ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸವನ್ನು ಕ್ರಮವಾಗಿ ಬರೆಯಬೇಕು. ನಂತರ ಯಾರಿಗೆ ಪತ್ರ ಬರೆಯುತ್ತಿದ್ದೇವೆಯೋ ಅವರನ್ನು ಗೌರವಯುತವಾಗಿ ಸಂಬೋಧಿಸಿ, ನಂತರ ವಿಷಯವನ್ನು ವಿವರಿಸಬೇಕು.



11th_Kannada_Reader_Final_16-07-2018.indd 223 16-07-2018 18:43:23

## 2. ಆರಂಭದ ಸಂಬೋಧನೆ

ಪತ್ರವನ್ನು ಆರಂಭಿಸುವ ಮುನ್ನ ನಾವು ಯಾರಿಗೆ ಪತ್ರ ಬರೆಯುತ್ತೇವೆಯೋ ಅವರನ್ನು ಉಚಿತ ಪದಗಳಿಂದ ಸಂಬೋಧಿಸಬೇಕು. ಯಾರನ್ನು ಹೇಗೆ ಸಂಬೋಧಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ :

ತಂದೆಯನ್ನು – ತೀರ್ಥರೂಪ;

ತಾಯಿಯನ್ನು – ಮಾತೃಶ್ರೀ;

ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅಣ್ಣ ಇತ್ಯಾದಿ ಹಿರಿಯ ಪುರುಷರನ್ನು–ತೀರ್ಥರೂಪು ಸಮಾನರಾದ(ತಂದೆಯ ಸಮಾನರಾದ ಎಂದು ಅರ್ಥ);

ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ ಇತ್ಯಾದಿ ಹಿರಿಯ ಮಹಿಳೆಯನ್ನು–ಮಾತೃಶ್ರೀ ಸಮಾನರಾದ(ತಾಯಿಯ ಸಮಾನರಾದ ಎಂದು ಅರ್ಥ);

ತಂಗಿ ಮತ್ತು ಇತರ ಕಿರಿಯ ಸ್ತ್ರೀಯರನ್ನು – ಚಿರಂಜೀವಿ ಸೌಭಾಗ್ಯವತಿ;

ತಮ್ಮ ಮತ್ತು ಇತರ ಕಿರಿಯ ಪುರುಷರನ್ನು – ಚಿರಂಜೀವಿ;

ಗೆಳೆಯ/ಗೆಳತಿಯರನ್ನು – ಪ್ರೀತಿಯ, ನಲ್ಮೆಯ, ಆತ್ಮೀಯ, ಒಲವಿನ, ನಚ್ಚಿನ... ಇತ್ಯಾದಿ;

ಅಧಿಕಾರಿಗಳನ್ನು – ಮಾನ್ಯರೇ ಅಥವಾ ಸ್ವಾಮೀ –

ಹೀಗೆ ಪತ್ರದ ಆರಂಭದಲ್ಲಿ ಯಾರಿಗೆ ಬರೆಯುತ್ತಿದ್ದೇವೆಯೋ ಅವರನ್ನು ಸಂಬೋಧಿಸಬೇಕು. ಗೌರವ ಸೂಚಕವಾಗಿ ಹಿರಿಯರಿಗಾದಲ್ಲಿ 'ಬೇಡುವ ಆಶೀರ್ವಾದಗಳು' ಎಂದೂ; ಕಿರಿಯರಿಗಾದಲ್ಲಿ, 'ಆಶೀರ್ವಾದಗಳು' ಎಂದೂ; ಸ್ನೇಹಿತರಿಗೆ, ಅಧಿಕಾರಿಗಳಿಗೆ–'ವಂದನೆಗಳು' ಎಂದೂ ಬರೆಯಬೇಕು.

## 3. ಪತ್ರದ ವಿಷಯ

ಪತ್ರದ ಅತ್ಯಂತ ಮಹತ್ವದ ಭಾಗವೆಂದರೆ ಪತ್ರದ ಆಂತರಿಕ ವಿಷಯವಾಗಿದೆ. ವಿಷಯಕ್ಕೆ ತಕ್ಕಂತೆ ವಾಕ್ಯಗಳಿರಬೇಕು. ಸ್ಪಷ್ಟವಾಗಿರಬೇಕು. ಪತ್ರ ಲೇಖನದ ಉದ್ದೇಶವನ್ನು ನಿರೂಪಣೆ ಮಾಡಬೇಕು. ಬಳಿಕ ಒಕ್ಕಣೆಯನ್ನು ಸ್ಪಷ್ಟವಾಗಿ ಸಮಾಪ್ತಿಗೊಳಿಸಬೇಕು.

## 4. ಮುಕ್ತಾಯ

ತಂದೆ, ತಾಯಿ, ಹಿರಿಯರಿಗೆ– 'ಇತಿ ಸಾಷ್ಟಾಂಗ ನಮಸ್ಕಾರಗಳು', 'ಇತಿ ಪ್ರಣಾಮಗಳು' ಎಂದೂ; ಅಧಿಕಾ–ರಿಗಳಿಗೆ – 'ಇತಿ ತಮ್ಮ ವಿಶ್ವಾಸಿ' ಎಂದೂ ಗೌರವಪೂರ್ವಕ/ವಂದನಾಪೂರ್ವಕ ಪದಗಳನ್ನು ಬಳಸಿ ಪತ್ರವನ್ನು ಮುಕ್ತಾಯ ಮಾಡಬೇಕು.

## 5. ಸಹಿ

ಗೌರವಪೂರ್ವಕ/ವಂದನಾಪೂರ್ವಕ ಮುಕ್ತಾಯದ ನಂತರ ಅದರ ಕೆಳಗೆ ಬಲಭಾಗದಲ್ಲಿ ಸಹಿ ಹಾಕಬೇಕು. ಸಹಿಯ ಕೆಳಗೆ ಹೆಸರನ್ನು ಸ್ಪಷ್ಟವಾಗಿ ಬರೆಯಬೇಕು.

ಹೀಗೆ ಪತ್ರವನ್ನು ಕ್ರಮಬದ್ಧವಾಗಿ ಬರೆಯಬೇಕು. ಕೆಲವು ಮಾದರಿ ಪತ್ರಗಳನ್ನು ಇನ್ನು ಮುಂದೆ ನೋಡೋಣ.



11th_Kannada_Reader_Final_16-07-2018.indd 224 16-07-2018 18:43:23

## ವೈಯಕ್ತಿಕ ಪತ್ರದ ಮಾದರಿ

ಶಾಲಾ ವಾರ್ಷಿಕೋತ್ಸವ ನಡೆದ ಬಗ್ಗೆ ಗೆಳೆಯನಿಗೊಂದು ಪತ್ರ :

ದಿನಾಂಕ : 01.06.2018

ತಾಳವಾಡಿ

**ಪ್ರೀತಿಯ ಗೆಳೆಯ ಸುಧಾಕರನಿಗೆ,**

ನಿನ್ನ ಗೆಳೆಯನ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನಿನ್ನ ಕ್ಷೇಮ ಸಮಾಚಾರಕ್ಕೆ ಪತ್ರ ಬರೆ.

ಕಾಗದ ಬರೆದ ವಿಷಯವೇನೆಂದರೆ ಕಳೆದ ತಿಂಗಳು ನಿನಗೆ ಪತ್ರ ಬರೆದಿದ್ದಾಗ ನಿನಗೆ ನಮ್ಮ ಶಾಲಾ ವಾರ್ಷಿಕೋತ್ಸವ ನಡೆಯುವ ಬಗ್ಗೆ ತಿಳಿಸಿದ್ದೆ. ಈಗ ಅದು ನಡೆದ ಬಗ್ಗೆ ನಿನಗೆ ತಿಳಿಸೋಣವೆಂದು ಈ ಪತ್ರ ಬರೆಯುತ್ತಿದ್ದೇನೆ. ದಿನಾಂಕ 20.01.2018ರಂದು ನಮ್ಮ ಶಾಲೆಯ ವಾರ್ಷಿಕೋತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ಮಾನ್ಯ ಶಿಕ್ಷಣ ಸಚಿವರು ಮುಖ್ಯ ಅತಿಥಿಗಳಾಗಿ ನಮ್ಮ ಕಾಲೇಜಿಗೆ ಆಗಮಿಸಿದ್ದರು. ಅವರೊಂದಿಗೆ ಹೆಸರಾಂತ ಕವಿಗಳಾದ ಶ್ರೀ.ಶಿವಲಿಂಗಯ್ಯನವರೂ ಮತ್ತೊಬ್ಬ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮ ಆರಂಭವಾದ ಕೂಡಲೇ ಕುಮಾರಿ ಕೌಶಲ್ಯರವರು ತಮ್ಮ ಮಧುರ ಕಂಠದಿಂದ ಸೊಗಸಾಗಿ ಪ್ರಾರ್ಥನೆಯನ್ನು ಹಾಡಿದರು. ನಂತರ ಮುಖ್ಯೋಪಾಧ್ಯಾಯರು ಸ್ವಾಗತ ಭಾಷಣದೊಂದಿಗೆ ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಹಿಂದಿನ ವರ್ಷ 12ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ನಮ್ಮ ಶಾಲೆಯು ಸಾಧಿಸಿರುವ ಪ್ರಗತಿಯ ಬಗ್ಗೆ ಬಹಳ ಕೊಂಡಾಡಿದರು. ವಾರ್ಷಿಕ ಸಾಹಿತ್ಯ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅತಿಥಿಗಳು ಬಹುಮಾನವನ್ನು ವಿತರಿಸಿದರು. ಆಶುಭಾಷಣ ಸ್ಪರ್ಧೆಯಲ್ಲಿ ನನಗೆ ಮೊದಲ ಬಹುಮಾನ ದೊರಕಿತು. ನಮ್ಮ ಶಾಲೆಯ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಮೂಹಿಕ ಗಾಯನ, ನೃತ್ಯ, ಕಿರುನಾಟಕ ಮುಂತಾದ ವಿವಿಧ ಮನರಂಜನಾ ಕಾರ್ಯಕ್ರಮಗಳು ಅದ್ಭುತವಾಗಿ ಮೂಡಿ ಬಂದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಹಿರಿಯ ಉಪಾಧ್ಯಾಯರು ವಂದನಾರ್ಪಣೆಯನ್ನು ಸಲ್ಲಿಸಿದರು. ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮ ಮುಕ್ತಾಯವಾಯಿತು. ಒಟ್ಟಿನಲ್ಲಿ ನಮ್ಮ ಶಾಲೆಯ ವಾರ್ಷಿಕೋತ್ಸವ ನಾನು ಮರೆಯಲಾಗದ ಸಮಾರಂಭವಾಗಿದ್ದು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುವಂತಿತ್ತು. ನೀನೂ ನಿಮ್ಮ ಶಾಲೆಯ ವಾರ್ಷಿಕೋತ್ಸವವನ್ನು ಹೇಗೆ ಆಚರಿಸಿದಿರಿ ಎಂಬುದನ್ನು ಪತ್ರದಲ್ಲಿ ಬರೆದು ತಿಳಿಸು.

ಮನೆಯಲ್ಲಿ ಎಲ್ಲರೂ ಕ್ಷೇಮವೇ? ನಿನ್ನ ತಂದೆತಾಯಿಗಳಿಗೆ ನನ್ನ ನಮಸ್ಕಾರಗಳನ್ನು ತಿಳಿಸು.

ವಂದನೆಗಳೊಂದಿಗೆ

ಇಂತಿ ನಿನ್ನ ಗೆಳೆಯ

ಭಾನುಪ್ರಕಾಶ್



11th_Kannada_Reader_Final_16-07-2018.indd 225 16-07-2018 18:43:23

ಇಂದ,

**ಭಾನುಪ್ರಕಾಶ್**

11ನೇ ತರಗತಿ, ಎ ವಿಭಾಗ

ಸರ್ಕಾರಿ ಹಿರಿಯ ಪ್ರೌಢಶಾಲೆ

ತಾಳವಾಡಿ, ತಮಿಳುನಾಡು.

ಗೆ,

**ಸುಧಾಕರ**

ಹನ್ನೊಂದನೇ ತರಗತಿ, ಬಿ ವಿಭಾಗ

ಸರ್ಕಾರಿ ಹಿರಿಯ ಪ್ರೌಢಶಾಲೆ

ಹೊಸೂರು.

* * *

## ವ್ಯಾವಹಾರಿಕ ಪತ್ರದ ಮಾದರಿ

ಕುಡಿಯುವ ನೀರಿನ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ಒಂದು ಮನವಿ ಪತ್ರ :

**ಇಂದ**

ಶ್ರೀ.ಸುರೇಶ್

ಗುಮಟಾಪುರಂ

ತಾಳವಾಡಿ ತಾಲೂಕು

ತಮಿಳುನಾಡು.

**ಇವರಿಗೆ**

ಅಧ್ಯಕ್ಷರು

ತಾಳವಾಡಿ ಪಂಚಾಯಿತಿ

ತಾಳವಾಡಿ.

**ಮಾನ್ಯರೇ,**

**ವಿಷಯ** : ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಮಾಡಿಕೊಡುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ತಾಳವಾಡಿ ಪಂಚಾಯಿತಿಗೆ ಸೇರುವ ಗುಮಟಾಪುರ ಗ್ರಾಮದಲ್ಲಿ ಸುಮಾರು 2000ಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದಾರೆ. ಇಲ್ಲಿ ದಿನನಿತ್ಯದ ಬಳಕೆಗೆ ಅವಶ್ಯಕವಾದ ನೀರು ಸರಬರಾಜು ಸರಿಯಾಗಿ ಆಗದಿರುವ ಕಾರಣ ನಮ್ಮ ಗ್ರಾಮದ ನಿವಾಸಿಗಳಿಗೆಲ್ಲಾ ಬಹಳ ತೊಂದರೆಯಾಗಿದೆ. ಇದು ಪ್ರತಿನಿತ್ಯದ ಸಮಸ್ಯೆಯಾಗಿದ್ದು, ನೀರಿಗಾಗಿ ಪಡುತ್ತಿರುವ ಬವಣೆ ಹೇಳತೀರದು. ಆದ್ದರಿಂದ ತಾವು ದಯವಿಟ್ಟು ಈ ಮನವಿ ಪತ್ರವನ್ನು ಪರಿಗಣಿಸಿ, ಆದಷ್ಟು ಬೇಗ ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಮಾಡಿಕೊಡಬೇಕೆಂದು ನಮ್ಮ ಗ್ರಾಮದ ನಿವಾಸಿಗಳ ಪರವಾಗಿ ತಮ್ಮಲ್ಲಿ ಮತ್ತೊಮ್ಮೆ ವಿಜ್ಞಾಪಿಸಿಕೊಳ್ಳುತ್ತೇನೆ.



11th_Kannada_Reader_Final_16-07-2018.indd 226 16-07-2018 18:43:23

**ವಂದನೆಗಳೊಂದಿಗೆ,**

ದಿನಾಂಕ : 25.03.2018 ಇಂತಿ ತಮ್ಮ ವಿಶ್ವಾಸಿ

ಸ್ಥಳ : ಗುಮಟಾಪುರಂ ಸುರೇಶ್

* * *

## ರಜೆ ಕೋರಿ ತರಗತಿಯ ಅಧ್ಯಾಪಕರಿಗೊಂದು ಪತ್ರ

ದಿನಾಂಕ : 04.06.2018

ಹೊಸೂರು

**ಇಂದ,**

ಮಾನ್ಯ.

11ನೇ ತರಗತಿ, ಸಿ ವಿಭಾಗ

ಸರ್ಕಾರಿ ಹಿರಿಯ ಪ್ರೌಢಶಾಲೆ

ಹೊಸೂರು, ತಮಿಳುನಾಡು.

**ಗೆ,**

ತರಗತಿಯ ಅಧ್ಯಾಪಕರು

11ನೇ ತರಗತಿ, ಸಿ ವಿಭಾಗ

ಸರ್ಕಾರಿ ಹಿರಿಯ ಪ್ರೌಢಶಾಲೆ

ಹೊಸೂರು, ತಮಿಳುನಾಡು.

**ಮಾನ್ಯರೇ,**

11ನೇ ತರಗತಿಯ ಸಿ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಮಾನ್ಯ ಎಂಬ ನಾನು, ಈ ಪತ್ರದ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, 06.06.2018ರಂದು ನನ್ನ ಅಕ್ಕನ ವಿವಾಹ ನಿಶ್ಚಿತಾರ್ಥ ಕಾರ್ಯಕ್ರಮವಿರುವ ಕಾರಣದಿಂದ ನಾನು ಶಾಲೆಗೆ ಬರಲಾಗುವುದಿಲ್ಲ.

ಆದುದರಿಂದ ತಾವು ದಯವಿಟ್ಟು ನನಗೆ ಒಂದು ದಿನದ ರಜೆಯನ್ನು ನೀಡಬೇಕೆಂದು ತಮ್ಮಲ್ಲಿ ಸವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

**ವಂದನೆಗಳೊಂದಿಗೆ**

ಇಂತಿ ತಮ್ಮ ವಿಧೇಯ ವಿದ್ಯಾರ್ಥಿನಿ

ಮಾನ್ಯ

ಪೋಷಕರ ಸಹಿ :

* * *



11th_Kannada_Reader_Final_16-07-2018.indd 227 16-07-2018 18:43:23

# ಪ್ರಬಂಧ ರಚನೆ

ಆಧುನಿಕ ಸಾಹಿತ್ಯದ ಒಂದು ಪ್ರಕಾರವಾಗಿರುವ ಪ್ರಬಂಧವು ಭಾಷೆಯ ರಚನೆ ಮತ್ತು ಪ್ರಯೋಗ ಸಾಮರ್ಥ್ಯ ಬೆಳೆಸುವ ಬಹುಮುಖ್ಯ ಸಾಧನವಾಗಿದೆ. ಪ್ರಬಂಧಗಳ ವಾಚನ ಮತ್ತು ಬರಹಗಳ ಮೂಲಕ ಭಾಷೆ, ವಿಷಯಜ್ಞಾನ ಮತ್ತು ಸಾಹಿತ್ಯಾಭಿರುಚಿ ಬೆಳೆಸಲು ಸಾಧ್ಯ. ಪ್ರಬಂಧಗಳ ರಚನೆ ಮತ್ತು ಓದುವಿಕೆಯಿಂದ ಭಾಷಾ ಸಾಮರ್ಥ್ಯ ಮತ್ತು ವಿಷಯ ಜ್ಞಾನ ಏಕಕಾಲದಲ್ಲಿ ಲಭ್ಯವಾಗುತ್ತದೆ.

## ಪ್ರಬಂಧದ ಅರ್ಥ ಮತ್ತು ಸ್ವರೂಪ

ಒಂದು ವಿಷಯ ಅಥವಾ ಆಲೋಚನೆಯ ಬಗ್ಗೆ ಸುಸಂಬದ್ಧ, ತರ್ಕಬದ್ಧ ವಾಕ್ಯಗಳು ಮತ್ತು ವಾಕ್ಯವೃಂದಗಳಲ್ಲಿ ಕ್ರಮಬದ್ಧವಾಗಿ ಮತ್ತು ಅರ್ಥಪೂರ್ಣವಾಗಿ ಬರೆದಿರುವ ಪಠ್ಯವನ್ನು ಪ್ರಬಂಧ ಎನ್ನುತ್ತಾರೆ.

ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿನ ಪ್ರಕಾರ, 'ಯಾವುದೇ ಒಂದು ವಿಶಿಷ್ಟ ವಸ್ತುವಿನ ಮೇಲಿನ ಸಾಧಾರಣ ಅಳತೆಯ ಬರವಣಿಗೆಯೇ ಪ್ರಬಂಧ'. ಒಂದು ವಸ್ತು ವಿಷಯದ ಬಗೆಗೆ ಸರಳವಾಗಿ ಸುಸಂಬದ್ಧತೆ ಮತ್ತು ಅರ್ಥಬದ್ಧವಾಗಿ ಬರೆದಿರುವ ಪಠ್ಯವೇ ಪ್ರಬಂಧ.

ಪ್ರಬಂಧವು ಗದ್ಯ ಸಾಹಿತ್ಯವಾಗಿದ್ದು, ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ವಿವರಣಾತ್ಮಕವಾಗಿ, ನಿರೂಪಣಾತ್ಮಕವಾಗಿ ಕಲ್ಪನಾತ್ಮಕವಾಗಿ ಅಥವಾ ಚಿಂತನಾತ್ಮಕವಾಗಿ, ಕ್ರಮಬದ್ಧವಾಗಿ, ಸುಸಂಬದ್ಧವಾಗಿ ಬರೆದಿರುವ ಬರವಣಿಗೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ಮಾಹಿತಿಯನ್ನು ಸಂಗ್ರಹಿಸಿ ಅಥವಾ ತನ್ನ ಅನುಭವದಿಂದ ಕಲ್ಪನೆಯಿಂದ ವಿಷಯವನ್ನು ರೂಪಿಸಿ ಸಂಘಟಿಸಿ ಸುಸಂಬದ್ಧವಾಗಿ, ಶುದ್ಧ ಭಾಷೆಯಲ್ಲಿ ಬರೆಯಲಾಗಿರುತ್ತದೆ. ಪ್ರಬಂಧದಲ್ಲಿ ಒಂದು ನಿರ್ದಿಷ್ಟ ವಿಷಯ, ಆ ವಿಷಯದ ಕ್ರಮಬದ್ಧ ಜೋಡಣೆ ಇರುತ್ತದೆ. ವಿಷಯವೊಂದರ ಬಗ್ಗೆ ಅರ್ಥ ಮತ್ತು ಸುಸಂಬದ್ಧ ವಾಕ್ಯಗಳು. ವಾಕ್ಯ ವೃಂದಗಳನ್ನು ಒಂದು ಚೌಕಟ್ಟಿನಲ್ಲಿ ಬರೆಯಲಾಗುತ್ತದೆ. ಓದುಗರಿಗೆ ವಿಷಯದ ಸಮಗ್ರ ಚಿತ್ರಣವನ್ನು ಆಕರ್ಷಕವಾಗಿ ಸುಲಭವಾಗಿ ನೇರವಾಗಿ ಸಂವಹಿಸಲು ಅನುಕೂಲವಾಗುವಂತೆ ಪ್ರಬಂಧ ರಚಿಸಲಾಗುತ್ತದೆ.

## ಪ್ರಬಂಧ ರಚನೆ ಮತ್ತು ಅಧ್ಯಯನದ ಪ್ರಾಮುಖ್ಯತೆ

ಭಾಷಾ ಕೌಶಲಗಳ ರಚನೆ ಮತ್ತು ಪ್ರಯೋಗ ಸಾಮರ್ಥ್ಯ ಬೆಳೆಸಿಕೊಳ್ಳಲು ಪ್ರಬಂಧ ರಚನೆಯು ಸರಳ ಮತ್ತು ಉಪಯುಕ್ತ ಸಾಧನ. ಭಾಷೆ, ವಿಷಯ ಸಾಹಿತ್ಯ ಹಾಗೂ ಒಟ್ಟಾರೆ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವ ಪ್ರಬಂಧ ಸಾಹಿತ್ಯವು ಒಂದು ಉತ್ತಮ ಸಾಧನ.

1. ಸುಸಂಬದ್ಧ ವಾಕ್ಯಗಳು, ವಾಕ್ಯ ವೃಂದಗಳ ರಚನೆಯ ಸಾಮರ್ಥ್ಯ ಗಳಿಸಿಕೊಳ್ಳಲು
2. ಸ್ವಯಂ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಗಳಿಸಿಕೊಳ್ಳಲು
3. ಓದುಗಾರಿಕೆಯ ಹವ್ಯಾಸ ಮತ್ತು ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳಲು
4. ಒಂದು ವಿಷಯದ ಬಗ್ಗೆ ಸ್ವತಂತ್ರವಾಗಿ ಯೋಚನೆ ಮಾಡಲು
5. ವಿಷಯವನ್ನು ಒಂದು ಚೌಕಟ್ಟಿನಲ್ಲಿ ಅಡಕ ಮಾಡಿ ಬರೆಯುವ ಸಾಮರ್ಥ್ಯ ಗಳಿಸಲು.
6. ತರ್ಕಬದ್ಧ ಬರವಣಿಗೆಯ ಕೌಶಲಗಳಲ್ಲಿ ಸಾಮರ್ಥ್ಯ ಗಳಿಸಲು.



11th_Kannada_Reader_Final_16-07-2018.indd 228 16-07-2018 18:43:23

7. ಸೃಜನ ಶೀಲ ಚಿಂತನೆ ಹಾಗೂ ಅಭಿವ್ಯಕ್ತಿ ಕೌಶಲ ಬೆಳೆಸಿಕೊಳ್ಳಲು

8. ವಿಷಯ ಗ್ರಹಿಕೆ ಮತ್ತು ಜ್ಞಾನಾರ್ಜನೆ ಬೆಳೆಸಿಕೊಳ್ಳಲು

9. ಮಾನವೀಯ ಮೌಲ್ಯಗಳೊಂದಿಗೆ ವ್ಯಕ್ತಿತ್ವ ವಿಕಾಸಕ್ಕೆ

10. ವಿಷಯ ಸಂಗ್ರಹ ಮತ್ತು ವಿವರಣಾತ್ಮಕ ಕೌಶಲ ಬೆಳೆಸಿಕೊಳ್ಳಲು

– ಪ್ರಬಂಧ ರಚನೆ ಸಹಕಾರಿಯಾಗಿರುತ್ತದೆ.

ಪ್ರಬಂಧದ ಪ್ರಕಾರಗಳು

1. ನಿರೂಪಣಾತ್ಮಕ ಪ್ರಬಂಧ

2. ವಿವರಣಾತ್ಮಕ ಪ್ರಬಂಧ

3. ಚಿಂತನ ಪ್ರಬಂಧ

ಅ. ಪ್ರತಿಪಾದನಾತ್ಮಕ

ಆ. ವಾದಾತ್ಮಕ ಮತ್ತು

ಇ. ಕಲ್ಪನಾತ್ಮಕ ಪ್ರಬಂಧ ಇತ್ಯಾದಿ.

ಪ್ರಬಂಧಗಳು ಬಹಳ ಸ್ವಾರಸ್ಯವಾಗಿರಬೇಕು. ಇಲ್ಲದಿದ್ದರೆ ಅವು ಓದುಗರಿಗೆ ಬೇಸರ ತರುತ್ತವೆ. ಪ್ರಬಂಧದ ವಸ್ತು ಯಾವುದೇ ಆಗಬಹುದು. ವಿಷಯ ನಿರೂಪಣೆ, ಭಾಷೆಯ ನಿಯಂತ್ರಣ ಇಷ್ಟಿದ್ದರೆ ಸಾಕು. ಒಳ್ಳೆಯ ಪ್ರಬಂಧ ಸೃಷ್ಟಿಯಾಗುತ್ತದೆ.

ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ, ಕ್ರೀಡೆ, ಪ್ರಚಲಿತ ವಿದ್ಯಮಾನಗಳು ಹೀಗೆ ಯಾವುದೇ ವಿಷಯದ ಬಗ್ಗೆಯಾದರೂ ಪ್ರಬಂಧ ಬರೆಯುವಂತೆ ಕೇಳಬಹುದು. ಉದಾಹರಣೆಗೆ, ಕೆಳಗಿನ ವಿಷಯಗಳನ್ನು ಗಮನಿಸಿ:

1.ನನ್ನ ಮೆಚ್ಚಿನ ಕವಿ, 2.ವೃತ್ತಪತ್ರಿಕೆಗಳು, 3.ಪರಿಸರ ಮಾಲಿನ್ಯ, 4.ಸಿನಿಮಾ, 5.ವಾಯುಮಾಲಿನ್ಯ, 6.ಮೈಸೂರು ದಸರಾ, 7.ನದಿಗಳ ರಾಷ್ಟ್ರೀಕರಣ ಇತ್ಯಾದಿ.

ಹೀಗೆ ಜಗತ್ತಿನ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಯಾವುದೇ ವಿಷಯವನ್ನಾದರೂ ನೀಡಿ ಅದರ ಬಗ್ಗೆ ಪ್ರಬಂಧ ಬರೆಯಲು ಕೇಳಬಹುದು. ಯಾವ ವಿಷಯದ ಬಗ್ಗೆ ಕೇಳಿದರೂ ಪ್ರಬಂಧ ಬರೆಯಬೇಕಾದರೆ ಆ ವಿಷಯದ ಬಗ್ಗೆ ತಿಳುವಳಿಕೆ ಇರಬೇಕು. ಅದಕ್ಕಾಗಿ ಪ್ರತಿನಿತ್ಯ ದಿನಪತ್ರಿಕೆಗಳನ್ನು ಓದಿ ಅಂದಂದಿನ ವಿದ್ಯಮಾನಗಳನ್ನು ಅರಿತುಕೊಳ್ಳಬೇಕು. ಲೋಕಜ್ಞಾನವನ್ನು ವಿಸ್ತರಿಸುವಂತಹ ಹಲವಾರು ಪುಸ್ತಕಗಳನ್ನು ಆಗಾಗ ಓದುತ್ತಿರಬೇಕು.

ಸಾಮಾನ್ಯವಾಗಿ ಪ್ರಬಂಧ ಬರೆಯುವಾಗ ಮುಖ್ಯವಾಗಿ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದು: ಅದನ್ನು ಪ್ರಾರಂಭಿಸುವ ವಿಧಾನ ಅಥವಾ ಪೀಠಿಕೆ; ಎರಡು: ವಿಷಯದ ವಿವರಣೆ; ಮೂರು: ಮುಕ್ತಾಯ.

ಯಾವುದೇ ಪ್ರಬಂಧವನ್ನಾದರೂ ಪ್ರಾರಂಭಿಸುವುದಕ್ಕೆ ಮುನ್ನ ಆ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ವ ಪೀಠಿಕೆಯನ್ನು ಬರೆಯಬೇಕು. ಇದು ತುಂಬ ಮುಖ್ಯವಾದ ಅಂಶ. ವಿಷಯ ವಿವರಣೆಯಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ನಿರೂಪಿಸಬೇಕು. ಅಗತ್ಯವಿದ್ದಲ್ಲಿ ಕೊಟ್ಟಿರುವ ವಿಷಯದ ಸಾಧಕ–ಬಾಧಕಗಳನ್ನು



11th_Kannada_Reader_Final_16-07-2018.indd 229 16-07-2018 18:43:23

ಚರ್ಚಿಸಬೇಕು. ವಿಷಯವನ್ನು ವೈಚಾರಿಕವಾಗಿ ವಿಶ್ಲೇಷಿಸಬೇಕಾದ್ದು ಅಗತ್ಯ. ಪ್ರಬಂಧದ ಕಡೆಯಲ್ಲಿ ಮೇಲೆ ಹೇಳಿದ ವಿಷಯಗಳೆಲ್ಲವನ್ನೂ ಕ್ರೋಡೀಕರಿಸಿ ಮುಕ್ತಾಯದ ಮಾತುಗಳನ್ನು ಹೇಳಬೇಕು. ಇಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಬೇಕು.

ಪ್ರಬಂಧವು ಸರಳವಾದ ಗ್ರಾಂಥಿಕ ಭಾಷೆಯಲ್ಲಿರಬೇಕು. ಪದಗಳ ರಚನೆ ಹಾಗೂ ಭಾಷಾಪ್ರಯೋಗದ ಕಡೆ ಗಮನವಿರಬೇಕು. ಅಂದವಾಗಿ ತಪ್ಪಿಲ್ಲದಂತೆ ಬರೆಯಬೇಕಾದ್ದು ಮುಖ್ಯ.

## ಮಾದರಿ ಪ್ರಬಂಧ

# ಬಾಲಕಾರ್ಮಿಕರು

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಒಂದು ದೇಶದ ಭವಿಷ್ಯವು ಆ ದೇಶವು ಅಲ್ಲಿನ ಮಕ್ಕಳ ಪ್ರಗತಿಯ ಮೇಲೆ ವಹಿಸುವ ಕಾಳಜಿಯನ್ನು ಅವಲಂಬಿಸಿರುತ್ತದೆ. ಎಲ್ಲಾ ಮಕ್ಕಳು ವಿಶ್ವಮಾನವರಾಗಿಯೇ ಹುಟ್ಟುತ್ತಾರೆ. ಆದರೆ ನಮ್ಮ ಸಮಾಜವು ಮಕ್ಕಳನ್ನು ಬೆಳೆಸುವ ರೀತಿಯಿಂದ ಮಕ್ಕಳು ತೊಂದರೆಗೆ ಸಿಲುಕುತ್ತಾರೆ. ಎಲ್ಲರಂತೆ ಬದುಕಿ ಬಾಳುವ ಆಸೆ, ಹಕ್ಕುಗಳು ಮತ್ತು ಅವಕಾಶಗಳು ಮಕ್ಕಳಿಗೆ ಇರಬೇಕು. ಮಕ್ಕಳು ಯಾವುದೇ ದೇಶ, ಭಾಷೆ, ಮತ, ಧರ್ಮ, ಜಾತಿಗೆ ಸೇರಿದ್ದರೂ ಸಹ ಪ್ರೀತಿ, ಅಕ್ಕರೆ, ಆರೋಗ್ಯ, ಶಿಕ್ಷಣ ಪಡೆದುಕೊಳ್ಳುವುದು ಮಕ್ಕಳ ಜನ್ಮಸಿದ್ಧ ಹಕ್ಕು. ಈ ಹಕ್ಕುಗಳನ್ನು ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಮಕ್ಕಳ ಸರ್ವತೋಮುಖ ವಿಕಾಸಕ್ಕೆ ನೆರವಾಗುವುದು ತಾಯಿ ತಂದೆಯರು, ಉಪಾಧ್ಯಾಯರು, ಸಮಾಜ ಮತ್ತು ಸರ್ಕಾರಗಳ ಕರ್ತವ್ಯ. ಆದರೆ ಜಗತ್ತಿನ ಕೋಟ್ಯಾನುಕೋಟಿ ಮಕ್ಕಳಿಗೆ ಯಾವ ಅವಕಾಶಗಳೂ ದೊರೆಯುತ್ತಿಲ್ಲ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಈ ಮಕ್ಕಳ ಕನಸು, ಕಲ್ಪನೆಗಳು ಭಗ್ನಗೊಂಡಿವೆ. ಕುಣಿದು ಕುಪ್ಪಳಿಸುತ್ತಾ ವಿಕಾಸವಾಗಬೇಕಾಗಿದ್ದ ಸಮಯದಲ್ಲಿ ತುತ್ತು ಅನ್ನಕ್ಕಾಗಿ ಹಗಲಿರುಳು ದುಡಿಯುತ್ತಿರುವ ಮಕ್ಕಳಿದ್ದಾರೆ. ಹಾಲುಗಲ್ಲದ ಈ ಹಸುಮಕ್ಕಳು ದುಡಿಮೆಯ ಜೊತೆಗೆ ಶೋಷಣೆಗೆ, ಒಳಗಾಗಿರುವುದು ಅತ್ಯಂತ ಶೋಚನೀಯ. ಈ ರೀತಿ ಸಮಾಜದ ಅಮಾನವೀಯ ಧೋರಣೆಗಳಿಂದ ಹತಭಾಗ್ಯರಾಗಿ ಭವಿಷ್ಯವನ್ನು ಕಳೆದುಕೊಳ್ಳುತ್ತಿರುವ ಜಗತ್ತಿನ ಎಲ್ಲಾ ಮಕ್ಕಳಿಗೆ ಸೂಕ್ತ ಪ್ರೀತಿ, ವಿಶ್ವಾಸ, ಆರೋಗ್ಯ, ಶಿಕ್ಷಣ ಒದಗಿಸಿ ಕೊಡುವುದು ಎಲ್ಲರ ಜವಾಬ್ದಾರಿ.

### ಬಾಲ ಕಾರ್ಮಿಕರು ಯಾರು ?

14 ವರ್ಷ ವಯೋಮಾನದ ಒಳಗೆ ಬೆಳೆಯುತ್ತಿರುವ ಯಾವುದೇ ಮಗು ಮನೆಯಲ್ಲಿ ಅಥವಾ ಶಾಲೆಯಲ್ಲಿರದೆ, ಪ್ರೀತಿ ವಿಶ್ವಾಸ, ಆರೈಕೆಗಳಿಲ್ಲದೆ ಓದು ಬರಹ ಆಟ ಹಾಗು ಮನರಂಜನೆಗಳಿಲ್ಲದೆ ಯಾವುದೇ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಕ್ಕಳೇ ಬಾಲಕಾರ್ಮಿಕರು. ಈ ಗುಂಪಿನ ಮಕ್ಕಳು ತಮ್ಮ ದುಡಿಮೆಗೆ ಪ್ರತಿಫಲ ಪಡೆಯುತ್ತಿರಲಿ ಅಥವಾ ಪಡೆಯದಿರಲಿ ಅವರೆಲ್ಲಾ ಬಾಲಕಾರ್ಮಿಕರು.

### ಬಾಲ ಕಾರ್ಮಿಕರು ಹುಟ್ಟಿ ಬಂದ ದಾರಿ

ಒಂದು ಕಾಲದಲ್ಲಿ ಮಕ್ಕಳಿಗೆ ಔಪಚಾರಿಕ ಶಿಕ್ಷಣ ವ್ಯವಸ್ಥೆ ಇರಲಿಲ್ಲ. ಮಕ್ಕಳು ಚಿಕ್ಕಂದಿನಿಂದಲೇ ತಮ್ಮ ಕುಟುಂಬಗಳ ಕುಲಕಸುಬುಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಕುಟುಂಬಗಳಲ್ಲಿ ಪ್ರೀತಿ ಅಕ್ಕರೆ ಆರೈಕೆಗಳು ಮಕ್ಕಳಿಗೆ ದೊರೆಯುತ್ತಿದ್ದರೂ ಸಹ ಶಿಕ್ಷಣದ ಅವಕಾಶಗಳು ಇರಲಿಲ್ಲ. ಮಕ್ಕಳು ಸೀಮಿತ ವಲಯದಲ್ಲಿ ಒಡನಾಟ ಮಾಡುತ್ತಿದ್ದು ಕುಲಕಸುಬುಗಳನ್ನು ಮಾತ್ರ ಕಲಿಯಲು ಸಾಧ್ಯವಿದ್ದ ಆ ಸಂದರ್ಭಗಳಲ್ಲಿ ಅವರು ಸೃಜನಶೀಲರಾಗಿ ಬೆಳೆಯಲು ಹೊರ



11th_Kannada_Reader_Final_16-07-2018.indd 230 16-07-2018 18:43:23

ಜಗತ್ತಿನ ವಿದ್ಯಮಾನಗಳನ್ನು ನೋಡಲು ಅವಕಾಶಗಳೇ ಇರಲಿಲ್ಲ. ಶಾಲಾ ಸೌಲಭ್ಯಗಳಿಲ್ಲದ ಗ್ರಾಮೀಣ ಮಕ್ಕಳು ವ್ಯವಸಾಯ, ಪಶುಪಾಲನೆ, ಕೂಲಿ ಕೆಲಸಗಳಿಗೆ ಚಿಕ್ಕಂದಿನಿಂದಲೇ ಅಣಿಯಾಗುತ್ತಿದ್ದರು. ಕಾಲ ಕ್ರಮೇಣ ಉಂಟಾದ ಕೈಗಾರಿಕಾ ಬೆಳವಣಿಗೆ, ಸಾಮಾಜಿಕ ಬದಲಾವಣೆಗಳು ಮಕ್ಕಳು ಮನೆಯಿಂದ ಹೊರಬರಲು ಕಾರಣವಾದವು. ಕೆಲವು ವರ್ಗದ ಮಕ್ಕಳು ಶಾಲೆಗೆ ನೋಂದಣಿಯಾಗುವ ಬದಲು ಕೈಗಾರಿಕೆಗಳಲ್ಲಿ ಅಧಿಕೃತವಾಗಿ ದುಡಿಯಲು ಅವಕಾಶಗಳು ಸೃಷ್ಟಿಯಾದವು. ಈ ಕಾಲದಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಾ ಅದೆಷ್ಟೋ ಮಕ್ಕಳು ಯಂತ್ರಗಳಿಗೆ ಸಿಕ್ಕಿ ಸಾಯುತ್ತಿದ್ದರು. ಈ ರೀತಿ ಕೈಗಾರಿಕೆಗಳಲ್ಲಿ ಮಕ್ಕಳು ದುಡಿಯುವ ಜೊತೆಯಲ್ಲಿಯೇ ಅವರ ಶೋಷಣೆಯು ಪ್ರಾರಂಭವಾಯಿತು. ಮುಂದುವರೆದಂತೆಲ್ಲಾ ಜನಸಂಖ್ಯಾ ಬೆಳವಣಿಗೆ, ನಗರೀಕರಣ, ಬೃಹತ್ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಬೆಳೆದಂತೆ ಮಕ್ಕಳ ಅನಕ್ಷರತೆ ಹಾಗೂ ಬಾಲಕಾರ್ಮಿಕರ ಸಂಖ್ಯೆಯೂ ಬೆಳೆಯಿತು. ಒಟ್ಟಾರೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆರ್ಥಿಕ ವ್ಯವಸ್ಥೆಗಳ ವಿಫಲತೆ ಮತ್ತು ಅವ್ಯವಸ್ಥೆಯ ಫಲವಾಗಿ ಬಾಲ ಕಾರ್ಮಿಕರು ಹುಟ್ಟಿ ಬೆಳೆಯುತ್ತಿದ್ದಾರೆ. ಆದ್ದರಿಂದ ಈ ಪದ್ಧತಿಯ ನಿರ್ಮೂಲನೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ವ್ಯವಸ್ಥೆಗಳ ನೀತಿಯಿಂದ ಆಗಬೇಕಿದೆ. ಬಾಲಕಾರ್ಮಿಕರ ಸಮಸ್ಯೆ ಕೇವಲ ಸಾಮಾಜಿಕ ಸಮಸ್ಯೆ ಅಲ್ಲ. ಹೃದಯಹೀನ ಮನಸ್ಸುಗಳ ಕಾರ್ಯಾಚರಣೆಯಿಂದ ಹುಟ್ಟಿ ಬೆಳೆದಿರುವ ಈ ಅಮಾನವೀಯ ಪದ್ಧತಿಯ ದುಷ್ಪರಿಣಾಮಗಳನ್ನು ಕುರಿತು ಯೋಚಿಸುವ ಮನಸ್ಸುಗಳು ಹುಟ್ಟಿ ಬಂದವು. ಇಂದು ಬಾಲ ಕಾರ್ಮಿಕ ಪದ್ಧತಿ ಒಂದು ಜಾಗತಿಕ ಸಮಸ್ಯೆಯಾಗಿ ಪರಿಗಣಿಸಲ್ಪಟ್ಟು ಬೆಳೆದಿದೆ. ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ ಹಾಗೂ ಆ ಮಕ್ಕಳ ಪುನರ್ವಸತಿ ಒಂದು ಜಾಗತಿಕ ಕನ್‌ಸರ್ನ್ ಆಗಿದೆ.

## ಬಾಲ ಕಾರ್ಮಿಕರು ಹುಟ್ಟಿ ಬರಲು ಕಾರಣಗಳು

ಬಾಲ ಕಾರ್ಮಿಕರಾಗಬೇಕು ಎಂಬ ಉದ್ದೇಶದಿಂದ ಯಾವ ಮಕ್ಕಳೂ ಹುಟ್ಟುವುದಿಲ್ಲ. ಹುಟ್ಟಿದ ಮೇಲೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಅವ್ಯವಸ್ಥೆ ಅಸಮಾನತೆ ಅಮಾನವೀಯ ಹಾಗೂ ಅವೈಜ್ಞಾನಿಕ ಸಂದರ್ಭಗಳು ಬಾಲ ಕಾರ್ಮಿಕರ ಹುಟ್ಟಿಗೆ ಕಾರಣ ಆಗುತ್ತವೆ.

ತಾಯಿ ತಂದೆಯರ ಅನಕ್ಷರತೆ ಹಾಗೂ ಅಜ್ಞಾನದಿಂದ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಸಮಾನತೆಗಳಿಂದ, ಜನಸಂಖ್ಯಾ ಸ್ಫೋಟ ಮತ್ತು ಕಿತ್ತು ತಿನ್ನುವ ಬಡತನದಿಂದ, ಕುಟುಂಬಗಳ ಅಭದ್ರತೆಯಿಂದ, ಕೆಲವು ಕುಟುಂಬಗಳಲ್ಲಿ ಸದಸ್ಯರ ನಡುವೆ ಉಂಟಾಗುವ ಸಂಘರ್ಷಗಳಿಂದ, ಕುಟುಂಬಗಳು ದಿವಾಳಿ ಆಗುವ ಸಂದರ್ಭಗಳಲ್ಲಿ, ಸ್ತ್ರೀ ಪುರುಷರ ಅಸಮಾನತೆ ನೀತಿಯಿಂದ, ಮಕ್ಕಳ ಅಭಿವೃದ್ಧಿಯ ಬಗ್ಗೆ ಪಾಲಕರು ಹಾಗೂ ಸಮಾಜದ ಬೇಜವಾಬ್ದಾರಿಯಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸೌಲಭ್ಯಗಳ ಕೊರತೆಯಿಂದ, ಮಕ್ಕಳ ಶಿಕ್ಷಣ ಮತ್ತು ರಕ್ಷಣೆ ಬಗ್ಗೆ ಕಾನೂನುಗಳ ಅನುಷ್ಠಾನ ಸಡಿಲ ನೀತಿಯಿಂದ, ಮಕ್ಕಳ ತಂದೆಯರ ಕುಡಿತ, ಜೂಜುಗಳಿಂದ ಜಾತಿ ಪದ್ಧತಿ ಹಾಗೂ ಜೀತಪದ್ಧತಿಯಿಂದ, ಕಡಿಮೆ ಹಣಕ್ಕೆ ಮಕ್ಕಳು ಹೆಚ್ಚು ದುಡಿಯುವುದರಿಂದ, ಮಕ್ಕಳು ತಮ್ಮ ಹಕ್ಕುಗಳನ್ನು ಪ್ರಶ್ನಿಸದೆ ದುಡಿಯುವುದರಿಂದ, ಮನೆಗೆಲಸಗಳಿಗೆ ಮಕ್ಕಳನ್ನು ನೇಮಿಸುವ ಪದ್ಧತಿಯಿಂದ, ಸೂಕ್ಷ್ಮ ಕೆಲಸಗಳನ್ನು ಮಕ್ಕಳಿಂದ ಮಾಡಿಸುವ ಉದ್ದೇಶದಿಂದ, ಭಿಕ್ಷೆಗಳಿಗೆ ಮಕ್ಕಳನ್ನು ಬಳಸುವ ದುರುದ್ದೇಶದಿಂದ, ಲೈಂಗಿಕ ನಿಂದನೆಗಳಿಗೆ ಮಕ್ಕಳನ್ನು ಬಳಸುವ ನೀಚ ಪ್ರವೃತ್ತಿಗಳಿಂದ, ಚಿಕ್ಕ ವಯಸ್ಸಿನ ಮಕ್ಕಳು ಹೆಚ್ಚು ಕೆಲಸ ಮಾಡುತ್ತಾರೆ ಎಂಬ ದುರಾಸೆಯಿಂದ – ಇಂತಹ ಅನೇಕ ಕಾರಣಗಳು ಹಾಗೂ ದುರುದ್ದೇಶಗಳಿಂದ ಬಡ ಮಕ್ಕಳು ಬಾಲಕಾರ್ಮಿಕರಾಗಿ ರೂಪುಗೊಳ್ಳುತ್ತಾರೆ.

ಬಾಲ ಕಾರ್ಮಿಕ ಪದ್ಧತಿಯಿಂದ ಯಾವುದೇ ಸಮಾಜ ಅಭಿವೃದ್ಧಿ ಆಗುವುದಿಲ್ಲ. ಬಾಲ ಕಾರ್ಮಿಕ ಪದ್ಧತಿ



11th_Kannada_Reader_Final_16-07-2018.indd 231 16-07-2018 18:43:23

ಆಚರಣೆ ಒಂದು ರಾಷ್ಟ್ರದ ಆತ್ಮದ ಘನತೆಗೆ ಕಳಂಕ. ಮರಳಿನ ಮೇಲೆ ನಿರ್ಮಿಸಿದ ಕಟ್ಟಡದಂತೆ ಅಂತಹ ರಾಷ್ಟ್ರ ಕುಸಿದು ಬೀಳುತ್ತದೆ. ಬಾಲ ಕಾರ್ಮಿಕರಿರುವ ಸಮಾಜಕ್ಕೆ ಭವಿಷ್ಯ ಇರುವುದಿಲ್ಲ. ಬೃಹತ್ ಪ್ರಮಾಣದ ಬಾಲ ಕಾರ್ಮಿಕ ಮಕ್ಕಳು ಸರಿಯಾದ ಶಿಕ್ಷಣ, ಆರೋಗ್ಯ, ಮಾರ್ಗದರ್ಶನ ಇಲ್ಲದೆ ದಿಕ್ಕು ತಪ್ಪುತ್ತಾರೆ. ಕೆಟ್ಟ ಸಂದರ್ಭಗಳಲ್ಲಿ ಬೆಳೆಯುವ ಈ ಮಕ್ಕಳು ಬಾಲಾಪರಾಧಿಗಳಾಗಿ, ಸಮಾಜ ಘಾತುಕ ಶಕ್ತಿಗಳಾಗಿ ರೂಪುಗೊಳ್ಳುವ ಅಪಾಯವಿರುತ್ತದೆ. ಬಾಲಕಾರ್ಮಿಕರು ಕೆಟ್ಟ ಸಹವಾಸಗಳಿಗೆ ಬಲಿಯಾದರೆ ಮದ್ಯಪಾನ, ಡ್ರಗ್ಸ್, ಕಳ್ಳತನ, ವ್ಯಭಿಚಾರಗಳಿಗೆ ಮುಂದಾಗುತ್ತಾರೆ. ಎಚ್.ಐ.ವಿ./ಏಡ್ಸ್ ರೋಗಗಳಿಗೆ ಬಲಿಯಾಗುತ್ತಾರೆ. ಈ ರೀತಿ ದೇಶದ ಬೃಹತ್ ಪ್ರಮಾಣದ ಯುವಶಕ್ತಿ ಗೊತ್ತುಗುರಿ ಇಲ್ಲದೆ ಬೆಳೆಯುತ್ತದೆ.

## ಮಕ್ಕಳಿಗೆ ಇರುವುದು ಒಂದೇ ಬಾಲ್ಯ

ಪ್ರತಿಯೊಂದು ಮಗು ಹುಟ್ಟುವುದು ಒಂದೇ ಬಾರಿ. ಅದು ಮತ್ತೆ ಮತ್ತೆ ಹುಟ್ಟಿ ಬರುವ ಅವಕಾಶಗಳಿಲ್ಲ. ಹುಟ್ಟಿದ ಮಗು ಸುಂದರ ಭವಿಷ್ಯ ರೂಪಿಸಿಕೊಳ್ಳುವ ಕಾಲದಲ್ಲಿ ದುಡಿಮೆಗೆ ಬಿದ್ದರೆ, ಅವಕಾಶಗಳಿಂದ ವಂಚಿತವಾದರೆ, ಶೋಷಿಸಲ್ಪಟ್ಟರೆ, ಶಾಲೆಗೆ ಸೇರದಿದ್ದರೆ ಅಥವಾ ಶಾಲೆಯಿಂದ ಹೊರ ಬಿದ್ದರೆ, ಕೆಟ್ಟ ಸಂದರ್ಭಗಳಿಗೆ ಸೇರಿದರೆ ಅಂತಹ ಮಕ್ಕಳಿಗೆ ಎಂತಹ ಭವಿಷ್ಯ ಸಿಗಬಹುದು ? ಮಕ್ಕಳಿಗೆ ಕೈಕಾಲುಗಳಿವೆ, ಅವರು ದುಡಿಯಬಲ್ಲರು ಎಂಬುದು ಮಾತ್ರ ಈ ಸಮಾಜಕ್ಕೆ ಗೊತ್ತಿದೆ. ಆದರೆ ಮಕ್ಕಳಿಗೆ ಮನಸ್ಸು, ಕನಸು, ಕಲ್ಪನೆಗಳಿವೆ. ಆಸೆ ಆಕಾಂಕ್ಷೆಗಳಿವೆ. ಅವರಿಗೆ ಮತ್ತೊಂದು ಬಾಲ್ಯ ಬರುವುದಿಲ್ಲ ಎಂಬ ಸತ್ಯವನ್ನು ಬಹುತೇಕ ಜನ ಅರ್ಥ ಮಾಡಿಕೊಳ್ಳುವುದೇ ಇಲ್ಲ. ನಮ್ಮ ಬಡತನ ಬಾಲ ಕಾರ್ಮಿಕರ ಉಗಮಕ್ಕೆ ಒಂದು ಪ್ರಬಲ ಕಾರಣವಾಗಿದೆ ಎಂಬುದು ಸತ್ಯ. ಆದರೆ ಬಡತನದ ಜೊತೆಯಲ್ಲಿ ಬಾಲಕಾರ್ಮಿಕರು ಹುಟ್ಟಿ ಬರಬಾರದು ಎಂಬ ಜವಾಬ್ದಾರಿಯನ್ನು ಪಾಲಕರು ಮತ್ತು ಸಮಾಜ ಅರ್ಥ ಮಾಡಿಕೊಳ್ಳಬೇಕು.

## ಭಾರತದಲ್ಲಿ ಬಾಲಕಾರ್ಮಿಕರು

ಅಭಿವೃದ್ಧಿ ಶೀಲ ದೇಶಗಳಲ್ಲಿರುವ ಒಟ್ಟು ಬಾಲಕಾರ್ಮಿಕರಲ್ಲಿ ಶೇಕಡ 61ರಷ್ಟು ಬಾಲ ಕಾರ್ಮಿಕರು ಏಷ್ಯಾ ಖಂಡದಲ್ಲಿ ಇದ್ದಾರೆಂದು ಅಂದಾಜು ಮಾಡಲಾಗಿದೆ. ಪ್ರಪಂಚದಲ್ಲಿ ಅತಿ ಹೆಚ್ಚು ಬಾಲಕಾರ್ಮಿರನ್ನು ಹೊಂದಿರುವ ನಾಲ್ಕು ರಾಷ್ಟ್ರಗಳಲ್ಲಿ ಭಾರತ ಒಂದಾಗಿದೆ. ಪ್ರಪಂಚದ ಒಟ್ಟು ಬಾಲ ಕಾರ್ಮಿಕರಲ್ಲಿ ಶೇಕಡಾ 25ರಷ್ಟು ಬಾಲಕಾರ್ಮಿಕರು ನಮ್ಮ ದೇಶದಲ್ಲಿಯೇ ಇದ್ದಾರೆ. ಈಗ ನಮ್ಮ ದೇಶದಲ್ಲಿ ಸುಮಾರು ಏಳು ಕೋಟಿಗಳಿಗಿಂತಲೂ ಹೆಚ್ಚು ಬಾಲಕಾರ್ಮಿಕರು ಇದ್ದಾರೆಂದು ಸರ್ಕಾರೇತರ ಸೇವಾ ಸಂಸ್ಥೆಗಳು ಅಂದಾಜು ಮಾಡಿವೆ. ಇದರಲ್ಲಿ ಶೇಕಡಾ 70 ಭಾಗ ಬಾಲಕಾರ್ಮಿಕರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮಕ್ಕಳೇ ಆಗಿದ್ದಾರೆ.

ನಮ್ಮ ದೇಶದಲ್ಲಿ ಲಕ್ಷಾಂತರ ಪದವೀಧರ ಯುವಕರು, ಒಂದು ಕಡೆ ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಕಲಿಯಬೇಕಾದ ಕೋಟ್ಯಾಂತರ ಮಂದಿ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿರುವುದು ಒಂದು ವಿಪರ್ಯಾಸ. ನಮ್ಮ ದೇಶದ ಒಟ್ಟು ರಾಷ್ಟ್ರೀಯ ಆದಾಯದಲ್ಲಿ ಸುಮಾರು ಶೇಕಡ 25ರಷ್ಟು ಆದಾಯವು ಬಾಲಕಾರ್ಮಿಕರ ದುಡಿಮೆಯಿಂದ ಬರುತ್ತಿದೆ ಎಂದರೆ ಈ ಸಮಸ್ಯೆಯ ವಿಕೃತ ರೂಪವನ್ನು ಅರ್ಥ ಮಾಡಿಕೊಳ್ಳಬಹುದು. ಸಂವಿಧಾನದ 45ನೇ ವಿಧಿ ಪ್ರಕಾರ 14 ವರ್ಷದ ಒಳಗಿನ ಎಲ್ಲ ಮಕ್ಕಳಿಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕು. ಆದರೆ ಸಂವಿಧಾನ ಜಾರಿಗೆ ಬಂದು ಅರ್ಧ ಶತಮಾನದ ನಂತರವೂ ಸಹ ಎಲ್ಲ ಮಕ್ಕಳೂ ಶಾಲೆಗೆ ದಾಖಲೆ ಆಗಲಿಲ್ಲ. ದಾಖಲಾಗುವ ಮಕ್ಕಳು ಪೂರ್ಣ ಪ್ರಮಾಣದಲ್ಲಿ ಶಾಲೆಯಲ್ಲಿ ಉಳಿಯುತ್ತಿಲ್ಲ. ಈಗಲೂ ಸಹ ನಮ್ಮ ದೇಶದಲ್ಲಿ 8–10 ಕೋಟಿ ಶಾಲಾ ವಯಸ್ಸಿನ ಮಕ್ಕಳು ಶಾಲೆಗಳಿಂದ ಹೊರಗೆ



11th_Kannada_Reader_Final_16-07-2018.indd 232 16-07-2018 18:43:23

ಇದ್ದಾರೆ. ಅಕಾಲದಲ್ಲಿ ಶಾಲೆ ಬಿಡುವ ಮಕ್ಕಳು ಸಹ ಈ ಗುಂಪಿನಲ್ಲಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಮಕ್ಕಳ ಭವಿಷ್ಯವನ್ನು ಕಡೆಗಣಿಸುವ ಯಾವುದೇ ರಾಷ್ಟ್ರ ಪ್ರಗತಿಯಾಗುವುದು ಸಾಧ್ಯವೇ ಇಲ್ಲ.

ಬಾಲಕಾರ್ಮಿಕರಿಗಾಗಿ ದುಡಿಯುತ್ತಿರುವ ಹೆಣ್ಣು ಮಕ್ಕಳ ಸ್ಥಿತಿ ಅತ್ಯಂತ ದಯನೀಯ. ಲಿಂಗ ಅಸಮಾನತೆ ಆಚರಣೆಯಲ್ಲಿರುವ ನಮ್ಮ ಸಮಾಜದಲ್ಲಿ ಹೆಣ್ಣು ಮಗು ಜನಿಸುವ ಮೊದಲೇ ಶೋಷಣೆಗೆ ಒಳಗಾಗುತ್ತದೆ. ಬಡತನ, ಅಜ್ಞಾನ, ಸಂಪ್ರದಾಯಗಳು ಮತ್ತು ಪಾಲಕರ ಅನಕ್ಷರತೆಯಿಂದಾಗಿ ಅವರ ಮನೆಗಳ ಹೆಣ್ಣು ಮಕ್ಕಳು ಕಷ್ಟಗಳಿಗೆ ಸಿಲುಕಿದ್ದಾರೆ. ಶೋಷಣೆ, ನಿಂದನೆ, ಲೈಂಗಿಕ ಕಿರುಕುಳಗಳು, ಬಲಾತ್ಕಾರವಾಗಿ ವೈಶ್ಯಾವೃತ್ತಿಗೆ ನೂಕುವುದು ಮತ್ತು ಸಾಮಾಜಿಕ ಅನ್ಯಾಯಗಳಿಗೆ ಒಳಗಾಗಿ ಹೆಣ್ಣು ಮಕ್ಕಳು ತಮ್ಮ ಸುಂದರ ಭವಿಷ್ಯವನ್ನು ಕಳೆದುಕೊಳ್ಳುತ್ತಿದ್ದಾರೆ.

## ಬಾಲಕಾರ್ಮಿಕರು ದುಡಿಯುವ ಕ್ಷೇತ್ರಗಳು

ಬಾಲ ಕಾರ್ಮಿಕರ ಬಗ್ಗೆ ನಮ್ಮ ದೇಶದಲ್ಲಿ ಕೈಗೊಂಡಿರುವ ಸಮೀಕ್ಷೆಗಳ ಪ್ರಕಾರ ವ್ಯವಸಾಯ ಕೆಲಸಗಳು, ಪಶುಪಾಲನೆ, ಕೈಗಾರಿಕೆಗಳಲ್ಲಿ ಕೆಲಸ, ಕೂಲಿ ಕೆಲಸ, ಚಿಕ್ಕ ಮಕ್ಕಳ ಪಾಲನೆ, ಸರಕು ಸಾಗಾಣಿಕೆ, ಬೆಂಕಿ ಪೊಟ್ಟಣ, ಊದು ಬತ್ತಿ, ಪಟಾಕಿ ಮಾಡುವುದು, ಬಣ್ಣ ಹಾಕುವುದು, ಸ್ವಚ್ಛತೆ ಕೆಲಸ, ರೇಷ್ಮೆ ನೂಲು ತೆಗೆಯುವುದು, ತಿನಿಸುಗಳನ್ನು ಮಾರುವುದು, ಮನೆ ಕಟ್ಟುವಾಗ ಸಹಾಯ ಕೆಲಸಗಳು, ಬಂದರುಗಳಲ್ಲಿ ಕೆಲಸ, ವಾಹನಗಳನ್ನು ತೊಳೆಯುವ ಕೆಲಸ, ಗ್ಯಾರೇಜ್‌ಗಳಲ್ಲಿ ಕೆಲಸ, ಇಟ್ಟಿಗೆ, ಹೆಂಚಿನ ಕಾರ್ಖಾನೆಗಳಲ್ಲಿ ಕೆಲಸ, ಬೀಡಿ ಕಟ್ಟುವುದು, ಸ್ಲೇಟು, ಬಳಪ, ಬಳೆ, ಆಟಿಕೆಗಳ ತಯಾರಿಕೆ, ಬಸ್ ಮತ್ತು ರೈಲ್ವೇ ನಿಲ್ದಾಣಗಳಲ್ಲಿ ವ್ಯಾಪಾರ, ಡಾಬಾಗಳಲ್ಲಿ, ಅಂಗಡಿಗಳಲ್ಲಿ ಮತ್ತು ಹೋಟೆಲ್‌ಗಳಲ್ಲಿ ದುಡಿಯುವುದು, ಅಪಾಯಕಾರಿ ಕೆಲಸಗಳು, ಅಕ್ರಮ ಹಾಗೂ ಅನೀತಿ ಕೆಲಸಗಳಿಗೂ ಸಹ ಮಕ್ಕಳನ್ನು ಬಳಸುತ್ತಾರೆ. ಇಂತಹ ಕೆಟ್ಟ ಪರಿಸರಗಳಲ್ಲಿ ದುಡಿಯುವ ಮಕ್ಕಳು ದುಡಿಮೆಯ ಕ್ಷೇತ್ರಗಳಲ್ಲಿ ಮತ್ತೆ ಮತ್ತೆ ಶೋಷಣೆ, ಸಂಕಷ್ಟಗಳಿಗೆ ಬಲಿಯಾಗುತ್ತಾರೆ. ಬಾಲಕಾರ್ಮಿಕರಾಗಿ ದುಡಿಯುವುದೇ ಒಂದು ಶೋಷಣೆ ಆಗಿರುವಾಗ ದುಡಿಯುವ ಮಕ್ಕಳು ಅತ್ಯಂತ ಕೆಟ್ಟ ಪರಿಸರಗಳಲ್ಲಿ ದುಡಿಯುವುದು ಮತ್ತಷ್ಟು ಹೀನ ಸಂಗತಿ.

ಯೂನಿಸೆಫ್ ಅಧ್ಯಯನ ಮಾಡಿರುವಂತೆ ಬಾಲಕಾರ್ಮಿಕರು...

* ಗೊತ್ತು ಗುರಿಯಿಲ್ಲದೆ ಹೆಚ್ಚು ಸಮಯ ದುಡಿಯುತ್ತಾರೆ.
* ಶಾರೀರಿಕವಾಗಿ ಆಯಾಸದ ಕೆಲಸಗಳನ್ನು ಮಾಡುತ್ತಾರೆ.
* ಅತಿ ಕಡಿಮೆ ಕೂಲಿಗೆ ಹೆಚ್ಚು ಕೆಲಸಗಳನ್ನು ಮಾಡುತ್ತಾರೆ.
* ಅನಾರೋಗ್ಯ ಪರಿಸರದಲ್ಲಿ ದುಡಿಯುತ್ತಾರೆ
* ವಿಶ್ರಾಂತಿ ಇಲ್ಲದೆ ನಿರಂತರ ದುಡಿಯುತ್ತಾರೆ.
* ಹಾನಿಕರ ಸಂದರ್ಭಗಳಲ್ಲಿ ಕೆಲಸ ಮಾಡುತ್ತಾರೆ.
* ಶಿಕ್ಷಣ ಮತ್ತು ರಕ್ಷಣೆ ಇಲ್ಲದೆ ದುಡಿಯುತ್ತಾರೆ.
* ಹೆದರಿಕೆಯಿಂದ ದುಡಿಯುತ್ತಾರೆ.
* ನಿರ್ಬಂಧದ ಸನ್ನಿವೇಶಗಳಲ್ಲಿ ಕೆಲಸ ಮಾಡುತ್ತಾರೆ.
* ಮನರಂಜನೆ ಇಲ್ಲದೆ ದುಡಿಯುತ್ತಾರೆ.



11th_Kannada_Reader_Final_16-07-2018.indd 233 16-07-2018 18:43:23

* ಪ್ರೀತಿ, ಅಕ್ಕರೆ ಇಲ್ಲದೆ, ಆತ್ಮಗೌರವ ಕಳೆದುಕೊಂಡು ಶ್ರಮಿಸುತ್ತಾರೆ.

* ಹೊರ ಜಗತ್ತಿನ ಅರಿವಿಲ್ಲದೆ ದುಡಿಯುತ್ತಾರೆ

* ತಮ್ಮ ಹಕ್ಕುಗಳನ್ನು ಕೇಳದೆ ದುಡಿಯುತ್ತಾರೆ.

* ತಮ್ಮ ಅವಕಾಶಗಳನ್ನು ಕಳೆದುಕೊಂಡು ದುಡಿಯುತ್ತಾರೆ.

* ವಂಶಪಾರಂಪರ್ಯವಾಗಿ ಬಾಲಕಾರ್ಮಿಕರಾಗಿ ದುಡಿಯುತ್ತಾರೆ.

* ದುಡಿಯುವ ಸಂದರ್ಭಗಳಲ್ಲಿ ಲೈಂಗಿಕ ನಿಂದನೆಗಳಿಗೆ ಒಳಗಾಗುತ್ತಾರೆ.

* ಹೆಚ್ಚು ಜವಾಬ್ದಾರಿಯುತ ಕೆಲಸಗಳನ್ನು ಮಾಡುತ್ತಾರೆ.

* ಮಾನಸಿಕ, ದೈಹಿಕ ಒತ್ತಡಗಳಿಂದ ದುಡಿಯುತ್ತಾರೆ.

ಬಾಲಕಾರ್ಮಿಕರ ಪದ್ಧತಿಯ ನಿರ್ಮೂಲನೆಗೆ ಪ್ರಯತ್ನಗಳು

ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಘೋಷಣೆಯ ಜೊತೆಯಲ್ಲಿಯೇ ವಿಶ್ವದ ಮಕ್ಕಳ ಹಕ್ಕುಗಳು, ಅವರ ಶಿಕ್ಷಣ, ಆರೋಗ್ಯ, ಸಂರಕ್ಷಣೆಯ ಬಗ್ಗೆ ತನ್ನ ಕಾಳಜಿಯನ್ನು ವ್ಯಕ್ತ ಪಡಿಸಿದೆ. 1959ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಕ್ಕಳ ಹಕ್ಕುಗಳ ಆಚರಣೆ ಬಗೆಗೆ ಪ್ರಯತ್ನಗಳಾಗಿವೆ. 1989ರಲ್ಲಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಯು ಮಕ್ಕಳ ಹಕ್ಕುಗಳನ್ನು ರೂಪಿಸಿ ವಿಶ್ವದಾದ್ಯಂತ ಪ್ರಚಾರ ಮಾಡಿದೆ.

## ಮಕ್ಕಳ ಹಕ್ಕುಗಳು

ವಿಶ್ವಸಂಸ್ಥೆಯು ಮಾನವ ಘನತೆ(ಹ್ಯೂಮನ್ ಡಿಗ್ನಿಟಿ)ಯನ್ನು ಗೌರವಿಸಲು ಮತ್ತು ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಸಂಕಲ್ಪ ಮಾಡಿ ಮಕ್ಕಳನ್ನು ಬೆಳೆಸಲು ಹಕ್ಕುಗಳನ್ನು ರೂಪಿಸಿ ಆಚರಣೆಗೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಿದೆ.

1. ಮಕ್ಕಳು ಬದುಕಿ ಉಳಿಯುವ ಹಕ್ಕು ಹಾಗೂ ಅವಕಾಶಗಳು

2. ಮಕ್ಕಳು ಎಲ್ಲ ರೀತಿಯ ಸಂರಕ್ಷಣೆ ಪಡೆಯುವ ಹಕ್ಕು

3. ಮಕ್ಕಳು ಅಭಿವೃದ್ಧಿ ಮತ್ತು ವಿಕಾಸವಾಗುವ ಹಕ್ಕು

4. ಶಿಕ್ಷಣ, ಆರೋಗ್ಯ ಮತ್ತು ಮನರಂಜನೆ ಪಡೆಯುವ ಹಕ್ಕು

5. ಯಾರಿಂದಲೂ ಯಾವುದೇ ರೀತಿಯ ಶೋಷಣೆಗೆ ಒಳಗಾಗದಿರುವುದು

6. ಸಾಮಾಜಿಕ ಮತ್ತು ರಾಷ್ಟ್ರೀಯ ಜೀವನದಲ್ಲಿ ಭಾಗವಹಿಸುವ ಹಕ್ಕು

7. ಸ್ವಾತಂತ್ರ್ಯ, ಸಮಾನತೆ, ಪ್ರೀತಿ, ಅಕ್ಕರೆ ಪಡೆಯುವ ಹಕ್ಕು ಇತ್ಯಾದಿ.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಮಕ್ಕಳ ಶಿಕ್ಷಣ ಮತ್ತು ಅಭಿವೃದ್ಧಿಯ ಬಗೆಗೆ ಪ್ರಯತ್ನಗಳು ನಡೆದಿವೆ. 1920–30ರಷ್ಟು ಹಿಂದೆಯೇ ಬಾಲಕಾರ್ಮಿಕರ ವಿಮುಕ್ತಿ ಮತ್ತು ಪುನರ್‌ವಸತಿಯ ಪ್ರಯತ್ನಗಳು ನಡೆದಿವೆ. 1948ರಲ್ಲಿ ಫ್ಯಾಕ್ಟರಿ ಆಕ್ಟ್ 1958ರಲ್ಲಿ 'ಮೈನ್ಸ್ ಆಕ್ಟ್' ಜಾರಿಗೆ ಬಂದಿವೆ. ನಮ್ಮ ಸಂವಿಧಾನವು 21, 24, 39 ಹಾಗೂ 45ನೇ ವಿಧಿಗಳಲ್ಲಿ ಮಕ್ಕಳ ರಕ್ಷಣೆ, ಶಿಕ್ಷಣ ಹಾಗೂ ಅಭಿವೃದ್ಧಿಯ ಬಗೆಗೆ ಕಾನೂನು ಹಾಗೂ ಅವಕಾಶಗಳನ್ನು ಕಲ್ಪಿಸಿದೆ.



11th_Kannada_Reader_Final_16-07-2018.indd 234 16-07-2018 18:43:23

1986ರಲ್ಲಿ ಮಾಡಿದ 'ದಿ ಚೈಲ್ಡ್ ಲೇಬರ್ ಪ್ರಾಹಿಬಿಷನ್ ಅಂಡ್ ರೆಗ್ಯುಲೇಷನ್ ಆಕ್ಟ್' 14 ವಯಸ್ಸಿನ ಒಳಗಿನ ಮಕ್ಕಳ ದುಡಿಮೆಯನ್ನು ಕಡ್ಡಾಯವಾಗಿ ನಿಷೇಧಿಸಿದೆ. ಈ ಮಯೋಮಾನದ ಮಕ್ಕಳಿಂದ ದುಡಿಸಿಕೊಳ್ಳುವವರ ವಿರುದ್ಧ ದಂಡ, ಸಜೆ, ಕಾನೂನು ಕ್ರಮ ಜರುಗಿಸಲಾಗುತ್ತದೆ. 1987ರಲ್ಲಿ ಬಾಲ ಕಾರ್ಮಿಕರ ಬಗ್ಗೆ ರಾಷ್ಟ್ರೀಯ ನೀತಿಯನ್ನು ರೂಪಿಸಿ ಬಾಲ ಕಾರ್ಮಿಕರ ಪದ್ಧತಿಯ ನಿರ್ಮೂಲನೆ ಹಾಗೂ ಈ ಮಕ್ಕಳ ಪುನರ್‌ವಸತಿಯ ಬಗೆಗೆ ವಿಶೇಷ ಕಾನೂನು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಲಾಗಿದೆ.

## ಬಾಲ ಕಾರ್ಮಿಕ ಪದ್ಧತಿಯ ನಿರ್ಮೂಲನೆ ಮತ್ತು ಪುನರ್‌ವಸತಿ

ಬಾಲ ಕಾರ್ಮಿಕರು ಯಾವುದೇ ಕಾರಣದಿಂದ ಅಥವಾ ಯಾವುದೇ ಸಂದರ್ಭದಿಂದ ಹುಟ್ಟಿ ಬಂದಿರಲಿ ಅವರನ್ನು ವಿಮುಕ್ತಿಗೊಳಿಸಿ, ಪುನರ್‌ವಸತಿ ಕಲ್ಪಿಸಿ ಅವರ ಬದುಕನ್ನು ಹಸನುಗೊಳಿಸುವುದು ಸರ್ಕಾರ, ಸಮಾಜ ಹಾಗೂ ಪ್ರಜ್ಞಾವಂತರೆಲ್ಲರ ಕರ್ತವ್ಯ. ಅವರ ಪುನರ್‌ವಸತಿಗಾಗಿ...

ಬಿಗಿಯಾದ ಕಾನೂನುಗಳನ್ನು ಜಾರಿಗೆ ತರುವುದು, ಪುನರ್‌ವಸತಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು; ಉತ್ತಮ ಶೈಕ್ಷಣಿಕ ಅವಕಾಶಗಳು ಮತ್ತು ಸೌಲಭ್ಯಗಳನ್ನು ಒದಗಿಸುವುದು; ಶಿಕ್ಷಣದ ನಂತರ ಸೂಕ್ತ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು; ಅವರಿಗೆ ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಿ ಕೊಡುವುದು; ಮಕ್ಕಳ ಶೋಷಣೆಯ ವಿರುದ್ಧ ಸಾಮಾಜಿಕ ಮತ್ತು ಕಾನೂನಿನ ರಕ್ಷಣೆಯನ್ನು ಒದಗಿಸುವುದು; ಮಕ್ಕಳಿಗೆ ಶುದ್ಧ ನೀರು, ಪೌಷ್ಟಿಕ ಆಹಾರ, ಕ್ರೀಡೆ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುವುದು; ಮಕ್ಕಳಿಗೆ ಮೊದಲ ಹಂತದಲ್ಲಿ ಅನೌಪಚಾರಿಕ ಶಿಕ್ಷಣ ನೀಡುವುದು; ಮಕ್ಕಳ ಪಾಲಕರಿಗೆ ಈ ದುರಂತದ ಬಗ್ಗೆ ತಿಳುವಳಿಕೆ ಮೂಡಿಸುವುದು; ವಸತಿ ಶಾಲೆಗಳನ್ನು ನಿರ್ಮಿಸಿ ವೃತ್ತಿಪರ ಶಿಕ್ಷಣ ನೀಡುವುದು; ಬಾಲಕಾರ್ಮಿಕರನ್ನು ಹೊಂದಿರುವ ಮಾಲಿಕರಿಗೆ ಕಾನೂನು ಕ್ರಮ ಮತ್ತು ಶಿಕ್ಷೆ ವಿಧಿಸುವುದು; ಕಲಿತ ಮಕ್ಕಳಿಗೆ ಸ್ವಯಂ ಉದ್ಯೋಗಗಳಿಗೆ ಸಹಾಯ ನೀಡುವುದು; ಮಕ್ಕಳಿಗೆ ಸೂಕ್ತ ಶೈಕ್ಷಣಿಕ, ಆರ್ಥಿಕ ಅವಕಾಶಗಳನ್ನು ಕಲ್ಪಿಸುವುದು.

## ಬಾಲಕಾರ್ಮಿಕರ ನಿರ್ಮೂಲನೆ ಮತ್ತು ಪುನರ್‌ವಸತಿಗಾಗಿ ನಮ್ಮ ಪಾತ್ರವೇನು?

ಬಾಲ ಕಾರ್ಮಿಕರ ಪದ್ಧತಿಯ ನಿರ್ಮೂಲನೆ ಹಾಗೂ ಅವರ ಪುನರ್‌ವಸತಿಗಾಗಿ ಸರ್ಕಾರ, ಸಮಾಜ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜೊತೆಗೆ ಸಮಾಜದ ಸಂಘ ಸಂಸ್ಥೆಗಳು, ಎಲ್ಲ ವರ್ಗದ ಜನರು ತಮ್ಮ ತಮ್ಮ ಹಂತಗಳ ಈ ಸಮಸ್ಯೆಯ ವಿರುದ್ಧ ಕ್ರಿಯಾಶೀಲರಾಗಬೇಕು.

ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ ಬಗ್ಗೆ ಆಪ್ತ ವಲಯಗಳಲ್ಲಿ ಚರ್ಚೆ ಮಾಡಬೇಕು; ಈ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಎನ್.ಜಿ.ಓ. ಹಾಗೂ ಸರ್ಕಾರಿ ಸಂಸ್ಥೆಗಳ ಜೊತೆ ಸಹಕರಿಸಬೇಕು; ಬಾಲಕಾರ್ಮಿಕರ ಸಮೀಕ್ಷೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಬೆಂಬಲ ನೀಡಬೇಕು; ಬಾಲಕಾರ್ಮಿಕ ಪದ್ಧತಿಯ ಅನಾಹುತಗಳ ಬಗ್ಗೆ ಸಮಾಜದಲ್ಲಿ ಪಾಲಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಬೇಕು; ಬಾಲ ಕಾರ್ಮಿಕರ ಬಗ್ಗೆ ಸಾಹಿತ್ಯ ಸಂಗ್ರಹಿಸಿ ಓದಬೇಕು. ಮಕ್ಕಳು ತಯಾರಿಸುವ ವಸ್ತುಗಳನ್ನು ಕೊಳ್ಳಬಾರದು; ನಮ್ಮ ಸನಿಹದ ಮಕ್ಕಳು ಶಾಲೆಗೆ ಸೇರಲು ಸಹಕರಿಸಬೇಕು.

## ಈಗಲೂ ನಮ್ಮ ನಡುವೆ ಶೋಷಿಸಲ್ಪಡುತ್ತಿರುವ ಮಕ್ಕಳು

ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವ ಪ್ರಯತ್ನಗಳ ಜೊತೆಯಲ್ಲಿಯೇ ನಮ್ಮ ಸಮಾಜದಲ್ಲಿ ಈಗಲೂ ಸಹ....



11th_Kannada_Reader_Final_16-07-2018.indd 235 16-07-2018 18:43:23

ಸಯನೇಡ್ ತುಂಬಿದ ತಾಯತ ಕಟ್ಟಿ ಮಕ್ಕಳನ್ನು ಬೆಳೆಸುತ್ತಿರುವುದು, ಆತ್ಮಾಹುತಿಗೆ ಮಕ್ಕಳಿಗೆ ತರಬೇತಿ ನೀಡುತ್ತಿರುವುದು, ಹೆಣ್ಣು ಭ್ರೂಣಗಳು ಹಾಗೂ ಹೆಣ್ಣು ಮಕ್ಕಳನ್ನು ಕೊಲ್ಲುತ್ತಿರುವುದು, ಹೆಣ್ಣು ಮಕ್ಕಳ ಬಗೆಗೆ ದಿವ್ಯ ನಿರ್ಲಕ್ಷ್ಯ ತೋರಿರುವುದು, ದೇವ ದೇವತೆಗಳಿಗೆ ಮಕ್ಕಳನ್ನು ಬಲಿ ಕೊಡುತ್ತಿರುವುದು, ವೈಜ್ಞಾನಿಕ ಕೆಲಸಗಳಿಗೆ ಮಕ್ಕಳನ್ನು ಬಳಸುತ್ತಿರುವುದು, ಲೈಂಗಿಕ ನಿಂದನೆಗಳಿಗೆ ಮಕ್ಕಳನ್ನು ಬಳಸುತ್ತಿರುವುದು, ಆಫ್ರಿಕಾ ದೇಶಗಳಲ್ಲಿ ಮಕ್ಕಳನ್ನು ಸಾಯಲು ಬಿಟ್ಟಿರುವುದು, ಕಾರ್ಖಾನೆಗಳಲ್ಲಿ ಯಂತ್ರಗಳ ಜೊತೆ ಮಕ್ಕಳು ದುಡಿಯುತ್ತಿರುವುದು, ಕಳ್ಳ ಸಾಗಾಣಿಕೆಗಳಿಗೆ ಮಕ್ಕಳನ್ನು ಬಳಸುತ್ತಿರುವುದು; ಮಕ್ಕಳನ್ನು ವಿರೂಪ ಮಾಡಿ ಹಣ ಗಳಿಸುತ್ತಿರುವುದು, ಭಿಕ್ಷೆಗಾಗಿ ಬಕ್ಕಳನ್ನು ಬಳಸುತ್ತಿರುವುದು, ವಿದ್ಯಾವಂತರೇ ಮಕ್ಕಳನ್ನು ಮನೆಗೆಲಸಗಳಿಗೆ ಬಳಸುತ್ತಿರುವುದು, ಬಾಲ ಕಾರ್ಮಿಕರನ್ನು ಬಾಲಾಪರಾಧಿಗಳನ್ನಾಗಿ ರೂಪಿಸುತ್ತಿರುವುದು, ಹೋಟೆಲ್, ಬಾರ್, ಪ್ರವಾಸಿ ಕೇಂದ್ರಗಳಲ್ಲಿ ಮಕ್ಕಳ ಕೆಲಸವನ್ನು ಮಾನ್ಯ ಮಾಡುತ್ತಿರುವುದು, ಅಮಾಯಕ ಹೆಣ್ಣು ಮಕ್ಕಳನ್ನು ಬಲಾತ್ಕಾರವಾಗಿ ವೇಶ್ಯಾವೃತ್ತಿಗೆ ನೂಕುತ್ತಿರುವುದು – ಇವು ಮಕ್ಕಳ ಶೋಷಣೆಯ ವಿವಿಧ ಮುಖಗಳು.

ಬಾಲ ಕಾರ್ಮಿಕರ ಸಮಸ್ಯೆಯ ವಿವಿಧ ಮುಖಗಳನ್ನು, ಈ ಸಮಸ್ಯೆಯ ಬೇರುಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಈ ಸಮಸ್ಯೆಯ ನಿರ್ಮೂಲನೆಯು ಬರೀ ತತ್ವ, ಸಿದ್ಧಾಂತ ಹಾಗೂ ಸಮಿತಿಗಳಿಗೆ ಸೀಮಿತವಾಗಬಾರದು. ಹೃದಯವಂತಿಕೆಯಿಂದ ಬಾಲಕಾರ್ಮಿಕರನ್ನು ನೋಡಬೇಕು. ಅವರ ಬಿಡುಗಡೆ ಹಾಗೂ ಪುನರ್‌ವಸತಿ ಬಗ್ಗೆ ವ್ಯಕ್ತಿಗತ ಮಟ್ಟ ಹಾಗೂ ಸಮುದಾಯದ ಕಾರ್ಯಾಚರಣೆಗಳು ಆಗಬೇಕು. ಬಾಲಕಾರ್ಮಿಕರ ಸಮಸ್ಯೆಯ ಪರಿಹಾರಕ್ಕೆ ಕಾನೂನು ಕ್ರಮಗಳಿಗಿಂತ ಮುಖ್ಯವಾಗಿ ಹೃದಯವಂತಿಕೆ ಬೇಕು. ಕಾನೂನುಗಳು ಬಾಲಕಾರ್ಮಿಕರನ್ನು ಅಧಿಕೃತಗೊಳಿಸಬಾರದು. ಈ ಮಕ್ಕಳ ಬಗ್ಗೆ ಎಲ್ಲರಿಗೂ ಕನ್‌ಸರ್ನ್ ಹಾಗೂ ಕಮಿಟ್‌ಮೆಂಟ್‌ಗಳು ಬರಬೇಕು. ಮಕ್ಕಳನ್ನು ಪ್ರೀತಿಸುವ ಅವರ ಬೆಳವಣಿಗೆಗೆ ಸಹಾಯ ಹಸ್ತ ನೀಡುವ ಹೃದಯವಂತಿಕೆ ಬೆಳೆಯಬೇಕು.

* * *

## ತಿಳಿದಿರಲಿ

**ಅಭಿನವ ಕಾಳಿದಾಸ** – ಬಸವಪ್ಪಶಾಸ್ತ್ರೀ

**ಅಭಿನವ ಪಂಪ** – ನಾಗಚಂದ್ರ

**ಉಪಮಾಲೋಲ** – ಲಕ್ಷ್ಮೀಶ

**ಕನ್ನಡದ ಕಣ್ವ** – ಬಿ.ಎಂ.ಶ್ರೀ.

**ಕನ್ನಡದ ಕಾಳಿದಾಸ** – ಎಸ್.ವಿ.ಪರಮೇಶ್ವರ ಭಟ್ಟ

**ಕನ್ನಡ ಕುಲಪುರೋಹಿತ** – ಆಲೂರು ವೆಂಕಟರಾಯರು

**ಕಡಲ ತೀರದ ಭಾರ್ಗವ** – ಶಿವರಾಮ ಕಾರಂತ

**ಕನ್ನಡ ರಮಾರಮಣ** – ಕೃಷ್ಣದೇವರಾಯ

**ಚುಟುಕು ಬ್ರಹ್ಮ** – ದಿನಕರ ದೇಸಾಯಿ

**ದಾನ ಚಿಂತಾಮಣಿ** – ಅತ್ತಿಮಬ್ಬೆ

**ರಾಷ್ಟ್ರಕವಿಗಳು** – ಗೋವಿಂದಪೈ,ಕುವೆಂಪು,ಜಿ.ಎಸ್.ಶಿವರುದ್ರಪ್ಪ



11th_Kannada_Reader_Final_16-07-2018.indd 236 16-07-2018 18:43:23

| | | |
|---|---|---|
| ನವ್ಯಕವಿ | – | ಗೋಪಾಲಕೃಷ್ಣ ಅಡಿಗ |
| ನಾಟ್ಯರಾಣಿ | – | ಶಾಂತಲಾ |
| ರಗಳೆಯ ಕವಿ | – | ಹರಿಹರ |
| ರೂಪಕ ಚಕ್ರವರ್ತಿ | – | ಕುಮಾರವ್ಯಾಸ |
| ವಚನಶಾಸ್ತ್ರ ಪಿತಾಮಹ | – | ಫ.ಗು.ಹಳಕಟ್ಟಿ |
| ಷಟ್ಪದಿ ಬ್ರಹ್ಮ | – | ರಾಘವಾಂಕ |
| ಕನ್ನಡದ ವರಕವಿ | – | ದ.ರಾ.ಬೇಂದ್ರೆ |
| ಸಣ್ಣಕಥೆಗಳ ಜನಕ, ಕನ್ನಡದ ಆಸ್ತಿ | – | ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| ಮೊದಲ ಜ್ಞಾನಪೀಠ ಪ್ರಶಸ್ತಿ ವಿಜೇತ | – | ಕುವೆಂಪು |
| ಕನ್ನಡದ ಮೊದಲ ಶಾಸನ | – | ಹಲ್ಮಿಡಿ ಶಾಸನ |
| ಕನ್ನಡದ ಮೊದಲ ಉಪಲಬ್ಧ ಗ್ರಂಥ | – | ಕವಿರಾಜ ಮಾರ್ಗ |
| ಕನ್ನಡದ ಮೊದಲ ಗದ್ಯ ಗ್ರಂಥ | – | ವಡ್ಡಾರಾಧನೆ |
| ಕನ್ನಡದ ಮೊದಲ ಕಾವ್ಯ | – | ಆದಿಪುರಾಣ |
| ಕನ್ನಡದ ಮೊದಲ ವ್ಯಾಕರಣ ಗ್ರಂಥ | – | ಶಬ್ದಮಣಿದರ್ಪಣ |
| ಕನ್ನಡದ ಮೊದಲ ನಾಟಕ | – | ಮಿತ್ರವಿಂದಾ ಗೋವಿಂದ |
| ಹೊಸಗನ್ನಡದ ಮೊದಲ ವ್ಯಾಕರಣ | – | ಮಧ್ಯಮ ವ್ಯಾಕರಣ |
| ಕನ್ನಡದ ಮೊದಲ ಕಾದಂಬರಿ | – | ಇಂದಿರಾಬಾಯಿ |
| ಕನ್ನಡದ ಆದಿ ಕವಿ | – | ಪಂಪ |
| ಕನ್ನಡದ ಮೊದಲ ಕವಯಿತ್ರಿ | – | ಅಕ್ಕಮಹಾದೇವಿ |
| ಕನ್ನಡದ ಮೊದಲ ಮಹಮ್ಮದೀಯ ಕವಿ | – | ಸಂತ ಶಿಶುನಾಳ ಶರೀಫ |
| ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಅಧ್ಯಕ್ಷೆ | – | ಜಯದೇವಿತಾಯಿ ಲಿಗಾಡೆ |
| ಕನ್ನಡದಲ್ಲಿ ಮೊದಲು ಬೆರಳಚ್ಚು ಯಂತ್ರ ತಯಾರಿಸಿದ ಕನ್ನಡಿಗ | – | ಅನಂತಸುಬ್ಬರಾವ್ |
| ಪದ್ಮಶ್ರೀ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ | – | ಜಿ.ಬಿ.ಜೋಷಿ. |

* * * *



11th_Kannada_Reader_Final_16-07-2018.indd 237 16-07-2018 18:43:23

# Kannada Reader - Class XI
# Text Book Development Team

## Reviewers

**Dr. TAMIL SELVI**
Professor and Head
Department of Kannada
University of Madras, Marina
Chennai – 600 005.

## Authors

**Mr. K. KUMAR ACHAR**
P.G. Asst. in Kannada
Karnataka Sangha Hr. Sec. School
T.Nagar, Chennai - 600 017.

**Mr. C. SADASHIVA MURTHY**
P.G. Asst. in Kannada
Govt. Hr. Sec. School
Thalavadi, Erode Dt. 638461.

**Mr. N. BASAVARAJU**
B.T. Asst. in Kannada
Govt. Hr. Sec. School
Thalavadi, Erode Dt. 638461

**Mr. JOHNSON SUKUMAR**
B.T. Asst. in Kannada
Govt. Hr. Sec. School
Panaka Halli
Thalavadi, Erode Dt. 638461

**Mr. T.R. KANNAN**
B.T. Asst. in Kannada
Govt. Hr. Sec. School
Madagondapalli, Krishnagiri Dt. 635114

**Mr. K. ANTHONY MUTHU**
B.T. Asst. in Kannada
Govt. Hr. Sec. School
Thalavadi, Erode Dt. 638461

## Art and Design Team

### Illustration
Gandhi Rajan
SV. Gokulakrishnan
S. Gowtham
K. Dhanas Deepak Rajan
K. Nalan Nancy Rajan

### Layout
Inhouse

### QC
Manohar Radhakrishnan
Kamatchi Balan Arumugam
P. Arun Kamaraj
Yesu Rathinam

### Cover Design
Kathir Arumugam

### Coordination
Ramesh Munisamy

## Co-ordinator

A. Palanivelraj (SCERT Co-ordinator)
Asst Prof
SCERT Chennai - 600 006

This book has been printed on 80 G.S.M.
Elegant Maplitho paper.

Printed by offset at:



11th_Kannada_Reader_Final_16-07-2018.indd 238 16-07-2018 18:43:23